ಕಾದಂಬಿ

ಸಂಪುಟ ೬ * ಸಂಚಿಕೆ ೨

ಆಗಸ್ಟ್ ೧೯೬೪

New
A
2117

ಸಂಪಾದಕರು: ಟಿ.ಜಿ.ಗೌರಿ ಕೃಷ್ಣಕರ್ಣ

ಮುಖ್ಯ ವಿಷಯಗಳು

ಬಲವ ಒಂದೆ ನಮ್ಮ ಗೆಲಿ! (ಕವನ)	....	'ಗೀತಾಪ್ರಿಯ' ...	... ೭೯
ಸಂಪಾದಕೀಯ	....	.... ಸಂಪಾದಕರು	... ೮೦
ನುಗ್ಗಿನ ಮಲ್ಲಿನಾಥತನ	....	'ಮಲ್ಲಿನಾಥ'	.... ೫೧
ಜೀವನದಲಿಯ ಒಲವು! (ಒಂದು ವಿಚಾರ)	....	ಶ್ರೀ. ಜಿವಂಕುಂದಿ ಸುಕಟಾಯರು.	.... ೮೫
ಎಂಥಾ ಕಂಪ್ಯೋಲು? (ಪಣ್ಣ ಕಥೆ)	....	ಶ್ರೀ. ನಿರ್ಜ ಅಣ್ಣಾರಾಯರು	.... ೮೫
ಬಿಡುವು (ಪ್ರಬಂಧ)	....	ಶ್ರೀ. ಎಚ್. ಎಸ್. ಪಾಟೀಲ್	
ಉತ್ತರ ಕರ್ನಾಟಕದ ಬರಗಾಲ ನಿವಾರಣೆಗೆ		ಎಂ. ಎಂ. ಬಿ. ಕಾಸು.	.... ೮೯
ಸಲಹೆಗಳು	....	'ಕಾಂತ-ಲೀಲಾ'	.... ೯೧
ನಾಲ್ಕು ನಿಟ್ಟಿನ ನೋಟ	....	ವಿಮರ್ಶಕರು ...	.... ೯೪

ನಿ. ಸೂ:- ಕಾದಂಬಿಯ ಬಂಧಾಭಿಪ್ರಾಯಗಳು ನಿಮಗೆ ಇಷ್ಟವಾದ ಸಂಚಿಕೆಯಲ್ಲಿ ಬರುವುದು.

ಸಾದರ ಸ್ವೀಕಾರ

೪೫ **ತುಂಬಿ** (ಕವನ ಸಂಗ್ರಹ) ಕವಿಗಳು: ಕಿರಿಯರ ಬಳಗ: ಬೆಳಗಾಂವಿ. ಪ್ರಕಾಶಕರು, ಶ್ರೀ. ಬ. ಗಂ. ತುರಮರಿ ಬಿ. ಎ., ಗೌ. ಕಾರ್ಯದರ್ಶಿ, ಕಿರಿಯರ ಬಳಗ, ಬೆಳಗಾಂವಿ. ಕ್ರೌ. ಅ. ೯೨ ಪುಟ. ಬೆಲೆ ೧–೦೦.

೪೬ **ಗರ್ಭನಿರೋಧ.** (ಸಚಿತ್ರ ಕಾಮವಿಜ್ಞಾನ ಗ್ರಂಥ). ಲೇಖಕರು ಡಾಕ್ಟರ್ ಗೋಪಾಲಕೃಷ್ಣರಾಯರು, ಧಾರವಾಡ. ಪ್ರಕಾಶಕರು 'ಕಲಿಯುಗ' ಕಾರ್ಯಾಲಯ ಧಾರವಾಡ. ಕ್ರೌ. ಅ. ೧೩೪ ಪುಟ. ಬೆಲೆ ೧-೦-೦.

೪೭ **ವಿವಿಧ ಸಂಕಲನಗಳು** (ಭೂಗೋಲ ವರಿಚಯ). ಬರೆದವರು ಶ್ರೀಮಾನ್ ಪ್ರ. ಗೋ. ಕುಲಕರ್ಣಿ, ಬೆಳಗಾಂವಿ. ಪ್ರಕಾಶಕರು ಶ್ರೀ. ಕೆ. ಜಿ. ಜೋಶಿ ಭುವನೇಶ್ವರಿ ಮುದ್ರಣಾಲಯ, ಬೆಳಗಾಂವಿ. ಕ್ರೌ. ಅ. ೯೦ ಪುಟಗಳು. ಬೆಲೆ ೦-೮–೬.

ಹೊಸ ನಾಡಕ್ಕನುವನ್ನು ಅನುಸರಿಸಿ, ಪ್ರಾಥಮಿಕ ಶಾಲೆಯ ೩ನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ಬರೆದ ಪುಸ್ತಕವಾದು ಇನ್ನರ ನೆರವಿನಿಂದ ಶಿಕ್ಷಕರು ಮಕ್ಕಳಿಗೆ ಕತೆ ಕಲಿಸಿದಂತೆ ಭೂಗೋಲದ ವಿವಿಧ ವಿಷಯಗಳನ್ನು ಸುಲಭವಾಗಿ ಕಲಿಸಬಹುದು. ಶಿಕ್ಷಕ ವಲ್ಲರ ಮನಸ್ಸನ್ನು ಈ ಪುಸ್ತಕದ ಕಡೆಗೆ ಅವಶ್ಯವಾಗಿ ಎಳೆಯುವಂತೆ ಚಿತ್ರಿಸುತ್ತೇನೆ.

೪೮ **ಕೀರ್ತಿಕರಣ** (ಮಾಸ ಪತ್ರಿಕೆಯ ೧೯ನೆಯ ಜೂನ್ ಸಂಚಿಕೆ). ನಿರ್ವಾಹಕರು ಶ್ರೀ. ಜಿ. ಎ. ನರಸಿಂಹಮೂರ್ತಿ ಬಿ. ಎಸ್-ಸಿ. ಪ್ರಕಾಶಕರು ಮೆ. ಆರ್. ಎಸ್. ಪ್ಯೂಜ್ ಏಜನ್ಸಿ, ಬೆಂಗಳೂರು ನಗರ. ಕ್ರೌನ್ ೧೮ ಪುಟಗಳು. ಬಿಡಿ ಸಂಚಿಕೆಗೆ ೨ ಆಣೆ.

ಕಾಗದದ ಅಮುಕೂಲತೆಯ ಮೂಲಕ, ಬೆಂಗಳೂರಲ್ಲಿ ಇತ್ತೀಚೆಗೆ ತರುಣದಲ್ಲಾಂತಹ ಸಾಹಿತ್ಯಕ ಪ್ರಯತ್ನಗಳು ಹಲವಾರು ನಡೆಯುತ್ತಿರುವುದು ಸಂತೋಷದ ಸಂಗತಿ.

೪೯ **ಉಕ್ಕಿನ ಮನುಷ್ಯ** (ಸ್ಟ್ಯಾಲಿನ್‌ನ ಜೀವನ ಚರಿತ್ರೆ). ಶ್ರೀ. ಎಂ. ಪರಿಪೂರ್ಣ ಅವರು ಲೇಖಕರು. ಧಾರವಾಡದ 'ಮಿಂಚಿನಬಳ್ಳಿ'ಯ ೬ನೆಯ ವರ್ಷದ ೨ನೆಯ ಕುಡಿ. ಕ್ರೌ. ಅ. ೧೬೦ ಪುಟಗಳು. ಬೆಲೆ ೨–೦–೦.

೫೦ **ಸಂಶಯ** (ಚಿಕ್ಕ ನಾಟಕ) ಬರೆದವರು ಶ್ರೀಮಾನ್ ಎಚ್. ರಾಜಗೋಪಾಲ ಅಯ್ಯಂಗಾರ್ಯ. ಪ್ರಕಾಶಕರು: ಎಂಪೀ ಎಜನ್ಸೀಜ್ ಬೆಂಗಳೂರು ನಗರ. ಕ್ರೌ. ಅ. ೩೨ ಪುಟಗಳು. ಬೆಲೆ ೦-೬-೦.

೫೧ **ಯುಗಪ್ರವರ್ತಕ ಬಸವಣ್ಣನವರು** (ಜೀವನ ಚರಿತ್ರೆ) ಬರೆದವರು ಶ್ರೀ. ಚಿಂತಾಮಣಿ' ಪ್ರಕಾಶಕರು ಜೀವನ ಪುಸ್ತಕಾಲಯ, ಮೈಸೂರು. ಕ್ರೌ. ಅ. ೮೦ ಪುಟಗಳು. ಬೆಲೆ ೧–೦–೦

೫೨ **ಸಾಹಿತ್ಯ ಮತ್ತು ಜೀವನ** (೧೨ ಪ್ರಬಂಧಗಳು). ಬರೆದವರು ಶ್ರೀಮಾನ್ ಅ. ನ. ಕೃಷ್ಣರಾಯರು. ಪ್ರಕಾಶಕರು ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ. ಕ್ರೌ. ಅ. ೧೩೦ ಪುಟಗಳು. ಬೆಲೆ ೧.೮-೦.

೫೩ **ನನ್ನನ್ನು ನಾನೇ ಕೆಣಕಿ** (ಸ್ವಸಂವರ್ಧನಾತ್ಮಕ ಪ್ರಬಂಧಗಳು). ಬರೆದವರು

WANTED

Capable young men with previous experience to canvass wholesale or retail orders for our Highgrown Teas of all grades on decent commission. For particulars apply to:-

The Star of India Tea Supply Corporation,

Post Box No. 126, Coimbatore S. I.

ಶ್ರೀಮಾನ್ ಅ. ನ. ಕೃಷ್ಣರಾಯರು, ಅಧ್ಯಕ್ಷ ಪ್ರಗತಿಶೀಲ ಲೇಖಕರ ಸಂಘ—ಬೆಂಗಳೂರು. ಪ್ರಕಾರಕರು: ಪ್ರಗತಿಶೀಲ ಲೇಖಕರ ಸಂಘ ಬೆಂಗಳೂರು ಮತ್ತು ಸಾಹಿತ್ಯ ಮಂದಿರ, ಧಾರವಾಡ. ಕ್ರೌ. ಅ. ೯೦ ಪುಟಗಳು. ಬೆಲೆ ೧–೦–೦

೫೪ **ಅಶಾಂತಿಪರ್ವ** (ಐತಿಹಾಸಿಕ ಕಾದಂಬರಿಯ ೨ನೆಯ ಆವೃತ್ತಿಯ ಪ್ರತಿ): ಬರೆದವರು 'ಅನಂತಕಂದ', ಪ್ರಕಾಶಕರು ಸಾಹಿತ್ಯಮಂದಿರ, ಧಾರವಾಡ. ಕ್ರೌ. ಅ. ೨೪೪ ಪುಟಗಳು. ಬೆಲೆ ೨–೪–೦.

೫೫ **ಶ್ರೀರುಕ್ಮಾಂಗದ ಮಂಡಲ್ಯವಿಜಾಪುರ** ಅವರು ತಮ್ಮ ಸಂಸ್ಥೆಯ ಸುವರ್ಣ ಮಹೋತ್ಸವದ ಕಾಲಕ್ಕೆ ಪ್ರಸಿದ್ಧಿಸಿದವರದಿ

೫೬ **ಪಕ್ಕೆಹಾಡು** (ಕವನ ಸಂಗ್ರಹ) ಕವಿಗಳು 'ರಾಘವ' (ಶ್ರೀ. ಎಂ. ವಿ. ಸೀತಾರಾಮಯ್ಯ, ಎಂ ಎ.) ಅವರು. ಪ್ರಕಾಶಕರು ಸತ್ಯಬೋಧನ ಪ್ರಕಟನಾ ಮಂದಿರ, ಕೋಟೆ ಬೆಂಗಳೂರು ನಗರ. ಕ್ರೌ. ಅ. ೮೮ ಪುಟ. ಬೆಲೆ ೧–೦–೦.

೫೭ **ಬಾರ್ನ್‌ಬಸ್ ನ ಮೋದರರ ಭವಿಷ್ಯಸಂದೇಶ** (ಜಾರ್ಜ್ ಬರ್ನಾರ್ಡ್‌ಶಾ ಅವರ ನಾಟಕವೊಂದರ ಅನುವಾದ.) ಅನುವಾದಕರು ಶ್ರೀಯುತರುಗಳಾದ ಎಚ್. ನಾರಾಯಣರಾವ್ ಬಿ. ಎ. ಮತ್ತು ಕೆ. ಪಿ. ರಾಮನಾಥಯ್ಯ ಎಂ. ಎ. ಅವರು. ಬೆಂಗಳೂರಿನ ನೀಲಕಂಠೇಶ್ವರ ಮುದ್ರಣಾಲಯದಲ್ಲಿ ಅಚ್ಚಾಗಿದೆ. ಕ್ರೌ. ಅ. ೧೩೪ ಪುಟ. ಬೆಲೆ ೧–೦–೦

೫೮ **ಕೈತಕರೇಷ್ಮೆ** (ವಿಜ್ಞಾನ ಪರಿಚಯಾತ್ಮಕ ಗ್ರಂಥ) ಲೇಖಕರು ಶ್ರೀಮಾನ್ ಎಂ. ಪಡಶ್ಶೆರ ಸ್ವಾಮಿ ಎಂ. ಎಸ್ ಸಿ. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕ ಮಾಲೆಯ ೫ನೆಯ ಪುಸ್ತಕ. ಪೂ, ಕ್ರೌ. ಅ. ೬೨ ಪುಟಗಳು. ಬೆಲೆ ೦–೩–೦.

೫೯ Quarterly Journal of the Mythic Society (ಸಂಪುಟ ೨೪, ಸಂಚಿಕೆ ೪) ಬೆಂಗಳೂರಲ್ಲಿರುವ ಮಿಥಿಕ್ ಸೊಸೈಟಿಯ ಮುಖಪತ್ರಿಕೆಯಿದು. ಕಾಗದದ ಹೊಸ ಕಾಯ್ದೆಯ ಪರಿಣಾಮದಿಂದ ಸೊರಗಿದುದಾಗಿ ಹೊರಬಿದ್ದಿದೆ. ಡೆ. ಅ. ೨೮ ಪುಟಗಳು.

೬೦ **ಕಸ್ತೂರಿಬಾ** (ಸಚಿತ್ರ ಜೀವನ ಚರಿತ್ರೆ) ಬರೆದವರು ಶ್ರೀ. ಕೆ. ಅನಂತಸುಬ್ಬರಾವ್ ಪ್ರಕಾತಕರು ಕಟಕ ೫೦ ಆರಕೆಪೇಟೆ-ಬೆಂಗಳೂರು ನಗರ. ಡೆ. ಸ್ಮೈವ ೩೬ ಪುಟಗಳು. ಎರಡು ಸುಂದರ ಚಿತ್ರಗಳು. ಬೆಲೆ ೦–೪–೦.

ಮುದ್ರಕರು:
ಎನ್. ಎಸ್. ಬೆಂಗೇರಿ, ನಿಜಯ ಮುದ್ರಣಾಲಯ, ಧಾರವಾಡ.

ಪ್ರಕಾಶಕರು:
ಎ. ನಿ. ಮಲ್ಲೇಗಪ್ಪ ಶಂಕರಿ ಕಾರ್ಯಾಲಯ, ಧಾರವಾಡ



ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣೆ ಆಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೭	೧೦ನೆಯ ಆಗಸ್ಟ್ ೧೯೪೪	ಸಂಚಿಕೆ ೩

ಗೆಲವು ಒಂದೆ ನಮ್ಮ ಗುರಿ!

ಗೀತಾಪ್ರೀಯ

*

ನುಳ್ಳು ಸತ್ಯ ಇಲ್ಲ ತಥ್ಯ, ಗೆಲವು ಒಂದೆ ನಮ್ಮ ಗುರಿ!
ಒಳ್ಳಿತನವು ಮಳ್ಳುತನವು ಬಲವು ಇದ್ದರಲ್ಲಿ ಸರಿ!

ಬಾಳಿದೊಂದು ಸಮರದಂತೆ,
ನುಗ್ಗು ನುಗ್ಗು ಮುಂದಕೆ!

ಬಿದ್ದರೇನು ಮತ್ತೆ ಏಳು,
ಎದ್ದೆನೆಂದು ಒತ್ತಿ ಹೇಳು!

ಗೆಲವು ಪುರುಷ ತೊಟ್ಟ ಛಲವು
ನೀತಿನಿಯಮ ಇಲ್ಲಿ ಇಹವು;

ವೇಳೆಗಳೆಯ ಬೇಡ ಸಾಗು,
ಬೀಳದಿರೈ ಹಿಂದಕೆ!

ಗೆದ್ದಹೊರತು ಬಾಳು ಹಾಳು,
ಇದ್ದುದೆಲ್ಲ ಗಾಳು ಗೀಳು!

ಬಲವು ನಮ್ಮದೊಂದೆ ಅಳವು,
ಅನುವೆ ನಮ್ಮ ಧೀರ ದಳವು!

ಬಾಳಿಗಿಹುದು ಒಂದೆ ಸೂತ್ರ:
ಬಾಳುವುದೇ ಪೂರ್ಣ ಅರ್ಥ;

ಆಳುವುದೇ ನಮ್ಮ ಧರ್ಮ
ಬಾಳುವುದೇ ನಮ್ಮ ಕರ್ಮ

ಮನುಜ ಕುಲದ ಮಣಿಕಿ ನೀನು,
ಮನುಮನಸಿನ ಸ್ಫೂರ್ತಿ ನೀನು,

ಗಾಳಿ ಬೀಸುತಿಹುದೆ ಸಾರ್ಥ,
ನೀತಿನೇತಿ ಎಲ್ಲ ವ್ಯರ್ಥ!

ಬೀಳದಿಹುದೆ ಮೂಲಮರ್ಮ
ಇದನುಳಿದುದು ಬರಿ ಅಧರ್ಮ!

ಮನುವಂಶಕೆ ಕೀರ್ತಿಭಾನು,
ಇಲ್ಲ ನಿನಗೆ ಸರಿಸಮಾನು!

ಜಾತಿ-ಜೊತೆಗಳನರಸಬೇಡ,
ಹಿತವಹಿತಕೆ ಮರುಗಬೇಡ,

ನಿಂತವರೇ ನೆಲಕೊಡೆಯರು,
ಸಂತೆಯ ಜನ ಉಳಿದವರು,

ನೀನು ಗೆದ್ದ ಗೆಲವು ಮನುಜ-
ರೆತ್ತಿಕೊಳುವ ಅಮೃತಫಲವು;

ಕೃತುಧರ್ಮವ ತೊರೆಯ ಬೇಡ,
'ಮಿಜಿಮಿಜಿ' ನೀ ಮಾಡಬೇಡ.

ಚಿಂತಿಸದಿರು ಅವರಿನರು–
ಇಂತಿರುವರೆ ನಮ್ಮವರು!

ನೀನು ಬಿದ್ದು ಎದ್ದ ನೆಲವು
ಇದನು ಬಿತ್ತಿ ಬೆಳೆದ ಹೊಲವು!

ನುಳ್ಳು ಸತ್ಯ ಇಲ್ಲ ತಥ್ಯ, ಗೆಲವು ಒಂದೆ ನಮ್ಮ ಗುರಿ!
ಒಳ್ಳಿತನವು ಮಳ್ಳುತನವು ಬಲವು ಇದ್ದರಲ್ಲಿ ಸರಿ!

ಸದ್ದಿಲ್ಲದೆ ಬಂದು ಎಡೆಗಿದ ಹದ್ದು !

ಇದ್ದುದಿದ್ದ ಹಾಗೆಯೆ ಹಾರಿ ಬಂದ--ಸರಕಾರದ—ಹೊಸ ಕಾಗದ ನಿಯಂತ್ರಣ ಶಾಸನವು, ನಾಡಿನ ಪತ್ರಿಕೆಗಳ-ಗ್ರಂಥಗಳ-ಕೊರಳಿಗೆ ಕತ್ತರಿಯನ್ನೊಡ್ಡಿ ಕೊಂಡು ನಿಂತಿದೆ. ಯುದ್ಧಕಾಲದ ಸಂರಕ್ಷಣೆಯ ಕಾರಣದಿಂದ ಈ ಶಾಸನವು ಮುಂದೆ ಬಂದಿರುವುದರಿಂದ, ಯಾವ ಪ್ರತೀಕಾರವೂ ವಿಜ್ಞಾಪನೆಗಳೂ ನಡೆಯದಂತಿರುವುವು. ಹೀಗಾಗಲೇ ಬೇಕೆಂಬ ಖಂಡಿತವಾದ ಹಟವನ್ನೇ ಕೇಂದ್ರಸರಕಾರವು ಹಿಡಿದುಬಿಟ್ಟಿದೆ. ಎಲ್ಲ ಪತ್ರಿಕೆ-ಪ್ರಕಾಶನಗಳೊಂದಿಗೆ ಜಯಂತಿಯ ಕೊರಳಿಗೂ ಆ ಕತ್ತರಿ ಬಂದಿದೆ; ಅದರ ಪರಿಣಾಮವಾಗಿಯೆ ಈ ಸಂಚಿಕೆ ಸೊರಗಿ ಕೊರಗಿ ಹೊರಕ್ಕೆ ಬಂದಿದೆ.

ವಾಚಕರ ಅನುಕೂಲತೆಯನ್ನು ಲಕ್ಷ್ಯದಲ್ಲಿರಿಸಿಕೊಂಡು, ಈ ಮೊದಲೇ ಪ್ರಚಾರದಲ್ಲಿ ಬಂದ ವೃತ್ತಕಾಗದದ ನಿಯಂತ್ರಣಾಜ್ಞೆಗೆ ಬಳಗಾಗಲು ನಾವು ಬಯಸಲಿಲ್ಲ. ಬೇರೆ ಕಾಗದಗಳನ್ನು ಉಪಯೋಗಿಸುವ ಪತ್ರಿಕೆಗಳು ಆ ಶಾಸನದ ಕಟ್ಟಿನಿಂದ ಸ್ವತಂತ್ರವಾಗಿ ಉಳಿಯಬಹುದಾಗಿದ್ದಿತು. ಆದುದರಿಂದಲೆ ಕಳ್ಳಪೇಟೆಯ ದರದಿಂದ ಕಾಗದ ಕೊಂಡಾದರೂ ಜಯಂತಿಯ ರೂಪವನ್ನು—ತಕ್ಕಮಟ್ಟಿಗೆ—ಇದುವರೆಗೆ ಉಳಿಸಿಕೊಂಡು ಬಂದೆವು. ಹೀಗೆ ಉಳಿಸಿಕೊಂಡು ಬರುವ ಹಟಕ್ಕಾಗಿ ೬-೪ ಸಾವಿರ ರೂಪಾಯಿಗಳ ನಷ್ಟದ ಹೊರೆಯನ್ನೂ ಹೊತ್ತು ನಿಂತೆವು. ಆದರೆ ಈಗ ನಷ್ಟವಮಾಡಿಕೊಂಡು ಒಳ್ಳೆಯ ಸಂಚಿಕೆಗಳನ್ನು ಓದಗಿಸಿ ಕೊಡಲಿಕ್ಕೂ ಈ ಹೊಸ ನಿಯಂತ್ರಣಾಜ್ಞೆಯಿಂದ ತಡೆಯುಂಟಾಗಿದೆಯೆಂದು ಹೇಳಿದರೆ ಅನೇಕರಿಗೆ ಆಶ್ಚರ್ಯವೆನಿಸಬಹುದು. ಪರಾಧೀನ ರಾಷ್ಟ್ರಗಳಲ್ಲಿ ಇಂತಹ ಆಶ್ಚರ್ಯದ ವಿಷಯಗಳು ಸಾವಿರಾರು ! ಆಶ್ಚರ್ಯಪಟ್ಟು ಸುಮ್ಮನಿರುವುದಲ್ಲದೆ ಇನ್ನೇನನ್ನೂ ಮಾಡುತ್ತಿಲ್ಲ ನಾವು.

ಕಳೆದ ವರ್ಷ ಜಯಂತಿಗಾಗಿ ತಿಂಗ-ತಿಂಗಳೂ ಕಾಗದ ದೊರೆಕಿಸುವುದೇ ಒಂದು ಕಷ್ಟದ ಕೆಲಸವಾಗಿ ಹೋಯಿತು. ಕೊಡುತ್ತೇವೆಯೆಂದು ಮಾತು ಕೊಟ್ಟು ಮುಂಗಡ ಹಣ ತೆಗೆದುಕೊಂಡವರು, ಕಳ್ಳಪೇಟೆಯ ಲಾಭದ ಲೋಭಕ್ಕೊಳಗಾಗಿ ಮಾತು ತಪ್ಪಿದರು. ಇಡಬಾರದಲ್ಲಿ ಇರಿಸಿದ ನಂಬುಗೆಯ ತಪ್ಪಿಗಾಗಿ, ಜಯಂತಿ ಸಾವಿರಾರು ರೂಪಾಯಿಗಳನ್ನು ಕಳೆದುಕೊಳ್ಳಬೇಕಾಯಿತು. ಕೈಕಾಗದ ಕೊಂಡಾದರೂ ಜಯಂತಿಯ ರೂಪ ಉಳಿಸಬೇಕೆಂದೂ ಪ್ರಯತ್ನಪಟ್ಟಾಯಿತು; ಅದರಲ್ಲಿಯೂ ನೋಸದ ಏಟನ್ನು ತಿಂದು, ಕಳೆದುಕೊಂಡು ಬುದ್ಧಿ ಕಲಿತಾಯಿತು. ಇಷ್ಟೆಲ್ಲ ಕಷ್ಟದ ಕಲ್ಲು-ಮುಳ್ಳಿನ ದಾರಿಯಲ್ಲಿ ಜಯಂತಿ ಹೇಗೋ ಹೇಗೋ ನಡೆದು ಮುಂದುವರಿಯಿತು.

ಹೊಸ ವರ್ಷಕ್ಕಾಗಿ ಕಾಗದದ ಏರ್ಪಾಡನ್ನು—ಒಬ್ಬಿಬ್ಬರು ಸ್ನೇಹಿತರ ಸಹಕಾರದಿಂದ—ಮುಂಗಡವಾಗಿ ಮಾಡಿಕೊಂಡಿದ್ದೆವು. ಈ ಏರ್ಪಾಡಾದುದಕ್ಕಾಗಿ ಆಗಾಗ ಸಮಾಧಾನದ ಉಸಿರನ್ನೂ ಬಿಡುತ್ತಲಿದ್ದೆವು. ಜೂನ್ ಸಂಚಿಕೆ ಪ್ರಕಟವಾಗುವವರೆಗೆ ನಮಗೆ ಬರಲಿರುವ ಆಪತ್ತಿನ ಕಲ್ಪನೆ ಕನಸು-ಮನಸಿನಲ್ಲಿಯೂ ಇರಲಿಲ್ಲ. ಜೂಲೈ ಸಂಚಿಕೆಯ ಮುದ್ರಣ ಮುಗಿಯುತ್ತ ಬಂದ ಸಮಯದಲ್ಲಿಯೆ, ಮುದ್ರಣ ಪ್ರಪಂಚದಲ್ಲಿ ನಿಯಂತ್ರಣ ಶಾಸನದ ಗುಡುಗು ಮೊಳಗಿತು; ಸಿಡಿಲು ಎರಗಿತು. ಮೊದಲಿನ ಪುಟಗಳಲ್ಲಿ ೧೦೦ಕ್ಕೆ ೬೦ರಷ್ಟು ಮಾತ್ರ ಪುಟಗಳಿರಬೇಕು ಪತ್ರಿಕೆಗಳಲ್ಲಿ—ಎಂಬ ಸರ್ವಾಧಿಕಾರಿ ಆಜ್ಞೆ, ಮುದ್ರಣ-ಪ್ರಕಾಶನಜೀವಿಗಳನ್ನು ಕಂಗೆಡಿಸಿಬಿಟ್ಟಿತು; ಕಂಗೆಡಿಸಿ ಬಿಟ್ಟಿದೆ. ಬದುಕುವ ಬಗೆಯ ಆ ವ್ಯವಸಾಯಿಗಳಿಗೆ ತಿಳಿಯದಂತಾಗಿದೆ.

ಈ ಸಂಚಿಕೆ

ಸದ್ಯ ನಿಯಂತ್ರಣಾಜ್ಞೆಯ ನಿಯಮಕ್ಕನುಸಾರವಾಗಿ ಈ ಸಂಚಿಕೆಯನ್ನು ವಾಚಕರ ಕೈಯಲ್ಲಿ ಇರಿಸಿದ್ದೇವೆ. ವಾಚಕರು ನಿರಾಶರಾಗಕೂಡದು, ವಿಷಾದಗೊಳ್ಳಕೂಡದು. ಒಳ್ಳೆಯ ಕಾಲದಲ್ಲಿ ಮೂಡಬಹುದಾದ ಜಯಂತಿಯ ಕಾರ್ಯದ ಕಡೆಗೆ ಲಕ್ಷ್ಯವಿರಿಸಿ, ಎಂದಿನಂತೆ ಅದನ್ನು ಪ್ರೀತಿಯಿಂದ ಬರಮಾಡಿಕೊಂಡು ಆದರಿಸಬೇಕು.

ಇದ್ದ ಪುಟಗಳಲ್ಲಿಯೆ ಹೆಚ್ಚಿಗೆ ವಿಷಯಗಳನ್ನು ಕೊಡಬೇಕೆಂಬ ಇಚ್ಛೆಯಿಂದ ಮುದ್ರಣ ಪದ್ಧತಿಯಲ್ಲಿ ಬದಲು ಮಾಡಿದುದನ್ನು ತಾವು ಇದರಲ್ಲಿ ನೋಡಬಹುದು. ಹಿಂದಿನ ಆ ಭವ್ಯ ತಲೆಬರೆಹಗಳಿಲ್ಲ; ಲೇಖನಸಾರ-ಸೂಚನೆಗಳಿಲ್ಲ. ಒಂದು ಅರೆಯಿಂಚಿನಷ್ಟು ಎಡೆಯನ್ನೂ ಹಾಳುಮಾಡದಂತೆ ಎಚ್ಚರು ತೆಗೆದುಕೊಳ್ಳಲಾಗಿದೆ. ಇದ್ದುದರಲ್ಲಿಯೆ ಸದ್ಯ ಸಮಾಧಾನಪಡಬೇಕು ಎಂದಿಷ್ಟೇ ವಾಚಕರಲ್ಲಿ ನಮ್ಮ ವಿನ್ನಹ.

ಮುಂದೆ ಏನು ?

ಜಯಂತಿಯ ಸಂಚಿಕೆಗಳಲ್ಲಿ ಹೆಚ್ಚಿಗೆ ಪುಟಗಳನ್ನು ಕೊಡುವುದಕ್ಕಾಗಿ ಸರಕಾರವನ್ನು ಪ್ರಾರ್ಥಿಸಿ ಪ್ರಯತ್ನಪಡುತ್ತಲಿದ್ದೇವೆ. ಅದು ಸಾಧ್ಯವಾಗದೆ ಹೋದಲ್ಲಿ, ವೃತ್ತಕಾಗದ ಬಳಸುವ ಒಪ್ಪಿಗೆ ಪಡೆಯಬೇಕೆಂದಿದ್ದೇವೆ. ಅದೂ ಅನುಕೂಲವೆನಿಸದ ಪಕ್ಷದಲ್ಲಿ, ನಿಯಮಾನುಸಾರ ಪುಟಗಳನ್ನು ಕೊಟ್ಟು ಅಸ್ಪರಲ್ಲಿಯೆ ಅದಷ್ಟು ಹೆಚ್ಚಿಗೆ ಓದುವ ವಿಷಯಗಳನ್ನು ಕೊಡುವಂತೆ, ತೀರ ಚಿಕ್ಕ ಅಕ್ಷರಗಳಲ್ಲಿ ಅಚ್ಚುಹಾಕಿಸುವ ಏರ್ಪಾಡನ್ನು ಮಾಡುವೆವು. ಇವಾವ ನಮ್ಮ ಯತ್ನಗಳೂ ನಮ್ಮ ವಾಚಕರ ತೊಂದರೆಗಳನ್ನು ಸಂಪೂರ್ಣವಾಗಿ ನಿವಾರಿಸಲಾರವೆಂಬ ಮಾತು ನಮಗೆ ಗೊತ್ತಿದೆ. ಆದರೆ ಏನು ಮಾಡುವುದು ? ಮಹಾಯುದ್ಧದ ವಿಪ್ಲವ ಕಾಲ! ಸಿಕ್ಕಿದಷ್ಟು ತುತ್ತುಗಳನ್ನು ತೊಟ್ಟಿಯಲ್ಲಿ ಹಾಕುತ್ತ ಬದುಕಿಕೊಂಡಿಲ್ಲವೆ ಜನತೆ ? ಆದರಂತೆಯೆ ದೊರೆತಷ್ಟು ಅರಿವನ್ನು ಹಿಡಿದು ಸಂಗ್ರಹಿಸುವುದು, ಅಯಿತು ! ಈ ಸಂಕ್ರಮಣ ಕಾಲದಲ್ಲಿ ಜಯಂತಿಯ ಅಭಿಮಾನಿಗಳು ಅದನ್ನು ಕೈಬಿಡದೆ ಮುಂದುವರಿಸಿಕೊಂಡು ಸಾಗಿದರೆಯೆ, ಅದು ಕೊರಗಿ-ಸೊರಗಿಯಾದರೂ ಬದುಕಿ ಕಾರ್ಯವಾದಬಹುದು. ಮುಂದಿನ ಒಳ್ಳೆಯ ದಿನದಲ್ಲಿ ಅದರಿಂದ ಹೆಚ್ಚಿನ ಕೆಲಸ ದೊರೆಯಬಹುದು. ಈಗ ಜನತೆ ಇಂದಿನ ಜಯಂತಿಯ ಅನಿವಾರ್ಯವಾದ ಕಿರುನೆಯನ್ನು ಕಂಡು ತಿರಸ್ಕಾರದಿಂದ ನೋಡತೊದಗಿದರೆ, ಅದಕ್ಕೆ ವರ್ತಮಾನಜೀವನವೂ ಇಲ್ಲ; ಭವಿಷ್ಯಜ್ಜೀವನವೂ ಇಲ್ಲ.

ನಮ್ಮ ಲೇಖಕರಿಗೆ

ಜಯಂತಿಗೆ ದೊರೆತ ಅಖಿಲ ಕರ್ನಾಟಕದ ಲೇಖಕರ ಸಂಪೂರ್ಣ ಸಹಕಾರವನ್ನು ಅದೆಂದೂ ಮರೆಯಲಾರದು. ಆದರೆ ತನ್ನಲ್ಲಿ ಸಾಕಷ್ಟು ಎಡೆ ಇರದುದರಿಂದ, ಹಲವು ಲೇಖಕರ ಲೇಖನ ಸಹಕಾರವನ್ನು ಸ್ವೀಕರಿಸಲು ಆಸ್ಪದವೆ ಇಲ್ಲದಂತಾಗಿದೆ. ಎಲ್ಲರನ್ನೂ ಸ್ವಾಗತಿಸಬೇಕೆಂಬ ದೊಡ್ಡ ಮನಸ್ಸಿದ್ದರೂ, ತನ್ನಿರವು ಕಿರುಗುಡಿಸಿಲಾದ ಬದವನ ಸ್ಥಿತಿ ಜಯಂತಿಗಿಂದು ಬಂದಿದೆ. ಬೇಗನೆ ಈ ನೈಮಿತ್ತಿಕ ಆಪತ್ತಿ ತೊಲಗಿ, ಎಲ್ಲ ಲೇಖಕರಿಗೂ ಎಡೆವಿಸಾಯುವಂತಹ ಮಹಾಮನೆಯನ್ನು ಕಟ್ಟುವ ಪರಿಸ್ಥಿತಿ ಆದಕ್ಕೆ ಪ್ರಾಪ್ತವಾಗಲೆಂದು ನಾವು ನೀವು ಕೂಡಿಯೆ ಕಾಲರಾಯನಲ್ಲಿ ಪೊರೆಯಿಡೋಣ! ಒನ್ಮೆಲೆ ಮಾಡಬೇಕಾದ ಬದಲಾವಣೆಯ ಮೂಲಕ ಈ ಸಂಚಿಕೆಯಲ್ಲಿ 'ಸಾಹಿತ್ಯವಿಹಾರ', 'ಪುಸ್ತಕವಿಮರ್ಶೆ' ಮೊದಲಾದ ಸಂಪಾದಕೀಯ ನೈವಿದ್ಯ ಬಾರದೆ ಹೋಗಿದೆ. ಮುಂದಿನ ಸಂಚಿಕೆಗಳಲ್ಲಿ ಇವುಗಳನ್ನೆಲ್ಲ ಹವಣವರಿತು ಕೊಡಲಾಗುವುದು. ಸದ್ಯ ಲೇಖಕರಲ್ಲ ನಮ್ಮನ್ನು ಸಹಾನುಭೂತಿಯಿಂದ ಕಾಣುವರೆಂದು ನಮ್ಮ ಭರವಸೆ. ಒಟ್ಟಿನ ಮೇಲೆ ಸಂಪಾದಕತ್ವದ ವ್ಯವಸಾಯವಿಂದು ದೊಂಬರಗಣಿಯ ಮೇಲಿನ ಕಸರತ್ತಿನಂತಾಗುತ್ತ ನಡೆದಿದೆ. ಕಸರತ್ತು ಬಿಟ್ಟುಕೊಡುವುದೂ ಬದುಕಿಗೆ ಕಷ್ಟ; ಕಸರತ್ತು ಮಾಡುತ್ತಿದ್ದರೂ ಬದುಕಿಗೆ ಕಷ್ಟ!

—ಸಂಪಾದಕರು.

೧ ರೊಕ್ಕದ ರಾಮಣ್ಣ.

ಮುಂಗರಾಯನ ಮುಂತ್ರಿಮಂಡಳದ ರಹಸ್ಯ ಇದೀಗ ಅನಿವಾರ್ಯವಾಗಿ ಹೊರಬಿದ್ದುದರಿಂದ, ಆ ಮಂಡಳದ ಎಲ್ಲ ಮಹಾನುಭಾವರ ಪರಿಚಯವನ್ನು ಕನ್ನಡಿಗರಿಗೆ ಅಭಿಮಾನದಿಂದ ಮುಂಗರಾಯನು ಮಾಡಿಕೊಡಬೇಕೆಂದಿದ್ದಾನೆ. ಈ ಮಹಾನುಭಾವರಲ್ಲಿ ಮುಂಗರಾಯನ ಮಾನಸಪುತ್ರನಂತಿದ್ದ ಒಂದು ಶ್ರೇಷ್ಠವ್ಯಕ್ತಿ ಸಾರ್ವಧನಿಕ ವ್ಯವಹಾರದಲ್ಲಿ 'ರೊಕ್ಕದ ರಾಮಣ್ಣ' ಎಂಬ ಬಿರುದಿನಿಂದ ಮೆರೆಯುತ್ತಿದ್ದಾನೆ. ರೊಕ್ಕದ ರಾಮಣ್ಣಯ್ಯ ಅತ್ಯಂತ ಮೇಧಾವಿಯಾಗಿದ್ದಾನೆ; ಯಾವ ಕೆಲಸಕ್ಕೂ ರಾಮಣ್ಣ ಬೇಕು, ಆದರಂತೆ ಯಾವುದಕ್ಕೂ ರೊಕ್ಕ ಬೇಕು." ಇವೆರಡರ ಸಮೀಕರಣವೆಂದರೆ ರೊಕ್ಕದ ರಾಮಣ್ಣ. ಇವನ ವೈಶಿಷ್ಟ್ಯವೆಂದರೆ ಸಮಾಜದ ಧನವನ್ನು ಸಮಾಜಕ್ಕಾಗಿಯೆ ಉಪಯೋಗಿಸುವುದು. ಅದಕ್ಕಾಗಿ ಎಲ್ಲ ಧನವನ್ನು ಸಮಾಜದ ಪ್ರತಿನಿಧಿಯಾದ ತನ್ನಲ್ಲಿಯೆ ಇರಿಸಿಕೊಳ್ಳುತ್ತಾನೆ. ಈ ಮಾತಿಗಾಗಿ ಸಂಗ್ರಹದ ಸೀತಾಪತಿ ಎಂಬೂ ಬಿರುದು ಬಂದಿದೆ ಇವನಿಗೆ. ದುಡ್ಡಿನಂತೆ ದುಂಡಾದ ದೇಹ, ಬಂಗಾರದಂತೆ ಭಾರವಾದ ಮೈಕಟ್ಟು, ಬೇಕಾದಲ್ಲಿಂದ ಎತ್ತಿ ದೊರೆಕಿಸಲು ಅನುಕೂಲವಾಗುವಂತೆ ಉದ್ದ ಕೈಗಳು; ಯಾವಾಗಲೂ ಕಾಡಿ ಬೇಡಿ ಆಗಲವಾದ ಬಾಯಿ—ಹೀಗೆ ರೊಕ್ಕದ ಸರ್ವಾಂತರ್ಯಾಮಿಯಾಗಿದ್ದಾನೆ ಈತ. ಇವನ ಇಡಿಯ ದೇಹವೆ ಜೋಳಿಗೆಯಂತಿದ್ದುದರಿಂದ ಜೋಳಿಗೆಯ ಜಾನಕೀಪತಿ ಎಂದೂ ಇವನು ಹೆಸರನ್ನು ಪಡೆದಿದ್ದಾನೆ. ಬೆಳ್ಳಿಯಂತೆ ಶುಭ್ರವಾದ ವಸ್ತ್ರವನ್ನುಟ್ಟು ಈ ಮೂರ್ತಿಯನ್ನು ನೋಡಿದೊಡನೆ—ಪರಮಾತ್ಮನ ದರ್ಶನದಿಂದ ಸಂಸಾರಬಂಧನ ಹರಿವಂತೆ— ಕಸಿಯು ಬಂಧನಗಳು ಹರಿದು ಬೀಳುವುವು. ನಿಜವಾದ ದರಿದ್ರನಾರಾಯಣನಿವನು, ಎಂಬರೆ ದರಿದ್ರನಾಗಿ ಹುಟ್ಟಿದ್ದರೂ ಯೋಗ್ಯತೆಯಿಂದ ನಾರಾಯಣನಾಗಿ ನಿಂತವನು. ಮುಂಗರಾಯನ ಮುಂತ್ರಿಮಂಡಳದಲ್ಲಿ ಆರ್ಥಿಕಕುಶಲಹಿಗಾರನಾದ ಇವನ ಬುದ್ಧಿವಂತಿಕೆಯಿಂದಲೆ ಅನೇಕ ಕನ್ನಡಿಗರು ದರಿದ್ರರಾಗಿದ್ದಾರೆ; ಮುಂದೆ ನಾರಾಯಣರಾಗುವ ಯೋಗ್ಯತೆಯನ್ನು ತೋರಿಸಲೆಂದು. ಇನ್ನೊಂದು ನಿಸ್ವಾರ್ಥದ ಸ್ವಭಾವವಿವನದು. ಈ ಈ ನಿಸ್ವಾರ್ಥಕ್ಕಾಗಿಯೆ ಇವನ ಅರ್ಥಶಾಸ್ತ್ರಜ್ಞತೆಯೆಯರು 'ಭಾಗ್ಯಲಕ್ಷ್ಮಿಯ ಬೇರರ್ ಚೆಕ್ (bearer cheque)' ಎಂಬ ವಿನೋದದಿಂದ ಹೆಸರಿಟ್ಟಿದ್ದಾರೆ. ಮುಂಬರುವ ಕರ್ನಾಟಕದ ಭಾಗ್ಯಲಕ್ಷ್ಮಿ ಈಗ ಇವನ ಕೈಯಲ್ಲಿದ್ದಾಳೆಂದು ಕೇಳಿ ಯಾವ ಕನ್ನಡಿಗನಿಗೆ ವಿಶ್ವಾಸ ಬೆಳೆಯಲಿಕ್ಕಿಲ್ಲ?

\+ + + +

೨ ಮಾನವನು ತೃಣಜೀವಿ

ಯುದ್ಧೋತ್ತರ ಕಾಲದಲ್ಲಿ ಮಾನವನ ಜೀವನವನ್ನೇ ಕ್ರಾಂತಿಮಯವಾಗಿ ಮಾರ್ಪಡಿಸಬೇಕೆಂಬ ಪುಣ್ಯದ್ದಿಮಂಡಳದಲ್ಲಿ ಮುಂಗರಾಯನು ಅಗ್ರಗಣ್ಯನಾಗಿದ್ದಾನೆ. ಇಷ್ಟೇಕೆ? ಈ ಜೀವನಪುನರ್‌ರಚನೆಯ ಕಾರ್ಯವನ್ನು ಮುಂಗರಾಯನಿಗೆಯೆ ಒಪ್ಪಿಸಿದ್ದಾರೆ. ಈಗಾಗಲೆ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ವಿಜ್ಞಾನ ಪಂಡಿತರು ಪರಿಶೋಧನೆ, ಕಾರ್ಯದಲ್ಲಿ ಮುಂಗರಾಯನ ಆಜ್ಞೆಯಿಂದ ತೊಡಗಿದ್ದಾರೆ. ಇಷ್ಟರಲ್ಲಿಯೆ ಒಂದು ಅತ್ಯಂತ ಮಹತ್ವದ ಪರಿಶೋಧನೆ ಇಂಗ್ಲಂಡಿನ ತಜ್ಞರು ಮಾಡಿದ್ದನ್ನು ನಾವಾಚಕರು ಪತ್ರಿಕೆಗಳಲ್ಲಿ ಓದಿರಬಹುದು. ಆದರೆ ವಾಚಕರು ಸುದ್ದಿಯನ್ನಷ್ಟೆ ಓದಿದ್ದಾರೆ. ಸಂಪೂರ್ಣ ವರದಿ ಈಗ ಮುಂಗರಾಯನಿಗೆ ಬಂದಿದೆ. ರಾಜ್ಯತಂತ್ರದ ಕಾರಣಗಳಿಗಾಗಿ ಎಲ್ಲವನ್ನೂ ಬಹಿರಂಗಗೊಳಿಸುವುದು ಶಕ್ಯವಿಲ್ಲದಿದ್ದರೂ, ಆ ಪರಿಶೋಧನ ನುತ್ತು ಅವರ ಮನಶ್ಶಾಸ್ತ್ರವನ ಪರಿಣಾಮ ಇಷ್ಟನ್ನು ಸ್ಥೂಲವಾಗಿ ಇಲ್ಲಿ ಸೂಚಿಸಬಹುದು:

ಪರಿಶೋಧ

ಹುಲ್ಲು ಮನುಷ್ಯನಿಗೆ ಉತ್ತಮವಾದ ಆಹಾರ. ಅದನ್ನು ಮನುಷ್ಯನು ತಿನ್ನಬಹುದು, ತಿಂದು ಬದುಕಬಹುದು, ಇಷ್ಟೆ ಅಲ್ಲ, ಬಲಿಯಬಹುದು.

ಪರಿಣಾಮಗಳು.

(೧) ಇನ್ನು ಮುಂದೆ ಮಾನವರಿಗೆ ಮನೆ ಕಟ್ಟಿಕೊಂಡು ಇರಬೇಕಾಗುವುದಿಲ್ಲ.

(೨) ನಮ್ಮ ದೇಶದ ಜನಸಂಖ್ಯೆ ಬೇಕಾದಷ್ಟು ಬೆಳೆಯಲಿ, ಹೆದರಿಕೆ ಇಲ್ಲ. 'ಮನೆಯೊಳಗೆ ಇರುವಂತೆ ಮಾಳಿಗೆಯ ಮೇಲೂ ಇರಲು ಶಕ್ಯವಾಗುವುದು.

(೩) ಹುಟ್ಟಿಸಿದ ಮನುಷ್ಯನು ಹುಲ್ಲು ಮೇಯಿಸುವನು.

(೪) ಇನ್ನು ಮುಂದೆ ಧಾನ್ಯದ ದೇಶನಿಂಗ್ ಕಾಟ ಪಶುಪಕ್ಷಿಗಳಿಗಷ್ಟೇ ತಗಲಬಹುದು.

(೫) ಮನುಷ್ಯನು ಆದಿವಾಸಿಯಾಗುವನು.

\+ + + +

ಮುಂಗರಾಯನ ಯೋಗ್ಯದರದ ಅಂಗಡಿ

ಬೆಳಗಾಂವಿ ನಗರಸಭೆಯವರು ನಡೆಯಿಸಿದು 'ಯೋಗ್ಯದರದ' ಅಂಗಡಿಯಿಂದ, ಒಂದು ವರ್ಷದಲ್ಲಿ ಒಂದು ಲಕ್ಷ ನಲವತ್ತು ಸಾವಿರ ರೂಪಾಯಿ ಲಾಭವಾಯಿತಂತೆ. 'ಯೋಗ್ಯದರದ' ಅಂಗಡಿಗಳನ್ನಿಟ್ಟು 'ದೇಶಸೇವೆ' ಮಾಡಿರುವ ದೇಶಭಕ್ತರಿಗೇ ಇನ್ನೊಂದು ಲಾಭವಾಗಿದೆಯೆಂದಮೇಲೆ, ಕಳ್ಳಪೇಟೆಯವ್ಯಕ್ತಿ ಮನುಷ್ಯನಿಗೆ ಬಂದಂತೆ ಮಾರಿದ ದೇಶಭಕ್ತರು ಎಷ್ಟೊಂದು ಲಾಭಪಡೆದಿರಬಹುದು? ಈ ಲೆಕ್ಕಾಚಾರಕ್ಕಾಗಿ ಮುಂಗರಾಯನೂ ಮುಂಕುಬಟ್ಟಿದ್ದಾನೆ; ಈಗ ತಾನೂ ದೇಶಭಕ್ತಿಯ ಪ್ರೇರಣೆಯಿಂದಿ, ಬೆಳಕಿನ ಪೇಟೆಯಲ್ಲಿಯೂ 'ಯೋಗ್ಯದರದ' ಅಂಗಡಿಯೊಂದನ್ನು ತೆರೆಯಬೇಕೆಂಬ ನಿರ್ಣಯಕ್ಕೆ ಬಂದಿದ್ದಾನೆ. ಈ ಅಂಗಡಿಯಿಂದ ಹೊರೆತ ಲಾಭದಿಂದ ಮಹಾಮಹಾಕಾರ್ಯಗಳನ್ನು ನಾಡಿಕೊಡಬೇಕೆಂದು ಆತನ ಸಂಕಲ್ಪ. ಅವೇನೆಂದರೆ: ನೊಡಲನೆಯದಾಗಿ ಹಿಂದುಸ್ತಾನದ ತಿರುಕರಿಗೆಲ್ಲ ತಲೆಗೆ ಒಂದೊಂದು ಗಟ್ಟಿಮುಟ್ಟಾದ ಜೋಳಿಗೆ ಹೊಲಿಸಿಕೊಡುವುದು. ಎರಡನೆಯದಾಗಿ, ಹೊಟ್ಟೆಗಿಲ್ಲದೆ ಸತ್ತವರನ್ನೆಲ್ಲ ವ್ಯವಸ್ಥಿತವಾಗಿ ಹೊಸೆಗಾಡಿ ಸುವುದಕ್ಕಾಗಿ, ಜಾತಿಗೊಂದರಂತೆ ಸುಂದರ ಮಸಣವನ್ನು ನಿರ್ಮಿಸಿಕೊಡುವುದು. ಮೂರನೆಯದಾಗಿ ಕಾಲೇಜಿನಲ್ಲಿ ಕಲಿತು ಪದವಿ ಪಡೆದ ತರುಣರಿಗೆಲ್ಲ ನೌಕರಿಗಾಗಿ ಅರ್ಜಿ ಬರೆದುಕೊಳ್ಳಲಿಕ್ಕೆ ಕಾಗದ ಸ್ಟಾಂಪುಗಳನ್ನು ಪುಕ್ಕಟೆಯಾಗಿ ಕೊಡುವುದು. ಆದಕ್ಕಾಗಿ ಸರಕಾರದ್ದೂ ಜನರದೂ ಕೂಡಿ ಹೆಚ್ಚಾಸಿಕ ಕೊಡಬೇಕು.


ಹಾರ್ಮೋನಿಯಂ ರಿಪೇರ್ಸ
ಈ ಪುಸ್ತಕದ ಸಹಾಯದಿಂದ ಪಿಟೀಲ್, ಹಾರ್ಮೋನಿಯಂ, ಹೊಳ್ಳು, ಡೋಲಕ್, ಹಾರ್ಮೋನಿಯಂ ಮೊದಲಾದ ವಾದ್ಯಗಳನ್ನು ಪರಿಪೂರ್ಣವಾಗಿ ತಿದ್ದಿಕೊಳ್ಳಬಹುದು
- ಸುಮಾರು ೨೦೦ -
ಹಿಂದುಸ್ತಾನಿ ಟೀಚರ್, ಗ್ರಾಮೋಫೋನ್ ರಿಕಾರ್ಡ್‌ವ್ಯಾಪಾರಿಗಳ ಪರಿಚಯ ನೋಟ.
— ಕನ್ನಡಗಳಿರುವುವು.
R. UPHADAK, BELGAUM

ಪುಸ್ತಕ ಮೊರೆಯುವ ಸ್ಥಳ:-
ವಾಗ್ವಿಲಾಸ ಬುಕ್-ಡಿಪೊ, ಹುಬ್ಬಳ್ಳಿ

ಒಲವಿನಲಿಯೆ ಚೆಲುವು ಇಹುದು!

(ಬಂಪು ಅನ್ವಾನ)

ಶ್ರೀ. ಬಿದರಕುಂದಿ ವೆಂಕಟರಾಯರು, ನಂದಗಡ

"ಚೆಲುವು ಹಿರಿಯದೊ ಹೃದಯದೊಲವು ಹಿರಿಯದೊ?
ಚೆಲುವಿನಲಿಯೆ ಒಲವು ಇಹುದೊ?
ಒಲವಿನಲಿಯೆ ಚಲುವು ಇಹುದೊ?"

—ಆನಂದಕಂದ (ವಿರಹಣಿ)

ಚೆಲುವು ಕಣ್ಣಿನ ನೋಟ, ಒಲವು ಹೃದಯದ ಆಟ. ರೂಪವು ಕ್ಷಣಿಕಸುಖವಾಗಿದ್ದರೆ ಪ್ರೀತಿಯು ನಿರಂತರ ಸುಖ. ಅದರಿಂದ ಒಲವಿನಿಂದಲೆ ಚೆಲುವು ಅಲ್ಲದೆ ಚೆಲುವಿನಿಂದ ಒಲವು ಉಂಟಾಗಲಾರದು. ಚೆಲುವಿಕೆಯಿಂದಲೆ ಒಲವು ಉಂಟಾಗಬೇಕಾದರೆ, ಆ ಚೆಲುವುವಸ್ತು ತನ್ನದಾಗಿರಬೇಕು. ಅದು ತನ್ನ ದಾಗಿದ್ದರೆ ಮಾತ್ರ ಆತ್ಮೀಯತೆಯುಂಟಾಗುವುದು; ಆ ಆತ್ಮೀಯತೆಯಲ್ಲಿಯೇ ಹೃದಯವು ತಲ್ಲೀನವಾಗುವುದು. ಆ ಅಂತಃಕರಣವು ಕಣ್ಣಿನಲ್ಲಿ ಮಿಲನವಾಗಿ ಬುದ್ಧಿಗೆ ಸಮಾಧಾನವನ್ನು ಕೊಡುವುದು. ಇದರಿಂದಲೆ ಆದರಲ್ಲಿ ತನ್ನತನವು ಹೆಚ್ಚಾಗುವುದು.

ಈ ತನ್ನತನದಿಂದಲೇ ಜಗತ್ತು ನಡೆದಿದೆ. 'ನಾನು' 'ನನ್ನದು' ಇವುಗಳಲ್ಲಿ ಅಹಂಕಾರ-ಸ್ವಾರ್ಥಗಳು ಇದ್ದರೂ, ಇವನ್ನು ಬಿಟ್ಟು ನಾವು ಬದುಕಲಾರೆವು; ಬಾಳುವೆ ನಡೆಯಲಾರದು. ಅದು ಕೇವಲ ಸುಜ್ಞಿಗಳ ಸರ್ಣಕುಟೀರಗಳಲ್ಲಿ ತ್ಯಾಗವಿರಬಹುದೆಂಬ ಸಮಾಧಾನ! ಆದರೂ ಈ ಸಮಾಧಾನಕ್ಕೆ ಆಸ್ಪದವಿಲ್ಲ.

'ನಾನು' ಇದ್ದಲ್ಲಿ 'ನನ್ನದು' ಇರುವುದು. ನನ್ನದೆಂದು ತೋರುವುದರಲ್ಲಿಯೇ ನನ್ನ ನೋಟವಿರುವುದು. ಆ ನೋಟದಲ್ಲಿಯೆ ಹೃದಯದ ತಳಮಳವು ಉಕ್ಕೇರಿ ಬರುವುದು. ಆದರಿಂದ ಹೃದಯದ ಒಲವಿನಲ್ಲಿಯೆ ಚೆಲುವಿಕೆಯು ಅಡಕವಾಗಿರುವುದು; ಇದರ ಸರಳತನದಲ್ಲಿಯೆ ಪ್ರೀತಿಯು ದೃಢವಾಗುವುದು.

ಒಲವು ಇರದ ವಸ್ತು ನನ್ನದಾಗಲಾರದು 'ನನ್ನದು' ಎಂಬುದು ಸ್ವಾರ್ಥವಯ ಶಬ್ದವಿದ್ದರೂ, ಇದರಲ್ಲಿಯೇ ವಿಶ್ವಬಂಧುತ್ವವಿರುವುದು. ನನ್ನದೆಂಬುದರಲ್ಲಿಯೆ ದೇಶಸೇವೆ ಇರುವುದು. ನನ್ನದೆಂಬುದರಲ್ಲಿಯೆ ತ್ಯಾಗವಿರುವುದು. ನನಗಾಗಿ ಇದ್ದ ಸುಖವನ್ನು, ನನ್ನದಕ್ಕಾಗಿ ಬೇಕಾಗುವ ಸುಖಕ್ಕಾಗಿ ತ್ಯಾಗಮಾಡಿದರೆಯೆ ಅದು ಲಭಿಸುವುದು ಅದಕ್ಕಾಗಿಯೆ ಮ. ಗಾಂಧೀಜಿಯವರು, ತನ್ನದನ್ನು ತಾನೇ ಬೋಧಿಸುವುದಕ್ಕಾಗಿ, ತನಗಾಗಿ ಇದ್ದ ಸುಖದ ತ್ಯಾಗ ಮಾಡಿರುವರು

ಆ ತ್ಯಾಗಮೂರ್ತಿಯು ನನ್ನದು. ಆದುದರಿಂದಲೆ ಅವರಲ್ಲಿ ನಮ್ಮ ಒಲವು; ಅಂತೆಯೆ ಅವರು ನಮಗೆ ಚೆಲುವಾಗಿ ಕಾಣುವರು.

ಈಗ ನಡೆದ ಮಹಾಯುದ್ಧದ ಹತ್ಯಾಕಾಂಡವು, ತನ್ನದನ್ನು ಗಳಿಸುವುದಕ್ಕಾಗಿ ಅಥವಾ ತನ್ನದನ್ನು ಉಳಿಸುವುದಕ್ಕಾಗಿ ನಡೆದಿದೆ. ಜರ್ಮನಿ ಸಾಮ್ರಾಜ್ಯಕ್ಕಾದ ಅವಮಾನದ ಸೇಡಿಗಾಗಿ, ಮೋರೆ ಗಂಟು ಹಾಕಿ, ಹಲ್ಲುಕಡಿಯುತ್ತ, ಮುಷ್ಟಿಯಿಂದ ಈಗ ಅಪ್ಪಳಿಸುವನೋ ಎಂದು ಕಾಣುವ ರಾಕ್ಷಸೀ ಹಿಟ್ಲರನ ಚಿತ್ರವು ನಮಗೆ ಅಸಹ್ಯವಾಗಿ ಕಂಡರೂ, ಜರ್ಮನರಿಗೆ ಅದೆಷ್ಟು ಚೆಲುವಾಗಿ ಕಾಣುತ್ತಿರಬಹುದಲ್ಲವೆ?

ನನಗಾಗಿ ನಾನು ದುಡಿಯಬೇಕು! ನನ್ನ ದನ್ನು ಕಾಯುವುದಕ್ಕಾಗಿ ನಾನು ಹೆಣಗಾಡಬೇಕು! 'ನಾನು-ನನ್ನದು' ಎಂಬುದೇ ಬಾಳಿನ ಪಲ್ಲವಿ! ನನ್ನಾಕೆಯು ನನಗಾಗಿ; ಎಂತಲೇ ಆಕೆ ಗಿಳಮೂಗಿಯಾಗಿ ಇದ್ದರೂ ನನಗೆ—ಕೇತಕಿಯ ಗರಿಯಂತೆ ಆಕೆಯ ಮೂಗು ಚೆಲುವಾಗಿ ಕಾಣುವುದು. ನನ್ನ ಮೈಬಣ್ಣ ತೊಳೆದ ಕೆಂಡದಂತಿದ್ದರೂ, ನನ್ನಾಕೆಗೆ ನನ್ನ ಬಣ್ಣ ಮಿಂದಣಿಸುನಿಯಂತೆ. ನನ್ನ ಮಕ್ಕಳು ಹೆನುಮಂತನನ್ನು ಮರೆಯಿಸುವಂತಹವುಗಳಾಗಿದ್ದರೆ, ಅವು ನನಗೆ ಕಾಮನನ್ನು ಹೀಯಾಳಿಸುವಂತಹವುಗಳಾಗಿರುವುವು ಏತಕ್ಕಾಗಿ? ಒಲುಮೆಗಾಗಿ! ಆ ಒಲವು ಇರದಿದ್ದರೆ ಅದರಲ್ಲಿಯ ಚೆಲುವಿಕೆಯನ್ನು ನಾವು ಕಾಣೆವು.

ಒಲವಿನಲಿಯೆ ಚೆಲುವು ಇದ್ದಲ್ಲಿಯೆ ಎಲ್ಲ ಪ್ರಾಣಿಗಳು ರಕ್ಷಣೆ ಪಡೆಯುತ್ತವೆ. ಅಂತೆಯೆ ಜನಸಂಖ್ಯೆಯು ಬೆಳೆಯುತ್ತದೆ; ಒಲವೆ ಅದನ್ನು ಸಂರಕ್ಷಿಸುತ್ತಲಿದೆ.

ಚೆಲುವಾದ ವಸ್ತುಗಳನ್ನು ನೋಡಿದಾಗಲೆ, ಅವುಗಳ ವಿಷಯವಾಗಿ ಆದರವೂ ಕೌತುಕವೂ ಉಂಟಾಗುವುದಲ್ಲದೆ ಒಲವಿನ ಮುಗುಳೂ ಒಡೆಯಬಹುದು. ಅವು ತನ್ನವಲ್ಲವೆಂದಾಕ್ಷಣವೆ ತವುಗಳ ಚೆಲುವು ಕಣ್ಮರೆಯಾಗುವುದು. 'ಅದು ನನ್ನದಿದ್ದರೆ.....' ಎಂಬ ಅಭಿಮಾನ.....ಅದು ನನ್ನದಾದರೆ ಮಾತ್ರ ಚೆಲುವಿನಲ್ಲಿ ಒಲವು ಕೂಡಿ ಕುಂದಣವಿಟ್ಟಂತಾಗುವುದು.

ನನ್ನ ಹೆಂಡತಿ, ನನ್ನ ಮಕ್ಕಳು, ನನ್ನ ಹೊಲ, ನನ್ನ ಮನೆ ಎಂಬ ಬಾಳುವೆಯ ಸಂಸ್ಥೆಯನ್ನು ಒಲವಿನ ಜೀವಾಳದಿಂದಲೆ ಕಟ್ಟಿರುವುದು ಅದಕ್ಕಾಗಿ ಅವು ನಮಗೆ ಚೆಲುವಾಗಿ ಕಾಣುವುವು. ಆ ಚೆಲುವಿನ ವಿದ್ರೂಪತೆಯನ್ನು ಎಂದಿಗೂ ಮಾಡಲಾರೆವು—ಮಾಡಿಗೊಡಲಾರೆವು, ಅಂತೆಯೆ ನನ್ನ ಮಗ ಚೆದುರ ಚಂದ್ರಾಮನಾಗುವನು; ಹಿತ್ತಲಲ್ಲಿ ನೆಟ್ಟ ಸಸಿಯು ಮಹಾವೃಕ್ಷವಾಗುವುದು. ಅವನ್ನು ನೋಡಿ ನನಗೆಷ್ಟು ಚೆಂದ-ಆನಂದ! ಅದು ಪ್ರೀತಿಯ ಸುಧೆಯಾಗಿ, ನೋಹನದ ಮಂದಾರವಾಗಿ ಕಾಣಿಸುವುದು.

'ನಾನು'—'ನನ್ನದು' ಆದ ಮೇಲೆ ನೀವು ನನ್ನವರಾಗುವಿರಿ. ನಾನು ನನ್ನವನಾಗುವುದಕ್ಕೆ ಬಾಳುವೆಯಲ್ಲಿ ಒಲವು ಬೇಕು. ಆ ಒಲವಿನಿಂದಲೇ ಬಾಳುವೆಯು ಚೆಲುವಾಗಿ ಕಾಣುವುದು. ನಾನು-ನನ್ನವನಾದ ಮೇಲೆ ನನ್ನ ಊರು, ನನ್ನ ನುಡಿ, ನನ್ನ ಪ್ರಾಂತ, ನನ್ನ ದೇಶ ಇವುಗಳ ಪಾವಟಿಗೆಗಳನ್ನು ಏರುತ್ತ, ನಾನು-ನನ್ನದು ಇವು ವಿಶ್ವಬಂಧುತ್ವದಲ್ಲಿ ಕೂಡಿ, ಎಲ್ಲವೂ ಚೆಲುವಾಗಿಯೇ ಕಾಣುವುದು ಚೆಲುವು ಕಾಣದ ಬಾಳು ಮಸಣದಲಿ ಬೆಳೆದ ಮಲ್ಲಿಗೆಯಂತೆ. ವಿರಹದಿಂದ ಬಳಲುತ್ತಿರುವ ವಿಧುರನೊಬ್ಬನಿಗೆ, ಬೀದಿಯ ನಾರಿಯೆ ಊರ್ವಸಿಯಾಗಿ ತೋರುವಳು; ಕ್ಷಣದ ಸುಖಕ್ಕಾಗಿ ಕೈಯೆಸ್ತುವನು. ಒಲವು ಇಲ್ಲದ ಆ ಚೆಲುವಿಕೆಯನ್ನು ಹಳಿದು ಪಳಹಳಿಸುವನು. ಕಂಡ ಗಿಡವನ್ನು ಮುಟ್ಟುವ ಆಡಿನಂತೆ ಇರುವ ರಸಿಕ ಶಿಖಾಮಣಿಗಳ ದೃಷ್ಟಿ, ಚೆಲುವಿನ ಪದರಿನೊಳಗಿನ ಒಲವನ್ನು ಎಂದಾದರೂ ತಿಳಿಯಬಹುದೇ?—ತಿಳಿಯಬಹುದೆ?

ಎಂತಹ ಕಂಟ್ರೋಲು? * [ಚಿಕ್ಕ ಕತೆ]

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

ಏಪ್ರಿಲ್ ತಿಂಗಳಲ್ಲಿಯ ಒಂದು ದಿನ; ಹಗಲಿನ ನಾಲ್ಕು ಗಂಟೆ ಯಾಗಿರಬೇಕು. ಬಿಸಿಲೇನೋ ಇನ್ನೂ ರಣಗುಡುತ್ತಲೆ ಇತ್ತು. ಎಲ್ಲಿಗೊ ಹೊರಡಬೇಕೆಂದು ಹೊನ್ನಪ್ಪಮಾಸ್ತರು, ಅವಸರವಸರ ವಾಗಿ ಕೋಟು ತೊಟ್ಟುಕೊಂಡು ಸಿದ್ಧರಾಗುತ್ತಲಿದ್ದರು. ನಡುಮನೆ ಯಿಂದಲೆ ಹೆಂಡತಿ—ಸೀತಮ್ಮ—ಕೇಳಿದಳು:

"ನೀವೀಗ ಸ್ವತಃ ಹೋಗಬೇಕೇನು? ಇನ್ನಾರನ್ನಾದರೂ ಕಳಿ ಸಿದರೆ ನಡೆಯಲಿಕ್ಕಿಲ್ಲವೆ?"

"ಹುಚ್ಚಿಯಿರುತ್ತಿ! ಅದೇನು ಮೊದಲಿನ ದಿನಗಳಂತೆ....ಬೇಕಾ-ದವರು ಪೇಟೆಗೆ ಹೋಗಿ.... ಬೇಕಾದ್ದನ್ನು ತರಲಿಕ್ಕೆ ಬರುತ್ತದೆಂದು ತಿಳಿದಿದ್ದೀಯೇನು? ಅಕ್ಕಿ– ಸಕ್ಕರಿ–ಚಿಮಣಿಯೆಣ್ಣೆಗಳಿಗೆ ಈಗ, ಎಂದೂ ಎಲ್ಲಿಯೂ ಇಲ್ಲದಷ್ಟು ಗಿರಾಕಿ. ಹೇಳಿ ಕೇಳಿ ಕಳ್ಳಪೇಟೆ; ಕಂಡ-ವರನ್ನು ಕಳಿಸಿದರೆ ಪ್ರಯೋಜನವೇನಾದೀತು? ಹನ್ನೆರಡು ಮುದಿಯ ಹತ್ತಿರ ಬಾಯಿ ತೆರೆದು ಹೇಳಿ, ಹದಿನೈದು ದಿನಗಳಿಂದ ಬೆನ್ನು ಹತ್ತಿ-ದ್ದರೂ, ಇನ್ನೂ ವರೆಗೂ ನನ್ನ ಕೂಗು ಎಲ್ಲಿಯೂ ನುಟ್ಟಲೊಲ್ಲದು! ಏನೋ ನಮ್ಮ ಸುದೈವದಿಂದ ಅಲ್ಪ–ಸ್ವಲ್ಪ ಸಾಮಾನು ಸಿಕ್ಕಿತು ಎಂತ ತಿಳಿ; ಅದನ್ನು ಇಲ್ಲಿಗೆ ತರಲಿಕ್ಕೆ ಹಾದಿಯಲ್ಲಿ ತೊಡಕುಗಳು ಹದಿನೆಂಟು! ಹಣಕೊಟ್ಟು ತಂದ ಸಾಮಾನು ಕೂಡ ಸುಸೂತ್ರ ಮನೆಗೆ ಬಂದು ತಲ್ಪುವುದೆಂದರೆ....."

"ಹೊಟ್ಟೆಗೆ ಹಿಟ್ಟು ಸಿಕ್ಕದ ಇಂಥಾ ದಿನಗಳಲ್ಲಿ ನರ್ಸಕ್ಕೊಂದು ಬಾಣಂತನವು ಬೇರೆ! ದೇವರಿಗೆ ಕಣ್ಣು ಇಲ್ಲವೆ ನಮ್ಮಂಥವರಿಗೇ ಯಾಕೆ ಕೊಡುತ್ತಿರುವನೊ ಮಕ್ಕಳನ್ನು" ಸೀತಮ್ಮ ನಡುಮನೆಯೆ ಮಾತನಾಡಿದಳು. ಕಳವಳ ಕೊರಳನ್ನು ಬಿಗಿದು ಬಿಟ್ಟಿತ್ತು.

ಕೊರಳ ಹತ್ತಿರ ಹರಿದ ಕೋಟನ್ನು ಮುಚ್ಚಲಿಕ್ಕೆಂದು ಕರ್ಟನ ಕಾಲರನ್ನು ಮೇಲೆ ಹಾಕುತ್ತ, ನಡುಮನೆಯ ಬಾಗಿಲಬಳ ನಿಂತು ಹೊನ್ನಪ್ಪ ಮಾಸ್ತರು ಹೇಳಿದರು:

"ನನ್ನ ಕರ್ಮದ ಫಲಕ್ಕೆ ಪಾಪ....ದೇವರೇನು ಮಾಡ ಬೇಕು?" ಮಾತಿನೊಂದಿಗೆ ಕೆಣಕುನಗೆಯೂ ವಿಷಾದವೂ ಇದ್ದವು.

"ಅಲ್ಲಾ....ಯಾವ ಕೆಲಸವನ್ನೂ ಮುಗಡಮಾಗಿ ಮಾಡುತ್ತಿ ರುವುದಿಲ್ಲ ನೀವು! ಈಗ ನೀವು ಹೊರಟು ನಿಂತಿದ್ದೀರಿ; ಪ್ರತಿದಿನ-ಕ್ಕಿಂತಲೂ ನನ್ನ ಕೈಕಾಲು ಇಂದು ಹೆಚ್ಚು ಹರಿಯತೊಡಗಿವೆ! ಮನೆ ಯಲ್ಲಿ ಇನ್ನಾರೂ ಇಲ್ಲ. ನಾನು ಒಬ್ಬಾಕೆಯೆ ಏನು ಮಾಡಲಿ?...." ಸೀತಮ್ಮನ ಮಾತಿನಲ್ಲಿ ಉದ್ವೇಗವಿತ್ತು; ಮರುಕದ ಮಿಡಿತವೂ ಇತ್ತು.

"ಏನು ಮಾಡಲಿ ನಾನಾದರೂ? ಈಗ ತಿಂಗಳಾನುತಿಂಗ-ಳಾಯ್ತು; ಇದೇ ಯತ್ನದಲ್ಲಿ ಇದ್ದೇನೆ ಬೇಕಾದಷ್ಟು ಹಣ ಕೊಡು ತ್ತೇನೆಂದರೂ ಇನ್ನೂ ಪದಾರ್ಥಗಳು ಕೈಗೆ ಬರಲೊಲ್ಲವು! ನಮ್ಮ ಆ ಹಳೆಮನೆಯ ಸುಂದ್ರಕ್ಕನಿಗೆ ಹೇಳಿ ಹೋಗುತ್ತೇನೆ—ನಿನ್ನ ಹತ್ತಿರ ಇರುವಂತೆ!"

"ಇಂದಾದರೂ ಸಾಮಾನು ಎಲ್ಲಿಂದ ಸಿಕ್ಕುವುವು? ತಿಂಗಳಾಗಿ ಹೋಯ್ತು, ಸಿಕ್ಕೆಲ್ಲ! ಜೋಳದ ನುಚ್ಚು ತಿಂಪರೆ ಪ್ರಕೃತಿ ಮತ್ತಿಷ್ಟು ಕೆಡುತ್ತದೆ, ನಾಲ್ಕು ದಿನವಾದರೂ ಅಕ್ಕಿಯ ಅನ್ನ ಉಣ್ಣಬೇಕು, ಮಿದುವಾಗಿರುವ ಕರುಳು ಮೊದಲಿನಂತೆ ಆದ ಮೇಲೆ ಏನು ತಿಂದರೂ ಆಗಬಹುದು!' ಅಂತ ವೈದ್ಯರು ಹೇಳಿ ಹೇಳಿ ಬೇಸತ್ತರು. ಆದರೇನು, ನನ್ನ ಹಣೆಬರಹದೊಳಗೆ ಈ ಬಾಣಂತನಕ್ಕೆ ಅಕ್ಕಿಯನ್ನು ಉಣ್ಣು ವುದನ್ನು ಬರೆದೇ ಇಲ್ಲ! ಹೀಗಿರುವಾಗ ಇಂದಾದರೂ ಎಲ್ಲಿಯವು ಸಿಕ್ಕಾವು?" ಎಂದು ನಿರಾಶೆಯ ನಿಟ್ಟುಸಿರಿನೊಂದಿಗೆ ಸೀತಮ್ಮ ನುಡಿ ದಳು.

"ನೋಡು, ನಿನ್ನೆ ಹೋಗಿದ್ದೆನಲ್ಲವೇ — ಆ ಚಿಕ್ಕೂರಿನ ಭೀಮಪ್ಪಮಾಸ್ತರ ಹತ್ತಿರ! ತಮ್ಮೂರ ಗೌಡರಿಗೆ ಹೇಳಿ, ಎರಡು ರೂಪಾಯಿಗಳ ಅಕ್ಕಿ ಕೊಡಿಸುತ್ತೇನೆಂದು ಆ ಮಾಸ್ತರು ಹೇಳಿದ್ದಾರೆ!"

"ಗೌಡರು ಕೊಡುವುದೆಲ್ಲಿಂದ? ಅವರೇನು ವ್ಯಾಪಾರಸ್ಥರೆ? ಸುಳ್ಳೇ ಎನಾದರೂ ಒಂದು ಸಮಾಧಾನದ ಮಾತು ಹೇಳಿ ನಿಮ್ಮನ್ನು ಕಳಿಸಿರಬಹುದು.... ಆಯ್ತು! ವ್ಯರ್ಥ ಯಾತಕ್ಕೆ ಹೋಗಬೇಕು ಈಗ ನಾಲ್ಕು ಮೈಲಿ ನಡೆದುಕೊಂಡು?"

"ಆದೇನೋ ಸರಿ! ಆ ಊರ ಗೌಡರ ಹತ್ತಿರ ಅಕ್ಕಿಯ ಸಂಗ್ರಹವಿದೆಯಂತೆ! ಕಳೆದ ವರ್ಷ ಚಿಕ್ಕೂರಿಗೆ ಅರುವತ್ತು ಚೀಲ ಅಕ್ಕಿ ಪೂರಯಿಸಿದ್ದರು. ಗ್ರಾಮಪಂಚಾಯತಿಗೆ ದುಡ್ಡು ಕೊಟ್ಟು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲವೆಂದು ಗೌಡರು ಸ್ವತಃ ದುಡ್ಡು ಹಾಕಿ ಅಕ್ಕಿ ತಂದರು. ಒಂದು ನೂರಪತ್ತು–ಸಲವತ್ತು ಚೀಲದಷ್ಟು ಅಕ್ಕಿ ಯನ್ನ ಊರೊಳಗಿನ ಜನರಿಗೆ ಕೊಟ್ಟರಬಹುದು; ಉಳಿದದ್ದೆಲ್ಲಾ ಅವರ ಮನೆಯಲ್ಲಿ ಉಳಿದು ಬಿಟ್ಟಿದೆ. ಮುಂದಿನ ಈ ಪರಿಸ್ಥಿತಿ ಗೌಡ-ರಿಗೆ ಗೊತ್ತಿದ್ದಿತೇನೋ! ಆಗ ಅಗ್ಗದ ಧಾರಣೆ—ರೂಪಾಯಿಗೆ ನಾಲ್ಕು ಸೇರು!— ಈಗ ಜೋಳ ಕೂಡ ಸಿಕ್ಕುವುದಿಲ್ಲ— ಆ ದರದಿಂದ ಏನೇ ಆಗಲಿ, ಅದರೊಳಗಿಂದಲೆ ಎರಡು ರೂಪಾಯಿಗಳ ಅಕ್ಕಿ ಕೊಡಿಸುತ್ತೇ-ನೆಂದು ಹೇಳಿದ್ದಾರೆ.... ಭೀಮಪ್ಪಮಾಸ್ತರು! ಸರವು ಮಾತ್ರ ರೂಪಾಯಿಗೆ ಐದು ಕೊಳವಿ (ಚಟಾಕು)!"

"ಆಂ....ಹೀಗೇನು? ಹಾಗಾದರೆ ಚಿಮಣಿಯೆಣ್ಣೆಯೂ ಇರ-ಬಹುದಲ್ಲಾ ಅವರ ಹತ್ತಿರ" ಸ್ವಲ್ಪ ಸಂತೋಷದ ಧ್ವನಿಯಲ್ಲಿ ಸೀತಮ್ಮ ಕೇಳಿದಳು.

"ಸರಿ, ನಿನ್ನ ಹೊಮ ಮಾತೇ! ಅವರೇನು ಕಂಟ್ರೋಲ್-ದಾರರೆ? ಚಿಮಣಿಯೆಣ್ಣೆ ಎಲ್ಲಿಂದ ಬರಬೇಕು ಅವರಲ್ಲಿ? ಅದಕ್ಕೊಬ್ಬ ಬೇರೆ ಕಂಟ್ರೋಲ್‌ದಾರ ಇದ್ದಾನೆ. ಅವನು ಕೊಡುವುದೂ ಒಬತ್ತಾ ಣಿಗೆ ಒಂದು ಬಾಟ್ಲಿಯಂತೆ! ಒಂದು ಬಾಟ್ಲಿ ತಂದು ಇಡುತ್ತೇನೆಂದು ಮಾಸ್ತರು ಹೇಳಿದ್ದಾರೆ ನಿನ್ನೆಯ ರಾತ್ರಿಯೆ ಅವರ ಕಡೆಗೆ ಎಣ್ಣಿ ಬುಡಿರಬೇಕು.....!"

"ಹೀಗೇನು? ಹಾಗಾದರೆ ಬೇಗನೆ ಹೋಗಿ ತೆಗೆದುಕೊಂಡು ಬರ್ರಿ!....ನಾಲ್ಕು ಮೈಲಿ ಹೋಗಿ ಬರಲಿಕ್ಕೇನು ಬಹಳ ವೇಳೆ ಬೇಕಾಗು ವುದಿಲ್ಲ.... ರಾತ್ರಿಯ ಎಂಟು ಗಂಟೆಯ ಸುಮಾರಿಗೆ ಬರಬಹುದಲ್ಲವೆ? ಅಯ್ಯೋ!....ನನಗೆ ಏಳಲಿಕ್ಕೇ ಆಗದಂತಾಗಿದೆ... ಒಳಗಿನ ಬಾಟ್ಲಿ ಯನ್ನ....ಅಯ್ಯೋ!....ನೀವೇ ತೆಗೆದುಕೊಳ್ಳುತ್ತಿರಾ?" ಸೀತಮ್ಮ ನರಳುತ್ತ ನುಡಿದಳು.

"ನೋಡು, ಎಂಟುಗಂಟೆ ರಾತ್ರಿಗೆ ಬರಲಿಕ್ಕಾಗುವುದಿಲ್ಲ ನನಗೆ; ಅದಕ್ಕಾಗಿ ದಾರಿಯನ್ನು ನೋಡಬೇಡ! ಅಷ್ಟು ಬೇಗನೆ ಬರಲಿಚ್ಛೆ ಆಗಬೇಕು ಹೇಗೆ? ಗೌಡರಿಂದ ಅಕ್ಕಿ ಬೇಗನೆ ಜೊತೆತೀತು; ಅದರ

ಅವುಗಳನ್ನು ಹಗಲು ಹೊತ್ತಿನಲ್ಲಿಯೆ ಊರೊಳಗಿಂದ ಇಲ್ಲಿಯವರೆಗೆ ತರಬೇಕು ಹೇಗೆ? ಹಾದಿಯಲ್ಲಿ ಒಂದೇ ಅಲ್ಲ, ಎರಡು ಕಾವಲುಕಟ್ಟೆ ಆವೆ. ಕಟ್ಟೆಯವರು ಅಕ್ಕಿ ಚಿಮಣಿಯೆಣ್ಣೆ ಸುಮ್ಮಗೆ ಬಿಟ್ಟಾರೇನು! ಸಾಮಾನು ಎಲ್ಲವೂ ಸಿಕ್ಕಿತೆಂದರೆ, ರಾತ್ರಿಯ ಹತ್ತು ಗಂಟೆಯಾದ ಮೇಲೆ ಅಲ್ಲಿಂದ ಹೊರಡುತ್ತೇನೆ. ಎಂದರೆ ಕಾವಲುಗಾರರ ಕಣ್ಣು ತಪ್ಪಿಸಿ ಹೇಗಾದರೂ ಬರಲಿಕ್ಕೆ ಆದೀತು! ಇಲ್ಲವಾದರೆ ತಪ್ಪಿ ಅವರ ಕೈಯೊಳಗೆ ಸಿಕ್ಕಿಬಿದ್ದರೆ, ಇತ್ತ ಸಾಮಾನು ಸುಳ್ಳು – ಅತ್ತ ದಂಡ ಮಾತ್ರ ನಿಜ....''

''ಹೌದು.....! ಮೊನ್ನೆ ಕಡೆಮನೆಯ ರಾಮಪ್ಪನ್ನ ಹಿಡಿದಿದ್ದರಿತಲ್ಲಾ! ಬೆಳತನಕ ಕೊಳೆಹಾಕಿ, ನಲವತ್ತು ರೂಪಾಯಿ ತೆಗೆದು ಕೊಂಡು ಬಿಟ್ಟರಂತೆ! ಅವನ ಹುಲ್ಲಿನ ಗಾಡಿಯಲ್ಲಿ ಅಕ್ಕಿಯ ಚೀಲ ಹೊರಟಿತಂತೆ....ಅಂ—ಅಮ್ಮಾ...ಅಯ್ಯೋ!....ನೀವು ಎಲ್ಲಾ ನೋಡಿ ಕೊಂಡು ಬನ್ನಿರಿ ಅಯ್ತು.... ನೀವು ಬರುವವರೆಗೆ ನನ್ನ ಎದೆಯಲ್ಲಿ ಎದೆಯಿರುವುದಿಲ್ಲ!''....ಹೆದರಿಕೆಯಿಂದ ಅದುರುವ ಧ್ವನಿಯಲ್ಲಿ ಸೀತಮ್ಮ ಮೆಲ್ಲಗೆ ಹೇಳಿದಳು.

''ಏನೂ ಚಿಂತೆ ಮಾಡಬೇಡ! ನನ್ನ ಹತ್ತಿರ ಇರುವುದಾದರೂ ಎಷ್ಟು? ನೇರೆರಡು ನೇರು ಅಕ್ಕಿ; ಒಂದರ್ಧ ಬಾಟ್ಲಿ ಚಿಮಣಿಯೆಣ್ಣೆ! ಸಿಕ್ಕರೆ ಒಂದೆರಡು ನೇರು ಸಕ್ಕರೆ! ಎಲ್ಲವನ್ನೂ ಕೂಡಿಸಿ ಕಟ್ಟಿದರೆ ಜಿಕ್ಕೆ ಗಂಟಾಗುತ್ತದೆ. ಹೇಗಾದರೂ ಹಂಚಿಕೆ ಮಾಡಿ, ಕತ್ತಲೆ ಮನೆಯಲ್ಲಿ ತೆಗೆದುಕೊಂಡು ಬರುತ್ತೇನೆ. ಕಾವಲುಕಟ್ಟೆಗಳ ಹತ್ತಿರ ಬಂದಾಗ ಸ್ವಲ್ಪ ಅಡ್ಡಬಿದ್ದು ಬಂದರಾಗುವುದು. ಎನೇ ಆದರೂ ಬರಲಿಕ್ಕೆ ಹೆಚ್ಚು ರಾತ್ರಿಯಾಗುವುದು ಖಂಡಿತ! ಅದಕ್ಕಾಗಿ ನಾಲ್ಕೈದು ಹುಡುಗರಿಗೆ ಮನೆಯಲ್ಲಿ ಬಂದು ಮಲಗಿಕೊಳ್ಳಲಿಕ್ಕೆ ಹೇಳಿದ್ದೇನೆ. ಈಗ ಹೋಗುವಾಗ ಸುಂದರಕ್ಕನಿಗೂ ಮನೆಯ ಕಡೆಗೆ ಹೋಗೆಂದು ಹೇಳುತ್ತೇನೆ....ಆಯಿತಲ್ಲೊ!'' ಎಂದು ಹರಕು ಚಪ್ಪಲಿಗಳನ್ನು ಮೆಟ್ಟಿ ಕೊಳ್ಳುತ್ತಲೆ ಹೊನ್ನಪ್ಪ ಮಾಸ್ತರು ಮನೆಯಿಂದ ಹೊರಹೊರಟರು. ಸೀತಮ್ಮ ಒಂದರಹಿಂದೊಂದು ಬರುವ ಭಾವನಾಚಿತ್ರಗಳನ್ನು ಕಾಣುತ್ತ, ಅವುಗಳ ಪರಿಣಾಮವನ್ನು ಅನುಭವಿಸುತ್ತ ಹಾಸಿಗೆಯಲ್ಲಿಯೆ ಮಲಗಿದ್ದಳು:

'ನಮ್ಮವರಿಗೆ ೨೦ ರೂಪಾಯಿ ಸಂಬಳದ ಕೆಲಸ....ಎಂದಾಗ ನಾನೆಷ್ಟು ಹಿಗ್ಗಿದ್ದೆ! ಆದರಂತೆಯೆ ನಾಲ್ಕು ವರ್ಷಗಳನ್ನು ಯಾವ ಆಪತ್ತಿಯೂ ಇಲ್ಲದೆ ಸುಖದಿಂದಲೆ ಕಳೆದೆವು! ಹಳ್ಳಿಯೂರು.... ಮನೆಗೆ ಬಾಡಿಗೆಯಿಲ್ಲ....ಉರುವಲು-ಕಾಯಿಪಲ್ಯ ಕೊಳ್ಳಬೇಕಿಲ್ಲ.... ರೂಪಾಯಿಗೆ ಹದಿನಾರು ಸೇರು ಜೋಳ!.... ಒಂದು ರೂಪಾಯಿಯ ಜೋಳ ಕೊಂಡರೆ ಒಂದು ತಿಂಗಳ ವರೆಗೆ ತಿಂದು ಉಳಿಯುತ್ತಿದ್ದುದು!.... ಸಂಬಳ ಸಣ್ಣದಾದರೂ ಉಂಡು ಉಟ್ಟು ನಾಲ್ಕು ರೂಪಾಯಿ ಪೆಟ್ಟಿಗೆಯೊಳಗೆ ಪಿಲ್ಲು ಬೀಳುತ್ತಿದ್ದುದು!.... ಈಗ?.... ಈಗ ಆದೆಲ್ಲಾ ಬೆಂಕಿ ಹತ್ತಿ ಹೋಯ್ತು!....ದಿನದಿಂದ ದಿನಕ್ಕೂ ಧಾರಣೆ ಏರಲಿಕ್ಕೆ ಹತ್ತಿದೆ!.... ಅದರೊಳಗೆ ಈ ಕಂಟ್ರೋಲ್ ಬೇರೆ!.... ಸಂಬಳ ಬರೀ ಹೊಟ್ಟಿಗ್ಗೇ ಸಾಲದೆ ಹೋಗುತ್ತದೆ!.... ಅಂಥದರಲ್ಲಿ ವರ್ಷಕ್ಕೊಂದು ಈ ಬಾಣಂತನ ಬೆನ್ನು ಹತ್ತಿದೆ! ಹಿಂದಿನ ನಾಲ್ಕು ವರ್ಷಗಳಲ್ಲಿ ಕೂಡಿಸಿದ ಹಣ ಕೂಡ ಕರಗಿ ಹೋಯ್ತು!.... ಹಿರಿಯ ಎರಡು ಹುಡುಗರನ್ನ ಶಾಲೆ ಬಿಡಿಸಿ ಅಣ್ಣನ ಮನೆಯಲ್ಲಿ ಇರಿಸಿ ಆಗಿದೆ.... ಒಂದು ವರ್ಷದ ಮೇಲಾಯ್ತು, ಅವರೇ ಅವರಿಬ್ಬರ ಹೊಟ್ಟೆ-ನೆತ್ತಿ ನೋಡುತ್ತಲಿದ್ದಾರೆ!....ಇಷ್ಟಾದರೂ ನಮ್ಮ ಸಂಸಾರ ನಮಗೆ ನೀಗದಂತಾಗಿದೆ!... ಇವರ ಅಡಚಣೆ ನೋಡಲಾರದೆ, ಈ ಸಲ ಹಡೆಯಲಿಕ್ಕೆ ಅಲ್ಲಿಗೇ ಹೋಗಬೇಕೆಂದೆ; ಆದರೆ ನಾಲ್ಕನೆಯ ಬಾಣಂತನವಿದು; ಅವರ ಮೇಲಾದರೂ ಎಷ್ಟು ಭಾರ ಹಾಕಬೇಕು?....ಅಲ್ಲದೆ ಏತಕ್ಕೋ ಏನೋ—ಅವರೂ ಈ ಸಲ ಬಹಳ ಒತ್ತಾಯವನ್ನೂ ಮಾಡಲಿಲ್ಲ.... ನನ್ನನ್ನೇ ಒಂದು ಸಲ ಕೇಳಿದಂತೆ ಮಾಡಿ ಸುಮ್ಮನಾಗಿ ಬಿಟ್ಟರು.... ಅಣ್ಣ ಕಳಿಸಿರೆಂದು ನೆಪಕ್ಕಾಗಿ ಅವರನ್ನು ಕೇಳಿದ್ದರೂ, ಕಳಿಸಿಕೊಡಲಿಕ್ಕೆ ಅವರು ಸಿದ್ಧರಿದ್ದರು....

'ಎಲ್ಲವೂ ಹೇಗೋ ಸಾಗಬಹುದಾಗಿತ್ತು.... ಆರು ರೂಪಾಯಿ ತಟ್ಟಿ ಸಂಬಳವೆಂದು ಹೆಚ್ಚಾಗಿ ಬರುವುದು....ಹೇಗಾದರೂ ಸಾಗಿಸೋಣವೆಂದರೆ, ಈಗ ಮೂರು ತಿಂಗಳಾಯಿತು—ಸಂಬಳದ ಮುಖವೇ ಇಲ್ಲ!.... ಏನು ಮಾಡುವುದದೆ, ಉಪಾಯವಿಲ್ಲದ ಮಾತು! ಹೊಟ್ಟೆ ಕೇಳುವುದೆ? ನಮ್ಮ ಹೆಂಡೆಯೆಂದರೆ ಎಂಥಾದ್ದು.... ಕಲ್ಲಿನಂಥಾದ್ದು! ಹೊಸದಾಗಿ ಈ ಮನೆಗೆ ಬರುವಾಗ, ನಮ್ಮ ತಾಯಿ ನನಗೆ ಪ್ರೀತಿಯಿಂದ ಆದನ್ನು ಕೊಟ್ಟಿದ್ದಳು. ಮೊನ್ನೆ ಆ ಹೆಂಡೆಯನ್ನೆ ಅಡವಿಟ್ಟು—ನನ್ನ ಬಾಣಂತನಕ್ಕಾಗಿ—ಎರಡು ದುಡ್ಡಿನ ಬಡ್ಡಿಯಂತೆ – ಹದಿನೈದು ರೂಪಾಯಿ ಸಾಲ ತಂದರು! ಇಂದೇನೋ ಈಗ ಅಕ್ಕಿ ತರಲಿಕ್ಕೆಂದು ಹೋಗಿದ್ದಾರೆ!.... ದೇವರು ಹೇಗೆ ದಂಡೆಗೆ ಒಯ್ದು ಮುಟ್ಟಿಸುತ್ತಾನೋ ಈ ನಡುಸಮುದ್ರದಿಂದ....' ಇತ್ಯಾದಿ ವಿಚಾರದಲ್ಲಿ ಹೊರಳಾಡುತ್ತ ಸೀತಮ್ಮ ಅಪೆಸ್ಟು ಹೊತ್ತು ಬಿದ್ದುಕೊಂಡಿದ್ದಳೊ!

× × × ×

''ಬರ್ರಿ ಬರ್ರಿ! ಇದೇನು, ಬಿಸಿಲಲ್ಲಿಯೇ ಬಂದುಬಿಟ್ಟರಲ್ಲಾ!'' ಎಂದು ಭೀಮಪ್ಪ ಮಾಸ್ತರು, ತಾಂಬೂಲವನ್ನು ಬಾಯಾಡಿಸುತ್ತ ಹೊನ್ನಪ್ಪನನ್ನು ಸ್ವಾಗತಿಸಿದರು. ಕೂಡಲೆ ಹೊನ್ನಪ್ಪ ಮಾಸ್ತರು ಬಳಲಿದ ಧ್ವನಿಯಲ್ಲಿ ನುಡಿದರು.

''ಬಿಸಿಲು ಸ್ವಲ್ಪ ಕಡಿಮೆಯೆನಿಸಿತು; ಹೊರಟುಬಿಟ್ಟೆ....ಇಲ್ಲಿಯೆ ಸ್ವಲ್ಪ ಹೆಚ್ಚುಹೊತ್ತು ಮಾತನಾಡುತ್ತ ಕುಳಿತುಬಿಡೋಣ— ಎಂತ ಹಾಳು, ನಮ್ಮ ಹಳ್ಳಿಯಲ್ಲಿ ಹೊತ್ತೇ ಹೋಗುವುದಿಲ್ಲ! ಹೋಗುವು ದಾದರೆ ಬಾಳಪ್ಪನ ಅಂಗಡಿಯೊಂದು ತಿರುಗಿಮುರುಗಿ....ಇನ್ನೊಂದು ಸ್ಥಳವೇ ಇಲ್ಲ! ನಮ್ಮಂಥವರು ಹೋಗಿ ಕುಳಿತಿದ್ದರೆ ಅವನಿಗೂ ಬೇಸರು.... ತನ್ನ ಕಳ್ಳವ್ಯಾಪಾರಕ್ಕೆ ಅಡ್ಡಿಯಾಗುವುದೆಂತ!''

''ಹಳ್ಳಿಯೂರುಗಳೆಲ್ಲ ಹಾಗೇ ಬಿಡಿರಿ! ನಸಗೇನು ಗೊತ್ತಿಲ್ಲವೆ? ಆಯ್ತು, ಆ ನಿಮ್ಮ ಬಾಳಪ್ಪನ ಅಂಗಡಿಯಲ್ಲಿ ಸಕ್ಕರಿ ಸಿಗುತ್ತಿರಬಹುದಲ್ಲಪೆ?''

''ಎಲ್ಲೀ ಸಕ್ಕರಿ, ಏನು ಮಾತು! ಹೊತ್ತಿಗೆ ಸರಿಯಾಗಿ ಒಂದು ಕಡ್ಡಿಯ ಪೆಟ್ಟಿಗೆ ಕೂಡ ಸಿಕ್ಕುವುದಿಲ್ಲ...ನೀವು ಸಕ್ಕರೆಗೆ ಹೋದಿರಿ!'' ಹೊನ್ನಪ್ಪ ಹೇಳಿದ.

ಬಂದಕೂಡಲೆ ತನ್ನ ಸಾಮಾನಿನ ವಿಷಯವನ್ನೇ ಮೊದಲು ಹೇಗೆ ಪ್ರಸ್ತಾಪಿಸಬೇಕೆಂದು, ಕೇವಲ ಔಪಚಾರಿಕವಾಗಿ ಮಾತುಗಳನ್ನಾಡುತ್ತಲಿದ್ದ ಹೊನ್ನಪ್ಪನಿಗೆ, ಈಗ ಇದೊಂದು ಎಳೆ ಸಿಕ್ಕಂತಾಯಿತು. ಮೆಲ್ಲಗೆ ಕೇಳಿದ:

''ನಮ್ಮ ಸಾಮಾನು ಏನಾದರೂ ಕೈಗೆ ಬಂದಿವೆಯೆ?''

"ಬರದೆ ಏನ್ರೀ! ನಿನ್ನೆ ನಿಮಗೆ ಮಾತು ಕೊಟ್ಟಾಗಿನಿಂದಲೂ ಅದಕ್ಕಾಗಿಯೆ ತೊಡಗಿದ್ದೇನೆ. ಇಂದು ಬೆಳಗಿನಲ್ಲಿಯೆ ನನ್ನ ವಶಕ್ಕೆ ಬಂದುಬಿಟ್ಟವೆ!"

"ನನಗೆ ಗೊತ್ತೇ ಗೊತ್ತು– ನೀವು ಒಮ್ಮೆ ಒಪ್ಪಿಕೊಂಡ ಕೆಲಸವನ್ನ ಹುಸಿಹೋಗಗೊಡುವವರಲ್ಲಾ ಅಂತ!" ಆನಂದದ ಏರಿಕೆಯ ಧ್ವನಿಯಲ್ಲಿ ಹೊನ್ನಪ್ಪ ಹೇಳಿದ. ಕೇಳಿ ಭೀಮಪ್ಪ ಮಾಸ್ತರಿಗೆ ಹುರುಪು ಹೆಚ್ಚಿತು. ಉತ್ಸಾಹದಿಂದ ಹೇಳತೊಡಗಿದರು:

"ನಿನ್ನೆಯ ದಿನವೇ ನಿಮಗೆ ಅಕ್ಕಿ ಕೊಟ್ಟು ಕಳುಹಬೇಕೆಂದಿದ್ದೆ. ಆದರೆ ಗೌಡರ ಮನೆಯಲ್ಲಿ ನಿನ್ನೆ ಸ್ವಲ್ಪ ಗಡಬಡಿಯಿತ್ತು—ಗೌಡರ ಮೊಮ್ಮಗನ ತೊಟ್ಟಿಲುಹಬ್ಬ ನಿನ್ನೆ! ಮನೆಗೆ ಆಪ್ತರು ಇಷ್ಟರು ಬಂದಿದ್ದರು. ಊರೊಳಗಿನ ನೂರಾರು ಜನರನ್ನ ಊಟಕ್ಕೆ ಕರೆದಿದ್ದರು. ಬಹಳ ಮಾತೇನು. ಒಂದು ಭಾರಿ ಔತಣದೂಟನೆ ಇದ್ದಿತೆನ್ರಿ!"

"ನಿಮಗೂ ಔತಣ ಇದ್ದಿರಬಹುದಲ್ಲಾ?" ಹೊನ್ನಪ್ಪ ಏನೋ ಕೇಳಬೇಕೆಂದು ಕೇಳಿದ.

"ಇರದೆ ಏನ್ರೀ! ಎಲ್ಲಾ ಮಾಸ್ತರನ್ನೂ ಕರೆದಿದ್ದರು. ಎಂಥಾ ಊಟ ಅಂತೀರಿ! ಒಳ್ಳೇ ಜೇಶವಾಯಿ ಕಾಲದ ಊಟ ಕೂಡ ಇಷ್ಟು ಭಾರಿ ಇರಲಿಕ್ಕಿಲ್ಲ—ಅನ್ನುವಂತಿತ್ತು! ಗೌಡರಿಗೆ ಒಬ್ಬನೇ ಒಬ್ಬ ಮಗಾ ಏನ್ರಿ! ಆತನಿಗೂ ಬಹಳ ದಿನಗಳ ಮೇಲೆ ಈ ಗಂಡುಮಗು ಹುಟ್ಟಿದೆ!.."

"ಓ, ಹೀಗೇನು? ಇನ್ನೂ ಅವರಿಗೆ ಹುಡುಗರೆ ಆಗಿರಲಿಲ್ಲವೆ?"

"ಇಲ್ಲ; ಇದೇ ಮೊದಲನೆಯ ಹುಡುಗ! ನಿನ್ನೆಯೆ ತೊಟ್ಟಿಲಲ್ಲಿ ಹಾಕಿದರು. ನಾನೂ ನೋಡಿದೆ: ಕೂಸು ಚಿನ್ನ-ರನ್ನದ ಒಡವೆಗಳಿಂದ ಮುಚ್ಚಿಹೋಗಿತ್ತು ನೋಡ್ರಿ!" ವಿಸ್ಮಯಧ್ವನಿಯಲ್ಲಿ ಭೀಮಪ್ಪ ಮಾಸ್ತರು ಹೇಳಿದರು.

"ನಮ್ಮ ಹುಡುಗನಿಗೂ ನಿನ್ನೆಗೆ ಹದಿನಾಲ್ಕು ದಿವಸ; ತೊಟ್ಟಿಲಲ್ಲಿ ಹಾಕಬೇಕಾಗಿದ್ದಿತಾದರೂ ಹೆಂಗಸರ ಮೈಯಲ್ಲಿ ಜೆನ್ನಾಗಿಲ್ಲ!" ಬಿಸಿಯುಸಿರಿನೊಂದಿಗೆ ಹೊನ್ನಪ್ಪನ ಮುಖದಿಂದ ಮಾತು ಹೊರಟಿತು.

ಸ್ವಲ್ಪಕಾಲ ಇಬ್ಬರೂ ಮಾತನಾಡಲಿಲ್ಲ. ಸುಮ್ಮಗೆ ಕುಳಿತಿದ್ದರು. ಭೀಮಪ್ಪ ಮಾಸ್ತರ ಮುಪ್ಪಿನ ಮನಸ್ಸು, ನಿನ್ನೆಯ ದಿನ ಗೌಡರ ಮನೆಯಲ್ಲಿ ನಡೆದ ಉತ್ಸವಗಳನ್ನು, ಒಂದೊಂದನ್ನಾಗಿ ಬಗೆಗನ್ನಡಿಯಲ್ಲಿ ತಂದಿರಿಸಿಕೊಂಡು ನೋಡುತ್ತಿತ್ತು. ಹೊನ್ನಪ್ಪನ ಮನೋನಯನದೆದುರಲ್ಲಿ—ಕಾಲಕಾಲಕ್ಕೆ ಹೊಟ್ಟೆಗೆ ಅನ್ನವಿಲ್ಲದೆ—ಸೊರಗಿ ಸಾಯಲಿಕ್ಕಾದ ಸೀತಮ್ಮನ ಕರುಣಾಚಿತ್ರ ಬಂದು ನಿಂತಿರಬೇಕು.....

"ಇಂಥಾ ಗೊಂದಲವಲ್ಲಿ ನಮ್ಮ ದಾದು ಹೇಗೆ ಹತ್ತೀತರೀ ಮಾಸ್ತರ್?"

"ಛೇ ಛೇ! ನಮ್ಮ ಗೌಡರೆಂದರೆ ಏನೆಂತ ತಿಳಿದಿದ್ದೀರಿ? ಬಹಾಳ ಒಳ್ಳೆಯವರು! ನಿನ್ನೆ ಸಂಜೆಗೆ, ಒಂದೇ ಒಂದು ಮಾತು ಕೇಳುವುದೇ ತಡ; ಇಂದೂ ನಸುಕಿನಲ್ಲಿ ಕರೆದು, ಎರಡು ರೂಪಾಯಿಯ ಅಕ್ಕಿಯನ್ನು ಅಳೆದು ಕೊಟ್ಟೇ ಬಿಟ್ಟರು!"

"ಸಕ್ಕರೆಯಿದ್ದರೆ ಅದನ್ನೂ ಒಂದು ಮಾತು ಕೇಳಬಾರದಿತ್ತ!" ಹೊನ್ನಪ್ಪ ದೈನ್ಯಧ್ವನಿಯಲ್ಲಿ ನುಡಿದ.

"ಏನು ಹುಚ್ಚನಪಾ ನೀನು! ನಿನ್ನೆಯ ಒಂದೇ ದಿನಕ್ಕೆ ಅವರಿಗೆ ಎರಡು ಚೀಲ ಸಕ್ಕರಿ ಸಾಕಾಗಲಿಲ್ಲ. ನಮ್ಮ ಊರಿಗಾಗಿ ತಿಂಗಳಿಗೆ ಹನ್ನೆರಡು ಚೀಲ ಸಕ್ಕರೆ ಬರುತ್ತದೆ. ಈ ಸಲ ಮೊಮ್ಮಗನ ತೊಟ್ಟಿಲ ಹಬ್ಬಕ್ಕೆಂತ ಎರಡು ಚೀಲ ತಾವೇ ಒಗೆದುಕೊಂಡು ಬಿಟ್ಟಿದ್ದರು ಗೌಡರು. ಆದರೂ ಸಕ್ಕರೆಯ ಕೊರತೆ ಆಯಿತಂತೆ! ಊರೊಳಗಂತೂ ಸಕ್ಕರೆಯ ಕಷ್ಟ ಕೇಳಲೇ ಕೂಡದು!"

"ಹಾಗಾದರೆ ಕಂಟ್ರೋಲಿನವರ ಹತ್ತಿರವೂ ನಮಗೆ ಸಕ್ಕರೆ ಸಿಕ್ಕುವುದು ಕಷ್ಟವೇ ಏನ್ರಿ! ಊರಲ್ಲಿಯೆ ಸಾಕಾಗಲಿಲ್ಲ ಎಂದ ಮೇಲೆ....." ಸಪ್ಪಗಿನ ಮುಖದಿಂದ ಹೊನ್ನಪ್ಪ ಕೇಳಿದ.

"ಹಾಗೇನೂ ಇಲ್ಲ! ಕಂಟ್ರೋಲಿನವರೇನು ತಮ್ಮ ಕಡೆಗೆ ಬಂದ ಸಕ್ಕರೆಯನ್ನು ವ್ಯವಸ್ಥಿತವಾಗಿ ಹಂಚಿಕೊಡುತ್ತಾರಂತೀರೇನು? ದೊಡ್ಡ ದೊಡ್ಡ ನಾಲ್ಕು ಜನಕ್ಕೆ—ಅವರು ಕೇಳಿದಷ್ಟು ಕೊಟ್ಟು—ಬಾಯಿ ಕಟ್ಟಿ ಬಿಡುತ್ತಾರೆ ಆಯಿತು! ಸಕ್ಕರೆ ಬಂದ ಮೇಲೆ ನಾಲ್ಕು ದಿನ ಅಂಗಡಿಯ ಬಾಗಿಲು ಹಾಕಿ ಎಲ್ಲಿಗಾದರೂ ಹೋಗಿ ಬಿಡುತ್ತಾರೆ; ಜನರು ಬಂದು ಬಂದು ಅಂಗಡಿ ಬಳಿ ಸುತ್ತಾಡಿ ಹೋಗುತ್ತಾರೆ. ಮುಂದೆ ಮರಳಿ ಬಂದ ಮೇಲೆ 'ಸಕ್ಕರೆ ಆಫೊತ್ತೇ ಮುಗಿದು ಹೋಯ್ತು!' ಎಂದು ಹೇಳಲಿಕ್ಕೆ ಪ್ರಾರಂಭ. ಉಳಿದ ಸಕ್ಕರೆಯೆಲ್ಲಾ ಕಳ್ಳಪೇಟೆಯಲ್ಲಿ ಮೂರಾಟವಾಗುವುದು ರೂಪಾಯಿಗೆ—ಒಂದುವರೆ ರೂಪಾಯಿಗೆ—ಸೇರನಂತೆ!"

"ಹೇಗಾದರೂ ಕೊಡಲಿ; ಒಂದೇ ಒಂದು ಸೇರು ಸಕ್ಕರೆ ಸಿಕ್ಕರೂ ಸಾಕಾಗಿದೆ. ನಮ್ಮ ಮನೆಯವರಿಗೆ 'ಕೆಲವು ದಿನವಾದರೂ ಕಾಫಿ ಕುಡಿಯಲಿಕ್ಕೆ ಕೊಡಿರಿ' ಎಂತ ವೈದ್ಯರು ಹೇಳಿದ್ದಾರೆ ಅದಕ್ಕಾಗಿ....."

"ಅದೇ .. ನೀವು ನಿನ್ನೆ ಬಹಾಳ ಹೇಳಿದ್ದಿರೆಂದೇ ನಾನು, ಇಂದು ಬೆಳಗಿನಲ್ಲಿಯೇ—ಸಕ್ಕರೆಯ ಸಲುವಾಗಿ ಸಿದ್ದಪ್ಪನಿಗೆ ಹೇಳಿದ್ದೇನೆ. ಮೊದಮೊದಲಿಗೆನೋ ಇಲ್ಲವೆಂದು ಹಾರಿಸಿವ. ಹುಚ್ಚು ಸೂಳೆ ಮಕ್ಕಳು! ನಮ್ಮಿಂದ ಹೆಚ್ಚಿಗೆ ರೊಕ್ಕ ತೆಗೆದುಕೊಳ್ಳಲಾರದ್ದಕ್ಕೆ ಇಲ್ಲ ಎಂತ ಹೇಳಿ ಬಿಡುತ್ತಾರೆ. ಹಳ್ಳಿಯ ಜನರು ಯಾರಾದರೂ ಹೋದರೆ—ಒಳಗಿಂದೊಳಗೆ—ಬೇಕಾವಷ್ಟು ಕೊಡುತ್ತಾರೆ. ಎಂತಲೆ ನಾನೂ ಆತನಿಗೆ ಸ್ಪಷ್ಟವಾಗಿ ಹೇಳಿದೆ: 'ನನಗೇನೂ ಅಲ್ಲ; ನೀನೇನೂ ಸಂಶಯ ತೆಗೆದುಕೊಳ್ಳಬೇಕಾಗಿಲ್ಲ! ಬೇರೆಯವರಿಗೆ ಬೇಕಾಗಿದೆ. ಮುಂದಿಗೆಲ್ಲಾ ಯಾವ ಧಾರಣೆಯಿಂದ ಕೊಡುತ್ತೀಯೊ ಅದೇ ಧಾರಣೆಯಿಂದೆ ಕೊಡು!' ಎಂತ. ಹೂ ಎಂದಂತೆ ಮಾಡಿದ್ದಾನೆ. ಈಗ ನೀವೇ ಹೋಗಿರಿ! ನಮ್ಮ ಹುಡುಗನನ್ನ ನಿಮ್ಮ ಜೊತೆಗೆ ಕಳಿಸುತ್ತೇನೆ. ಯಾರಾದರೂ ಇದ್ದರೆ ಸ್ವಲ್ಪ ಬೇರೆಯ ಕಡೆಗೆ ಕರೆದು ಹೇಳಿರಿ.... ಆಯ್ತು! ಬಹುತರ ನಿನಗೆ ಕೊಡದೆ ಇರಲಾರ! ಏ ಮಲ್ಲಾ, ಹೋಗೋ, ಈ ಮಾಸ್ತರಿಗೆ ಸಿದ್ದನ ಅಂಗಡಿ ತೋರಿಸು! ಅಲ್ಲಜೆ 'ಮುಂಜಾನೆ ಮಾಸ್ತರು ಏನೋ ಹೇಳಿದ್ದರಂತ; ಅದಕಾಗಿ ಇವರು ಬಂದಿದ್ದಾರೆ' ಎಂತ ಸಿದ್ದನಿಗೆ ಹೇಳು!"

ಹೊನ್ನಪ್ಪ ಮಲ್ಲನೊಂದಿಗೆ ಸಿದ್ದನ ಅಂಗಡಿಯ ಕಡೆಗೆ ಹೊರಟು ನಡೆದ.

× × × ×

ಹೊನ್ನಪ್ಪ ಹೋದಾಗ ಸಿದ್ದನ ಅಂಗಡಿಯ ಕಟ್ಟೆಯ ಮೇಲೆ ಕುಳಿತು ನಾಲ್ವಾರು ಜನ ಹರಟೆಹೊಡೆಯುತ್ತಿದ್ದರು. ಸುತ್ತಲೆಲ್ಲ ಸುಟ್ಟ ಬೀಡಿಗಳು ಕರಿಯನೋರೆ ಮಾಡಿಕೊಂಡು. ಬಿದ್ದಿವೆ. ಸಕ್ಕರೆ ಇಲ್ಲವೆನ್ನಲು ಕಪ್ಪುವೋರೆ ಮಾಡಿಕೊಂಡು ತಿರುಗಿ ಹೋಗುವ ಜನರಂತೆ ಹೊನ್ನಪ್ಪನಿಗವು ಕಂಡುವು; ಮುಖದಲ್ಲಿ ಕಿರುನಗೆ ತಲೆದೋರಿತು. ಹಾಗೆಯೆ ವಿಚಾರಿಸುತ್ತ ಹೊನ್ನಪ್ಪ ಹೊರಗೇ ನಿಂತ. ಹುಡುಗ ಒಳಕ್ಕೆ ಹೋಗಿ ಸಿದ್ದಪ್ಪನಿಗೆ ಹೇಳಿದ.

"ಮುಂಜಾನೆ ಅಪ್ಪ ನಿಮಗೇನೋ ಹೇಳಿದ್ದರಂತಲ್ಲಾ! ಅದಕ್ಕಾಗಿ ಅವರು ಬಂದಾರ ನೋಡ್ರಿ ಇಲ್ಲೇ!"

ಕಟ್ಟೆಯ ಮೇಲೆ ಕುಳಿತವರಲ್ಲೊಬ್ಬ ಕೂಡಲೆ ಕೇಳಿದ:

"ಸಕ್ಕರಿಯ ಗಿರಾಕಿಯೇನಪಾ ಸಿದ್ದಣ್ಣಾ?"

"ಹೂಂ, ಸಕ್ಕರಿ! ಸಕ್ಕರಿ ಇನ್ನು ಮ್ಯಾಲೆ ಕನಸಿನೊಳಗೆ ಸಿಕ್ಕರೇ ಸರಿ! ಬರೂದೇ ಮೊದಲು ಹನ್ನೆರಡು ಚೀಲ; ಅದರೊಳಗೆ ಗೌಡರೇ ನಾಲ್ಕು ಚೀಲಾ ತೊಗೊಂಡು ಬಿಟ್ಟರು. ದೊಡ್ಡ ಊರೇನಪಾ! ಎಂಟು ಚೀಲ ಸಕ್ಕರಿ ಹ್ಯಾಗೆ ಸಾಕಾಗಬೇಕು? ಸೇರು ಕೊಡಬೇಕಾದವರಿಗೆಲ್ಲಾ ಅಚ್ಚೇರಿನಂತೆ ಕೊಟ್ಟು ಸಮಾಧಾನ ಮಾಡೂದರೊಳಗೆ ಸಾಕು-ಬೇಕಾಗಿಹೋಯ್ತು!"

"ಗೊತ್ತೈತಿ ಬಿಡಪ್ಪಾ! ಹೀಂಗs ಹೇಳತಿರತೀ; ಸಾವುಕಾರರಿಗೆ ಗೌಡ-ಕುಲಕರ್ಣಿಯರಿಗೆ ಮಾತ್ರ ರಾತ್ರಿ ಹೊತ್ತಿನೊಳಗ, ಮನಿಗೆ ಒಯ್ದೊಯ್ದು ಕೊಡತೀ! ಮೊನ್ನೆ ನಮ್ಮ ಮನಿಗಿಳಗ ಮುದುಕಿ ಬ್ಯಾನಿಂವ ಬಳಲತಿತ್ತು; ಸಕ್ಕರಿ ಬೇಡಿದರ ಒಂದೇ ಒಂದು ಜೂರು ಅವರ ಮುಕ ತೋರಿಸಲಿಲ್ಲ! ಅಂಥಾ ಹೊತ್ತಿನೊಳಗ ಇಲ್ಲದ ಸಕ್ಕರಿ ತೊಗೊಂಡು 'ಏನು ಮಾಡೂದು?" ಎಂದು ಇನ್ನೊಬ್ಬಾತ ಸಿಡಿನುಡಿಗಳನ್ನಾಡಿದ.

ಇವೆಲ್ಲ ಮಾತುಗಳನ್ನು ಹೊರಗೆ ನಿಂತು ಕೇಳುತ್ತಲಿದ್ದ ಹೊನ್ನಪ್ಪನ ಆಶೆ ಇವ್ವಲ್ಲಿಯೆ ಕಮರಿನೋಯಿತು. 'ಇನ್ನೇನು ಸಕ್ಕರಿ ಸಿಕ್ಕುವ ಆಶೆಯಿಲ್ಲ; ಅದರೂ....ಇಲ್ಲಿಯ ವರೆಗೆ ಬಂದಿದ್ದೇನೆ, ಒಳಗೆ ಹೋಗಿ ಅಂಗಡಿಯವನನ್ನು ಕೂಡಾದರೂ ಕಾಣೋಣ!' ಎಂದು ಯೋಚಿಸುತ್ತಲೆ ಅಂಗಡಿಯೊಳಗೆ ಅಡಿಯಿಟ್ಟ. 'ಬರ್ರೀ ಮಾಸ್ತರಕ!' ಎಂದು ಸಿದ್ದಪ್ಪ ನಗೆಮೊಗದಿಂದ ಸ್ವಾಗತಿಸಿದುದರಿಂದ, ಹೊನ್ನಪ್ಪನ ಮನಸ್ಸಿಗೆ ಸ್ವಲ್ಪ ಸಮಾಧಾನವೆನಿಸಿತು—ಸಕ್ಕರೆ ಸಿಕ್ಕಬಹುದೆಂದು. ಅಂಗಡಿಯವ ಚೀಲವೊಂದನ್ನು ಹಾಸಿ ಹೊನ್ನಪ್ಪನನ್ನು ಕುಳ್ಳಿರಿಸಿದ. 'ಅಡಿಕೆ ಬೇಕೇನ್ರಿ?' ಎಂದು ಅಡಿಕೆಯೊಂದನ್ನು ಒಡೆದುಕೊಟ್ಟ. ಆ ಮೇಲೆ ಮಾತನ್ನಾರಂಭಿಸಿದ:

"ಮುಂಜಾನೆ ಭೀಮಪ್ಪ ಮಾಸ್ತರು ಹೇಳಿದ್ದರೇನ್ರಿ.... ಇಂದ ನಿಮ್ಮನ್ನ ಕರಿಸತೀನಿ ಅಂತ! ನಮ್ಮ ಹಿರಿಯ ಮಗನಿಗೆ ಸ್ವಲ್ಪ ಮರಾಠಿ ಕಲಿಸಬೇಕಾಗೇತಿ ನೀವ! ಅಂಗಡಿಯ ಲೆಕ್ಕಾ ಪತ್ರಾ ಸ್ವಲ್ಪ ಮರಾಠಿಯೊಳಗ ಇಡಲಿಕ್ಕೆ ಬಾರ ಸಾಕು! ನಮ್ಮಲ್ಲಿ ಮರಾಠೀ ಸಾಲಿಯೇ ಇಲ್ಲ, ಎಲ್ಲಾರೂ ಕನ್ನಡಾನೇ ಕಲಿಯೋದು! ನಮ್ಮವನೂ ಕನ್ನಡ ಮುಲ್ಕೀ ಪರೀಕ್ಷಾ ಪಾಸ್ ಆಗ್ಯಾನೇನ್ರಿ! ಅದರೂ ತೊಗೊಂಡು ಏನು ಮಾಡೋದೈತಿ! ಅಂಗಡಿ ಲೆಕ್ಕ-ಪತ್ರನೇ ತಿಳಿಯೂದಿಲ್ಲ! ಒರಿಹಿರೇರ ಕಾಲದಿಂದಲೂ ನಾವು ನಮ್ಮ ಎಲ್ಲಾ ಲೆಕ್ಕಾಚಾರಾ ಮರಾಠಿಯೊಳಗs ಬರೀತಾ ಬಂದೀವಿ. ಹುಡುಗ ಈಗ ಕಲಿತೂ ಕಲಿಯುದ್ರಾಂಗ ಆಗೇತಿ ನಮಗ...."

ಹೊನ್ನಪ್ಪ ಹುಚ್ಚನಂತೆ ಯಾವುದೂ ತಿಳಿಯದೆ ಒಂದೇ 'ಹಾ!' 'ಹೂಂ!' ಎನ್ನುತ್ತ ಕುಳಿತ. ತಾನೇನು ಮಾತನಾಡಬೇಕೆಂಬುದೆ ತಿಳಿಯದಾಯಿತವನಿಗೆ: 'ನಾನು ಬಂದದ್ದೇತಕ್ಕೆ, ಇವನು ಹೇಳತೊಡಗಿರುವುದೇನು? ಸಂಸ್ಥಾನದೊಳಗಿನ ಸಣ್ಣ ಪಳ್ಳಿಯ ಮಾಸ್ತರ ನಾನು! ನನ್ನ ಮುಲ್ಕಿ ಪರೀಕ್ಷೆಯೂ ಕನ್ನಡದಲ್ಲಿಯೆ ಆಗಿದೆ. ಹೊಟ್ಟೆಕಿಚ್ಚಿಗಾಗಿ ಏನಾದರೂ ಒಂದು ಕೆಲಸ ಮಾಡಬೇಕಾಗಿ, ಮರಾಠಿ ಶಾಲೆಯಲ್ಲಿ ದುಡಿಯುವ ಪ್ರಸಂಗ ಬಂದಿದೆ. ಕನ್ನಡ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರೂ ಇನ್ನೂ ಭೀಮಪ್ಪ ಮಾಸ್ತರಿಗೇ ನನಗಿಂತ ಜೆನ್ನಾಗಿ ಮರಾಠಿ ಬರುತ್ತದೆ. ಹೆಳೆಯ ಜನವದು!.... ಅವರ ಬಳಯಲ್ಲಿಯೆ ಹೇಳಿಸಿಕೊಂಡರಾಗದೆ? ನಾಲ್ಕು ಮೈಲಿ ದೂರವಲ್ಲಿರುವ ನಾನು ಇಲ್ಲಿ ಬಂದು ಕಲಿಸುವ ಬಗೆ ಹೇಗೆ?....' ಇತ್ಯಾದಿಯಾಗಿ ಹೊನ್ನಪ್ಪ ಯೋಚಿಸತೊಡಗಿದ್ದ.

"ನಿಮ್ಮ ಬರಮಣ್ಣಗ ಮರಾಟಿ ಬರೂದಿಲ್ಲೇನ್ ಸಿದ್ದಪ್ಪಾ?" ಹೊರಗೆ ಕುಳಿತವನೊಬ್ಬ ಆಶ್ಚರ್ಯದಿಂದ ಕೇಳಿದ.

'ಹೂಂ, ಬರತೈತಲಾ! ಕತ್ತೀ ಕಾಲು ನಾಯಿ ಕಾಲು ಬರೀತಾನ....ಅಂದರೇನು ಬಂದ್ಹಾಂಗ ಆಯ್ತೇನು? ಅಂವ ಬರೆದದ್ದು ಅಂವಗೇ ತಿಳಿಯೂದಿಲ್ಲ!" ಎಂದು ನುಡಿದು ಸಿದ್ದಪ್ಪ ಹೊನ್ನಪ್ಪನ ಕಡೆಗೆ ತಿರುಗಿ ನುಡಿದ:

"ನಮಗೇನು ನೀವು ಹಾಂಗs ಹೇಳಬ್ಯಾಡ್ರಿ....ಫೀ ಕೊಡತೀವಿ ....ಏನ್ ತೊಗೊಳ್ಳೂದು ತೊಗೊಳ್ರಿ! ಆದರ ಮೂರು ತಿಂಗಳೊಳಗ ಮರಾಠೀ ಜನಾಖರ್ಜು ಬರಿಯುವ ಹಾಂಗ ತಯಾರ್ ಮಾಡಿ ಬಿಡ್ರಿ! ಇನ್ನೇನೂ ಹೆಚ್ಚು ಬೇಕಾಗಿಲ್ಲ ಅವನಿಗೆ! ಹಾಂಗ ಲೆಕ್ಕ-ಗಿಕ್ಕ ಎಲ್ಲಾ ಗೊತ್ತೈತಿ ಅಂವಗ; ಬರೀ ನೋಡೀ ಅಕ್ಷರಷ್ಟು ಸುಧಾರಿಸಿಕೊಟ್ಟರೆ ತೀರಿತು ನಿಮ್ಮ ಕೆಲಸ!"

"ಸರಿ, ಆಗಲಿ, ಮಾಡಬಹುದಲ್ಲಾ!" ಎಂದು ಏನೂ ವಿಚಾರ ತಿಳಿಯದೆ ಹೊನ್ನಪ್ಪ ಹೇಳಿದ.

ಸಿದ್ದಪ್ಪ ಹಾಗೆಯೆ ಎದ್ದು ಹೊರಗೆ ಹೋಗಿ ನೋಡಿದ. ಕಟ್ಟೆಯ ಮೇಲೆ ಕುಳಿತ ಹರಟೆಗಾರರೆಲ್ಲ ಹೊರಟು ಹೋಗಿದ್ದರು. ಮುಮುಕ ನಿಂಗ ಒಬ್ಬನೇ ಒಂದು ಮೂಲೆಯಲ್ಲಿ ಕುಳಿತಿದ್ದ. ಸಿದ್ದಪ್ಪ ಅವನನ್ನು ನೋಡಿ 'ಒಂದು ಸ್ವಲ್ಪ ಬರಮನ್ನ ಕರಕೊಂಡು ಬಾ ಇಲ್ಲೆ' ಎಂದು ಅವನನ್ನೂ ಕಳುಹಿದ. ಆ ಮೇಲೆ ಹೊನ್ನಪ್ಪನ ಹತ್ತಿರ ಬಂದು ಕುಳಿತು ನಗುನಗುತ್ತ ಮಾತಿಗೆ ಮೊದಲು ಮಾಡಿದ:

"ನೋಡ್ರಿ ಮಾಸ್ತರಕ, ಮರಾಠಿ ಕಲಿಸೂ ಹಾಂಗಿಲ್ಲ--ಪರಾಠೀ ಕಲಿಸೂ ಹಾಂಗಿಲ್ಲ. ಸುಮ್ಮನಽ ನಿಮ್ಮನ್ನ ಏನೋ ಒಂದು ಮಾತಿಗೆ ಹಚ್ಚಿದ್ದೆ. ಹುಡಗ್ಗ ಮೊದಲಿನಿಂದಲೂ ನಾವು ಮನ್ಯಾಗ ರೂಡೀ ಮಾಡಿಸತಾನೇ ಬಂದೀವಿ! ಜನಾ ಎದ್ದು ಹೋಗಲೀ ಅಂತ ಏನೇನೋ ಹೇಳತಾ ಕೂತೆ! ನೋಡಲಿಲ್ಲೇನು ನೀವಽ....ನೀವು ಬಂದ ಕೂಡಲೆ ಹ್ಯಾಂಗ ಸಂತಯ ತಗೊಂಡರವರು! ಬರ್ರಿ ಒಳಗ ಹೋಗೋಣ!" ಎಂದು ಅಂಗಡಿಯ ತೀರ ಒಳಭಾಗಕ್ಕೆ ಹೊನ್ನಪ್ಪನನ್ನು ಕರೆದುಕೊಂಡು ಹೋದ; ಅಲ್ಲಿ ಒಂದು ಸೇರು ಸಕ್ಕರೆಯನ್ನು ತೂಗಿ ಕೈಚೀಲದಲ್ಲಿ ಸುರುವಿ "ಬೇಕಾದರೆ ಇನ್ನೊಂದು ಸೇರೂ ಒಯ್ಯಿರಿ! ಭೀಮಪ್ಪ ಮಾಸ್ತರು ಒಂದೇ ಸೇರು ಅಂದಿದ್ದರಂತ ನೀವೇನೂ ಅನುಮಾನಿಸಬ್ಯಾಡ್ರಿ!" ಎಂದು ಸಿದ್ದಪ್ಪ ಹೇಳಿದ.

ಹೊನ್ನಪ್ಪ ರೂಪಾಯಿ ಕೊಡುತ್ತ ಹೇಳಿದ.

"ಸಾಕು, ಈಗ ಒಂದು ಸೇರು ಸಾಕು! ಮೂರು ತಿಂಗಳಾಯ್ತು, ನಮಗೆ ಸಂಬಳವೇ ಸಿಕ್ಕಿಲ್ಲ ಇನ್ನೂ! ಮತ್ತೆ ಬೇಕಾದಾಗ ಒಯ್ಯುವೆ ನಂತೆ! ಇನ್ನೇನು ಪರಿಚಯವಾಯಿತು!"

"ಬೇಕಾದಾಗ ಒಯ್ಯಿರಿ! ಅಂಗಡಿಗೆ ನೀವಽ ಬರಬೇಕಂತೇನೂ ಇಲ್ಲ....ಭೀಮಪ್ಪ ಮಾಸ್ತರಿಗೆ ಒಂದುದಿನಾ ಮೊದಲೇ ಸೂಚನಾ

ಕೊಡಲಿಕ್ಕೆ ಹೇಳಿಬಿಡ್ರಿ ಸಾಕು! ನಾವಕ ಹೋಗಿ ಅವರ ಮನ್ಯಾಗ ಮುಟ್ಟಿಸಿರತೀವಿ....ನೀವು ಯಾರನಾದರೂ ಕಳಸಿ, ಅಲ್ಲಿಂದಲೇ ಹೊರ ಗಿಂದ ಹೊರಗ ಒಯ್ಯಲಿಕ್ಕೆ ಬರತಾದ! ಒಣಾ ಗೊಂದಲನೇ ಇರೂ ದಿಲ್ಲ!" ಎಂದು ಮುಂದಿನ ಹಂಚಿಕೆಯನ್ನೂ ಹೇಳಿಬಿಟ್ಟ ಸಿದ್ದಪ್ಪ.

"ಹಾಗೆಯೆ ಆಗಲಿ" ಎಂದು ಹೇಳಿ ಹೊನ್ನಪ್ಪ ಹೊರಗೆ ಬಂದಾಗ ಹೊತ್ತು ಮುಳುಗಿದ್ದಿತು. ನಸುಗುತ್ತಲೆ ಸುತ್ತಲೂ ಅವರಿ ಸಿಕೊಂಡು ಬರುತ್ತಿದ್ದಿತು. 'ಇನ್ನೇನು, ಸಕ್ಕರೆ ಸಿಕ್ಕಿತು! ಅಕ್ಕಿ-ಜಿಪುಣೆಯೆಣ್ಣೆಗಳನ್ನಂತೂ ಭೀಮಪ್ಪ ಮಾಸ್ತರು ತಂದಿಟ್ಟಿದ್ದಾರೆ! ಇನ್ನೊಂದೆರಡು ತಾಸುಗಳನ್ನು ಹೇಗಾದರೂ ಕಳೆದು, ಆ ಮೇಲೆ ಊರಿಗೆ ಹೊರಟು ಬಿಡಬೇಕು....ಮನೆಯಲ್ಲಿ ಅಕೆ ನರಳುತ್ತ, ನನ್ನ ದಾರಿಕಾಯುತ್ತಲೆ ಬಿದ್ದುಕೊಂಡಿರಬಹುದು!" ಎಂಬ ಯೋಚನೆ ಯಲ್ಲಿಯೆ ಆತ ಭೀಮಪ್ಪ ಮಾಸ್ತರ ಮನೆಯ ಕಡೆಗೆ ನಡೆದ.

× × × ×

ಸುಮಾರು ಹತ್ತು ಗಂಟೆ ರಾತ್ರಿಯಾಗಿರಬೇಕು. ಹೊನ್ನಪ್ಪ ಚಿಕ್ಕೂರನ್ನು ಬಿಟ್ಟು ಹೊರಟ. ಕೃಷ್ಣಪಕ್ಷ. ಸುತ್ತಲೂ ಕತ್ತಲೆ ಕವಿದಿದ್ದಿತು. ದಾರಿಯಿಂದ ಹೋಗಿಬರುವ ಜನರಾರೂ ಇರಲಿಲ್ಲ. ಬೇಸಗೆಯ ದಿನವಾದುದರಿಂದ ಅಡವಿಗೆ ಹೋಗಿಬರುವ ಜನವಂತೂ ಇಲ್ಲವೆ ಇಲ್ಲ. ದಾರಿ ನಡೆಯುತ್ತಿರುವಾಗ ಹೊನ್ನಪ್ಪನ ಮನಸ್ಸನ್ನು ಅಂಜಿಕೆಯು ಆಗಾಗ ಆವರಿಸುತ್ತಲಿತ್ತು. ಸ್ವಲ್ಪ ಸದ್ದಾದರೂ ಸುತ್ತಲೂ ನೋಡುವ. ಮನಸ್ಸಿನಲ್ಲಿ 'ಯಾರಾದರೂ ಬಂಬಾರೇನು ಮತ್ತೆ? ಕಾವಲು ಕಟ್ಟೆ ಸಮೀಪಿಸಿದೊಡನೆಯೆ ಅಡವೀ ಬೀಳುವೆ....ಆ ಮೇಲೆ ಯಾರ ಅಂಜಿಕೆಯೂ ಇಲ್ಲ ಸುರಕ್ಷಿತ ಮನೆಯನ್ನು ಮುಟ್ಟಿ ದಂತೆಯೆ....ಅಂತೂ ಹೆಂಡತಿಗೆ ನಾಲ್ಕುದಿನವಾದರೂ ತಿನ್ನಲು ಅಕ್ಕಿ ದೊರಕಂತಾಯಿತು— ಇಷ್ಟು ಪಾಡಾದರೆ....' ಎಂದು ಯೋಚಿಸುತ್ತಿರು ವಷ್ಟರಲ್ಲಿ, ದೂರದಲ್ಲಿ ಏನೋ ಒಂದು ಬೆಳಕು ಕಾಣಿಸಿತು. ಅದೇನಿರ ಬಹುದೆಂದು ನೋಡುವಷ್ಟರಲ್ಲಿ ಮಾಯವಾಯಿತು. ಸ್ವಲ್ಪ ಹೊತ್ತಿ ನಲ್ಲಿಯೆ ಮೋಟಾರಿನ ಸಪ್ಪಳು ಕೇಳಬರತೊಡಗಿತು....ಸುತ್ತಲೂ ಹೊನ್ನಪ್ಪ ನೋಡಿದ. ಕಗ್ಗತ್ತಲು ಕಣ್ಣನ್ನು ತಿವಿಯುತ್ತಿದ್ದಿತು ಸುಮ್ಮನೆ ನಿಂತು ಯೋಚಿಸಲಾರಂಭಿಸಿದ. ಮೋಟಾರಿನ ಸಪ್ಪಳು ಕ್ಷಣಕ್ಷಣಕ್ಕೆ ಸಮೀಪದಲ್ಲಿಯೆ ಕೇಳಬರತೊಡಗಿತು....'ದೀಪವಿಲ್ಲದೆ ಮೋಟಾರು....! ಎಲ್ಲಿಂದ ಬರುತ್ತಿದೆ!' ಎಂದು ಯೋಚಿಸುವಷ್ಟರಲ್ಲಿ ಎದುರಿಗೇ ಬೆಳಕು....! ಕಾರು ಸಮೀಪಕ್ಕೆ ಬರುತ್ತಲಿದೆ....ಬಂತು.... ಹೊನ್ನಪ್ಪನ ಕೈಕಾಲೇ ತಣ್ಣಗಾದುವು....ಕೈಯೊಳಗಿನ ಗಂಟು ಬೀಳು ವಂತಾಯಿತು....ಅಷ್ಟು ನಡುಗುತ್ತಿದ್ದ ಹೊನ್ನಪ್ಪ. ಹೆದರಿದ ಮನಸ್ಸಿ ನಲ್ಲಿ 'ಹಾದೀ ಬಿಟ್ಟು ಅಡವಿಸೇರಲೆ?' ಎಂಬ ಪ್ರಶ್ನೆಯೆದ್ದಿತು. 'ಬೇಡ; ಹಾದಿ ಬಿಟ್ಟು ಅಡವಿಯಲ್ಲಿ ಅಡ್ಡ ಹೋಗುವುದನ್ನು ಕಂಡರೆ ಏನು ತಿಳಿದುಕೊಳ್ಳುವರೊ! ಈಗ ಈ ಭಾಗದಲ್ಲಿ ಜೀಲಿನಿಂದ ಓಡಿ ಬಂದ....ಬೇಡರನ್ನು ಹುಡುಕಲು....ಪೋಲೀಸರ ಕಾರೊಂದು ರಾತ್ರಿ ತಿರಗುತ್ತಿದೆಯಂತೆ....' ಎಂದು ವಿವೇಕವು ಮಾರ್ನುಡಿಯಿತು..... 'ಮಾತಾಡಿಸಿದೊಡನೆ ಹೆಸರು ಹೇಳಬೇಕಂತೆ....ಇಲ್ಲವಾದರೆ ಗುಂಡು ಹಾಕುವರಂತೆ' ಎಂಬ ವಿಚಾರ ಮನದಲ್ಲಿ ಬಂದೊಡನೆಯೆ....ಕಣ್ಣಿಗೆ ಕತ್ತಲೆ ಕವಿದು ನೆಲಕ್ಕೆ ಕುಳಿತೇ ಬಿಟ್ಟ ಹೊನ್ನಪ್ಪ. ಮೈಯೆಲ್ಲ ಬೆವ ತಿತು..... ಅವನ..... ತಲೆಯಲ್ಲಿ ಅನೇಕ ವಿಚಾರಗಳು ಬರ ತೊಡಗಿದುವು... ಭೀತಿಯಿಂದ ಯಾವ ವಿಚಾರವೂ ಸ್ಥಿರವಾಗಿ ನಿಲ್ಲ ದಾಯಿತು....ಅದರಲ್ಲೂ ಸ್ವಲ್ಪ ಗಟ್ಟಿ ಮನಸ್ಸು ಮಾಡಿ ಯೋಚಿ ಸಿದ....ಒಂದು ಉಪಾಯ ಹೊಳೆಯಿತವನಿಗೆ....ಕೂಡಲೆ ಎದ್ದ, ಸಮೀಪದ ಒಂದು ಕಂಟೆಯ ಹತ್ತಿರ ಹೋದ....ಮೂತ್ರವಿಸರ್ಜನೆಗೆ ಕುಳಿತಂತೆ ಮಾಡಿ, ತನ್ನ ಸಾಮಾನಿನ ಗಂಟನ್ನು ಕಂಟೆಯ ಮರೆಯಲ್ಲಿ ಮುಚ್ಚಿಟ್ಟ... ಸ್ವಲ್ಪ ಸಮಾಧಾನದ ಮನಸ್ಸಿನಿಂದ ನಾಲ್ಕು ಹೆಜ್ಜೆ ಮುಂದೆ ಹೋದ....ಮತ್ತೆ ಹಿಂತಿರುಗಿ ನೋಡಿದ....ಮೋಟಾರು ಹೋದ ಮೇಲೆ, ಕತ್ತಲೆಯಲ್ಲಿ ಮತ್ತೆ ಆ ಕಂಟೆಯ ಗುರುತು ಸಿಕ್ಕಬೇಕಲ್ಲ ಅವನಿಗೆ....ಮುನ್ನಡೆದ. ಹೋರೆಯ ಮೇಲೆ....ಭೀತಿಯ ಯಾವ ಚಿಹ್ನವನ್ನೂ ತೋರಗೊಡಬಾರದೆಂದು ಯತ್ನಿಸಿದ....ಉಟ್ಟ ಧೋತ ರವ ಸೆರಗಿನಿಂದ ಬೆವರೊಡೆದ ಮುಖವನ್ನೊರಸಿಕೊಂಡ....ಅಷ್ಟರಲ್ಲಿ ಮೋಟಾರು ಬಂದು ಅವನ ಹತ್ತಿರವೇ ನಿಂತಿತು....ದೀಪಗಳನ್ನಾರಿಸಿ.

ಮೋಟಾರಿನ ಸುತ್ತಲೂ ಕಿಡಕಿಗಳೊಳಗಿಂದ..... ಹೊರಗೆ ಬಂದೂಕಿನ ಉಳಿಗೆಗಳು ಹಾಯ್ದುವೆ....ನೋಡಿ ಹೊನ್ನಪ್ಪನ ಹೃದಯ ನಡುಗಿತು....ಮನಸ್ಸಿಗೆ ಹೇಗೆ ಹೇಗೋ ಎನ್ನಿಸಿತು....ಮತ್ತೆಳೆ ನೆನ ಪಾಯಿತು... ಮನೆಯಿಂದ ಹೊರಡುವಾಗ ಹೆಂಡತಿ - ನೀಕಣ್ಣಾ— 'ನೀವು ತಿರುಗಿ ಬರುವನರೆಗೆ ನನ್ನ ಎದೆಯಲ್ಲಿ ಎದೆ ಇರುವುದಿಲ್ಲ!' ಎಂದು ಕಸಿಕರದಿಂದ ಹೇಳಿದ ಮಾತು ಕಿವಿಯಲ್ಲಿ ಸುತ್ತತೊಡಗಿತು.

"ಯಾರು ನೀನು?" ಮೋಟಾರಿನೊಳಗಿಂದ ಒಂದು ಗಡುಸು-ದನಿ ಹೊರಟಿತು.

"ನಾನು ಎಡ್ಡಳ್ಳಿ ಮಾಸ್ತರು..."ನಡುಗುವ ದನಿಯಲ್ಲಿ ಹೇಳಿದ ಹೊನ್ನಪ್ಪ.

"ಕತ್ತಲೆಯಲ್ಲಿ ಎಲ್ಲಿಗೆ ಹೋಗಿದ್ದಿ,"

"ಚಿಕ್ಕೂರಿಗೆ...."

"ಏದೇಕೆ?"

"ಸ್ವಲ್ಪ ಸಾಲೆಯ ಕಾಗದ-ಪತ್ರದ ಮಾಹಿತಿ ಕೇಳಿಕೊಳ್ಳಬೇ ಕಾಗಿತ್ತು; ಮಾಸ್ತರರ ಕಡೆಗೆ ಹೋಗಿದ್ದೆ...." ಎಂದು ಏನೋ ಒಂದು ಕಾರಣವನ್ನು ಹುಡುಕಿ ಹೇಳಿದ.

"ಇಷ್ಟೇಕೆ ನೇಳೆ ಮಾಡಿದಿ, ಬರಲಿಕ್ಕೆ?"

"ಮಾಸ್ತರು ಮನೆಯಲ್ಲಿ ಇರಲಿಲ್ಲ....ಬಂದ ನೇಲೆ ಮಾಹಿತಿ ಕೇಳಿಕೊಂಡು ಬರಬೇಕಾಗಿರೆ ಈ ನೇಳೆ ಆಯಿತು!" ಹೊನ್ನಪ್ಪನ ಗಂಟಲು ಒಣಗ ತೊಡಗಿದ್ದಿತು.

"ಬೆಳತನಕ ಅಲ್ಲೇ ಇರಬೇಕಾಗಿತ್ತು....? ಈ ಅನೇಳೆಯಲ್ಲಿ ಯಾಕೆ. ಹೊರಟಿ?"

"ಮುಂಜಾನೆ ಸಾಲೆಗೆ ನೇಳೆಗೆ ಸರಿಯಾಗಿ ಹೋಗಬೇಕು. ಏಪ್ರಿಲ್ ತಿಂಗಳು....ಈಗ ಏಳು ವರೆಗೇ....ಕಾಲೆ ಪ್ರಾರಂಭ ಆಗತನೆ...." ಎಂದು ಕಾರಣ ಸೂಚಿಸಿದ ಹೊನ್ನಪ್ಪ.

"ಏನು ಮತ್ತೇನು ಸಾಮಾನು ಗೀಮಾನು ತರಲಿಕ್ಕೆ ಹೋಗಿ ದ್ದೆಯೊ?" ಮೋಟಾರಿನೊಳಗಿಂದ ಕೆಳಗಿಳಿಯುತ್ತ ಮತ್ತೊಬ್ಬ ಕೇಳಿದ....

ಹೊನ್ನಪ್ಪ ನಡುಗಿದ. ಆದರೂ ಸ್ವಲ್ಪ ಧೈರ್ಯ ತಂದು ಕೊಂಡು: "ಸಾಮಾನು ಎಲ್ಲಿಯದರೀ.... ಸಾಲೆಯ ದಪ್ತರಿನ ಮಾಹಿತಿ ಕೇಳಿಕೊಂಡು ಬರಲಿಕ್ಕೆ ಹೋಗಿದ್ದೆ... ಬರಲಿಕ್ಕೆ ಕತ್ತಲಾ

ಯಿತು...ಮನೆಯೊಳಗೆ ಹೆಂಗುಸೊಬ್ಬಳೇ...ಎಂತ..." ಧ್ವನಿಯಲ್ಲಿ ನಡುಕವಿತ್ತು.

"ನಿನ್ನ ಹೆಸರೇನು?" ಮೋಟಾರಿನಿಂದ ಇಳಿಯುತ್ತ ಇನ್ನೊಬ್ಬನು ಕೇಳಿದ..ಅದೇ ಕಾಲಕ್ಕೆ.. ಒಂದಿಬ್ಬರು ಸೀಪಾಯಿಗಳು ಮತ್ತೆ.. ಕೆಳಕ್ಕೆ ಇಳಿದರು.

"ಹೊನ್ನಪ್ಪ ಕೃಷ್ಣಪ್ಪ ಕಟಿಗೇರಿ..." ಹೊನ್ನಪ್ಪನ ಧ್ವನಿಯಲ್ಲಿ ಕಳವಳ ತುಂಬಿತ್ತು...

ಪೋಲೀಸ ಅಧಿಕಾರಿ...ತನ್ನ ಕೋಟಿನ ಜೇಬಿನಲ್ಲಿ ಕೈ ಹಾಕಿ, ಹೊನ್ನಪ್ಪನ ಹೆಸರು ಬರೆದುಕೊಳ್ಳಲು ಕಾಗದ ಹುಡುಕ ತೊಡಗಿದ. ಜೇಬಿನಲ್ಲಿ ಕಾಗದವಿರಲಿಲ್ಲವೇನೋ! ಉಳಿದ ಸೀಪಾಯಿಗಳತ್ತ ನೋಡ ತೊಡಗಿದ..ಅವನಿಗೆ ಕಾಗದ ಬೇಕಾಗಿದೆ ಎಂಬುದನ್ನು ಅವನ ಮುಖದ ಭಾವದಿಂದ ಅರಿತು, ಹೊನ್ನಪ್ಪ ತನ್ನ ಜೇಬಿನೊಳಗಿಂದ ಡಾಯರಿ ತೆಗೆದು, ಅದರಲ್ಲಿಂದ ಒಂದು ಹಾಳೆ ಹರಿದು ಕೊಟ್ಟ.. ತನ್ನ ಹೆಸರು ಬರೆದುಕೊಳ್ಳಲಿಕ್ಕೆ!...ಪೋಲೀಸ ಅಧಿಕಾರಿ ಮೋಟಾರಿನ...ತಗಡಿನ ಮೇಲೆ ಕಾಗದವನಿಟ್ಟು ಹೆಸರು ಬರೆದುಕೊಳ್ಳುತ್ತ ಕೇಳಿದ:

"ಈ ಹಾದಿಯಿಂದ ಮತ್ತಾರಾದರೂ ಹೋದರೆ?" ಆಷ್ಟರಲ್ಲಿ ಪೋಲೀಸ ಅಧಿಕಾರಿಯ ಕೈಯೊಳಗಿಂದ ಆ ಕಾಗದ ಗಾಳಿಯಿಂದ ಹಾರಿ ಹೋಯಿತು. ಅದು ಅಕಸ್ಮಾತ್ತಾ ಹೊನ್ನಪ್ಪನ ಸಾಮಾನಿನ ಗಂಟನ್ನು ಮುಟ್ಟಿಟ್ಟು ಕಂಟಿಯ ಬಳಿಯಲ್ಲಿಯೆ ಹೋಗಿ ಬಿದ್ದಿತು. ಮೋಟಾರಿನ ಡ್ರಾಯ್‌ವರನು ದೀಪಗಳನ್ನು ಹೊತ್ತಿಸಿದ. ಒಬ್ಬ ಪೋಲೀಸ ಸೀಪಾಯಿ ಆ ಕಾಗದ ತರಲಿಕ್ಕೆ ಓಡತೊಡಗಿದ. ಅವನಿಗಿಂತ ಮುಂದಾಗಿ ಹೊನ್ನಪ್ಪ ಓಡುತ್ತ..."ಯಾರೂ.. ಇಲ್ಲ!" ಎಂದು ಹೇಳಿದ ಆದರೆ ಅವನ ಲಕ್ಷ್ಯ ಆ ಮಾತಿನ ಕಡೆಗೆ ಇರಲಿಲ್ಲ —ಹೊನ್ನಪ್ಪ ಒಂದು ಕೈಯಿಂದ ಕುಟಿಗೆ ಹತ್ತಿದ್ದ ಕಾಗದವನ್ನು ತಕ್ಕೊಳ್ಳುತ್ತ, ಮತ್ತೊಂದು ಕೈಯಿಂದ ಆ ಗಂಟನ್ನು ಮುಟ್ಟಿದ್ದ ಕಂಟಿಯಮರೆಗೆ ಸರಿಸಲು ಯತ್ನಿಸಿದ.

'ಅಲ್ಲಿ ಏನು ಮಾಡ್ತಾನ ನೋಡೊ....!' ಎಂದು ಮೋಟಾರಿನಲ್ಲಿ ಕುಳಿತಲ್ಲಿಂದಲೇ ಒಬ್ಬ ಒದರಿ ಹೇಳಿದ...ಕೆಳಗಿನ ಸೀಪಾಯಿಗೆ.

'ಏನಿಲ್ಲರೀ...ಕೈಗೆ ಮುಳ್ಳು, ಜುಟ್ಟಿತು!..." ಎಂದು ಹೇಳುತ್ತ ಕಾಗದ ತಕ್ಕೊಂಡು ತಿರುಗಿ ಬರುವುದರಲ್ಲಿದ್ದ ಹೊನ್ನಪ್ಪ. ಆದರೂ ಸೀಪಾಯಿ ಅವನ ಮಾತನ್ನು ಕೇಳಬೇಕಲ್ಲ! ಆತ ಹೋಗಿ ನೋಡಿಯೆ ಬಿಟ್ಟ. ಹೊನ್ನಪ್ಪನ ಎದೆಯೊಡೆದು ನೀರಾಯಿತು. ಅದು ಮೈಯಲ್ಲೆಲ್ಲ ಹರಿದು ಹೆಬ್ಬಾಗಿ ಹೊರಗೆ ಬಂದಿತೇನೋ ಎನ್ನುವಂತೆ, ಆತ ತುಂಬ ಬೆವತನು.

"ಇದನ್ನಾರಿಟ್ಟಾರೆ?" ಪೋಲೀಸ ಅಧಿಕಾರಿ ಗುಡುಗಿದ.

"ನಾನೇ.....ಹೆಂಡತಿ.....ಮನೆಯಲ್ಲಿ ಹಡೆದಿದ್ದಾಳೆ....ಇಲ್ಲಿ ಎಷ್ಟು ಹುಡುಕಿದರೂ ಅಕ್ಕಿ ಸಿಕ್ಕಲಿಲ್ಲ....ಚಿಕ್ಕೂರಿಗೆ.. ತರಲಿಕ್ಕೆಂತ ಹೋಗಿದ್ದೆ....ಹಾಗೆಯೆ....ಸಕ್ಕರಿ....ಚಿಮಣಿಯೆಣ್ಣೆ....." ಎಂದೇನೇನೋ ತಡವರಿಸುತ್ತ ಹೊನ್ನಪ್ಪ ಹೇಳಿದ.

"ಲುಚ್ಚಾ! ಸೂ.....ಮಗನೇ! 'ಮಾಸ್ತರ್ ಏನು ನೀನು?.... ಇದನ್ನs ಹುಡುಗರಿಗೆ ಕಲಿಸತಿ ಏನು?" ಪೋಲೀಸ ಅಧಿಕಾರಿ ಗದ್ದರಿಸಿದ.

"ಅವನ ಹೆಂಡತಿ ಹಡೆದಾಳ ಅಂತ....ಏಳ್ರ!" ಹಾಸ್ಯಸ್ಫಂದಲ್ಲಿ ಮೋಟಾರಿನೊಳಗಿನನನೊಬ್ಬ ವ್ಯಂಗ್ಯವಾಗಿ ನುಡಿದ....

ಸುದರ್ಶನ

ಸರಸ ಸಾಮಾಜಿಕ ಕಾದಂಬರಿಯು

ಬರೆದವರು :— **'ಆನಂದಕಂದ'**

ಹತ್ತು ಹತ್ತು ಸಲ, ಇಪ್ಪತ್ತು ಇಪ್ಪತ್ತು ಸಲ ಓದಿಯೂ ಮತ್ತೆ ಮತ್ತೆ ಓದಬೇಕೆನಿಸಿದ ಅನುಭವವನ್ನು, ಹಲವು ಜನ ವಾಚಕರು ಈ ಕಾದಂಬರಿಯ ಬಗ್ಗೆ ತಳೆದಿದ್ದಾರೆ. ಪಾತ್ರಗಳ ಸೃಷ್ಟಿ, ಅವುಗಳ ಬೆಳೆವಣಿಗೆ, ಕಥಾರಚನೆ, ಭಾಷಾಶೈಲಿ ಇವುಗಳ ಹೊಸತನದ ಮೂಲಕ, ಕನ್ನಡ ಕಾದಂಬರೀ ಪ್ರಪಂಚದಲ್ಲಿಯೆ ಇದೊಂದು ವಿಶಿಷ್ಟಸ್ಥಾನವನ್ನು ಪಡೆದುನಿಂತಿದೆ. ಬೆಲೆ ೧ ೦-೦

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಿರಿ.

"ಹೆಂಡತಿ ಹಡೆದದ್ದು ವಿಚಾರಿಸಲಿಕ್ಕೆ ಹೋಗಿದ್ಯೋ?.... ಏನು ಸಾಲಿಯ ಮಾಹಿತೀ ವಿಚಾರಿಸಲಿಕ್ಕೆ ಹೋಗಿದ್ಯೋ....ಆ ಮಾಸ್ತರ ಹತ್ತರ....?" ಎಂದು ಮತ್ತೊಬ್ಬ....ಮಾತಿನ ಗುಂಡು ಹಾರಿಸಿದ. ಪೋಲೀಸ ಅಧಿಕಾರಿಯು "ಶಿವ್ಯಾ....ಆ ಗಂಟು ಮೋಟಾರಿನೊಳಗ ಇಡೊ ..." ಎಂದು ಹೇಳಿ....ಹೊನ್ನಪ್ಪನ ಕಡೆಗೆ ತಿರುಗಿ..... "ಏರೋ....ಬದ್ಮಾಷ್....ಮೋಟಾರಿನಲ್ಲಿ...." ಎಂದು ತಾನೂ ಮೋಟಾರಿನಲ್ಲಿ ಹತ್ತಿದ.

"....."

"ಏನು ಅಂತಾನೋ ಹರಾಮ್‌ಖೋರ...? ××× ಮ್ಯಾಲ ಎರಡು ಒದ್ದು ಎರಿಸು ನೋಟರಿನೊಳಗ!.." ಪೋಲೀಸ ಅಧಿಕಾರಿಯ ಕೊನೆಯ ಆಜ್ಞೆಯಿದು!

× × × ×

ಮರುದಿನ ಮುಂಜಾನೆ ಪೋಲೀಸ ಠಾಣೆಯೊಳಗೆ, ಹೊನ್ನಪ್ಪನ ಹತ್ತಿರಿದ್ದ ನಾಲ್ಕು ರೂಪಾಯಿಗಳನ್ನು ಕಸಿದುಕೊಂಡು..... ಹೊರಗೆ ಹಾಕಿದರು. ಅಲ್ಲಿಂದ ಎಡಹಳ್ಳಿ ಹದಿನಾರು ಮೈಲಿ....ಎರಡು ಮೂರು ದಿನಗಳಿಂದ ಪ್ರಯತ್ನ ಮಾಡಿ ದೊರಕಿಸಿದ ಸಾಮಾನುಗಳನ್ನೆಲ್ಲ ಕಸಿದುಕೊಂಡು ಬಿಟ್ಟಿದ್ದರು....'ನಿನ್ನೆ ಮನೆಯಲ್ಲಿ ಒಬ್ಬಾಕೆಯೇ ಬೆಳತನಕ. ಬೇನೆಯವಳು ಬೇರೆ.... ಎಷ್ಟು ದಾರಿ ಕಾಯ್ದುಕೋ! ಮನೆಯಲ್ಲಿ ಏನೇನಾಗಿದೆಯೋ.... ? ಈಗಲಾದರೂ....ಮನೆಗೆ ಲಗುಬಗೆಯಿಂದ ಹೋಗಬೇಕು....' ಎಂದು ಒತ್ತರದಿಂದ ನಡೆದ.... ಹೊನ್ನಪ್ಪ.

ಮಧ್ಯಾಹ್ನದ ಒರು ತಾಸಿಗೆ ಎಡಹಳ್ಳಿಯನ್ನು ಸೇರಿದ ಹೊನ್ನಪ್ಪ. ಲಗುಬಗೆಯಿಂದ ಮನೆಗೆ ಹೋಗಿ ನೋಡುತ್ತಾನೆ....ಮನೆಯ ಮುಂದೆ.. ಹತ್ತೆಂಟು ಜನ ಕೂಡಿದೆ....ತನ್ನ ನಡುವಿನ ಹುಡುಗ....ಚೀರಿ ಚೀರಿ ಅಳುವುದು ಕೇಳಬರುತ್ತಲಿದೆ....ಇದೇನೆಂದು ಗಾಬರಿಗೊಂಡು ಮುಂದೆ ಜನರಲ್ಲಿ ಓಡಿ ಹೋಗಿ ನೋಡಿದ....ಸೀತಮ್ಮನ ಶವವನ್ನು ಸಿದ್ದಿಗೆಯ ಮೇಲೆ ಹಾಕಿ ಕಟ್ಟುತ್ತಲಿದ್ದಾರೆ! "ಅಯ್ಯೋ ನನ್ನ ಸೀತಾ...." ಎಂದು ಹೊನ್ನಪ್ಪ ಹೆಂಡತಿಯ ಹೆಣವನ್ನಪ್ಪಿದ....ಆಗ....ಅವನ ಬಾಯಿಂದ ಸಹಜವಾಗಿ ಈ ಮಾತು ಹೊರಟಿತು.' "ಸರಕಾರದವರು ಬರ್ಥ್ ಕಂಟ್ರೋಲನ್ನಾದರೂ ಮಾಡಿದ್ದರೆ....ಈ ಡೆಥ್ಕಾದರೂ ಕಂಟ್ರೋಲಿನಲ್ಲಿ ಉಳಿಯತಿದ್ದಿ ತಲ್ಲಾ....."

ಸುಖನಸ್ತು ೬-

ಬಿ ಡು ವು

*

ಶ್ರೀ. ಎಚ್. ಎಸ್. ಪಾಟೀಲ ಎಂ. ಎ., ಬಿ. ಕಾಮ್. ಮುಂಬಯಿ

ದುಡಿ, ದುಡಿ, ದುಡಿ! ಮನುಷ್ಯ ದುಡಿವುದಾದರೂ ಎಷ್ಟು? ಏಕೆ? ಹುಟ್ಟಿದ ಮೇಲೆ ಮೂರು ನಾಲ್ಕು ವರುಷಗಳ ವರೆಗೆ ಏನು ತುಸು ನೋಜುವಮಾಡುವನೊ ಮಾಡುವನು– ಮನುಷ್ಯ! ಆ-ಮೇಲೆ-ಒಮ್ಮೆ ಮನೆಯೊಳಗಿನ ಕಾಟ, ಗೊಂದಲ ಇಲ್ಲವೆ ಅಲಸ್ಯವನ್ನು ತಪ್ಪಿಸಲಿಕ್ಕಾಗಲಿ—ಇಲ್ಲವೆ ಇಂದಿನ ಹೊಸ ಮಾದರಿಯ ತಂದೆ-ತಾಯಿಗಳು ಎಂದು ಹೇಳಿಕೊಳ್ಳುವವರ ಮಗುವಾಗಿದ್ದರೆ 'ಬೆಳಕು ಪಡೆಯುವುದ ಕ್ಯಾಗಲಿ'—ಶಾಲೆಯನ್ನು ಸೇರಿದನೆಂದರೆ, ಆಯಿತು, ಎತ್ತನ್ನು ಗಾಣಕ್ಕೆ ಹೂಡಿದಂತೆಯೆ! ತಿರುಗಿಯೆ ತಿರುಗುವುದು; ನಡೆದೇ ನಡೆಯುವುದು. ಹೆಂಡತಿ–ಮಕ್ಕಳ ಗೋದಲೆಯ ಹೊರತು ಬೇರೆ ಸುಖದ ಸುಳಿವಿಲ್ಲ; ಹೊಟ್ಟೆ–ಬಟ್ಟೆಯ ಮೇವಿನ ಹೊರತು ಬೇರೆ ವಸ್ತುಗಳ ಆವಶ್ಯಕತೆಯಿಲ್ಲ! ಆದರೂ ಕಣ್ಣು ಕಟ್ಟಿಕೊಂಡು ಸುತ್ತಾಡುವುದೇನು ತಪ್ಪಿದ್ದಲ್ಲ!

ಆದರಲ್ಲಿಯೂ, ಜಗತ್ತಿನಲ್ಲಿ ಮೋಜಿಗಿಂತ ಮೋಸವೆ ಹೆಚ್ಚಾಗಿ ತುಂಬಿರುತ್ತದೆ; ಅಲ್ಲವೆ? ಎಲ್ಲಿ ನೋಡಿದರೂ ಯಾವುದಾದರೊಂದು ಬಗೆಯ ಕಾರ್ಯಮಂತೂ ನಡೆದಿರಲೆಬೇಕಲ್ಲವೆ? ಅಂತಹ ಒಂದು ಕಚೇರಿಯಲ್ಲಾಗಲಿ ಅಂಗಡಿಯಲ್ಲಾಗಲಿ, ಇದ್ದ ಪರಿಸ್ಥಿತಿಯನ್ನು ತುಸು ಸದ್ದಿಲ್ಲದೆ ಕೇಳಿ ನೋಡಬೇಕು. ಅಲ್ಲಿ ದುಡಿವವರು ದುಡಿದೇ ದುಡಿಯುತ್ತಾರೆ; ಕಾಲು ಹಿಡಿದು, ಗೋಣು ಮುಡಿಸಿ, ಮಡಿದು ಬೀಳುವಷ್ಟು ದುಡಿಯುತ್ತಿರುತ್ತಾರೆ; ಅತ್ತ ಮೋಜು ಮಾಡುವವರು, ನಾಲ್ಕೇ ಜನರು ಇದ್ದರೂ ಅಡ್ಡಿಯಿಲ್ಲ, ಸುಖವಾಗಿ ತಿರುಗಾಡುತ್ತಿರುತ್ತಾರೆ. ಅಂತೆಯೆ, ಏನೋ ಎಲ್ಲರಿಗೂ ಸಾಮಾನ್ಯವಾಗಿ ಸಿಕ್ಕುವಂತಹ ಬಿಡುವಿನ ಕೆಲವು ನಿಯಮಗಳು ಬೇಕು– ಎನಿಸಿದುದು!

ಮುಂಜಾನೆಯಿಂದ ಸಂಜೆಯ ವರೆಗೆ—ಹುಟ್ಟಿದಂದಿನಿಂದ ಸಾಯುವ ವರೆಗೆ— ದಣಿವು ಎಷ್ಟಿದೆ, ಸಾಕಾಗಿದೆ ಬೇಡ ಎಂದರೂ ಬೇರೆಯವರು ಇದ್ದರೂ, ದುಡಿವವರು ಇದ್ದೇ ಇರುತ್ತಾರೆ. ಸಾಮಾನ್ಯವಾಗಿ ೫೫ ವರುಷಗಳ ಆಯುಷ್ಯವಾದ ಕೂಡಲೆ ಇಲ್ಲವೆ ಮೂವತ್ತು ವರುಷಗಳ ಕಾರ್ಯವಾಗುವಷ್ಟು ಯಂತ್ರವು ತಿರುಗಿದೊಡನೆ, ಪ್ರತಿಯೊಬ್ಬರು ಬಿಡುವನ್ನು ಪಡೆಯಬೇಕು ಎಂಬ ನಿಯಮಗಳನ್ನು ಮಾಡಿದ್ದರೂ, ಹೆಚ್ಚು ದುಡಿಯುವ ಜನರು ಸಿಕ್ಕೇಸಿಕ್ಕುತ್ತಾರೆ. ಶಾಂತದಿನಗಳಲ್ಲಿ, ಸಂಬಳವು ಸಿಕ್ಕುವುದಿಲ್ಲ ಎಂಬ ಎದೆನೋವು ಇದ್ದರೂ, ತಮ್ಮ ಕಚೇರಿಯ ಬಳಯಲ್ಲಿ ಸುಳಿದಾಡಿಯಾದರೂ ಬರುವವರು, ಕೊನೆಗೆ ಅಲ್ಲಿಯ ಮಾತುಗಳನ್ನಾದರೂ ಆಡಿ ಸಮಾಧಾನ ಹೊಂದುವ ಕಾರ್ಯವಾಹಕರು ಇರುತ್ತಾರೆ. ನಿರ್ವಾಣವಲ್ಲಿ ಪ್ರವೇಶ ದೊರೆಕಿಸಬೇಕಾದರೆ ಒಂದಾಣೆ ವೆಚ್ಚಮಾಡಬೇಕು ಎನ್ನುವಂತಹ ಪ್ರಸಂಗ ಬಂದರೂ, ಹಾಗೆ ಮಾಡಿ ಅಲ್ಲಿಯ ಚಲನವಲನ, ಕಾರ್ಯಚಾತುರ್ಯ, ಸುಧಾರಣೆ-ಪ್ರಗತಿ ಮುಂತಾದುವುಗಳನ್ನು ತಿಳಿಮಕೊಳ್ಳಲು ತವಕಗೊಳ್ಳುವ ಮಹಾವಿಭೂತಿಗಳು ಕಡಮೆಯಿಲ್ಲ. ಇವು ಜನರೇ ಕಡಮೆಯೆನಿಸುವ ಯುದ್ಧದಿನಗಳಲ್ಲಿಯಂತೂ ಜನರ ಉತ್ಸಾಹದ ಎಣಿಕೆ-ಅಳತೆಗಳೆ ತಿಳಿಯವು. ಬೂರು ಹಗಲು-ಇರುಳು ಸಹ ದುಡಿಯಬಲ್ಲೆವು ಎಂದು ಎದೆ ತಟ್ಟಿಕೊಂಡರೆ, ಯಾರು ಎರಡು ಇಲ್ಲವೆ ಹೆಚ್ಚು ಕಡೆ ಕೆಲಸ ಮಾಡಬಹುದು ಎಂದು ಜನ್ನನ್ನು ಚಪ್ಪರಿಸಿಕೊಳ್ಳಬಹುದು. ಮುದುಕರು ನಿವೃತ್ತರಾದರೂ ಕೂಡ ಕೆಲಸಕ್ಕೆ ಪ್ರವೃತ್ತರಾಗುವುದಕ್ಕೆಂದು, ಬಾಗಿದ ಬೆನ್ನನ್ನೆ ಕೈಯಿಂದಾದರೂ ಅಡ್ಡಿಯಿಲ್ಲ ಎತ್ತಿ, ಸೆಟೆಯಿಸಿ ಹಿಡಿದು, ನಿಮಿಷಾರ್ಧದ ಮುಗುಳುನಗೆಯನ್ನು ಬೀರಬಹುದು. ಇತ್ತ ಹುಡುಗರು ಮತ್ತು ಹೆಂಗುಸರ ಹುರುಪಿಗೂ ಆಗ ಸುಗ್ಗಿಯೆನ್ನ ಬಹುದು ಅದರಲ್ಲಿಯೂ ಅವರ ಉತ್ಸಾಹವು ಹೆಚ್ಚಾಗುವಂತೆ ಆ ಕಾಲದ ಸರಕಾರಗಳು ಅವರ ವಿಷಯದಲ್ಲಿ ಕೆಲಸದ ನಿಯಮಗಳನ್ನು ಸಾಕಷ್ಟು ಸಡಿಲುಗೊಳಿಸಿ, ಬಿಡುವಿನ ನಿರ್ಬಂಧಗಳನ್ನು ಮಾತ್ರ ಬಿಗಿ ಮಾಡಿಕೊಳ್ಳುವರು.

ಅವರೂ ಸಾಮಾನ್ಯವಾಗಿ ಮನುಷ್ಯನಿಗೆ ಬಿಡುವು ಬೇಕು ಎನಿಸುವದು–ಎರಡು ಕಾರಣಗಳಿಗಾಗಿ. ಮೊದಲನೆಯದಾಗಿ ವೇಷದ ದಣಿವು; ಎರಡನೆಯದಾದರೂ ಹೆಚ್ಚು ಮಹತ್ವವನ್ನು ಪಡೆಯಬಹುದಾದುದು– ಮನದ ದಣಿವು; ಕೆಲಸ ಮಾಡಲಿಕ್ಕೆ ಕುಣಿಯುತ್ತ, ಪುಟಿಯುತ್ತ, ಹುರುಪಿನಿಂದ ನೆಗೆಯುತ್ತ ಬಂದರೂ, ಹಣ್ಣು ಮುದುಕರನ್ನು ಯಾರು ಕೆಲಸಕ್ಕೆ ತೆಗೆದುಕೊಳ್ಳಬಹುದು? ಮಕ್ಕಳನ್ನು ಆಡಿಸುವುದು ಇಲ್ಲವೆ ಚಿಕ್ಕೆಗಳನ್ನು ಎಣಿಸುವುದು ಇವನ್ನಷ್ಟು ಬಿಟ್ಟು ಅವರು ಯಾವ ಕೆಲಸಕ್ಕೆ ಅರ್ಹರೆನಿಸಬಹುದು— ಸೊಂಟ ಬಾಗಿದ, ಧ್ವನಿನಡುಗುವ, ಕಾಲು ಕುಸಿಯುವ ಮುದುಕರು? ಅದರಂತೆಯೆ ಸತತವಾಗಿ ಹತ್ತು-ಹನ್ನೆರಡು ಗಂಟೆಗಳ ವರೆಗೆ ಹಸಿದೆ, ನೀರಡಿಕೆಗಳ ಪರಿವೆಯಿಲ್ಲದೆ ಒಂದೇ ರೀತಿಯಾಗಿ ದುಡಿದರೆ, ಮನುಷ್ಯನು ಕಣ್ಣಿಗೆ ಕತ್ತಲು ಬಂದು ಕೊಪ್ಪಳಿಸಿ ಬೀಳಲಿಕ್ಕಿಲ್ಲವೆ? ಚಂಚಲರಾದ ಮಕ್ಕಳದು ಮತ್ತೊಂದು ಉದಾಹರಣೆ: ಅವರಲ್ಲಿ ಕಾರ್ಯದ ಉತ್ಸಾಹ ಹೆಚ್ಚು ಎಂಬುದು ಕೂಡ ಮಾತಾಗಿದ್ದರೂ, ಅದು ಕಡೆಯುವುದೆಷ್ಟು ಕಾಲಪರ್ಯಂತ? ಅಂತೆಯೆ ಯಾವುದಾದರೊಂದು ಮಹತ್ವದ, ಪೂರ್ಣಗಾರಿಕೆಯ ಇಲ್ಲವೆ ಹೆಚ್ಚು ಹೊತ್ತು ಹಿಡಿದ ಕೆಲಸವನ್ನು ಅವರಿಗೊಪ್ಪಿಸಬಹುದೆ? ಅವರಿಗೆ ಹಾಗೆ ಒಪ್ಪಿಸದಿರುವುದಕ್ಕೆ ಕಾರಣ ಎಂದರೆ ಅವರು ದಣಿಯಬಹುದು ಇಲ್ಲವೆ ಆ ಕೆಲಸವನ್ನೆ ನುರೆಯಬಹುದು ಎಂದಲ್ಲ—ಆದರೆ ಸ್ಥಿತಿಯೊಂದು ಸಂಗತಿಯನ್ನು ಗೃಹಿಸುತ್ತ ಬೆಳೆಯುವ ಅವಸ್ಥೆಯಲ್ಲಿರುವ ಅವರ ಮೈ-ಮನಗಳಿಗೆ, ಸಾಕಷ್ಟು ಬಿಡುವಿನ ಕೆಲಸವೆ ಯೋಗ್ಯ ಎನ್ನುವುದು. ಇಂತೆಯೆ ಅವರಿಗೆ—ಎಂದರೆ ಆ ಅವಧಿಯಲ್ಲಿ-ಮನುಷ್ಯನಿಗೆ—ಓದು ಕಲಿಯಬೇಕು ಎಂದು ಹಚ್ಚುವುದು.

ಓದು-ಬರೆಹಗಳು ಬಿಡುವಿನ ಕೆಲಸಗಳು ಎಂದೆನ್ನುವುದಕ್ಕಿಂತ ಓದು-ಬರೆಹಗಳಿಗೆ ಬಿಡುವು ಹೆಚ್ಚಾಗಿ ಅವಶ್ಯಕ ಎಂದೆನ್ನಬಹುದೆ? ಚೀನೀಯ ತತ್ವಜ್ಞಾನಿಗಳು ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ, ಸಾಹಿತ್ಯ, ಸಂಗೀತ, ಲಲಿತಕಲೆಗಳು ಮುಂತಾದುವುಗಳೆಲ್ಲ—ಎಂದರೆ ಸಂಸ್ಕೃತಿ ಎಂಬ ಒಂದೇ ವ್ಯಾಪ್ತಿಯಿಂದ ಹೇಳಲಾರದಂತಹ ಒಂದೇ ಶಬ್ದದಲ್ಲಿ ಅಡಕವಾಗಿರುವ ವಿಷಯಗಳಿಗೆ ಬಿಡುವೇ ಜನ್ಮದಾತೃ ಎಂದೇ ಹೇಳುವರು. ದುಡಿಯುವುದಕ್ಕಿಂತ ಬಿಡುವುದೇ ಲೇಸು ಎಂದು ಯಾರೂ ಹೇಳದಿದ್ದರೂ, ದುಡಿಮೆಗಿಂತ ಬಿಡುವು ಹೆಚ್ಚಿನದು ಎಂಬುದು ನಿಸ್ಸಂದಿಗ್ಧವಾದ ಮಾತು.

ಕಲಿಯುವದನ್ನು ಬಿಡಿಸಿಯಾಗಲಿ, ಮುಗಿಸಿಯಾಗಲಿ, ಕೆಲಸವನ್ನು ಹಿಡಿದು, ಪ್ರತಿದಿನ ನಿರ್ದಿಷ್ಟವಾದ ನೇಳೆಯಲ್ಲಿ ಕೆಲಸದಲ್ಲಿ ನಿರತನಾಗಿ, ನಿರ್ದಿಷ್ಟವಾದ ದಿನ ಸಂಬಳವನ್ನು ಪಡೆಯುತ್ತ, ಎರಡು ಹೊತ್ತು ಊಟವ ಮನೆಯ ಊಟ, ಚಹವೇಗಡಿಗಳ ಚಹ ಇವುಗಳಿಂದ ತೃಪ್ತನಾಗಿ ಮೋಜಿನಲ್ಲಿ ವೇಳೆಗಳೆಯುವ ನವಯುವಕನಿಗೆ, ತುಸು ದಿವಸಗಳದಾದರೂ ಬಿಡುವು ಬೇಕು— ಎನಿಸುವುದು. ಯಾಕೆ? ಎಂದರೆ 'ಖಾಸಗಿ ಕಾರಣಗಳಿಗೆ' ಎಂದೇ ಆತನು ತನ್ನ ಕಚೇರಿಯಲ್ಲಿ ಉತ್ತರ ಕೊಡುವನು. ಪ್ರತಿದಿನದ—ಅನಾದ್ಯನಂತವೇನೊ ಎನಿಸುವಂತಹ— ಆ ಒಂಟಿಗತನಕ್ಕೆ ಹೇಸಿ, ಆತನು ಮಡದಿಯನ್ನು ಪಡೆಯುವ ಉದ್ಯೋಗಕ್ಕಾಗಿ, ಅತ್ತಿತ್ತ ಅಲೆದಾಡುವ ಕಾರಣದಿಂದ ಬಿಡುವನ್ನು ಬೇಡುವನು. ಆತನಿಗೆ ಹಾಗೆಯೆ 'ಇಲ್ಲ' ಎಂದು ಸಾಕಷ್ಟು ದಿನಗಳ ವರೆಗೆ ಹೇಳಿ ನೋಡಿದರೆ, ಆತನಿಂದ ಮುಂದೆ ಎಂದಿನಂತೆ ಕೆಲಸ ಸಾಗಬಹುದೆ? ಆಗ ಅವನ ದುಡಿಮೆಗಿಂತ ಆತನ ಬಿಡುಗಡೆಯೆ ಲಾಭದಾಯಕ ಎನಿಸುವುದರಲ್ಲಿ ಎಷ್ಟೂ ಆಶ್ಚರ್ಯವಿಲ್ಲ. ಅದರಂತೆಯೆ ಹೆಂಡತಿಯನ್ನು ಕರೆದುಕೊಂಡು ಬರುವುದು, ಮಕ್ಕಳನ್ನು ಕಂಡುಕೊಂಡು ಬರುವುದು, ತಂದೆ-ತಾಯ್ಗಳನ್ನು ಭೆಟ್ಟಿಯಾಗಿ ಬರುವುದು, ಗೆಳೆಯರೊಡನೆ ಮಾತನಾಡಿ ಬರುವುದು, ಹೊಲ-ಮನೆಗಳ ವ್ಯವಸ್ಥೆ ನೂಡಿ ಬರುವುದು, ಮುಂಗಲಸಮಯಗಳ ನೋಡು ಪಡೆದು ಬರುವುದು, ಹೊಸ ಊರುಗಳನ್ನು ನೋಡಲಿಕ್ಕೆ ಹೋಗುವುದು, ಸಮ್ಮೇಳನ-ಸಭೆಗಳಲ್ಲಿ ಭಾಗವಹಿಸುವುದು, ಕೊನೆಗೆ ದುಡಿದು ದುಡಿದು ಶುಂಬಾ ಜೇಸತ್ತಿರುವೆವು, ಇನ್ನು ಕೆಲಸ ಮಾಡುವುದು ಸಾಧ್ಯವೆ ಇಲ್ಲ, ಕೆಲವು ದಿನಗಳ ಮಟ್ಟಿಗಾತರೂ ಬಿಡುವು ಬೇಕು—ಈ ಗಾಣದ ತಿರುಗಣಿಯಿಂದ' ಎಂಬುವ— ಅನೇಕಾನೇಕ ಕಾರಣಗಳಿಗಾಗಿ ಬಿಡುವು ಬೇಕು ಎನಿಸುವುದು.... ಇಂತಹ ಎಲ್ಲ ಕಾರಣಗಳು ಎರಡನೆಯ ಬಗೆಯವೆ ಎಂದೆನ್ನಬಹುದು. ಮುನ್ನೆಚ್ಚರಿಕೆ ನಮ್ಮ ಬೇಡಿಕೆಗಳನ್ನೆಲ್ಲ ಪೂರೈಸುವ ಸಹಜ ಸರಲವಾದ ದಾರಿಯನ್ನು ತೊರೆಯದೆ, ನಾವು ಕುಟುಂಬ, ಮನೆ, ಮನೆತನ, ಸಮಾಜ, ಸಂಘ-ಸಂಸ್ಥೆಗಳು, ಊರು-ಕೇರಿಗಳು; ನಾಡು-ನುಡಿಗಳು ಎಂದು ನಮ್ಮ ವ್ಯಾಪ್ತಿಯನ್ನು ಬೆಳೆಯಿಸಿಕೊಂಡಿರುವೆವೇಕೇ ಏನು, ಈ ಬಗೆಯಾಗಿ ಬಿಡುವು ಬೇಕು ಎನಿಸುವುದು? ಕೆಲಸ ಮಾಡುವುದಕ್ಕೆಂತಲೆ ಇಂತಹ ಸಂಸ್ಥೆಗಳನ್ನು ನಾವು ಕಟ್ಟುವುದು ಒಂದು ಬಗೆಯಾದರೆ, ಆ ಸಂಸ್ಥೆಯ ಲಾಭವನ್ನು, ಹಿತವನ್ನು, ಸುಖವನ್ನು ಪಡೆಯುವುದಕ್ಕಾಗಿ ಬಿಡುವನ್ನು ಬೇಡುವುದು ಮುಂದಿನ ಬಗೆಯೆಂದೇ ಹೇಳಬಹುದು. ಈ ಬಗೆಯಾಗಿ ವಾರದಲ್ಲಿ ಒಂದು ದಿನ, ವರುಷದಲ್ಲಿ ಒಂದು ತಿಂಗಳು ಮತ್ತು ಪ್ರತಿದಿನದಲ್ಲಿ ಒಂದೆರಡು ಗಂಟೆಯ ಕಾಲ—ಬಿಡುವು ಆವಶ್ಯಕ ಎನಿಸಬೇಕಾದರೆ, ದುಡಿಮೆಗಿಂತ ಬಿಡುವು ಎಷ್ಟೋ ಪಟ್ಟು ಉತ್ಸಾಹವನ್ನು ಹೆಚ್ಚು ಮಾಡುವ ಒಂದು ಶಕ್ತಿಯೆ ಅಲ್ಲವೆ?

'ಇನ್ನು ನಮಗೇನು ಬಿಡುವು ಬೇಡ' ನಮಗೆ ಬಿಡುವು ಸಿಕ್ಕುವುದೇ ಇಲ್ಲ' 'ನಮ್ಮ ಬಿಡುವು ಎಂದರೆ ಬೇರೆ ಕೆಲಸ' ಎನ್ನುವವರು ಕೂಡ ಒಂದಿಲ್ಲೊಂದು ಬಗೆಯಿಂದ—ತಿಳಿಯದೆ ಆಗಲಿ ತಿಳಿದೇ ಆಗಲಿ—ಬಿಡುವನ್ನು ಪಡೆಯುತ್ತಿರುವರು; ತಮ್ಮ ದಿನದ ಕೆಲಸದಿಂದ ತುಸುವಾದರೂ ಬಿಡುಗಡೆಯನ್ನು ಬಯಸುತ್ತಿರುವರು. 'ಬರಿಹಗಾರರ ದೊಂದು ಬಿಡುವಿನವರ ತಂಡ' ಎಂದು ಮೂದಲಿಸುವ ರಾಜಾರ್ಯ ಧುರಂಧರರು ಸಹ ವರುಷದಲ್ಲಿ ಕೆಲಕಾಲ, ಸೆಕೆಯ ನೆವವನ್ನು ಮಾಡಿಯಾಗಲಿ, ಆರೋಗ್ಯವನ್ನು ಸುಧಾರಿಸಿಕೊಳ್ಳುವ ನದುದ್ದೇಶದಿಂದಾಗಲಿ, ಬೆಟ್ಟದ ತುದಿಗಳನ್ನು ಸೇರಿ, ಅಲ್ಲಿ ಅದೇ ಬರೆಹಗಾರರು ಬರೆದ ಪುಸ್ತಕಗಳನ್ನು ಓದುತ್ತ, ತಮ್ಮ ಮನವನ್ನು ನಿಚ್ಚಳಗೊಳಿಸಿಕೊಳ್ಳುವರು. 'ನನಗೆ ಅತ್ತಿತ್ತ ನೋಡಲಿಕ್ಕೆ ಹೊತ್ತು ಎಲ್ಲಿದೆ?' ಎಂದು ಎದೆಯೆದೆ ಬಡಿದುಕೊಳ್ಳುತ್ತ ದುಡಿದು ಬೆವರು ನುರಿಸುವವರು ಕೂಡ ಒಂದು ಚಿತ್ರಪಟವನ್ನು ನೋಡುವ ನೆವದಿಂದಾಗಲಿ, ಒಂದು ನಾಟಕವನ್ನು ನಿರೀಕ್ಷಿಸುವ ಹೇತುವಿನಿಂದಾಗಲಿ ಬಿಡುವನ್ನು ಪೇಕ್ಷಿಸುವರು, ಪಡೆಯುವರು. ಇತ್ತ ವ್ಯಾಪಾರಿಗಳದೊಂದು ರೀತಿಯೆ ಬೇರೆ. 'ನಮ್ಮದೇನು ಕಚೇರಿಯೆ....ಇಂತಿಷ್ಟು ಗಂಟೆಗೆ ಹೋಗಿ ಇಂತಿಷ್ಟು ಗಂಟೆಗೆ— ಕೆಲಸ ಆಗಲಿ ಬಿಡಲಿ—ತಿರುಗಿ ಬಂದು ಬಿಡಲಿಕ್ಕೆ! ನಮ್ಮ ಕೆಲಸವೂ ಸದಾ ಸಾಗತಕ್ಕದ್ದೆ!' ಎಂದು ಹೇಳುವ ಅವರಾದರೂ, ತಮಗೆ ಬೇಕಾದಾಗ ದುಡಿದು ಬೇಕಾದಾಗ ಬಿಡುವನ್ನು—ಅನಿಯಂತ್ರಿತ ಕಾಲದ ಬಿಡುವನ್ನು— ಪಡೆದೇ ಪಡೆಯುವರು.

ಇಲ್ಲಿಯ ಬಿಡುವಿನ ವಿಷಯದ ಒಂದೆರಡು ಮೋಜಿನ ಸಂಗತಿಗಳನ್ನು ಹೇಳಬಹುದು. ಅವೂ ಕೇಳಿದ ಸಂಗತಿಗಳು; ಓದಿ ತಿಳಿದ ದೃಷ್ಟಾಂತಗಳು! ಒಬ್ಬ ಗುಮಾಸ್ತ ತನ್ನೂರನ್ನು ಬಿಟ್ಟು ಬಹುದೂರದ ಒಂದು ಕಡೆಗೆ ಕೆಲಸಕ್ಕೆ ಹೋಗಿದ್ದನಂತೆ. ಆತನ ಮಡದಿಯು ತವರಿಗೆ ಬಾಣಂತನಕ್ಕೆಂದು ಹೋಗಿ ಆಗಲೆ ಕೆಲವು ತಿಂಗಳುಗಳಾಗಿದ್ದುವು. ಇತ್ತ ಆತ ತನ್ನ ಮೇಲಿನವರಿಗೆ ಒಂದೇ ಸವನೆ ಬಿಡುವಿಗಾಗಿ ಬಿನ್ನವಿಸಿಕೊಳ್ಳುತ್ತಿದ್ದ. ಆತನ ವಿಷಯದ ಎಲ್ಲ ಸಂಗತಿಗಳು ಗೊತ್ತಿರುವ ಮೂಲಕ ಅಧಿಕಾರಿಯೊಬ್ಬನು ಆತನನ್ನು ಕೆಣಕಿದ: 'ಸುಮ್ಮಸುಮ್ಮನೆ ಇಂತಹ ದಿನಗಳಲ್ಲಿ ಏಕೆ ಬಿಡುವನ್ನು ಬೇಡುತ್ತಿಯೆ?' ಎಂದು. ಅದಕ್ಕೆ ಆತ 'ನನ್ನ ಚಿಕ್ಕಮಗುವನ್ನು ಕಾಣಬೇಕಾಗಿದೆ—ಆರೇಳು ತಿಂಗಳಾದುವು!' ಎಂದು ಬಿದ್ದ ದನಿಯಲ್ಲಿ ಹೇಳಮುಗಿಸಿದ. ಅದಕ್ಕೆ ಅಧಿಕಾರಿಯು ಗಹಗಹಿಸಿ ನಕ್ಕು— 'ಓಹೊ ಇದೇ ಕಾರಣವೊ ನೀನು ಬಿಡುವು ಬೇಡುವದಕ್ಕೆ! ಅಷ್ಟೇಕೆ ಮುಜ್ಜುನುರಿಯದಕ್ಕೆ? ಮಗುವಿನೊಡನೆ ಮಡದಿಯನ್ನೂ ಕಂಡುಬರಬೇಕಾಗಿದೆ ಎಂದು ಹೇಳಲ್ಲ. ಹೋಗಪ್ಪಾ ಹೋಗು, ನೀನು ದಿನದ ದಪ್ತರಿನಲ್ಲಿ ಅಲ್ಲಿ ಬರೆಯಬೇಕಾದುದನ್ನು ಬಿಟ್ಟು ನಿನ್ನ ಮಡದಿ-ಮಕ್ಕಳ ಚಿತ್ರವನ್ನೆ ತೆಗೆಯುತ್ತ ಕೂಡ್ರಬಹುದು' ಎಂದು ಅವನನ್ನು ಬೀಳ್ಕೊಟ್ಟ.

ಇನ್ನೊಂದು ಆಮೇರಿಕೆಯ ವೃತ್ತ. ಸೈನ್ಯದಲ್ಲಿ ಸೇರಿದ ಒಬ್ಬನು ಒಂದೆರಡು ಬಾರಿ ಅತಿಪ್ರಯಾಸದಿಂದ ಹತ್ತತ್ತು ದಿನಗಳ ಬಿಡುವನ್ನು ಪಡೆದು, ತನ್ನ ಮನೆಮಾರು, ಮಡದಿ-ಮಂದಿಗಳನ್ನು ಕಂಡು ಬಂದಿದ್ದ. ಇತ್ತ ಆತನಿಗೆ ಬರುತ್ತಿದ್ದ ಪತ್ರಗಳಂತೂ ಒಂದು ಚಿಕ್ಕ ಗಾಡಿಯನ್ನೇ ಬೇಡುತ್ತಿರಬಹುದು—ಹೊತ್ತು ತರಲಿಕ್ಕೆ. ಆದರೂ ಆತನಿಗೆ ಅಸಮಾಧಾನ 'ಇದೇನು ತೊಂದರೆಯಲ್ಲಿ ಸಿಕ್ಕಿ-ಬಿದ್ದೆನಲ್ಲ! ನಾನು ಸುಖವಾಗಿ ಇದ್ದೇನೆಂದರೆ ಇಲ್ಲ'—ಎಂದು ಪೇಚಾಡುತ್ತಿದ್ದಾಗ—ಆತನಿಗೆ ಮಡದಿಯಿಂದ ಒಂದು ಓಲೆ ಬಂದಿತಂತೆ: 'ಮಗುವಿಗೆ ಹೆಸರೇನಿಡಬೇಕು?' ಎಂದು ಅದರಲ್ಲಿ ಆಕೆ ಕೇಳಿದ್ದಳಂತೆ. ಆತ ತುಸು ಮೋಜಿನಿಂದ, ಹೆಚ್ಚು ರೊಚ್ಚಿನಿಂದ 'ಬಿಡುವು (Furlough)' ಎಂದಿಡಲು ಬರೆದನಂತೆ.

ಇನೆರಡೂ ಉದಾಹರಣೆಗಳಲ್ಲಿ ಬಿಡುವು ಹೇಗೆ ಆವಶ್ಯಕ ಎಂಬುದನ್ನು ತಿಳಿದುಕೊಂಡು, ಆ ಬಿಡುವಿಗೆ ಕಾರಣ ಎಂತಹ ಬಗೆಯದು ಎಂಬುದನ್ನು ಊಹಿಸಬಹುದು.

ಉತ್ತರ ಕರ್ನಾಟಕದ ಕ್ಷಾಮನಿವಾರಣೆಗೆ ಕೆಲವು ಸಲಹೆಗಳು

'ಶಾಂತ-ಲೀಲಾ'

ತಮ್ಮೆದುರಿನಲ್ಲಿರುವ ಸಮಸ್ಯೆಗಳೆಡೆಗೆ ಜನತೆಯ ಲಕ್ಷ್ಯವೆಳೆಯುವುದೇ ಈ ಲೇಖನದ ಉದ್ದೇಶ. ಈ ಲೇಖನದಲ್ಲಿ—ನಿರುದ್ಯೋಗ ಸಮಸ್ಯೆಯನ್ನು ಕುರಿತಾಗಲಿ, ಔದ್ಯೋಗೀಕರಣದ ವಿಷಯವನ್ನಾಗಲಿ, ಅದಕ್ಕೆ ಸಂಬಂಧಿಸಿದ ಎಂಜನಿಯರಿಂಗ ವಿಚಾರಗಳನ್ನಾಗಲಿ, ಇಲ್ಲವೆ ಇಲ್ಲಿ ವಿವರಿಸಲಾಪ ಯೋಜನೆಯು ಫಲಕಾರಿಯಾಗುವ ಮೊದಲು ರೂಪುಗೊಳ್ಳಬಹುದಾದ ಎಂಜನಿಯರಿಂಗ್ ಸಮಸ್ಯೆಗಳನ್ನಾಗಲಿ ಚರ್ಚಿಸಲಾಗಿಲ್ಲ. ಅಲ್ಲದೆ ಈ ಯೋಜನೆ ಕಾರ್ಯಕಾರಿಯಾದನಂತರ ಸುಲಭಸಾಧ್ಯವಾಗಿರುವ ಔದ್ಯೋಗೀಕರಣವನ್ನೂ, ನೀರಾವರೀ ಸೌಕರ್ಯಗಳನ್ನೂ, ಮತ್ತು ತತ್ಪರಿಣಾಮವಾಗಿ ಜನಸಾಮಾನ್ಯರ ಆರೋಗ್ಯದಲ್ಲಿ ಆಗುವ ಬದಲಾವಣೆಗಳನ್ನೂ ಇಲ್ಲಿ ಚರ್ಚಿಸಿಲ್ಲ. ಈ ಸಮಸ್ಯೆಗಳನ್ನು ಆಯಾ ವಿಷಯಗಳಲ್ಲಿ ತಜ್ಞರಾದವರು ಚರ್ಚಿಸಬೇಕಲ್ಲದೆ, ಅವರು ಅವನ್ನು ಬಿಡಿಸಲು ಅವಶ್ಯಕವಾದ ಯೋಜನೆಗಳನ್ನು ಸಿದ್ಧಗೊಳಿಸಬೇಕು. —ಲೇಖಕಿ.

ಕರ್ನಾಟಕ, ಕನ್ನಡದೇಶ, ಕರಿನಾಡು, ಕವ್ವುಜನರ ದೇಶ, ಕರಿಭೂಮಿಯ ದೇಶ—ಎಂದು ವಿಧವಿಧವಾಗಿ ಹೇಳುವವರು, ಇತಿಹಾಸದಲ್ಲಿ ಕ್ಷಾಮದೇವತೆಯ ಬೀಡಿದೆಂದು ಹೇಳಿರುವಂತಿಲ್ಲ. ಪಶ್ಚಿಮ ಚಾಳುಕ್ಯರು ಆಳಿದ, ವೈಭವಗೊಂಡ ವಿಜಯನಗರ ಸಾಮ್ರಾಜ್ಯದಲ್ಲಿದ್ದ ಮುಖ್ಯಭಾಗಗಳು ಪದೇ ಪದೇ ನಿರ್ಭಾಗ್ಯಸ್ಥಿತಿಯಲ್ಲಿದ್ದಿದ್ದರೆ, ಆ ಚಕ್ರಾಧಿಪತ್ಯಗಳು ಯಶಸ್ವಿಯಾಗಲು ಸಾಧ್ಯವಾಗುತ್ತಿರಲಿಲ್ಲ. ಈಗಲೋ, ಅರ್ಧ ಅಥವಾ ಮುಕ್ಕಾಲು ದಿವಸ ಬಳ್ಳಾರಿಯಲ್ಲಿ ಕ್ಷಾಮ, ರಾಯಚೂರಿನಲ್ಲಿ ಮಳೆಯಿಲ್ಲ, ಬಿಜಾಪೂರದಲ್ಲಿ ನೀರಿಲ್ಲ, ಸೋಲಾಪುರದಲ್ಲಿ ದವಸವಿಲ್ಲ ...ಎಂಬ ಮಾತು ಸಾಧಾರಣವಾಗಿದೆ. "ದಿನ ಸಾಯುವವರಿಗೆ ಆಳುವವರಾರು?" ಎಂಬಂತೆ, ನಿರ್ಭಾಗ್ಯತೆಯೇ ಆ ಪ್ರದೇಶಗಳ ಯೋಗ್ಯತೆಯೆಂದು ಜನರು ತೆಪ್ಪಗಾಗಬಹುದು; "ಇದು ಸರಿಯೇ?" ಎಂಬುದನ್ನು ಸರಳವಾಗಿ ಚರ್ಚಿಸಬಹುದು.

ಇತಿಹಾಸ ಕಾಲದಲ್ಲಿ ಈ ಕನ್ನಡಸಾಮ್ರಾಜ್ಯದಲ್ಲಿ ನೀರು ಸುಬ್ಬಿ ಕೊಂಡು ನಿಲ್ಲುವ ಅನೇಕ ಕೆರೆ–ಕುಂಟೆಗಳಿದ್ದಿರಬೇಕು. ನೀರಿಲ್ಲದ ಸ್ಥಳಗಳಲ್ಲಿ ಪ್ರಸಿದ್ಧವಾದ ರಾಜ್ಯಗಳೂ ರಾಜಧಾನಿಗಳೂ ಇರಲು ಅಸಾಧ್ಯ. ಅಕಬರ್ ಮಹಾಶಯನು ಕಷ್ಟಪಟ್ಟು ಫತ್ತೇಪೂರ್-ಸಿಕ್ರಿಯನ್ನು ಕಟ್ಟಿದರೂ, ನೀರಿನ ಆಶ್ರಯವಲ್ಲಿಲ್ಲದುದರಿಂದ, ಅವನ ಮಗ ಜಹಾಂಗೀರನು ಮರಳಿ ಆಗ್ರಾಕ್ಕೆ ಹಿಂದಿರುಗಿದನು. ಉತ್ತರದಿಂದ ದಕ್ಷಿಣಕ್ಕೆ ಬಂದ ದಂಡಯಾತ್ರೆಗಳಂದಲೂ, ಉತ್ತರಕರ್ನಾಟಕಪ್ರದೇಶವು 'ಕಾಳಿಗಗಳ ಕಣ' (Cock pit of Battle) ಆದುದರಿಂದಲೂ, ಶತ್ರುಗಳಿಗೆ ಸಾಮಾನ್ಯ ಸಿಕ್ಕಬಾರದೆಂದು ನೀರಿನ ವಸತಿಗಳನ್ನು ಒಡೆದು, ಬಾವಿಗಳಿಗೆ ಪಾಷಾಣ (ವಿಷ) ವನ್ನು ಸೇರಿಸುತ್ತಿದ್ದರು ಇದು ಅನೇಕ ಶತಮಾನಗಳಲ್ಲಿ ಪದೇ ಪದೇ ಆದುದರಿಂದ, ನದಿಗಳನ್ನು ಬಿಟ್ಟು ಮಿಕ್ಕ ಜಲಾಶಯಗಳೆಲ್ಲಾ ನಿರ್ನಾಮವಾದವು. ಜನಗಳು ಮಳೆಯ ನೀರಿಗೆ ಶರಣು ಹೋಗಬೇಕಾಯಿತು. ಈ ಪ್ರದೇಶಗಳೆಲ್ಲೆಲ್ಲ ಸಕಾಲಕ್ಕೆ ಮಳೆಬಾರದಿದ್ದರೆ ಕ್ಷಾಮವು ಬರಲು ಪ್ರಾರಂಭವಾಯಿತು.

ಔರಂಗಾಬಾದ್ ಜಿಲ್ಲೆಯಿಂದ ಬಳ್ಳಾರಿ-ಚಿತ್ರದುರ್ಗಗಳವರೆಗೂ ಇರುವ ಬಯಲುಪ್ರಾಂತಕ್ಕೆ "ಬರದ ದೇಶ" ಎಂದು ಅನೇಕರು ಹೇಳಬಹುದು. ಇಲ್ಲಿ ವರ್ಷಕ್ಕೆ ಸರಾಸರಿ ಇಪ್ಪತ್ತು ಇಂಚು ಮಳೆಯಾದರೂ ಬೀಳುತ್ತದೆ. ಸಾಧಾರಣವಾಗಿ ಈ ಮಳೆಯು ಸಕಾಲದಲ್ಲಿ ಬಿದ್ದರೆ ಬೆಳೆಯು ನಷ್ಟವಾಗುವುದಿಲ್ಲ. ದೊಡ್ಡ ದೊಡ್ಡ ಕೆರೆಗಳಿದ್ದರೆ ಈ ಮಳೆಯ ನೀರನ್ನು ಒಟ್ಟುಗೂಡಿಸಿ, ಬೇಕಾದಾಗ ವ್ಯವಸಾಯಕ್ಕೆ ಉಪಯೋಗಿಸಬಹುದು. ಕೆರೆಗಳನ್ನು ಕಟ್ಟುವುದು ಹಿಂದಿನ ಕಾಲದಲ್ಲಿ ದೊಡ್ಡ ಧರ್ಮವೆಂದು ಜನಗಳು ತಿಳಿದಿದ್ದರು. ಮರಳಿ ಈ ಪ್ರದೇಶಗಳಲ್ಲಿ ಕೆರೆ–ಕಟ್ಟೆಗಳನ್ನು ನಿರ್ಮಿಸಲು ಸಾಧ್ಯವೇ? ಈ ಮಾತನ್ನು ಅಲ್ಲಲ್ಲಿಯ ಜನರು ವಿಚಾರಮಾಡುವುದು ಅವಶ್ಯವಾಗಿದೆ.

ಕನ್ನಡದ ಬಯಲುಪ್ರಾಂತದಲ್ಲಿ ಕಾಡುಗಳು ವಿಶೇಷವಾಗಿಲ್ಲ. ಜೇಸಗೆಯಲ್ಲಿ ಬಿಸಿಲು ಹೆಚ್ಚು ಮತ್ತು ಜೌಗು ಕಡಿಮೆ. ಮಳೆಗಾಲದಲ್ಲಿ ಮಳೆಗಿಂತ ಗಾಳಿ ಹೆಚ್ಚು. ಈ ಕಾರಣಗಳಿಂದ, ಈ ಬಯಲು ಪ್ರದೇಶದಲ್ಲಿ ಜಲಾಶಯಗಳಲ್ಲಿರುವ ನೀರು, ಬಹಳವಾಗಿ ನೀರಿನ ಆವಿಯಾಗಿ, ಪ್ರಯೋಜನವಿಲ್ಲದಂತೆ ಆಗುತ್ತದೆ. ಜುತ್ತು ಗಾಳಿಯಲ್ಲಿ ಜೌಗು ಕಡಿಮೆಯಾಗಿರುವುದರಿಂದ, ಭೂಮಿಯು ಬೇಗ ಒಣಗುತ್ತದೆ. ಒಣಗಿದ ಭೂಮಿಯ ಮೇಲೆ ಹೆಚ್ಚು ವೇಗದಿಂದ ಗಾಳಿಯು ಬೀಸಿದರೆ ಮಣ್ಣು ಮೇಲಕ್ಕೆ ಏಳುವುದು.

ವಿಜಾಪುರ ಮುಂತಾದ ಸ್ಥಳಗಳಲ್ಲಿ, ಸಾರವಾದ ಜಮೀನುಗಳೆದ್ದರೂ, ಸಾರವಾದ ಮತ್ತು ಫಲಕಾರಿಯಾದ ಮಣ್ಣು ಸುಮಾರು ಒಂಬತ್ತರಿಂದ ಹದಿನೆಂಟು ಅಂಗುಲದವರೆಗೆ ಮಾತ್ರ ಇದೆ. ಬಿಸಿಯಾದ ಮತ್ತು ಜೌಗಿಲ್ಲದ ಗಾಳಿಯು ಬಲವಾಗಿ ಬೀಸಿದರೆ, ಕಾಲಾಂತರದಲ್ಲಿ ಈ ಸಾರವಾದ ಮಣ್ಣು ನಷ್ಟವಾಗಿ, ದೇಶವು ಮರುಭೂಮಿಯ ಸಮಾನವಾಗಬಹುದು. ಅಮೇರಿಕದಲ್ಲಿ ಪ್ರೇರಿಗಳನ್ನು ಮತ್ತು ಕಾಡುಗಳನ್ನು ಸುಟ್ಟ ಮೇಲೆ, ಬಿಸಿಯಾದ ಗಾಳಿಯು ವೇಗದಿಂದ ಬೀಸಿ ಜಮೀನುಗಳನ್ನು ನಾಶಪಡಿಸಿನೆಯೆಂಬುದೂ, ಅದಕ್ಕೆ ಪ್ರತೀಕಾರ ಮಾಡಲು ಅಲ್ಲಿಯ ಜನರು ಪ್ರಯತ್ನ ಪಡುತ್ತಲಿದ್ದಾರೆಂಬುದೂ ಎಲ್ಲರಿಗೂ ತಿಳಿದ ವಿಷಯವಾಗಿದೆ.

ಆದುದರಿಂದ ಕರ್ನಾಟಕದ ಬಯಲು ಸೀಮೆಯಲ್ಲಿ (೧) ನೀರನ್ನು ಒಟ್ಟುಗೂಡಿಸಿಕೊಳ್ಳುವುದು. (೨) ಜಮೀನಿನ ಸಾರವತ್ತಾದ ಮಣ್ಣನ್ನು ನಾಶಪಡಿಸಿಕೊಳ್ಳದಿರುವುದು—ಈ ಎರಡು ಪ್ರಶ್ನೆಗಳಿಗೂ ಉತ್ತರ ಕೊಡಬೇಕು.

ಎರಡನೆಯ ಪ್ರಶ್ನೆಗೆ ಸುಲಭೋಪಾಯದಿಂದ ಕೆಲವು ಸೂಚನೆ ಕೊಡಬಹುದು ಕಾಡುಪ್ರದೇಶಗಳನ್ನು ಪುನರುಜ್ಜೀವನಗೊಳಿಸಬೇಕು; ಎಂದರೆ ಮರ-ಗಿಡಗಳನ್ನು ಅಕಾರಣವಾಗಿ ಮತ್ತು ವ್ಯರ್ಥವಾಗಿ ಕಡಿಯದೆ ಇರಬೇಕು. ಸಿಂಧದೇರದಲ್ಲಿ ಮತ್ತು ಅಮೇರಿಕಾದಲ್ಲಿ ಬೆಳೆಯಿಸಿರುವಂತೆ, ಗಾಳಿ ಮಣ್ಣನ್ನು ತೂರಿಸದಂತೆ ತಡೆಯಲು, ಉದ್ದವಾದ ಮರಗಳನ್ನು ಬೆಳೆಯಿಸಬೇಕು. ಸಿಂಧ ದೇಶದಲ್ಲಿ

ಗಾಳಿಯು ಬರುವದಿಕ್ಕಿಗೆ ಆಡ್ಡಲಾಗಿ, ಕಳ್ಳಿಯ ಗಿಡಗಳನ್ನು ನಟ್ಟವಾಗಿ ಮತ್ತು ಸಾಲಾಗಿ ನೆಟ್ಟಿರುವರು. ನಮ್ಮ ದೇಶದಲ್ಲಿಯೂ ಯಾವುವಾ ದರೂ ಒಣಗದ ಮತ್ತು ಸುಲಭದಲ್ಲಿಯೆ ಎತ್ತರವಾಗಿ ಬೆಳೆಯುವ ಗಿಡಗಳನ್ನು ಹಾಕಬಹುದು ಬಿದ್ದಮಳೆಯ ನೀರಿನಿಂದ ಸಾರವಾದ ಮಣ್ಣು ವ್ಯರ್ಥವಾಗದಂತೆ, ಕಟ್ಟು ತಡೆಹಾಕಬೇಕು. ಈಗ ಸರಕಾರದವರು (Bunding) ಎಂಬ ಹೆಸರಿನಲ್ಲಿ ಈ ಕಾರ್ಯವನ್ನು ಕೈಕೊಂಡಿರುವರು.

ಕನ್ನಡದ ಬಯಲುಪ್ರದೇಶದಲ್ಲಿ ನೀರನ್ನು ಒಟಗಿಸುವುದು ಅಸಾಧ್ಯವಲ್ಲ. ತುಂಗಭದ್ರಾ, ಕೃಷ್ಣಾ, ಭೀಮಾ, ಪರವಾ, ಘಟಪ್ರಭಾ, ಮಲಪ್ರಭಾ ಮೊದಲಾದ ನದಿಗಳಿವೆ. ಸಹಜವಾಗಿಯೆ ನದಿಯ ಎತ್ತರವು ಅಕ್ಕ-ಪಕ್ಕಗಳಿಗಿಂತ ತಗ್ಗಾಗಿರುವುದರಿಂದ, ಈ ನದಿಗಳ ನೀರನ್ನು ಅಕ್ಕ-ಪಕ್ಕಗಳ ಭೂತರು ಉಪಯೋಗಿಸಲು ಬರುವುದಿಲ್ಲ. ಇದಕ್ಕೋಸ್ಕರವಾಗಿಯೆ ಎತ್ತರವಾದ ಸ್ಥಳಗಳಲ್ಲಿ ನದಿಗಳಿಗೆ ಅಣೆಕಟ್ಟು ಕಟ್ಟಿಸಿ, ಅಲ್ಲಿಂದ ಕಾಲುವೆಗಳನ್ನು ಹಾಯಿಸಿ, ತಗ್ಗು ಪ್ರದೇಶಗಳಿಗೆ ತೆಗೆದು ಕೊಂಡು ಹೋಗುವುದು ಸರ್ವಸಾಧಾರಣವಾಗಿದೆ. ಬರುವ ನದಿಗಳಿಗೆ ಒಟ್ಟು ಕಟ್ಟಿ ಕಾಲುವೆಗಳನ್ನು ಹಾಯಿಸಿದರೆ, ತೀರಪ್ರಾಂತದವರು ನಮಗೆ ಬರುತ್ತಿದ್ದ ನೀರು ಕಡಿಮೆಯಾಯಿತೆಂದು ಜಗಳ ಮಾಡ ಬಹುದು. ಮೈಸೂರು, ಮದ್ರಾಸು ಮತ್ತು ಮೈಸೂರು, ಮದ್ರಾಸು, ಹೈದರಾಬಾದು ಸರಕಾರಗಳು, ಕಾವೇರಿ ಮತ್ತು ತುಂಗಭದ್ರೆಗಳ ನೀರನ್ನು ಬಳಸಿಕೊಳ್ಳುವುದಕ್ಕಾಗಿ ಕೂಡಿಸಿದ ಸಭೆಗಳ ವಿಷಯ ಜನರಿಗೆ ಗೊತ್ತಿರಬೇಕು.

ಕರ್ನಾಟಕದವರಿಗೆ ಮಿಕ್ಕ ಪ್ರದೇಶಗಳಿಗಿಂತ ಹೆಚ್ಚು ಉಪ. ಯೋಗಕಾರಿಯಾದ ಒಂದು ಪ್ರಕೃತಿಯ ನೆರವು ಇದೆ. ಬಹಳಭಾಗ ಕರ್ನಾಟಕವಲ್ಲಿಯೆ ಮತ್ತು ಕರ್ನಾಟಕವಲ್ಲಿ ಇಲ್ಲವೆ ಇದ್ದರೂ ಉತ್ತರ ಕರ್ನಾಟಕವುಳ್ಳ, ಮುಂಬಯಿಪ್ರಾಂತದಲ್ಲಿಯೆ, ಎತ್ತರವಾದ ಪಶ್ಚಿಮ ಘಟ್ಟಗಳಿವೆ. ಸಮುದ್ರಕ್ಕೆ ಹತ್ತಿರವಲ್ಲಿ ಈ ಘಟ್ಟಗಳು ಎತ್ತರವಾಗಿ ಏಳುತ್ತವೆ. ಉತ್ತರ ಕರ್ನಾಟಕದ ಬಯಲುಸೀಮೆ ಘಟ್ಟದ ಪೂರ್ವದಲ್ಲಿವೆ. ಘಟ್ಟದ ಪಶ್ಚಿಮದಲ್ಲಿ ಚಿಕ್ಕವೂ ಪುಟ್ಟವೂ ಆದ ನದಿಗಳು ಅನೇಕ ಇವೆ. ಅವು ಮಳೆಗಾಲದಲ್ಲಿ ತುಂಬಿ ತುಳುಕಿ ನೀರನ್ನೆಲ್ಲ ಅರಬ್ಬೀ ಸಮುದ್ರಕ್ಕೆ ಜಿಲ್ಲಿಬಿಡುತ್ತವೆ. ಕಾರವಾರ, ರತ್ನಾಗಿರಿ ಜಿಲ್ಲೆಯವರಿಗೆ (ಹೆಚ್ಚು ಈ ನದಿ ನೀರಿಗೆ ಆಶ್ರಯವಾಗಿಲ್ಲ) ಅಲ್ಲಿ ಬೀಳುವ ಮಳೆಯೆ ಸಾಕು. ಅತಿವೃಷ್ಟಿಯೇ ಅವರಿಗೆ ಉಪಕಾರಿ. ಈ ಘಟ್ಟಗಳ ಪಶ್ಚಿಮಭಾಗದಲ್ಲಿ ಮತ್ತು ಗುಡ್ಡಗಳ ಮೇಲೆ, ೧೫೫"–೨೦೦" ವರೆಗೆ ವರ್ಷಕ್ಕೆ ಮಳೆಯು ಸುರಿಯುತ್ತವೆ. ಘಟ್ಟಗಳ ಪೂರ್ವಕ್ಕೆ ಹೋದ ಹಾಗೆಲ್ಲಾ ಮಳೆಯ ಪ್ರಮಾಣವು ಕಡಿಮೆಯಾಗುತ್ತವೆ.

ಘಟ್ಟದಿಂದ ಪಶ್ಚಿಮಕ್ಕೆ ಹರಿಯುವ ನದಿಗೆ ಒಂದು ಅಣೆಕಟ್ಟನ್ನು ಕಟ್ಟಿದರೆ, ನೀರನ್ನು ಒಂದು ಕಡೆಯಲ್ಲಿ ತಡೆ ಮಾಡಬಹುದು. ಆ ನೀರನ್ನು ಘಟ್ಟದ ಪೂರ್ವಕ್ಕೆ ತರಬೇಕಾದರೆ ಸುರಂಗಗಳನ್ನು ಕೊರೆಯ ಬೇಕಾಗುವುದು, ಎಂದರೆ ಘಟ್ಟದಿಂದ ಪಶ್ಚಿಮಕ್ಕೆ ಹರಿಯುವ ನದಿಯನ್ನು ಪೂರ್ವಕ್ಕೆ ತಿರುಗಿಸಬೇಕು. ಘಟ್ಟದ ಪೂರ್ವಕ್ಕೆ ನೀರನ್ನು ತಂದ ಮೇಲೆ, ಅದನ್ನು ಬಯಲುಪ್ರದೇಶದ ಕಡೆಗೆ ಹಾಯಿಸ ಬಹುದು.

ಹೀಗೆ ನದಿಗಳನ್ನು ಹಾಯಿಸುವುದು ಸಾಧ್ಯವೇ? ಅದರ ವೆಚ್ಚ ವೆಷ್ಟು? ಅದು ಉಪಯೋಗಕಾರಿಯೇ? – ಎಂದು ಕೇಳಬಹುದು. ಅದು ಸಾಧ್ಯವು. ಅದರಿಂದ ಆಗುವ ಪ್ರಯೋಜನವಾದ ಕ್ಷಾಮನಿವಾರಣೆಯ ಯೋಚನೆ ಮಾಡಿದರೆ, ಅದಕ್ಕೆ ಮುಟ್ಟುವ ಖರ್ಚು ಲಾಭದಾಯಕವು. ಇವರ ಸಲುವಾಗಿ ಕೆಳಗೆ ಒಂದು ಇದೇ ತರದ ಮತ್ತು ಹೀನುಸ್ಥಾನದಲ್ಲಿ ಕಟ್ಟಿರುವ ಜಲಾಶಯದ ವಿಚಾರವಾಗಿ "ಇಂಪೀರಿಯಲ್ ಗೆಝೆಟಿ"ನಲ್ಲಿ ಬಂದ ಕೆಲವು ವಾಕ್ಯಗಳನ್ನು ಅನುವಾದಿಸಿ ಕೊಡಲಾಗಿವೆ ನೋಡಿ:—

ಪೆರಿಯರ್ ಯೋಜನೆ:—'ಪೆರಿಯರ್ (ಮಹಾನದಿ)' ದಕ್ಷಿಣಭಾರತದಲ್ಲಿಯ ಪಶ್ಚಿಮಘಟ್ಟಗಳ ಪಶ್ಚಿಮ ಪಾರ್ಶ್ವದಲ್ಲಿ ಉಗಮವಾಗಿ, ತ್ರಾವಣಕೋರ ಸಂಸ್ಥಾನದಲ್ಲಿ ಹರಿದು ಅರಬೀ ಸಮುದ್ರಕ್ಕೆ ಕೂಡುವ ನದಿಗಳಲ್ಲಿ ಒಂದಾಗಿರುತ್ತದೆ. ಈ ನದಿ ಹರಿಯುವ ಪ್ರದೇಶವು ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲೊಂದಾಗಿದ್ದು, ಇಲ್ಲಿಯು ಬೆಳೆಗಳೆಲ್ಲ ಮಳೆಯ ನೀರಿನಿಂದ ಮಾತ್ರವೇ ಬೆಳೆಯುವುದರಿಂದ, ನೀರಾವರಿಯ ಅವಶ್ಯಕತೆಯೇ ಇಲ್ಲ. ಆದುದರಿಂದ ಈ ನದಿಯ ನೀರು ವ್ಯರ್ಥವಾಗಿ ಹರಿದು ಸಮುದ್ರ ಸೇರುತ್ತಿತ್ತು. ಆದರೆ ಪಶ್ಚಿಮಘಟ್ಟಗಳ ಪೂರ್ವಪಾರ್ಶ್ವಕ್ಕಿರುವ ರುಕ್ಷ, ಪ್ರದೇಶಕ್ಕೆ ಈ ನದಿಯ ನೀರನ್ನು ಉಪಯೋಗಿಸಿಕೊಳ್ಳುವ ಹಪಹಪಿಕೆಯಿಂದ ತ್ರಾವಣಕೋರ್ ಸಂಸ್ಥಾನದಲ್ಲಿಯ— ನದಿಯ ಮೇಲ್ವಾತ್ರದಲ್ಲಿ— ಭವ್ಯವಾದು ದೊಂದು ಆಣೆಕಟ್ಟು ರಚಿಸಿ, ಅದರಿಂದ ನಿರ್ಮಿತವಾದ ದೊಡ್ಡ ಸರೋವರದಲ್ಲಿ ಸಂಗ್ರಹವಾದ ನೀರನ್ನು, ಪರ್ವತದಲ್ಲಿ ತೋಡಲಾದ ಕೊಳ್ಳದ ಮೂಲಕ, ಪ್ರವಾಹ ನಿರುದ್ಧ ಹರಿಯುವಂತೆ ಮಾಡಲಾಗಿದೆ. ಈ ಯೋಜನೆಗೆ 'ಪೆರಿಯರ್ ಯೋಜನೆ'ಯೆಂದು ಹೆಸರು. ಸ್ವಲ್ಪದರಲ್ಲಿಯೆ ಹೇಳುವುದಾದರೆ, ಪರ್ವತಶ್ರೇಣಿಯ ಒಂದು ಮಗ್ಗುಲಿಗೆ ಹರಿಯುತ್ತಿದ್ದ ಒಂದು ದೊಡ್ಡ ನದಿಯ ಪ್ರವಾಹವನ್ನು ಅದ್ದಗಟ್ಟಿ—ಅದರ ಇನ್ನೊಂದು ಮಗ್ಗುಲಿಗೆ ಹರಿಯುವಂತೆ ಮಾಡಿದ ಶ್ರೇಯಸ್ಸು ಈ ಯೋಜನೆಗೆ ಇದೆ. ೧೯೦೬ನೆಯ ಇಸ್ವಿಯ ವರೆಗೆ ಇದಕ್ಕಾಗಿ ೯೨ ಲಕ್ಷ ರೂ. ಖರ್ಚು ಬಂತು.

ಕಳೆದ ಶತಮಾನದ ಆರಂಭದಲ್ಲಿಯೆ ಈ ಯೋಜನೆಯ ವಿಚಾರ ನೊದಲು ಮೂಡಿತು. ಆವರೆ ಆಗ ಇದು ಆಕಾಶಕುಸುಮವೆಂದು ಹೀಗಳೆಯಲ್ಪಟ್ಟಿತ್ತು. ೧೮೬೨ರಲ್ಲಿ ಮತ್ತೆ ಈ ವಿಚಾರವು ತಲೆಯೆತ್ತಿದ್ದರೂ—೧೮೮೨ರಲ್ಲಿಯೆ ಈ ಯೋಜನೆಗೆ ಮೂರ್ತಸ್ವರೂಪ ಕೊಡುವ ಸಿದ್ಧತೆ ನಡೆದದ್ದು. ಆಗ ಈ ಯೋಜನೆಯ ತೂಪದೇಷಗಳ ನಿಷ್ಪರ್ಷೆಯೂ ಅಂದಾಜುಪತ್ರಿಕೆಯೂ ಮೊದಲಸಲ ಸಿದ್ಧವಾದುವು. ಅನೇಕ ಎಡರು-ತೊಡರುಗಳು ಬಂದರೂ ಈ ಸುಕಾರ್ಯವನ್ನು ಕೈಕೊಂಡು ಪೂರ್ಣ ಮುಗಿಸಲಾಗಿದೆ. ನಿರ್ಜನ ಹಾಗೂ ದುರ್ಗಮ ಪ್ರದೇಶದಲ್ಲಿ, ಮಲೇರಿಯಾದ ಹಾವಳಿ ವೀಪರೀತವಾಗಿರುವಲ್ಲಿ ಈ ಕೆಲಸ ನಡೆಸಬೇಕಾದ್ದು ಹೆಚ್ಚಿನದು. ಮೇಲಾಗಿ ಕೂಲಿಕಾರರ ಕೊರತೆ, ಮೂಗನ ಸಾಕರ್ಯಗಳಿಲ್ಲದ ಪರ್ವತಪ್ರದೇಶ, ಮತ್ತು ಹೆಜ್ಜೆ ಹೆಜ್ಜೆಗೆ ತಜ್ಞರನ್ನೂ ಬೆಚ್ಚಿಸುವಂತಹ ಹೊಸ ಹೊಸ ಸ್ವರೂಪದ ಎಂಜಿನಿಯರಿಂಗ್ ಸಮಸ್ಯೆಗಳು- ಈ ಕಾರ್ಯಕ್ಕೆ ಆಡ್ಡಣಾಗಿದ್ದುವು. ಆಣೆಕಟ್ಟಿನ ನೆಲೆಗಟ್ಟು ಹಲವಾರು ಸಲ ಮಳೆಯು ಹೊಡೆತಕ್ಕೆ ಕೊಚ್ಚಿಕೊಂಡು ಹೋಯಿತು. ಆನಿರೀಕ್ಷಿತ, ಅಕಲ್ಪಿತ ಸಮಸ್ಯೆಗಳು ಎಡು ರಾದರೂ ಅವನ್ನೆಲ್ಲ ಧೈರ್ಯದಿಂದ ಸರಿಪಡಿಸಿಕೊಳ್ಳಲಾಯಿತು.

ಈ ಯೋಜನೆಯ ಫಲಶ್ರುತಿ ಈಗಲೇ ಹೇಳುವುದು ಸಾಧ್ಯವಿಲ್ಲ. ೧೯೦೬-೪ರಲ್ಲಿ ಮೂಲಬಂಡವಲಿನ ಮೇಲೆ ೩–೭೬ ಬಡ್ಡಿ ಬೀಳುತ್ತಿದೆ.

[ಇಂಪೀರಿಯಲ್ ಗ್ಯಾಜೆಟಿಯರ್ ಆಫ್ ಇಂಡಿಯಾ, ೧೯೦೮ ಆವೃತ್ತಿ; ಸಂಪುಟ ೨೦, ಪುಟ ೧೦೯.]

ಈ ಜಲಾಶಯವನ್ನು ಕಟ್ಟಿದ ಎಪ್ಪತ್ತು ವರ್ಷಗಳಲ್ಲಿ ವಿಜ್ಞಾನ–ಸಂಶೋಧನೆಗಳು ಅನೇಕವಾಗಿವೆ. ಆಗ ಒಂದು ಮೈಲಿ ಉದ್ದ ಸುರಂಗ ಕೊರೆಯುವುದೇ ದೊಡ್ಡ ಕೆಲಸವಾಗಿತ್ತು. ಈಗ ನಮ್ಮ ದೇಶದಲ್ಲಿ, ನುಂಡಿ ಜಲಾಶಯಕ್ಕೆ ಸುರಂಗ ಕೊರೆದಿರುವರು; ಹುಲಿಕೆರೆಯಲ್ಲಿ

ಏಳು ಮೈಲಿ ಸುರಂಗದಿಂದ ಕಾಶೇರಿಯ ನೀರನ್ನು ಹಾಯಿಸಿದ್ದಾರೆ. **ಕೊಲ್‌ರೇಡ್** (U. S. A.) ನ **ಟಾಲ್ಡರ್‌ಡ್ಯಾಮ್** ಕಟ್ಟುವಾಗಲೂ ಸುರಂಗಗಳನ್ನು ಮಾಡಬೇಕಾಯಿತು. ಎಂದ ಮೇಲೆ ನೀರನ್ನು ಪಶ್ಚಿಮದಿಂದ ಪೂರ್ವಕ್ಕೆ ಹಾಯಿಸುವುದು ಮನುಷ್ಯಪ್ರಯತ್ನದಲ್ಲಿದೆಯೆಂದು ಖಂಡಿತವಾಗಿ ಹೇಳಬಹುದು. ಜಲಾಶಯದಿಂದ ನೀರನ್ನು ಹಾಯಿಸಿದ ಮೇಲೆ, ಇಂದಿನ ಬಯಲುಪ್ರದೇಶವು, ಈಗಿನ ನಿರ್ಭಾಗ್ಯದ ತವರು ಮನೆ ಹೋಗಿ ಕರ್ನಾಟಕಕ್ಕೆ ಭೂಷಣವಾಗುವುದು ಮತ್ತು ಅಲ್ಲಿರುವ ಚಿಕ್ಕ ಸಂಸ್ಥಾನಗಳೂ ಊರ್ಜಿತವಾಗುವುವು.

ಈ ಜಲಾಶಯಗಳನ್ನು ಹುಟ್ಟುವ ಪಶ್ಚಿಮದಲ್ಲಿ ಕಟ್ಟಬೇಕು. ಅವುಗಳಿಂದ ವಿದ್ಯುಚ್ಛಕ್ತಿಯನ್ನೂ ಹೊಂದಬಹುದು. ಇಡಿಯ ಕರ್ನಾಟಕ ಮಹಾರಾಷ್ಟ್ರದೇಶಗಳಿಗೆ ಬೇಕಾದಷ್ಟು ಶಕ್ತಿಯನ್ನು ಉತ್ಪನ್ನ ಮಾಡಬಹುದು. ಪ್ರತಿ ಹಳ್ಳಿಗೂ ಸುಲಭದರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡಬಹುದು. ಕೈಗಾರಿಕೆಗಳನ್ನು ಅನೇಕವಾಗಿ ಪ್ರಾರಂಭಮಾಡಬಹುದು. ಮನೆಗೆ ಬಳಸುವ ಕಟ್ಟಿಗೆಗಾಗಿ ಕಾಡು ಕಡಿಯುವುದನ್ನೂ, ಕೈಗಾರಿಕೆಗೆ ಸೌದೆ ಉಪಯೋಗಿಸುವುದನ್ನೂ ಕಡಿಮೆ ಮಾಡಬಹುದು. ಈಗಿರುವ ಹೊಗೆಗಾಡಿಗಳನ್ನು ಬರಿ ವಿದ್ಯುಚ್ಛಕ್ತಿಯಿಂದಲೇ ನಡೆಯಿಸಬಹುದು ಹೊರಗಿನಿಂದ ತರಿಸಬಹುದಾದ ಕಲ್ಲಿದ್ದಲನ್ನು ಬೇರೆ ಅಗತ್ಯವಾದ ಕೆಲಸಕ್ಕೆ ಮಾತ್ರ ಇಟ್ಟುಕೊಳ್ಳಬಹುದು. ಈ ಕಾಲದಲ್ಲಿ ವಿದ್ಯುಚ್ಛಕ್ತಿಯ ಉಪಯೋಗವು ಎಷ್ಟಿದೆಯೆಂಬುದನ್ನು ಹೇಳುವ ಆವಶ್ಯಕತೆಯಿಲ್ಲ.

ಕರ್ನಾಟಕವು ಉನ್ನತ ಸ್ಥಿತಿಗೆ ಬರಲು ಪ್ರಕೃತಿಯು ಇಲ್ಲಿ ಇಷ್ಟೊಂದು ಸಹಾಯ ಮಾಡಿರುವಾಗ, ಅದನ್ನು ಉಪಯೋಗಿಸಿಕೊಳ್ಳದಿರುವುದು ಜನಗಳ ತಪ್ಪೇ ಸರಿ. ಕರ್ನಾಟಕ ದೇಶಕ್ಕೆ ಸಿಕ್ಕುವಂತೆ ಇಡಿ ಹಿಂದುಸ್ಥಾನದಲ್ಲಿ ಯಾವ ಪ್ರಾಂತಕ್ಕೂ ಸುಲಭವಾಗಿ ಪ್ರಕೃತಿಯು ಇಂತಹ ಸಲಕರಣೆಗಳನ್ನು ಮಾಡಿಕೊಟ್ಟಿಲ್ಲ.

\+ \+ \+ \+

ವಿ. ಸೂ.:— ಈ ವಿಚಾರ ಕನ್ನಡ ದೇಶವಲ್ಲೆಲ್ಲ ತಿಳಿಯುವ ದಗತ್ಯವಿರುವುದರಿಂದ, ಈ ಲೇಖನವನ್ನು ಬೇರೆ ಪತ್ರಿಕೆಗಳವರೂ ತಮ್ಮಲ್ಲಿ ಮುದ್ರಿಸಿ ಅನೇಕರ ಅವಗಾಹನೆಗೆ ಇದನ್ನು ತರಬೇಕೆಂದು ವಿನ್ನಹ.

ಕ ರಾ ಳಿ

ಶ್ರೀ. ಕೆ. ವರದರಾಜ ಎಂ. ಎ. ಮೈಸೂರು

೧

ಯೌವನ ಸಿರಿ ಸಂಪೂಜಿತ ಎದೆಯಲಿ
ಸೌಂದರ್ಯದ ಸಿಹಿ ಸುಧುವನು ಹೀರಿ,
ಕಲ್ಮಷಪೂರಿತ ವಿಷವನು ಕಾರಿ,
ಕೆರಳಿರ-ಪಳು ಕಾಮಕರಾಳಿ!

ಬಿಸಿ ಕೆನ್ನೀರಿಗೆ ಬಾಯ್ ತೆರೆಯುತ್ತಲಿ
ಅಸಹ್ಯಭಾವದ ಕೆಡಿಗಾರುತ್ತ
ಗರ್ಜಿಸಿ ಕಂಪಿಸಿ ಆರ್ಭಟಿಸುತ್ತ
ಚೀರುತ್ತಿರುವಳು ಮಾಕಾಳಿ!

೨

ಸಿಡಿಲಿಗೆ ಸಾಯಳು; ಗುಡುಗಿಗೆ ಬೆದರಳು
ಬಲು ಮೃದು ಮಿಂಚಿನ ಸಿತಿತ ಕಸಾರಿ,
ಜ್ವಾಲಾಮುಖಿಯೂ ಬಲು ಹಿತಕಾರಿ—
ಭೀತಿ ವಿಕಂಪಿತ ಅಗ್ನಿಸಖಿ!

ಓ! ಮತಿ ಕೊರಲನು ಮುರಿಯುತ್ತಿರುವಳು!
ನೆಳೆದಪ್ಪಿದ ಆಲಿಂಗನದಲ್ಲಿ
ಚಿತ್ತವೆ ತತ್ತರಿಸುತ್ತಿವೆ ಒಲ್ಲಿ,
ಕನಲುವಳಿವಳೊ, ಓ! ರೌದ್ರಮುಖಿ!

೩

ಬಾಳಿನ ಸಾರವ ಚಿಪ್ಪರಿಸುತ್ತಲಿ
ನೃತ್ಯೋನ್ಮಾದದಿ ಹಲ್ ಕಿರಿಯುತ್ತ
ಬಿಚ್ಚಿಡ ಮುಡಿಯದು ಕೆದರಿರೆ ಸುತ್ತ
ಕುಣಿವಳು ರಾಕ್ಷಸಕುಲಕನ್ಯೆ!

ದೋನನನಾನಕೆ ಮನವೊಲಿಯುತ್ತಲಿ
ಮೆಲುಮೆಲನೈತರೆ ವಿಕಟ ವಿಕಾರ
ಕರಗಲು ಹರಯದ ವರ ಸಿಂಗಾರ
ನಲಿವಳು ಭೈರವಿ ಮನ ಮಾನ್ಯೆ!

೪

ಪ್ರೇಮದ ಹೆಸರಲಿ ಭ್ರಾಂತಿಯ ಬೀರುತ
ಮುಸ್ಸುಲ ಯಜ್ಞದ ಕುಂಡದಿ ನೂಕಿ
ಸಿಡಿಯುವ ಬಾಳಿನ ಪರಿಯನು ನೋಡಿ
ಸಂತಸ ಪಡುವಳು ಈ ಕ್ರೂರಿ!

ನಿರ್ಬಲ ಚಂಚಲ ಚಪಲವ ಕೆಣಕುತ
ನಿತ್ಯ ಕಳಂಕದ ಚಿಪ್ಪೆಯ ಮುಡಿಸಿ,
ನಡೆವಳು, ಅರೆಚಣ ಸುಖವನು ಉಣಿಸಿ,
ಭೀತಿ, ಭಯಂಕರ ಹೆಮ್ಮಾರಿ!

ಯಾರಿವರು....

ಉದ್ಭಟ ಹಲಾಯುಧನ?

ಚೆನ್ನಬಸವೇಶ್ವರ, ಸಿ. ಡಿ. ಕಾಲೇಜು ಅನಂತಪುರ

'ಚೆನ್ನಬಸವ ಪುರಾಣ'ವನ್ನು ಬರೆದ ಶ್ರೀವಿರೂಪಾಕ್ಷ ಪಂಡಿತಾರಾಧ್ಯರು ಗ್ರಂಥಾರಂಭದಲ್ಲಿ, ಪದ್ಧತಿಯ ನೀತಿಗೆ ತಮ್ಮ ಹಿಂದಿನ ಮಹಾಕವಿಗಳನ್ನು ಸ್ತುತಿಸಿರುವರು. ವಿರೂಪಾಕ್ಷ ಪಂಡಿತರಿಂದ ಸ್ತುತಿಸಲ್ಪಟ್ಟ ಕಾಳಿದಾಸಾದಿ ಕವಿಗಣದಲ್ಲಿ **ಉದ್ಭಟ, ಹಲಾಯುಧ** ಎಂಬ ಈ ಹೊಸ ಹೆಸರುಗಳನ್ನೂ ಕಾಣುತ್ತೇವೆ. ಹೊಸ ಹೆಸರೆಂದು ನಾನು ಹೇಳುವುದು ಅವು ಯಾರವೋ ಸ್ವಕಪೋಲಕಲ್ಪಿತ ನಾಮಗಳೆಂದು ಬಗೆದಲ್ಲ; ಅಥವಾ ಯಾರಿಂದಲೋ ಈಚೆಗೆ ಅಲ್ಲಿ ಸೇರಿಸಲ್ಪಟ್ಟಿವೆ ಎಂದು ಬಗೆದೂ ಅಲ್ಲ. ಅವು ನಮಗೆ ಅಷ್ಟು ಹೆಚ್ಚಾಗಿ ಪರಿಚಯವಾದವಲ್ಲವಷ್ಟೆ! 'ಲಿಂಗಾಯತ ವಿದ್ಯಾಭಿವೃದ್ಧಿ ಸಂಘ'ದಿಂದ ಪ್ರಕಟಿತ ನಾದ ಪ್ರತಿಯೊಂದನ್ನು ಓದುವಾಗ, ಕವಿ-ಕಾವ್ಯಗಳ ವಿಷಯವನ್ನು ಬರೆಯುತ್ತಾ ಪ್ರಸ್ತಾವನೆಯಲ್ಲಿ, ಶ್ರೀ. ಶಿ. ಶಿ. **ಬಸವನಾಳ**ರು **ಉದ್ಭಟ** ಎಂಬ ಹೆಸರಿನ ಮುಂದೆ ಪ್ರಶ್ನಾರ್ಥಕ ಚಿನ್ನೆಯನ್ನು ಹಾಕಿರುವುದನ್ನು ಕಂಡೆನು. ಉದ್ಭಟ-ಹಲಾಯುಧರೆನ್ನುವವರು ಯಾರು ಇವರು?

ವೀರಶೈವ ಸಾಹಿತ್ಯಚರಿತೆಯಲ್ಲಿ **ಉದ್ಭಟರಾಜ, ಉದ್ಭಟಾರಾಧ್ಯ** ಎಂಬ್ಬರು ತೋರುವರು. ಇವರಿಬ್ಬರೂ ಗುಜರಾತ ಪ್ರಾಂತದವರೆಂದೂ, ಉದ್ಭಟರಾಜ, ಉದ್ಭಟಾರಾಧ್ಯರು ಬೇರೆ ಬೇರೆ ವ್ಯಕ್ತಿಗಳೆಂದೂ ಗುರುರಾಜ ಕವಿಯು '**ಮಲ್ಲಿಕಾರ್ಜುನ** ಪಂಡಿತಾರಾಧ್ಯ ಚರಿತ್ರೆ'ಯಿಂದ ತಿಳಿಸಿ ಬರುತ್ತದೆ. ಉದ್ಭಟರಾಜನಿಗಿಂತಲೂ ಉದ್ಭಟಾರಾಧ್ಯನು ಸುಮಾರು ೧೬೦ ವರ್ಷಗಳ ಪೂರ್ವದವನೆಂದು ತೋರುತ್ತದೆ. "ಉದ್ಭಟಾರಾಧ್ಯನು ವೀರಶೈವ ಗುರುಸಂತತಿಗೆ ಸೇರಿದವನು. ಉದ್ಭಟರಾಜನು ವೀರಶೈವ ರಾಜಸಂತತಿಗೆ ಸೇರಿದವನು" * ಉದ್ಭಟರಾಜನು ಕುಮಾರಪಾಲನೆಂಬ ಹೆಸರಿನಿಂದ ಘೂರ್ಜರ ರಾಜ್ಯವನ್ನು ಆಳುತ್ತಿದ್ದನು. ಹೊಸೆಯ ಶ್ರೀಹರಿಹರ ಕವಿಯು ಈತನ ಚರಿತ್ರೆಯನ್ನು ರಗಳೆಯ ರೂಪದಲ್ಲಿಯೂ, ಇಂದ.ಶೇಖರ ರಾಜನ ಮಗನಾದ **ಸೋಮರಾಜನು** ಕ್ರಿ. ಶ. ೧೩೩೩ರಲ್ಲಿ '**ಉದ್ಭಟ ಕಾವ್ಯ**' ಎಂಬ ಹೆಸರಿನಿಂದಲೂ ಬರೆದಿರುವರು † ಕುಮಾರಪಾಲನು (ಉದ್ಭಟರಾಜನು) ಗುಜರಾತವನ್ನು ಕ್ರಿ. ಶ. ೧೧೫೬ ರಿಂದ ೧೧೭೨ರ ವರೆಗೂ ಆಳಿದನೆಂದು ತಿಳಿದು ಬರುತ್ತದೆ. ಉದ್ಭಟಕಾವ್ಯವನ್ನು ಬರೆದಿರುವ ಸೋಮರಾಜನು ನಚ್ಚಿನ ಸಮುದ್ರತೀರ ಪ್ರದೇಶವನ್ನಾಳುತ್ತಿದ್ದ ವೀರಶೈವರಾಜರಾದ 'ಚಾವಟರಾಜ'ರ ಸಂಬಂಧವನ್ನಿರಬಹುದೆಂದು ಕರ್ನಾಟಕದ ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ತಂದೆಯು ಇಂದುಶೇಖರರಾಜನೆಂದೂ, ಅಜ್ಜನು ರಾಯಮುರಾರಿಭೂಪನೆಂದೂ, ಮುತ್ತಜ್ಜನು ತಿರುಮಲರಾಯನೆಂದೂ ಸೋಮರಾಜನ ಕಾವ್ಯದಿಂದಲೇ ತಿಳಿದು ಬರುತ್ತದೆ.

'ಉದ್ಭಟಾರಾಧ್ಯನು' ಗುಜರಾತಿನ ಅಹಮ್ಮದಾಬಾದ್ ಜಿಲ್ಲೆಯ **ಭಲ್ಲಕಿ** ಎಂಬ ಊರಲ್ಲಿ ಹುಟ್ಟಿದವನು. ವೀರಶೈವ ಗುರುಸಂತತಿಗೆ ಸೇರಿದವನು, ಸ್ವಾತ್ಮಾರಕ್ತಿ ಪ್ರಭಾವದಿಂದಲೂ, ಶಾಸ್ತ್ರಗಳಲ್ಲಿಯ ತನ್ನ ಅತಿಶಯ ಜ್ಞಾನದಿಂದಲೂ ಅವನು ಅಂದಿನ ಜನರಲ್ಲಿ ಕೀರ್ತಿವೆತ್ತವನು. ಕ್ರಿ. ಶ. ೯೯೫ ರಿಂದ ೧೦೫೦ರ ವರೆಗೆ ಮಾಲವ ದೇಶವನ್ನಾಳಿದ ಭೋಜರಾಜನಿಗೆ ಶಿವದೀಕ್ಷೆಕೊಟ್ಟು ತನ್ನ ಶಿಷ್ಯನನ್ನಾಗಿ ಪರಿಗ್ರಹಿಸಿದನು.

'ಭಲ್ಲಕೀ' ನಾಮ ನಗರೇ ಶಿವಭಕ್ತ ನಿಷೇವಿತೇ।
ತತ್ರಾಸೀದುದ್ಭಟಃ ಕಶ್ಚಿದಾರಾಧ್ಯಃ ಶಿವತತ್ಪರಃ ॥
'ಪರ ಭೋಜಮಹೀಪಾಲಂ ದೀಕ್ಷಯಾಮಾಸ ಶಾಸ್ತ್ರತಃ'॥

ಈ ಮಾತಿನಿಂದ ಮೇಲೆ ಹೇಳಿದ ವಿಷಯಗಳ ಸಿದ್ಧಾಂತವಾಗುತ್ತದೆ. ಭೋಜರಾಜನು ವೀರಶೈವನಾಗಿದ್ದನೆಂದು ಹೇಳಲು ಯೋಗಸೂತ್ರಗಳ ಮೇಲೆ ಅವನು ಬರೆದ ವೃತ್ತಿಯೇ ಸಾಕಾದ ಸಾಕ್ಷ್ಯ! ವೃತ್ತಿಯ ಪ್ರಾರಂಭದಲ್ಲಿ :—

'ದೇಪಾರ್ಥ ಯೋಗಃ ಶಿವಯೋಃ ಸ ಶ್ರೇಯಾಂಸಿ ತನೋತುನಃ।
ಮುಷ್ಣಾಸಮಪಿ ಯತ್ ಸ್ಮೃತ್ಯಾ ಜನಃ ಕೈವಲ್ಯಮಶ್ನುತೇ॥'

ಎಂದು ಶಕ್ತಿ ವಿಶಿಷ್ಟಾದ್ವೈತ ಪ್ರತಿಪಾದಕವಾದ ಮಂಗಲ ಪದ್ಯವನ್ನು ಬರೆದಿರುವನು. ಈ ಉದ್ಭಟಾರಾಧ್ಯನು ಸಾವಿರ ಪದ್ಯಯುಕ್ತವಾದ '**ಹರಲೀಲೆ**' ಎಂಬ ಉದ್ಗ್ರಂಥವನ್ನು ಬರೆದಿರುವುದಾಗಿ ಕ್ರಿ. ಶ. ೧೧೬೫ ರಲ್ಲಿದ್ದ **ಬ್ರಹ್ಮಶಿವನು** 'ಸಮಯ ಪರೀಕ್ಷೆ'ಯಲ್ಲಿ ಹೇಳಿರುವನು. ಬ್ರಹ್ಮಶಿವನ ಕಾಲದ ವಿಷಯವಾಗಿ ಭಿನ್ನಾಭಿಪ್ರಾಯಗಳಿವೆ. ೧೧೬೫ ಕ್ರಿ. ಶ. ವೆಂದು ಕವಿಚರಿತಕಾರರೂ, ೧೦೬೫ ಕ್ರಿ. ಶ. ವೆಂದು ಡಾ. ವೆಂಕಟ ಸುಬ್ಬಯ್ಯನವರೂ ಅಭಿಪ್ರಾಯ ಪಡುತ್ತಾರೆ. * "ಅಸಾಧಾರಣ ಮಹಿಮಾಶಾಲಿಯಾದ ಈ ಮಹಾತ್ಮನನ್ನು ವೀರಶೈವ ಕವಿಗಳು ವಿಶೇಷವಾಗಿ ಕೊಂಡಾಡಿರುವರು" ಅಂಥವರಲ್ಲಿ ವಿರೂಪಾಕ್ಷ ಪಂಡಿತಾರಾಧ್ಯರೂ ಒಬ್ಬರಿರಬಹುದೇ ?

ಇನ್ನು ಹಲಾಯುಧನಾರು? ಈತನು ಕ್ರಿ. ಶ. ೧೦ನೆಯ ಶತಮಾನದಲ್ಲಿದ್ದನೆಂದೂ, ದಕ್ಷಿಣಭಾರತದಲ್ಲಿ ಜನ್ಮತಾಳಿ, ಕಿರಿಯತನದಲ್ಲಿಯೇ ಬಹಳ ಜ್ಞಾನವನ್ನು ಸಂಪಾದಿಸಿ, ದೇಶದ ಎಡ್ಡೆಸೆಯಲೆದು, ಕಡೆಗೆ ಬಂಗಾಲದಲ್ಲಿ '**ನವಗ್ರಾಮ**' ನಗರದಲ್ಲಿ ವಾಸಿಸುತ್ತಿದ್ದನೆಂದು ಕರ್ನಾಟಕ ಕವಿಚರಿತೆಯಿಂದ ತಿಳಿಯುತ್ತದೆ. ಅಲ್ಲದೆಯೆ, ಈತನು '**ಅಭಿಧಾನ ರತ್ನಮಾಲಾ**'- ಕೋಶವನ್ನು ಬರೆದಿರುವನೆಂದು ರಾ. ಬ. ಆರ್. ನರಸಿಂಹಾಚಾರ್ಯರು ಹೇಳಿರುವರು. ಶಿವಸ್ತುತಿರೂಪವಾದ ಗ್ರಂಥಪೊಂಪನ್ನು 'ಹಲಾಯುಧ ಸ್ತೋತ್ರ' ಎಂಬ ಹೆಸರಿನಿಂದ ಬರೆದಿರುವನು. ಈ ಹಲಾಯುಧ ಸ್ತೋತ್ರಕ್ಕೆ ಕ್ರಿ. ಶ. ೧೧೬೫ರಲ್ಲಿದ್ದ **ಕೆರೆಯ ಪದ್ಮರಸರ** ಪೊಮ್ಮೊಗನಾದ **ವಿಶ್ವಾರಾಧ್ಯನು** ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದಿರುವನು. ಇದಕ್ಕೆ ಕನ್ನಡ ವ್ಯಾಖ್ಯಾನವನ್ನು ಕ್ರಿ. ಶ. ೧೬೫೦ ರಲ್ಲಿ ಗುರುದೇವ ಪಂಡಿತನು ಬರೆದಿರುವನು. " ಈ ಮಹಾತ್ಮನನ್ನು ವೀರಶೈವ ಕವಿಗಳು ವಿಶೇಷವಾಗಿ ಕೊಂಡಾಡಿರುವರು" ಅಂಥವರಲ್ಲಿ ವಿರೂಪಾಕ್ಷ ಪಂಡಿತಾರಾಧ್ಯರೂ ಒಬ್ಬರಿರಬಹುದೇ ?

* ಶ್ರೀ ಕಾಶೀನಾಥ ಶಾಸ್ತ್ರಿಗಳ 'ವೀರಶೈವ ಮಹಾತ್ಮರು'

† ಇಂಡಿಯನ್ ಆಂಟಿಕ್ವರಿ ಆಫ್ ಇಂಡಿಯಾ ಪತ್ರಿಕಾ ಭಾಗ.



ರಾಜಕೀಯ ಗ್ರಹಣ ಬಿಡುವುದೆ ?

ಹಿಂದುಸ್ತಾನದ ರಾಜಕೀಯರಂಗದಲ್ಲಿ ಕಳೆದ ತಿಂಗಳ ಸಂಸಿವೇಶಗಳು ಅತ್ಯಂತ ಮಹತ್ತ್ವದ್ದಾಗಿವೆ. ಇಡಿಯ ದೇಶದ ವಾತಾವರಣವೆ ಬದಲಾಯಿಸಿದೆ. ಕಳೆದ ೨೨ ತಿಂಗಳುಗಳಿಂದ ಬಂಧನದಲ್ಲಿ ಇರಿಸಿದ ರಾಜಕಾರಣದ ಹವೆ ಒಮ್ಮೆಲೆ ಬುಸುಗುಟ್ಟುತ್ತ ದೇಶದ ತುಂಬ ಹಬ್ಬುತ್ತಲಿದೆ. ಭಾರತೀಯ ಪತ್ರಿಕೆಗಳಲ್ಲಿ ಯುದ್ಧಕ್ಕೆಂತಲೂ ಈ ಸಂನಿವೇಶಗಳ ಚರ್ಚೆಗೇ ಹೆಚ್ಚಿನ ಸ್ಥಾನವನ್ನಿವೆ ಎಂದ ಮೇಲೆ, ಇವುಗಳ ಮಹತ್ತ್ವಕ್ಕಾಗಿ ಬೇರೊಂದು ಸಾಕ್ಷ್ಯವೆ ಬೇಕಾಗಿಲ್ಲ. ಆ ಸಂಸಿವೇಶಗಳು ಎರಡು :- (೧) ಹಿಂದು-ಮುಸ್ಲಿಂ (ಅಥವಾ ಕಾಂಗ್ರೆಸ್-ಲೀಗ) ಐಕ್ಯತೆಗಾಗಿ ರಾಜಾಜಿಯವರು ಜಿನಾ ಸಾಹೇಬರೊಡನೆ ನಡೆಯಿಸಿದ ಪತ್ರವ್ಯವಹಾರ ಮತ್ತು ಸಂಧಾನಕ್ಕಾಗಿ ಸಿದ್ಧಪಡಿಸಿದ ಯೋಜನೆ, (೨) ಲಂಡನಿನ ಡೇಲಿ ಟೆಲಿಗ್ರಾಫ್ ಪತ್ರಿಕೆಯ ಸುದ್ದಿಗಾರನಾದ ಮಿ. ಸೆಲ್ವರನಿಗೆ ಮಹಾತ್ಮರು ಕೊಟ್ಟ ಸಂದರ್ಶನ. 'ಇವೆರಡೂ ಒಂದರಹಿಂದೊಂದು ಪ್ರಕಟವಾದುದು ಆಕಸ್ಮಿಕ, ಅವುಗಳಲ್ಲಿ ಪರಸ್ಪರ ಸಂಬಂಧವಿಲ್ಲ' ಎಂದು ಮಹಾತ್ಮರು ಹೇಳಿದ್ದಾರೆ. ಆದರೆ ತಾತ್ತ್ವಿಕ ದೃಷ್ಟಿಯಿಂದ ಇವೆರಡೂ ಅತ್ಯಂತ ನಿಕಟವಾಗಿ ಸಂಬಂಧಿಸಿವೆ ಎಂದೇ ಹೇಳಬೇಕಾಗುವುದು. ಮೊದಲನೆಯದು ಜಾತೀಯ ಐಕ್ಯತೆಗೆ ಸಂಬಂಧಿಸಿದೆ, ಎರಡನೆಯದು ರಾಜಕೀಯ ಬಿಕ್ಕಟ್ಟಿಗೆ ಸಂಬಂಧಿಸಿದೆ; ಮತ್ತು ಜಾತೀಯ ಐಕ್ಯವಿಲ್ಲದೆ ರಾಜಕೀಯ ಬಿಕ್ಕಟ್ಟು ಬಿಡದು ಎಂಬುದೂ ಅನಿವಾರ್ಯವಾದ ಸತ್ಯವಾಗಿದೆ. ಆದುದರಿಂದ ಇವೆರಡನ್ನೂ ಕೂಡಿಯೆ ದೇಶದ ಭವಿತವ್ಯತೆಯ ದೃಷ್ಟಿಯಿಂದ ಚರ್ಚಿಸುವುದು ವಿಹಿತವಾಗುವುದು.

ಭಾರತೀಯ ದೃಷ್ಟಿ ಬೇಕು, ರಾಜಕೀಯ ಹಪ್ಪಳ ಬೇಡ!

ಜಾತೀಯ ಪ್ರಶ್ನೆಯನ್ನು ಬಿಡಿಸಲು ಇದುವರೆಗೆ ಅನೇಕ ಪ್ರಯತ್ನಗಳಾಗಿದ್ದರೂ, ಸದ್ಯದ ಪ್ರಯತ್ನಕ್ಕೆ ಎರಡು ಕಾರಣಗಳಿಗಾಗಿ ಮಹತ್ತ್ವವಿದೆ. ಒಂದು, ರಾಜಾಜಿಯಂತಹ ದೇಶಭಕ್ತರೂ ನೇತಾವಿಗಳೂ ಸಿದ್ಧಪಡಿಸಿದ ಯೋಜನೆಯಿದು; ಎರಡನೆಯದಾಗಿ, ಈ ಯೋಜನೆಗೆ ಮಹಾತ್ಮರು ಕಳೆದ ವರ್ಷ ತಮ್ಮ ಉಪವಾಸಕಾಲದಲ್ಲಿ, ಈಗ ಮತ್ತೆ ಬಿಡುಗಡೆಯಾದ ಮೇಲೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇಷ್ಟೊಂದು ಮಹತ್ತ್ವದ್ದಿದ್ದುದರಿಂದ, ಇದು ಒಂದು ವೇಳೆ ಯಶಸ್ವಿಯಾದೀತೆಂಬ ಹೆದರಿಕೆಯಿಂದಲೆ, ಅನೇಕ ರಾಷ್ಟ್ರೀಯ ಪತ್ರಿಕೆಗಳು ಕೂಡ ರಾಜಾಜಿಯವರು ಅದನ್ನು ಒಂದು ವರ್ಷ ಬಚ್ಚಿಟ್ಟುವಕ್ಕಾಗಿ, ಮತ್ತು ಮಹಾತ್ಮರು ವರ್ಕಿಂಗ್ ಕಮಿಟಿಯ ಮಿತ್ರರ ಸಲಹೆ ಇಲ್ಲದಾಗ ಒಪ್ಪಿಗೆಯನ್ನು ಕೊಟ್ಟುದಕ್ಕೆ—ಇಬ್ಬರನ್ನೂ ತೂಕತಪ್ಪಿ ಟೀಕಿಸುತ್ತಿದ್ದಾರೆ, ಆದರೆ ಆ ಟೀಕೆ ಇಷ್ಟಸ್ತುತ್ಯ, ಅವರ ರೀತಿ ಅಜ್ಞಾನ ಎಂದೇ ಹೇಳಬೇಕಾಗುವುದು. ಜಿನ್ನಾಸಾಹೇಬರ ಒಪ್ಪಿಗೆಯನ್ನು ಪಡೆಯುವುದರಲ್ಲಿ ರಾಜಾಜಿಯವರು ನೂರಾರು ಒಂದು ವರ್ಷವನ್ನು ಕಳೆದರು. ಆ ಒಪ್ಪಿಗೆ ಬೊರೆಯದೆಂದು ಅವರಿಗೆಯಾದಾವಣೆ ತನ್ನು ಯೋಜನೆಯನ್ನು ಪ್ರಕಟಿಸಿದರು. ಅದರಂತೆಯೆ, ಕಾಂಗ್ರೆಸು ನನ್ನೊಡನೆ ಯಾಕೆ ಸಂಧಾನವನ್ನು ನೂಡಬಾರದು ಎಂದು ಜಿನ್ನಾಸಾಹೇಬರು ಪೊರೆ ಇಡುತ್ತಿದ್ದರು; ಅಧಿಕೃತವಾದ ಕಾಂಗ್ರೆಸು ಜೇಲಿನಲ್ಲಿದ್ದೆ, ಎನ್ನು ದಿನ ಅಲ್ಲಿಯೆ ಬಾಳಿಯುವುದೊ ಹೇಳಲು ಬರುವುದಿಲ್ಲ, ಜಾತೀಯ ಐಕ್ಯವಿಲ್ಲದ ನೆಪವುವ ಬ್ರಿಟಿಶರ ದಬ್ಬಾಳಿಕೆ ಬಲಿಯತೊಡಗಿತು, ಇವನ್ನೆಲ್ಲ ಕಂಡು ಗಾಂಧಿಜಿಯವರು ತನ್ನು ವೈಯಕ್ತಿಕ ಒಪ್ಪಿಗೆಯನ್ನು ಕೊಟ್ಟರು. ಇಂದು ದೇಶದ ಮುಂದಿರ್ದುದು ಒಂದು ಮುಹತ್ತ್ವದ ಯೋಜನೆ. ದೇಶದ ಭವಿತವ್ಯತೆಯ ದೃಷ್ಟಿಯಿಂದ ಅದನ್ನೆ ಚರ್ಚಿಸಬೇಕಲ್ಲದೆ, ಇಬ್ಬರು ಮಹಾನುಭಾವರ ಮುರುದ್ವೇಷವನ್ನು ಕಲ್ಪಿಸಿಕೊಂಡು ದೂಷಿಸಬೇಕಾಗಿಲ್ಲ. ರಾಜಾಜಿಯವರಾಗಲಿ ಮಹಾತ್ಮರಾಗಲಿ, ಒಂದು ಸಂಕುಚಿತ ಪಕ್ಷದೃಷ್ಟಿಯನ್ನು ಸದ್ಯಕ್ಕೆ ವಿಾಲಿ ನಿಂತಿದ್ದಾರೆ. ಈಗ ನಮಗೆ ಅಗತ್ಯವಿದ್ದುದು ವಿಶಾಲವಾದ ತಪಿಲ ಭಾರತೀಯ ದೃಷ್ಟಿ, ಒಂದು ಪಕ್ಷದ– ಜುಸಿರುಗಟ್ಟುವ– ರಾಜಕೀಯ ದೃಷ್ಟಿಯಲ್ಲ.

ತಳಪದಿಯ ತತ್ತ್ವ

ರಾಜಾಜಿಯವರ ಯೋಜನೆಯ ಹಿಂದೆ ಒಂದು ವಿಚಾರಸರಣಿ ಇದೆ. ಒಂದಾನೊಂದು ಕಾಲಕ್ಕೆ ಯುದ್ಧದ ಪರಿಸ್ಥಿತಿ ಬ್ರಿಟಿಶರಿಗೆ ಬಿಕ್ಕಟ್ಟಿನವಾಗಿದ್ದಿತು. ಆಗಲೂ ಹಿಂದುಸ್ತಾನಮೊಡನೆ ಸಂಧಾನವನ್ನು ಮಾಡಿಕೊಳ್ಳುವ ಇಚ್ಛೆಯನ್ನು ಕೂಡ ಬ್ರಿಟಿಷ್ ಸರಕಾರವು ತೋರಿಸಲಿಲ್ಲ. ಯಾಕೆ ? (೧) ಒಮ್ಮೆ, ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಡುವ ಇಚ್ಛೆಯ ಬ್ರಿಟಿಶರಿಗಿರಲಿಕ್ಕಿಲ್ಲ, (೨) ಇಲ್ಲವೆ ಜಾತೀಯ ಐಕ್ಯವಿಲ್ಲದೆ ದೇಶವ ಸ್ವಾತಂತ್ರ್ಯಕ್ಕೆ ಅರ್ಹವೆ ಅವರ ದೃಷ್ಟಿಯಿಂದಿರಲಿಕ್ಕಿಲ್ಲ. ಇವರಲ್ಲಿ ಮೊದಲಿನದನ್ನು ರಾಜಾಜಿಯಂತಹವರು ನಂಬಲು ಸಿದ್ಧರಿಲ್ಲ. ವಿಶ್ವರಾಷ್ಟ್ರಗಳ ಯುದ್ಧಧ್ಯೇಯ, ಬದಲಾಯಿಸುತ್ತಿರುವ ಜಾಗತಿಕ ವಾತಾವರಣ, ಮತ್ತು ಯುದ್ಧದಿಂದ ಹಿಂದುಸ್ತಾನದ ಜನರ ಮತ್ತು ಸಾಂಪತ್ತಿಕ ಸ್ಥಿತಿಯ ಮೇಲಾಗುವ ಪರಿಣಾಮ; ಇವುಗಳಿಗಾಗಿ ಯುದ್ಧದ ತರುವಾಯ ಹಿಂದುಸ್ತಾನಕ್ಕೆ ಸ್ವಾತಂತ್ರ್ಯವು ಅನಿ-

ಪಾರ್ಯಪೆ ಆಗುವುದು. (೩) ಹೀಗೆ ಅನಿವಾರ್ಯವಾದಾಗಲೂ ಬ್ರಿಟಿಷರು, ನಮ್ಮ ಅನೈಕ್ಯಕ್ಕಾಗಿ ಸ್ವಾತಂತ್ರ್ಯವನ್ನಾದರೂ ಮುಂದೂಡ ಬಹುದು, ಇಲ್ಲವೆ ಸಿಕ್ಕ ಸ್ವಾತಂತ್ರ್ಯ ಸುಖವಲ್ಲಿ ಸಿಕ್ಕದಂತಾಗಬಹುದು. ಅನಕಾಗಿ ಅನಿವಾರ್ಯವಾದ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವ ಸಲುವಾಗಿ, ಇಲ್ಲವೆ ಬ್ರಿಟಿಷರಿಗೆ ನೆವ ಉಳಿಯಗೊಡದ್ದಕ್ಕಾಗಿ ಜಾತೀಯ ಐಕ್ಯವೆ ಮೊದಲ ಧ್ಯೇಯವಾಗಬೇಕು. ಅಲ್ಲ—'ಜಾತೀಯ ಐಕ್ಯ' ಎಂದರೆ ಧ್ಯೇಯವು ಎಂದಿಗೂ ಸಾಧಿಸಲಿಕ್ಕಿಲ್ಲ. ದೇಶದ ಪ್ರತಿನಿಧಿ-ಸಂಸ್ಥೆಯಾದ ಕಾಂಗ್ರೆಸು, ದೇಶವನ್ನೆ ನಿರಾಕರಿಸಲು ಟೊಂಕಕಟ್ಟಿ ನಿಂತ ಮುಸ್ಲಿಂ ಲೀಗ್— ಇನೆರಡರಲ್ಲಿ ಒಡಂಬಡಿಕೆಯಾಗುವುದೆ ಮುಖ್ಯ ಎಂದು ರಾಜಾಜಿಯವರ ತರ್ಕ. ಈ ತರ್ಕವನ್ನು ಸಿದ್ಧಾಂತಕ್ಕೆ ಮುಟ್ಟಿಸಲು ಒಂದು ಮಾತು ತಳಪದಿಯಾಯಿತು. ಮುಸ್ಲಿಂ ಲೀಗವನ್ನು ದೂರ-ವಲ್ಲಿರಿಸಿ ಬ್ರಿಟಿಷರ ಆಳಿಕೆಯನ್ನೆ ಭದ್ರಗೊಳಿಸಬೇಕೆ? ಇಲ್ಲವೆ, ಅವರ ಅಪೇಕ್ಷೆಯನ್ನು ಒಪ್ಪಿ ಸ್ವಾತಂತ್ರ್ಯದ ಸಿದ್ಧತೆಯನ್ನು ಮಾಡಿ ಕೊಳ್ಳಬೇಕೆ? (೧೪-೭-೪೪)

ಅರಿಯಬೇಕಾದ ಅಂಶಗಳು

ರಾಜಾಜಿಯವರ ಯೋಜನೆಯಲ್ಲಿಯ ಮುಖ್ಯ ಮಾತುಗಳೆಲ್ಲ ಈಗಾಗಲೆ ಪ್ರಸಿದ್ಧಿಪಡಿಸಲ್ಪಟ್ಟಿವೆ. (೧) ಸ್ವಾತಂತ್ರ್ಯದ ಹೋರಾಟದಲ್ಲಿ ಮತ್ತು ಕೇಂದ್ರದಲ್ಲಿ ಸಂಯುಕ್ತ ಮಂತ್ರಿಮಂಡಲವನ್ನು ರಚಿಸುವಲ್ಲಿ ಲೀಗವು ಕಾಂಗ್ರೆಸ್ಸಿನೊಡನೆ ಸಹಕರಿಸಬೇಕು. (೨) ಯುದ್ಧದ ತರುವಾಯ ಪಾಕಿಸ್ತಾನ ಬೇಡಿಕೆಯ ಸ್ವರೂಪಗಳ ವಿಚಾರಣೆಗೆ ಒಂದು ಮಂಡಳವನ್ನು ನಿಯಮಿಸಬೇಕು. (೩) ಆ ನೇಲೆ ಹಿಂದುಸ್ತಾನವನ್ನು ಬಿಟ್ಟು ಹೋಗಬೇಕೊ ಇಲ್ಲವೊ ಎಂಬ ಪ್ರಶ್ನೆಯ ಮೇಲೆ ಲೋಕಾಭಿಮತ (Plebiscite) ವನ್ನು ತೆಗೆದುಕೊಳ್ಳಬೇಕು. (೪) ಈ ಲೋಕಾಭಿಮತಕ್ಕೆ ಮುಂಚಿತವಾಗಿ ಎಲ್ಲ ಪಕ್ಷಗಳಿಗೆ ಪ್ರಚಾರಸ್ವಾತಂತ್ರ್ಯವಿರಬೇಕು. (೫) ಹಿಂದುಸ್ತಾನವನ್ನು ಬಿಟ್ಟು ಹೋಗುವುದಾದಲ್ಲಿ, ಸಂರಕ್ಷಣೆ, ವಾಣಿಜ್ಯ, ದಾಪಣ ಮಾತೆಗಳ ಬಗ್ಗೆ ಒಂದು ಕೇಂದ್ರೀಕರಿಸುವ ಒಪ್ಪಂದಿಕೆಯಾಗಬೇಕು. (೬) ಬ್ರಿಟಿಷರು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಬೊಟ್ಟಿನ ಮೇಲೆಯೆ ಈ ಕರಾರುಗಳು ಜಾರಿಯಲ್ಲಿ ಬರಬೇಕು— ಇವೇ ಆ ಯೋಜನೆಯ ಮುಖ್ಯ ಸೂಚನೆಗಳು. ಇವುಗಳಲ್ಲಿ (೧) ಮತ್ತು (೬) ಇವನ್ನು ನೋಡಿದರೆ, ಭಾರತದ ಸ್ವಾತಂತ್ರ್ಯದ ದೃಷ್ಟಿಯೆ ಈ ಯೋಜನೆಗಾರರಿಗೆ ಮುಖ್ಯವಾಗಿದೆ ಎಂಬುದು ಸ್ಪಷ್ಟವಿದೆ. ಉಳಿದಂತೆಯೆ (೨), (೪) ಮತ್ತು (೫) ಗಳನ್ನು ನೋಡಿದರೆ, ದೇಶವನ್ನು ಕಡಿದು ಹಂಚತಂದು ಮಾಡಲು ರಾಜಾಜಿಯವರು ಅಷ್ಟೇನು ಉತ್ಸುಕರಿಲ್ಲ ಎಂಬುದೂ ಸ್ಪಷ್ಟವಾಗುವುದು. ಇಷ್ಟೆ ಇದ್ದಲ್ಲಿ ಒಂದು ಸ್ವಾರಸ್ಯವಿಲ್ಲದ ಹೊರಬೇಳಹುದೆಬ ತತ್ತ್ವವನ್ನು ಕಾಂಗ್ರೆಸು ಈ ಹೊದಲೆ ಒಪ್ಪಿದೆ. ಈಗ ಸ್ವಾಂತದ ಬದಲು ಒಂದು ಪಿಶಿಷ್ಟ ಜಾತಿಯವರು ಎಂದು ಹೇಳಿದೆ. ಎರಡರಲ್ಲಿ ಪರಿಣಾಮದ ದೃಷ್ಟಿಯಿಂದ ವ್ಯತ್ಯಾಸವಿದ್ದರೂ, ತತ್ತ್ವದ ದೃಷ್ಟಿಯಿಂದ ಎರಡೂ ಒಂದೇ. (೧೪-೭-೪೪)

ಬೇರೆ ಉಪಾಯವಿದೆಯೆ ?

ಈ ಯೋಜನೆಯನ್ನು ಖಂಡಿಸುವವರು ಒಂದು ಮಾತನ್ನು ಲಕ್ಷ್ಯದಲ್ಲಿಡಲಿ. ಬ್ರಿಟಿಷ್ ಸತ್ತೆಯಂತಹ ಪರಕೀಯ ಸತ್ತೆ ನಮ್ಮಲ್ಲಿ ಇದ್ದಾಗ ಜಾತೀಯ ಅನೈಕ್ಯವು ಸ್ವಾತಂತ್ರ್ಯಕ್ಕೆ ಅಡ್ಡಿಯಾಗುವ ಸಂಭವವೆ ಹೆಚ್ಚು. ಇಂತಹ ಪರಿಸ್ಥಿತಿಯಲ್ಲಿ ಎರಡೇ ಎರಡು ಮಾರ್ಗಗಳು: ಒಂದು, ಮುಸ್ಲಿಂ ಲೀಗನ್ನು ಪೂರ್ತಿಯಾಗಿ ಬದಿಗಿರಿಸಿ ಬ್ರಿಟಿಷ್ ಸತ್ತೆಯನ್ನು ಎದುರಿಸುವುದು. ಈ ಮಾರ್ಗವು ಎಷ್ಟು ಕಷ್ಟವಾಗಿದೆ ಎಂಬುದು ಕಳೆದ ಎರಡು ವರ್ಷಗಳಿಂದ ನಡೆದ ಆರ್ಡಿನನ್ಸ್‌ಗಳ ಆಳಿಕೆಯಿಂದ ತಿಳಿಯುವುದು. ಎರಡನೆಯ ಮಾರ್ಗವೆಂದರೆ, ಅನಿವಾರ್ಯವೆಂದಾದರೂ ಮುಸ್ಲಿಂ ಲೀಗಜೊಡನೆ ಒಮ್ಮತವನ್ನು ಗಳಿಸುವುದು. 'ಮುಸ್ಲಿಂ ಲೀಗವು ದೇಶದ ಮುಸಲ್ಮಾನರ ಪ್ರತಿನಿಧಿಸಂಸ್ಥೆಯಲ್ಲ' ಎಂದು ಅನೇಕರು ವಾದಿಸಬಹುದು. ಆ ಮಾತಿನಲ್ಲಿ ವಿಶ್ವಾಸವಿದ್ದರೆ ರಾಜಾಜಿಯವರ ಯೋಜನೆಗೆ ಹೆದರುವುದೇಕೆ? ಇದಲ್ಲದೆ ಪಾಕಿಸ್ತಾನಕ್ಕಾಗಿ ಲೋಕಾಭಿಮತವನ್ನು ತೆಗೆದುಕೊಳ್ಳಬೇಕು ಎನ್ನುವಾಗ, ರಾಜಾಜಿಯವರ ದೃಷ್ಟಿಯಿಂದಲೂ ಲೀಗವು ಮುಸಲ್ಮಾನರ ಒಂದೇ ಒಂದು ಪ್ರತಿನಿಧಿಸಂಸ್ಥೆ ಎನ್ನಿಸುವುದಿಲ್ಲ. ಇದನ್ನು ಕಂಡು ಜಿನ್ನಾಸಾಹೇಬರು ಈ ಯೋಜನೆಯನ್ನು ಒಪ್ಪುವುದಿಲ್ಲ ಎಂದು ನಮ್ಮ ತರ್ಕ. ಲೋಕಾಭಿಮತವಾಗಲಿ, ಎಲ್ಲ ಪಕ್ಷಗಳಿಗೆ ಪ್ರಚಾರಸ್ವಾತಂತ್ರ್ಯವಾಗಲಿ ಜಿನ್ನಾ ಸಾಹೇಬರ ವೈಯಕ್ತಿಕ ಮಹತ್ತ್ವಾಕಾಂಕ್ಷೆಗೆ ಭಂಗ ತರುವಂತಹವಾಗಿವೆ 'ಲೀಗವು ಇಡಿಯ ದೇಶದ ಮುಸಲ್ಮಾನರ ಒಂದೇ ಒಂದು ಪ್ರತಿನಿಧಿ ಸಂಸ್ಥೆ ಎಂದು ಒಪ್ಪಬೇಕು' ಎಂದು ಸಾಹೇಬರು ಇತ್ತಿತ್ತಲಾಗಿ ಹಟ ಹಿಡಿದುದಕ್ಕೆ ಅವರ ಅಹಂಕಾರದಷ್ಟೆ ಅಸ್ಥೈರ್ಯವೂ ಕಾರಣವಾಗಿದೆ. ಈ ಪರಿಸ್ಥಿತಿಯಲ್ಲಿ ರಾಜಾಜಿಯವರ ಯೋಜನೆಯೆ ಸಮಯೋಚಿತವಾದುದೆಂದು ಒಪ್ಪಬೇಕು, ಇಲ್ಲವಾದರೆ ಬೇರೊಂದು ಯೋಜನೆಯನ್ನು— ಎಲ್ಲರ ಒಪ್ಪಿಗೆ ಪಡೆಯುವಂತಹದನ್ನು— ತಯಾರಿಸಬೇಕು. ಪಕ್ಷದ ಸ್ವಾಭಿಮಾನಕ್ಕಿಂತ ಇಂದು ದೇಶದ ಸ್ವಾತಂತ್ರ್ಯವು ಅಗತ್ಯವೂ ಘನತ್ತು ಮಹತ್ತ್ವದ ಪ್ರಶ್ನೆಯಾಗಿದೆ.

ಮಹಾತ್ಮರ ಘನೋಭೂಮಿಕೆ

ತಮ್ಮ ಯೋಜನೆಗೆ ಕಳೆದ ಒಂದು ವರ್ಷದಿಂದ ಮಹಾತ್ಮರ ಒಪ್ಪಿಗೆ ಇದೆ—ಎಂದು ರಾಜಾಜಿಯವರು ಹೇಳಿದರು; ಅದನ್ನು ಮಹಾತ್ಮರೆ ದೃಢೀಕರಿಸಿದರು. ಮಹಾತ್ಮರ ಈ ಒಪ್ಪಿಗೆಗಾಗಿ ಅನೇಕ ಅವರ ಅನುಯಾಯಿಗಳೆ ದಂಗುಪಡೆದಿದ್ದಾರೆ. ಕೆಲವರಂತೂ ಪ್ರತಿಭಟಿಸಿದ್ದಾರೆ. ಪ್ರತಿಯೊಂದು ಮಾತಿನ ಬಗ್ಗೆ ವರ್ಕಿಂಗ್ ಕಮಿಟಿಯಪ ಜೊಡನೆ ವಿಚಾರವಿನಿಮಯ ಅಗತ್ಯವೆಂದು ವೈಸರಾಯರೊಡನೆ ಪಟ ತೊಡುವ ಮಹಾತ್ಮರು, ಇಂತಹ ಮಹತ್ತ್ವದ ಪ್ರಶ್ನೆಯ ಬಗ್ಗೆ ಅವರ ಸಲಹೆ ಇಲ್ಲದೆಯೆ ತಮ್ಮ ಅಭಿಪ್ರಾಯವನ್ನು ಹೇಗೆ ವ್ಯಕ್ತ ಮಾಡಿದರು—ಎಂದು ಅನುಯಾಯಿಗಳಿಗೂ ಅನ್ಯಪಕ್ಷದವರಿಗೂ ಒಂದೇ ಗೂಢ. ಆದರೆ ನಿಜವಾಗಿ ಇದರಲ್ಲಿ ಯಾವ ಗೂಢವೂ ಇಲ್ಲ. ವೈಸರಾಯರೊಡನೆ ಮಹಾತ್ಮರು ಪಟ ತೊಡುವ ಸಂದರ್ಭವೆ ಬೇರೆಯಾಗಿದೆ. ೧೫೨೨ ರ ಆಗಸ್ಟ್ ಅನೆಯ ಜಾರೀಕಿನ ಗೊತ್ತುವಳಿಯನ್ನು ತಿರುಗಿ ತೆಗೆದುಕೊಳ್ಳಬೇಕು ಎಂದು ವೈಸರಾಯರ ಪಟ. ಆ ಗೊತ್ತುವಳಿಯ ವಿಷಯದ ಬಗ್ಗೆ ಮಹಾತ್ಮರು ಹರಿಜನ ಪತ್ರಿಕೆಯಲ್ಲಿ ಮುಂಚಿತವಾಗಿ ಪ್ರಚಾರ ಮಾಡಿದ್ದು ನಿಜ, ಆ ವಿಷಯದ ಪ್ರೇರಕರೂ ಮಹಾತ್ಮರೆ ಎಂಬುದೂ ನಿಜ. ಆದರೆ ಆಗಸ್ಟ್ ಅರ ವರೆಗೆ ಅವರ ಎಲ್ಲ ಒಡೆತನವು ಮಹಾತ್ಮರದಾಗಿದ್ದರೂ ತರುವಾಯದಲ್ಲಿ ಅದು ಒಂದು ಸಮಿತಿಯು ಅಧಿಕೃತವಾಗಿ ಸ್ವೀಕರಿಸಿದ ಗೊತ್ತುವಳಿಯಾಗಿ, ಅವರ ಒಡೆತನವೆಲ್ಲ ಅಗಿನಿಂದ ಆ ಸಮಿತಿಯನ್ನೆ ಸೇರಿತು.

ಈ ಕಾರಣಕ್ಕಾಗಿ 'ಸಮಿತಿಯ ಸದಸ್ಯರೊಡನೆ ವಿಚಾರವಿನಿಮಯ ಅಗತ್ಯ' ಎಂದು ಮಹಾತ್ಮರು ಹಟ ಹೊಟ್ಟಿದ್ದು. ಆದರೆ ರಾಜಾಜಿಯವರ ಯೋಜನೆಯ ವಿಷಯವೆ ಬೇರೆಯಾಗಿದೆ. ಇದು ಗೊತ್ತು. ವಳಿಯಲ್ಲ. ಸಲಹೆ; ಮಹಾತ್ಮರು ಹೇಳುವುದು ಕಾಂಗ್ರೆಸಿನ ನಿರ್ಣಯವಲ್ಲ, ತಮ್ಮ ವೈಯಕ್ತಿಕ ಅಭಿಪ್ರಾಯ. ವೈಯಕ್ತಿಕ ಅಭಿಪ್ರಾಯವನ್ನು ಕೂಡ ಇನ್ನೊಬ್ಬರ ಸಲಹೆಯನ್ನು ಪಡೆದೇ ಹೇಳಬೇಕೆನ್ನುವುದು ಅಸಹಾಸ್ಯವಾಗಲಿಕ್ಕಿಲ್ಲವೆ? 'ಮಹಾತ್ಮರು ಕೂಡ ದೇಶವಿಚ್ಛೇದನತತ್ತ್ವವನ್ನು ಆಶೀರ್ವದಿಸಿದರು' ಎಂಬ ಅನುಯಾಯಿಗಳಾಗಲಿ, ಜಿನ್ನಾ ಸಾಹೇಬರೂ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಲೀಗ ವರ್ಕಿಂಗ್ ಕಮಿಟಿಯವರನ್ನು ಕೇಳಿಯೆ ಕೊಡುವುದು ಸರಿಯೆಂದು ವಾದಿಸುವ ಅನ್ಯಪಕ್ಷದವರಾಗಲಿ, ಮಹಾತ್ಮರ ಮನೋಭೂಮಿಕೆಯನ್ನೆ ತಿಳಿದುಕೊಳ್ಳದೆ, ಅವಸರದಿಂದ ಅಡ್ಡದಾರಿಯನ್ನು ಹಿಡಿದಿದ್ದಾರೆ ಎಂದು ನಿರ್ಭೀತವಾಗಿ ಹೇಳಬಹುದು.

(೧೯—೭—೪೪)

ಒಪ್ಪಿಗೆಯ ಮಹತ್ತ್ವ

ರಾಜಾಜಿಯವರ ಯೋಜನೆಯನ್ನು ಮಹಾತ್ಮರು ಒಪ್ಪಿದ್ದಾರೆಂದರೆ ಕೇವಲ ಮುಸ್ಲಿಂ ಲೀಗಿನೊಡನೆ ಸಂಧಾನವನ್ನು ಮಾಡಿಕೊಳ್ಳಲು ಒಪ್ಪಿದ್ದಾರೆಂದು ಅರ್ಥವಾಗುವುದಿಲ್ಲ. ಮಹಾತ್ಮರು ಈ ಒಪ್ಪಿಗೆಯಿಂದ ತಮ್ಮ ಸಪ್ಯದ ರಾಜಕೀಯ ಧೋರಣೆಯನ್ನೆ ಬದಲಾಯಿಸಿದ್ದಾರೆಂದು, ಆ ಯೋಜನೆಯ ಕರಾರುಗಳನ್ನು ಲಕ್ಷ್ಯಪೂರ್ವಕವಾಗಿ ನೋಡಿದರೆ ಸ್ಪಷ್ಟವಾಗುವುದು. 'ಕೇಂದ್ರದಲ್ಲಿ ಸಂಯುಕ್ತಮಂಡಳವನ್ನು ರಚಿಸಲು ಲೀಗಿನ ಸಹಕಾರಿಸಬೇಕೆಂಬ ಮಾತನ್ನು ಮಹಾತ್ಮರು ಒಪ್ಪಿರುವರಲ್ಲವೆ?' ಎಂದರೆ, ಸದ್ಯಕ್ಕೆ ಕಾಂಗ್ರೆಸು ಮತ್ತೆ ರಾಜ್ಯಾಡಳಿತದ ಸೂತ್ರವನ್ನು ವಹಿಸಬೇಕೆಂದು ಮಹಾತ್ಮರ ಅಭಿಪ್ರಾಯವಲ್ಲವೆ? ಇದನ್ನು ಕಂಡು ಅನೇಕರಿಗೆ ಖೇದವಾಗಬಹುದು. ಎರಡು ವರ್ಷಗಳ ವರೆಗೆ ಕಾಂಗ್ರೆಸ್ ಮುಂದಾಳುಗಳನ್ನು ಜೇಲಿನಲ್ಲಿರಿಸುವ ಚಳವಳಿಗೆ ಕಾರಣರಾದವರು, ಈಗ ಹೀಗೆ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದೆಂದರೇನು?—ಎಂದು ಅನೇಕರು ವಾದಿಸಬಹುದು ಅಂತಹರು ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು. **ಮಹಾತ್ಮರು ಯಾವ ಚಳವಳಿಯನ್ನೂ ಹೂಡಿರಲಿಲ್ಲ.** ಆದರೆ ತಮ್ಮ ಧೋರಣೆಗಾಗಿ ಇಂತಹ ಪ್ರಸಂಗ ಬರುವುದೆಂದು ತಿಳಿಯಬಾರದಾಗಿತ್ತೆ—ಎಂದೂ ಕೆಲವರ ಆಕ್ಷೇಪ. ಅದಕ್ಕೆ ಒಂದೇ ಉತ್ತರ: ಇಂತಹ ಪ್ರಸಂಗ ಬಂದೊದಗಿದ್ದು ಬ್ರಿಟಿಷರು ಅವಸರದಿಂದ ಹೆದರಿದ್ದಕ್ಕಾಗಿ; ಕೇವಲ ಒಂದು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಕ್ಕಾಗಿ ಇಡಿಯ ಒಂದು ಸಂಸ್ಥೆಯನ್ನೇ ಮುರಿಯಲು ಸರಕಾರವು ತೊಡಗುವುದು ಅನಿರೀಕ್ಷಿತ, ಅನ್ಯಾಯ; ಅಂತಹ ಪ್ರಸಂಗವನ್ನು ಯಾರೂ ಊಹಿಸಲಾರರು. ಆಗಸ್ಟ್ ಗೊತ್ತುವಳಿಯ ನಂತರ ವೈಸರಾಯರನ್ನು ಕಾಣಬೇಕೆಂದ ಗಾಂಧಿಜಿಯವರು, ಹಾಗೆ ಮಾಡಿದ ಮೇಲೆ ಇದೇ ಮಾತನ್ನು ಹೇಳುತ್ತಿರಲಿಲ್ಲವೆಂಬುದಕ್ಕೆ ಆಧಾರವೆಲ್ಲಿದೆ? ಯಾವುದೊ ಒಂದು ಕಾರಣಕ್ಕಾಗಿ ಸರಕಾರವು ದಿಕ್ಕುತಪ್ಪಿ ನಡೆದುದರ ಹೊಣೆಯನ್ನು ಗಾಂಧಿಜಿಯವರ ಮೇಲೆ ಎಂದಿಗೂ ಹೊರಿಸಲಾಗದು. ವೈಸರಾಯರನ್ನಲ್ಲದೆ ಜಿನ್ನಾರವರನ್ನೂ ಆಗ ಮಹಾತ್ಮರು ಕಾಣಬಯಸಿದ್ದರು. ಇದನ್ನೆಲ್ಲ ನೆನೆದುಕೊಂಡರೆ ರಾಷ್ಟ್ರೀಯ ಸರಕಾರವನ್ನು ಕಾಂಗ್ರೆಸು ಲೀಗಿನ ಸಹಕಾರದೊಡನೆ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ರಚಿಸಬೇಕೆಂಬ ಮಹಾತ್ಮರ ಅಭಿಪ್ರಾಯಕ್ಕಾಗಿ ಯಾರೂ ಆಶ್ಚರ್ಯವಾಗಬೇಕಾಗಿಲ್ಲ.

ಒಕ್ಕೆಟ್ಟಿನ ಒರೆಗಲ್ಲು

ಇದಲ್ಲದೆ ಯುದ್ಧ ಮುಗಿದ ನಂತರ ಪಾಕಿಸ್ತಾನದ ನಿರ್ಣಯವನ್ನು ಮಾಡುವ ಕರಾರನ್ನು ಮಹಾತ್ಮರು ಒಪ್ಪಿದ್ದಾರೆ. ಇದು ಇನ್ನಿಷ್ಟು ಮಹತ್ತ್ವದ್ದಾಗಿದೆ; ಯಾಕೆಂದರೆ, ಯುದ್ಧಪ್ರಯತ್ನದಲ್ಲಿ ಕಾಂಗ್ರೆಸು ಭಾಗ ವಹಿಸಬೇಕೆಂಬುದು ಇದರಿಂದ ಸಂದೇಹವುಳಿದಂತೆ ನಿಷ್ಪನ್ನವಾಗುವುದು. ಪ್ರಧಿಲಭಾಷ್ಟೀಯ ಮಂತ್ರಿಮಂಡಳವನ್ನು, ಯುದ್ಧದಲ್ಲಿ ಭಾಗ ವಹಿಸದಿದ್ದಾಗ ರಚಿಸುವುದೆ ರಕ್ಷಣವಿಲ್ಲ. ಇದಲ್ಲದೆ ಯುದ್ಧವನ್ನು ಯಶಸ್ವಿಯೆನ್ನಾಗಿ ಕೊನೆಗೊಳಿಸುವುದು ಕಾಂಗ್ರೆಸಿನ ಅನಿವಾರ್ಯವಾನಂತೆ ಇಷ್ಟವೂ ಆಗುವುದು. ಮೂರನೆಯವಾಗಿ, 'ಹಿಂದುಸ್ತಾನದಲ್ಲಿ ಹಿಂದುಗಳೂ ಮುಸಲ್ಮಾನರೂ ಒಂದು ಕೆಲಸದಲ್ಲಿ ಕೂಡುವುದೆ ರಕ್ಷವಿಲ್ಲ' ಎಂಬ ಬ್ರಿಟಿಷರಿಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಂತಾಗುವುದು. ದೇಶದ ಸ್ವಾತಂತ್ರ್ಯಕ್ಕಾಗಿ, ಯುದ್ಧಪ್ರಯತ್ನದಲ್ಲಿ ಹಿಂದು-ಮುಸಲ್ಮಾನರು ಕೆಲಕಾಲವಾದರೂ ಒಂದೇ ಮಂತ್ರಿಮಂಡಳದಲ್ಲಿದ್ದರೆ, ಪರಕೀಯರ ಈ ಅನೈಕ್ಯದ ಆರೋಪವನ್ನು ಅಲ್ಲಗಳೆದಂತಾಗುವುದಲ್ಲವೆ? ಕೊನೆಯದಾಗಿ, ಪಾಕಿಸ್ತಾನದ ಪ್ರಶ್ನೆಗೆ ಇದು ನಿಜವಾಗಿ ಒಕ್ಕೆಗಲ್ಲಿನಂತಾಗುವುದು. ದೇಶದ ಸ್ವಾತಂತ್ರ್ಯಕ್ಕಾಗಿ ಮುಸಲ್ಮಾನರು ಸಹಕರಿಸಿ ಯುದ್ಧವನ್ನು ನಡೆಯಿಸಿದರೆ, ಅವರಿಗೆ ಪಾಕಿಸ್ತಾನಕ್ಕಾಗಿ ಅಷ್ಟೊಂದು ಹಟವಿಲ್ಲ ಎಂದು ಸ್ಪಷ್ಟವಾಗುವುದು, ಸಂಯುಕ್ತ ರಾಷ್ಟ್ರೀಯ ಸರಕಾರದ ಯುದ್ಧನಿರ್ವಹಣವು ಯಶಸ್ವಿ

೫೧ ವರ್ಷಗಳಿಂದ ಅನುಭವ ಪಟ್ಟ

ಕರ್ಕ ಮತ್ತು ಕಂಪನಿ

ಇವರ

ಜ್ವರಗಡ್ಡೆಯ ಗುಳಿಗೆ

ಬಾಟ್ಲಿಗೆ ೧-೦-೦

ಎಂತಹ ಜ್ವರಗಡ್ಡೆಯನ್ನೂ ಕಳಿಯುವುದು.

ವಿಳಾಸ:- ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ

ಗಿರಗಾಂವ, ಮುಂಬಯಿ

ಯಾವರೆ, 'ಇನ್ನೆರಡೂ ಜನಾಂಗಗಳೆ ಬೇರೆ' ಎಂಬ ಜಿನ್ನಾ ಸಾಹೇಬರ ಮೂಲ ನೂತನೆಯೆ ಕೊಡಲಿಪೆಟ್ಟು ಬಿದ್ದಂತಾಗುವುದು. ಒಂದು ವೇಳೆ ಮುಸ್ಲಿಂ ಲೀಗವು ಇದನ್ನು ನಿರಾಕರಿಸಿದರೆ, ಅದಕ್ಕೆ ನ್ಯಾತಂತ್ರ್ಯದ ಆಸ್ಥೆ ಇಲ್ಲ; ಅರ್ಥಾತ್ ಪಾಕಿಸ್ತಾನವೂ ಬೇಕಿಲ್ಲ ಎಂದೇ ಸ್ಪಷ್ಟವಾಗುವುದು. ಮಹಾತ್ಮರ ಒಪ್ಪಿಗೆಯಲ್ಲಿ ಇನ್ನೆಲ್ಲ ಮಾತುಗಳು ಅಡಕವಾಗಿವೆ ಎಂದು ನಮ್ಮ ಅಭಿಪ್ರಾಯ. (೨೦-೭-೪೪).

ಸಂಧಾನವು ಶಕ್ಯವಿದೆಯೆ ?

ಮಹಾತ್ಮರ ಬಿಡುಗಡೆಯಾದಂದಿನಿಂದ ಎಲ್ಲರ ಮನಸ್ಸಿನಲ್ಲೂ 'ಸಂಧಾನವಾದೀತೆ?' ಎಂಬ ಆಸೆಯು ಮೂಡಿತ್ತು. ಮಹಾತ್ಮರನ್ನು ಕಾಣಲು ವೈದ್ಯರಾಯರು ಒಪ್ಪುವಾಗ ಅನೇಕರಿಗೆ ನಿರಾಶೆ ಸುತ್ತಿತ್ತು. ಆದರೆ ಇಂಗ್ಲೆಂಡಿನ ಪತ್ರಿಕಾ ಸುದ್ದಿಗಾರನಾದ ಮಿ. ಗೆಲ್ಟರನಿಗೆ ಜುಲೈ ೪ನೆಯ ತಾರೀಖಿಗೆ ಮಹಾತ್ಮರು ಕೊಟ್ಟ ಸಂದರ್ಶನವು ಪ್ರಕಟವಾದಂದಿನಿಂದ ಬಹುಜನರಿಗೆ ಮತ್ತೆ ಸಂಧಾನದ ಶಕ್ಯತೆ ಕಂಡುಬಂದಿದೆ. ಆದರೂ ಒಮ್ಮೆ ಮಾತನ್ನು ಹೊರಲು ಚಿಕ್ಕೆಪಡ್ಡಿಡಬೇಕು. ಸಂಧಾನಕ್ಕೆ ಈಗ ಮೂರು ಸಮಸ್ಯೆಗಳ ಆವಶ್ಯಕತೆ ಇದೆ: ಕಾಂಗ್ರೆಸು, ವೈಸರಾಯರು ಮತ್ತು ಮುಸ್ಲಿಂಲೀಗ-ಇವುಗಳಲ್ಲಿ ಅಧಿಕೃತವಾದ ಕಾಂಗ್ರೆಸು ಇನ್ನೂ ಬಂಧನದಲ್ಲಿದೆ. ವೈಸರಾಯರ ವಿಷಯವಾಗಿ ಹೇಳುವುದಾದರೆ, ಮಹಾತ್ಮರ ಮತ್ತು ಕಾಂಗ್ರೆಸ್ ಮುಂದಾಳುಗಳ ಘೋರಣೆ ಬದಲಾಯಿಸಿದಲ್ಲಿ ತಾವು ಮಾತು-ಕತೆಯನ್ನು ನಡೆಯಿಸಬಹುದೆಂಬ ಆಶೆಯನ್ನು ಅವರು ಹುಟ್ಟಿಸಿದ್ದಾರೆ. ಈ ಆಶೆಗೆ ಸಮರ್ಥನವಾಗುವಂತೆಯೆ ಮಹಾತ್ಮರು ತಮ್ಮ ಅಭಿಪ್ರಾಯಗಳನ್ನು ಕಾಣಿಸಿದ್ದಾರೆನಬಹುದು. ಒಂದು, ತಾವು ಚಳವಳಿಯನ್ನು ಹೂಡುವುದಿಲ್ಲ ಎಂದು; ಎರಡು, ಸರಕಾರದಲ್ಲಿ ಭಾಗ ವಹಿಸುವಂತೆ ಕಾಂಗ್ರೆಸಿಗೆ ತಾವು ಸಲಹೆ ಕೊಡುವರು ಎಂದು; ಮೂರು, ಮಿತ್ರಪಕ್ಷದವರ ಯುದ್ಧ ಕಾರ್ಯಕ್ಕೆ ತಮ್ಮ ಸಹಾಯ-ಸಹಾನುಭೂತಿಗಳು ದೊರೆಯುವುವೆಂದು. ಅನೇಕ ಕಾಂಗ್ರೆಸಿಗರಿಗೆ ಮಹಾತ್ಮರ ಈ ಅಭಿಪ್ರಾಯಗಳಿಂದ ಮಾನಸಾನಿಯಾದಂತಿದೆ; ಆದರೆ ಇಂತಹವು ಆ ಅಭಿಪ್ರಾಯಗಳಲ್ಲಿಯ ಮುಖ್ಯಮಾತನ್ನು ಮರೆತಿದ್ದಾರೆ. 'ಯುದ್ಧಕಾಲದಲ್ಲೂ ಹಿಂದುಸ್ತಾನಕ್ಕೆ ನಾಗರಿಕಜೀವನದ ಸ್ವಾತಂತ್ರ್ಯ ಬೇಕು,' ಎಂದರೆ ಯುದ್ಧನಿರ್ವಹಣ ಖಾತೆಯೊಂದನ್ನು ಬಿಟ್ಟು ಮಿಕ್ಕ ಆಡಳಿತವ ಸಂಪೂರ್ಣ ಸ್ವಾತಂತ್ರ್ಯ ಬೇಕು ಎಂದರೆಯೆ ಮೊದಲಿನ ಆಶ್ವಾಸನಗಳನ್ನು ಪೂರಯಿಸುವುದು ಎಂದು. ಇದನ್ನು ಹೇಳುವುದರಲ್ಲಿ ಮಹಾತ್ಮರು ಕಾಂಗ್ರೆಸಿನ ದರ್ಜೆಯನ್ನು ಎಳ್ಳಷ್ಟೂ ಇಳಿಸಿಲ್ಲ ಎಂದು ನಮ್ಮ ಅಭಿಪ್ರಾಯ. ಮುಂಚೆ ಹೇಳುವುದನ್ನೇ ಈಗ ಬೇರೊಂದು ರೀತಿಯಲ್ಲಿ ಹೇಳಿದ್ದಾರೆ. 'ಹಿಂದುಸ್ತಾನಕ್ಕೆ ಮೊದಲು ಸ್ವಾತಂತ್ರ್ಯ ಬೇಕು', ಸ್ವತಂತ್ರ ಹಿಂದುಸ್ತಾನವು ಸಹಾಯವನ್ನು ಸೀಡುವುದು ಎಂದು ಆಗ ಹೇಳಿದ್ದು. ಆದರೆ ಬ್ರಿಟಿಷರಿಗೆ ತಮ್ಮಲ್ಲಿ ಇನ್ನೂ ವಿಶ್ವಾಸವಿಲ್ಲವೆಂದು ಮನಗಂಡು, ಉದಾರಹೃದಯವಿಂದ ಈಗ ತಾವೇ ಅವರಲ್ಲಿ ಹುಟ್ಟಿನ ವಿಶ್ವಾಸವನ್ನಿಟ್ಟು 'ಮೊದಲು ಯುದ್ಧದಲ್ಲಿ ಸಹಕಾರ, ಯುದ್ಧದ ತರುವಾಯ ಸ್ವಾತಂತ್ರ್ಯ', ಅಲ್ಲಿಯವರೆಗೆ ಪರಸ್ಪರರಲ್ಲಿ ವಿಶ್ವಾಸ ಹುಟ್ಟಿ ಬೆಳೆಯುವುದಕ್ಕಾಗಿ ಸದ್ಯಕ್ಕೆ ನಾಗರಿಕ ಆಡಳಿತದ ಸ್ವಾತಂತ್ರ್ಯ—ಎಂದಿದ್ದಾರೆ. ಇದೇ ಮಾತನ್ನು ಮುಸ್ಲಿಂ ಲೀಗಿಗೂ ಹೇಳಿದ್ದಾರೆಂಬುದು ಮೇಲಿನ ಚರ್ಚೆಯಿಂದ ಸ್ಪಷ್ಟವಾಗಿರಲು ಸಾಕು. ಸದ್ಯಕ್ಕೆ ಒಂದೇ ಪ್ರಶ್ನೆ : ಮಹಾತ್ಮರ ಉದಾರಹೃದಯತೆ ವೈಸರಾಯರಲ್ಲಿದೆಯೆ? ಮಹಾತ್ಮರ ದೇಶಸ್ವಾತಂತ್ರ್ಯಾಭಿಮಾನ ಜಿನಾಸಾಹೇಬರಲ್ಲಿದೆಯೆ? ಇವುಗಳಲ್ಲಿ ಯಾವುದೊಂದು ಇಲ್ಲವಾದರೂ ಸಂಧಾನವು ಅಶಕ್ಯ—ಎಂದು ನಮ್ಮ ಸ್ಪಷ್ಟವಾದ ಮತ. (೨೧-೭-೪೪)

ಶೀಲಧಾ

ಎಂಟೀ ಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್ ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ರಕ್ತ ಬೆಳೆಸುತ್ತವೆ! ಕ್ವಿನ್ಯಾನ್ ಬದಲು ವೈದ್ಯ ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧೩-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧವಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೀಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಏಸ್. ಎಲ್. (ಅಪ್ಪರಾವ) **ಧಾರವಾಡ**

ಒಡನರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ



ಶಿಲಾಪ್ರವಂಗ

SHILAPRAVANG

ಯಾವುದೇ ವಿಧವಾದ ಉಷ್ಣತೆಯಿಂದ ಬಳಲಿರುವ ನಿಮ್ಮ ಹೃದಯ, ಮಿದುಳು, ರಕ್ತ, ವೀರ್ಯಗಳಿಗೆ, ಆಯಾಸವನ್ನು ಹೋಗಲಾಡಿಸಿ, ತಂಪು ಕೊಟ್ಟು, ಶರೀರದಲ್ಲಿ ನವಚೈತನ್ಯವನ್ನು ಪುಟ್ಟಿಸುವುದಕ್ಕೆ ಶ್ರೇಷ್ಠವಾದ ಔಷಧವು.

ಶ್ರೀಧೂತಪಾಪೇಶ್ವರ
ಪನವೇಲ್, ಲಿಮಿಟೆಡ್.

ಪನವೇಲ ಕುಲಾಬಾ

Shri Dhootapapeshwar
Panvel Ltd., Panvel.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೊಸ ಆಫೀಸ್ ಧಾರವಾಡ

- ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!
- ನೊವಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹೆಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧನೆಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ನಿಲುಬಿನಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ಮನಸ್ಸಿಗೂ ತೃಪ್ತಿದಾಯಕ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಏಜಂಟಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಮ್. ಗೋವರ್ಧನರಾವ, ಮ್ಯಾನೇಜರ್

ಕೆಮ್ಮನ್ನು ಅಲಕ್ಷಿಸಿದ ವಿಶೇಷ ದುಷ್ಪರಿಣಾಮಗಳಿಂದ, ಸಾವಿರಾರು ಜನರನ್ನು ಸ್ವಸ್ಥಗಿಡಿಹೊಂದಿಸಿ ಈ ಔಷಧವು ಗಂಭೀರಪಡಿಸಿದೆ.

'ಕಾಸ್ಫೊ'ವಲ್ಲಿ ಎಡರು ರೀತಿಯ ಗುಣಗಳಿವೆ:— ಹೊರಭಾಗದಿಂದು:— ಅದರ ಸಮಿಯಾದ ಶಕ್ತಿಯು ಗಂಟಲೊಳಗೆ ಇಳಿಗಳಿಂದು ಕೆಮ್ಮನ್ನು ಹೊಂಡಿಸುವ ಪರಿಣಾಮವನ್ನು ಶಾಂತಪಡಿಸುತ್ತದೆ. ಒಳಭಾಗದಿಂದು:— ಅದು ಗಂಟಲೊಳಗಿನ ಸ್ನಾಯುಗಳಿಗೆ ಒಸರಿನಿಳಿಕೆಗೆ ಚೈತನ್ಯವನ್ನುಂಟುಮಾಡುತ್ತದೆ. ಕಫವನ್ನು ಕರಗಿಸಲು ಸಹಾಯ ಮಾಡುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ. ಮತ್ತು ಕೆಮ್ಮನ್ನು ಹೊರಡಿಸುವ ಸೋಂಕನ್ನು ಅಲ್ಪಕಾಲದಲ್ಲಿಯೇ ನಿರ್ಮೂಲಮಾಡಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯನ್ನು ನಿವೃತ್ತಿಸುತ್ತದೆ. 'ಪೆಸ್ಸರ್ಕಿಂಟ್'ನಂತೆ ಒಂದು ಬಿಲ್ಲೆಯನ್ನು ೧-೨ ಗಂಟೆಗೊಮ್ಮೆ ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳುವುದು.

ಎಲ್ಲಾ ಔಷಧಾಲಯಗಳಲ್ಲಿಯೂ ದೊರಕುವುದು.



ಕರ್ನಾಟಕ ಶಾಖೆ, ಸ್ಟೇಷನ್ ರೋಡ, ಹುಬ್ಬಳ್ಳಿ.

ಸಂಯುಕ್ತ ಕರ್ನಾಟಕ

ಸಪ್ಟಂಬರ್ ೧೯೪೪

ಸಂಪುಟ ೭ * ಸಂಚಿಕೆ ೪

ಸಂಪಾದಕರು :
ಬೆಟಗೇರಿ ಕೃಷ್ಣಶರ್ಮ

●

ಮುಖ್ಯ ವಿಷಯಗಳು

ಸಾಮಾಜಿಕನ ಸಂವಚನಗಳು (ವಿಚಾರತರುಗ)
'ಸಾಮಾಜಿಕ' ೯೯

ಮನೋವೃತ್ತಿ (ಚಿಕ್ಕಕತೆ)
ಶ್ರೀ. ವಿ. ಜಿ. ಶಾನಭಾಗ, ಕುಮಟಾ ೧೦೨

ಎರಡು ಕವನಗಳು
ಶ್ರೀ. ನಾರಾಯಣ ಸಂಗಮ ಮತ್ತು ಶ್ರೀ. ವಿ. ಜಿ. ಭಟ್ಟ ೧೦೫

ಬಾಳಿದೊಂದು ಪಗಡೆಯಾಟ (ಲಘುಪ್ರಬಂಧ)
ಶ್ರೀ. ವಿಶ್ವನಾಥ ಗಣೇಶ ಹೆಗಡೆ, ಮುಂಬಯಿ ೧೦೬

ಶ್ರೀ. ಬೇಂದ್ರೆಯವರ 'ಮೇಘದೂತ' (ಕಾವ್ಯಾವಲೋಕನ)
ಶ್ರೀ. ಬ. ಎಚ್. ಶ್ರೀಧರ, ಎಂ. ಎ. ಭಟಕಳ ೧೧೮

ಆಗದ ಹಾರಯಿಕೆ (ಒಂದು ಜೀವನಚಿತ್ರ)
ಶ್ರೀಮತಿ ತೊನಕೆ ಸರ್ವಮಂಗಳಾಂಬಾ, ಬಳ್ಳಾರಿ ೧೧೩

ಸಾಹಿತ್ಯಚುನಾವಣೆ
(ಸ್ಪರ್ಧೆಯು ಪರೀಕ್ಷಕರ ವರದಿಯಿಂದ) ೧೧೭

ಸಾಹಿತ್ಯವಿಹಾರ (ಸಾಹಿತ್ಯಿಕ ಟಿಪ್ಪಣಿಗಳು)
'ವಿಹಾರಿ' ೧೧೯

ಅಲ್ಲದೆ

ಸಂಪಾದಕೀಯ, ಮಂಗನ ಮಲ್ಲಿನಾಥಶತನ, ನಾಲ್ಕೂ ನಿಟ್ಟಿನ ನೋಟ.

ವಿ. ಸೂ.—ನೀಲೋಲೆಯ ಎನೆಯ ಪುಟದಲ್ಲಿ ಸಾಹಿತ್ಯಚುನಾವಣೆ ಸ್ಪರ್ಧೆಯ ಪರಿಣಾಮ ಪ್ರಕಟನಾಗಿನೆ.

೫೫ ಆಣೆ

ಸಾಹಿತ್ಯ ಚುನಾವಣೆಯ ಫಲಿತಾಂಶ

ಒಳಗೆ ಕೊಟ್ಟ ತೀರ್ಪುಗಾರರ ವರದಿಯನ್ನು ನೋಡಿರಿ! ಸ್ಪರ್ಧೆಯನ್ನು ಏರ್ಪಡಿಸಿದವರ ಅಪೇಕ್ಷೆಗೆ ಸರಿಯಾಗಿ ಸಮುಜಸವಾದ ಸುಸಂಬದ್ಧ ವ್ಯಾಖ್ಯಾನಗಳೊಂದೂ ಬರಲಿಲ್ಲ. ಕೆಳಗೆ ಕಾಣಿಸಿದ ಮೂವರ ಅಭಿಪ್ರಾಯಗಳು ಇದ್ದುದರಲ್ಲಿ ಒಳ್ಳೆಯವೆನಿಸಿದುದರಿಂದ, ಮೂವರಿಗೂ ನಾಲ್ಕು ನಾಲ್ಕು ರೂಪಾಯಿ ಗಳಂತೆ ಬಹುಮಾನಕೊಡುವುದಾಗಿ ತೀರ್ಪುಗಾರರು ಅಭಿಪ್ರಾಯಪಟ್ಟಿದ್ದಾರೆ.

ಬಹುಮಾನ ಪಡೆದವರು:

೧ ಶ್ರೀ. ಪಾಂಡುರಂಗ ಮಂಗಳವೇಢೆ
ವೆಂಕಟಪೇಟಿ
ಬಾಗಲಕೋಟಿ

೨ ಶ್ರೀ. ಪಿ. ಎಸ್. ಮುಂಗಸೂಳಿ
ಬಿ. ಎ ಎಲ್ ಎಲ್. ಬಿ. ವಕೀಲರು
ಅಥಣಿ

೩ ಶ್ರೀ. 'ಮಂಜುನಾಥ'
ಜಿಲ್ಲಾ ವಿದ್ಯಾಧಿಕಾರಿಗಳ ಕಚೇರಿ
ಬಳ್ಳಾರಿ

ಸಪ್ಟಂಬರ್ ಕೊನೆಯವಾರದಲ್ಲಿ ಬಹುಮಾನದ ಹಣ ಕಳುಹಲಾಗುವುದು.
ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆಲ್ಲ ಹೃತ್ಪೂರ್ವಕ ಅಭಿವಂದನೆಗಳು.

ವ್ಯವಸ್ಥಾಪಕ 'ಜಯಂತಿ'

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಶೇಲಧಾ

ಎಂಟೀ ಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧–೧೬–೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪರಾವ) ಧಾಕಪ್ಪಾ

ಒಡವ ಔಷಧಿ ಸರ್ವಿಸ್, ಸಿರಸಿ. ಉ. ಕಾನಡಾ

ಮುದ್ರಕರು:
ಎನ್. ಎಸ್. ಜೆಂಗೇರಿ, ವಿಜಯ
ಮುದ್ರಾಲಯ, ಧಾರವಾಡ.

ಪ್ರಕಾಶಕರು:
ಎಂ. ವ್ಹಿ. ಮೆಳ್ಳಿಗಟ್ಟಿ, ಜಯಂತಿ
ಕಾರ್ಯಾಲಯ, ಧಾರವಾಡ.



ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸ್ಥಾ. ವರ್ಗಣಿ ಅಂಚೆಚೆಚ್ಚ ಪೇರಿ ೪—೨—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೭	೧೯೩೦ನೆಯ ಸಪ್ಟೆಂಬರ ೧೯೪೪	ಸಂಚಿಕೆ ೪

ಸಾಮಾಜಿಕನ ಸಂವಜ್ಞನಗಳು

೧

ಹುಲ್ಲುಗಾವಲಿನೊಳಿಂದು ಬಲ್ಲಿಷ್ಟಾದ ಹೋರಿ ನಿಂದಿತ್ತು ನೋಡಾ! ಕೆಳಗೆ ನೆಲದಲಿ ಬೆಳೆದ ಬೆಳಸು ಹುಲ್ಲನು ನೋಡದೆ ಮುಗಿಲ ಕಡೆಗೆ ಮೊಗವೆತ್ತಿ ಹಸಿವು-ಹಸಿವೆಂದು ಹಂಬಲಿಸ ತೊಡಗಿತ್ತು ನೋಡಾ ಬಸವಬಂಟ! ಹೋರಿಯ ಪಂಬಲಿನ ನೊರೆತ ಪತ್ತು ನಿಟ್ಟುಗಳಲಿಯು ಪಡಿನುಡಿಗೊಡುತಿತ್ತು ಕಾಣಾ! ಕೆಳಗೆ ಮೊಗವಿಳುಹಿ ನೆಲದತ್ತ ಕಂಜೆರೆದಿದ್ದ ಬಳಿಯಲಿಯೆ ಬೆಳೆದು ನಿಂತಿತ್ತು ಹುಲುಸಾದ ಪುಲ್ಲು! ಬಾಯಿಕ್ಕಿ ಕಚ್ಚಿ ಕ್ಕಿಕೊಂದು ಮೇಯುವುದನು ಬಿಟ್ಟು, ಬಾಯ್ತೆರೆದು ಕೂಗುತ ಮುಗಿಲ ನಿಟ್ಟಿಸುತಿಹುದಾ ಗಾವಿಲ ಜೀವ! ಇಂತಪ್ಪ ಅರೆಮರುಳಿತನವ ಕಂಡು ನೋವು-ನಗೆಗಳಿರದನೂ ಕಳೆವ ನೋಡಾ ನಮ್ಮ ಕಣ್ಣುಳ್ಳ ಕಾಲರಾಯ!

೨

ಅನ್ನಕಾಗಿ ಅನ್ಯರಲಿ ಅಲ್ಪರಿವುದು ಅನ್ನೆಯವು ಅನ್ನೆಯವು! ಅನ್ನವಿಲ್ಲವೆಂದು ಕಣ್ಣನೀರ ಕರೆವುದು ಅನ್ಯೆಯವು ಅನ್ನೆಯವು! ನಿನ್ನನ್ನು ಹುಟ್ಟಿಸಿಹ ಸೃಷ್ಟಿದೇವಿ ನಿನಗಾಗಿ ಅನ್ನವನೂ ಹುಟ್ಟಿಸಿಹಳು ಕೇಳು, ತಂದೆ! ಅಯ್ಯಾ, ಆ ತಾಯಿ ನಿನ್ನ ಪಾಲಿನ ಅನ್ನವನು ಪಡೆವ ಬಲುಪನೂ ನಿನ್ನಲ್ಲಿ ಚುನ್ನವಿಲ್ಲದೆ ತುಂಬಿಹಳಯ್ಯಾ! ಚುಚ್ಚಿ ಚುಚ್ಚಿ ಎಚ್ಚರಿಸು ನಿನ್ನಾ ಬಲುಪನು! ಹೊಡೆದು ಬಡಿದು ಅಡಿಯಿಡಿಸು ಕರ್ತವ್ಯದ ದಾರಿಯಲಿನವು! ಅಮೇಲೆ ನೋಡು ನಿನ್ನ ಪಾಲಿನ ಅನ್ನ ನಿನಗೆ ದೊರೆವುದೋ ಇಲ್ಲವೋ ಎಂಬುದನು! ಅನಾದಿ ಕಾಲದಿಂದಲೂ ನಮ್ಮ ಕಾಲರಾಯರು ಸಾರಿಸಾರಿ ಹೇಳುತಿರುವುದೀದೇ ಸಂದೇಶವಚನವನು!

೩

ದನಿ ಕಾಯ್ವನು ನಿನ್ನ ಅನ್ನಕಾಗಿ; ಬುತ್ತಿ ಬೇಪುದು, ಬೊಯ್ವುದು ನಿನ್ನ ಅನ್ನಕಾಗಿ! ಕನಲು ನೊರೆಪುದು ನಿನ್ನ ಅನ್ನಕಾಗಿ; ಒದಲು ನಿನಾಗುವುದು ನಿನ್ನ ಅನ್ನಕಾಗಿ! ತಿಂಗಳು ಬೆಳಗುವುದು ನಿನ್ನ ಅನ್ನಕಾಗಿ; ಇಂಗಳು ಮುಡುವುದು ನಿನ್ನ ಅನ್ನಕಾಗಿ! ಚಟ್ಟು ಹಿಗ್ಗಿ ನಿಂತಿವೆ ನಿನಗೆ ಅನ್ನವನೀಡಲು; ಬಯಲು ತಗ್ಗಿ ಬಾಗಿವೆ ನಿನಗೆ ಅನ್ನವನೂಡಲು! ನೀನು ನೆಮ್ಮದಿ ಇರುವ ಕಜ್ಜವ ಅಜ್ಜ, ನೀ ನೋಡಬಹುದೆಯು ಕೈಯೊಳೆ ಹಿಡಿದುಕೊಂಡಿಪ ನಿನ್ನ ಕನಸಿನ ವಲೆಯನು! ಕರೆಕರೆ ಅವನನು ಕೈನೂಡಿ! ನೂನುಪ್ಪವ ನೀ ಮಾಡಿದರೆ ಬಾಯಿಸಿಹಾತ ಹಿಂ ಹಿಂಡಿ! ನಿನ್ನ ಹಸಿವೆಯು ಹಿಂಗಿಸುವನಾಗ ಸವಿದುತ್ತನೂಡಿ! ಅಯ್ಯಾ ಕಾಲರಾಯ ಬಾಯಾರಿರುವನೇಗಲೂ ಈ ಜೋಡಿ!

೪

ನಿನ್ನ ಹಸಿವಿನಿಂಗಿದಿಪುವ ಅನ್ನವನು ಅನ್ನಿಗರು ಬಂದು ನೆಳೆ ಬೊಯ್ವುವಾಗ, ಕುನ್ನಿಯಂತೆ ಕುಯಿಗ್ಗುಸುತ ಕುಳಿತರೆ ಆಗುವುದೇನಯ್ಯಾ! ಅಯ್ಯಾ, ಅತ್ತರೆ ಅರುವುದೆ ಹಸಿವಿನುರಿಯ ತಳವುಳ? ಜಗಿಯ ಹೊಡೆದುಕೊಂಡರೆ ತಾರುವುದೆ ಸಸಿವುಕುತ್ತದ ಕಳವಳ? ಕೈನೆರೆದು ನೋಡು ಅನ್ನವನೊಯ್ದ ಅನ್ನಿಗರನು! ತಿನಿಸಿರೆದು ಕೇಳು ಕಷ್ಟದ ಕಲಕಲಾಟವನು! ಅಯ್ಯಾ, ಅವಿಯ ಮುಂದಿಟ್ಟು ಓದವರನು ಜೊಬತ್ತಿ; ತುಡುಕಿ ಹಿಡಿ ಕೈಯಿಂದಾ ಕಳ್ಳರನು ಒತ್ತಿ; ಮಿದುಳಿನೆಯೆಂಬುದನು ಬೋರು ಬಲ್ಲೆನೆಯ ಬಲುಪನೆತ್ತಿ! ಕಿತ್ತುಕೊಳು ತಂದೆ ನುವಳಿ ನಿನ್ನ ಅನ್ನವನು; ಇದನೊಲ್ಲದಿರೆ ಸತ್ತುಹೋಹುದೆ ಲೇಸು ಕಣಾ ನೀನು! ಅಯ್ಯಾ, ಮರೆಯದಿರು ನಮ್ಮ ಕಾಲರಾಯನ ಈ ಅನ್ನತ್ರಯಾಣಿಯನು!



ಕರ್ನಾಟಕಕ್ಕೊಂದು ಬಂದರ!

ಕನ್ನಡನಾಡಿನಲ್ಲಿ ಬೆಳೆಯುವ ಆಹಾರಧಾನ್ಯಗಳಿಗೆ ಕಡಮೆಯಿಲ್ಲ; ಸಂಸಾರೋಪಯುಕ್ತ ಪದಾರ್ಥಗಳ ಮೂಲವಸ್ತುಗಳಿಗೆ ಕೊರತೆಯಿಲ್ಲ. ಖನಿಜಗಳೂ ತಕ್ಕಮಟ್ಟಿಗಿವೆ. ಅರಣ್ಯಜಾತ ವಸ್ತುಗಳಂತೂ ಬೇಕಾದಷ್ಟು ನೊರೆಯುವುವು. ಆದರೂ ಕನ್ನಡನಾಡಿನ ವ್ಯಾಪಾರ ಕನ್ನಡಿಗರ ಕೈಯಲ್ಲಿ ಇಲ್ಲವೇಕೆ? ದೇಶದ ವ್ಯಾಪಾರ ಆ ದೇಶದ ಜನರ ಕೈಯಲ್ಲಿದ್ದಾಗಲೆ ನಾಡಿನ ಸಂಪತ್ತಿ ಹೆಚ್ಚುವುದು; ಸಂಸ್ಕೃತಿಯ ಮಟ್ಟ ಮೇಲಕ್ಕೇರುವುದು. ಈ ಮಾತು ನಮ್ಮವರಿಗೆ ಗೊತ್ತಿಲ್ಲವೆಂತಲ್ಲ. ಗೊತ್ತಿದ್ದರೂ ಅನರ ವ್ಯಾಪಾರ ಸ್ವಾತಂತ್ರ್ಯಕ್ಕೆ ಯಾವ ಕಾರಣ ಮುಖ್ಯವಾದ ಅಡ್ಡಿಯಾಗಿ ನಿಂತಿದೆ? ಬಹು ಜನರು ಇದರ ನಿಜಾರವನ್ನು ಅರಿಯಲಾರದವರೂ, ಅರ್ಥಶಾಸ್ತ್ರಜ್ಞರಾದ ಕೆಲವು ಮಹನೀಯರು ಇದನ್ನು ಸಂಪೂರ್ಣವಾಗಿ ಅರಿತಿರುವರು. ಆದರೆ ಜನಸಾಮಾನ್ಯರೆಲ್ಲರೂ ಇದನ್ನರಿತು, ಇದಕ್ಕಿರುವ ಅಡ್ಡಿಗಳನ್ನು ನಿವಾರಣಮಾಡಲು ಕಾರ್ಯವನ್ನು ಕೈಕೊಂಡ ವ್ಯಕ್ತಿಗಳಿಗೆ ಸಾಕಷ್ಟು ನೆರವನ್ನು ಕೊಡಬೇಕಾಗಿದೆ. ಆ ನೆರವು ಸಿಕ್ಕದೆ ಹೋದರೆ, ನಮ್ಮ ನಾಡಿನ ವ್ಯಾಪಾರದ ದಾರಿಯಲ್ಲಿಯ ಅಡ್ಡಿ-ಆತಂಕಗಳು ಎಂದೂ ನಿವಾರಣೆಯಾಗುವಂತಿಲ್ಲ.

ಇಂದಿನ ವ್ಯಾಪಾರ ಬರಿಯೆ ಒಳನಾಡನ್ನು ಅವಲಂಬಿಸಿಕೊಂಡು ಕುಳಿತುದಲ್ಲ; ಪರದೇಶಗಳೊಂದಿಗೆ ವ್ಯಾಪಾರಸಂಬಂಧವನ್ನು ಇರಿಸಿಕೊಳ್ಳಬೇಕಾಗುವುದು ಅನಿವಾರ್ಯವಾಗಿದೆ. ಹಾಗೆ ಪರದೇಶಗಳೊಂದಿಗೆ ವ್ಯಾಪಾರವನ್ನಿರಿಸಿಕೊಂಡಿರುವ ಭಾರತದ ಬೇರೆ ಪ್ರಾಂತಗಳು, ಕನ್ನಡನಾಡಿಗಿಂತ ಹೆಚ್ಚಿನ ಲಾಭವನ್ನಿಂದು ಪಡೆಯುತ್ತಲಿವೆ; ಇಷ್ಟೇ ಅಲ್ಲ, ಕನ್ನಡನಾಡಿನ ವ್ಯಾಪಾರದ ದೊಡ್ಡ ಭಾಗವನ್ನೂ ತಾವೆ ಪಡಿಸಿಕೊಂಡು ನಡೆಯಿಸುತ್ತಲಿವೆ! ಇದೇಕೆ ಹೀಗಾಗಬೇಕು?

ಪರದೇಶದೊಂದಿಗೆ ವ್ಯಾಪಾರಸಂಬಂಧವನ್ನು ಬೆಳೆಯಿಸುವ ಮುಖ್ಯ ಸಾಧನವೆಂದರೆ ಬಂದರಗಳ ಅನುಕೂಲತೆ. ಇಂದಿನ ಭಾರತದ ಮುಖ್ಯ ಮುಖ್ಯ ಬಂದರಗಳೆಲ್ಲ ಕನ್ನಡನಾಡಿನ ಹೊರಗೇ ಇವೆ. ನಿಜವಾಗಿ ನೋಡಿದರೆ ಕರ್ನಾಟಕಕ್ಕೆ ಇರುವಂತಹ ಅನುಕೂಲತೆ ಭಾರತದ ಹಲವು ಪ್ರದೇಶಗಳಿಗೆ ಇಲ್ಲ. ಕರ್ನಾಟಕದ ಪಶ್ಚಿಮ ಭಾಗವೆಲ್ಲ ಸಮುದ್ರತೀರವಾಗಿದೆ. ಭಟಕಳದಂತಹ ಸುಲಭಸಾಧ್ಯವಾದ ಬಂದರುಜೆಗಳು ಇಪ್ಪತ್ತಕ್ಕೂ ಹೆಚ್ಚು ಕಟ್ಟಲು ಬೇಕಾದಂತಹ ಸುರಗಳನ್ನು ಪೂರೈಸಲು ಪಶ್ಚಿಮಘಟ್ಟ ಸಿದ್ಧವಾಗಿ ನಿಂತಿದೆ. ಕಬ್ಬಿಣ-ಉಕ್ಕುಗಳನ್ನು ಪೂರೈಸಲು ಭದ್ರಾವತಿಯ ಕಬ್ಬಿಣ ಕಾರಖಾನೆ ಅನುಗೊಂಡಿದೆ. ಬಂದರಗಳಲ್ಲಿ ದುಡಿಯಬೇಕಾದ ಕೂಲಿಯ ಜನರಿಗೂ ನಮ್ಮಲ್ಲಿ ಕೊರತೆಯಿಲ್ಲ. ಎಲ್ಲ ಅನುಕೂಲತೆಗಳು ಇದ್ದರೂ, ಕನ್ನಡಿಗರ ಕಣ್ಣಿಲ್ಲತನದ ಮೂಲಕ—ಅನ್ಯರ ಅಸಡ್ಡೆಯ ಮೂಲಕ—ಕನ್ನಡಿಗರಿಗೆ ಇನ್ನೂ ಒಂದು ಬಂದರಿಲ್ಲ. ಎಂತಲೆ ಪರದೇಶಗಳೊಂದಿಗೆ ವ್ಯಾಪಾರಸಂಬಂಧ ಬಲುಮಾತಿಲ್ಲ; ಅದುದರಿಂದ ವ್ಯಾಪಾರ ಹೆಚ್ಚಿ ಕನ್ನಡಿಗರ ಸಂಪತ್ತಿ ಹೆಚ್ಚುವಂತಿಲ್ಲ.

ಐತಿಹಾಸಿಕ ಕಾಲದ ಸ್ವತಂತ್ರ ಕರ್ನಾಟಕದಲ್ಲಿ ಪಶ್ಚಿಮತೀರದ ಪ್ರಮುಖ ಬಂದರಗಳೆಲ್ಲ ಕನ್ನಡಿಗರವಾಗಿದ್ದುವು. ದೂರದ ಮಾತು ಬೇಡ; ಕನ್ನಡಿಗರ ಕೊನೆಯ ಸಾಮ್ರಾಜ್ಯವಾದ ವಿಜಯನಗರದ ಸಮ್ರಾಟರ ಅಧೀನದಲ್ಲಿ ಸುಮಾರು ೩೦೦ ಬಂದರುಗಳಿದ್ದುವಂತೆ. ಆ ಕಾಲದಲ್ಲಿ ಪರದೇಶಗಳಿಂದ ಬಂದು ವಿಜಯನಗರವನ್ನು ಕಂಡ ಪ್ರವಾಸಿಗಳು ಈ ಮಾತನ್ನು ಸ್ಪಷ್ಟವಾಗಿ ತಮ್ಮ ವರದಿಗಳಲ್ಲಿ ಹೇಳಿದ್ದಾರೆ. ಭಟಕಳ ಬಂದರವು ಅಂದಿನ ಮುಖ್ಯ ವ್ಯಾಪಾರದ ಕೇಂದ್ರವಾಗಿದ್ದಿತು. ಉತ್ತರದ ಗೋವೆಯ ಬಂದರವೂ ಪ್ರಾಮುಖ್ಯವಾಗಿದ್ದಿತು. ಇಂದಿನ ಮುಂಬಯಿ ನಗರದಂತೆ ಅಂದಿನ ವಿಜಯನಗರದಲ್ಲಿ, ಪ್ರಪಂಚದಲ್ಲಿಯ ಎಲ್ಲ ಪ್ರದೇಶದ ವರ್ತಕರನ್ನೂ ಕಾಣಬಹುದಾಗಿತ್ತಂತೆ. ಅಲ್ಲಿಯ ವ್ಯಾಪಾರ ವೈಭವವನ್ನು ಅರಿತುಕೊಳಬೇಕೆನ್ನುವವರು 'ಅಬ್ದುಲ್‌ರಜಾಕ್' ಎಂಬ ಇರಾಣಿ ರಾಯಭಾರಿ ಅಂದು ಬರೆದ ವರದಿಯನ್ನೂ 'ನಿಕೋಲೊ ದಿ ಕೊಂಟಿ' ಎಂಬ ಪೋರ್ತುಗಿಜ್ ಪ್ರವಾಸಿಯ ವರದಿಯನ್ನೂ ಓದಿ ನೋಡಬಹುದು. ಸರಿ! ವಿಜಯನಗರದ ಕೊನೆಯಾಯಿತು. ಕನ್ನಡಿಗರ ಸ್ವಾತಂತ್ರ್ಯ ಕಳೆಯಿತು. ಭಟಕಳ ಬಂದರ ಹಾಳಾಯಿತು. ಗೋವಾ ಬಂದರ ಪರಕೀಯರ ವಶವಾಯಿತು. ಬ್ರಿಟಿಷರು ನೊದಮೊದಲು ಗೆದ್ದುಕೊಂಡು ಸ್ವಾಧೀನಪಡಿಸಿಕೊಂಡ ಕರಾವಳಿ ಕ್ಷೇತ್ರದ ಮಹತ್ವ ಹೆಚ್ಚಾಯಿತು. ಮುಂಬಯಿ ಬಂದರ ಬಳೆಯಿತು. ಮದ್ರಾಸು ಮುಂದೆ ಬಂದಿತು. ಕರಾಚಿಗೆ ಕಳೆಯೇರಿತು. ಬಂಗಾಲದ-ಬ್ರಹ್ಮದೇಶದ ಕರಾವಳಿಯಲ್ಲಿಯೂ ಬಂದರಗಳು ಬೆಳೆದುನಿಂತುವು. ಬ್ರಿಟಿಷರ ವ್ಯಾಪಾರ ಸೌಕರ್ಯಕ್ಕೆ ಕೊರತೆಯೇನೂ ಎನಿಸದುದರಿಂದ ಕನ್ನಡದ ಕರಾವಳಿ ಪ್ರದೇಶದ ಕಡೆಗೆ ಅವರು ಮಹತ್ವ ಕೊಡಲೇ ಇಲ್ಲ. ಅದುದರಿಂದಲೆ ಭಟಕಳ ಬಂದರವು ತನ್ನ ನಿಸರ್ಗಸಿದ್ಧ ಸೌಕರ್ಯಗಳನ್ನು ಇರಿಸಿಕೊಂಡೂ ಅನುಕೂಲ ಕಾಲದ ಕಡೆಗೆ ಕಣ್ಣೆರಿಸಿ ದೈನ್ಯದಿಂದ ಕುಳಿತುಕೊಂಡಿರಬೇಕಾಗಿದೆ.

ಇಂದು ಹಲವು ಉದ್ಯಮಕೇಂದ್ರಗಳನ್ನು ನಿರ್ಮಿಸಿ ತನ್ನ ವ್ಯಾಪಾರವನ್ನು ಬಳೆಯಿಸುತ್ತಲಿರುವ ಮೈಸೂರು ಸಂಸ್ಥಾನಕ್ಕೆ ಬಂದರದ ಕೊರತೆಯೊಂದು ವಿಶೇಷವಾಗಿ ಎನಿಸುತ್ತಲಿದೆ. ಎಂತಲೇ ಭಟಕಳ ಬಂದರವನ್ನು ಪುನರುಜ್ಜೀವನಗೊಳಿಸುವ ಮಾತೊಮ್ಮೆ ಮೈಸೂರು ಮಹಾರಾಜರ ಸರಕಾರದಲ್ಲಿ ಖಂಡಿತ, ಅದಾವ ಕಾರಣದಿಂದಲೊ ಅದು ಹಾಗೆಯೆ ಮರೆಗೊಂಡು ಹೋಗಿದ್ದಿತು. ಬಹುಶಃ ಪ್ರದೇಶ ಸ್ವಾಮಿತ್ವದ ಅಡ್ಡಿಯೆ ಆ ಮಾತಿಗೆ ತಡೆಯಾಗಿರಬಹುದು. ಭಟಕಳ ಪ್ರದೇಶವು ಮೈಸೂರಿನವರ ವಶದಲ್ಲಿ ಇದ್ದಿದ್ದರೆ ಅದರ ಬಂದರದ ಪುನರುಜ್ಜೀವನ ಇಷ್ಟರಲ್ಲಿಯೆ ಆಗಿ ಹಳೆಯ ಮಾತಾಗುತ್ತಿದ್ದಿತು; ಕನ್ನಡಿಗರ ವ್ಯಾಪಾರದ ಅಭಿವೃದ್ಧಿಗೆ ಎಷ್ಟೊಂದು ಸಾಹಾಯ್ಯ ಸಿಕ್ಕುತ್ತಿದ್ದಿತು. ಅದರೇನು? ಅದು 'ಠೆ' ರಾಜ್ಯದ ಕನಸಿನ ಮಾತು.

ಈಗ ಮುಂಬರುವ ದಿನಗಳ ಆರ್ಥಿಕ ಅಭಿವೃದ್ಧಿಯ ಆವಶ್ಯಕತೆಯನ್ನರಿತು, ಬ್ರಿಟಿಷ್ ಕರ್ನಾಟಕದ ಜನತೆ ಎಚ್ಚತ್ತು, ಭಟಕಳ ಬಂದರವ ಪುನರುಜ್ಜೀವನದ ಕಡೆಗೆ ಸಂಪೂರ್ಣ ಲಕ್ಷ್ಯ ತೊಡಗಿಸಬೇಕು. ತಮಗದು ಆವಶ್ಯಕವೆಂಬುದನ್ನು ಸರಕಾರದವರಿಗೆ ಮನವರಿಕೆ ಮಾಡಿಕೊಡಲು ಕನ್ನಡನಾಡಿನ ಮೂಲೆಮೂಲೆಗಳಲ್ಲಿಯೂ ತಕ್ಕ ಚಟುವಟಿಕೆಗಳು ನಡೆಯಬೇಕು. ಬುದ್ಧಿವಂತರಾದವರು ಜನತೆಯನ್ನು ಇದಕ್ಕಾಗಿ ಜಾಗೃತಗೊಳಿಸಬೇಕು. ಬಂಡವಳಗಾರರು ಇದಕ್ಕಾಗಿ ಬೇಕಾಗುವ ಬಂಡವಾಳವನ್ನು ಹಾಕಿ ಬಿತ್ತಿ ಬೆಳೆದುಕೊಳ್ಳುವ ಕೈಷಿಗೆ ಸಿದ್ಧರಾಗಬೇಕು. ಭಟಕಳವು ಬಂದರವಾಗಿ ಮೆರೆಯತೊಡಗಿದರೆ, ಕನ್ನಡನಾಡಿನಿಂದ ಬಡತನ ಸರಿಯತೊಡಗುವುದೆಂಬ ಸತ್ಯತೆಯನ್ನು ಮನಗಂಡು ಎಲ್ಲ ಕನ್ನಡಿಗರೂ ಈ ಕಾರ್ಯಕ್ಕಾಗಿ ಸಜ್ಜುಗೊಳಬೇಕು.

ಬಂದರದ ಬಗೆಗೆ ಎದ್ದಿರುವ ಕೂಗು ಬರಿಯೆ ಕೂಗಾಗದಂತೆ ನೋಡಿಕೊಳ್ಳುವುದು ಬದುಕಲಾಶೆಯಿರುವ ಎಲ್ಲ ಕನ್ನಡಿಗರಿಗೂ ಮುಖ್ಯ ಕಾರ್ಯವಾಗಿ ನಿಂತಿದೆ.

—ಸಂಪಾದಕರು



೧. ಮಂಗರಾಯನ ಮಹಾಭಾಷ್ಯ

೧. ಹಿಂದುಸ್ತಾನವು ಸ್ವತಂತ್ರರಾಷ್ಟ್ರಗಳ ಮಾಲಿಕೆಯಲ್ಲಿ ಬೇಗನೆ ಸೇರಲೆಂದು ನಮ್ಮ ಹಾರೈಕೆ.

೨. ಯುದ್ಧ ಮುಗಿದ ಕೂಡಲೆ ಹಿಂದುಸ್ತಾನವು ಸ್ವತಂತ್ರವಾಗಲಿಕ್ಕೆ ಯಾವ ಅಡ್ಡಿಯೂ ಇಲ್ಲ.

೩. ಆದರೆ ಯುದ್ಧವನ್ನು ಮುಂದೆ ಸಾಗಿಸುವ ಜವಾಬ್ದಾರಿ ನಮ್ಮದು.

೪. ಯುದ್ಧಕಾರ್ಯದಲ್ಲಿ ಈಗ ಸಾಕಷ್ಟು ಭಾರತೀಯರು ಬೇಕಾದಷ್ಟು ಉತ್ಸಾಹವನ್ನು ತೋರಿಸುತ್ತಿದ್ದಾರೆ; ಇದು ನಮಗೆ ಸಂತೋಷ.

೫. ಶಾಂತಿ-ಸುಖ-ಸಮಾಧಾನಗಳು ನಮಗೆ ದೊರಕಬೇಕೆಂದೇ ಈ ಯುದ್ಧವನ್ನು ಕೊನೆಯವರೆಗೂ ಸಾಗಿಸುವೆವು.

೬. ಯುದ್ಧಖಾತೆ ಮತ್ತು ಇತರ ಖಾತೆ ಎಂದು ವಿಂಗಡಿಸುವುದು ತಪ್ಪು; ಯಾಕೆಂದರೆ ಇತರರೂ ಯುದ್ಧದಲ್ಲಿಯೆ ಸೇರಿದ್ದಾರೆ.

೭. ಸ್ವಾತಂತ್ರ್ಯಪ್ರಿಯವಾದ ಎಲ್ಲ ರಾಷ್ಟ್ರಗಳೂ ಈ ಯುದ್ಧವನ್ನು ಕೊನೆಯವರೆಗೂ ನಡೆಯಿಸಬೇಕೆಂದು ನಿರ್ಧರಿಸಿವೆ.

೮. ಇದು ನಮ್ಮ ಭವಿತವ್ಯತೆಯ ಸೋಕ್ಷಮೋಕ್ಷವ ಯುದ್ಧ.

೯. ಇದು ನಮ್ಮ ಅಸ್ತಿತ್ವವನ್ನೆ ಕಾಣುವ ಯುದ್ಧ.

೧೦. ಭಾರತದ ಭವಿಷ್ಯವನ್ನು ನಿರ್ಮಿಸುವ ಯುದ್ಧ.

೧೧. ಆದಕಾಗಿ ಹೊಸಲು ಯುದ್ಧ ನಡೆಯಲಿ.

೧೨. ಆ ಮೇಲೆ ಮುಗಿವವರೆಗೂ ನಡೆಯಲಿ!

ವಿ. ಸೂ.—ಮೇಲಿನ ಸಂದರ್ಭದಲ್ಲಿ 'ಯುದ್ಧ' ಎಂದಲ್ಲೆಲ್ಲಾ ಹಿಂದು ಮತ್ತು ಮುಸಲ್ಮಾನರ ನಡುವೆ ನಡೆದ ಯುದ್ಧ ಎಂದು ಅರ್ಥ ಹಚ್ಚಿಕೊಳ್ಳಬೇಕು.

ಇತಿ ಭಾರತಮಾತಾಕೀ ಜೈ!
ಒಬ್ಬರೊಬ್ಬರ ಕುತ್ತಿಗೀ ಕೊಯ್!!

* * *

೨. ಜಂಗೀ ಜ್ಯೋತಿರ್ಬಿದ್ವಾನ್ (=ಬಿದ್ವನನು) ಮಂಗಯ್ಯ

ಗಾಂಧಿ-ಜಿನಾ ಭೆಟ್ಟಿಯ ಬಗ್ಗೆ ಮಂಗಯ್ಯ ಮಹಾರಾಜನು "ಕಂದಲ್ಲಿ"ಯನ್ನು ಹಾಕಿ ನೋಡಿದ್ದಾನೆ. ಈ ಭೆಟ್ಟಿ ಒಮ್ಮೆಲೆ ಆದೀತೆಂಬ ಭರವಸೆ ಮಂಗಯ್ಯನಿಗಿಲ್ಲ. ಯಾಕೆಂದರೆ ಪಾಕಿಸ್ತಾನವೆ ಅಧಿದೇವತೆ ಬಂಗಾಲ; ಬಂಗಾಲದಲ್ಲಿ ಬರಗಾಲ ಎಂದರೆ ಹಿಡ್ಡು ತಾಪತ್ರಯ. ಆದಕಾಗಿ ಜಿನಾಸಾಹೇಬರು ಜಡುಬೀಳುವ ಯೋಗವಿದೆ. ಅದರಂತೆಯೆ ಕಾಂಗ್ರೆಸ್ಸಿನ ರಾಶಿ ಸಿಂಗ; ಸಪ್ಪಕ್ಕೆ ಈ ಸಿಂಹ (British Lion) ವು ಬೇಟೆಗೆಂದು ಎದ್ದು ಅಕಳಿಸುತ್ತಿರುವುದರಿಂದ, ಕಾಂಗ್ರೆಸು ಅದರ ದವಡೆಯಲ್ಲಿ ಸಿಕ್ಕಿಬೀಳುವ ಯೋಗವಿದೆ. ಒಂದು ವೇಳೆ ಸಿಂಹದ ದವಡೆ ತಪ್ಪಿದರೆ ದಾರಿಯಲ್ಲಿ (=way) ಇದ್ದ ಬಾವಿ (=well) ಯಲ್ಲಿ —ಎಂದರೆ 'ವೇವೆಲ್ಲ'ದಲ್ಲಿ—ಮುಳುಗುವ ಪೆದರಿಕೆ ಇದೆ. ಇವೆಲ್ಲದೆ ಭೆಟ್ಟಿಯು ಸ್ಥಳ 'ಮುಂಬಯಿ' ಯಾದ್ದರಿಂದ ಭೆಟ್ಟಿ ಮುಂಗೆ+ಬಯ್ಕೆಯಾಡುವುದರಲ್ಲಿಯೆ ಕೊನೆಗಾಣಬಹುದಾಗಿದೆ. ಮೇಲಾಗಿ ಸ್ವತಃ ಮಹಾತ್ಮರೆ 'ಮದರಾಶಿ'ಯ ಪ್ರಭಾವದಲ್ಲಿ ಸಿಕ್ಕಿಬಿದ್ದಿದ್ದಾರೆ. ಆರ್ಥಾತ್ ಮಹಾತ್ಮರು ಮದದ ರಾಶಿಯೊದನೆಯೆ ಪೊದಲು ಹೋರಾಡಬೇಕಾಗುವುದು. ಇವೆಲ್ಲ ದೃಷ್ಟಿಗಳಿಂದ ವಿಚಾರ ಮಾಡಿದರೆ ಸಪ್ಪಕ್ಕೆ ಭೆಟ್ಟಿ ಯಶಸ್ವಿಯಾದೀತೆಂದು ಹೇಳಲಾಗದು. ೪-೬ ತಿಂಗಳುಗಳಲ್ಲಿ ಮಹಾತ್ಮರ ಗುರು ಮತ್ತೆ ತನ್ನ ಭಾಗ್ಯಸ್ಥಾನದಲ್ಲಿಯೆ ಭದ್ರವಾಗಿ ಬರಬಹುದಾಗಿದೆ. ಆಗ ರಾಜಯೋಗವಿದೆ. ಮಹಾತ್ಮರು, ಆರ್ಥಾತ್, 'ಆಗ ಆರನುನೆ'ಯನ್ನು ಸೇರುವರು ಎಂದು ನಿರ್ವಿವಾದವಾಗಿ ಹೇಳಬಹುದು. ಆದಕಾಗಿ ೪-೬ ತಿಂಗಳುಗಳ ತರುವಾಯದಲ್ಲಿ ಗಾಂಧಿ-ಜಿನಾ ಭೆಟ್ಟಿ ಯಶಸ್ವಿಯಾಗಬಹುದೆಂದೂ, ಆಲ್ಲಿಯ ವರೆಗೆ ಕಾಂಗ್ರೆಸಿನ ಗ್ರಹಗಳು 'ಆನಮ್ಮದನ ಮನೆ'ಯಲ್ಲಿಯೆ ಉಳಿಯುವುದೆಂದೂ ನಿಸ್ಸಂದೇಹವಾಗಿ ಹೇಳಬಹುದು. ಇಂತು

ಗಾಂಧಿ ಜಿನ್ನಾ ಕುಂದಲಿ!
ಮೋಹನ ಮತ್ತು ಮಹಮ್ಮದಲಿ॥
ಹ್ರೀಂ ಹ್ರಾಂ ಹ್ರುಂ!

* * *

೩. 'ಮರಗತ ಶೀಲ ಸಾಹಿತ್ಯ'

ಇತ್ತೀಚೆಗೆ ಕೂಗೆದ್ದ ಪ್ರಗತಿಶೀಲ ಸಾಹಿತ್ಯದ ಗಲಾಟೆಯನ್ನು ಕೇಳಿ ಅನೇಕರು ಗಾಬರಿಗೊಂಡಿದ್ದಾರೆ; ಅಚ್ಚರಿಗೊಂಡಿದ್ದಾರೆ. ಮಂಗರಾಯನಿಗೆ ಮಾತ್ರ ಇವರಿಂದ ಗಾಬರಿಯೂ ಇಲ್ಲ, ಆಚ್ಚರಿಯೂ ಇಲ್ಲ. ಏಕೆಂದರೆ ನಮಂಗರಾಯನಿಗೆ ಚಿರಪರಿಚಿತವಾದ 'ಮರಗತ ಶೀಲ ಸಾಹಿತ್ಯ'ದ ತತ್ತ್ವಕ್ಕಿಂತ ಹೆಚ್ಚಿನ ಸಾಹಿತ್ಯತತ್ತ್ವವೇನೂ ಇದರಲ್ಲಿಲ್ಲ. ಗುರಿಯಿಲ್ಲದೆ ಸುಚ್ಚು ಉತ್ಸಾಹದಿಂದ ಮರದಿಂದ ಮರಕ್ಕೆ ಹಾರುವುದು, ಹಣ್ಣಿಗೆ ಕಂದುದನ್ನು ತಿನ್ನಲಾಸಿಸಿ ಬೇಕಾದವರ ಹೊಲ-ತೋಟಗಳಲ್ಲಿ ನಿಶ್ಚ-ಮರಗಳಿಗೆ ಜಿಗಿಯುವುದು, ಕಣ್ಣಿಗೆ ಅಂದವೆಂದು ಕಂಡುದನ್ನು ಆಪೇಕ್ಷಿಸಿ ಯಾವ ನಿಯಮ-ನಿರ್ಬಂಧ ಇರಿಸಿಕೊಳ್ಳದೆ ಮಂದಿಯ ಮನೆ-ಮಠಗಳಿಗೆ ನುಗ್ಗುವುದು-ಇತ್ಯಾದಿ ಹಾರುಗಾಲುತನವೇ 'ಮರಗತಿ ಶೀಲ ಸಾಹಿತ್ಯದ ಸುಮ್ಮು ತಿರುಳಾಗಿದೆ. 'ಪ್ರಗತಿಶೀಲ ಸಾಹಿತ್ಯ' ವೆಂದು ಇಂದು ಕೂಗುವ ಸ್ಪೈರನೀರರ ಪ್ರಚಾರ ತತ್ತ್ವ ತನ್ನದೆಲ್ಲ ಎಂಜಲೆಂದು ಮಂಗರಾಯನಿಗೆ ಎದೋ ಕಂಡಿದೆ. ಇದೇ ಆಲ್ಲ, ತನ್ನಂತಹ ತೀವ್ರಗತಿಯು ಇನ್ನಾರಲ್ಲಿಲ್ಲವೆಂದೂ, ಕೇವಲ ಹಚ್ಚಗಿದ್ದಲ್ಲಿ ಪೇಮು ಬಿಚ್ಚಗಿದ್ದಲ್ಲಿ ಮುಲಗಬಯಸುವ ಮಹಿಳಾ-ವೃಷಭಗಳ ಮಂದಗತಿ ಇವರಾಗಿದೆಯೆಂದೂ ಮಂಗರಾಯನ ಅಭಿಪ್ರಾಯವಾಗಿದೆ. ಆದುದರಿಂದಲೆ ತರುಣರನ್ನು ತನ್ನಂತೆಯೇ ತೀವ್ರಗಾಮಿಗಳನ್ನಾಗಿ ಮಾಡಬೇಕೆಂದು, ತನ್ನ 'ಮರಗತಿ ಶೀಲ ಸಾಹಿತ್ಯ'ದ ಮಹಾಗ್ರಂಥವನ್ನು ಬರೆದು, ಲೋಕಕ್ಕೆ ಮಹಾನುಂಗಳ ಮಾಡಬೇಕಾಗಿ ಆಪೇಕ್ಷಿಸುತ್ತಿದ್ದಾನೆ.



ಪುಸ್ತಕ ದೊರೆಯುವ ಸ್ಥಳ:—
ವಾಗ್ಭೂಷಣ ಬುಕ್-ಡಿಪೊ, ಹುಬ್ಬಳ್ಳಿ

ಮನೋವ್ಯತ್ತಿ

ಶೀ. ವಿ. ಜಿ. ಶಾನಭಾಗ

(ಸಣ್ಣ ಕತೆ)

"ವಯೆ-ದಾಕ್ಷಿಣ್ಯ ಇಷ್ಟಿಲ್ಲ ಈ ಜನರಿಗೆ! ಕಟುಕರು; ಹೌದು ಕ್ಷ್ಮವ್ರರು! 'ನಿಮಗೆ ಪೂರೈಸದಿದ್ದರೆ ಬಿಟ್ಟುಕೊಡಿ, ನಾಲ್ವಾರು ಮುಂದಿ ಕೇಳಿವರಿದ್ದಾರೆ. ಒತ್ತಾಯ ಯಾರು ಮಾಡುತ್ತಾರೆ ನಿಮಗೆ?' ಅಂತೆ! ಇರಬಹುದು; ಒಬ್ಬರು ಒಳಬಂದರೆ ಇಬ್ಬರು ಹೊರಗೆ ನಡೆಯಬೇಕು ಅಷ್ಟು ವಿಶಾಲ ರೂಮು! ಏನಾದರೂ ಮಾಡಿ 'ತಿಂಗಳಿಗೆ ಎರಡು ರೂಪಾಯಿ ಕೊಳ್ಳಿ ಎಂದರೆ ಒಪ್ಪುವುದಿಲ್ಲ. ಅಹ! ಕೇಳಿವರು ನಾಲ್ವಾರು ಮುಂದಿ ಇದ್ದಿದ್ದಾರಂತೆ. ಏನು ಮಾಡುವುದು?' ಜನ ನನ್ನ ಮಾತನ್ನು ಕೇಳುತ್ತಿದ್ದರೆ—ಅವರ ಮೇಲೆ ನನ್ನ ಹುಕ್ಕು ನಡೆಯುತ್ತಿದ್ದರೆ—ಯಾರೂ ಈ ರೂಮನ್ನು ಬಾಡಿಗೆಗೆ ಕೊಳ್ಳದಂತೆ ಮಾಡಿ, ಈ ಬೇಡಹುಳುಗಳಿಗೆ ಮಣ್ಣು ತಿನ್ನಿಸುತ್ತಿದ್ದೆ.... ಬಾಡಿಗೆಯಲ್ಲ! ಅಬರೆ ನಾಲ್ವಾರು ಜನರಿದ್ದಾರಂತೆ. ನನ್ನಂತೆ—ಆ ನಾಲ್ವಾರು ಜನರಂತೆ—ಇವರಿಗೆ ಬಾಡಿಗೆ ಕೊಂಬಲಿಕ್ಕೆ ಹುಟ್ಟಿಬಂದವರಂತೆ ಹುಟ್ಟಿ ಬಂದವರು ಇನ್ನೆಷ್ಟು 'ನಾಲ್ವಾರು' ಜನರಿದ್ದಾರೆಂಬುದು ಯಾರಿಗೆ ಗೊತ್ತು? ಮೂರಾದರೆ ಮೂರು, ರೂಮಾದರೂ ಜೈನ್ನಾಗಿ ಇದೆಯೆ? ಬೆಳಗ್ಗೆ ಒಗೆದು ಇಟ್ಟ ಬಟ್ಟೆ ಸಾಯಂಕಾಲಕ್ಕೆ ದಾರಿಯಲ್ಲಿ ಧೂಳಿಯಿಂದ ಕೆಂಪು! ಇನ್ನು ಧೂಳಿಗೆ ತಡೆಹಾಕಿದರೆ ಗಾಳಿಕಟ್ಟೆತು! ಗಾಳಿ ಉಸಿರಾಡಿಸುವೆಯೋ; ಹಾಗಾದರೆ ಧೂಳು ತಿನ್ನು ಒಳಗೆ ಫುಸ್ಫುಸಗಳಲ್ಲಿ ಕರುಳಲ್ಲಿ ತಲೆಯಲ್ಲಿ ಸಹ ಎಷ್ಟು ದುಗಳು? ಅರ್ಧಇಂಚೊ? ಛೆ, ಹೆಚ್ಚು ಇರಬೇಕು! ಅಂಟಿ ಕುಳಿತಿರಬಹುದು! ಅಯ್ಯೋ, ಹೆಲ್ತಿಗೆ (ಆರೋಗ್ಯಕ್ಕೆ) ಸ್ವೆರಿ ಡೇಂಜರಸ್ (ಅತಿ ಅಪಾಯಕರ)! ಅರ್ಥಾಯುಷ್ಯ! ಪೆನ್ಸನ್ನು ಕಂಡುತೆಯೆ!' ನೀವು ಅರ್ಥಾಯುಷ್ಯದಲ್ಲಿ ಸತ್ತರೆ ನಮಗೇನು? ಮೂರು ರೂಪಾಯಿ ಬಾಡಿಗೆ ಕೂಡಿ; ನಮ್ಮ ಹೆಂಡತಿಗೆ ಬೆಂಡೋಲೆಯಾಗಬೇಕು! ನೀವು ಪೆನ್ಸನ್ನು ಬಂದನೇಲೆ ಇಲ್ಲಿ ನಿಲ್ಲುವುದಿಲ್ಲವೆಂದು ಜೆನ್ನಾಗಿಗೊತ್ತು!' ಇವರು ಮನುಷ್ಯರೆ? ನಾಲ್ವಾರು ಮನೆಗಳನ್ನು ಕಟ್ಟಿಕೊಳುವುದು; ಯಾರು ನುಗ್ಗುತ್ತಾರೆ ಎಂಬುದಾಗಿ ದಾರಿ ನೋಡುತ್ತ ಕುಳಿತುಕೊಳ್ಳುವುದು; ಮನೆಯಾರಿಲ್ಲದವರು—ನಿರ್ಗತಿಕರು ನನ್ನಂತೆ ಉದರಂಭರಣಕ್ಕಾಗಿ—ಮನೆಬಿಟ್ಟವರು—ನುಗ್ಗಿದ ಕ್ಷಣ ನಮ್ಮುರಕ್ತ ಹೀರುವುದು, ಹಾರ್ಟಲೆಸ್ ಕ್ರೀಚರ್ಸ್! ರೆಗ್ಯುಲರ್ ಸ್ಕ್ವಾಡರ್ಸ್!!" ದಿವಾಣಿ ಜಲಾಯೆಯಲ್ಲಿ ನಗದಿ ಕಾರಕೂನರಾಗಿರುವ ಹರಿಶ್ಚಂದ್ರ, ಮನೆಯ ಒಡೆಯರು ತೆರಳಿದಮೇಲೆ, ಮುರುಕು ಆರಾಮಕುರ್ಚಿಯ ಮೇಲೆ ಕುಳಿತು ಹೀಗೆಲ್ಲ ಯೋಚನೆ ಮಾಡುತ್ತಿದ್ದ. ತಿಂಗಳಿಗೆ ನಾಲ್ಕುದಿನ, ವಾರಕ್ಕೆ ಒಂದು ದಿನ, ಹೀಗೆ ಯೋಜನೆ ಮಾಡಲಿಕ್ಕೆ ಅವನಿಗೆ ಬಿಡುವು—ರಜೆ—ಸಿಗುತ್ತದೆ.

"ಸಲಾಂ! ಸಾವಕಾರ್!"

ಅತನ ರೂಮಿನೆದುರು—ರಸ್ತೆಯಿಂದ ಫರ್ಲಾಂಗಿ ಹಣ್ಣಿನಂತೆ ಉಬ್ಬಿನೋರೆ; ಅದಕ್ಕೆರಡು ದೊಡ್ಡವಾದ ತುಸು ಕೆಂಪು ಕಣ್ಣುಗಳು; ಒಂದು ದೊಡ್ಡ ಮೂಗು; ಕಪ್ಪು ತುಟಿಗಳ ಮೇಲೆ, ಆ ಗರುಡ ಮೂಗಿನ ಕೆಳಗೆ, ಎಣ್ಣೆಯ ನಯವಂತೆ ನಯಬಳಿದ ಮೋರೆಗೆ ಸರ್ವಥಾ ಒಪ್ಪದ ಫೈಂಡ್‌ಕಟ್ಟಿನ ಮೀಸೆಗಳು; ನೀಲಿಯ ಬಣ್ಣದ ಕಾಲರು ಅತಿ ದೊಡ್ಡ ಬಾ—ಎಯ ಮೇಲೆ ಇಳಿಬಿದ್ದ ಉಗಿ ಸೈರಿಯಲ್ಲಿ; ತಲೆಯಮೇಲೆ ಎರಡೂ ಕಿವಿಗಳನ್ನು ಬಗ್ಗಿಸಿ ಅದರ ಮೇಲೆ ನಿಂತು ವಿರಾಜಿಸುವ ದೊಡ್ಡ ಹಾತಿಮನ ಟೊಪ್ಪಿ. ಇವುಗಳನ್ನು ಕಂಡು ಹರಿಶ್ಚಂದ್ರ 'ಓಹೋ ಅಬ್ದುಲ್ಲ! ಮೂರ್ತಿ ದಿವ್ಯವಾಗಿದೆ!!' ಎಂದುಕೊಂಡ. 'ಒಳಗೆ ಬಂದು ಬಿಡುವುದಿಲ್ಲವಲ್ಲಾ' ಎಂದು ಅತನಿಗೆ ಒಂದು ಬಗೆಯ ಭಯವಾಗಿ ಬಿಟ್ಟಿತು. ಆದರೆ ಆಗಲೆ ತನಗೆ ಭಯವಾದದ್ದನ್ನು ತಿಳಿದು, ತಾನು ಭಯಪಡುವ ಕಾರಣವೇನು? ಅದರ ಅವಶ್ಯಕತೆ ಎಲ್ಲಿದೆ?—ಎಂದು ಹುಡುಕುತ್ತ, ಆತನ ಮುದ್ರೆಯ ಮೇಲೆ ತೋರಿಬರುವ ಹೋಲಿತನ 'ಸಲಾಂ ಸಾವುಕಾರ್' ಎನ್ನುವ ದನಿಯಲ್ಲಿ ತನಗೆ ಭಾಸವಾದ ಆತನ ಟೊಪ್ಪಿಹಾಕುವ ವಿಚಾರ ಎಂದು ತುಸು ಸಮಾಧಾನ ತಳೆದ. ಇನ್ನು ಆತ ಒಳಗೆ ಬಂದರೆ ತನಗೆ ಅಪ್ರಸನ್ನತೆಯಾಗುವುದು ಎಂದು ಯೋಚಿಸಿ 'ಆತನ ಕಡೆಗೆ ತಾನು ನೋದುತ್ತ ಉಳಿದರೆ, ತನ್ನ ದೃಷ್ಟಿಯಲ್ಲಿ ಇಲ್ಲದ ಅಮಂತ್ರಣ ಇದೆಯೆಂದು ತಿಳಿದು ಆತನು ಬಂದರೆ' ಎಂದು, 'ಸಲಾಂ ಸಾವಕಾರ್' ಕೇಳಲಿಲ್ಲ—ಆದಕ್ಕಾಗಿ ಅವನನ್ನು ನೋಡಲಿಲ್ಲ ಎನ್ನುವ ಅರ್ಥ ಅಬ್ದುಲ್ಲ ತಿಳಿಯಬೇಕೆಂದು, ಹರಿಶ್ಚಂದ್ರ, ಬಳಯಲ್ಲಿ ಬಿದ್ದ ಸಿನ್ನೆ ಕೋಟಿಗೆ ಸುತ್ತಿರುವ ವರ್ತಮಾನಪತ್ರದ ಹಾಳೆಯನ್ನು ಮೋರೆಗೆ ಅಡ್ಡಹಿಡಿದು ಕೊಂಡು ಓದತೊಡಗಿದ.

ಆತನಿಗೆ ಅಬ್ದುಲ್ ಕಾಣುವುದಿಲ್ಲ. ರಾಜಮಾರ್ಗ ಕಾಣುವುದಿಲ್ಲ. ಯಾರೂ ಕಾಣುವುದಿಲ್ಲ. ಆರಾಮು ಕುರ್ಚಿಯ ಮೇಲೆ ಕುಳಿತ ತಾನು, ತನ್ನ ಮನಸ್ಸಿನಲ್ಲಿ ಓಡಾಡುವ ವಿಚಾರ, ಇವುಗಳ ಹೊರತು ಇನ್ನಾವ ವಸ್ತುವಿನ ಅಸ್ತಿತ್ವ ಆತನಿಗಿಲ್ಲ. 'ತೆರಳಿಬಿಟ್ಟಿರಬೇಕು' ಎಂದು ವಿಚಾರಿಸುವ ತಡನೆ, ಬಂದ ಸಂಕಟ— ಅದಕ್ಕೆ ರೂಪ ಆಕಾರ ಏನಿಲ್ಲದಿದ್ದರೂ, ಅದು ಬಂದಿರಲಿಲ್ಲವಾಗಿದ್ದರೂ ಬಾರದೆ ಉಳಿಯಬಹುದಾಗಿದ್ದರೂ, ಹರಿಶ್ಚಂದ್ರ ಬಂದ ಸಂಕಟವೆಂದೇ ತಿಳಿದು—ಅಂತೂ ದೂರವಾಯಿತು ಎಂದು ತಿಳಿದ. ಆದರೆ ಆಗಲೆ, ತಾನು ಅಂಜುಬುರುಕುತನವ ಎಕೆ ತೋರಿಸಿದೆ—ತನ್ಮಾತ್ಮನೊಡನೆ ಈ ಸುಳ್ಳು ಆಚರಣೆ ಏಕೆ ನಾಡುತ್ತೀನೆ—ಎಂದು ತೋರಿ, ತುಸು ಲಜ್ಜಿತನಾಗಿ ಬಿಟ್ಟ. ಆತನ ಸಮ್ಮುಖದಲ್ಲಿ ಕುಳಿತು ಆತನ ಕಣ್ಣಿಗೆ ಕಣ್ಣು ಕೊಟ್ಟು, ಕೇಳಿದ ಮಾತಿಗೆ 'ಹೌದು' 'ಅಲ್ಲ' ಎನ್ನಲಿಕ್ಕೆ ಭಯಪಡಬೇಕಾಯಿದೆಲ್ಲಿ?—ಎಂದು ಒಂದು ಬದಿಯಲ್ಲಿ ಮನಸ್ಸು ನಿರ್ಧರಿಸುತ್ತಿರುವಾಗಲೆ 'ಹೂ! ನಡೆದು ಬಿಟ್ಟಿರಬೇಕು!' ಎಂಬ ವಿಚಾರ ಬಂದು ಆತನಿಗೆ ತಲೆಭಾರ ಇಳಿದಂತೆ ಸುಖವೆನಿಸಿತು. 'ಇಧರೀಚ ರಹತೀಂ, ಸಾವಕಾರಾಂ' ("ಇಲ್ಲಿಯೇ ಉಳಕೊಳ್ಳುತ್ತೀರಿ?") ಎಂದು ಕೇಳಿದಕ್ಷಣ ಆತನ ಮೋರೆಯ ಮೇಲೆ, ಆತನ ಮನಸ್ಸಿನ ಮೂಲೆ ಮೂಲೆಯಲ್ಲಿ, ಕಳವು ಮಾಡುವಾಗಲೆ ಕೈಹಿಡಿದರೆ ತೋರಿಕೊಳ್ಳುವ ಆತ್ಮಗ್ಲಾನಿ, ನಾಚಿಕೆ, ಗಾಬರಿ ಏಕಕಾಲಕ್ಕೆ ಎದ್ದು ಬಿಟ್ಟು "ಯಾವಾಗ ಬಂದೆ? ಕೂತುಕೋ!" ಎಂದು ಹೇಳುವಾಗ, ತನ್ನನ್ನು ಈ ಸ್ಥಿತಿಗೆ ಗುರಿಮಾಡಿದ ಅಬ್ದುಲನ ವಿಷಯದಲ್ಲಿ ತೀವ್ರ ಸಿಟ್ಟು ತೋರಿತು. "ಮುಪಾ ಉಪದ್ರವಿಗಳಪ್ಪಾ ಇವರು!" ಎಂದುಕೊಂಡ.

ಬಾಗಿಲಿನ ತುಸು ಈಚೆ ಒಂದು ಸ್ಟೂಲಿದೆ. ಅಬ್ದುಲ್ ಅದರ ಮೇಲೆ ಕೂಪ್ರುವ ಸೋಜಿಗೆ ಹೋಗದೆ 'ಶಾಲೆಯಲ್ಲಿ ಸಂಗಡ ಕುಳಿತರೆ ನಡೆಯುತ್ತಿದ್ದರೂ ಈಗ ನಡಿಯದು' ಎಂದು ತೋರಿ, ಸ್ಟೂಲಿಗೆ

ತಾಗಿಯೇ ನೇದ ಮೇಲೆ ಕುಳಿತ. ಅಬ್ದುಲನ ಈ ನಮ್ರತೆಯಿಂದ ಹರಿಶ್ಚಂದ್ರನಿಗೆ ಸಮಾಧಾನವಾಗಲಿಲ್ಲ, ಸುಖವಾಗಲಿಲ್ಲ. ಆತನು ಬಲು ತಾಪತ್ರಯದಲ್ಲಿ ಸಿಲುಕಿ ಒದ್ದಾಡುತ್ತಿದ್ದ. ಈ ಅಬ್ದುಲನ ಸಲಾಂ ಕೊಂಡ ಕ್ಷಣದಿಂದ ತನ್ನ ಆಚರಣೆಯಲ್ಲಿ ತಾನೇ ಕಂಡ ಸುಳ್ಳುತನ-ಕಪಟತನ-ಹೇಡಿತನದಿಂದ ಆತನಿಗೆ ಅಪ್ರಸನ್ನತೆಯುಂಟಾಗಿಬಿಟ್ಟಿತ್ತು. ಈ ಅಬ್ದುಲನನ್ನು ಕಂಡ ಕ್ಷಣದಿಂದ, ಅಂಜಿಕೆಯಿಂದ ತಾನು ತಲೆ ಮರೆಯಿಸಿಕೊಂಡು, ಹತಾಶನಾಗಿ ಜೀವ ಹೊತ್ತುಕೊಂಡು ಓಡುತ್ತಿರುವಂತೆ ಓಡುವುದೆಲ್ಲಿ ? ಯಾಕೆ ? ಮೂರು ವರ್ಷಗಳ ಹಿಂದೆ ಒಂದು ಉತ್ಸಾಹದಿಂದ ತಾನು ಟ್ರೇಜರಿನ ಕೋಟೆಯ ಅರಮನೆ ಅಂಗಡಿಯವನಿಂದ ಕಡಕ್ಕೆ ಕೊಂಡು, ಹಣ ಕೊಡಲು ವಿಳಂಬವಾಗಿ ಅಂಗಡಿಯವನ ವಸೂಲಿಯ ಆಳು ಮನೆಗೆ ಬರುತ್ತಿರುವಾಗ ತಾನು ಹೀಗೆಯೆ ತಲೆ ಮರೆಯಿಸಿಕೊಂಡಿದ್ದೆ; ಇದೇ ಅವಸ್ಥೆ ಇಂದು ತನಗೆ ಪ್ರಾಪ್ತವಾಗಿತ್ತು—ಎಂಬ ಮಾತು ಆತನಿಗೆ ಜ್ಞಾಪಕವಾಯಿತು. ಆಗ ತಾನು ಗಾಬರಿ ಮಾತ್ರ ಪಟ್ಟಿದ್ದನಲ್ಲದೆ ಈಗಿನಂತೆ ಗಾಬರಿಯ ಮೇಲೆ ಗಾಬರಿಸಿರಲಿಲ್ಲ .... ಎಂದು ಆತನಿಗೆ ತೋರಿತು. ಕುಳಿತಂತೆ ಯೋಚನೆ ಮಾಡುತ್ತ This is my weakness (ಇದು ನನ್ನ ದೌರ್ಬಲ್ಯ). I must guard against it (ಇನ್ನು ಇದು ತೋರಿಕೊಳ್ಳದಂತೆ ಜಾಗರೂಕನಾಗಿರಬೇಕು !) ಇಲ್ಲದಿದ್ದರೆ ಒಂದು ದಿನ ಸಬ್‌ಟ್ರೇಜರರ್ ಆದರೆ, ಈ ದೌರ್ಬಲ್ಯದಿಂದ ಟ್ರೇಜರಿಯ ಕಾವಲಿನ ಸಿಪಾಯಿಗಳ ಮೇಲೆ ಭರವಸೆಯಿಲ್ಲದೆ ದಿನ ರಾತ್ರಿ ನಾನೇ ಟ್ರೇಜರಿ ರೂಮಿನ ಬಾಗಿಲಲ್ಲಿ ಕಾವಲು ಮಾಡಬೇಕಾದೀತು.. .... ಹೀಗೆಲ್ಲ ವಿಚಾರಮಾಡಿ ' ಇನ್ನು ಮುಂದೆ ಧೈರ್ಯದಿಂದ ಕೆಲಸ ಕೊಳ್ಳಬೇಕು' ಎಂದು ಮನಸ್ಸಿನಲ್ಲಿಯೆ ದೃಢನಿಶ್ಚಯ ಮಾಡಿ ತುಸು ಸಮಾಧಾನ ತಳೆದ.

" ಎಲ್ಲಿಗೆ ಬಂದಿದ್ದೆ ? " ಹರಿಶ್ಚಂದ್ರ ಕೇಳಿದ. ತನ್ನ ಸ್ವರದಲ್ಲಿ ಇದ್ದ ದುಷ್ಟತನ ಆತನಿಗೆ ತಿಳಿಯದಿದ್ದರೂ, ಈ ಪ್ರಶ್ನೆಯಲ್ಲಿ ಕೇವಲ ಉಪಚಾರವಲ್ಲದೆ ತನ್ನ ಭಾವದಲ್ಲಿ ಇಷ್ಟೂ ಸತ್ಯನಿಷ್ಠೆಯಿಲ್ಲೆಂಬುದನ್ನು ಆತನು ಜಿನ್ನಾಗಿ ತಿಳಿದುಕೊಂಡಿದ್ದ.

"ಇಲ್ಲಿಯೇ ಒಬ್ಬರನ್ನು ಕಾಣಲಿಕ್ಕೆ ಬಂದಿದ್ದೆ; ಆದರೆ ಅವರು ಸಿಗಲೇ ಇಲ್ಲ!" ಬೇಕೆಂತಲೆ ಸಿಕ್ಕದೆ ಆ ಜನರು ತನಗೆ ವಿಶ್ವಾಸಘಾತ ಮಾಡಿದಂತೆ, ದೂರಿಕೊಳ್ಳುವ ಹಾಗೆ ಸ್ವರ ಮಾಡಿ ಅಬ್ದುಲ್ ಉತ್ತರ ಕೊಟ್ಟ. ಇದ್ದುದಿದ್ದ ಹಾಗೆಯೆ ಮುಖ ಮುದುರಿಸಿ, ಹರಿಶ್ಚಂದ್ರ ನುಡಿಯತೊಡಗಿದ! "ಯಾತರ ವಾಸನೆಯಿದು ? ಅರೆ, ಇದ್ರಾ ! ಹುಂ, ಹುಂ, ಏನೋ ಒಂದು ತರದ ದುರ್ಗಂಧ!" ಆಗಲೆ ಮೂಗಿಗೆ ಮುತ್ತಿಟ್ಟ ದುರ್ಗಂಧ ಯಾವುದು, ಎಲ್ಲಿಂದ ಬಂದಿತು ಎಂದು ದತ್ತಚಿತ್ತನಾದ ಹರಿಶ್ಚಂದ್ರ, ಅಬ್ದುಲನ ಮಾತುಗಳನ್ನೂ ಗಮನಿಸಲಿಲ್ಲ; ಆ ಅತಿ ಸೂಕ್ಷ್ಮನೂರನ್ನೂ ಕೇಳಲಿಲ್ಲ.

"ಅರೆ! ಎಂಥ ಭಯಂಕರ ದುರ್ಗಂಧ! ಹೌದು ಬೆಕ್ಕಿನ—ವ ದುರ್ಗಂಧದಂತಿದೆ !" ಎನ್ನುತ್ತ ಆತನು ಕುಳಿತಂತೆಯೆ ನಾಲ್ಕಾಸಿಟ್ಟಿಗೆ ತೀಕ್ಷ್ಣದೃಷ್ಟಿ ಬೀರುತ್ತ ಅಜೆ ಈಜೆ – ಆ ಮೂಲೆ ಈ ಮೂಲೆಯಲ್ಲಿ ನೋಡತೊಡಗಿದ

"ಹೌದು, ಬೆಕ್ಕಿನ ಲಟಸೇ ಇರಬೇಕು." ಗೋಡೆಯಾಚೆಯ ಮನೆಯಲ್ಲಿ ಬೀಡಾರ ಮಾಡಿದ ಸಿ. ದಬ್ಲ್ಯು. ವಿ. ಇಲಾಖೆಯಲ್ಲಿ Mustering ಕಾರಕೂನರಾಗಿರುವ ಜೋಗಾರರು ಸಾಕಿದ ಬಿಳಿಯ ಬೆಕ್ಕಿನ ನೆನಪಾಗಿ "ಯಾವ ಶೃಂಗಾರಕ್ಕೆ ಇವರು ಬೆಕ್ಕು ಸಾಕುವುದು ? ಸುಮ್ಮನೆ ನಮಗೆ ಉಪದ್ರವ ಕೊಡಲಿಕ್ಕೆ! ಯಾವ ಸುಖಕ್ಕವ್ವಾ ಇವರಿಗೆ ಬೆಕ್ಕು ! ಹಾಸಿಗೆಯಲ್ಲಿ ಮತ್ತೆ ಹೇಣಾಟ ಮಾಡಲಿಲ್ಲವಲ್ಲ ? ಜೀವ ತಿಂದು ಬಿಟ್ಟು! 'ಗುಲಗಲಜ್ಜಿ ರೂಮಿಗೆ ಹೋಗುತ್ತೀನೆ' ಎಂದೆ; ತೀಡ್ದೆ. ಮೂತಾಡೋಣವೊ ಎಂದು ಹಟ ಮಾಡಿದ. ಅವನ ಮೇಲೆ ಸಿಟ್ಟು ಮಾಡಿದರೇನು ಫಲ? ಅವನಿಗೆ ಹೇಗೆ ತಿಳಿಯಬೇಕು ಹೀಗಾಗುವುದೆಂತ. ಆದರೆ ಈ ಜೋಗಾರನಿಗೆ ತಿಳಿಯಬೇಕಲ್ಲ! ಬೆಕ್ಕಿಗೆ ಬುದ್ಧಿಯಿಲ್ಲ; ಆದರೆ ಅದಕ್ಕೆ ದುರ್ಗಂಧವಿಪಿಪಿಂದು ಈ ಜೋಗಾರನಿಗೆ ತಿಳಿಯಬೇಡವೆ ? ಆದರೆ....ಎಲ್ಲಿಂದ ಬರುತ್ತದೆ? ಈ ವಾಸನೆ ಕಣ್ಣಿಗೆ ಕಾಣುತ್ತಿದ್ದರೆ ಹುಡುಕುವ ರಗಳೆ ತಪ್ಪುತ್ತಿತ್ತು " ಕ್ಷಣಾರ್ಧದಲ್ಲಿ ಹೀಗೆಲ್ಲ ವಿಚಾರ ಮಾಡುತ್ತ, ಆ ಜೋಗಾರರ ವಿಷಯದಲ್ಲಿ ಮಾತ್ರವಲ್ಲ, ತನ್ನ ಜಾಡಿಗೆ ತಾನು ತಣ್ಣಗೆ ಕುಳಿತ ಅಬ್ದುಲನ-ಸ್ರಪಂಚದ ಎಲ್ಲ ಮನುಷ್ಯ-ಬೆಕ್ಕುಗಳ ವಿಷಯದಲ್ಲಿ ಆತನ ಮನಸ್ಸು ನಿದೆಶ್ರೀಯಿಯಾಗಿ ನಿಂತುಬಿಟ್ಟಿತು.

ಮೂಗನ್ನು ಸುಂಯ್ ಸುಂಯ್ ಎಂದು ಊದಿಕೊಳ್ಳುತ್ತ ಹಾಸಿಗೆ ಬಿಚ್ಚಿ ನೋಡಿದ. ಜಾಡರು, ಮೇಲೆ ಹಾಸುವ ವಸ್ತ್ರ, ಒಂದೊಂದಾಗಿ ಬಿಡಿಸಿ ನೋಡತೊಡಗಿದ.

ಅಬ್ದುಲನಿಗೆ ಏನೊಂದೂ ತಿಳಿದಿರಲಿಲ್ಲ. ಹರಿಶ್ಚಂದ್ರ ಏನೋ ಹುಡುಕಾಡುವುದನ್ನು ಕಂಡು, ತಾನು ಜಗುಲಿಯಲ್ಲಿ ಕುಳಿತಿರುವಾಗ ' ಈ ಚಿಲ್ಲರೆಯ ಅಭಾವದ ದಿನಗಳಲ್ಲಿ ಆಣೆ ಎರವಾಣೆಯ ವಿಷಯದಲ್ಲಿಯೂ ನೊವಲಿನಂತೆ ಅಜಾಗರೂಕತೆಯಿಂದ ನಡೆಯಲಿಕ್ಕಾಗುವುದಿಲ್ಲ; ಏನೋ ಒಂದಾಣೆ....ಅಲ್ಲ ಎರವಾಣೆ?....ಛೆ! ಛೆ! ಕ್ಲಾನ್ ಮೇಟನಿಗೆ ಬಹಳ ವರ್ಷಗಳ ಮೇಲೆ ಎರವಾಣೆ ಏನು ಕೊಡೋದು! ಆ ಕೊಡೋದು ದೇನಾ ಚ ಸೈ (ಕೊಟ್ಟವ್ವಲ್ಲ!) ನಾಲ್ಕಾಣೆಯ ನಾಣ್ಯ ಇರಬೇಕು, ಎಂದು ಖಂಡಿತನಾಗಿ ತಿಳಿದುಕೊಂಡು, ತಾನು ಬಾಯಿಬಿಟ್ಟಿ ಹೇಳದಿದ್ದರೂ ಅವನ್ನು ತಿಳಿಕೊಳ್ಳಬೇಕಾದರೆ ಬುದ್ಧಿ ಎಷ್ಟು ಸೂಕ್ಷ್ಮ, ದೃಷ್ಟಿ ಎಷ್ಟು ನಾಜೂಕು ಇರಬೇಕು ಎಂದು ಆತನ ಬುದ್ಧಿಯ ಕೌತುಕ ಮನವಾರೆ ನೋಡುತ್ತ " ಅಬೀರ್ ಬಾವುನಾ ಜೈ !" ಎಂದು ಮನಸ್ಸಿನಲ್ಲಿಯೆ ಅನ್ನುತ್ತ "ಏನು ಕಾಣಿಯಾಗಿದೆ ? ಏನಂದುತ್ತೀರಿ?" ಎಂದು, ಬೀಡಿ ನೀವಿ ಸೇದಿ ಆತನ ಮೊಗೆಯೇಗೆಯಿಂದ ಯಾವಾಗಲೂ ಕಳಗಟ್ಟಿ ಗೊರಗುವುದು ತನ್ನ ಸ್ವರವನ್ನು ಸಾಮಾನ್ಯರೂಪಿಯಿಂದ ಕೋಮಲವಾದಂತೆ ಮಾಡಲು ಪ್ರಾಣಪಣದಿಂದ ಪ್ರಯತ್ನ ಮಾಡಿ ನುಡಿದ.

ದುರ್ಗಂಧ ಇಷ್ಟು ತೀಸ್ರವಾಗಿದ್ದರೂ, ಅದರಿಂದ ಉಸುರಾಡಿಸುವುದೂ ಕಷ್ಟಕ್ಕೆ ಬಂದ ಹೊತ್ತಿನಲ್ಲಿಯೂ, ಏನೂ ತಿರಿಯದಂತೆ ಅಬ್ದುಲ್ ಕೇಳುವುದಕ್ಕೆ 'ಬುರಿಯ ನೊರ್ನಾಸೆನ್ಸು' ಎಂದು ಜೇಗಿ ಹರಿಶ್ಚಂದ್ರ ಕವಚಕ್ಕನೆ "ನೀನೇನು ತಮಾಷೆ ಮಾಡುತ್ತೀಯಾ ? ನೀನು ಮೂಗಿನ್ವ ವನೇ ? ನಮ್ಮನ್ನೆ ಉಪದ್ರವ ಕೊಂದಬೇಡಾ! " ಎಂದು ನುಡಿದ.

ಹಾಸಿಗೆಯಲ್ಲಿ ಏನೊಂದೂ ಕಂಡುಬರಲಿಲ್ಲ. ತಲೆ ಏರಿದ ಭಯದ ಹೊರೆ ತುಸು ಇಳಿದಂತೆ ಅಯಿತಾದರೂ ಪೂರ್ಣವಾಗಿ ಇಳಿಯಲಿಲ್ಲ.

ಎಲ್ಲಿಂದ ಬರುತ್ತವೆ? ಇನ್ನೆಲ್ಲಿ ಹುಡುಕಿ ಹೊಡೆಯಲಿ?" ಎಂಬ ವ್ಯಥೆ ತಿನುಗಿ ತಿನ್ನು ತಿತ್ತಿತು.

'ಆ ಸ್ಟೂಲಿನ ಬಳಿ: ಅವರ ಬುಡದಲ್ಲಿ ಹುಸು ಕಸವಿದೆ. ಅವ-ಶಲ್ಯೋನಾನೂ ಇದ್ದು ಬಿಟ್ಟಿದೆ!' ಎಂದು ತೋರಿದ ಕೂಡಲೆ, 'ಖಂಡಿತ ಇವ್ವರೆ ಅಲ್ಲಿದೆ!' ಎಂದು ತೋರಿತೋ ಇಲ್ಲವೊ, 'ಇನ್ನಾರನ್ನು ಕರೆ ಯಿಸಿ ತೆಗಿಸಿ ಒಗಿಸಬೇಕಾಯಿತು?' ಎಂದು ತಿರುಗಿ ವ್ಯಥೆ. 'ಯಾರೂ ಸಿಕ್ಕದಿದ್ದರೆ ನಾನು ತೆಗೆಯಬೇಕು. ಇದನ್ನು ನಾನು ಮಾಡಬೇಕು? ಯಾಕೆ? ಯಾಕೆಂದರೆ ಆ ಬೋಗಾರನಿಗೆ ಬೆಕ್ಕು ಸಾಕುವ ಹೊಕು ಇದೆಯೆಂದು. ಯಾರ್ಯಾರು ಯಾವ್ಯಾವ ಸ್ಥಳದಲ್ಲಿ ಇರಬೇಕೋ ಅಲ್ಲಿರ ಬೇಕು ಅಲ್ಲಿದ್ದರೆ ಗುಣ! ನಮ್ಮ ಸರಕಾರಕ್ಕೆ ತಾರತಮ್ಯವೆನ್ನಲಿ? ಥೂ!' ಎಂದುಕೊಳ್ಳುತ್ತ "ಆ ಸ್ಟೂಲಿನ ಬುಡದಲ್ಲಿ ಬೆಕ್ಕಿನ ಇದು ಇದೆಯೊ ನೋಡು" ಎಂದು ಅಬ್ದುಲನಿಗೆ ಹೇಳುತ್ತ ಪರಿಚ್ಚಂದ್ರ ಅಬ್ದುಲನ ಬಳಿ ಬಂದು ನೋಡಿದ.

ಅಲ್ಲಿಯೇ ದುರ್ಗಂಧ ಅತಿ ತೀವ್ರವಾಗಿತ್ತು. ಕೋಲಂಬಸನಿಗೆ ಅಮೇರಿಕೆ ಕಂಡಷ್ಟು ಸಂತೋಷ ಅತನಿಗಾಯಿತು. ಕಸದಲ್ಲಿ ನಿನ್ನೊಂದೂ ಕಾಣಲಿಲ್ಲ. "ಸ್ವಲ್ಪ ಕುಚಿ, ಅಲ್ಲಿ ನೋಡು!" ಎಂದು ತೋರಿಸಲು ಅಬ್ದು ಲ್ಲನ ಮೈಮೇಲೆ ಬಾಗಿದರೆ, ಪರಿಚ್ಚಂದ್ರನ ಹೊಟ್ಟೆ ಕಳವಳಿಸಿಬಿಟ್ಟಿತು.

ಒಂದು ಹೆಜ್ಜೆಗೆ ಕುರ್ಚಿಗೆ ಬಂದ. "ನನಗೇನು ಕಾಣುವುದಿಲ್ಲ" ಅಬ್ದುಲನ ಮಾತನ್ನು ಕೇಳುತ್ತಲೆ 'ಹೇಗೆ ಕಂಡೀತು ಮಾರಾಯಾ ನಿನಗೆ? ಏನಿವೆಯೆಂದು ಕಾಣಬೇಕು?' ಎಂದುಕೊಂಡ. ಆಶ್ಚರ್ಯದ ಆಘಾತಕ್ಕೆ, ಅತನ ಇಲ್ಲಿಯವರೆಗೆ ಸಂಚಿತವಾದ ವ್ಯಗ್ರತೆ ಎಲ್ಲಿಗೋ ಜಿಪರಿ ನಡೆಯಿತು.

'ಒಳತು ಕೆಡಕು ಎಂಬುದನ್ನು ವಿಮರ್ಶಿಸಿ ನೋಡುವ ಬುದ್ಧಿ ಯಿದ್ದ ಈತನು ಮನುಷ್ಯನೊ, ಅಥವಾ ಒಳತು-ಕೆಡಕು, ಸೌಂದರ್ಯ-ಅಸೌಂದರ್ಯ ಸುಗಂಧ-ದುರ್ಗಂಧ ಇವೆಲ್ಲವುಗಳನ್ನೂ ಸಮದೃಷ್ಟಿ ಯಿಂದ ನೋಡುವ ಸ್ಥಿತಪ್ರಜ್ಞನೋ?' ಎಂದು ಕಚ್ಚಿಕೊಂಡ, ಹತಬುದ್ಧನಾಗಿ ಕುಳಿತುಬಿಟ್ಟ.

ತುಸು ಹೊತ್ತು ಕಳೆದ ಬಳಿಕ ಪರಿಚ್ಚಂದ್ರ ಅತನ ಬದಿಗೆ ನೋಡಿದ. ದುರ್ಬಲ ಸೇಪ, ಇಷ್ಟಿಷ್ಟು ಕೈರವಾದ ಗಲ್ಲುಬಿದ್ದ ಅತನ ನೋರೆ; ಅದಕ್ಕೆ ಒಪ್ಪುವ—ಎಷ್ಟಕ್ಕೂ ಪ್ರೊಜೆಕ್ಟಿನ ಅಂತಸ್ತನ್ನು ಮಣ್ಣುಗೂಡಿಸಿದ ಆ ಮೂಸೆ ಇವುಗಳನ್ನು ನೋಡುತ್ತ, "ಈ ಅಸ್ಪೂರ್ವ ಸ್ಥಿತಿಗೆ ಎಷ್ಟು ಸಾಧನೆಯಿಂದ ಈ ದುರ್ಗಂಧ ಕಲೆ ಹಾಕಿದನೋ! ಒಟ್ಟಿದೆ ಮಾರಾಯಾ, ನೀ ಪಟಂಯೋಗಿ ನಿಜ!' ಎಂದುಕೊಂಡ. 'ಆದರೆ ಈತನಿಗೆ ಘ್ರಾಣೇಂದ್ರಿಯ ಇಲ್ಲವೆ? ಕಥವಾ ಇದು ಈ ಅತ್ಯಾಚಾರ ಸಹಿಸದೆ ರಾಜೀನಾಮೆ ಒಗೆದು ಬಿಟ್ಟಿತೆ? ಹೀಗೂ ಇರಬಹುದು! ಅತನಿಗೆ ಆ ದುರ್ಗಂಧ ದಿನಬಳಕೆಯಾದಾದುದರಿಂದ, ಅದರ ಅಸ್ತಿತ್ವ ಅವನಿಗೆ ಅಗೋಚರವಿರಬಹುದು!' ಆಗಲೆ ಅತನಿಗೆ ಇನ್ನೊಂದು ವಿಚಿತ್ರ ವಿಚಾರ ಬಹು ಸತ್ಯವಾಗಿ ತೋರಿತು: 'ಎಲ್ಲೆಲ್ಲಿಯೋ ತಿರುಗುವ ಈತನಿಗೆ ಇನ್ನು ಜೇರೆ ದುರ್ಗಂಧಗಳ ಅರಿವಾಗದಂತೆ, ಈ ದುರ್ಗಂಧವು ಈತನ ಸುತ್ತು ನಾಲ್ಕುಮಾರು ಹರಡಿಕೊಂಡು, ಅವುಗಳನ್ನು ಜೆದರಿಸುತ್ತಿರಬೇಕು. ನಿಶ್ಚಿತವಪ್ಪಾ!" ಎಂದುಕೊಂಡ.

"ನೀವು ಎಲ್ಲಿ ಈಗ ನಮಗೆ ಮಾತಾಡ್ಸ್ತಾ? ಮಿರ್ಜಾನಿನಲ್ಲಿ ಹೋದ ವರ್ಷ ನಾಲ್ಕಾರು ಸಲ ನೋಡಿದ್ದೆ, ನೀವು ನೋಡ್ಲೂ ಇಲ್ಲಾ, 'ಗರೀಬರು (ಬಡವರು) ಯಾರಿಗೆ ಕಾಣ್ತಾರೆ?" ಕೊನೆಯ ಮಾತನ್ನು ನುಡಿಯುವಾಗ ಆತನ ಸ್ವರವು ಅತಿ ದೀನವಾಯಿತು.

ತಡೆತಡೆದು ಅಗಲೂ ಮೂಗಿಗೆ ಏರುತ್ತಿರುವ ಆ ಪರಿಮಳವನ್ನು ಕೊಂಚ ಮರೆತು, ಪರಿಚ್ಚಂದ್ರನಿಗೆ ತುಸು ಕನಿಕರ ಕಂಡಿತು. ತನ್ನ ಶಾಲೆ, ಆ ಶಾಲೆಯ ದಿನಗಳು, ಆಗಿನ ಸಂಗಡಿಗರು ಇನೆಲ್ಲ ಇನ್ನು ಬರದ ಸುಖದ ಕಾಲವೆಂದು ಅತನಿಗೆ ತೋರುತ್ತಿತ್ತು.

"ನಿಜವಾಗಿ ನಾನು ನೋಡಿಲ್ಲದಿರಬಹುದು. ಆಗಿನ ಪುಂಡಾಟ, ಓಡಾಟ, ಕೋಟೆಯ ಬಾವಿಯಲ್ಲಿ ದೊಡ್ಡ ಕಲ್ಲು ಒಗೆಯುವುದು, ಎಲ್ಲವೂ ಮಿರ್ಜಾನ್ ದಾಟುವಾಗ ಹೆಂಬಲಾಗುತ್ತದೆ. ಸಂಗಡ ಕಲಿತ ವರ ನಿಮ್ಮೆಲ್ಲರ ಹೆಂಬಲ ಬರುತ್ತದೆ. ಈಗ ಶಾಹಸಾಬರ—ಮಹಮ್ಮದ ನಲ್ಲಾ—ಖಾನ? ಮಹಮ್ಮದನೇ-ಎಲ್ಲಿದ್ದಾನೆ, ಏನು ಮಾಡುತ್ತಾನೆ? ನಾಲ್ಕನೆಯ ಈಯತ್ತೆಯಲ್ಲಿ, ಶಾಲೆಯ ನಡುವಿನ ಹೋಲಿಯಲ್ಲಿ ನಮ್ಮ ಕ್ಲಾಸು ಇತ್ತಲ್ಲೊ! ಆಗ ನನ್ನ ಕಾಲುಬಿದ್ದು ಆತನ ಪಾಟಿ ಒಡೆದು ಹೋದಾಗ, ಅವ ನನಗೆ ಪಾಟಿ ತಲೆಯ ಮೇಲೆ ಜಪ್ಪಲಿಕ್ಕೆ ಬಂದಿದ್ದ. ಆಗ ನೀನು ಆತನನ್ನು ಸೂಕಿ ಗೋಜೆಗೆ ಬಡಿದಿದ್ದೆ! ಹೆಂಬಲಿದೆ ನಿನಗೆ? ಇಲ್ಲಾ? ನನಗೆ ಇನ್ನೂ ನೆನಪಿದೆ! ಆ ದಿನದಿಂದ ನನ್ನ ನಿನ್ನ ಜೋಸ್ತಿ ಹೆಚ್ಚಾಗಿತ್ತಲ್ಲೊ!" ಈ ಹಿಂದಿನ ನೆನಹುಗಳ ಸ್ಮರಣದಿಂದ ಪರಿಚ್ಚಂದ್ರ ತುಂಬ ಸಂತೋಷದಿಂದ ಮಾತನಾಡಿದ.

ಅದರೆ ಅಬ್ದುಲ್ ಆ ಮಾತುಗಳನ್ನು ಮರೆತುಹೋಗಿದ್ದ. ತನ್ನ ಕಷ್ಟ-ದುಃಖದ ಈ ದಿನಗಳಲ್ಲಿ ಗತಿಸಿದ ಸುಖದ ನೆನಹುಗಳು ಹಡುವ ಕಷ್ಟಗಳನ್ನು ಅಸಹ್ಯಮಾಡುತ್ತವೆಯಲ್ಲದೆ ಅವುಗಳಿಂದ ಪ್ರಯೋಜನವಿಲ್ಲವೆಂದು ಬೇಕೆಂತಲೆ ಆ ವಿಚಾರಗಳನ್ನು ಮನಸ್ಸಿನಲ್ಲಿ ಏಳಗೊಡುತ್ತಿರಲಿಲ್ಲ. "ಮಹಮ್ಮದ್ ಫೊರೆಸ್ಟರ್ ಆಗಿದ್ದಾನೆ, ಡಾಂಡೇಲಿಯಲ್ಲಿ ಆರಾಮ ಇದ್ದಾನೆ. ಅವನಿಗೇನು?" ಎಂದು ಉತ್ತರ ಕೊಟ್ಟ.

"ಫೊರೆಸ್ಟರ್ ಆಗಿದ್ದಾನೆ?". ಉತ್ಸಾಹದಿಂದ ಪರಿಚ್ಚಂದ್ರ ಸುಡಿದು ಆನಂದಪಟ್ಟ. 'ಆಗಲಿ, ಜೆನ್ನಾಯಿತು! ನನ್ನಂತೆಯೆ ಸರಕಾರಿ ನೌಕರನಾನ. ಒಂದು ದಿನ ಡಾಂಡೇಲಿಗೆ ಹೋದರೆ, ನನ್ನನ್ನು ಕಂಡು ಎಷ್ಟು ಆನಂದವಾಗುವುದು ಆತನಿಗೆ! ಅಂಗಾಲಬಿದ್ದು, ಎರಡುದಿನ ನಿಲ್ಲಿಸಿಕೊಂಡು, ಎಷ್ಟು ಸತ್ಕಾರ ಮಾಡುತ್ತಾನೊ! ಮಾಡುತ್ತಾನೆ, ಸಂಶಯವಿಲ್ಲ! ಹಾಗೆಯೆ ಮಾಡಬೇಕು; ಇಲ್ಲದಿದ್ದರೆ ನಾವು ಸುಸ್ಥಿತಿ ಕಂಡ ಆರ್ಥವೇನು?" ಎಂದು ಮೊದಲಾಗಿ ವಿಚಾರ ಬಂದು "ನೀನು ಎಲ್ಲಿರುವೆ? ಏನು ಮಾಡುತ್ತೀ?" ಎಂದು ಪರಿಚ್ಚಂದ್ರ ಕೇಳಿದ.

"ನಾನು ಊರಲ್ಲಿಯೆ ಇದ್ದೇನೆ. ಅಪ್ಪ ಇರುವವರೆಗೆ ನಾವು ದನಗಳ ವ್ಯಾಪಾರ ಮಾಡುತ್ತಿದ್ದೆವು. ಈಗೆರಡು ಸೂರು—ಹೌದು ಈ ರಮಜಾನಿಗೆ ಸೂರು—ವರ್ಷವಾಯಿತು. ತಂದೆ ತೀರಿದ. ನಾನು ಹೀಗೆಯೆ ಖಾಲಿಯಿದ್ದೇನೆ." ಅನಸ್ಸಿಲ್ಲದಿದ್ದರೂ ಹೇಳದಿದ್ದರೆ ಸಾವುಕಾರರಿಗೆ ಸಿಟ್ಟು ಬಂದು ತನಗೆ ಅಪಾಯವಾದೀತೆಂದು ಅಬ್ದುಲನು ಉತ್ತರಕೊಟ್ಟ. ಕಿವಿಯ ಮೇಲೆ ಸೆಕ್ಕಿಸಿ ಇಟ್ಟ ಒಂದು ಸಣ್ಣ—ಒಮ್ಮೆ ಸೇದಿದ—ಬೀಡಿಯ ತುಣುಕನ್ನು ಕೈಯಲ್ಲಿ ಪಿಡಿದು "ಪೆಟ್ಟಿಗೆ ಇದೆಯೆ?" ಎಂದು ಕೇಳಿದ.

" ನನಗೆ ಆ ಜಟವಿಲ್ಲ" ಎಂದ ಹುಚ್ಚಂದ್ರ.

ಬೀಡಿಯ ತುಂಡು ತಿರುಗಿ ಇದ್ದಲ್ಲಿ ತೆರಳಿತು. ಇದನ್ನು ನೋಡಿದ ಕೂಡಲೆ ಪರಿಶ್ಚಂದ್ರನ ಹೃದಯ ದ್ರವಿಸಿಬಿಟ್ಟಿತು. ಆತನ ನಿರ್ಧನತೆ ಮನವರಿಕೆಯಾಯಿತು. 'ಮಹಮೂದನಂತೆ ತನ್ನ ಈ ಸಂಗಡಿಗನೂ ಒಂದು ಸೌಕರಿ ಸಂಪಾದಿಸಬೇಕಿತ್ತು' ಎಂದು ಆತನಿಗೆ ಪ್ರಬಲವಾಗಿ ತೋರಿತು. 'ಏನು ಮಾಡಬೇಕಾಯಿತು?' ಎಂದು ಯೋಚಿಸಿದ, ತಲೆ ತುರುಸಿಕೊಂಡ. ಮತ್ತೆ ವಿಚಾರಮಾಡಿದ. ದಾರಿಯ ಕಡೆಗೆ ನೋಡಿದ. ಬಿಸಿಲು ಜೋರಾಗಿತ್ತು. 'ಹನ್ನೆರಡು ಆಗಿಹೋಗಿರಬೇಕು. ಸ್ನಾನಮಾಡಿ ಊಟ ಆಗಬೇಕು. ಈ ಹೊತ್ತು ಖಾನಾವಳಿಯಲ್ಲಿ ವಿಶೇಷ ತಿಂದಿರಬಹುದು' ಎಂದು ಒಮ್ಮೆ ಬದಿಗೆ ತೋರಿದರೂ, ಇನ್ನೊಂದು ಬದಿಯಲ್ಲಿ 'ಅಬ್ದುಲ್ಲನ ಉದ್ಧಾರ ಹೇಗೆ ಮಾಡುವುದು?' ಎಂದು ಯೋಚನೆಮಾಡುತ್ತಿದ್ದ ಸಮ್ಮ ಇಲಾಜಿಯಲ್ಲಿ ಕಾರಕೂನ? ಛೆ! ಛೆ! ಅನ್ ಇಮ್ಯೆಜನೇಬಲ್ (ಕಲ್ಪನಾತೀತ)! ಪಟ್ಟೇವಾಲ? ಸರಿ; ಆದೀತು. ಈತನಿಗೆ ಹೊಂದುವುದು! ಒಂದು ತರದಿಂದ ಸಾಧ್ಯಸೂಡಿಕೊಳ್ಳಬಹುದು. ಶಿರಸ್ತೇದಾರರು ನನ್ನ ಮೇಲೆ ಸಹಾನುಭೂತಿಯಿಟ್ಟವರಿದ್ದಾರೆ. ತುಂಬಿನ್ನನಿಸಿಕೊಂಡರೆ My classmate (ನನ್ನ ಸಂಗಡ ಕಲಿತವ) poorchap (ಅತಿಬಡ ಹುಡುಗ) Deserving (ಸಾಯೋಗ್ಯ) ಆತನಿಗೆ ನಗುಬಂದಿತು. "ಹೀಗೆ ನಾಲ್ಕು ಅಯ್ದು ಪಾತುಗಳಲ್ಲಿ ಬಿನ್ನವಿಸಿಕೊಂಡರೆ ಪಟ್ಟೇವಾಲನಾಗುತ್ತಾನೆ; ಆತನಿಗೆ ಎಷ್ಟು ಉಪಕಾರವಾಗುವುದು? ಅಯ್ಯೋ!" ಅಬ್ದುಲ್ಲನು ಗದ್ಗದನಾಗಿ ಕಣ್ಣೀರನ್ನು ತಂದು "ಸಾಪುಕಾರ್, ಗುಲಾಮು ಸಾಯಬೇಪ ತನಕಾ ಇದನ್ನು ಮರೆಯು" ಎಂದು ಆಗ ಹೇಳುವುದು ಪರಿಶ್ಚಂದ್ರನಿಗೆ ಈಗಲೆ ಕೇಳಿಸಿತು. "ಒಬ್ಬ ಗತಿಗೆಟ್ಟ ಮನುಷ್ಯನಿಗೆ ಗತಿ ಕೊಟ್ಟೆ. ಜೀವನ ಕೊಟ್ಟೆ, ಇದಕ್ಕೇ; ಸತ್ಕಾರ್ಯವೆನ್ನುವುದು!" ಎಂದು ಮುಂದೆ ತೋರುವುದು ಈಗಲೆ ತೋರಿ, ಆತನಿಗೆ ಹಿಡಿಸದಷ್ಟು ಆನಂದ, ಗೌರವ ಕಂಡಿತು.

" ನಾನು ಹೋಗುತ್ತೇನೆ; ಬಿಸಿಲಿನಲ್ಲಿ ನಾಲ್ಕು ಮೈಲು ನಡೆದು ಹೋಗಬೇಕು; ಹಸಿವಾಗಿ ಬಹಳ ಸಂಕಟ ಒಂದಾಣೆ! ಇದ್ದರೆ ಕೊಡಿ, ಚಾ ಕುಡಿದು ಹೋಗುತ್ತೇನೆ!" ದೈನ್ಯದಿಂದ ಅಬ್ದುಲನು ಬೇಡಿದ.

ಕೇಳುತ್ತಿಲೆ ಪರಿಶ್ಚಂದ್ರನ ವಿಚಾರ ಸಿಂತುಬಿಟ್ಟಿತು. ಬಲು ಅಪ್ರಿಯವಾದ ಕಟುಮಾತನ್ನು ಕೇಳಿದಂತೆ ಆತನಿಗೆ ತೋರಿತು. " ಟೊಪ್ಪಿ ಹಾಕಲು ಎದ್ದುಬಿಟ್ಟ. ಎಲ್ಲರಿಗೂ ಇದೇ ಟೊಪ್ಪಿ. ನನಗೂ ಟೊಪ್ಪಿಯೆ? ಈತನ ಉದ್ಧಾರ ಮಾಡಬೇಕೆಂದು ವಿಚಾರಸೂಡಿ ಮಾಡಿ ತಲೆಕಾಯಿಸಿಕೊಳ್ಳುತ್ತಿದ್ದೇನೆ. ಇನ್ನೂ ಆಡಿ ತೋರಿಸಲಿಲ್ಲ. ಅಷ್ಟಕ್ಕೆ ಒಂದಾಣೆ ಭೀತಿಪಟ್ಟುಬಿಡು. ಪುಣ್ಯಕ್ಕೆ ಆಡಿತೋರಿಸಲಿಲ್ಲ. ಹಾಗೆ ಮಾಡಿದ್ದರೆ ಪುಣ್ಯವಂತ 'ಐದು ರೂಪಾಯಿ ಕೊಡಿ' ಮೊದಲಿನ ಪಗಾರಿನಲ್ಲಿ ಮುರಕೊಳ್ಳಬಹುದು' ಎನ್ನುತ್ತಿದ್ದನೋ ಏನೊ? ಈ ಜನರು ಭಯಂಕರರಿರುತ್ತಾರೆ!"

" ಐಲೆಯಾಗಿ ಆಣೆಯಿಲ್ಲ! ಬಾಗಿಲು ಹಾಕುತ್ತೇನೆ; ಹೋಗು ನೀನು! ಊಟಕ್ಕೆ ತಡವಾಗುತ್ತದೆ.ಇನ್ನೊಂದು ದಿನ ನೋಡುತ್ತೇನೆ!" ಎಂದು ಲಗುಬಗೆಯಿಂದ ಕಂಗಿತೆಗೆದು ಸ್ನಾನಕ್ಕೆ ಹೋಗುವ ಸೋಗು ಮಾಡುತ್ತ, ಅಬ್ದುಲ ಹೊರಗೆ ನಡೆವ ಕ್ಷಣ ಬಾಗಿಲಿಕ್ಕಿಕೊಂಡ ಪರಿಶ್ಚಂದ್ರ.

ದೀನಬಂಧು

(ಕವೀಂದ್ರರಿಂದ)

ಶ್ರೀ. ನಾರಾಯಣ ಸಂಗಮ ಬಾಗಲಕೋಟ

ಎಲ್ಲರಿಂದ ದಲಿತರೆಲ್ಲಿ ದೀನಗಿಂತ ದೀನರು—
ಅಲ್ಲಿ ನಿನ್ನ ಪಾದಪದ್ಮ ರಾಜಿಸಿಹವು ದೇವರು!
ಎಲ್ಲರಿಂದೆ ಹಿಂದೆ ಅಧಮರೆಲ್ಲಕಿಂತ ಕೆಳಗೆಯೇ,
ಎಲ್ಲ ಬಳಿದು ಅಳಿದು ದಿಕ್ಕುತಪ್ಪಿದವರ ಬಳಿಗೆಯೇ!
ನಿನ್ನ ನಮಿಸಲೆಂದು ನಾನು ಕೈಯು ಮುಗಿಸೆನು,
ನನ್ನ ನಮನ ನಂದುದೆಲ್ಲಿ ಎಂಬುದನ್ನೆ ಬಗೆಯೆನು!
ನಿನ್ನ ಪಾದ ರಾಜಮಾನ, ಹೀನಮಾನವ್ಹಳವದು
ನನ್ನ ತಲೆಯು ಬಾಗಿ ನಮನವಲ್ಲಿ ಹೋಗಿ ತಾಗದು!
ಎಲ್ಲರಿಂದೆ ಹಿಂದೆ ಅಧಮರೆಲ್ಲಕಿಂತ ಕೆಳಗೆಯೇ,
ಎಲ್ಲ ಬಳಿದು ಅಳಿದು ದಿಕ್ಕುತಪ್ಪಿದವರ ಬಳಿಗೆಯೇ!
ಜಿನ್ನ ಬಿಟ್ಟು ಚಿಂದಿಯುಟ್ಟು, ಬಡವನಾಗಿ ಹೊರಟೆ ನೀ
ಬಿಂಕ ಅಹಂಕಾರಕಿಂಬೆ ಹೀಗೆ ವಿಹರಿಪಲ್ಲಿ ನೀ?
ನೀನು ನಸುವು ಹಿಂಜರಿಯೆ ಹೀನರೊಡನೆಯಾಡಲು
ನಾನು ಮಾತ್ರ ಇನಿದು ಬಾರೆನಲ್ಲಿ ನಿನ್ನ ಕೂಡಲು!
ಎಲ್ಲರಿಂದ ದಲಿತರೆಲ್ಲಿ ದೀನಗಿಂತ ದೀನರು—
ಅಲ್ಲಿ ನಿನ್ನ ಪಾದಪದ್ಮರಾಜಿಸಿಹವು ದೇವರು!
ಎಲ್ಲರಿಂದೆ ಹಿಂದೆ ಅಧಮರೆಲ್ಲಕಿಂತ ಕೆಳಗೆಯೇ,
ಎಲ್ಲ ಬಳಿದು ಅಳಿದು ದಿಕ್ಕುತಪ್ಪಿದವರ ಬಳಿಗೆಯೇ!

ದೇವ್ರು ತಪ್ಸಾ ಬಿಟ್ಟಾನಂತೀ....

ಶ್ರೀ. ವಿ. ಜಿ. ಭಟ್ಟರು

ದೇವ್ರು ತಪ್ಸಾ ಬಿಟ್ಟಾನಂತೀ
ಹೊಡ್ದಾಡ್ತಾರೋ—ಜನ್ರು—ಯುದ್ಧ ಮಾಡ್ತಾರೆ!
ಹಿಂದ್ಸೆ ಬೆಟ್ವಾಗ್ ಮುನಿಗೋಳೆಲ್ಲಾ
ಮೂಗ್ಮೈಜ್ಜೊಂದು ಕೂಡ್ತಿದ್ದಲ್ಲ?
ಅವ್ಕೇ ಮೈರಾ ಬಿಟ್ಟು
ಸಿಂಹ ಆನಿ, ಹುಲಿ—ಅಕ್ಕ, ಆರ್ಮಾಮ ಬಳಿ
ಇರ್ತಿತ್ತಲ್ಲೇ ಒಟ್ಟು?
ತಪ್ಸಾನಗಾಳಿ ಸಿಂಹ್ಯೋಮ್ಮೊಡ್ಲೆ
ಅಡ್ವಾಗ್ ಇಮ್ಲೇ ನೂರಾರ್ ಸಿಲ್ಲೇ
ವಿದ್ಧಾಂಗ್ ವ್ಯಾಣಿ ಒನಿ—ನಾಲ್ಕೂವಿಕ್ಕೇಗ್ ಚದ್ರಿ
ಕಜ್ಜಾಜ್ಜೊಳ್ಳೇಕೆ ಪುರೂ ಆಯ್ತು,
(ಇಲ್ಲೇ ಹೇಳೂವ್ ಬಿಡ್ಲೆ?
ನಾಳೇಗ್ ದೇವ್ರು ತಪ್ಸಾ ಮಾಡ್ಲಾಕ್
ಮೂಗ್ಮೈಜ್ಜೊಂಡೇ ಕುಂತ್ರೆ
ಅವ್ನ ಬಳೀಗೆ,—ಘೋರ್ ಜಳೀಗೆ
ಜಿನೇ ಕಂಡ್ರಿ, ಹೊಮ್ಮು
ಹೆಮ್ಮೊಂಡೇನೆ ನಾಯ್ಮುಸ್ರ್ ನಾನು
ಆಗ್ಲೆಲ್ ಕೋವಿ ಸದ್ದು

(ಉಳಿದದ್ದು ಮುಂದಿನ ಸಂಚಿಕೆಯಲ್ಲಿ)

ಬಾಳಿದೊಂದು ಪಗಡೆಯಾಟ!

(ಲಘು ಪ್ರಬಂಧ)

ಶ್ರೀ. ವಿಶ್ವನಾಥ ಗ. ಹೆಗಡೆ, ಮುಂಬಯಿ

ಮೊನ್ನೆ ಸಾಯಂಕಾಲ ನಮ್ಮ ನೆರೆಮನೆಯ ನೀಲಕಂಠರಾಯರಲ್ಲಿ ಬಹಳ ಗಲಾಟೆಯಾಯಿತು. ಕೇವಲ ಗಂಡ-ಹೆಂಡಿರ ಜಗಳವಾಗಿದ್ದರೆ ಕಿವಿಗೊಡದೆ ತೆಪ್ಪಗೆ ಇರುತ್ತಿದ್ದೆ; ಅದರೆ ಅವರಲ್ಲೇನೋ-ಅದು ವರೆಗೆ ಕಾಣಿಸದಿದ್ದ-ವಿಶೇಷವಿದ್ದುದರಿಂದ ಕೇಳುತ್ತ ಕುಳಿತೆ; ಬಾಗಿಲ ಸಂದಿನಿಂದ ಇಣುಕಿ ನೋಡಿದೆ.

ನೀಲಕಂಠರಾಯರು ಹಗಲೆಲ್ಲ ಆಂಗಡಿಯಲ್ಲಿ ಮಡಿದು—ಆಂಗಡಿಗೆ ಅವರೇ ಒಡೆಯರಾಗಿದ್ದರೂ ಆಳಿನಂತೆ ದುಡಿಯುತ್ತಿದ್ದರು—ಹಸಿದು ಬಂದಿದ್ದರು. ತಮ್ಮ ಮಗ "ವಿಲಾಸ-ವೈಕುಂಠ"ದಲ್ಲಿ ನಿತ್ಯವೂ ನಡೆಯುತ್ತಿದ್ದ ಗದಗದೆಯಾಟದಲ್ಲಿ, ಎಂಟಾಣೆ ಕಳೆದುಕೊಂಡು ಬಂದ ಸಂಬ ಸುದ್ದಿ ಕೇಳಿ ಕಿಡಿಕಿಡಿಯಾದವರು. ತಲಬಾಗಿಲಿಗೆ ಬಂದೆರಡು ಏಟು ಗಟ್ಟಿಯಾಗಿ ಲಗಾಯಿಸಿ, ತಮ್ಮ ಕೈಬೆರಳು ಹಸಿರುಗಟ್ಟಿ, ನೋಂದುಬೆಂದು, ಮತ್ತೂ ಕೆರಳಿ "ಛೂ ನಿನ್ನ ಮೋರೆಗೆ ಬೆಂಕಿ ಹಾಕಲಿ! ಬಿಲ್ಲ. ಇಷ್ಟು ಸಣ್ಣ ವಯಸ್ಸಿನಲ್ಲಿ ಜೂಗಾರು? ನಾಚಿಕೆಯಿಲ್ಲವೇನೋ, ನಿನಗೆ? ಎಲ್ಲಿ ಇಟ್ಟಿಯೋ ನಿನ್ನ ಬುದ್ಧಿನ? ನಾವು ಬೆಳಗಿನಿಂದ ಸಂಜೆಯ ವರೆಗೆ ಬೆವರು ಸುರಿಸಿ ದುಡಿದು ಸಂಪಾದಿಸಬೇಕು; ಈ XXX ಮಕ್ಕಳು ಡೊಲುನಾಡಿಕೊಂಡು ಜೂಗಾರಾಡಿ ಹಾಳುಮಾಡಬೇಕು! ಇವರಪ್ಪನ ಮನೆಯ ಗಂಟು! (ಸಿಟ್ಟಿನ ಭರದಲ್ಲಿ ತಾವೇ ಅವರಪ್ಪ ಎಂಬುದೂ ಅವನಿಗೆ ನೆನಪಿಲ್ಲ!) ಇನ್ನೆ ಮುಂದೆ ನೀನು ಎಲ್ಲಿಯಾದರೂ ಆ ಮನೆಜೂಳು ಜೂಗಾರು ಆಡು, ಆಗ ತೋರಿಸುತ್ತೇನೆ!" ಎಂದು ಉರಿದು ಬೀರಿದ ಬೆದ್ದರು.

ನನಗೆ ಅಸಾಧ್ಯವಾದ ಕೋಪ ಬಂದು, ನೀಲಕಂಠರಾಯರನ್ನು ತರಾಟೆಗೆ ತೆಗೆದುಕೊಂಡು ಒಂದು ಕೈ ತೋರಿಸಿ ಬಿಡಲೋ ಎಂಬೆನಿಸಿತು. ಅವರ ರಾಯರ ಭೀಮಾಕೃತಿಯನ್ನೂ, ಅವರ ಮನಃಸ್ಥಿತಿಯನ್ನೂ, ನನ್ನ ಬಡಕಲು ದೇಹವನ್ನೂ ನೆನೆದು, ಹಾಗೇನೂ ಮಾಡಲು ಹೋಗಲಿಲ್ಲ. ಸಿಟ್ಟನ್ನು ನುಂಗಿ, ಸಂಧ್ಯಾರಾಗದಿಂದ ಸುಂದರವಾಗಿದ್ದ ಪಶ್ಚಿಮ ದಿಗಂತವನ್ನು ನೋಡುತ್ತ ಕುಳಿತೆ. ನೋಡುತ್ತಿದ್ದಂತೆ ಹಕ್ಕಿಯೊಂದು ಜಕ್ಕನೆಂದಿಂದ ಉಲಿಯುತ್ತ ಗೂಡಿನೆಡೆಗೆ ಹಾರಿಹೋಯಿತು. ನಾನು ಯೋಚಿಸತೊಡಗಿದೆ:

"ಆ ಹಕ್ಕಿಗಿದೆಯೋ ನಾಳೆಯ ಚಿಂತೆ? ಮೂಡಲಲ್ಲಿ ಹೊತ್ತಿನ ಹೊಗರು ಕಾಣಿಸಿದೊಡನೆಯೆ ಎದ್ದು ಉಬ್ಬಿಸಿಂದ ಚಿಲಿಪಿಲಿಗುಟ್ಟಿ, ತನ್ನ ಪ್ರಾಣವನ್ನು ಹಿಂಡಲು ಹೊಂಚುತ್ತಿರುವ ಗಿಡುಗ, ಕವಣೆಗಲ್ಲು, ಬೇಟೆಗಾರನ ಕೋವಿ ಮೊದಲಾದ ಗಂಡಾಂತರಗಳಿಂದ ತುಂಬಿದ ಅನಿಶ್ಚಿತವಾದ ನಿತ್ಯಜೀವನದಲ್ಲಿ ಆನಂದದಿಂದ ದುಮುಕುವುದು. ಕೋದರೆ ಕೂಡಲೆ ಆಡಕ್ಕೆ ಬೆಳುಬೆಳ್ಳಗೆ ಸಿಕ್ಕೇ ಸಿಕ್ಕುವುದು ಎಂದೇನೂ ಇಲ್ಲ ಆಹಾರವನ್ನು ಅರಸಿಕೊಂಡು ಗೂಡಿಗೆ ಮರಳಿ ಬಂದು, ತನ್ನ ಪೊಟ್ಟೆ-ಮರಿಗಳನ್ನು ಇಪ್ಪಂತೆಯೆ ಕಂಡೇನೆಂಬ ನಂಬಿಗೆ ಇಲ್ಲ. ಆದರ ಪುಟ್ಟ ಬಾಳಿನ ಒಂದೊಂದು ದಿವಸವೂ ಅನಂತವಾದ ಅನಿಶ್ಚಿತತೆಯೊಡನಾಡುವ ಜೂಜಲ್ಲವೆ? ಆದರೂ ಆದರಲ್ಲಿಯೆ ಅದಕ್ಕೆ ಸುಖ, ಅದರಲ್ಲಿಯೆ ಅದಕ್ಕೆ ಸ್ವಾತಂತ್ರ್ಯ, ಅದರಲ್ಲಿಯೆ ಅದಕ್ಕೆ ಮುಕ್ತಿ. ಅದೆಷ್ಟು ಸಂದಿಗ್ಧವಾಗಿದ್ದರೂ, ಎಷ್ಟು ಸಾಹಸಮಯವಾಗಿದ್ದರೂ ಅದು ಬೇರೆ ಬಾಳನ್ನು ಬಯಸೀತೆ! ನಮ್ಮ ಹಾಗೆ ಬೆಳಗಿನ ಏಳು ಗಂಟೆಗೆ ದೋಸೆ, ಚಹಾ; ಹತ್ತು ಗಂಟೆಗೆ ರೊಟ್ಟಿಯೂಟ; ನಾಲ್ಕು ಗಂಟೆಗೆ ಅಂಬೊಡೆ-ಚಹಾ; ರಾತ್ರಿಯ ಎಂಟು ಗಂಟೆಗೆ ಮತ್ತೆ ಊಟ; ಉಳಿದ ನೇಳೆಯಲ್ಲಿ ಕೆಲಸ ವಿಶ್ರಾಂತಿ; ಎಂದು ಮುಂತಾಗಿ ಅದಕ್ಕೂ ನಿಯಮಗಳನ್ನೂ ಸುರಕ್ಷಿತತೆಯನ್ನೂ ಒದಗಿಸಿಕೊಟ್ಟಿದ್ದಾದರೆ, ಆ ಬಡಪ್ರಾಣಿ ಎರಡೇ ಎರಡು ದಿನಗಳಲ್ಲಿ ಪ್ರಾಯೋಪವೇಶನ ಮಾಡಿ, ರೆಕ್ಕೆಗಳನ್ನು ಬಡಿಬಡಿದು, ದುಃಖದಿಂದ ಚೀರಾಡಿ ಪ್ರಾಣವನ್ನು ನೀಗುವುದು. ಈ ಗಳಿಗೆಯಲ್ಲೆ ನಮ್ಮ ಪೂರ್ವಿಕರು ಇರುತ್ತಿದ್ದರೆ, ಅವರು ಸಹ ಆ ಹಕ್ಕಿಯ ಹಾಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಕಾರಣ, ನಾವು ಸುಧಾರಣೆಯ ಸೋಗು ಹಾಕಿಕೊಂಡು, ಕಾಯಿದೆ-ಕಾನೂನು, ಸರಕಾರ-ಸಮಾಜಗಳು ಕಲ್ಪಿಸಿದ ಭದ್ರತೆಯ,—ಸುರಕ್ಷಿತತೆಯ—ಕವಚವನ್ನು ತೊಟ್ಟು, ಸೃಷ್ಟಿಯಿಂದ ದೂರ ದೂರ ಸರಿದು ಹೋಗಿ, ಸೊಗಸನ್ನೂ ವೈವಿಧ್ಯವನ್ನೂ ಮರೆತು, ನಮ್ಮ ಪೂರ್ವಿಕರು ಪಡುತ್ತಿದ್ದ ಆನಂದದಿಂದ ವಂಚಿತರಾಗಿ ಬಾಳುವೆಯನ್ನು ಬಿಡುಮಾಡಿದ್ದೇವೆ. ಆಗಿನವರ ಕಚ್ಚು, ಆ ಭೀಮಶಕ್ತಿ, ಆ ಸಾಹಸಪ್ರೀತಿ, ಆ ಪರಿಶ್ರಮಪ್ರೇಮ, ನಿಶ್ಚಿಂತತೆ-ಎಲ್ಲವೂ ಅಡಗಿ, ಬಾಳು ಬೇಸರದ ಜಡಣೆಯಾಗಿದೆ, ನೀರಸವಾಗಿದೆ, ಸಪ್ಪೆಸಪ್ಪೆಯಾಗಿದೆ.....

....ಆದರೂ ಹುಟ್ಟುಗುಣವೆಂಬುದೊಂದು ಇದೆಯಲ್ಲ! ಅದು ನಮ್ಮ ಬೆನ್ನ ಬಿಡುವಂತಿಲ್ಲ ನಮ್ಮ ಪೂರ್ವಿಕರ ಪ್ರವೃತ್ತಿಗಳ ವಿಹಾರಕ್ಕೆ ನಾವು ಬೇರೆ ಬೇರೆ ಕ್ಷೇತ್ರಗಳನ್ನು ಹುಟ್ಟಿಸಿಕೊಂಡಿದ್ದೇವೆ. ಅಂಳಿಪಂಟೆ, ಸರಾಫ್‌ಕಟ್ಟೆ, ರೇಸ್‌ಬಜಾರ್, ಕುದುರೆ ಶರ್ಯತ್ತು, ಕೋಳಿಅಂಕ, ಚಕ್ರಬಂಧಸ್ಪರ್ಧೆ, ಸಾಮಾನ್ಯಜ್ಞಾನಸ್ಪರ್ಧೆ, ಪಂದ್ಯಾಟ, ಇಸ್ಪೀಟೆನಾಟ ಮುಂತಾದುವುಗಳು ಆ ಗತವೈಭವವನ್ನು ನೆನಪುಮಾಡಿಕೊಟ್ಟು, ಕೋಲಾಹಲವನ್ನು ಒದಗಿಸುವುವಲ್ಲದೆ, 'ಇನ್ನೂ ಬದುಕಿರಬಹುದು!' ಎಂಬ ಆಶಾವಾದಿತ್ವವನ್ನು ದಯಪಾಲಿಸುವುವು! ಆದುದರಿಂದ ರಾಯರ ಮಗ ಒಂದು ಎಂಟಾಣೆಯ ತುಂದನ್ನು ಕಳೆದುಕೊಂಡಿರುವುದು, ಅದೇನು ಮಹಾ ಅಪರಾಧವೆಂದು ಹೇಳಲಾಗದು! ಅವನು ಬಿಲ್ಲು-ಬಾಣಗಳನ್ನು ಧರಿಸಿ, ಎಲೆ-ಬಳ್ಳಿಗಳ ವಸನವನ್ನುಟ್ಟು, ಜೀವನವನ್ನು ಮುಕ್ತಿಯಿಲ್ಲದ್ದಿ ಕಾಡಿನಲ್ಲಿ ಸುಗ್ಗಿದನ, ಅವನಿಗೆ ಮಾರನೆಯ ದಿನವೇ ಪಂಚ್ಯರ ಆಸ್ಪತ್ರೆಗೆ ರವಾನೆಯಾಗುತ್ತಿದ್ದ; ಎಂದಮೇರೆ ತನ್ನ ದೈವವನ್ನು ನೋಡಿಕೊಳ್ಳುವ, ಕೋಲಾಹಲವನ್ನು ಅನುಭವಿಸಿ ಸಂತೋಷಪಡಲೋಸುಗ, ಅವನು ಜೂಜಾಡಿದುದು ತಪ್ಪಾಗಲಾರದು. ಪಾಂಡವರೇ ಪೂರ್ವದಲ್ಲಿ ಜೂಗಾರಾಡಲಿಲ್ಲವೆ?.....

.....ನೀಲಕಂಠರಾಯರು ಸ್ವತಃ ವ್ಯಾಪಾರದಲ್ಲಿ ಎಷ್ಟೋ ಸಲ ಜೂಜಾಡುತ್ತಿದ್ದರೂ ತಾವು ಹಾಗೆ ಮಾಡುತ್ತೇವೆ, ಅದು ತಪ್ಪು ಎಂದು ಅವರಿಗೆ ಗೊತ್ತೇ ಇಲ್ಲ. (ಆದರೆ ಗೊತ್ತಿಲ್ಲದೆ ಪಾಪ ಮಾಡಿದರೂ ಅದು ಕ್ಷಮ್ಯವಲ್ಲವಷ್ಟೆ?) ಟಾಟಾ "ಡಿಫರ್ಡು" ಬ್ರಹ್ಮದೇಶದ ಹಾಗೂ

ಅಸಾಮದ ಚಹಾತೋಟದ ಪಾಲುಗಳಿಗೋಸ್ಕರ ವಾರಕ್ಕೊಂದಾ ವೃತ್ತಿಯಾದರೂ ಹೋರಾಡಿ ಕೈಸುಟ್ಟುಕೊಳ್ಳುತ್ತಿದ್ದರೂ, ಅದು ಅವರಿಗೆ ಸೊಳ್ಳೆಯನ್ನು ಹೊಡೆದಷ್ಟು ಸಹಜವೆನಿಸುವುದು. 'ತಂದೆಯಂತೆ ಮಗ' ಎಂಬುದನ್ನು ಅವರಿಗೆ ಹೇಳುವವರಾರು?....

....ಜುಗಾರಿನಿಂದ ಮನೆ ಹಾಳಾಗುವುದೆಂದು ಕೆಲವರು ಆಕ್ಷೇಪಿಸಬಹುದು. ಅವರೆ ನಾನು ಕೇಳುತ್ತೇನೆ; ಯಾರ ಮನೆ? ಅದೇನು ನಾವು ಬರುವಾಗ ತಂದುದಲ್ಲ; ಹೋಗುವಾಗ ಕೊಂಡುಹೋಗುವಂತಹದಲ್ಲ. ನಮ್ಮದು ಹಾಳಾದರೆ ಇನ್ನೊಬ್ಬರದು ಒಳ್ಳೆಯದಾಗುವುದು. ಇದೊಂದು ಪರೋಪಕಾರನೇ ಅಲ್ಲವೆ, ಮತ್ತೆ? ಒಳ್ಳೆಯದು. ಈಗ ಹಾಳಾಯಿತೆನ್ನುವ, ಮುಂದೆ ಒಳಿತಾಗಬಾರದೇಕೆ? ಅದೃಷ್ಟದ ಚಕ್ರ ಮೇಲಕ್ಕೂ ಕೆಳಕ್ಕೂ ಹೋಗುತ್ತದಂತೆ, ನಮ್ಮ ಹಣೆಯಲ್ಲಿ ಬರೆದುದನ್ನು ಅಳಿಸಲು ಬೇರೆ ಆಗುವುದಿಲ್ಲವಷ್ಟೆ?....

....ಈಗ, ನಾನೂ ನನ್ನ ಸ್ನೇಹಿತನೊಬ್ಬನೂ ಕೂಡಿ,—ಅದು ಯಾವ ಪತ್ರಿಕೆ?—ಅದರೊಳಗಿನ ಸಾಮಾನ್ಯಜ್ಞಾನದ ಕೊಂಕುಶಬ್ದಗಳ ಸ್ಪರ್ಧೆಯಲ್ಲಿ ಭಾಗವನ್ನು ವಹಿಸದಿದ್ದರೆ, ಭಾಷಖಾನೆಯ ಮಾಲಕರನ್ನು ಮೊದಲುಗೊಂಡು ಮೊಳೆ ಕೂಡಿಸುವವರ ತನಕ, ವೃತ್ತಪತ್ರಿಕೆಯ ಸಂಪಾದಕರಿಂದ ಹಿಡಿದು ಬೀದಿಬೀದಿಗೂ ತಿರುಗಾಡಿ, ಗಂಟಲುಕಟ್ಟುವನರೆಗೆ ಅರಚುವ ಹುಡುಗನವರೆಗೆ, ಅದರ ಸಕಲ ಸಿಬ್ಬಂದಿ ಬದುಕುವುದೆಂತು? ಆದುದರಿಂದ ನಾವು ಕಳೆದ ಹತ್ತುವರ್ಷಗಳಿಂದಲೂ ಆ ಸ್ಪರ್ಧೆಯ ಇತಿಶ್ರೀ ನೋಡಿಬಿಡಬೇಕೆಂದು ಹಟ ಹಿಡಿದು ಪ್ರಯತ್ನ ಮಾಡುತ್ತಿದ್ದೇವೆ. ಮುಂದಿನ ಸಲ ಇಪ್ಪತ್ತೈದು ಸಾವಿರ ರೂಪಾಯಿಯ ಮೊದಲನೆಯ ಬಹುಮಾನ ಹಾಗೂ ಹೊಸ ಹೊಸ ಶೆವರ್ಲೆಟ್ ಮೋಟಾರು ಸಿಕ್ಕರೆ ಆಗ ಹೇಳುವೆವು. ಅಲ್ಲಿಯವರೆಗೆ ಸೈರಣೆಯಿರಲಿ!....

....ಇನ್ನು ಈ ಭವಿಷ್ಯತ್ತಿನ ಪರದೆಯನ್ನು ಹರಿದು ನಮ್ಮ ನಮ್ಮ ದೈವವನ್ನು ಪರೀಕ್ಷಿಸುವುದೆಂಲ್ಲಿ ಜ್ಯೋತಿಷಿಗಳಿಂದ ತುಂಬ ಸಹಾಯವಾಗುತ್ತದೆ ಅವರು ತಮ್ಮ ತಮ್ಮ ಹೊಟ್ಟೆಗಳನ್ನು ಸರಾಗವಾಗಿ ತುಂಬಿಕೊಳ್ಳುವರಲ್ಲದೆ, ಅಂತಹ ಅಮೃತಗಳಿಗೆ ಬಂದುದೇ ಆದರೆ ನಮ್ಮ ಕೆಸೆಗಳನ್ನೂ ತುಂಬುವರು. ಸ್ವಯಂಜ್ಯೋತಿ, ಆತ್ಮಸ್ಫೂರ್ತಿ, ಅದೃಷ್ಟಕೋತಿ ಮುಂತಾವ ಪ್ರವಾದಿಗಳು ತಮ್ಮ ಶಿಷ್ಯರಿಗೆ ಖಂಡಿತವಾದ, ಎಂದೆಂದೂ ತಪ್ಪಲಾರದ ಸಲಹೆಗಳನ್ನು ತೀರ ಕಡಿಮೆ ರುಸುಮಿಗೆ ಹೇಳಿಕೊಟ್ಟು ನೆರವಾಗುವರು. ರುಸುಮು ಸ್ವಲ್ಪ ಹೆಚ್ಚಾಗಿದ್ದರೆ ಎರಡು ಸಲಹೆಗಳು ಉಚಿತ! ಸಲಹೆಯಂತೆ ಸಂಭವಿಸದಿದ್ದ ಪಕ್ಷದಲ್ಲಿ ಹಣ ವಾಪಾಸು! ಎಂತಹ ಪ್ರಾಮಾಣಿಕತನ! ಎಂತಲೇ ಅವರೂ ಅವರ ಬಳಗದವರೂ ಶುಕ್ಲಪಕ್ಷದ ಬಾಲಚಂದ್ರನಂತೆ ಬೆಳೆಯುತಿದ್ದಾರೆ. ಈ ಸ್ಫೂರ್ತಿಯನ್ನು ಅವರಿಗೇನೇ ಪಾಸಲಾಗಿರಿಸದೆ, ಸಾವಾಸ ದವರೂ ಸಿರುಮ್ಯೋಗಿಗಳೂ ಕೂಡ ಅದನ್ನು ಕೈಕೊಳ್ಳಬಹುದಾದ್ದರಿಂದ ಮತ್ತು ಮತ್ತೂ ಅನುಕೂಲ!

ಜುಗಾರಿನಿಂದಾಗುವ ಮತ್ತೊಂದು ಉಪಕಾರವೆಂದರೆ, ಸರಕಾರಕ್ಕೆ ಆಗುವ ಲಾಭ. ಸರಕಾರಕ್ಕೆ ಸ್ಥಳದ ಬಾಡಿಗೆ, ಪರವಾನಿಗೆಯ ಫೀ, ಬೈಸನ್ನು ಹಣ ಮುಂತಾವುಗಳಿಂದ ಬರುವ ಉತ್ಪನ್ನದಿಂದ ಹಿತವಿದೆ. ಸರಕಾರವೂ ಬದುಕಿರಬೇಕಷ್ಟೆ! ಮತ್ತು ಅನೇಕ ನೌಕರರು! ತಾನು ನಿರ್ದೇಶಿಸಿದಂತೆ ಜುಗಾರಾಡಲು ಪರವಾ ಇಲ್ಲ, ಬೇರೆ ರೀತಿಯಲ್ಲಿ ಆಡಬಾರದು—ಎಂದು ನಿಯಮಗಳನ್ನು ಸರಕಾರವು ಮಾಡಿಕೊಂಡಿದ್ದರೂ, ಪ್ರತ್ಯಕ್ಷವಾಗಿ ಆಡಲಾರದವರೂ ಸಾಕಷ್ಟು ಹಣವಿಲ್ಲದವರೂ ಖಾಸಗಿ ರೀತಿಯಿಂದ—ಎಂದರೆ ಪೋಲಿಸರ ಕೈ ಬೆಚ್ಚಗೆ ಮಾಡಿ—ಒಳಜೂಜನ್ನು ಆಡಲು ಯಾವ ಆತಂಕವೂ ಇಲ್ಲ. ಇದು ನಮ್ಮ ಗೌರವಕ್ಕೇನೂ ಕಡಮೆಯಲ್ಲ. ಒಂದು ವೇಳೆ ಸೋತರೆ ನಮಗೂ ನಮ್ಮ ಒಡ್ಡವನ್ನು ತೆಗೆದುಕೊಳ್ಳುವವನಿಗೂ ಮಾತ್ರ ಗೊತ್ತಾಗುವುದಲ್ಲದೆ, ಬೇರೆಯವರು ಕತ್ತಲೆಯಲ್ಲೇ ಇರುತ್ತಾರೆ.

ಇಷ್ಟು ದೊಡ್ಡ ಪುರಾಣವೇಕೆ? ನಮ್ಮ ದಾಸಾದಿಗಳೂ, ಭಕ್ತ ಶಿಖಾಮಣಿಗಳೂ, ವೇದಾಂತಿಗಳೂ ಹೇಳಿದ್ದಾರೆ: 'ಜೀವನವೆಂಬುದು ಒಂದು ಪಗಡೆಯಾಟ' ಎಂದು. ಅದು ನೀರ್ಗುಳ್ಳೆ. ಅಷ್ಟೇ ಮೋಹಕವಾದದ್ದು, ಅಷ್ಟೇ ಪಾಟವಾದದ್ದು. ಪಾಗೆಯೇ ಕಣ್ಣಿಗೆ ಹಬ್ಬವನ್ನು ಉಂಟುಮಾಡಿ ಕ್ಷಣದಲ್ಲಿ ಕಣ್ಮರೆಯಾಗಿ ಮಿಥ್ಯೆಯೆಂದು ಪ್ರಾಯಶಃ ಆಗುವುದು. ಆದರೂ ನನ್ನ ಪಟ್ಟಿಗೆ ಆ ನೀರ್ಗುಳ್ಳೆ—ಎದೆಯ ಖಂಡಿತವನ್ನು ತಡೆದು, ರಕ್ತವನ್ನು ಕಡೆದು, ಉಸಿರನ್ನು ಬಿಡಿಸಿ, ಫಲಿತಾಂಶವನ್ನು ಚಾತಕಪಕ್ಷಿಯಂತೆ ಕೋರಿ, ಕತ್ತನ್ನು ಕೊಕ್ಕರೆಯಂತೆ ಕೊಂಕಿಸಿ, ಪ್ರತೀಕ್ಷೆ ಮಾಡಿಸುವ—ಆ ನೀರ್ಗುಳ್ಳೆಯೇ ಇರಲಿ; ಅದಿಲ್ಲದಿದ್ದರೆ ನಿಮ್ಮ ಸ್ವರ್ಗವೂ ಬೇಡ. ಈಚೆಗೆ ಅಲ್ಲಿಯೂ ದೇವತೆಗಳು ನೆತ್ತವಾಡುವ ಒಂದು ಹೊಸ ವಿಧಾನವನ್ನು ಜಾರಿಯಲ್ಲಿ ತರುವವರಿದ್ದಾರಂತೆ. ಅದು ಸತ್ಯವಾದರೆ, ಆಗ ಜಿಡ್ಡಿಯಿಲ್ಲ.

ಇದರಲ್ಲಿ ಒಂದು ಕೊರತೆಯೆಂದರೆ, ಯುರೋಪದಲ್ಲಿ ಹೇಗೆ 'ಮೊಂಟೇಕಾರ್ಲೊ' ಈ ಸೊಗಸಿಗೆ ಕೇಂದ್ರಸ್ಥಾನವೋ, ಹಾಗೆ ಹಿಂದುಸ್ಥಾನದಲ್ಲಿಯೂ ಒಂದು ಮುಖ್ಯ ರಂಗಸ್ಥಳವಿಲ್ಲದಿರುವುದು. ಅದುದರಿಂದ ಟುಂಗುಸ್ಥಾನದ ನಾಲ್ಕು ಮೂಲೆಗಳಿಗೂ ಸಮಾನಾಂತರವಾಗಿ, ಸಕಲ ಸವಲತ್ತುಗಳಿಂದಲೂ ತುಂಬಿದ ಒಂದು ಸ್ಥಳವನ್ನು ಏರ್ಪಡಿಸಿ, ಕೇವಲ ಪ್ರಜೆಗಳ ಅನುಕೂಲತೆಗೋಸ್ಕರ ಅಲ್ಲಲ್ಲಿ ಶಾಖೆ-ಉಪಶಾಖೆಗಳನ್ನು ತೆರೆದು, ಅತ್ತ ಮುಖ್ಯಕೇಂದ್ರಕ್ಕೆ ಅಧೀನವಾಗಿರುವಂತೆ ಆದಷ್ಟು ಬೇಗ ವ್ಯವಸ್ಥೆಯಾಗಬೇಕು ಬಹುಶಃ ಛೋಪಾಲವೇ ಇದಕ್ಕೆ ಯೋಗ್ಯವೆನಿಸಬಹುದು! ಅಲ್ಲಿಯ ನವಾಬರೂ, ಸ್ಥಾಲೀರವ ಮಹಾರಾಜರೂ, ಬಡೋದೆಯ ಗಾಯಕವಾಡರೂ, ಇತರ ಚಿಲ್ಲರೆ ರಾಜರೂ, ರಸಿಕರೂ ತಮ್ಮ ತಲೆಗಳನ್ನೆಲ್ಲ ಒಂದುಗೂಡಿಸಿ ಒಂದು ಯೋಜನೆಯನ್ನು ಸಿದ್ಧಪಡಿಸಿ, ಈ ಮಹತ್ಕಾರ್ಯಕ್ಕೆ ತಮ್ಮ ವರದ ಹಸ್ತವನ್ನು ನೀಡುವರೆಂದು ತುಂಬ ಭರವಸೆಯಿದೆ.

"ಅಶಾಂತಿಪರ್ವ" ಕಾದಂಬರಿ ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆಯಿರಿ!

ಶ್ರೀ. ಬೇಂದ್ರೆಯವರ ಕನ್ನಡ ಮೇಘದೂತ

ಶ್ರೀ. ಬ. ಎಚ್. ಶ್ರೀಧರ, ಎಂ. ಎ. ಭಟಕಳ

(ಕಾವ್ಯಾವಲೋಕನ)

'ನನ್ನ ಕನ್ನಡ ಮೇಘದೂತ ಭಾಷಾಂತರ ಎಂದು ನಾನು ಹೇಳಿಕೊಳ್ಳಲಾರೆ; ಆ ಗುಣ ಇದಕ್ಕಿಲ್ಲ' ಎಂದು ಶ್ರೀ. ಬೇಂದ್ರೆಯವರು ಬಲು ಜಾಣತನದಿಂದ ನುಡಿದಿದ್ದಾರೆ. 'ಇದು ಸರಿಯಾದ ಭಾಷಾಂತರ' ಎಂದು, ಯಾರೂ ಕೂಡಲೆ ಭಾಷಾಂತರದ ಒಂದು ಒಳ್ಳೆಯ ಉದಾಹರಣೆಯನ್ನು ತೋರಿಸಲಾರರು. ನೈಯಕ್ತಿಕ ಶಬ್ದಕ್ಕೆ ಬದಲು ಶಬ್ದವಿಡುವುದು ಕೊನೆಯ ದರ್ಜೆಯ ಭಾಷಾಂತರವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇನ್ನು ಹಾಗಲ್ಲದೆ ಬರಿಯ ಭಾವಾರ್ಥದಲ್ಲಿ ವೃಷ್ಟಿಯಿಟ್ಟು, ಮೂಲಗ್ರಂಥದ ಶೈಲಿಗುಣ; ಭಾಷಾಗತವಾದ ಸೌಂದರ್ಯ; ಪದಸಂಹತಿಯ ವಿಶಿಷ್ಟವಾದ ಅರ್ಥವ್ಯಕ್ತೀಕರಣ ಈ ಸಹಜ ಸೌಂದರ್ಯಭಾಗಗಳೆಲ್ಲವನ್ನೂ ಎರಡನೆಯ ಭಾಷೆಯಲ್ಲಿ ಚಾಚೂ ತಪ್ಪದೆ ಪ್ರತಿಬಿಂಬಿಸುವ ವಿಧೇಯತೆಯಿಲ್ಲದೆ, ಸ್ಥೂಲವಾಗಿ 'ಒಟ್ಟಿನ ಮೇಲೆ ಹೀಗೆ' ಎನ್ನು ಕಾರಿಕೆಯ ಮೇಲೆ ಹೇಳುವುದೂ ಸಮಂಜಸವೆನಿಸದು. ಈ ಎರಡು ಕ್ರಮಗಳಿಂದ ಮೂಲಗ್ರಂಥದ ಸ್ವಾರಸ್ಯಕ್ಕೆ ಭಂಗ ಬಂದೀತೇ ಹೊರತು ನ್ಯಾಯವಾದ ಅರ್ಥಸ್ಪಷ್ಟತೆಯುಂಟಾಗಲಾರದು. ಹಾಗಾದರೆ ಸರಿಯಾದ ಭಾಷಾಂತರ ಎಂದರೆ ಯಾವ ರೀತಿಯದು? 'ಭಾಷಾಂತರ' ಎಂಬ ಮಾತಿನಲ್ಲೇ ಧ್ವನಿತವಾಗುವಂತೆ ಮೂಲದ ಸರ್ವಗುಣವನ್ನೂ ಇನ್ನೊಂದು ಭಾಷೆಯಲ್ಲಿ ಕಜ್ಜಿದಿಳಿಸಬೇಕು. ಕಾವ್ಯದಲ್ಲಿ ಶಬ್ದ, ಅರ್ಥ ಎರಡೂ ಭಾವೋದ್ಬೋಧಕವಿರುವುದರಿಂದ, ಶಬ್ದದ ನಾದರೂಪ, ಅರ್ಥದ ಕಲ್ಪನಾರೂಪ ಈ ಎರಡೂ ರಸದ ಹೊರಮೈ-ಒಳಮೈಗಳಂತಿರುವುದರಿಂದ, ಮೂಲಕಾವ್ಯದ ರಸೋತ್ಕರ್ಷವನ್ನು, ಅನ್ಯೂನಾನತಿರಿಕ್ತವಾಗಿ ತಾನು ಬಳಸುವ ಭಾಷೆಯಲ್ಲಿ ತರುವುದು ಭಾಷಾಂತರಕಾರನ ಅಸಿಧಾರಾವ್ರತ! ಹೀಗಿರುವುದರಿಂದ, ಸರ್ವಗುಣ ಸಂಪನ್ನವಾದ ಭಾಷಾಂತರವೆಂದು ಯಾವುದನ್ನೂ ಇಂದು ಟೊಟ್ಟು ಮಾಡಿ ತೋರಿಸಲು ಸಾಧ್ಯವಿಲ್ಲ. ಭಾಷಾಂತರದಲ್ಲಿ ಮಾತು ಮಾತ್ರ ಬೇರೆ ಭಾಷೆಯದೇ ಹೊರತು, ನಾದದ ಮತ್ತು ಅರ್ಥದ ಎಳೆಎಳೆ-ಪದರ ಪದರ—ವ್ರತಿಯೊಂದೂ ಮೂಲಾನುರೋಧವಾಗಿರಬೇಕು. ಇದನ್ನು ಗಮನದಲ್ಲಿಟ್ಟುಕೊಂಡೇ ಬೇಂದ್ರೆಯವರು ಭಾಷಾಂತರದ ಗುಣವು ತಮ್ಮ ಅನುವಾದದಲ್ಲಿಲ್ಲವೆಂದಿದ್ದಾರೆ.

ಹಾಗಾದರೆ ಕನ್ನಡ ಮೇಘದೂತದ ವೈಶಿಷ್ಟ್ಯವೇನು? ಅದರ ಗುಣವೆಂತಹುದು? ಯಾವ ಬಗೆಯಲ್ಲಿ ಅದು ಮೂಲಗ್ರಂಥಕ್ಕೆ ಉಪಕಾರಿಯಾಗಿದೆ? ಇಂತಹ ಅನುವಾದದಿಂದ ಕನ್ನಡಲೋಕಕ್ಕೆ ಯಾವ ಮಟ್ಟಿನ ಪ್ರಯೋಜನವುಂಟಾಗಿದೆ? ಮೊದಲಾದ ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ಇದಕ್ಕೆ ಒಂದೇ ಒಂದು ಮಾತಿನಿಂದ ಗ್ರಂಥಕರ್ತರು ಉತ್ತರವನ್ನು ಕೊಡುತ್ತಾರೆ. 'ಅಯ್ಯಾ, ಈ ಹಿಂದೆ ಮತ್ತು ಈಗ ಭಾಷಾಂತರಗಳೆಂದು ಹೇಳಿಸಿಕೊಳ್ಳುವ ಕನ್ನಡ ಮೇಘದೂತಗಳೊಡನೆ ನನ್ನದನ್ನಿಟ್ಟು ವಿಮರ್ಶಕ ದೃಷ್ಟಿಯಿಂದ ನೋಡಿ! ಆದುದರಿಂದ ಭಾಷಾಂತರದ ಸಂಪೂರ್ಣತೆಯ ಮಾದರಿಯೊಂದನ್ನು ಕಣ್ಣ ಮುಂದಿರಿಸಿಕೊಂಡು, ಅದರೆದುರು ಈಗಾದ ಮೇಘದೂತಾನುವಾದಗಳನ್ನು ಪರಸ್ಪರ ಹೋಲಿಸಿ ನೋಡಬೇಕಾಯ್ತು. ಈ ಅನುವಾದಗಳಲ್ಲಿ ಯಾವುದು ಎಷ್ಟು ಅಂಶ ಪೂರ್ಣತೆಯ ಕಡೆಗೆ ಕೈಚಾಚಿದೆ, ಒಂದರಿಂದ ಒಂದು ಎಷ್ಟರ ಮಟ್ಟಿಗೆ ಕೃತಕೃತ್ಯವೆನಿಸಿದೆ—ಎಂಬುದನ್ನು ನಮ್ಮ ಕಲ್ಪಿತ ಸರ್ವಗುಣಸಂಪನ್ನ ಮೇಘದೂತದ ಮುಂದೆ ನಿರ್ಧರಿಸಬೇಕಾಗಿದೆ. ಮೊದಲೇ ಹೇಳಿದಂತೆ ನಮ್ಮ ಕಲ್ಪಿತಪೂರ್ಣತೆಯಲ್ಲಿ, ಮೂಲಕ್ಕೂ ಅನುವಾದಕ್ಕೂ ಶಬ್ದಶಕ್ತಿ-ಅರ್ಥಶಕ್ತಿಗಳಲ್ಲಿ ಬಿಂಬ-ಪ್ರತಿಬಿಂಬಭಾವವಿರಬೇಕು. ಉಳಿದ ಕನ್ನಡ ಮೇಘದೂತಗಳಿಗೂ ಇದಕ್ಕೂ ಇರುವ ಮುಖ್ಯವಾದ ಒಂದು ವ್ಯತ್ಯಾಸವು ನುಡಿಕಟ್ಟಿನಲ್ಲಿ ಕಾಣಬರುತ್ತದೆ. ಶಪಥಮಾಡಿ ಕನ್ನಡ ಪದಪ್ರಯೋಗದಲ್ಲಿ ಕೈಯಿಕ್ಕಿದ ಇಂದಿನ ಕನ್ನಡಗರಡಿಯಾಳು ಕೂಡ ಸಂಸ್ಕೃತದ ಸಮಾಸಗಳನ್ನು ಹಾಗೆಯೆ ಎತ್ತಿ ತೆಗೆದು, ಅದಕ್ಕೆ ಹಳಗನ್ನಡಿಗರಂತೆ ಕನ್ನಡ ವಿಭಕ್ತಿಯನ್ನು ಸೇರಿಸಿರುವನು! ಉದಾ: 'ಶ್ರಾವಣವು ಸನ್ನಿಹಿತನೆನೆ ಬಗೆದು ಪ್ರೇಯಸಿಳ್ಯ ಜೀವಿತಾಲಂಬನದೊಳಾಸಕ್ತನಾಗಿ,' 'ಕಾಮುಕಾರ್ತರಾದವರು ಚೇತನಾಚೇತನದೆ ಕೃಪಣರೆಂಬುದು ನೋಡೆ ಸಾಜಮಲ್ತೆ!' ಇತ್ಯಾದಿ ಅನರ್ಘವಾಗಿವೆ. ಅದರಂತೆ ಹಿಂದಿನ ಭಾಷಾಂತರಗಳಲ್ಲೂ ಮುಖ್ಯಗುಣ (?) ವೊಂದಿದ್ದರೆ ಅದು ಇದೇ. ಈ ಮಾದರಿಯ ವಾಕ್ಯಗಳಿಂದ ಪಂಡಿತರಿಗೆ ಪ್ರಯೋಜನವಿಲ್ಲ, ಏಕೆಂದರೆ ಅವರು ಮೂಲವನ್ನೇ ಓದಿ ಆಸ್ವಾದಿಸಿರುವುದರಿಂದ, ಈ ಅನುವಾದ ಅವರಿಗೆ ಬೇಡವೇ ಬೇಡ; ಸಾಮಾನ್ಯರಿಗೋ, ಇದು ಮೂಲಕ್ಕಿಂತ ಹೆಚ್ಚು ಸುಲಭ, ಸರಳ ಎಂದು ಎನಿಸುವುದಿಲ್ಲವಾದ ಕಾರಣ, ಅವರಿಗೂ ಇದು ಹೇಯ. ಎಂದ ಮೇಲೆ ಇಂತಹ ಭಾಷಾಂತರಗಳಿಂದ ಯಾರಿಗೆ ಪ್ರಯೋಜನ?

ಆದರೆ ಈ ಮೇಲೆ ಹೇಳಿದ ವರ್ಗದ ಭಾಷಾಂತರಕಾರರು ಹೀಗೆ ಪ್ರತಿಭಟಿಸಬಹುದು: 'ಮೂಲಕ್ಕೆ ಪ್ರತಿಬಿಂಬರೂಪವಾಗಿರಬೇಕಾದರೆ ಹೀಗಲ್ಲದೆ ಮತ್ತೆ ಹೇಗೆ ಭಾಷಾಂತರ ಮಾಡಬಹುದು?' ಎಂದು. ಹೌದು, ಆದರೆ ಪ್ರತಿಬಿಂಬವೆಂದಕೂಡಲೆ ಅದೇ ಬಿಂಬದ ನ್ಯೂನಸ್ವರೂಪವೆಂದು ತಿಳಿಯಬಹುದಲ್ಲ; ಅದರ ಗುಣಗಳಿಂದ ಕೂಡಿದ ಬೇರೆಯ ಬಿಂಬವೆಂದು ಸಮಾಧಾನ ಹೇಳಬೇಕಾಗುತ್ತದೆ. ಪ್ರತಿಬಿಂಬವು ಮೂಲ ಬಿಂಬಕ್ಕೆ ಸಮ, ಆದರೆ ತದ್ಭಿನ್ನ ಸಂಸ್ಕೃತದ ನುಡಿಕಟ್ಟುಗಳನ್ನು ಹಾಗೆ ಹಾಗೇ ಎತ್ತಿ ಕನ್ನಡ ಕಟ್ಟಿನಲ್ಲಿ ಒಗೆದರೆ, ಮೂಲ ಬಿಂಬದ ನ್ಯೂನರೂಪವಾಗುವುದೇ ಹೊರತು ಪ್ರತಿಬಿಂಬವೆನಿಸುವುದಿಲ್ಲ. (ಉದಾ:— ಚೇತನಾಚೇತನದ ಕೃಪಣ' ಎಂಬಲ್ಲಿ 'ಕೃಪಣ' ಶಬ್ದಾರ್ಥ) ಇಂತಹ ವಿಕಟಬಿಂಬದಿಂದ ಬೇಂದ್ರೆಯವರ 'ಮೇಘದೂತ' ಭಿನ್ನವಾಗಿದೆ. ಕನ್ನಡನುಡಿಯ ಜೀವಸೂತ್ರಬದ್ಧವಾದ ಜೀವಂತ ಕನ್ನಡ ನುಡಿಕಟ್ಟಿನಲ್ಲಿ, ಮೂಲ ಮೇಘದೂತದ ಭಾವವು ಇವರಿಂದ ಪ್ರತಿಫಲಿತವಾಗಿದೆ. ಕಾಲಿದಾಸನ ಮೇಘದೂತದಂತಹ ಉತ್ಕೃಷ್ಟತಮ ಭಾವಗೀತದ ಭಾವಾನುವಾದವನ್ನು, ಏಂದು ಕನ್ನಡವನ್ನು ಬಲ್ಲ ಸರ್ವಸಾಧಾರಣ ಎಲ್ಲರಿಗೂ ಗಮ್ಯವಾಗುವಂತಾಗಿರುವುದು, ಉತ್ತಮ ಗ್ರಂಥಕಾರರ ಪ್ರತಿಭಾಶಕ್ತಿಯಿಂದ. ಇಂತಹ ಉತ್ತಮ ರಸಗುಣಾವಗಾಹನದಿಂದ ಸಾಮಾನ್ಯರನೇಕರು ವಂಚಿತರಾಗಿದ್ದರು; ಅದು ಇಂದು ತಪ್ಪಿತು. ಪಂಡಿತರ ಮೆಚ್ಚುಗೆಯನ್ನೇ ಪಡೆದುಬಿಡದು, ಬರಿದೆ ತಲೆ ನೂಗುತ್ತಿದ್ದ ಸಾರ್ವಜನಿಕನಿಗೆ ತಾನೇ ಸ್ವಂತ ಓದಿ ತಿಳಿದು ಆನಂದಿಸುವ

ಸದವಕಾಶವು ದೊರೆಯಿತು. ಈ ಬಗ್ಗೆ ಗ್ರಂಥಕರ್ತರಿಗೆ ಕನ್ನಡಿಗರು ಕೃತಜ್ಞರಾಗಿದ್ದಾರೆ.

ಇನ್ನು ಇವರ ಈ ಅನುವಾದವು, ಉಳಿದೆಲ್ಲ ನಾಮಮಾತ್ರ ಭಾಷಾಂತರಗಳಿಗಿಂತ ಹೆಚ್ಚು ಭಾಷಾಂತರಗುಣ ಸಮೃದ್ಧವೆಂದು ಹೇಳಬಯಸುತ್ತೇನೆ. ಅಚ್ಚಗನ್ನಡದ ಸಿರಿನುಡಿಯ ಸರಳ ಸುಂದರರೂಪವು ಈ ಕಾವ್ಯದಲ್ಲಿ ಮಾತ್ರವಲ್ಲ; ಈ ಕವಿಯ ಉಳಿದೆಲ್ಲ ಕಾವ್ಯಗಳಲ್ಲೂ ವಿಶೇಷವಾಗಿ ಕಂಡು ಬರುತ್ತದೆ. ಮತ್ತು ಈ ಬೆಡಗಿನ ಕನ್ನಡ ನುಡಿಕಟ್ಟು ಈ ಕವಿಗೆ ಸಹಜವೇ ಹೊರತು ಕೃತಕವಲ್ಲ. ಯತ್ನಕೃತ ಸಿದ್ಧಿಯಲ್ಲ, ಅರ್ಥಾತ್ ಸಂಸ್ಕೃತಕ್ಕೆ ಬದಲಾಗಿ ಯಾಕೆ ಹಠಯೋಗದಲ್ಲಿ ತಯಾರಾದ ಉಡಯ್ಯನ ಕಬ್ಬಿಗರ ಕಾವವಲ್ಲ!

ಕಾವ್ಯದಲ್ಲಿ ಮೊದಲನೆಯ ಪದಾರ್ಥ ಛಂದಸ್ಸು. ಛಂದಸ್ಸಿನ ಸುಲಭ ವ್ಯಾಖ್ಯೆಯೆಂದರೆ ನರ್ತನಗತಿ. ವಿರಹಗೀತೆಯ ಗತಿಯು ಮಂದಾಕ್ರಾಂತದಲ್ಲಿ ಇರುವಂತೆ ಬರೆಯುವು ಕಾಲಿದಾಸನ ಪ್ರತಿಭೆಯನ್ನು ಎತ್ತಿ ತೋರಿಸುತ್ತದೆಂಬುದನ್ನು ಸಹೃದಯರೆಲ್ಲರೂ ಬಲ್ಲರು. ಅಂತಹ ಮಂದಾಕ್ರಾಂತಕ್ಕೆ ಅತಿ ಹತ್ತಿರವಾಗಿ ಹೊಂದಿಕೊಳ್ಳುವ ಕನ್ನಡವೃತ್ತವನ್ನು ಬಳಸಿಕೊಂಡುದು ಪ್ರಕೃತ ಅನುವಾದಕಾರರ ಪ್ರತಿಭೆಯನ್ನು ಪ್ರಕಾಶ ಪಡಿಸುತ್ತದೆ. 'ಮಂದಂ ಮಂದಂ ನುದತಿ ಪವನಃ!' ಎಂಬ ಕಾಲಿದಾಸನ ಮಾತಿನಲ್ಲೇ ಮಂದಾಕ್ರಾಂತದ ಸ್ವರೂಪವು ವಿವೃತವಾಗುತ್ತದೆ. ಈ ಛಂದದ ಸಹಜಸೌಂದರ್ಯವನ್ನು ಕನ್ನಡ ಪದ್ಧತಿಗೆ ಇಷ್ಟು ಸಮಂಜಸವಾಗಿ ಅಳವಡಿಸಿಕೊಂಡ ಮಾದರಿ ಸದ್ಯಕ್ಕೆ ಕನ್ನಡದಲ್ಲಿ ಇನ್ನೊಂದಿಲ್ಲ. ಇದು ಅನುವಾದದ ಮೊದಲನೆಯ ಉತ್ಕರ್ಷಾಂಶ.

ಮುಂದೆ ಸಾಗಿದರೆ ಕಾಲಿದಾಸನ ಬಂಧ ಕಣ್ಣಿದುರಿಗೆ ಬರುತ್ತದೆ. ಅವನದು 'ವೈದರ್ಭೀ ರೀತಿ,' 'ವ್ಯಾಕ್ಷಾಜಾಕ' ಎಂದು ಹೆಸರಾಗಿದೆ. ರಸೋಚಿತವಾದ 'ಹಿತಮಿತ ಮೃದುವಚನ' ಅವನ ಸಹಜಗುಣ. ಆದರಂತೆ ಅವನು ತನ್ನ ಮೇಘದೂತದಲ್ಲಿ 'ಲಲಿತ-ಮಧುರ-ಸುಂದರ'ವಾದ ಸಂಸ್ಕೃತ ಪದಸಂಹತಿಯನ್ನು ಬಳಸಿದ್ದಾನೆ. ಸಂಸ್ಕೃತಭಾಷೆಯ 'ಉಸಿರು, ಕಿರುಳು ಎನಿಸಬಹುದಾದ ಪದಮುಂಬರಿಗಳು ಅವನ ಕಾವ್ಯಗಳಲ್ಲಿ ಹೇರಳವಾಗಿ ಸಿಗುತ್ತವೆ. ಇಂತಹ ಭಾಷಾಸೌಂದರ್ಯವನ್ನು ಕನ್ನಡಿಸಲಾರದೆ, ಹಿಂದೆ ಉಬಾಹರಿಸಿದಂತೆ ಅನುವಾದಕರನೇಕರು ಮೂಲದ ಪದಸ್ರಜಯವನ್ನು ಕನ್ನಡ ವಿಭಕ್ತಿಗಳನ್ನು ತೊಡಿಸಿ, ಪಾರಿಪಾಠವೇ ಬಳಸಿದ್ದಾರೆ. ಇದರಿಂದ ಕಾಲಿದಾಸನ ದುರನುವಾದ್ಯತ್ವವು ವ್ಯಕ್ತವಾಗುತ್ತದೆ. ಆದರೆ ಇಂತಹ ದುರನುವಾದ್ಯತ್ವವು, ಯಾವ ಭಾಷೆಯಲ್ಲಾದರೂ ಉತ್ತಮ ಕೃತಿಗಳಲ್ಲಿ ಇದ್ದೇ ಇರುವುದು. ಆದರಂತೆ ಪ್ರಕೃತ ಕವಿಗಳು ದುರನುವಾದ್ಯತ್ವವನ್ನು ದುರನುವಾದ್ಯತ್ವದಿಂದಲೇ ನಿವಾರಿಸಿದ್ದಾರೆಂಬುದು ಆಶ್ಚರ್ಯ ಮತ್ತು ಸಂತೋಷದ ಸಂಗತಿಯಾಗಿದೆ. ಎಂದರೆ ಮೂಲಪದಬಂಧದಲ್ಲಿ ಯಾವ ರಸೌಚಿತ್ಯದ ಪೂರ್ಣತೆಯಿದೆಯೊ ಅವನ್ನೇ ಕನ್ನಡನುಡಿಗೆ ಸ್ವಾಭಾವಿಕವೆನಿಸುವ ನುಡಿಕಟ್ಟಿನಲ್ಲಿ ಸೂರಕ್ಕೆ ಎಂಬತ್ತರಷ್ಟು ಅನುವಾದದಲ್ಲಿ ಇವರು ತಂದಿದ್ದಾರೆ.

ಶ್ರೀ. ಪರಮೇಶ್ವರಭಟ್ಟರ ಮೇಘಃ

ನೃತ್ಯಸೇವಾ ಭೂದಿನದಿಯನಿತ್ತಿದುವಂದು
ಳಟಿಯಕಾಂಬುದವಾಮ ಮೃದುಮೃಣಿನಿಂ—
ರತ್ನವರ್ಣಚ್ಛವಿಯ ನಳಿಯ ಚಾಮರ ಮಿನುಗಿ
ಲೀಲೆಯಿಂ ಪಿಡಿಪಡನು ಬೀಸುವಂದು
ಕ್ಲಾಂತವೇಶ್ಯಾಜನದ ನಮಿಸದಿಕೆ ಸುಖವೀವ
ನೊದಲಮಳೆವನಿಗಳನು ನೀನು ಸುರಿಯು,
ನುಭುಕರ ಶ್ರೇಣಿಪೊಲು ನಿಡಿದಾದಪಾಂಗಗಳ
ನಿನ್ನ ಕಡೆಗೆಳ್ಗುವರು ಪ್ರೀತಿಯಿಂದೆ.

ಶ್ರೀ. ಬೇಂದ್ರೆಯವರ ಮೇಘ

ದೇವದಾಸಿಯರು ಪೆಜ್ಜೆಜಾಕ, ನಡು—
ಗೆಜ್ಜೆಕಾಣಿಸಿ ನಪುರ
ಬಳ್ಳಿ ತೋಳು ಬಳುಕಾಡಿ ಬೀಸುವವು
ರತ್ನಗಾವಜವರಿ
ನಿನ್ನ ಮೊದಲಹನಿ ಉಗ್ರಾಣ-ತಾಣ ತಂ-
ಗೊಳಿಸೆ ಎದೆಯು ತಾಗಿ
ನೋಟ ಬೀರುವರು ನಿನ್ನ ಕಡೆಗೆ ತಂ-
ಪುಂಬಿ ಹೂಲೆಯಾಗಿ!

ಇವೆರಡರಲ್ಲಿ ಕನ್ನಡ ನುಡಿಕಟ್ಟಿನ ಸ್ವಾಭಾವಿಕತೆ ಯಾವುದರಲ್ಲಿ ಹೆಚ್ಚೆಂಬುದನ್ನು ಹೇಳಬೇಕಾಗಿಲ್ಲ; ಸ್ಪಷ್ಟವಿದೆ. ಮೊದಲಿನ ಪ್ರತ್ಯಕ್ಷರ ಭಾಷಾಂತರದ, ವೈದರ್ಭೀರೂಢಿ ಎರಡನೆಯ ಭಾವಾನುವಾದದ ಎಷ್ಟನೆಯ ಒಂದಂಶವೆಂಬುದನ್ನು ರಸಿಕರೇ ಊಹಿಸಬಲ್ಲರು. ಸಂಸ್ಕೃತ ವೈದರ್ಭಿಯಲ್ಲಿ ಬಳಸಿದ ಪದಗಳು ಕನ್ನಡದಲ್ಲಿ ಪ್ರಯುಕ್ತವಾದಾಗ, ಅವುಗಳ ವೈದರ್ಭಿತ್ವ ಉಳಿಯದೆಂಬುದನ್ನು ಯಾರೂ ಸಂಶಯಿಸಬಾರದು. ಕನ್ನಡನುಡಿ ಹುಟ್ಟುವೈದರ್ಭ. ಅದಕ್ಕೆ ತತ್ಸಮ ರಮ್ಯ ಬೆರೆತಾಗ ಹಲವು ಪೇಳಿ ಗೌಡಿಯ ಓಜಸ್ಸು ಅದಕ್ಕುಂಟಾಗುತ್ತವೆ. ಎರಡನೆಯ ಉದಾಹರಣೆ ಕನ್ನಡ ವೈದರ್ಭಿಗೆ ಮಾದರಿಯೆನಿಸುವಂತಿದೆ. ಸಂಸ್ಕೃತ ವೈದರ್ಭಿ ಹಲವು ವೇಳೆ ಕನ್ನಡನುಡಿಯ ವಾಕ್ಯರಚನಾ ವೈಚಿತ್ರಿಯಿಂದ ಗೌಡಿಯೇ ಆಗಿ ತೋರುತ್ತದೆ; ತೋರುವು ದೇಕೆ, ಆಗುತ್ತವೆ; ಆಗಿವೆ!

ಮುಖ್ಯವಾಗಿ ಇಲ್ಲಿ ನೋಡತಕ್ಕದ್ದು ರಸಿಕನ ಕಲ್ಪನೆಗೆ ಸುಲಭವಾಗಿ ನಿಲುಕುವ ಕಾಲಿದಾಸೋಕ್ತ ಚಿತ್ರಗಳು—ನಿಸರ್ಗ ಚಿತ್ರಗಳು, ಭಾವಚಿತ್ರಗಳು. ಇವು ಎಲ್ಲಿ ಸುಲಭವಾಗಿ ಮತ್ತು ಸ್ಪಷ್ಟವಾಗಿ ರಸಿಕನ ಕಲ್ಪನೆಯಲ್ಲಿ ಮೂಡುವುವೋ ಆ ಅನುವಾದ ಸಾರ್ಥಕವಾದಾನುದು. ಮೂಲವನ್ನು ಮಲ್ಲಿನಾಥನಲ್ಲದೆ ಅರಗಿಸಿಕೊಳ್ಳುವುದು ಪಂಡಿತರಿಗೇ ಸುಲಭವಲ್ಲವೆನಿಸುವಂತಿದೆ.— ಇಂದಿನ ಸಂಸ್ಕೃತಜ್ಞಾನದ ಅಲ್ಪ ಪುನಾವರ್ತನೆಯಿಂದ ಹೀಗಿರುವಾಗ, ಮೊದಲಿನ ಉದಾಹರಣೆಯನ್ನು ಕಂಡರೆ, ಸಂಸ್ಕೃತ ಮಲ್ಲಿನಾಥನಿಗೆ ಕನ್ನಡ ಮಲ್ಲಿನಾಥ ತಯಾರಾಗಬೇಕೋ ಎನ್ನಿಸುತ್ತದೆ. ಇಲ್ಲಿ ಇನ್ನೊಂದು ವಿಷಯ ಬಹು ಮುಖ್ಯವಾದುದು. ಕೆಲವು ಹಾಸ್ಯಪ್ರಧಾನ ವಾಕ್ಯಗಳನ್ನು ಕೂಡಲೆ ಗ್ರಹಿಸಿದರೆ ಇರುವ ಸ್ವಾರಸ್ಯ ವಿವರಿಸಿ ಹೇಳಿದ ಮೇಲೆ ತೋರದಿರುವಂತೆ, ಭಾವಗೀತದ ಜಾತಿಯ ಚಮತ್ಕಾರಕ ರಸಚಿತ್ರಗಳಿಗೆ ಒಮ್ಮುಖವ್ಯಾಖ್ಯಾನ ಭಾರದಿಂದ ಅಪಕರ್ಷಣೆ ಏನಾ ಉತ್ಪರ್ಷವಾಗುವುದಿಲ್ಲ. ಮಿಕಕಾವ್ಯದಲ್ಲಿ ಜಟಿಲತೆಯು ದೊಷವಲ್ಲ. ಸಂಸ್ಕೃತ ಮೇಘದೂತವು ಕಾಲಿದಾಸ ಕಾಲೀನ ಸಂಸ್ಕೃತ ರಸಿಕರಿಗೆ ಹೇಗೆ ಜಟಿಲವಾಗಿದ್ದಿಲ್ಲವೋ ಹಾಗೇ ಅದ್ಯತನ ಕನ್ನಡ ರಸಿಕರಿಗೆ ಕನ್ನಡ ಮೇಘದೂತವು ಜಟಿಲವಾಗಿ ತೋರುವಾದರೂ—ಮಿಕವೆಂದು ತೋರುತ್ತದೆ, ಎರಡನೆಯದು ತೋರುವುದಿಲ್ಲ.

ಪ್ರಸ್ತುತ ಮೇಘದೂತವನ್ನೋದುತ್ತಿರುವಾಗ, ಕರ್ತರು ಹೇಳಿರುವ—'ಕವಿಯ ಕಮಲಕೃತಿಯಲ್ಲಿ ಉಂಡೆ ನಾನೊಬ್ಬ ಭಾವಭೃಂಗ'—ಎಂಬ ನುಡಿ ಹೆಜ್ಜೆಹೆಜ್ಜೆಗೂ ನೆನಪಿಗೆ ಬರುತ್ತದೆ. ಕಾಲಿದಾಸನು ಚಿತ್ರಿಸಿರುವ ಭಾವದ ಹಂದರ ಇವರ ಅನುವಾದದಲ್ಲಿ ಸ್ಪಷ್ಟವಾಗಿ—ಪ್ರಕಾಶವಾಗಿ—ಪಡಿಯಚ್ಚಾಗಿ—ಬಂದಿದೆ ಎಂಬುದು ಒಂದೇ ಒಂದು ಉದಾಹರಣೆಯಿಂದ ಗೊತ್ತಾಗುತ್ತದೆ:

ಮೂಲ

ಆಶಾಬಂಧಃ ಕುಸುಮ ಸದೃಶಂ ಪ್ರಾಯಶೋಹ್ಯಂಗನಾನಾಂ ।
ಸದ್ಯಃ ಪಾತಿಪ್ರಣಯಿಹೃದಯಂ ವಿಪ್ರಯೋಗೇರುಣದ್ಧಿ ॥

ಅನುವಾದ

ನಾರಿಹೃದಯದಲಿ ನಾರಿನೆಳೆಯಂತೊಲು
ಇಹುದು ಆಸೆಯೊಂದು ।
ಆಗಲಿವಾಗಲೇ ಕಳಚಿ ಬೀಳುವೆದೆ-
ಹೂಸ ಬಿಗಿಮುಕೊಂದು ॥

ಮತ್ತು ಕಾಲಿದಾಸನ ವರ್ಣನೆಯ ಎಲೆ ಎಲೆ–ನರನರಪನ್ನೂ ಬಿಡದೆ ಭಾವಚಿತ್ರ ತೆಗೆಯಲು ಪ್ರಯತ್ನಪಟ್ಟು ಹಲವರು ಕೈಸೋತರೆ, ಇವರು ಆ ವರ್ಣನೆಯ ಆತ್ಯರ್ಥಿಯನ್ನು ಕಂಡುಕೊಂಡು. ತಪನ್ನೇ ಎತ್ತಿ ಒತ್ತಿ ಹೇಳಿದ್ದಾರೆ. ವ್ಯಂಗ್ಯಚಿತ್ರಕಾರನು ಒಂದೇ ಒಂದು ರೇಖಾನ್ಯಾಸ ಮಾತ್ರದಿಂದ ಮನುಷ್ಯನ ಮುಖವರ್ಚಿಯನ್ನು ವ್ಯಕ್ತಗೊಳಿಸುವಂತೆ, ಇವರು ಕಾಲಿದಾಸನ ಕಣ್ಣಿನೊಳಗಣ್ಣ ಹೊಕ್ಕು, ಭಾವಲಹರಿಯ ಪ್ರಧಾನಗತಿಯನ್ನು ಗುರುತಿಸಿ ಕನ್ನಡಿಸಿದ್ದಾರೆ. ಹೂವಿನಂತಹ ಹಲವಾರು ಸುಂದರವಾದ ಮಾತುಗಳನ್ನು ಕನ್ನಡದಲ್ಲಿ ಇಲ್ಲಿ ಒಡಮೂಡಿಸಲಾಗಿದೆ. ಕೊರಳ–ಗೆಳತಿ, ಸೂಪುರರ ಅಮರಿ, ಕಣ್ಣ ಕುಡಿಲಲ್ಲೆ, ಮಳ್ಳಮುರುಕ, ವಕ್ಕುನುಡಿ, ಮೊಲ್ಲೆಗಣ್ಣು ಮುಂತಾದುವು. ಈ ಕವಿಗಳ ಗಾರುಡಿಗತನವನ್ನು ಪ್ರದರ್ಶಿಸುವ ಹತ್ತಾರು ವಾಕ್ಯರಚನಾಕ್ರಮ ಇಲ್ಲಿ ಎದ್ದು ಕಾಣುತ್ತವೆ:

'ಗಲ್ಲ ಬೆಮರೆ, ಕವಿಕನಾಲಕಮರಿ, ಪಾಪುರರ ಅಮರಿಯಂಗೆ'
'ಮುತ್ತ ಹಂಸಗಳ ಮುತ್ತ ನುಲಿವನೇ ಮುತ್ತ ಎಳೆದು ಬಳಸಿ'
'ಹೆಸರಿನಂತೆ ಗಂಭೀರೆ ಧೀರೆ ತಿಳಿನೀರ ಜಲದೊಳವಳ'
'ಈ ಗಿರಿಯ ಜೀವ, ಆ ಸ್ಕಂದದೇವ, ಅಭಿಷೇಕವಾಡು ಬಾ ನಿ"
'ಉಪರಿದ್ದ ನವಿಲಗರಿ ಮುತ್ತ ಎತ್ತ ಕಣ್ಣೊತ್ತಿ ತಿನಿಯ ತಿನಿಗೆ"
'ಕೈ ತಪ್ಪಿ ನೂಟ ಬಳೆ ಕಾಕಲಾಟ ಫಕಫಕ್ಕೆ ಎಂಬಾಟನಲ್ಲಿ" —ಇತ್ಯಾದಿ

ಈ ಅನುಪ್ರಾಸಲೀಲೆ ಗ್ರಂಥಕರ್ತರ ಶೈಲಿಯ ಒಂದು ವಿಶಿಷ್ಟಗುಣ; ಈ ಛಂದೋನರ್ತನ ಇವರ ಕವಿತೆಯ ಒಂದು ನವೀನ ಪ್ರಾಸಾದಿಕ ಬೆಡಗು. ಹೀಗೆ ಶೈಲಿಯ ಗುಣಗಳಲ್ಲಿ ಪ್ರಧಾನವಾದ ಅರ್ಥವ್ಯಕ್ತಿ, ಕವಿಯ ಆಶಯವನ್ನು ಕಂಡುಹಿಡಿದು ಪ್ರಕಟಿಸುವ ಸೂಕ್ಷ್ಮದರ್ಶಿತ್ವ ಎಲ್ಲವೂ ಇವರ ಅನುವಾದದಲ್ಲಿ ಕಾಣುಬರುತ್ತವೆ. ಇಷ್ಟೆಲ್ಲ ಕೇಳಿದ ನಂತರ ಯಾರಾದರೂ ಎದ್ದು ಕೇಳಬಹುದು—'ಜಯ್ಯಾ, ಈ ಅನುವಾದವು ಅಮೂಲಾಗ್ರವಾಗಿ ನಿರ್ದುಷ್ಟವೇ ?'—ಎಂದು. ಅಲ್ಲ; ದೋಷಗಳೂ ಇವೆ, ಆದರೆ ಅವು ಅಲ್ಪವಿರುವ ಕಾರಣ ಗುಣಗಳ ಮರೆಯಲ್ಲಿ ತಲೆಗರೆದು ಕುಳಿತಿವೆ ! ಅಂತಹ ದೋಷಗಳೆಂದರೆ; 'ಒಳ್ಳೆಯರ, ಕೊಳ್ಳದಾಗ, ಮುರಿಕೊಳ್ಳಲೆಂದು, ಕುಂತು, ಎಂಬಿ, ಬೇಳತಾವ, ಯಶಗೀತ' ಮುಂತಾದ ಶಬ್ದಹೀನ ಅಥವಾ ವ್ಯಾಕರಣದೋಷಗಳು; ಉತ್ತರಮೇಘದ ಒಲನೆಯ ಪದ್ಯದ ಮೊದಲ ಸಾಲು, ಅದೇ ಮೇಘದ ಒಲನೆಯ ಪದ್ಯದ ಕೊನೆಯ ಸಾಲು, ಗಟನೆಯ ಪದ್ಯದ ಎರಡನೆಯ ಸಾಲು ಇಲ್ಲಿ ತೋರುವ ಛಂದೋವೈಷಮ್ಯ; ಪ್ಲುತಪ್ರಯೋಗ; ಬಯಕೆ-ಮರುಳ, ಬೆಳಕಂಡಿ ಮೊದಲಾದ ವಿದ್ವದುದ್ವೇಗಕರ ಪದೋಚ್ಚಯ; ಪೂರ್ವಮೇಘದ ಐಂನೆಯ ಪದ್ಯದ ಉತ್ತರಾರ್ಧದಲ್ಲಿ ಮೂಲಕ್ಕೆ ಸರಿಯಾದ ಅರ್ಥಸ್ಪಾರಸ್ಯದ ಅಭಾವ; ಅದೇ ಒಗರ ಮೂರನೆಯ ಸಾಲಿನಂತಹ ಕೆಲವು ಸಪ್ಪೆಸಪ್ಪೆಯಾಗಿ ಕಾಣುವವಾಕ್ಯರಚನೆ—ಇವೇ ಕೆಲವು ದೋಷಗಳು. ಇವುಗಳಲ್ಲೂ ಕೆಲವನ್ನು ಕೆಲವರು ಕ್ಷಮ್ಯವೆಂದೂ, ದೋಷವಲ್ಲವೆಂದೂ, ಗುಣವೇ ಎಂದೂ ಹೇಳಿದರೂ ಹೇಳಬಹುದು. ಹೇಗಾದರೂ ಇವು ಅಲ್ಪ ಮತ್ತು ಗೌಣವಿರುವ ಕಾರಣ ಗಣನಾರ್ಹವಲ್ಲ— ಎಂದರೂ ಎನ್ನಬಹುದು.

ಕೊನೆಯದಾಗಿ ಹೀಗೆ ಕನ್ನಡ ದೇಸೀಪ್ರಧಾನವಾದ ಮೇಘದೂತದ ಸರಳಾನುವಾದವೆನಿಸಿ ಇದು ಭಾಷೆ, ಭಾವಚಿತ್ರಕರ್ಮ ಎರಡರಲ್ಲೂ ಆಶ್ಚರ್ಯಕರವಾಗುವಂತೆ ಅದ್ವಿತೀಯ ಚಮತ್ಕಾರಸಾರ ಪುಳ್ಕದಾಗಿದೆಯೆಂದು ಹೇಳಬಹುದು. ಇದರ ಛಂದವು ನಿಜವಾಗಿ 'ವಿರಹ ಛಂದ'ವೆಂದು ಪೆಸರಾಗಲು ತಕ್ಕುದಿದೆ ಎಂದು ಎಲ್ಲ ರಸಿಕರೂ ಒಪ್ಪುವರೆಂದು ತಿಳಿದಿದ್ದೇನೆ. ಪೂರ್ವಮೇಘದ ಒಲನೆಯ ಪದ್ಯದ ಕೊನೆಯ ಸಾಲಿನಂತಹ ಭಾವಾಂತರ ಹೊಂದಿದ ಮೇಘದೂತವಾಕ್ಯಗಳು ಅಲ್ಲಲ್ಲಿ ಕಂಡುಬಂದರೂ, ಅವು ಮೂಲಭಾವಕ್ಕೆ ಸಮ ಅಥವಾ ಅದಕ್ಕೂ ಒಂದು ಬಣ್ಣ ಹೆಚ್ಚು ಎನಿಸುವಂತಹವಿರುವುದೇ ವಿನಾ ಮೂಲಭಾವವಿರೋಧಿಗಳಾಗಿಲ್ಲ. ಅದಕ್ಕಿಂತ ಒಂದು ಹೆಚ್ಚಿನ ಸಂಗತಿಯೆಂದರೆ, ಸಂಸ್ಕೃತದಲ್ಲಿ ಶ್ಲೀಲವೆನಿಸಿದರೂ ಕನ್ನಡದಲ್ಲಿ ಅಶ್ಲೀಲ ಅಥವಾ ಅರ್ಥದುಷ್ಟವೆನಿಸಬಹುದಾದ ಅರ್ಥಗಳನ್ನು ಬಹುಗಂಭೀರವಾಗಿ ಚಾಕಚಕ್ಯತೆಯಿಂದ ಅನುವಾದಿಸಿ, ರಸಭಂಗ ನಿವಾರಣೆ ಮಾಡಿದ್ದಾರೆ; ಇದು ಶ್ರೀ. ಬೇಂದ್ರೆಯವರ ಅನನ್ಯ ಸಾಧಾರಣ ಕೌಶಲ — 'ಜ್ಞಾತಾಸ್ವಾದೋ ವಿವೃತ ಜಘನಾಂ ಕೋವಿಹಾತುಂ ಸಮರ್ಥಃ!' ಎಂಬುದಕ್ಕೆ 'ಉಂಡು ಒನ್ಮೆ ಬಿಡಬಹುವದಾರು ಬರಿ ಬಚ್ಚ ಜೆಲುವೆಭೋಗ?' ಎಂಬ ಒಂದು ಉದಾಹರಣವೇ ಸಾಕು. ಇಂತಹ ಉದಾಹರಣೆಗಳು ಇನ್ನೂ ಇವೆ. ಈ ಎಲ್ಲ ವಿಷಯಗಳನ್ನೂ ಗಮನಿಸಿ, ಒಟ್ಟು ಇವರ ಕನ್ನಡ ಮೇಘದೂತದ ಮೇಲೆ ದೃಷ್ಟಿಯನ್ನು ಹರಿಯಗೊಟ್ಟರೆ, ಆನಂದಾಶ್ಚರ್ಯಗಳು ಒಮ್ಮೆಲೇ ಉಂಟಾಗುತ್ತವೆ. ಕನ್ನಡದ ಸಿರಿಸಂಪತ್ತು ಸೂರೆಗೊಂಡಿರುವುದೋ ಎನಿಸುವ ಇವರ ಪದವಾಕ್ಯ, ಅಲಂಕಾರ ಚಮತ್ಕಾರಗಳ ಮತ್ತು ಇವರ ಕನ್ನಡ ವೃತ್ತದ ನಡೆ–ನುಡಿ–ಬೆಡಗು–ಬಿನ್ನಾಣಗಳ ವಿವಿಧ ಕೌಶಲವು, ಕನ್ನಡ ರಸಿಕನನ್ನು ಮರುಳುಗೊಳಿಸದಿರದು. ಕಾಲಿದಾಸನಂತಹ ಇನ್ನೊಬ್ಬ ಕವಿ ಹಿಂದಾಗಲಿಲ್ಲ, ಮುಂದಾಗಲಾರ; ಮಲ್ಲಿನಾಥನಂತಹ ಅವನ ವ್ಯಾಖ್ಯಾನಕಾರನು ಹಿಂದಾಗಲಿಲ್ಲ, ಮುಂದಾಗಲಾರ ಎಂಬ ಕೀರ್ತಿಗೆ ಅರ್ಹನೇ; ಕನ್ನಡ ಅನುವಾದಕಾರರಲ್ಲಿ ಶ್ರೀ. ಬೇಂದ್ರೆಯವರಿಗಾದರೂ ಅದೇ ಮಾತನ್ನು ಅನ್ವಯಿಸಿದರೆ ಅತಿಶಯೋಕ್ತಿಯಾಗಲಾರದೆಂದು ಭಾವಿಸುತ್ತೇನೆ. ಅಂತೆಯೇ ಪಂಡಿತ-ಪಾಮರ ಉಭಯರಂಜಕವಾಗಿ ಈ ಅನುವಾದ ಬಾಳಲೆಂದು ನನ್ನ ಹಾರೈಕೆ.

ಆಗದ ಹಾರಯಿಕೆ

ಶ್ರೀಮತಿ ತೊಗರಿ ಸರ್ವಮಂಗಳಾಂಬಾ, ಬಳ್ಳಾರಿ

(ಒಂದು ಜೀವನ ಚಿತ್ರ)

ಭಾರತಕ್ಕೂ ಬಡತನಕ್ಕೂ ಬಾಂಧವ್ಯವನ್ನು ಬೆಳೆಯಿಸಿದ ಭಾನುವಾರವೆಂದರೆ ಭಿಕ್ಷುಕರಿಗೆಲ್ಲಾ ಭಾಗ್ಯೋದಯದ ದಿನ.... ನಾನಿರುವ ನಗರದೊಳಗೆ; ಏಕೆಂದರೆ ಶೈವ, ವೀರಶೈವ, ಹಿಂದು, ಮುಸ್ಲಾನ್ ಇಂತಹ ಯಾವ ಮತಭೇದವೂ ಇಲ್ಲದೆ "ಭೋ! ಭಾನುವಾರವೇ!" ಎಂದು ಒಕ್ಕೊರಲಿನಿಂದ ಹಾಡಿ ಹರಸುವ–ಸಾರ್ವಭೌಮರ ಆಡಳಿತದೊಳಗೆ ದುಡಿಯುವ–ದೊಡ್ಡ ದೊಡ್ಡ ಅಧಿಕಾರಿಗಳೇ ಬಹಳ ಇರುವುದರಿಂದಲೇ, ಭಾನುವಾರವೆಂದರೆ ಬರಿ ಮನೋರಂಜನೆಗೊಂದೇ ಅಲ್ಲದೆ ದಾನ-ಧರ್ಮಕ್ಕೂ ಎಡೆಗೊಡಲಾಗಿದ್ದಿತು ಆಲ್ಲಿ. ಎಂತಲೇ 'ಧರ್ಮದ ಒರೆಗಲ್ಲಿಗೆ ಪ್ರತಿಸಿದ್ಧಿಗಳು ನಾವೇ' ಎನ್ನುವಂತೆ ಭಿಕ್ಷುಕರು ಪ್ರತ್ಯಕ್ಷವಾಗಿಯೆ ನಿಂತಿರುತಿದ್ದರು....ಭಾನುವಾರದ ದಿನ, ಭಾನುವೂಡುವುದರೊಳಗಾಗಿ ಬಾಗಿಲಿನಲ್ಲಿ.

ಎಂದಿನ ಭಾನುವಾರದ ಹಾಗೆ ಅಂದು ಕೂಡ ಭಿಕ್ಷುಕರ ಗುಂಪು "ನಾಮುಂದು, ನಾಮುಂದು" ಎಂದು, ನೀಡುವವರ ಕೈಯನ್ನೇ ಕಸಿದು ಕೊಂಡೊಯ್ಯರೋ ಎನ್ನುವಂತೆ, ತಮ್ಮ ಕೈಗಳನ್ನು ನಿಡಿದಾಗಿ ನೀಡಿ ಗಲಭೆ ಮಾಡುತಿದ್ದಿತು. ಆ ನೂಕುನುಗ್ಗಿನಲ್ಲಿ ಒಂದು ಸಣ್ಣ ಕುರುಡು ಭಿಕ್ಷುಕರ ಬಳಗ ನಜ್ಜುಗುಜ್ಜಾಗುತ್ತಿತ್ತು. ಆ ಬಳಗವನ್ನು ಏಳು ವರುಷದ ಹೆಣ್ಣುಮಗುವು ಸಾಗಿಸಿಕೊಂಡು ಹೋಗುವುದು. ಅಥವಾ ಹೊತ್ತುಕೊಂಡು ಹೋಗುವುದೆಂದು ಹೇಳವರೂ ತಪ್ಪಾಗಲಾರದು. ಆ ಏಳು ವರುಷದ ಮಗುವಿನ ಭುಜದ ಮೇಲೆ ಮಧ್ಯವಯಸ್ಸಿನ ಅವಳ ಕುರುಡು ತಾಯಿಯ ಕೈ, ಆ ತಾಯಿಯ ಭುಜದ ಮೇಲೆ ಅವಳ ಒಂಬತ್ತು–ಹತ್ತು ವರುಷದ ಕುರುಡು ಅಣ್ಣನ ಕೈ; ಹೀಗೆ ಅವರಿಬ್ಬರನ್ನೂ ಅವಳು ಕಸಿದೊಯ್ಯಬೇಕು, ಮನೆಯಿಂದ ಮನೆಗೆ ಸಮಯ ಕಾದು ಕರೆವಂದಳು ತನ್ನ ಅಣ್ಣ-ತಾಯಿಯರನ್ನು ಬಾಗಿಲಿಗೆ.

"ಭಿಕ್ಷೆ ಹಾಕ್ರಿ ಅಮ್ಮಯ್ಯಾ" ಎನ್ನುವುದನ್ನು ಬಿಟ್ಟು "ಅಮ್ಮಯ್ಯಾ ನೀರಾಕಮ್ಮಯ್ಯಾ," ಎಂದು ದೈನ್ಯದ ಝರಿಯನ್ನೇ ಹರಿಸಿತು ಆ ಮಗು. ಹತ್ತು ಮುಕ್ಕಳ ಕಾಟ ಕಾಡಿಸಿಕೊಂಡ ತಾಯಿಗೂ 'ಅಯ್ಯೋ!' ಎನ್ನಿಸುವಂತಹ ದೈನ್ಯ ಅಡಕವಾಗಿತ್ತು ಆ ಧ್ವನಿಯಲ್ಲಿ. ಅಂತಹ ದೈನ್ಯದ ಧ್ವನಿ ಕೇಳಿ 'ಇಲ್ಲ' ಎನ್ನುವ ಕಠಿನತೆ ವಹಿಸಲು ರಾಕ್ಷಸಿಗೂ ಸಾಧ್ಯವಿರಲಿಲ್ಲ. ತಂದು ಹಾಕಿದೆ ಹಾಕಲು ತಂದ ನೀರನ್ನು ಅರ್ಧದಷ್ಟು ಶ್ವಾಸ ಬಿಡದ ಹಾಗೆ ಕುಡಿದು, ಹೊಟ್ಟೆಯನ್ನು ಮುಟ್ಟಮುಟ್ಟಿ ನೋಡಿ ಕೊಂಡು, ನಿಡಿದಾದ ಉಸಿರೊಂದು ಬಿಟ್ಟಳು ಆ ಹುಡುಗಿ. ಭಾರವಾದ ಕೆಲಸ ನೀಗಿಸಿದಷ್ಟು ಅರ್ಥ ಅಡಕವಾಗಿತ್ತು ಆ ಉಸಿರಿನಲ್ಲಿ. ತಾನು ತೃಪ್ತಿಪಡೆದಿದ ವಿಧಾನದಿಂದಲೇ ತನ್ನ ತಾಯಿಯನ್ನೂ ತೃಪ್ತಿಗೊಳಿಸಲೋಸುಗ, ತಾನು ಕುಡಿದ ಪಾತ್ರೆಯಲ್ಲಿಯೇ ನೀರನ್ನು ಹಾಕಿಸಿಕೊಂಡು ತಾಯಿಯ ಕೈಗಿತ್ತಳು. ಅವಳ ಅಣ್ಣ, 'ಗಂಡು ಗಡುಚು' ಎನ್ನುವಂತೆ 'ನನಗೆ, ನನಗೆ!' ಎಂದು ತಾಯಿಯನ್ನು ಬಡಿದು ಬಡಿದು ಕೇಳುತಿದ್ದ. ಬಳಲುವ ಮಗುವನ್ನು ಬಿಟ್ಟು ತಾನು ಕುಡಿಯಲಾದೀತೇ ತಾಯ ಕರುಳಿಗೆ? ಅವನಿಗೆಂದು ಕೊಟ್ಟಳುತಾಯಿ ಪಾತ್ರೆಯನ್ನು. ಹುಡುಗಿಗಾದರೋ ಹಾಕಲು ತಂದ ಅರ್ಧ ನೀರನ್ನು ನಾನೆ ಕುಡಿದುಬಿಟ್ಟಿದ್ದೇನೆ; ಉಳಿದ ಅರ್ಧ ನೀರನ್ನು ಇವನು ಕುಡಿದು ಬಿಟ್ಟರೆ ತಾಯಿಗೆ? ಮತ್ತೆ ಮನೆಯವರಿಗೆ ತೊಂದರೆ ಕೊಟ್ಟರೆ? ಗದರಿಸಿ ಬಿಟ್ಟರೆ? ಮುಂದಿನ ನುನೆಯಲ್ಲಿ ನೀರು ದೊರೆಯಬಹುದೋ? ಯಾರಿಗೆ ಗೊತ್ತು?' ಎನ್ನುವ ಮನದ ಪ್ರಶ್ನೆಗಳು ಅವಳನ್ನು ಕೊರೆದ ಕಳವಳವು ಅವಳ ಕಣ್ಣಲ್ಲಿ ತುಂಬಿತ್ತು. ಆದೇ ಆ ಕಳವಳ ತುಂಬಿದ ಕಣ್ಣುಗಳಿಂದ ನೀರು ಹಾಕಲು ತಂದ ಪಾತ್ರೆಯ ಕಡೆಗೊಮ್ಮೆ, ಕುಡಿಯುತ್ತಿರುವ ಅಣ್ಣನ ಕಡೆಗೊಮ್ಮೆ ನೋಡುತ್ತ ತಡೆಯಲಾರದೆ "ಸಾಕೋ, ಅಮ್ಮಗೆ ಕೊಡು. ಕುಡೀಮ್ಮಾ, ನೀನ್ ಕುಡೀಮ್ಮಾ!" ಎಂದು ಹಾಹೊರೆಯುತಿದ್ದಿತು, ತಾಯಿಯ ತೃಪ್ತಿಗಾಗಿಯೆ ಆ ಎಳೆಯ ಹೆಣ್ಣುಗರುಳು.

ಅವಳ ಅವಸ್ಥೆ ನೋಡಿ ನನ್ನ ಕಣ್ಣಲ್ಲಿ ಕಂಬನಿ ತುಂಬಿಬಂದುವು. "ಆಗಲೇ ಊಟ ಮಾಡಿದ್ದೀರಾ?" ಎಂದು ಕೇಳಿದೆ ಅವಳನ್ನು. ತನ್ನ ಪುಟ್ಟ ಹಸ್ತದ ಐದು ಬೆರಳುಗಳನ್ನು ತಲೆಯಲ್ಲಾಡಿಸುತ್ತಾ "ಇಲ್ಲಮ್ಮಾ! ರಾತ್ರಿಯಿಂದ ಏನೂ ತಿಂದಿಲ್ಲ!" ಎಂದು ಸೋತ ಸ್ವರದಲ್ಲಿಯೇ ಹೇಳಿತು ಮಗು. ಆಗ ಅವಳು ನಿಡಿದಾಗಿ ಬಿಟ್ಟ ಉಸಿರಿನ ಅರ್ಥ, ಅರ್ಥವಾಯಿತು. ಹೊಟ್ಟೆಯನ್ನು ಮುಟ್ಟಿಮುಟ್ಟಿ ನೋಡಿಕೊಂಡ ದರ ಅರಿವು ಹೊಳೆಯಿತು. ಹಸಿವೆಯಿಂದ ಅಸ್ಥಿಗೆ ಅಂಟಿಕೊಂಡುಹೋದ ಉದರವನ್ನು ಉದಕ ದಿಂದಲೇ ಕೈಗೆ ತಾಕುವಂತೆ ಮಾಡಿಕೊಂಡೆಯಾ ಮಗು! ಹಿಂದೆ ಹೊನ್ನಿನ ಮಳೆಗರೆವ ದೇಶ ಇಂದು ಏನಾಯಿತಲ್ಲಾ! ಇದ್ದ ಸುವರ್ಣವನ್ನು ಸಮುದ್ರದ ಪಾಲಿಗೊಪ್ಪಿಸಿ, ಇಲ್ಲದ ಬಡತನದ ಭೇತಾಳಕ್ಕೆ ಔತಣ ಕೊಟ್ಟು ಬರಮಾಡಿಕೊಂಡೆವಲ್ಲಾ! ಈ ಆದ್ಯುತ್ಪಸಮಾರಾಧನೆಗೆ ನಿನ್ನಂತಹ ಹಸುಳೆಗಳು ದಿನಕ್ಕೆ ಎಷ್ಟು ಆಹುತಿಗಳೋ!' ಎಂದುಕೊಳ್ಳುತ್ತಾ ನಿಟ್ಟಿಸಿದೆ ಅವಳ ಮುಖವನ್ನು. "ಹಸಿನೇ! ಏ ಪಾಪಿ! ತೊಲಗು!! ಇನ್ನು ಸ್ವಲ್ಪ ಹೊತ್ತಾನರೂ ನೀನು ನನ್ನನ್ನು ಕಾಡಬಾರೆ, ನಿನ್ನ ಕಾಟದಿಂದ ದೂರವಾದೆ!" ಎಂದು ಹಸಿವೆಯ ಕೂಡ ಹೊಡೆದಾಡಿದ ದನಿವು ಒಡೆದು ಮೂಡಿದುದು ಕಂಡಿತು ಅವಳ ಮುಖದಲ್ಲಿ. "ಅಯ್ಯೋ! ನೀರು ಕೇಳುವುದನ್ನು ಬಿಟ್ಟು, ಅನ್ನವನ್ನೇ ಕೇಳಿದ್ದರಾಗುತ್ತಿತ್ತಲ್ಲಾ! ಎಂತಹ ವೇಳೆಯನ್ನು ನೀನು ಕಳೆದುಕೊಂಡೆ? 'ನೀನು ಕಳೆದುಕೊಂಡೆ' ಎನ್ನುವುದೇನು? ನಿನಗೆ ಮಧ್ಯಾಹ್ನಕ್ಕೆ ಮರಳಿ ದೊರೆಯಬಹುದು ಆ ಸಮಯ; ಆದರೆ ನನಗೇ ಇಲ್ಲವಂತೆ ಮಾಡಿದೆಯಲ್ಲಾ!" ಎಂದು ನಿಂಬವ ಹೊತ್ತಿಗೆ ಜಿಂತಿಸಿದೆ. ಎಳೆಯ ವಯಸ್ಸಿನಲ್ಲಿಯೇ ಎಷ್ಟೋ ಮನೆ-ಮನಗಳನ್ನು ಒಕ್ಕಿಗೆ ಪಟ್ಟಿ ನೋಡಿದ ಇವಳ ಚಿಕ್ಕ ಹೃದಯವು ನನ್ನ ನೊಂದಮನವನ್ನು ಅರಿತುಕೊಳ್ಳದೆ ಬಿಡಲಿಲ್ಲ, ತನಗೊಂದು ಉಡುವ ಪಾವಡೆ ಕೇಳಬಲು. ಅವಳಿಗೆ ಪಾವಡೆ ಕೊಡುವ ಅದೃಷ್ಟ ನನಗಿರಲಿಲ್ಲ. ಇದ್ದ ಬಟ್ಟೆಗಳನ್ನೆ ಕೊಟ್ಟು, ತಿನ್ನಲು ಸ್ವಲ್ಪ ತಿಂಡಿ ಹಾಕಿದೆ. ಅವುಗಳನ್ನು ಮೂಟೆ ಕಟ್ಟಿ ತಾಯಿಯ ಕೈಗೆ ಕೊಟ್ಟು, ಕರ್ತವ್ಯವೇ ಕೈಲಾಸನೆಂದು ತನ್ನ ಕರ್ತವ್ಯವನ್ನು ತಾನು ಕೈಕೊಳ್ಳಲು ಅಣಿಯಾದಳು ಸಿಂತ ಅಣ್ಣನ ಕೈಯನ್ನು ಕುಳಿತ ತಾಯಿಯ ಭುಜಕ್ಕೂ. ಕುಳಿತ ತಾಯಿಯ ಕೈಯನ್ನು ತನ್ನ ಭುಜಕ್ಕೂ ತೆಗೆದು ಕೊಂಡು, ಹಸಿವೆಯ ಶತ್ರುವನ್ನು ಹೊಡೆದೋಡಿಸುವ ಸಾಧನೆ ಪಡೆಯಲು ಸೈನಿಕಳಾಗಿ ಹೊರಟಳು.

(ಮುಂದಿನ ಪುಟದ ಅಡಿಯಲ್ಲಿ)

ಜಯಂತಿಯ ಸಾಹಿತ್ಯ ಚುನಾವಣೆ

(ಸ್ಪರ್ಧೆಯ ಪರೀಕ್ಷಕರ ವರದಿ)

ಈ ಸ್ಪರ್ಧೆಯ ಪರಿಣಾಮವನ್ನು ಮತ್ತೊಂದೆಡೆ ಪ್ರಕಟಿಸಿದ್ದೇವೆ. ಮೊದಲ ಬಹುಮಾನ ಯಾರಿಗೂ ದೊರೆಯದ್ದಕ್ಕಾಗಿ ವಾಚಕರಿಗೆ ಆಶ್ಚರ್ಯ, ಭಾಗ ವಹಿಸಿದವರಿಗೆ ಅಸಮಾಧಾನ ಎನ್ನಿಸುವುದು ಸಹಜವೆ. ಆದರೆ ಅವಕ್ಕಿಂತ ಮಿಗಿಲಾದ ಆಶ್ಚರ್ಯ-ಅಸಮಾಧಾನಗಳು ಸ್ಪರ್ಧೆಯ ವ್ಯವಸ್ಥಾಪಕರಿಗೆಯೆ ಆಗಿವೆ ಎಂದು ಇಲ್ಲಿ ಹೇಳಬೇಕಾಗಿದೆ.

ಧಾರವಾಡ, ಬೆಳಗಾಂವಿ, ನಿಪ್ಪಾಣಿ, ಅಥಣಿ, ಚಿಕ್ಕೋಡಿ, ಬಾಗಿಲುಕೋಟೆ, ಕವಲಕೊಪ್ಪ, ಭಟ್ಕಳ, ಜಮಖಂಡಿ, ಉಗಾರ, ಮಧುಗಿರಿ, ಬಳ್ಳಾರಿ, ಮುಗಳೂರು—ಇಷ್ಟು ನಗರಗಳವರಿಂದ ಉತ್ತರ ಬಂದಿವೆ. ಅದರೆ ಅವಧಿಯನ್ನು ಒಂದು ತಿಂಗಳು ಬೆಳಸಿದರೂ ಒಟ್ಟು ಹದಿನಾಲ್ಕೇ ಉತ್ತರಗಳು ಬಂದಿವೆ ಎಂಬುದು ತೀರ ಅಸಮಾಧಾನದ ಮಾತಾಗಿದೆ.

ಸ್ಪರ್ಧೆಯ ಪ್ರಶ್ನೆಗಳಲ್ಲಿ ಅಡಕವಾದ ತತ್ತ್ವವನ್ನು ಒಬ್ಬನೂ ತಿಳಿದುಕೊಂಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗುವುದು. 'ಮೇ ಹೆಸರುಗಳನ್ನು ಹೇಳರುವೆ; ಯಾಕೆಂದರೆ ಅಷ್ಟನ್ನೆ ಕೇಳಿದೆ. ಇನ್ನೂ ಹೇಳತಕ್ಕುವಿನೆ. ನಿಕ್ಷವರು ಕ್ಷಮಿಸಬೇಕು' ಎಂದು ಉತ್ತರ. ಎಂದರೆ ಈ ವಾಚಕನಿಗೆ ತಾನು ಮೆಚ್ಚುವುದು ಯಾವುದು ಎಂಬುದರ ಕಲ್ಪನೆಯೊದರೂ ಇಲ್ಲ, ಇಲ್ಲವೆ ಅನೇಕರನ್ನು ಅಷ್ಟೇ ಅಳತೆಯಲ್ಲಿ ಮೆಚ್ಚುವ ಅತಿವಾನುಷ ಹೃದಯವಿದೆ! ಇನ್ನೊಬ್ಬ ವಾಚಕನು ಪರೀಕ್ಷೆಕರಿಗೆಯು ಕಲ್ಪನೆ ಇಲ್ಲ ಎಂಬ ಭಾವನೆಯಿಂದ 'ಕವಿತೆ, ಕತೆ, ಕಾದಂಬರಿ, ನಾಟಕ' ಇವೊಂದೊಂದರಲ್ಲೂ ಶ್ರೇಷ್ಠರಿದ್ದಾರೆ; ಭಾರತೀಯ ಜೀವನದಲ್ಲಿ ಸ್ಥಾನ ಎಂದರೆ 'ರಾಜಕೀಯ, ಸಾಮಾಜಿಕ, ಆಧ್ಯಾತ್ಮಿಕ ಮುಂತಾದುವುಗಳಲ್ಲಿ ಯಾವ ದೃಷ್ಟಿಯಿಂದ?' ಎಂದು ಅಸಂಬದ್ಧವಾಗಿ ಕೇಳಿದ್ದಾನೆ. 'ನಿಮ್ಮ ಮೆಚ್ಚುಗೆಯ' ಎಂಬ ಪದವಿದೆ, ಪ್ರಶ್ನೆಯಲ್ಲಿ. ಎಂದಮೇಲೆ ಚರ್ಚೆ ಅಸಂಬದ್ಧವಲ್ಲವೆ? ಇನ್ನೊಬ್ಬನಂತೂ ಪ್ರಶ್ನೆಗಳನ್ನು ಸರಿಯಾಗಿ ಓದಿಕೊಂಡಿಲ್ಲ! 'ಹೆಚ್ಚಿನ ವಿವರಣ ಬೇಕಾಗಿದ್ದರೆ ಹಿಂದಿನಿಂದ ತರ್ಕಬದ್ಧ ಸ್ಪಷ್ಟೀಕರಣ ಕಳುಹಲ್ಪಾಗುತ್ತದೆ, ಇತಿಶ್ರೀ' ಎಂದಿದ್ದಾನೆ. ನಾವು ಕೇಳಿದ್ದೇ ತರ್ಕಬದ್ಧ ಶೈಲಿಯ ಉತ್ತರಗಳನ್ನು, ಜಾಹೀರಾತಿನ ಶೈಲಿಯವಲ್ಲ. ಬೇರೊಬ್ಬನಂತೂ ಪರೀಕ್ಷಕರ ವಿಮರ್ಶಾಬುದ್ಧಿಯನ್ನೇ ಒರೆಗೆ ಹಚ್ಚಿದ್ದಾನೆ ಈ ಮಾತುಗಳಿಂದ: 'ನಾನು ವಿಮರ್ಶೆಯನ್ನು ಬರೆದದ್ದು ಇದೇ ಮೊದಲು; ಅದಕ್ಕಾಗಿ ನನ್ನ ಬಯಕೆಯನ್ನು ಕುಗ್ಗಿಸದೆ ಹಿಗ್ಗಿಸುವುದು ನಿಮ್ಮದು. ಅದಕ್ಕಾಗಿ ನನಗೆ ಮೊದಲನೆಯ ಬಹುಮಾನವನ್ನು ಕೊಡಬೇಕಾಗಿ ಬಿನ್ನಹ!'

ಈ ಹದಿನಾಲ್ಕು ಜನರು ತಮ್ಮ ಮತಗಳನ್ನು ಇಪ್ಪತ್ತೈದು ಸಾಹಿತಿಗಳಲ್ಲಿ ಹಂಚಿದ್ದಾರೆ: ಕಾರಂತ (೧೦), ಬೇಂದ್ರೆ (೭), ಪುಟ್ಟಪ್ಪ (೬), ಕವಿ ಕೃಷ್ಣಶರ್ಮ (೫), ಶ್ರೀನಿವಾಸ (೬), ಶ್ರೀರಂಗ (೪), 'ಕಿಡಿ' ಕೃಷ್ಣಶರ್ಮ (೩), ಅ. ನ, ಕೃ. (೩), ಕೈಲಾಸಂ (೫):—ಗಳಗನಾಥ, ಗೊರೂರು, ರಾಜರತ್ನಂ, ಶಂಬಾ ಜೋಶಿ (೨); ಶ್ರೀನಿವಾಸಮೂರ್ತಿ, ಗೋಕಾಕ, ಕಸ್ತೂರಿ, ಮಧುರಚೆನ್ನ, ತಾರಾನಾಥ ಮೊದಲಾದವರಿಗೆ ಒಂದೊಂದು ಮತ. **ಇದು ಚುನಾಯಿತರ ಪರಿಣಾಮ**

ಸಾಹಿತ್ಯದ ಬೆಳೆವಣಿಗೆ ಎಂದರೆ ಅದನ್ನು ಸಮಾಜದ ದೃಷ್ಟಿಯಿಂದ ಅಳೆಯುವುದು ಹೇಗೆ—ಎಂಬುದೇ ಈ ಸ್ಪರ್ಧೆಯ ಜನಕ ತತ್ತ್ವವಾಗಿದ್ದಿತು. ಓದುಗರಿಗೆ ವಿಮರ್ಶಾಬುದ್ಧಿ ಬಂದಿದೆಯೆ? ಇಚ್ಛಾನಿಷ್ಠೆಗಳು ತಲೆದೋರಿವೆಯೆ, ಸಾಹಿತಿಯ ಸಾಧನೆ ಸಫಲವಾಗಿದೆಯೆ—ಮುಂತಾದ ಮಹತ್ತ್ವದ ಮಾತುಗಳನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ನೋಡಿದಲ್ಲಿ, ಈ ಸ್ಪರ್ಧೆ ನಿರಾಶಾಜನಕವಾಗಿದೆ ಇಲ್ಲವೆ ಇಂದಿನ ಸಾಹಿತಿಗಳೆ ಇನ್ನೂ ಜನರನ್ನು ಅಪ್ಪೊಂದು ಫಲಕಾರಿಯಾಗುವಂತೆ ಮನಸ್ಸನ್ನಾಗಲಿ ಬುದ್ಧಿಯನ್ನಾಗಲಿ ತಟ್ಟಿಲ್ಲ—ಎಂದು ಶೇಳಬಹುದು.

ಇವಳು ಮೂರವಾಗುತ್ತ ಹೊರಟಂತೆಲ್ಲಾ, ನನ್ನ ಹೃದಯವನ್ನು ನವಿಾಪಿಸುತ್ತಾ ಬಂದಳು. ಉರ್ಧನಗ್ನವಾದ ಪುಟ್ಟದೇಹ, ಹಟ್ಟಣದ ಧೂಳಿದಿಂದ ಶೃಂಗರಿಸಿಕೊಂಡ ಜೆಲ್ಲಾಪಿಲ್ಲಿಯಾದ ಉಂಗರುಗುರುಳು, ಆ ಕುರುಳಿನಲ್ಲಿ ಕ್ಷೀಣವಾಗಿದ 'ಬಾಳು ಬಹುಭಾರಿ!' ಎನ್ನುವ ರಾಹು ಹಿಡಿದ ಎಳೆಯ ಮುಖ, ಆ ಎಳೆಯ ಜೀವನವನ್ನು ಪ್ರತಿಜೊಂದು ನಿಮಿಷವೂ ಹೊಟ್ಟೆ-ಬಟ್ಟೆಗಳಾಗಿ ಪೆಡರಿಸುತಿದ್ದರೂ ಭಯಪಡದೆ, ತನ್ನ ಕರ್ತವ್ಯದ ಕೋಲಿನಿಂದ ಜೊಡಿಜೋಡಿಸುವ ಸಣ್ಣ ವಯಸ್ಸಿನ ದೊಡ್ಡ ಧೈರ್ಯ, ಇನ್ನೆಲ್ಲಕ್ಕೂ ಮುಕುಟವಾದ 'ತಾಯಿಯ ತೃಪ್ತಿಗಾಗಿಯೇ ನಾನು' ಎನ್ನುವ ಅವಳ ಜವಾಬ್ದಾರಿಯ ಗುಣ.... ಇವೆಲ್ಲವೂ ಮೂಕಚಿತ್ರದೊಂದಿಗೆ ನನ್ನ ಮನಸ್ಸನ್ನು ಮುಟ್ಟಿ ಅವಳ ಚಿತ್ರವೇ ಹೃದಯದಲ್ಲಿ ಅಚ್ಚಳಿಯದೆ ನಿಂತಿತು.

ಸಹನದ ಸಣ್ಣ ಹೆಜ್ಜೆಯನ್ನಿಡುತ್ತಾ ಸ್ವಾಭ್ಯತನದಿಂದ ತನ್ನ ತಾಯಿಯನ್ನು ಕರೆದೊಯ್ಯುವ ದೃಶ್ಯ ನನ್ನ ಕಣ್ಣಿಗೆ ದೂರದಿಂದ ಕಾಣುತ್ತಲೇ ಇತ್ತು. "ನಿನ್ನ ಸಣ್ಣ ಮೆದುಳಂದಲಿ, 'ಮಾತೃದೇವೋ ಭವ' ಎನ್ನುವ ಮಹಾಗ್ರಂಥವನ್ನು ಎಷ್ಟು ಕಂಠಪಾಠ ಮಾಡಿಕೊಂಡಿರುವೆಯಲ್ಲಾ ಮಗು! ನೀನೇ ಧನ್ಯ ಮಗು. ನೀನೇ ಧನ್ಯೆ!! ಬೆಳೆಯದಿರು ನೀನು! ಬೆಳೆದೆಯಾದರೆ ಬಾಯಿಪಾಠವಾಗಿರುವ ಈ ಮಹಾಗ್ರಂಥವನ್ನು ಮರೆತು ಬಿಡಬಹುದು. ಏಕೆಂದರೆ ಮಾತೆಯಷ್ಟೇ ಮತ್ತೊಂದು ಮಹಾವಸ್ತುವಿಗಾಗಿ ಮನಸೋಲಲೋ ಮನ ಒಲಿಸಲೋ ಬೇಕಾಗುತ್ತದೆ! ಅದು ಸೃಷ್ಟಿಯ ನಿಯಮ, ನಿನ್ನ ಅಪರಾಧವಲ್ಲ! ಎಂತಲೇ ನೀನು ಒಂದು ಏಕೆ ಹತ್ತು ಮಗುಗಳಿಗೆ ಮಾತೆಯಾಗಬಲ್ಲೆ! ಆದರೆ ಅದು ಬೇಡ; ನಿನ್ನ ಮಾತೆಯ ಮಮತೆಯ ಮಗುವಾಗಿಯೇ ಇದ್ದು, ಆ ಗ್ರಂಥಕ್ಕೆ ಥಕ್ಕೆ ತಂದ ಅಕ್ಕಂದಿರಿಗೆಲ್ಲಾ ಗುರುವಾಗಿ, ನಿನ್ನ ಕುರುಡು ತಾಯಿಯ ಕಣ್ಣಾಗಿ, ಅಕೆಯನ್ನು ಕರೆದೊಯ್ಯುವ ಕೈಗೋಲಷ್ಟೇ ಇರು ಮಗು!' ಎಂದು ಆಗದ ಈ ಹಾರಯಿಕೆಯನ್ನೇ ಹೃದಯಪೂರ್ತಿಯಿಂದ ಹಾರಯಿಸಿದೆ.

———

ಸಾಹಿತ್ಯ ವಿಹಾರ

"ವಿಹಾರಿ"

ಬಂಗಾಲಿ ಕಾದಂಬರಿಗಳ ಕನ್ನಡಾನುವಾದ ಕಾಶೀನಾಥ, ಅಕ್ಕತಂಗಿ, ವೃಂದಾವನ ಕಾದಂಬರಿಗಳ ಸವಿಮೀಕ್ಷಣ

ಇಂದಿನ ಕನ್ನಡ ಸಾಹಿತ್ಯಪ್ರಪಂಚಕ್ಕೆ, ಅದರಲ್ಲಿ ವಿಶೇಷವಾಗಿ ಇಪ್ಪತ್ತನೆಯ ಶತಮಾನದ ಕಾದಂಬರಿಗೆ ಇತ್ತೀಚಿನ ಬಂಗಾಲಿ ಸಾಹಿತಿಗಳು ಸೂಡಿದ ಉಪಕಾರ ದೊಡ್ಡದು. ಮರಾಟಿಯನ್ನೊಂದು ಹೊರತುಪಡಿಸಿದರೆ ಭಾರತದ ಯಾವ ಅರ್ವಾಚೀನ ಸಾಹಿತ್ಯವೂ ಕನ್ನಡದಲ್ಲಿಯ ಹೊಸ ಬರವಣಿಗೆಗೆ, ಬಂಗಾಲಿ ಸಾಹಿತ್ಯದಷ್ಟು ಸಹಕಾರಿಯಾಗಿಲ್ಲ. ಬಂಕಿಮಚಂದ್ರ ಚಟರ್ಜಿಯವರಿಂದ ಶರಚ್ಚಂದ್ರ ಚಟ್ಟೋಪಾಧ್ಯಾಯರ ವರೆಗೂ ಬಂಗಾಲಿ ಕಾದಂಬರಿಯ ದೊಡ್ಡದಾದ ಪರಂಪರೆಯು, ಉತ್ತಮವಾದ ಬಾಷಾಂತರಗಳ ಮೂಲಕ, ತನ್ನ ಸತ್ತ್ವವನ್ನು ಕನ್ನಡಕ್ಕೆ ಕೊಟ್ಟಿದೆ. ಈ ಋಣದ ಕತೆ ದೊಡ್ಡದು; ದಿವಂಗತ ಬಿ. ವೆಂಕಟಾಚಾರ್ಯರಿಂದ ಶ್ರೀ. ಗುರುನಾಥ ಜೋಶಿಯವರ ವರೆಗೂ ನಡೆದುಕೊಂಡು ಬೆಳೆದುಕೊಂಡು ಬಂದದ್ದು. ಬಂಗಾಲಿ ಕಾದಂಬರಿಯ ಅನುವಾದಗಳು ಕನ್ನಡ ಕಾದಂಬರಿಯ ಇತಿಹಾಸವನ್ನು ಮಾರ್ಪಡಿಸಿ ಅದಕ್ಕೊಂದು ದಾರಿತೋರಿಸಿವೆ ಎಂಬ ಮಾತು ನಿರ್ವಿವಾದ ವಿಷಯವಾಗಿದೆ.

ಆದರೆ ಯಾವ ವಿಶಿಷ್ಟರೀತಿಯಲ್ಲಿ ಬಂಗಾಲಿ ಕಾದಂಬರಿಯ ಪ್ರಭಾವ ಕನ್ನಡದಲ್ಲಿ ವ್ಯಕ್ತವಾಗಿದೆ ಎಂಬುದನ್ನಾಗಲಿ, ಆ ಪ್ರಭಾವವು ಇಂದಿನ ನಮ್ಮ ಕಾದಂಬರಿಗಳ ಯಾವ ಅಂಶದಲ್ಲಿ ಸ್ಪಷ್ಟವಾಗಿ ಕಂಡು ಬರುವುದೆಂಬ ವಿಷಯವನ್ನಾಗಲಿ, ಇಲ್ಲಿ ಸೂಕ್ಷ್ಮವಾಗಿ ವಿವರಿಸಲು ಸಾಧ್ಯವಿಲ್ಲ. ಅದು ಒಂದು ದೀರ್ಘವಾದ ಪ್ರಬಂಧಕ್ಕೇ ವಿಷಯವಾಗಬಲ್ಲದು, ಆದರೆ ಸ್ಥೂಲವಾಗಿ ಒಂದೆರಡು ಮಾತುಗಳನ್ನು ಹೇಳಬಹುದು. ಕಾದಂಬರೀ ಲೇಖನದ ಕಲೆಯ ಬೆಳೆವಣಿಗೆಯ ವಿಷಯವನ್ನು ಕೆಲಕಾಲ ಬದಿಗಿರಿಸಿ, ಕಾದಂಬರಿಯು ಜನಸಾಮಾನ್ಯಕ್ಕೆ ಒಪ್ಪಿತವಾಗುವಂತಹ ಸಾಹಿತ್ಯವಿಭಾಗವೆಂಬ ಸ್ಥಾನವನ್ನು ಅದಕ್ಕೆ ಕಲ್ಪಿಸಿಕೊಡಲಿಕ್ಕೆ, ಮೊಟ್ಟಮೊದಲು ಕನ್ನಡಕ್ಕೆ ಬಂದ ಬಂಗಾಲಿ ಕಾದಂಬರಿಗಳ ಕನ್ನಡ ಅನುವಾದಗಳೇ ಹೆಚ್ಚಾಗಿ ಸಹಾಯಮಾಡಿದುವೆಂಬ ವಿಷಯವನ್ನು, ಬಿ. ವೆಂಕಟಾಚಾರ್ಯರ ಕೃತಿಗಳನ್ನು ಓದಿದವರೆಲ್ಲರೂ ಒಪ್ಪಬೇಕಾದ ವಿಷಯವಾಗಿದೆ. ಕಾದಂಬರಿಯು ಲೋಕಪ್ರಿಯವಾಗುವುದಕ್ಕೆ ಅದರ ವಾಚಕವೃಂದ ಬೆಳೆಯಬೇಕು. ಈ ವಾಚಕವೃಂದವನ್ನು ಬೆಳಸುವ ಕೆಲಸದಲ್ಲಿ, ಜನಸಾಮಾನ್ಯರಲ್ಲಿ ಓದುವ ಅಭಿಲಾಷೆಯನ್ನು ಹುಟ್ಟಿಸುವುದರಲ್ಲಿ, ಕಳೆದ ಶತಮಾನದ ಕೊನೆಯ ದಶಕದಲ್ಲಿ ಪ್ರಸಿದ್ಧವಾದ ಬಂಗಾಲಿ ಕಾದಂಬರಿಗಳ ಅನುವಾದಗಳು ಬಹಳ ಮಹತ್ತ್ವದ ಕೆಲಸವನ್ನು ಮಾಡಿದುವು. ಅದೇ ಕೆಲಸವನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಶ್ರೀ. ಗಳಗನಾಥರು ಮುಂತಾದವರಿಸಿ, ಕನ್ನಡಿಗರಲ್ಲಿ ಓದುವ ಇಚ್ಛೆಯನ್ನು ಬಿತ್ತಿ ಬೆಳಸಿದವರು. ಸ್ವತಂತ್ರ ಕಾದಂಬರಿಗಳು ಯೋಗ್ಯವಾದ ಪ್ರಮಾಣದಲ್ಲಿ ಬಾರದಿರುವ ಇಂದಿನಕಾಲದಲ್ಲಿ ಕೂಡ, ಬೇರೆ ಭಾಷೆಗಳಿಂದ ಮಾಡಿಕೊಂಡ ಅನುವಾದಗಳು ಇಂದಿನವರೆಗೆ ಬೆಳೆದು ಬಂದ ವಾಚನಾಭಿಲಾಷೆಯ ಬೇಡಿಕೆಯನ್ನು ಪೂರಯಿಸುತ್ತಿವೆ. ಅನುವಾದಗಳಿಗೆ ಸಾಹಿತ್ಯದ ದೃಷ್ಟಿಯಿಂದ ಯಾವ ಸ್ಥಾನ-ಮಾನಗಳನ್ನೂ ಕೊಡಲು ಒಪ್ಪದ ವಿಮರ್ಶಕರು ಕೂಡ ಈ ಮಾತನ್ನು ಒಪ್ಪಬೇಕು.

ಆದರೆ ಈ ಅನುವಾದಗಳು ಕೇವಲ ಜನಪ್ರಿಯವಾದ ಸಾಹಿತ್ಯವನ್ನು ಒದಗಿಸುವ ಕೆಲಸವೊಂದನ್ನೇ ಸಾಧಿಸಲಿಲ್ಲ. ಅದರ ಜೊತೆಯಲ್ಲಿ ಬೇರೆ ಫಲಗಳೂ ಲೇಖಕರಿಗೂ ವಾಚಕರಿಗೂ ಸಿಕ್ಕುವು. ಒಂದು ಸಾಹಿತ್ಯಕೃತಿಯನ್ನು ಜನಮೆಚ್ಚಬೇಕಾದರೆ, ಆ ಕೃತಿಯಲ್ಲಿ ಓದುಗ ತನ್ನ ಮನರಂಜನೆಯೊಗಬಲ್ಲ ವಿಷಯವನ್ನು ಅಪೇಕ್ಷಿಸುವುದು ಸಹಜ. ಇದಲ್ಲದೆ ಮನರಂಜನೆಯ ಜೊತೆಯಲ್ಲಿ ಮನೋವಿಕಾಸವಾಗುವಂತೆ, ತನ್ನ ಸುತ್ತುಮುತ್ತಲಿನವರ ಬಾಳಿದುರಿನಲ್ಲಿ ಲೇಖಕ ಕನ್ನಡಿ ಹಿಡಿದು ತೋರಿಸಿದ್ದಾದರೆ, ಓದುಗ ಅಂತಹ ಕೃತಿಯನ್ನು ಇನ್ನೂ ಹೆಚ್ಚಾದ ಆದರದಿಂದ ಬರಮಾಡಿಕೊಳ್ಳುವ. ಹೃದಯದ ಅನುಭವಕ್ಕೆ ಮಹತ್ತ್ವ ವಿದ್ದಲ್ಲಿ, ಬಾಳಿಗೆ ಬೆಳಕಾಗುವ ಶಕ್ತಿ ಆ ಅನುಭವಗಳ ಚಿತ್ರಣದಲ್ಲಿದ್ದಲ್ಲಿ, ಅನುಭವಮಾಲಿಕೆಯಾದ ಕಾದಂಬರಿಯು ಜೀವನದ ಚಿತ್ರವಾಗಬಲ್ಲದಲ್ಲದೆ ಜೀವನದ ನಿಜವಾದ, ಸೂಕ್ಷ್ಮವಾದ, ವಿಮರ್ಶೆಯೂ ಆಗಬಹುದು. ಕೇವಲ ಹೊತ್ತುಗಳೆಯುವ ಹವ್ಯಾಸಿಕೆಯಾಗದೆ ಓದುಗನ ಅಂತಃಕರಣಗಳನ್ನು ಕಲಕಿ, ಅತನ ಅನುಭವದ ಆಳವನ್ನೂ ತೀಕ್ಷ್ಣತೆಯನ್ನೂ ಬೆಳಸಬಹುದು. ಇದೇ ಕಾದಂಬರಿಯ ಸಾಫಲ್ಯ. ಕನ್ನಡ ಕಾದಂಬರಿಗಳಿಗೆ ಈ ದಾರಿಯನ್ನು ತೋರಿಸಿದ ಶ್ರೇಯಸ್ಸು ಬಂಗಾಲಿ ಕಾದಂಬರಿಗಳದು. ನಮ್ಮಲ್ಲಿಯ ಕಾದಂಬರಿಕಾರರಲ್ಲಿ ಈ ತೆರದ ವಿಮರ್ಶಾವಿವೇಕವಿರಲಿಲ್ಲವೆಂದಾಗಲಿ, ಈಗಲಾದರೂ ಇಲ್ಲವೆಂದಾಗಲಿ ಮೇಲಿನವರ ಆಶಯವಲ್ಲ. ಮೊದಲು ಮೊದಲು ಅನುವಾದಗಳನ್ನು ಮಾಡಿಕೊಟ್ಟವರ ದೂರದರ್ಶಿತ್ವಕ್ಕು ವಿಮರ್ಶಾವಿಚಕ್ಷಣೆಗೂ ಇದೊಂದು ಸಾಕ್ಷಿ, ಇಷ್ಟೆ!

ಇನ್ನೂ ಒಂದು ದೃಷ್ಟಿಯಿಂದ ಈ ಬಂಗಾಲಿ ಕಾದಂಬರಿಗಳ ಅನುವಾದಗಳು ಸಾಧಿಸಿದ ಮಹತ್ಕಾರ್ಯವನ್ನು ತಿಳಿಯಬಹುದು. ಇಪ್ಪತ್ತನೆಯ ಶತಮಾನದ ಸಾಹಿತ್ಯವು ಒಟ್ಟಿನಲ್ಲಿ ವಾಸ್ತವತೆಯ ಹೆದ್ದಾರಿಯನ್ನು ಹೆಚ್ಚುಕಡಿಮೆ ಪ್ರಮಾಣದಲ್ಲಿ ತುಳಿಯುತ್ತಿದೆ. ತುಲನಾತ್ಮಕ ದೃಷ್ಟಿಯಿಂದ ಭಾರತದ ಯಾವ ಸಾಹಿತ್ಯದ ವಿಷಯದಲ್ಲಿಯೂ ಒಮ್ಮೆ ಮಾತನ್ನು ಸ್ಥೂಲವಾಗಿ ಹೇಳಬಹುದು. ಅದಾವುದೆಂದರೆ: ಹತ್ತೊಂಬತ್ತನೆಯ ಶತಮಾನದ ವರೆಗೆ ತನ್ನ ವಿಶಿಷ್ಟ ಇತಿಹಾಸಕ್ರಮಗುಣವಾಗಿ ಬೆಳೆದು ಬಂದ ಸಂಪ್ರದಾಯದ ಸಂಕೋಲೆಗಳನ್ನು, ಪ್ರತಿಯೊಂದು ಸಾಹಿತ್ಯವೂ ಇಪ್ಪತ್ತನೆಯ ಶತಮಾನದಲ್ಲಿ ಒಂದೊಂದಾಗಿ ನಿರಾಕರಿಸಿ, ಹೊಸದಾಗಿ ತಲೆಯೆತ್ತಿ ಬೆಳೆದು ಬರುತ್ತಿರುವ ವಾಸ್ತವವಾದಕ್ಕೆ ಸರಿಹೋಗುವಂತೆ, ಹೊಸದಾದ ರೀತಿ-ನೀತಿಗಳನ್ನು ಮಾರ್ಪಡಿಸಿಕೊಂಡಿತು ಅಥವಾ ಅವಶ್ಯವೆನಿಸಿದಾಗ ನಿರ್ಮಿಸಿಕೊಂಡಿತು. ಈ ಕಾರ್ಯದಲ್ಲಿ ಬಂಗಾಲದ ಸಾಹಿತ್ಯವು ಎಲ್ಲರಿಗಿಂತಲೂ ಒಂದು ಹೆಜ್ಜೆ ಮುಂದೆ. ಇಂದಿನವರೆಗೂ ಪ್ರಗತಿಮಾರ್ಗದಲ್ಲಿ ಆ ಪ್ರಾಂತವು ಮುಂದೆ ಮುಂದೆಯೆ ಸಾಗುತ್ತಿದೆ. ಇದಕ್ಕೆ ಬೇಕಾದಷ್ಟು ಕಾರಣಗಳಿರಬಹುದು. ಐತಿಹಾಸಿಕ ಕಾರಣಗಳ ಮೂಲಕ ಪಾಶ್ಚಿಮಾತ್ಯ ಸಾಹಿತ್ಯದ ಸಂಸ್ಕಾರ ಬಂಗಾಲಕ್ಕೆ ಮೊದಲು ಸಿಕ್ಕಿತೆಂಬುದು ಒಂದು ಮಹತ್ತ್ವದ ಕಾರಣ. ಅದು ಹೇಗಿದ್ದರೂ ಸರಿ;

ಉಳಿದ ಪ್ರಾಂತಗಳಲ್ಲಿಯು ಬರೆಹಗಾರರು ಇನ್ನೂ ಚಂಪೂಕಾವ್ಯದ ಮೋಹವನ್ನು ತೊರೆಯದಿರುವಾಗ, ಬಂಗಾಲದಲ್ಲಿ ಬಂಕಿಮಚಂದ್ರರು ಜನಸಾಮಾನ್ಯರ ಸಾಮಾಜಿಕ ಜೀವನವನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಲನುವಾಗಿದ್ದರಲ್ಲದೆ, ಸಾಮಾಜಿಕ ಜೀವನದಲ್ಲಿಯ ತೊಡಕುಗಳನ್ನು, ಸಮಾಜಸುಧಾರಣೆಯ ಸಮಸ್ಯೆಗಳನ್ನು ಬಿಡಿಸಿ ಬಿಚ್ಚಿ ತೋರಿಸುವಂತಹ ಕಥೆಗಳನ್ನು ಕಟ್ಟುವುದರಲ್ಲಿ ಮೇಲುಗೈಯುಳ್ಳವರಾಗಿದ್ದರು. ಸಾಹಿತ್ಯವು ಜೀವನದ ವಿಮರ್ಶೆಯೆನ್ನುವ ಮಟ್ಟಕ್ಕೆ ಅಗಲೇ ಅದನ್ನು ತಂದು ನುಟ್ಟಿಸಿದ್ದರು. ಅರಸು-ಅರಸಿಯರ ಕಟ್ಟು ಕಥೆಗಳ ಮೋಹಜಾಲಕ್ಕೊಳಗಾದ ಆಗಿನ ಕನ್ನಡಿಗರನ್ನು, ಬಂಕಿಮ ಚಂದ್ರರ ಹೊಸ ರೀತಿ ಬೆರಗುಗೊಳಿಸಿದ್ದರೆ ಅದೊಂದು ಆಶ್ಚರ್ಯವಲ್ಲ. ಆಗಿನ ಓದುಗರು ಆ ಅನುವಾದಗಳನ್ನು ಯಾವ ದೃಷ್ಟಿಯಿಂದ ಬರ ಮಾಡಿಕೊಂಡಪೆಬುದು ಮಹತ್ವದ ವಿಷಯ. ಆ ಆದರದಲ್ಲಿ ಕನ್ನಡ ಕಾದಂಬರೀ ಲೇಖನಕ್ಕೆ, ಆ ಸಾಹಿತ್ಯವಿಭಾಗದ ವಿಕಾಸಕ್ಕೆ ಒಂದು ಹೊಸದಾದ ದಿಗ್ದರ್ಶನ, ಆ ಅನುವಾದಗಳ ಮೂಲಕ ಸಿಕ್ಕಿತೆಂಬುದು ನಿರ್ವಿವಾದ ವಿಷಯ. ಕನ್ನಡ ಕಾದಂಬರಿಕಾರರು ಅಂದಿನಿಂದ ಇಂದಿನವರೆಗೆ ಆ ದಿಗ್ದರ್ಶನದ ಉಪಯೋಗವನ್ನು ಮಾಡಿ ಕೊಂಡರೋ ಇಲ್ಲವೋ-ನಾಡಿಕೊಂಡಿದ್ದರೆ ಎಷ್ಟರಮಟ್ಟಿಗೆ ಎಂಬುದು ಬೇರೆ ವಿಷಯ. ಬಂಕಿಮರು ಕಾದಂಬರೀ ಪ್ರಪಂಚದಲ್ಲಿ ಆರಂಭ ಮಾಡಿದ ಪರಂಪರೆಯು ಯಾವ ರೀತಿಯಾಗಿ ಶರಚ್ಚಂದ್ರರ ಕೃತಿ ಗಳಲ್ಲಿ ಒಂದು ಶ್ರೇಷ್ಠವಾದ ಪರಿಣಾಕವನ್ನು ನುಟ್ಟಿತೋ, ಆ ರೀತಿ ಯಲ್ಲಿ ಕನ್ನಡದಲ್ಲಿ ಆಗ ಹೊಮಲು ಮಾಡಿದ ಪ್ರಭಾವಕ್ಕೆ ಇಂದಿನ ವರೆಗೆ ವಿಶೇಷವಾದ ವಿಕಾಸವನ್ನು ತೋರಿಸಲು ಸಾಧ್ಯವಾಗಿಲ್ಲ ಎಂಬುದರ ನೋಟದಿಂದ, ಅಂದಿನಿಂದ,ಇಂದಿನವರೆಗೆ ಬೆಳೆದುಬಂದ ಅನುವಾ ದಗಳಿಂದ ನಾವು ಕಲಿಯಬೇಕಾಗಿದ್ದ ಪಾಠವನ್ನು ಕಲಿಯುವಲ್ಲಿನೆಂಬ ವಿಷಾದ ಸ್ಪಷ್ಟವಾಗಬಹುದು. ಶರಚ್ಚಂದ್ರರಷ್ಟು ಶ್ರೇಷ್ಠ ತರಗತಿಯ ಕಾದಂಬರಿಕಾರರು ನಮ್ಮಲ್ಲಿ ಇನ್ನೂ ಪರೆಗೆ ಬರಲಿಲ್ಲವೆಂಬ ಪ್ರಮಾ ಣದ ನೋಟದಿಂದ ಮೇಲೆ ಹೇಳಿದ ವಿಷಯವನ್ನು ನಾವು ವೇದಪೂರ್ವಕ ವಾಗಿ ಹೇಳಬೇಕಾಗಿ ಬಂದಿದ್ದರೂ, ಬಂಗಾಲಿ ಕಾದಂಬರಿಗಳ ಅನು ವಾದಗಳ ಉಪಯೋಗವನ್ನು ಯಾವ ರೀತಿಯಲ್ಲಿಯೂ ನಮ್ಮ ಕಾದಂಬರಿಕಾರರು ಮಾಡಿಕೊಂಡಿಲ್ಲವೆಂದಾಗಲಿ, ಅವುಗಳ ಒಟ್ಟು ಪರಿಣಾಮ ನಮ್ಮ ಇಂದಿನ ಕಾದಂಬರೀ ಲೇಖನದ ಮೇಲೆ ಆಗಲೇ ಇಲ್ಲವೆಂದಾಗಲಿ, ಸ್ಪಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಸಾಹಿತ್ಯದಲ್ಲಿ ಒಂದು ಪರೂಪರೆಯ ಪ್ರಭಾವ ಕೇವಲ ಅನುಕರಣಗಳಲ್ಲಿ ಮಾತ್ರ ಸ್ಪಷ್ಟವಾಗಿ ಕಾಣಿಸಿಕೊಳ್ಳಬಲ್ಲದು. ಅನುಕರಣಕ್ಕೆ ಸ್ವಯಂನಿರ್ಮಿತಿಯ ಸ್ಫೂರ್ತಿಯೂ ಇರುವುದಿಲ್ಲ; ಸತ್ತ್ವವೂ ಇರುವುದಿಲ್ಲ. ಸ್ಫೂರ್ತಿಸತ್ತ್ವ ಗಳಿದ್ದ ಸ್ವತಂತ್ರಕೃತಿಗಳಲ್ಲಿ ಹೊರಗಿನಿಂದ ಬಂದ ಇಂತಹ ಪ್ರಭಾವ ಯಾವುದೋ ಒಂದು ರೀತಿಯಲ್ಲಿ, ಬರೆಹಗಾರನ ವೈಷ್ಟಿ-ರಕ್ತಿ-ಸ್ಫೂರ್ತಿ-ಗನುಗುಣವಾಗಿ ಮಾರ್ಪಟ್ಟು, ಹೊಸರೂಪವನ್ನು ತಾಳಿ, ಹೊಸ ಜೀವನವನ್ನು ನಿರ್ಮಿಸುತ್ತದೆ. ಒಟ್ಟಿನಲ್ಲಿ ಬಂಗಾಲಿ ಕಾದಂಬರಿಯು ಕನ್ನಡಕ್ಕೆ ಪಾಸ್ತವತೆಯ ದಾರಿಯನ್ನು ತೋರಿಸಿತು. ಕಾದಂಬರಿಯನ್ನು ಜನಪ್ರಿಯವಾದ ಸಾಹಿತ್ಯವಿಭಾಗವನ್ನಾಗಿ ಮಾಡಿತು. ಈ ಸಾಹಿತ್ಯವಿಭಾಗದ ಮೂಲಕ ಮನೋರಂಜನೆಯನ್ನಲ್ಲದೆ ಮನೋಪಿಕಾಸ ವನ್ನು ಸಾಧಿಸುವುದೂ ಸಾಧ್ಯ ಎಂಬ ತತ್ತ್ವವನ್ನು ನಿದರ್ಶನಪೂರ್ವಕ ವಾಗಿ ತೋರಿಸಿಕೊಟ್ಟಿತು. ಜೀವನದ ಚಿತ್ರವಲ್ಲದೆ ಜೀವನದ ವಿಮರ್ಶೆಯೂ ಆಗಬಹುದೆಂಬ ಮಾತನ್ನು ಮನವರಿಕೆ ಮಾಡಿಕೊಟ್ಟಿತು. ಎಲ್ಲಕ್ಕೂ ಹೆಚ್ಚಾಗಿ ಕನ್ನಡ ಕಾದಂಬರಿಯ ಬೆಳೆವಣಿಗೆಗೆ ತೀರ ಆವಶ್ಯಕವಾದ ವಾಚಕವೃಂದವನ್ನು ಒದಗಿಸಿಕೊಟ್ಟಿತು. ಅಂದು ಬಂಕಿಮಚಂದ್ರರಾದರೆ ಇಂದು ಶರಚ್ಚಂದ್ರರು. ಈ ರೀತಿಯಾಗಿ ಬಂಗ-ದೇಶದ ಸಾಹಿತ್ಯಿಕ ಪ್ರಭಾವ ನಮ್ಮ ಸಾಹಿತ್ಯದ ಬೆಳಕಿಗೆ ಸಹಕಾರಿ ಯಾಗಿದೆ, ಇಂದಿಗೂ ಆಗುತ್ತಲಿದೆ.

ಈ ವಿಷಯವನ್ನು ಇಷ್ಟು ವಿವರವಾಗಿ ಹೇಳಬೇಕಾಗಿದ್ದ ಸಂದರ್ಭ ವನ್ನು ಮೇಲೆ ಸೂಚಿಸಿದೆ. ಶ್ರೀ. **ಗುರುನಾಥ ಜೋಶಿ** ಅವರು ಶರಚ್ಚಂದ್ರರ ಕೃತಿಗಳನ್ನು ಕನ್ನಡಿಸಿ ಮಹದುಪಕಾರ ಮಾಡುತ್ತಿದ್ದಾರೆ. ಶ್ರೀ. ಜೋಶಿಯವರು ಶರಚ್ಚಂದ್ರರ "**ವೃಂದಾವನ**" ವನ್ನೂ ಶ್ರೀಮತಿ ಕುಪ್ಪಮ್ಮ ಅವರು "**ಕಾಶೀನಾಥ**" ವನ್ನೂ ಇತ್ತೀಚೆಗೆ ಕನ್ನಡಿಸಿಕೊಟ್ಟಿದ್ದಾರೆ. (ಪ್ರಕಾಶಕರು : ಸಾಹಿತ್ಯ ಭಾಂಡಾರ, ಹುಬ್ಬಳ್ಳಿ). ಇವರಲ್ಲದೆ ಬಾಗಿಲುಕೋಟೆಯ ಶ್ರೀ. ನಾರಾಯಣ ಸಂಗಮ ಅವರು ಸಂಪ್ರಸಿದ್ಧ ಬಂಗಾಲಿ ಕಾದಂಬರಿಕರ್ತಿಯಾದ ಶ್ರೀಮತಿ ನಿರು-ಪಮಾದೇವಿಯವರ "**ವೀಥಿ**" ಎಂಬ ಕಾದಂಬರಿಯನ್ನು ಸಂಗ್ರಹಿಸಿ ಕನ್ನಡಿಗರೆದುರು ಇಟ್ಟಿದ್ದಾರೆ. (ಸಾಹಿತ್ಯಭಾಂಡಾರ, ಹುಬ್ಬಳ್ಳಿ) ಶ್ರೀ. ಸಂಗಮ ಅವರ ಈ ಕೃತಿಗೆ—"**ಅಕ್ಕ-ತಂಗಿ**" ಎಂದು ನಾಮ ಕರಣ ಮಾಡಿದ್ದಾರೆ—ವಿಸ್ತಾರಭಯಕ್ಕಾಗಿಯೊ ಇನ್ನಾವ ಕಾರಣವೊ ಅದರ ಪೂರ್ವಾರ್ಧದ ಕಥಾಭಾಗವನ್ನೆತ್ತಿಕೊಂಡು, ತಿದ್ದಿ, ತೀಡಿ, ತಮ್ಮ ಮಾತಿನಲ್ಲಿ ಅದನ್ನು ನಮಗೆ ಹೇಳಿದ್ದಾರೆ. ಅವರ ಮಾತಿನ ಹದ ಕನ್ನಡದಲ್ಲಿ ಅದೊಂದು ಸ್ವತಂತ್ರಕೃತಿ ಎನಿಸುವಂತೆ ಮಾಡಿದೆ.

ಈ ಮೂರೂ ಕಾದಂಬರಿಗಳಲ್ಲಿ ಓದುಗನಿಗೆ ಕೆಲವು ಸಾಮಾನ್ಯ ವಾದ ವೈಶಿಷ್ಟ್ಯಗಳು ಗೋಚರಿಸದಿರಲಾರವು. ಬಂಗಾಲದಲ್ಲಿಯ ಸಾಮಾನ್ಯ ಜನರ ಸಾಮಾಜಿಕ ಜೀವನದ ಚಿತ್ರಗಳಾಗಿದ್ದ ಈ ಮೂರೂ ಕಾದಂಬರಿಗಳಲ್ಲಿ ಕೆಲವು ವಿಶಿಷ್ಟ ಅಂಶಗಳು ಇರುವುದು ಸ್ವಾಭಾವಿಕ. ಅದಕ್ಕೂ ಹೆಚ್ಚಾಗಿ ಈ ಮೂರೂ ಕಥೆಗಳಲ್ಲಿ ಒಂದು ರೀತಿಯ ಸಾಮ್ಯವಿದೆ. ಮೂರೂ ಕೃತಿಗಳಲ್ಲಿಯೂ ಹೆಣ್ಣು-ಗಂಡಿನ ತೊಡಕಿನ ಸಮಸ್ಯೆಯಿದೆ. ಮೂರೂ ಕಾದಂಬರಿಗಳಲ್ಲಿ ತೀರ ಭಿನ್ನ ಮನೋವೃತ್ತಿಯ ಗಂಡು-ಹೆಂಡಿರ ನಡುವಿನ ಅಪರಿಹಾರ್ಯವಾದ ತಾಕಲಾಟ-ಸಂಘರ್ಷಗಳ ನಿರೂಪಣೆಯೇ ಓದುಗನ ಮನಸ್ಸನ್ನು ಕೆಣಕಿ ಕೆರಳಿಸುವ ಕಥೆಯಾಗಿ ಪರಿಣಮಿಸಿದೆ. ಹಾಗೆ ನೋಡಿದರೆ ಯಾವುದರಲ್ಲಿಯೂ ವಿಶೇಷವಾಗಿ ಹೇಳಿಕೊಳ್ಳು ವಂತಹ ಕಥಾಭಾಗವಿಲ್ಲ. ಆದರೆ ಯಾವುದೋ ಒಂದು ಪರಿಸ್ಥಿತಿಯ ತೊಡಕಿನಲ್ಲಿ ಸಿಕ್ಕಿಕೊಂಡು, ಅನನ್ಯವಾದ ಮನೋವೃತ್ತಿಗಳ ಮೂಲಕ ಪರಿಸ್ಥಿತಿಯ ಪ್ರವಾಹವನ್ನು ಒಂದು ವಿಶಿಷ್ಟರೀತಿಯಲ್ಲಿ ಪರಿಯಿಸಿ, ಬಾಳಿನಲ್ಲಿ ಮುಖವನ್ನೋ ನಿರಾಶೆಯನ್ನೋ - ನಿರಾಶೆಯ ಜೊತೆಯಲ್ಲಿ ಒಂದು ಬಗೆಯ ಸಮಾಧಾನವನ್ನೋ ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ. ಬಡವನಾಗಿ ಬಾಳಿನಲ್ಲಿಯ ಉಳಿವಾದ ಅರ್ಥ ವನ್ನು ಗ್ರಹಿಸಿಕೊಂಡು, ಸಾಧಾರಣ ಸಾಮಾಜಿಕಜೀವನದ ಬಗೆಗೆ ಒಂದು ಬಗೆಯ ವಿರಕ್ತಿಯನ್ನು ತಳೆದ ಕಾಶೀನಾಥ ಸಿರಿವಂತ ಜಮೀನ್ದಾರರ ಮಗಳಾದ ಕಮಲೆಯನ್ನು ಮದುವೆಯಾಗುತ್ತಾನೆ ಐಶ್ವರ್ಯ

ವಲ್ಲಿ ತನ್ನ ತಂದೆಗೆ ಒಬ್ಬಳೇ ಮಗಳಾಗಿ ಬೆಳೆದ ಕಮಲಿಗೆ ಕಾತೀನಾಥನ ಮನೋವೃತ್ತಿಯ ಅರ್ಥವಾಗುವುದಿಲ್ಲ. ಒಬ್ಬರನ್ನೊಬ್ಬರು ತಿಳಿದುಕೊಳಲು ಎಷ್ಟು ಯತ್ನಿಸಿದರೂ ಕಾಲಸವೆದ ಹಾಗೆ ಒಬ್ಬರಿಂದೊಬ್ಬರು ದೂರದೂರವಾಗುತ್ತ ಹೋಗುತ್ತಾರೆ. ಈ ಸಂಘರ್ಷಣದ ಚಿತ್ರವೇ ಕಾದಂಬರಿಯಾಗಿವೆ. "ವೃಂದಾವನ"ವಲ್ಲಿಯಾದರೂ ವಿಶೇಷವಾದ ಕಥಾಭಾಗವಿಲ್ಲ. ಐದು ವರ್ಷದವಳಿರುವಾಗಲೇ ತಂದೆ ಇಲ್ಲದೆ ತಾಯಿಯ ಅಕ್ಕರೆಯಲ್ಲಿ ಬಳೆದ ರೂಪವತಿಯಾದ ಕುಸುಮೆ ಜಮೀನ್ದಾರರ ಮಗನಾದ ವೃಂದಾವನನ ಕೂಡ ಮದುವೆಯಾದನಂತರ, ನುಂದೆ ಕೆಲವು ದಿವಸಗಳಲ್ಲಿಯೆ ಕುಸುಮೆಯ ತಾಯಿಯ ವಿಚಾರವಾಗಿ ಜನರು ಅಲ್ಲವನಲ್ಲದ ಸೊಲ್ಲನ್ನು ಆಡತೊಡಗಿದ್ದರಿಂದ, ಗಂಡ-ಹೆಂಡಿರ ಬಿಡುಗಡೆಯಾಗುವುದು. ವೃಂದಾವನನಿಗೆ ಬೇರೆ ಮದುವೆಯಾದರೂ, ಎರಡನೆಯ ಹೆಂಡತಿಯನ್ನು ಕಳೆದುಕೊಂಡನಂತರ ಅವನು ಜನಾಪವಾದವನ್ನು ವಿಾರಿ ಕುಸುಮೆಯ ಕಡೆಗೆ ಸೆಳೆಯಲ್ಪಡುತ್ತಾನೆ. ತನ್ನಲ್ಲಿ ಯಾವ ತಪ್ಪಿಲ್ಲದೆಯೂ ನಿರಾಕರಿಸಲ್ಪಟ್ಟವಳಾಗಿದ್ದ ಕುಸುಮೆಯ ಸ್ವಾಭಿಮಾನ,ವೃಂದಾವನನ ಸೂಚಿತವಾದ ಬೇಡಿಕೆಯನ್ನು ಮನ್ನಿಸದೆ ಹೃದಯದಲ್ಲಿಯ ಆಸೆಯನ್ನು ಕಾಲಕೆಳಗಿರಿಸುವುದು. ವೃಂದಾವನನ ಮೊದಲನೆಯ ಹೆಂಡತಿಯ ಚಿಕ್ಕಮಗುವು ಮೃತಪ್ರಾಯವಾದಾಗ, ಕುಸುಮೆಯು ಎಲ್ಲ ಆತಂಕಗಳನ್ನೂ ಬದಿಗಿರಿಸಿ ಧಾವಿಸಿದಾಗ, ಮಗುವಿನ ಪ್ರಾಣ ಹೋಗಿ ವೃಂದಾವನನಿಗೆ ಬದುಕಿನಲ್ಲಿ ಯಾವ ಆಲೆಯೂ ಉಳದಿರುವುದಿಲ್ಲ. "ಅಕ್ಕ-ತಂಗಿ" ಯಲ್ಲಿ ಸವತಿಯರ ಪ್ರೇಮದ ಕಥೆ ಮುಖ್ಯವಾಗಿದ್ದರೂ, ಗಂಡ ಮತ್ತು ಮೊದಲನೆಯ ಹೆಂಡತಿ ಇವರ ನಡುವಿನ ಸಂಬಂಧ ಯಾವ ರೀತಿ ಬೆಳೆದು ಒಂದು ವಿಷಮ ಪರಿಸ್ಥಿತಿಯಲ್ಲಿ ಕೊನೆಗಂಡಿತೆಂಬುದು ಒಳ್ಳೇ ಮಾರ್ಮಿಕ ರೀತಿಯಲ್ಲಿ ಚಿತ್ರಿತವಾಗಿದ್ದುದನ್ನು ನೋಡಬಹುದು. ಚಿಕ್ಕ ಸವತಿಯ ವಿಷಯದಲ್ಲಿ ಒಡಪುಟ್ಟದ ತಂಗಿಗಿಂತಲೂ ಹೆಚ್ಚಾದ ಆದರ-ಪ್ರೀತಿಗಳನ್ನು ತೋರಿಸುವ ಸುಳೆಯು ತನ್ನ ಗಂಡನ ವಿಷಯದಲ್ಲಿ ತೋರಿಸಿದ ಕಠಿನ ನಿರ್ಲೋವೃತ್ತಿಯು, ಇಡಿ ಕಾದಂಬರಿಯಲ್ಲಿ ಕಳವಳವನ್ನು ತುಂಬಿಬಿಟ್ಟಿದೆ. ತನ್ನ ಗಂಡನನ್ನು ಸವತಿಗೆ ಸಮರ್ಪಿಸಿ, ತನ್ನ ಬದುಕಿನಲ್ಲಿ ಯಾವ ಸುಖ ಸಮಾಧಾನಗಳನ್ನೂ ಕಾಣದೆ—ಅವುಗಳನ್ನು ಪೇಕ್ಷಿಸಿದ್ದರೂ ಕೂಡ ಅಪೇಕ್ಷೆಯನ್ನು ಎಂದಿಗೂ ಯಾರೆದುರಿಗೂ ತೋರಗೊಡದೆ—ತನ್ನ ಅಸ್ತಿತ್ವವನ್ನೆ ಅಳಿಸಿಕೊಂಡ ಸುಳೆಯ ಸವತಿಪ್ರೇಮದ ಬಗ್ಗೆ ಒಂದೆಡೆ ಬೆರಗು ಪಡುವಂತಾದರೆ, ಇನ್ನೊಂದೆಡೆಗೆ ಸರಳಮನಸ್ಸಿನ ಗಂಡನು ಯಾವುದೋ ಒಂದು ಅನಪೇಕ್ಷಿತವಾದ ಪರಿಸ್ಥಿತಿಗೊಳಗಾಗಿ ಮದುವೆ ಮಾಡಿಕೊಂಡದ್ದಕ್ಕಾಗಿ ಕೊನೆಯಲ್ಲಿ ಸಹಸಬೇಕಾದ ಸುಳೆಯ "ಸೇಡು;" ಮನಸ್ಸನ್ನು ಕಲಕಿ ಕಳವಳಗೊಳಿಸುತ್ತದೆ. ಸುಳೆಯು ಮನೆಬಿಟ್ಟು ಹೋಗುವುದು "ಸೇಡು" ಎಂದೂ ಹೇಳಲಿಕ್ಕಾಗುವುದಿಲ್ಲ; ಸವತಿಗಾಗಿ ಮಾಡಿದ ಆತ್ಮಯಜ್ಞವದು!

ಈ ಮೂರೂ ಕಾದಂಬರಿಗಳನ್ನು ಓದಿ ಮುಗಿಸಿದನಂತರ, ಮೂರೂ ಕಾದಂಬರಿಗಳಲ್ಲಿ ಒಂದೊಂದರಂತೆ ಪ್ರಶ್ನೆ ತಲೆಯೆತ್ತುತ್ತವೆ. "ಕಾತೀನಾಥ" ದಲ್ಲಿಯ ಕಮಲಿಯು ತನ್ನ ಗಂಡನ ಸ್ವಭಾವವನ್ನು ಅರಿತವಳಾಗಿ ತಾನು ಒಂದುಂಶ ತಲೆತಗ್ಗಿಸಿ ನಡೆದುಕೊಂಡಿದ್ದರೆ, ಇಬ್ಬರಿಗೂ ಸುಖವಾಗುತ್ತಿರಲಿಲ್ಲವೆ? "ವೃಂದಾವನ" ದಲ್ಲಿ ಬುದ್ಧಿವಂತನಾದ ವೃಂದಾವನ ಕುಸುಮೆಯ ಬಗ್ಗೆ ತನ್ನಲ್ಲಿಯ ಹೃದಯದ ಸೆಳೆತಕ್ಕೆ ತಕ್ಕಂತೆ ಹುರುಳಿಲ್ಲದ ಜನಾಪವಾದವನ್ನು ಬದಿಗಿರಿಸಿ ಕುಸುಮೆಯನ್ನು ಯೋಗ್ಯವಾಗಿ ಬರಮಾಡಿಕೊಂಡಿದ್ದರೆ, ಕಾದಂಬರಿಯ ಕೊನೆಯಲ್ಲಿಯ ದುಃಖಪರಂಪರೆಯು ಬಾರದೆ ಹೋಗಿರದಿದ್ದರೂ, ಅನುಪಾಪದ ತೀವ್ರತೆಯಾದರೂ ಕಡಮೆಯಾಗುತ್ತಿರಲಿಲ್ಲವೆ? ಕುಸುಮೆಯಾದರೂ ಸಾಪರ ಕಷ್ಟಗಳನ್ನು ಸಹಿಸಿ ಬಾಳನ್ನು ಬರಿದು ಮಾಡಿಕೊಳ್ಳುವುದಕ್ಕಿಂತ ಗಂಡನ ಆಶ್ರಯಕ್ಕಾಗಿ ಪ್ರೇಮಕ್ಕಾಗಿ ತನ್ನ ಸ್ವಾಭಿಮಾನವನ್ನೋ ಆತ್ಮಪ್ರತಿಷ್ಠೆಯನ್ನೋ ಬದಿಗೇಕೆ ಇರಿಸಬಾರದಾಗಿತ್ತು? "ಅಕ್ಕ-ತಂಗಿ" ಯಲ್ಲಿಯ ಸುಳೆಯಾದರೂ, ಸವತಿಯ ವಿಷಯದಲ್ಲಿ ತೋರಿಸಿದ ಸಹೃದಯತೆಯ ಅರ್ಧದಷ್ಟನ್ನು ತನ್ನ ಗಂಡನ ವಿಷಯದಲ್ಲಿ ತೋರಿಸಿದ್ದರೆ, ತಾನಾದರೂ ಕೂಡ ಸುಖವಾಗಿಯೇ ಇರಬಹುದಾಗಿತ್ತಲ್ಲ? 'ಹೀಗೆ ಮಾಡಬೇಕಿತ್ತು, ಹಾಗೆ ಮಾಡಬಾರದಾಗಿತ್ತು ಎಂಬ ಮಾತುಗಳನ್ನು ನಾವು ಸಾಮಾನ್ಯವಾಗಿ, ಹೇಳುವುದು ಜೀವನದಲ್ಲಿಯ ಪರಿಚಿತ ವ್ಯಕ್ತಿಗಳ ವಿಷಯವಾಗಿ. ಒಂದು ದೃಷ್ಟಿಯಿಂದ ಈ ಪ್ರಶ್ನೆಗಳೆಲ್ಲವೂ ಕಥೆಗೊಂದು ಸುಖವಾದ ಕೊನೆಯನ್ನಪೇಕ್ಷಿಸುವ ಓದುಗರ ಪ್ರಶ್ನೆಗಳಾಗಿದ್ದರೂ, ಇನ್ನೊಂದು ದೃಷ್ಟಿಯಿಂದ ಈ ಪ್ರಶ್ನೆಗಳು ಈ ಕಾದಂಬರಿಗಳಲ್ಲಿಯ ಪಾತ್ರಗಳ ಜೀವನಸತ್ಯತ್ವಕ್ಕೆ ಸಾಕ್ಷಿ. ಕಥೆ ಮುಗಿದಾಗ, ನಾವು ಓದಿದ್ದು ಕಥೆಯೆಂಬುದನ್ನು ನಾವು ಮರೆತು ಈ ಪ್ರಶ್ನೆಗಳನ್ನು ಉಸಿರುತ್ತೇವೆ. ಚಿರಪರಿಚಿತರಾದ ವ್ಯಕ್ತಿಗಳ ವಿಷಯವಾಗಿ ನಾವು ಕೇಳುವಂತೆ ಇಂತಹ ಮಾತುಗಳನ್ನು ನಮ್ಮಷ್ಟಕ್ಕೇ ಕೇಳಿಕೊಂಡು, ಕಾದಂಬರಿಕಾರನ ಪಾತ್ರಪರಿಪೋಷಣೆಗೆ ನಮ್ಮ ಹೃದಯದ ಕಾಣಿಕೆಯನ್ನು ಸಲ್ಲಿಸುತ್ತೇವೆ. ಕಥೆಯಲ್ಲಿಯ ಜೀವನವಲ್ಲ ಸಮರಸವಾಗಿ, ಕಟ್ಟುಕಥೆಯ ಕಥಾಸಮಯತಂತ್ರವನ್ನು ಓದುಗರು ಮರೆಯಬಲ್ಲರಾದಾಗ ಕಾದಂಬರಿಯು ಒಂದು ಭಿನ್ನತೆಜ್ಞನ್ನು, ಒಂದು ವಿಸ್ತಾರವನ್ನು, ಒಂದು ಆನುಭವದ ಆಳವನ್ನು ಸಾಧಿಸುವುದು. ಶರಚ್ಚಂದ್ರರ ಕಾದಂಬರಿಗಳಂತೆ ಉತ್ತಮ ಕಾದಂಬರಿಯು ಲಕ್ಷಣವಿದೊಂದು. ಕಥೆಯು ಕಥೆಯಾಗಿಯೇ ಉಳಿದರೆ, ಎಂದರೆ ಚಿತ್ರಿತವಾದ ಅನುಭವದಲ್ಲಿ ಓದುಗ ತಾದಾತ್ಮ್ಯವನ್ನು ಹೊಂದದೆ ಹೋದರೆ, ಬರಪಗಾರನ ಕೌಶಲವನ್ನೂ ಕಳಿಯುಬೇಕಾಗಿದೆ ಎಂದೇ ಹೇಳಬೇಕು. ಕಾದಂಬರಿಯಲ್ಲಿ ಈ ತೆರದ ಮಹೋನ್ನತಿ ಎಲ್ಲಕ್ಕೂ ಹೆಚ್ಚಾಗಿ ಉತ್ತಮ ಪಾತ್ರವಿಪೋಷಣೆಯಿಂದಲೇ ಸಾಧ್ಯ. ಕಾತೀನಾಥ, ವೃಂದಾವನನ, ಕಮಲಿ, ಕುಸುಮೆ, ಸುಳೆ, ಇವರೆಲ್ಲರು ಕೇವಲ ಕಟ್ಟುಕಥೆಯಲ್ಲಿ ಕಥೆಯನ್ನು ಮುಂದುವರಿಸುವ ಸಾಧನಗಳಾಗಿರದೆ, ಕೇವಲ ಪಾತ್ರಗಳಾಗಿರದೆ, ಜೀವನದಲ್ಲಿ ಕಣ್ಣಿನ್ದಿದ್ದವರಿಗೆ ಎಲ್ಲಿಲ್ಲಿಯೂ ಕಾಣಬಹುದಾದ ಜೀವಂತ ವ್ಯಕ್ತಿಗಳಾಗಿದ್ದಾರೆ.

ಈ ಮೂರೂ ಕಾದಂಬರಿಗಳಲ್ಲಿ ಇವಲ್ಲದೆ ಬೇರೆ ಬೇಕಾದಷ್ಟು ಸೌಂದರ್ಯಸ್ಥಾನಗಳವೆ. ಅವುಗಳಲ್ಲಿಯ ಪಾತ್ರಪರಿಪೋಷಣೆಯ ವಿಚಾರವಾಗಿ ಮಾತ್ರ ನಾಲ್ಕು ಮಾತುಗಳನ್ನು ಇಲ್ಲಿ ಹೇಳಿದೆ. ಉಳಿದ ವಿಷಯಗಳ ಬಗ್ಗೆ ಕೆಲವು ಮಾತುಗಳನ್ನು ಮುನ್ನುಡಿಕಾರರು ತಿಳಿಸಿದ್ದಾರೆ, ಅನುವಾದಕರೂ ಅಲ್ಲಲ್ಲಿ ಅರಿಕೆಮಾಡಿಕೊಂಡಿದ್ದಾರೆ. ಅವೆಲ್ಲವನ್ನು ಮತ್ತೆ ಇಲ್ಲಿ ಹೇಳುವ ಅವಶ್ಯಕತೆಯಿಲ್ಲ. ಇಲ್ಲಿ ಕಂಡುಬರುವ ಸಾಮಾನ್ಯವನ್ನು ಪೇಕ್ಷಗಳ ಜೋಡಣೆ ಅವುಗಳ ಮೂಲಕವಾಗಿಯೇ ಸಹಜವಾಗಿ ಕಥೆಯನ್ನು ಮುಂದುವರಿಸುವ ಕೌಶಲ. ತೀರ ಅವಶ್ಯವಾದ ಕಂಠರಗಳನ್ನು ಮಾತ್ರ ಎತ್ತಿ ತೋರಿಸಿ, ತೋರಿಸಿದ್ದಕ್ಕಿಂತಲೂ ಹೆಚ್ಚಾಗಿ ತೋರಿಸದೆ ಬಿಟ್ಟ ಭಾಗಗಳ ಬಗ್ಗೆ ಕುತೂಹಲವನ್ನುಂಟುಮಾಡುವಂತಹ ಒಂದು ಸಹಜ ಸೂಚಕತೆ, ಒಂದೆರಡು ಹೃದಯಗಳ ಹೊಯ್ದಾಟವಲ್ಲಿಯೇ ಇಡೀ ಬದುಕಿನಲ್ಲಿಯ ವಿಷಮತೆಗಳು, ಮುದುರುಗಳು ಸಂಕೋಚನಗಳು ಯಾವ ರೀತಿ ಪರಿಸ್ಥಿತಿಯ ಪ್ರವಾಹವನ್ನು ಬದಲಾಯಿಸಿ ಮುಖವ ದಾರಿಯಲ್ಲಿ ಹರಿಯಿಸುವುದೆಂಬುದನ್ನು ತೋರಿಸುವ ನೈಪುಣ್ಯ, ಇವೆಲ್ಲವುಗಳೂ ಒಂದು ಶ್ರೇಷ್ಠವಾದ ಕಲೆಗಾರಿಕೆಯ ಮೈತಿಕಗಳು. ಅನುವಾದಕರು ಇಂತಹ ಕಾದಂಬರಿಗಳನ್ನು ಕನ್ನಡಕ್ಕೆ ಒದಗಿಸಿ, ನಿಜವಾಗಿಯೂ ಉಪಕಾರ ಮಾಡಿದ್ದಾರೆ. ಇಂತಹ ಉತ್ತಮಕೃತಿಗಳು ಇನ್ನೂ ಬೇಕಾದಷ್ಟು ಬರಲಿ!



ಮಹಾತ್ಮರ ಮನೋಭೂಮಿಕೆ

'ರಾಜಾಜಿಯವರ ಯೋಜನೆಯ ಹಿಂದೆ ಒಂದು ವಿಚಾರಸರಣಿ ಇದೆ.... (೧) ಒಂದು, ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಡುವ ಇಚ್ಛೆಯೆ ಬ್ರಿಟಿಶರಿಗಿರಲಿಕ್ಕಿಲ್ಲ, (೨) ಇಲ್ಲವೆ ಜಾತೀಯ ಐಕ್ಯವಿಲ್ಲದೆ ದೇಶವ ಸ್ವಾತಂತ್ರ್ಯಕ್ಕೆ ಅರ್ಥವೆ ಅವರ ದೃಷ್ಟಿಯಿಂದ ಇರಲಿಕ್ಕಿಲ್ಲ! ಇವರಲ್ಲಿ ಮೊದಲಿನದನ್ನು ರಾಜಾಜಿಯಂತಹವರು ನಂಬಲು ಸಿದ್ಧರಿಲ್ಲ.' ಈ ಮಾತುಗಳನ್ನು ಕಳೆದ ತಿಂಗಳ **ನೋಟದಲ್ಲಿ** ಹೇಳಿದ್ದೆವು. ಈಗ ಅದೇ ಮಾತನ್ನು ಮತ್ತೆ ಚರ್ಚಿಸುವಂತಹ ಪ್ರಸಂಗ ಬಂದಿದೆ. ಯಾವು ದನ್ನು ರಾಜಾಜಿಯವರು ನಂಬಲು ಸಿದ್ಧರಿಲ್ಲವೆಂದು ನಮ್ಮ ದೃಢಾಭಿಪ್ರಾಯವೊ, ಅದನ್ನೆ ಮಹಾತ್ಮರೂ ನಂಬಲು ಸಿದ್ಧರಿಲ್ಲ ಎಂದೂ ನಮ್ಮ ಸಂದೇಹ. ಎಂದರೆ, ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು **ಕೊಡಲು** ಬ್ರಿಟಿಶರ ಇಚ್ಛೆಯಿಲ್ಲ ಎಂಬ ಮಾತನ್ನು ಮಹಾತ್ಮರೂ ಒಪ್ಪಲು ಸಿದ್ಧರಿಲ್ಲ. ಇದನ್ನು ಓದಿ ಅನೇಕರಿಗೆ—ಅದೇಕೆ?—ಎಲ್ಲರಿಗೂ ಆಶ್ಚರ್ಯವೆನ್ನಿಸಬಹುದಾಗಿದೆ. ಆದರೂ ನಮ್ಮ ಈ ಸಂದೇಹವು ವಸ್ತುಸ್ಥಿತಿಯನ್ನು ಹೊಂದಿಕೊಂಡೇ ಇದೆ ಎಂದು ನಾವು ಧೈರ್ಯದಿಂದ ಹೇಳುತ್ತೇವೆ. ಮಹಾತ್ಮರು ಎಂದಿನಿಂದಲೂ ಇಂತಹ ಅಭಿಪ್ರಾಯವನ್ನು ಳ್ಳವರೆಂಬುದೆ ಕಳೆದ ೨೦–೨೫ ವರ್ಷಗಳ ಕಾಂಗ್ರೆಸಿನ ಘೋರಣೆಗೂ, ಕಾಂಗ್ರೆಸು ಹೂಡಿದ ಚಳವಳಿಗಳಿಗೂ ವಿಶಿಷ್ಟವಾದ ಸ್ವರೂಪವನ್ನು ಕೊಟ್ಟಿದೆ. ಕಾಂಗ್ರೆಸಿನ ಘೋರಣೆಯಲ್ಲಿ ಬ್ರಿಟಿಶರಿಗಾಗಿ ದ್ವೇಷವಿಲ್ಲದಿರುವುದೊಂದು ಸುಸಂಗತ ತತ್ತ್ವವಾಗಿದೆ; ಅದರಂತೆಯೆ ಪ್ರತಿಯೊಂದು ಚಳವಳಿಯ ತರುವಾಯ ಮಹಾತ್ಮರು ಒಂದಿಲ್ಲೊಂದು ವಿಧಾನದಿಂದ ಸರಕಾರದೊಡನೆ ಒಪ್ಪಂದವನ್ನೆ ಮಾಡಿಕೊಂಡಿದ್ದಾರೆ.

ಬ್ರಿಟಿಶ-ಬಂಧುತ್ವದ ರಾಜಕಾರಣ

ಮಹಾತ್ಮರ ಅಹಿಂಸಾ ಮತ್ತು ಸತ್ಯಾಗ್ರಹ ಎಂಬ ಎರಡು ಸೊಸ ಶಸ್ತ್ರಗಳ ಮೂಲಕ, ಅವರ ಅನೇಕ ಕೃತಿಗಳು ನಮಗೆ ಅರ್ಥವಾಗುವುದಿಲ್ಲ, ಅನೇಕ ಸಲ ಅಸಂಗತವೆನ್ನಿಸುವುವು ಎಂದು ಖಾಡಿಸಬಹುದಾಗಿದೆ. ಆ ಮಾತನ್ನು ತುಸುಮಟ್ಟಿಗೆ ನಾವು ಒಪ್ಪುತ್ತೇವೆ. ಅವರ ರಾಜಕೀಯ ರಂಗದಲ್ಲಿ (ಸತ್ಯಾಗ್ರಹದ ತಾತ್ತ್ವಿಕ ಚರ್ಚೆಯಲ್ಲಲ್ಲ) ಅವರ ಕೃತಿಗಳಿಗೆ ಅರ್ಥವಾಗದಿರುವುದಕ್ಕೂ ಅವು ಅಸಂಗತವೆನ್ನಿಸುವುದಕ್ಕೂ ಮಹತ್ತ್ವದ ಬೇರೊಂದಾದ ಕಾರಣವಿದೆ ಎಂದು ನಮ್ಮ ಅಭಿಪ್ರಾಯ. ಆ ಕಾರಣವನ್ನೆ ಮೇಲೆ ಸೂಚಿಸಿದ್ದೇವೆ. ಅದೆಂದರೆ ಬ್ರಿಟಿಶರ ಇತಿಹಾಸಕ್ಕಾಗಿ ಆದರ, ಬ್ರಿಟಿಶರ ರಾಜಕೀಯ ತತ್ತ್ವಗಳಿಗಾಗಿ ವಿಶ್ವಾಸ, ಬ್ರಿಟಿಶರಿಂದ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದೆಂಬ ಭರವಸೆ: ಇವು ಮೂರೂ ಮಹಾತ್ಮರ ರಾಜಕೀಯ ತತ್ತ್ವಗಳ ಜೀವಾಳವಾಗಿವೆ. ಸತ್ಯಾಗ್ರಹವೆಂದಿದ್ದಾರೆ, ಅಸಹಕಾರವೆಂದಿದ್ದಾರೆ, 'ಹೊರಟು ಹೋಗಿರಿ' ಎಂದೂ ಸಾರಿದ್ದಾರೆ; ಇವನ್ನೆಲ್ಲ ಅರಿತೂ ನಾವು ನಮ್ಮ ಅಭಿಪ್ರಾಯವನ್ನು ಧೈರ್ಯದಿಂದ ಮಾಜಕರ ಮುಂದಿಡುತ್ತೇವೆ. ಪ್ರಾರಂಭದಲ್ಲಿ ಮಹಾತ್ಮರ ರಾಜಕೀಯ ಶಿಕ್ಷಣವೆ ಹಾಗಾಗಿದೆ. ಮಹಾತ್ಮರ ಮೇಲೆ ನರ್ಜಸ್ಸಿದ್ದ ಹೊದಲ. ರಾಜಕಾರಣಿಗಳೆಲ್ಲರೂ (ಉದಾ:- ಗೋಖಲೆ) ಬ್ರಿಟಿಶ ಪರಂಪರೆಯಲ್ಲಿ ಅವರ-ವಿಶ್ವಾಸಗಳುಳ್ಳವರೆ. ಇದಲ್ಲದೆ, ದಕ್ಷಿಣ ಆಫ್ರಿಕೆಯಲ್ಲಿ ಬೇರೊಂದು ಜನಾಂಗವಾದ ಡಚ್ (ಬೋರ್) ಜನರಿಗೆ, 'ಸೊದಲು ಯುದ್ಧವನ್ನಾಡಿದರೂ) ಬ್ರಿಟಿಶರು **ಸ್ವಾತಂತ್ರ್ಯವನ್ನು** ಕೊಟ್ಟುದನ್ನು ಮಹಾತ್ಮರು ಕಣ್ಣಾರೆ ಕಂಡಿದ್ದಾರೆ. ಹೀಗೆ ಬ್ರಿಟಿಶ-ಬಂಧುತ್ವವು ಅವರ ರಾಜಕೀಯ ಶಿಕ್ಷಣದ ತಳಹದಿಯಾದಂತಿದೆ. ಅದಕಾಗಿಯೆ ಬ್ರಿಟಿಶರೊಡನೆ ನಿಕರವಾದ ಒಂದೂ ಚಳವಳಿಯನ್ನು ಮಹಾತ್ಮರು ಹೂಡಿಲ್ಲ, ಹೂಡುವಂತಿಲ್ಲ. ಅದಕಾಗಿಯೆ ಜನಾನಕ್ಕಾಗಿ ಮಹಾತ್ಮರಲ್ಲಿ ಅಷ್ಟೊಂದು ಹಾರ್ದಿಕ ಅನಾದರವಿದೆ. ಮಹಾತ್ಮರ ದೃಷ್ಟಿಯಿಂದ ಸ್ವಾತಂತ್ರ್ಯಪ್ರಿಯರು, ಸ್ವಾಮಾಣಿಕರು ಎಂದರೆ ಪಕ್ಕಾಗಿ ಬ್ರಿಟಿಶರೆ.

ಚಳವಳಿಯ ತಳಹದಿ ತತ್ತ್ವ

ಮಹಾತ್ಮರು ಕಾಂಗ್ರೆಸನ್ನು ಸೇರಿದಂದಿನಿಂದ (೧೯೧೯—೨೦) ಬ್ರಿಟಿಶರೊಡನೆ ಅಸಹಕಾರವನ್ನೂ ಸತ್ಯಾಗ್ರಹವನ್ನೂ ಹೂಡಿದ್ದರಿಂದ, ನಾವು ಮೇಲೆ ಹೇಳಿದ್ದು ಕೇವಲ ನಮ್ಮ ಹುಚ್ಚುಕಲ್ಪನೆ ಎಂದು ಕೆಲವರಾದರೂ ಭಾವಿಸಬಹುದಾಗಿದೆ. ಅಂತಹರು ಬುದ್ಧಿಗೆ ಚಾಲನವನ್ನು ಕೊಟ್ಟು ತುಸು ಸೂಕ್ಷ್ಮವಾಗಿ ವಿಚಾರ ಮಾಡಬೇಕು. ಆಗ ನಮ್ಮ ಸೂತಿನ ಸತ್ಯತೆ ದೂರನಿಂದಲೆ ಮಿಂಚುವುದು. ೧೯೨೦ರಿಂದ ಇಂದಿನವರೆಗೆ ನಾಲ್ಕೈದು ಸಲವಾದರೂ ಮಹಾತ್ಮರು ಸಾರ್ವತ್ರಿಕ ಚಳವಳಿಯನ್ನು ಹೂಡಿದ್ದಾರೆ. ಒಂದು ದೃಷ್ಟಿಯಿಂದ ನೋಡಿದರೆ, ಪ್ರತಿಸಲದ ಚಳವಳಿಯೂ ನಿಷ್ಫಲವಾಗಿದೆ ಎಂದೇ ಹೇಳಬಹುದು. ಯಾಕೆಂದರೆ ಸ್ವರಾಜ್ಯ ಸಿಕ್ಕುವುದಿರಲಿ, ಹೆಚ್ಚೆಚ್ಚು ದೂರ ಜಾರಿದೆ ಎನ್ನಬಹುದು. ಆದರೂ ಪ್ರತಿಸಲದ ಚಳವಳಿಯೂ ಯಶಸ್ವಿಯಾಯಿತು

ಎಂದೇ ಮಹಾತ್ಮರಾಗಲಿ ಅವರ ಆಪ್ತ ಅನುಯಾಯಿಗಳಾಗಲಿ ಹೇಳಿದ್ದಾರೆ. **ಒಂದೂ ಚಳವಳ ನಿಷ್ಫಲವಾಗಿಲ್ಲ, ಪ್ರತಿಯೊಂದೂ ಯಶಸ್ವಿಯಾಗಿದೆ ಎಂದು ಇಂದು ನಾವು ಕೂಡ ಸಾರಿ ಹೇಳುತ್ತೇವೆ.** ಮಹಾತ್ಮರ ರಾಜಕಾರಣತತ್ತ್ವಗಳ ತಳಹದಿಯನ್ನು (ಮೇಲೆ ವಿವರಿಸಿದ್ದನ್ನು) ಲಕ್ಷ್ಯದಲ್ಲಿಟ್ಟುಕೊಂಡರೆ ಮಾತ್ರ ಈ ಯಶಸ್ಸು ದೊರಕಿದ್ದು ನಿಜ ಎಂದು ತಿಳಿಯುವುದು. ಬ್ರಿಟಿಶ್–ಬಂಧುಗಳಾದ ಮಹಾತ್ಮರಿಗೆ ಬ್ರಿಟಿಶರಿಂದ ಸ್ವಾತಂತ್ರ್ಯ ದೊರೆಯುವುದೆಂಬುದರಲ್ಲಿ ಎಂದಿಗೂ 'ಒಳದನಿ'ಗೆ ಸಂಶಯವೆ ಇಲ್ಲ. ಅದಕ್ಕಾಗಿ, ಅವರ ಯಾವ ಚಳವಳದಲ್ಲೂ 'ಬ್ರಿಟಿಶರನ್ನು ಸೋಲಿಸುವುದು' ಎಂಬ ವೃಷ್ಟಿಯೆ ಇದ್ದಿರಲಿಲ್ಲ. ಬ್ರಿಟಿಶರು ಸ್ವಾತಂತ್ರ್ಯವನ್ನು ಕೊಟ್ಟೇ ಕೊಡುವರೆಂದ ನೇಲೆ ಚಳವಳವಾದರೂ ಯಾಕೆ? ಒಂದೇ ಉತ್ತರ:— **ಅವರನ್ನೇ ಒಲಿಸುವುದಕ್ಕಾಗಿ.** ದಕ್ಷಿಣ ಆಫ್ರಿಕೆಯ ಬೋಯರರು ಸ್ವಾತಂತ್ರ್ಯಕ್ಕೆ ಅರ್ಹರೆಂದೆನ್ನಿಸಿದಾಕ್ಷಣ ಬ್ರಿಟಿಶರು ಯುದ್ಧವನ್ನು ತಡೆದು, ಸೋತವರಿಗೆಯೆ ಸ್ವಾತಂತ್ರ್ಯವನ್ನು ಕೊಡಲಿಲ್ಲವೆ?

ಮೂಲೋದ್ದೇಶದ ಸುಸಂಗತತೆ

ಅದೇ ತರದ ಅನುಭವವು ನಮ್ಮಲ್ಲಿ ಬರುವುದು, ಅಂತಹ ಅನುಭವವನ್ನು ನಮ್ಮಲ್ಲಿ ಘಟಿಸಬೇಕು—ಎಂದರೆ ನಾವೂ ಸ್ವಾತಂತ್ರ್ಯಕ್ಕೆ ಅರ್ಹರು ಎಂದು ಬ್ರಿಟಿಶರಿಗೆ ಭರವಸೆಯನ್ನು ತಂದು ಕೊಡಬೇಕು ಎಂಬ ವಿಚಾರವೆ ಮಹಾತ್ಮರ ಎಲ್ಲ ಚಳವಳಗಳ ಅಡಿಗಲ್ಲಾಗಿದೆ. ಇದಕಾಗಿಯೆ ಮಹಾತ್ಮರ ರಾಜಕೀಯ ಕಾರ್ಯಕ್ರಮವಲ್ಲಿ ಖಾದಿ—ಅಸ್ಪೃಶ್ಯತಾ ನಿವಾರಣೆ—ಸ್ತ್ರೀಸ್ವಾತಂತ್ರ್ಯ—ಹಳ್ಳಿಗಳ ಪುನರುಜ್ಜೀವನ—ಶಿಸ್ತು—ಸಂಘಟನೆ ಈ ವಿಷಯಗಳಿಗೆ ನೇಲಿನ ನುತ್ತು ಮಹತ್ತ್ವದ ಸ್ಥಾನವಿದೆ. ಒಂದೊಂದು ಚಳವಳದಿಂದ ಈ ವಿಷಯಗಳಲ್ಲಿ ಅಲ್ಪಾಲ್ಪ ಪ್ರಗತಿ ಆಗಿಯೆ ಆಗಿದೆ. ಆದ್ದರಿಂದ ಯಾವ ಚಳವಳವೂ ಅಯಶಸ್ವಿಯಾಗಿಲ್ಲ ಎಂದು ಮಹಾತ್ಮರೂ ಅವರನ್ನರಿತ ಮುಕ್ತರವರೂ ಧೈರ್ಯದಿಂದ ಹೇಳುವರು. ಚಳವಳದ ಸ್ಥೂಲೋದ್ದೇಶವು ಸ್ವಾತಂತ್ರ್ಯ ಸಂಪಾದನೆಯಾದರೂ, ಅದರ ಮೂಲೋದ್ದೇಶವು ಸ್ವಾತಂತ್ರ್ಯದ ಅರ್ಹತೆಯನ್ನೆ ಪಡೆಯುವುದು. ಮೂಲೋದ್ದೇಶವೆ ಮುಖ್ಯವಾದ್ದರಿಂದ ಚೌರಿಚೌರಾದಂತಹ ಶಿಸ್ತು ಭಂಗವಾದಾಗ ಧೈರ್ಯದಿಂದ ಸ್ಥೂಲೋದ್ದೇಶವನ್ನು ಬಿಟ್ಟುಕೊಟ್ಟಿದ್ದಾರೆ ಮಹಾತ್ಮರು. ಮೂಲೋದ್ದೇಶವೆ ಮುಖ್ಯವಾದ್ದರಿಂದ, ೧೯೨೦ ರಲ್ಲಿ ಖಿಲಾಫತ್ ಸ್ಪಷ್ಟೆಯ ಮಾರ್ಗವಾಗಿ ಮುಸಲ್ಮಾನರನ್ನು ಒಮ್ಮತವಾಗುವಂತೆ ಕಾಂಗ್ರೆಸಿನಲ್ಲಿ ಸೇರಿಸಿಕೊಂಡರು. ಈಗಲೂ ಮೂಲೋದ್ದೇಶವೆ ಮುಖ್ಯವಾದ್ದರಿಂದ, ಇಂದು ಪಾಕಿಸ್ತಾನವನ್ನು ತತ್ತ್ವತಃ ಒಪ್ಪಿಕೊಂಡರು. ಅಂದಿನಿಂದ ಇಂದಿಗೂ ಮೂಲೋದ್ದೇಶವೆ ಮುಖ್ಯವಾಗಿ ಉಳಿದುದರಿಂದ, ಬರಿಯ ಬಾಹ್ಯಚಿಹ್ನಗಳಿಂದ ಮಹಾತ್ಮರಲ್ಲಿ ವಿಸಂಗತತನವನ್ನು ಕಾಣುವುದು ಶುದ್ಧ ತಪ್ಪು.

ಕಾಂಗ್ರೆಸಿನ ಕಾರ್ಯರಂಗ

ಕಳೆದ ೩೫ ವರ್ಷಗಳ ಕಾಂಗ್ರೆಸಿನ ಇತಿಹಾಸವನ್ನು ನೋಡಿದರೆ ಮಹಾತ್ಮರ ರಾಜಕೀಯ ತತ್ತ್ವಗಳ ಪ್ರಭಾವವು ಆ ಸಂಸ್ಥೆಯಲ್ಲಿ ರೂಪುಗೊಂಡು ಕಾಣುತ್ತಿದೆ. ಪ್ರಾರಂಭದಲ್ಲಿ ಕಾಂಗ್ರೆಸಿನ ಧ್ಯೇಯವು 'ಸ್ವರಾಜ್ಯ' ಎಂದು. ಆ ಶಬ್ದವನ್ನು ಕಾಂಗ್ರೆಸ್ಸಿನ ಘಟನೆಯಲ್ಲಿ ಮಹಾತ್ಮರು ಸೇರಿಸಿದರು. ೧೯೨೦ ಕ್ಕೆ ಮುಂಚಿತವಾಗಿ ಕಾಂಗ್ರೆಸಿನಲ್ಲಿ ಉಗ್ರವಾದಿಗಳು ಸೇರಿಕೊಂಡಿದ್ದರು. ಅವರಿಗೆ ದೇಶದ ಸ್ವಾತಂತ್ರ್ಯ ಒಂದೇ ಮುಖ್ಯವಾಗಿದ್ದಿತು. ಬ್ರಿಟಿಶರಿಗಾಗಿ ಅಷ್ಟೊಂದು ಆದರವಿದ್ದಿರಲಿಲ್ಲ, ಇಲ್ಲವೆ ಇದ್ದುದನ್ನು ಅವಶ್ಯ ಕಂಡರೆ ಬಿಟ್ಟುಕೊಡಲು ಅವರು ಸಿದ್ಧರಿದ್ದರು. ಮಹಾತ್ಮರ ಮನೋವೃತ್ತಿ ಆ ತರಹದ್ದಾಗಿರಲಿಲ್ಲ. ಆದಕಾಗಿ ಅವರು ಬ್ರಿಟಿಶರ ಸಂಬಂಧದ ಬಗ್ಗೆ ಸಂದಿಗ್ಧವಾದ 'ಸ್ವರಾಜ್ಯ' ಎಂಬ ಭಾರತೀಯ ಶಬ್ದವನ್ನೇ ಘಟನೆಯ ಇಂಗ್ಲಿಷ್ ವಾಕ್ಯದಲ್ಲಿ ಸೇರಿಸಿದರು. ೬—೭ ವರುಷಗಳ ವರೆಗೆ ಯಾವ ತೊಂದರೆಯೂ ಇದ್ದಿರಲಿಲ್ಲ. ಆದರೆ ಅದೇ ಅವಧಿಯೊಳಗೆ ತರುಣರದೊಂದು ವೃಷ್ಟಿಕೋಣದಲ್ಲಿ ಕಾಂಗ್ರೆಸು ಸಿಕ್ಕಿಕೊಂಡಿತು. ಇವರು ಹಿಂದಿನ ಇತಿಹಾಸಕ್ಕಿಂತ ಇಂದಿನ ಘಟನೆಗಳ ಬಗ್ಗೆ ಹೆಚ್ಚಾದ ಅಭಿಮಾನವನ್ನೂ ಆತ್ಮೀಯತೆಯನ್ನೂ ತಾಳಿದವರು. ಸ್ವಾತಂತ್ರ್ಯದಿಂದ ಸುಖದ ಮಾರ್ಗವನ್ನು ಕಂಡ ಇಂದಿನ ನೇತಾರಗಳನ್ನು ಅರಿತವರು, ಜಲ್ಲಿ ಸಂಚರಿಸಿ ಸ್ಫೂರ್ತಿಯನ್ನು ತಂದವರು. ಈ ತರುಣರ ಮುಂದಾಳು ಪಂಡಿತ ಜವಾಹರರು. ಇವರು ಕಾಂಗ್ರೆಸಿನ ಧ್ಯೇಯಕ್ಕಾಗಿ ಅಸಂತುಷ್ಟಿಯನ್ನು ವ್ಯಕ್ತಪಡಿಸಿ, ಹೋರಾಡಿ, ೧೯೩೨ರಲ್ಲಿ ಮದ್ರಾಸಿನಲ್ಲಿ ಕಾಂಗ್ರೆಸು ಸೇರಿದಾಗ, ಘಟನೆಯಲ್ಲಿ 'ಸ್ವರಾಜ್ಯ'ದ ಬದಲು ಪೂರ್ಣಸ್ವರಾಜ್ಯ, Complete Independence (ಸಂಪೂರ್ಣ ಸ್ವಾತಂತ್ರ್ಯ) ಎಂಬ ಶಬ್ದಗಳನ್ನು ಸೇರಿಸಿದರು. ಇಷ್ಟೇ ಅಲ್ಲದೆ ಸ್ವಾತಂತ್ರ್ಯ ಸಂಘ (Independence League) ಎಂಬುವರ ಮುಖಾಂತರವಾಗಿ ತಮ್ಮ ಧ್ಯೇಯದ ಪ್ರಚಾರವನ್ನೂ ಮಾಡತೊಡಗಿದರು. ಅನುವರೆಗೆ ೨೬ ವರ್ಷ ಕಾಂಗ್ರೆಸಿನಿಂದ ಅಲಿಪ್ತರಾಗಿದ್ದ ಮಹಾತ್ಮರು, ಮುಂದಿನ ವರ್ಷ (೧೯೩೪) ಕಲಕತ್ತೆಯಲ್ಲಿ ನೇರಿದ ಅಧಿವೇಶನಕ್ಕೆ ಈ ಪ್ರಚಾರವನ್ನು ತಡೆದು ಹಿಡಿಯುವಪೇಕ್ಷೆಗಾಗಿಯೆ ಬಂದರೆಂದು ನಿಸ್ಸಂದೇಹವಾಗಿ ಹೇಳಬಹುದು. ಪಂಡಿತ ಜವಾಹರರಾದರೂ ಬ್ರಿಟಿಶರ ಸಾಮ್ರಾಜ್ಯಲಾಲಸೆಯ ವಿರೋಧಿಗಳು; ಬ್ರಿಟಿಶ ಜನರನ್ನು ಆರಿತನರಾದ್ದರಿಂದ, ಪ್ರೀತಿಸುವವರು. ಆದಕಾಗಿ ತರುಣ ಪಂಡಿತರನ್ನು ಒಲಿಸುವುದು ಮಹಾತ್ಮರಿಗೆ ಕಠಿನವಾಗಲಿಲ್ಲ. ಮರುವರ್ಷ (೧೯೩೫) ಈ ತರುಣರ ಅಧ್ಯಕ್ಷತೆಯಲ್ಲಿಯೆ ಲಾಹೋರದಲ್ಲಿ 'ಸ್ವಾತಂತ್ರ್ಯದ ಗೊತ್ತುವಳಿ' ಸ್ವೀಕೃತವಾದರೂ, ಅದು ತಾತ್ತ್ವಿಕವಾಗಿಯೆ ಉಳಿಯಿತು. ಅಂದಿನಿಂದ ಇಂದಿನವರೆಗೆ ಎರಡು ಅಸಹಕಾರದ ಚಳವಳಗಳು, ಎರಡು ಸಹಕಾರದ ಕೃತಿಗಳು (ಮುಂಡುನೇಜಿನ ಪಂಷತ್ತು, ತ್ರಿಮಂಡಲಗಳು) ಆಗಿ ಹೋಗಿವೆ. ಕೊನೆಗೆ ಅಚ್ಚಿನ ರಾಷ್ಟ್ರಗಳ ಬಗ್ಗೆ ಬ್ರಿಟಿಶರಿಗಿಂತ ಮುಂಚಿತವಾಗಿಯೆ ನಮ್ಮ ಕಾಂಗ್ರೆಸು ವಿರೋಧವನ್ನು ಸಾರಿತು!

ಬ್ರಿಟಿಶರ ಮತ್ತು ಭಾರತೀಯರ ಕರ್ತವ್ಯ

ಇನಿತು ಇವೆಲ್ಲ ಇತಿಹಾಸವನ್ನು ಇಷ್ಟೊಂದು ಸೂಕ್ಷ್ಮವಾಗಿ ವಿಭಜಿಸಿ ನಾವು ಯಾಕೆ ಹೇಳುತ್ತಿದ್ದೇನೆ? ಒಂದು, ಮಹಾತ್ಮರ ಇಂದಿನ ನೋರಣೆಯಲ್ಲಿ ಅವರ ತತ್ತ್ವಗಳ ವೃಷ್ಟಿಯಿಂದ ಯಾವ ವಿಸಂಗತತನವೂ ಇಲ್ಲವೆಂದು ತೋರಿಸಲು; ಇನ್ನೊಂದು ಅದಕ್ಕಿಂತ ಹೆಚ್ಚು ಮಹತ್ತ್ವದ್ದಾದ ಕಾರಣ:— ಅದೆಂದರೆ ಇಂದು ಭಾರತದಲ್ಲಿ

ಬ್ರಿಟಿಶರಿಗಾಗಿ ಅವರ ವಿಶ್ವಾಸಗಳುಳ್ಳ ಜನನಾಯಕರೆಂದರೆ ಮಹಾತ್ಮರೊಬ್ಬರೇ. ಭಾರತೀಯರ ಸ್ವಾತಂತ್ರ್ಯ ಕಲ್ಪನೆಯು ಪ್ರತೀಕವಾದ, ಅಖಿಲ ಭಾರತೀಯ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸು ಕೂಡ ಈ ಮಹಾತ್ಮರ ಪ್ರಭಾವದಲ್ಲಿ ಸಿಕ್ಕಿಕೊಂಡು, ಬ್ರಿಟಿಶರಿಗಾಗಿ ಅವರ-ವಿಶ್ವಾಸ-ಸಹಾನುಭೂತಿಗಳನ್ನಿಟ್ಟುಕೊಂಡಿದೆ. ಮಹಾತ್ಮರನ್ನು ಬಿಟ್ಟರೆ ವಿಸ್ತಾವ ಕಾಂಗ್ರೆಸ್ ಮುಂದಾಳಿಗೂ ಬ್ರಿಟಿಶ-ಬಂಧುತ್ವದ ಮನೋವೃತ್ತಿ ಸ್ಪಷ್ಟವಾದುದಿಲ್ಲ ಎಂದು ಹೇಳಬಹುದು. ಈ ಮಾತನ್ನು ಬ್ರಿಟಿಶರ ಮತ್ತು ನಮ್ಮವರ ಲಕ್ಷ್ಯಕ್ಕೆ ತಂದುಕೊಡುವ ಉದ್ದೇಶದಿಂದಲೆ ನಾವು ಈ ಚರ್ಚೆಯನ್ನು ಬೆಳೆಸಿದ್ದೇವೆ. ಮಹಾತ್ಮರ ಮನೋಭೂಮಿಕೆಯನ್ನು ನಾವು ಅರಿತುಕೊಂಡರೆ ಅವರ ಇಂದಿನ ಘೋರಣೆಯನ್ನು ವಿಸಂಗತವೆಂದು ಖಂಡಿಸುವ ನೂರ್ಖತನ ನಮಗೆ ತಪ್ಪುವುದು. ಅವರಂತೆಯೆ ಮಹಾತ್ಮರ ಮನೋಭೂಮಿಕೆಯನ್ನು ಬ್ರಿಟಿಶರು ಅರಿತುಕೊಂಡಿದೆ, ಸಂಧಾನದ ಇಂತಹ ಸುಳುಹಿಯನ್ನು ಅವರು ಕಳೆದುಕೊಳ್ಳಲಿಕ್ಕಿಲ್ಲ; ಸ್ವಾತಂತ್ರ್ಯಕ್ಕೆ ನಾವು ಅರ್ಹರಾಗೋಣ, ೫೫ ವರ್ಷಗಳ ಆತ್ಮಯಜ್ಞದಿಂದ ನಾಕಷ್ಟು ಅರ್ಹತೆ ನಮಗೆ ಬಂದಿದೆ- ಒಂದೇ ಎಂದರೆ ಜಾತೀಯ ವಿಷಯದಲ್ಲಿ ಮಾತ್ರ ಬಂದಿಲ್ಲ. ಅದನ್ನೊಂದನ್ನು ದೊರೆಕಿಸಿದರೆ ನಾಕು—ಎಂದು. ಅಸಾಧಾರಣ ಸಾಗರವನ್ನು ಈಜುವವನು ದಡ ಸನ್ನು ಕುರಿತೆ ಮಹಾತ್ಮರು ಕೊನೆಯ ಯತ್ನವನ್ನೆ ನಡೆಸಿದ್ದಾರೆ. ಫೆಬ್ರಿಯಾಗುವ ಪ್ರಯೋಗವಿದೆ, ಫೆಬ್ರಿಯಾವಲ್ಲಿ ಜಿನಾಸಾಹೇಬರನ್ನು ಸಮಾಧಾನಪಡಿಸುವ ಅತ್ಮವಿಶ್ವಾಸವಿದೆ ಇಂತೂ 'ಅರ್ಹತೆಯನ್ನು ಸಡೆಯಬೇಕು' ಎಂಬ ಅವರ ರಾಜಕೀಯ ಧ್ಯೇಯ ಯಶಸ್ವಿಯಾಗುವ ಚಿಪ್ಪಗಳಿವೆ. ಅವರ ಜೊತೆಗೆ, ಯುರಸ್ಪಿಯಾಮೊಡನೆ ಬ್ರಿಟಿಶರು ಎಮಿನಂತೆ ಸ್ವಾತಂತ್ರ್ಯವನ್ನು ಕೊಟ್ಟೇ ಕೊಡುವರೆಂಬ ಭರವಸೆಯೂ ಇದೆ. ಇಂತಹ ಮನೋವೃತ್ತಿಯಲ್ಲಿದ್ದಾಗ, 'ಯುದ್ಧ ಮುಗಿವವರೆಗೆ ಯಾವ ಕಾರಣಕ್ಕೂ ಸ್ವಾತಂತ್ರ್ಯದ ಪ್ರಶ್ನೆಯೆ ಇಲ್ಲ. ಎಂದು ವೈಸರಾಯರು ಸ್ಪಷ್ಟವಾಗಿ ಬರೆದರೆ ಅಮೆತಹ ಆಘಾತ 'ಕಸಿದುಕೊಳ್ಳದ ಹೊರತು ಇವರಿಂದ ಸ್ವಾತಂತ್ರ್ಯ ದೊರೆಯುವುದಿಲ್ಲ ಎಂಬ ನನ್ನ ವಿಚಾರ ಈಗ ಬಲಗೊಳ್ಳುತ್ತಲಿದೆ' ಎಂದು ಮಹಾತ್ಮರು ಹೇಳುವಾಗ, ಆ ಮಾತಿನ ಹಿಂದೆ ಎಂತಹ ಮನೋವ್ಯಥೆ, ಎಂತಹ ನಿರಾಸೆ, ಎಂತಹ ತತ್ತ್ವಘಾತದ ಕಳವಳ ಇದೆ ಎಂಬುದನ್ನು ನಾವು ತಿಳಿದುಕೊಳ್ಳೋಣ. ಒಂದು ಕಡೆ ಸಾಮ್ರಾಜ್ಯವಾದ, ಇನ್ನೊಂದೆಡೆ ಸ್ವಾತಂತ್ರ್ಯವಾದ: ಇವು ಪರಸ್ಪರ ವಿಘಾತಕವಾಗದಂತೆ ನೋಡುವ ಮಹಾತ್ಮರ ನೇತೃತ್ವ ಮಹತ್ತರವಲ್ಲ. ಸಡುವಿನ ಸೇತುವೆ ಕಳಚಿದರೆ, ಅದನ್ನವಲಂಬಿಸಿದ ಎರಡುಗಳ ಮೇಲೆ ಎಂತಹ ಪರಿಣಾಮವಾಗಬಹುದು? ಬ್ರಿಟಿಶರೂ ಭಾರತೀಯರೂ—ಇಬ್ಬರೂ—ತಮ್ಮ ಕರ್ತವ್ಯವನ್ನರಿತು ಮುಂದೆ ಬರಬೇಕಾದ ಸಮಯವಿದು.

ಜಿನಾಸಾಹೇಬರಿಗೂ ಜೋಕೆ!

ವೈಸರಾಯರು ಮಹಾತ್ಮಾ ಗಾಂಧಿಯವರಿಗೆ ತಾರೀಖು ೧೫—೪—೪೫ಳಳಕ್ಕೆ ಬರೆದ ಕಾಗದವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ನಾವೀ ಎಚ್ಚರವನ್ನು ಕೊಡುತ್ತಿದ್ದೇವೆ. ಯುದ್ಧಕಾಲದಲ್ಲಿ ಯಾವ ಸುಧಾರಣೆಯೂ ಶಕ್ಯವಿಲ್ಲವೆಂಬ ಮಾತನ್ನು ಪುನರುಚ್ಚರಿಸಿದ್ದಾರೆ ವೈಸರಾಯರು. ಆದರೆ ಯುದ್ಧ ಮುಗಿದ ಮೇಲೆ ಏನು? ಯುದ್ಧಕಾಲದಲ್ಲಿ ಅಮೇರಿಕೆಯಲ್ಲಿ ಚುನಾವಣೆ ನಡೆಯಬಹುದು. ಆಸ್ಟ್ರೇಲಿಯಾ-ಕಾನಡಾ ದೇಶಗಳ ಪಾರ್ಲಮೆಂಟುಗಳ ಸಾರ್ವತ್ರಿಕ ಚುನಾವಣೆಯೂ ನಡೆಯಬಹುದು. ಆದರೆ ನಮ್ಮ ದೇಶದಲ್ಲಿಯಷ್ಟೇ ನಡೆಯಲಾಗದೊ? ಅಥವಾ, ಯುದ್ಧಕಾಲದಲ್ಲಿ ಭಾರತೀಯರ ಮೇಲೆ ಅಧಿಕಾರವನ್ನೊಪ್ಪಿಸುವಷ್ಟು ವಿಶ್ವಾಸ ಬ್ರಿಟಿಶರಿಗಿಲ್ಲವೆಂದೊ? ಯುದ್ಧನಿರ್ವಹಣದ ಮತ್ತು ಸೈನ್ಯದ ಖಾತೆಗಳನ್ನು ಯುದ್ಧಕಾಲದಲ್ಲಿ ಏಂಗಡಿಸಲು ಶಕ್ಯವಿಲ್ಲವೆಂಬ ಮಾತು ನಿರರ್ಥಕವಾಗಿದೆ. ಇಡಿಯ ಜನತೆಯೆ ತನ್ನ ಪ್ರತಿನಿಧಿಗಳ ಮುಖಾಂತರವಾಗಿ ಯುದ್ಧನಿರ್ವಹಣದಲ್ಲಿ ಸಹಕರಿಸಿದರೆ, ಹಾಗೆ ಏಂಗಡಿಸುವುದರ ಅವಶ್ಯಕತೆ ಇಲ್ಲವೆ ಅನಾನುಕೂಲತೆಯೆ ಇಲ್ಲ. ಕೊನೆಗೆ ಅಲ್ಪ ಸಂಖ್ಯಾಕರ ಪ್ರಶ್ನೆ ಮಹತ್ತ್ವದ್ದೆಂದು ವೈಸರಾಯರು ಮಹಾತ್ಮರ ಲಕ್ಷ್ಯಕ್ಕೆ ತರಬಯಸಿದ್ದಾರೆ ಇದಂತೂ ಹುಣ್ಣಿನ ಮೇಲೆ ಬರೆ ಕೊಟ್ಟಂತೆ. 'ಅಲ್ಪ ಸಂಖ್ಯಾಕ' ಎಂಬ ಶಬ್ದಕ್ಕೆ ಯಾವ ಅರ್ಥವಿದೆ? ಬ್ರಿಟಿಶರು ಶಬ್ದಕೋಶದ ಅರ್ಥವನ್ನೆ ಪಾಠಮಾಡಿದಂತಿದೆ. ರಾಷ್ಟ್ರೀಯ ಜೀವನದ, ಆರ್ಥಿಕ ಸಂಘಟನೆಯ ದೃಷ್ಟಿಯಿಂದ ನೋಡಬೇಕೆ—ಇಲ್ಲವೆ ಕೇವಲ ಒಂದು ಹೆಸರಿನಿಂದ 'ಅಲ್ಪ ಸಂಖ್ಯಾಕ'ರೆನ್ನಿಸಿಕೊಂಡರೆ ಸಾಕೆ? ಹರಿಜನರು ಹಿಂದುಗಳು. ಅಲ್ಪಸಂಖ್ಯಾಕರಲ್ಲ. ಕ್ರೈಸ್ತಿಯನ್-ಪಾರ್ಸಿಗಳು ದೇಶದ ಭವಿತವ್ಯತೆಯನ್ನು ತಡೆಯುವಷ್ಟು ಸಂಖ್ಯೆಯವರಲ್ಲ. ಅಲ್ಪವೆಂದರೆ ನಾಲ್ಕೇ ಜನರ ಒಂದು ಸಂಸ್ಥೆ ಅಲ್ಪಸಂಖ್ಯಾಕವೆನ್ನಿಸಿ, ೪೦ ಕೋಟಿ ಜನರ ಸ್ವಾತಂತ್ರ್ಯೋದಯವನ್ನು ಮರೆ ಮಾಡಬಹುದಲ್ಲ? ವೈಸರಾಯರು ತೋರಿಸಿದ ಕಾರಣಗಳನ್ನು ನೋಡಿದರೆ ಬ್ರಿಟಿಶರಿಗೆ ಇನ್ನೊಬ್ಬರ ಸ್ವಾತಂತ್ರ್ಯದ ಬಗ್ಗೆ ಕಿಷ್ಟಿಂದು ಕಳಕಳಿ ಇಲ್ಲ ಎಂದೇ ನಿಷ್ಕರ್ಷ ಹೊರಡುವುದು. ಈ ಮಾತನ್ನು ಜಿನಾಸಾಹೇಬರು ಲಕ್ಷ್ಯದಲ್ಲಿಡಲಿ! ಪಾಕಿಸ್ತಾನ ಶಕ್ಯ ಎಂದೆನ್ನಿಸಬೇಕಾದರೂ ಮೊದಲು ಹಿಂದುಸ್ತಾನಕ್ಕೆ ಸ್ವಾತಂತ್ರ್ಯಬೇಕು. ಬ್ರಿಟಿಶರ ಇಂದಿನ ಘೋರಣೆಯನ್ನು ನೋಡಿದರೆ ಬ್ರಿಟಿಶ ಸತ್ತೆ ಇರುವವರೆಗೆ ಪಾಕಿಸ್ತಾನವು ಕೇವಲ ಜಿನಾಸಾಹೇಬರ ಉಸನ್ಯಾಸಕ್ಕೆ ಸ್ಫೂರ್ತಿಯಾಗಿ ಮಾತ್ರ ಉಳಿದೀತು.

೫೧ ವರ್ಷಗಳಿಂದ ಅನುಭವ ಪಟ್ಟ

ಕರ್ಕ ಮತ್ತು ಕಂಪನಿ

ಇವರ

ಜ್ವರದ ಗುಳಿಗೆಗಳು

ಬಾಟ್ಲಿಗೆ ೧—೪—೦

ಎಲ್ಲ ಪ್ರಕಾರದ ಜ್ವರಗಳ ಮೇಲೆ ದಿವ್ಯೌಷಧ

ವಿಳಾಸ:- ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ

ಗಿರಗಾಂವ, ಮುಂಬಯಿ

ಸಾದರ ಸ್ವೀಕಾರ

೬೧ **ಕಥಾವಳಿ** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಓಲೇಟಿ ವಿ. ಗುಪ್ತ ಬೆಂಗಳೂರುನಗರ ಅವರು. ಕ್ರೌ. ಅ. ೧೯೦ ಪುಟಗಳು. ಬೆಲೆ ೧–೪–೦

ಇಂತಹ ಕಾಗದದ ಬರಗಾಲದಲ್ಲಿಯೂ ಬಹಿರಂಗವನ್ನು ಇಷ್ಟೊಂದು ಅಲಂಕರಿಸಿಕೊಂಡು ಹೊರಟಿರುವ ಈ ಸಂಚಿಕೆಯನ್ನು ನೋಡಿದರೆ ಆಶ್ಚರ್ಯವೆನಿಸದಿರದು. ಉತ್ತಮ ಬೆಳ್ಳಾಗದದ ಮೇಲೆ ಸುಂದರವಾದ ಮುದ್ರಣ; ಮೂವರ್ಣದ ಚೆಲುವಿನ ಚಿತ್ರವುಳ್ಳ ಮಿಂಚು. ಕಾಗದದ ಮೇಲುಹೊದಿಕೆ. ಒಳಗೆ ಕೂಡ ಅಲ್ಲಲ್ಲಿ ಸಿನೇಮಾ ತಾರೆಯರ ಬಣ್ಣಬಣ್ಣದ ಚಿತ್ರಗಳು. ಸಂಚಿಕೆಯನ್ನು ನೋಡಿದವರು ಯಾರೂ ಒಂದೂ ಕಾಲು ರೂಪಾಯಿಕೊಟ್ಟು ಕೊಳ್ಳಲು ಬಯಸುವಂತಿದೆ ಇದರಬಾಹ್ಯಾಂಗ. ಬಾಹ್ಯಾಂಗದಂತೆಯೆ ಆಂತರಂಗದ ಸೌಂದರ್ಯದ ಕಡೆಗೂ ಸಂಪಾದಕರು ಸೂಕ್ಷ್ಮದೃಷ್ಟಿಯನ್ನಿರಿಸಿ ಕಾರ್ಯಮಾಡಿದ್ದರೆ, ಎಲ್ಲರೂ ಈ ಸಂಚಿಕೆಯನ್ನು ಮೆಚ್ಚಬಹುದಾಗಿದ್ದಿತು.

೬೨. **ಮುನ್ನೊಳ್ಳಿ ಗ್ರಾಮಸೇವಾಸಮಿತಿಯ** ೬ನೆಯ ವರ್ಷದ ವರದಿ. ಕಳುಹಿದವರು ಶ್ರೀಮಾನ್ ಬಿ. ವಿ ಪಾಟೀಲ, ಆನರರಿ ಸೆಕ್ರೆಟರಿ ಗ್ರಾಮಸೇವಾಸಮಿತಿ ಮುನ್ನೊಳ್ಳಿ. ಕ್ರೌ. ಅ. ೧೨ ಪುಟಗಳು.

ಈ ಸಂಸ್ಥೆ ಸುತ್ತುಮುತ್ತಣ ಕಾಲೂರು–ಕೆರುವಳ್ಳಿಗಳಲ್ಲಿ ಪ್ರಾಥಮಿಕಶಾಲೆ ಪ್ರೌಢ ಶಿಕ್ಷಣಶಾಲೆಗಳನ್ನು ಯಶಸ್ವಿಯಾಗಿ ನಡೆಯಿಸಿದೆಯಲ್ಲದೆ, ಬರಗಾಲದಲ್ಲಿ ಬಳಲುವ ಬಡಜನರಿಗೆ ನೆರವಾಗುವ ಕಾರ್ಯವನ್ನೂ ಜರುಗಿಸಿದೆ. ನಾಡಿನ ಹಿರಿಯೂರುಗಳಲ್ಲಿಯು ಜನರು ಈ ಸಂಸ್ಥೆಯ ಕಾರ್ಯಕರ್ತರಂತೆ ಆದರ್ಶವಾದಿಗಳಾಗಿ ಪ್ರಾಮಾಣಿಕತನದಿಂದ ಅಲ್ಲಲ್ಲಿ ಕಾರ್ಯಮಾಡಲುತೊಡಗಿದರೆ, ನಾಡಿಗರ ಅಡಚಣಿಗಳಿಷ್ಟೋ ಮರಿಯಾಗಬಹುದು.

೬೩. **ಜೀವನರಂಗ** (೪ ಏಕಾಂಕನಾಟಕಗಳ ಸಂಗ್ರಹ). ಬರೆದವರು 'ಶ್ರೀರಂಗ'ರು. ಶ್ರೀಮಾನ್ ಎನ್. ಕೆ. ಕುಲಕರ್ಣಿಯವರು ಬರೆದ ಟಿಪ್ಪಣಿಗಳು ಕೊನೆಯಲ್ಲಿವೆ. ಧಾರವಾಡದ 'ಸರಸ್ವತೀ ನಿಲಯ'ದ ಹಾದಿಯ ಹೊತ್ತಗೆ ಸಂ. ಕ್ರೌ. ಅ ೧೦೦ ಪುಟಗಳು.

೬೪. **ಕೀರ್ತಿಕಿರಣ** (ಮಾಸಪತ್ರಿಕೆಯ ದ್ವಿತೀಯ ವಾರ್ಷಿಕ ಸಂಚಿಕೆ). ಸಂಪಾದಕರು ಶ್ರೀ ಜಿ. ಎ. ನರಸಿಂಹಮೂರ್ತಿ ಬಿ ಎಸ್ ಸಿ. ಪ್ರಕಾಶಕರು ಆರ್. ಎನ್. ನ್ಯೂಜ್ ಏಜನ್ಸಿ ೬೬೫ ಚಿಕ್ಕಪೇಟೆ–ಬೆಂಗಳೂರುನಗರ. ಕ್ರೌ. ೧೭೦ ಪುಟಗಳು. ಬೆಲೆ ಹತ್ತು ಆಣೆ.

ಹಲವು ಜನ ಹೆಸರಾಂತ ಲೇಖಕರ ಕಥೆ-ಕವನ-ಪ್ರಬಂಧಗಳನ್ನೊಳಗೊಂಡಿರುವುದಲ್ಲದೆ, ಈ ಸಂಚಿಕೆಯ ಜಿಚ್ಚು, ಕಟ್ಟು ಮೊದಲಾದ ಬಹಿರಂಗವೂ ಆಕರ್ಷಕವಾಗಿದೆ. ಕೀರ್ತಿಕಿರಣದ ಭವ್ಯ ಆಶಾದಾಯಕವೆನಿಸುವಂತಿದೆ ಈ ಸಂಚಿಕೆಯ ಸಂಪಾದನೆ.

೬೫. **ಮುಂಬಯಿ ಬಿಲ್ಲವರ ಅಸೋಸಿಯೇಶನಿನ** ೧೭ನೆಯ (೧೯೪೩) ವಾರ್ಷಿಕ ವರದಿ ಗೌರವ ಪ್ರಧಾನ ಕಾರ್ಯದರ್ಶಿಗಳು ಶ್ರೀಮಾನ್ ಪಿ. ಎಸ್. ಸನಿಲರು.

ವರದಿಯ ವರ್ಷದಲ್ಲಿ ಈ ಸಂಸ್ಥೆ ಬಿಲ್ಲವರ ೧೨ ಜನ ವಿದ್ಯಾರ್ಥಿಗಳಿಗೆ ಒಟ್ಟು ೫೧೫ ರೂ. ಸಹಾಯವೇತನ ಕೊಟ್ಟಿದೆಯಲ್ಲದೆ, ನಿರ್ಗತಿಕರಾದ ಜಾತಿಬಾಂಧವರಿಗೆ ವಿಪತ್ಕಾಲದಲ್ಲಿ ಕೈಯಲ್ಲಾದಮಟ್ಟಿಗೆ ನೆರವನ್ನು ಕೊಟ್ಟಿದೆ. ಮುಂಬಯಿಯಲ್ಲಿ ತನ್ನದೇ ಆದ ಒಂದು ಪುಸ್ತಕಭಾಂಡಾರ ಮತ್ತು ವಾಚನಾಲಯವನ್ನು ನಡೆಯಿಸುತ್ತಲಿದೆ. ಮುಂಬಯಿ ಮೊಗವೀರ ಸಮಾಜದವರಂತೆಯೆ ಈ ಸಂಸ್ಥೆಯವರು ಜಾತಿಯ ಜನರಲ್ಲಿ ಸಂಘಟನೆ-ಸಂಸ್ಕಾರಗಳನ್ನುಂಟುಮಾಡಲು ಪ್ರಯತ್ನಿಸುತ್ತಿರುವುದು ಅಭಿನಂದನೀಯ ಸಂಗತಿ.

೬೬. **ಶಿರಹಟ್ಟಿಯ ಲೋಕಮಾನ್ಯ ವಾಚನಾಲಯದ** ೧೯೪೩–೪೪ನೆಯ ವರುಷದ ವರದಿಯು ಸಾರವು. ಕಾರ್ಯದರ್ಶಿಗಳು ಶ್ರೀಯ ತರುಣಾದ ನಾ. ಅ. ವೀರಪಾಂಡೆ ಮತ್ತು ವಿ ಫೋ. ಮಂಗಸೂಳಿ ಅವರು.

೬೭. **ಮುಂಬಯಿ ಮೊಗವೀರಯುವಕಸಂಘದ** ಸಪ್ತಮ ವಾರ್ಷಿಕ ವರದಿ. ಡೆ. ಅ. ೬೮ ಪುಟಗಳು.

ಈ ಸಂಘದ ಸದಸ್ಯರ ಕಾರ್ಯೋತ್ಸಾಹ ದೇಶೋನ್ನತಿಯ ವ್ಯಾಪಕದೃಷ್ಟಿ ಇವು ಆದರ್ಶವಾದುವುಗಳಾಗಿವೆ. ಈ ವರುಷ ಬಂಗಾಲದ ಬರಗಾಲನಿಧಿಗಾಗಿ ೪೬೪೨-೧೫-೬ ರೈಗಳನ್ನು ಸೇರಿಸಿ, ಈ ಸಂಸ್ಥೆಯವರು ಡಾ. ಶಾ. ಪ್ರ. ಮುಖರ್ಜಿಯವರಿಗೆ ಕಳುಹಿದ್ದಾರೆ; ಅಲ್ಲದೆ ಮುಂಬಯಿಯಲ್ಲಿ ಸರ್ವಸಂಪೂರ್ಣವಾದ ಕನ್ನಡ ಪುಸ್ತಕ ಭಾಂಡಾರವನ್ನು ಮಾಡುವ ಉದ್ದೇಶವನ್ನಿರಿಸಿಕೊಂಡು 'ಕರ್ನಾಟಕ ನಾಚನಾಲಯ ಮತ್ತು ಪುಸ್ತಕ ಭಾಂಡಾರ' ಎಂಬ ಹೆಸರಿನ ಶಾಖಾಸಂಸ್ಥೆಯೊಂದನ್ನು ಪ್ರಾರಂಭಿಸಿದ್ದಾರೆ. ವರದಿಯ ವರ್ಷದಲ್ಲಿ ೩೩೦ ೧-೩-೪ ಗಳನ್ನು ಮೂಲಧನಕ್ಕೆ ಸೇರಿಸಿದ್ದಾರೆ ಮುಂಬಯಿಗೆ ಬಂದು ನಿರುದ್ಯೋಗಿಗಳಾಗಿ ತಿರುಗುವ ಸಮಾಜಬಾಂಧವರ ಅನುಕೂಲತೆಗೆಂದು, ಔದ್ಯೋಗಿಕ ಶಾಖೆಯೊಂದನ್ನು ತೆರೆದಿಟ್ಟು, ಇದರ ಮುಖಾಂತರ ೧೫೫ ಜನ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಟ್ಟಿದ್ದಾರೆ. ಧರ್ಮಾರ್ಥ ಸ್ತ್ರೀಕ್ಷೌರಾಲಯ ಶಾಖೆಯೊಂದನ್ನು ನಡೆಯಿಸುತ್ತಿದ್ದು, ಇದರಲ್ಲಿ ೪೭ ವಿದ್ಯಾರ್ಥಿನಿಯರು ಶಿಕ್ಷಣ ಪಡೆದಿದ್ದಾರೆ. ಕಾರ್ಯಕ್ಕೆ ತಕ್ಕ ಹಾಗೆ ಸಮಾಜದ ಕೊಡುಗೈಯ ಬೆಂಬಲವೂ ಇದ್ದುದು ಸಂಸ್ಥೆಯ ಉನ್ನತಿಗೆ ಹೆಚ್ಚಿನ ಕಾರಣ.

೬೮ **ನಗೆನೋಟಗಳು** (೧೧ ಜೀವನ ಚಿತ್ರಗಳ ಸಂಗ್ರಹ). ಲೇಖಕರು ಶ್ರೀಮಾನ್ ಕೆ. ವಿಟ್ಠಲ ಶೆಣೈ ಬಿ ಎ., ಎಲ್ ಟಿ, ಉಡುಪಿಯ ಕಿರಿಯರ ಸ್ನಪಂಚನ 'ತೊನಲ್ನುಡಿ' ಗ್ರಂಥಮಾಲೆಯ ೨೮ನೆಯ ಪುಸ್ತಕ. ಕ್ರೌ. ಅ. ೧೦೪ ಪುಟಗಳು ಬೆಲೆ ೦–೧೫–೦.

೬೯. **ಅನ್ನದೇವರು ಮತ್ತು ಇತರ ಕಥೆಗಳು** (೧೪ ಸಣ್ಣ ಕತೆಗಳ ಸಂಗ್ರಹ). ಲೇಖಕರು ಶ್ರೀಮಾನ್ ಕಯ್ಯಾರ ಕಿಞ್ಞಣ್ಣರೈ ಅವರು. ತೊನಲ್ನುಡಿ ಗ್ರಂಥಮಾಲೆಯ ೨೯ನೆಯ ಪುಸ್ತಕ. ಕ್ರೌ ಅ ೧೧೪ ಪುಟಗಳು. ಬೆಲೆ ೦–೧೫ ೦.

ದಿ ಯುನಾಯಿಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- **ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!**
- ಮೊದಲನೆಯ ಸೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ನಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಮ್. ಗೋವರ್ಧನರಾವ, ಮ್ಯಾನೇಜರ್

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!
ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ **'ಮುಕುಲ'** ಉಪಯೋಗಿಸಿರಿ!

ತರುಣ-ತರುಣಿಯರು ಬರಿಯೆ ಕಣ್ಣು ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆ ಇದ್ದರೂ ಅದು ವ್ಯರ್ಥನೆನಿಸುವುದು.

ಮು ಕು ಲ
ದಿನದಿನವೂ ಉಪಯೋಗಿಸಿರಿ.

ಅದಕ್ಕಾಗಿಯೇ ..

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ತಯಾರಿಸಲಾದ "ಮುಕುಲ" ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಬಿಹಮ್ಮದನಗರ
ಕರ್ನಾಟಕ ಶಾಖೆ: ಸ್ಟೇಶನ್ ರೋಡು, ಹುಬ್ಬಳ್ಳಿ.



ಅಕ್ಟೋಬರ್ ೧೯೪೪

ಸಂಪುಟ ೭ * ಸಂಚಿಕೆ ೫

ಸಂಪಾದಕರು: ಬೆಟಗೇರಿ ಕೃಷ್ಣಶರ್ಮ

ಮುಖ್ಯ ವಿಷಯಗಳು

ಸಾಮಾಜಿಕನ ಸಂಚಲನಗಳು (ವಿಚಾರಪರಂಗ)
'ಸಾಮಾಜಿಕ' ೧೧೯
ಪ್ರಗತಿಶೀಲ ಸಾಹಿತ್ಯ (ವಿಚಾರ ವಿಮರ್ಶೆ)
ಪ್ರೊ. ಆರ್. ವಿ. ಜಾಗೀರ್ದಾರ, ಎಂ. ಎ., (ಲಂಡನ್) ೧೨೪
ನವವಧುವಿನ ಹಂಬಲ (ಕವಿತೆ)
ಶ್ರೀ. ಎಂ. ಜಿ. ಕುಲಕರ್ಣಿ, ಕಲ್ಯಾಣ ೧೩೬
ಚಕಮಕಿ (ಒಂದು ಸಂಸಾರ ಚಿತ್ರ)
ಶ್ರೀ. ಜೀಜ್ರೆ ಲಕ್ಷ್ಮಣರಾಯರು, ಧಾರವಾಡ ೧೩೯
ಪಾರ್ಥೆನಾನ್ (ಪ್ರಾಚೀನ ಶಿಲ್ಪ ಸವಿಚಯ)
ಶ್ರೀ. ಪ್ರ. ಬ. ನರೇಗಲ್ಲ, ಎಂ. ಎ., ಬಿ. ಟಿ., ಹುಬ್ಬಳ್ಳಿ ೧೪೨
"ಸಂಸ" (ಕವಿತೆ)
ಶ್ರೀ. ಕೆ. ಅಕ್ಷತ್ತ ನಾರಾಯಣರಾವ್, ಮುಂಬೈ ೧೪೭
ಎರಡು ಚಿತ್ರಗಳು (ಒಂದು ಅನುಭವ)
ಶ್ರೀ. ಮಾನೋಳಕರ ಶ್ರೀಧರರಾಯರು, ಪುಣೆ ೧೫೦
ಸಂಧ್ಯಾಕಾಲ (ನಾಟ್ಯವಿಮರ್ಶೆ)
ಶ್ರೀ. ಅನುಪಮ ಗುರುರಾಜ, ಧಾರವಾಡ ೧೬೪
ಸಾಹಿತ್ಯವಿಹಾರ (ಸಾಮಯಿಕ ಟಿಪ್ಪಣಿಗಳು)
ಶ್ರೀ. ವಿಹಾರಿ ೧೬೯

ಜಾಹೀರಾತು

ಸಂಪಾದಕೀಯ, ಮುಂಗನ ಮುಖ್ಲಿನಾಥನ, ನಾಲ್ಕು ನಿಟ್ಟಿನ ನೋಟ

ಇತ್ಯಾದಿ.

ಶ್ರೀ ಆನಂದ

ಸಾದರ ಸ್ವೀಕಾರ

೭೦ **ಮುಂಬಯಿ ಕರ್ನಾಟಕ ಸಂಘದ ೧೧ನೆಯ ವರ್ಷದ** (೧೯೪೩-೪೪) ವರದಿ ಹಾಗೂ **ತಪಾಸಿಸಲ್ಪಟ್ಟ ಲೆಕ್ಕಪತ್ರಿಕೆಗಳು.** ಗೌ. ಕಾರ್ಯದರ್ಶಿಗಳು ಶ್ರೀಯುತರುಗಳಾದ ಹ. ವೆ. ಇಮಾರತಿ ಮತ್ತು ಟಿ. ಗೊ. ಜಾವೂರ ಅವರು.

ಮುಂಬಯಿಯ ಆಯಿಲ ಕನ್ನಡಿಗರ ಪ್ರೀತಿ-ವಿಶ್ವಾಸಗಳ ಆಶ್ರಯದಲ್ಲಿ ಬೆಳೆದು ಮುಂದುವರಿಯುತ್ತಿರುವ ಈ ಸಂಘವು ಈ ವರ್ಷದ ಕಾರ್ಯ-ಪ್ರಗತಿಯನ್ನು ನೋಡಿ, ಕನ್ನಡಿಗರೆಲ್ಲ ಆನಂದಪಡುವಂತಿದೆ. ವಾರ್ಷಿಕೋತ್ಸವ, ನಾಡಹಬ್ಬ, ಸ್ಪರ್ಧೆಗಳು, ಕೀರ್ತನ, ವ್ಯಾಖ್ಯಾನಗಳಲ್ಲದೆ ಈ ಸಂಸ್ಥೆಯು ವರ್ಷಂಪ್ರತಿ ವ್ಯಾಪಾರ ಮಾಡಿದ ಐದಾರು ಸಾವಿರ ರೂಪಾಯಿಗಳನ್ನು ಹೊರತಾಗಿ ಕೈಕೊಂಡು, ಆಯಿಲ ಕರ್ನಾಟಕದ ಬೇರೆ ಬೇರೆ ಪಂಡಿತರ ಪಾಂಡಿತ್ಯಪೂರ್ಣ ಉಪನ್ಯಾಸಗಳನ್ನು ಮುಂಬಯಿ ಕನ್ನಡಿಗರಿಗೆ ಮಾಡಿಕೊಟ್ಟಿರುವುದು. ಸಂಘದ ಸ್ವಂತ ಗೃಹನಿರ್ಮಾಣಕ್ಕೆ ಸೇರಿರುವ ವಾಚನಾಲಯ ಮತ್ತು ಗ್ರಂಥಸಂಗ್ರಹಾಲಯವು ಜನಪ್ರಿಯವಾಗಿ ಕಾರ್ಯನಡಾಯಿಸುತ್ತಿದೆ. ಸಂಘದ ಸ್ವತಂತ್ರಕಟ್ಟಡದ ಯೋಜನೆ ಕೈಕೊಂಡಿದ್ದು ಈಗಾಗಲೆ ಇಂತಾದಕ್ಕೆ ಮೀಸಲಿಟ್ಟು ನಿಧಿಯೂ ಸಂಗ್ರಹಿಸಿಕೊಂಡಿದೆ. ಶ್ರೀಮಾನ್ ಕೆ. ಎಚ್. ಕಟ್ಟಾರ ಅವರೊಬ್ಬರೆ ೫೦೦೦ ರೂ. ಕೊಟ್ಟಿದು ಅವರ ಕನ್ನಡದ ಪ್ರೀತಿಯನ್ನೂ ಔದಾರ್ಯವನ್ನೂ ವ್ಯಕ್ತಪಡಿಸುತ್ತದೆ. ಶಾಲಾಸಮಿತಿ, ಸಾಹಿತ್ಯಸಮಿತಿ, ಮಹಿಳಾಮಂಡಲಿ, ನಾಟ್ಯಕಲಾವಿನಿಗಳ ಬಳಗ ಮೊದಲಾದ ವಿವಿಧ ಉಪಸಮಿತಿಗಳನ್ನೊಳಗೊಂಡು ಈ ಸಂಸ್ಥೆ ಯಶಸ್ವಿಯಾಗಿ ಕಾರ್ಯನಡಾಯಿಸುತ್ತಿರುವುದು ಆಭಿನಂದನೀಯ ವಿಷಯ. ಪ್ರಾಂತದ ರಾಜಧಾನಿಯಲ್ಲಿರುವ ಈ ಕರ್ನಾಟಕ ಸಂಸ್ಥೆಯ, ಪ್ರಾಂತದ ಕೊರತೆಯನ್ನು ಕಳೆಯುವುದಕ್ಕೂ ಉನ್ನತಿಯನ್ನು ಪಡೆದುಕೊಳ್ಳುವುದಕ್ಕೂ ಕಾರಣವಾಗಲಿ.

೭೧ **ಶೈಲಿ** (ಸಾಹಿತ್ಯ ವಿಮರ್ಶಾತ್ಮಕ ಗ್ರಂಥ). ಬರೆದವರು ಶ್ರೀಮಾನ್ ಎಸ್. ವಿ. ರಂಗಣ್ಣ ಎಂ. ಎ.; ಪ್ರಕಾಶಕರು ಶ್ರೀ. ಕೆ. ಚಿದಂಬರಂ 'ಕಾವ್ಯಾಲಯ' ಮೈಸೂರು. ಕ್ರೌ. ಅ. ೧೫೦ ಪುಟ. ಬೆಲೆ ೧-೧೪ ೦.

೭೨ **ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ನಾಟಕಗಳು:** (೧೯೪೧ರ ದಿವಂಗತ ಇ. ಎ. ಭಾಸ್ಕರರಾಯರ ಜ್ಞಾಪಕ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಪ್ರಬಂಧ). ಲೇಖಕರು: ಶ್ರೀ. ಆರ್. ಎಸ್. ರಾಮರಾವ್ ಎಂ. ಎ., ೧. ತಿನೆಯ ರಸ್ತೆ, ಬಸವನಗುಡಿ-ಬೆಂಗಳೂರು ನಗರ. ಸುಬೋಧ ಪತ್ರಿಕೆಯಿಂದ ಮೇಲಚ್ಚು. ಫ್ಲೂಲ್ಸ್. ಕ್ಯಾ. ಅ. ೪೪ ಪುಟಗಳು.

೭೩ **ಪ್ರಗತಿಶೀಲ ಸಾಹಿತ್ಯ** (ಚರ್ಚಾತ್ಮಕ ಲೇಖನ ಸಂಗ್ರಹ) ವಿವಿಧ ಲೇಖಕರು ಬರೆದುವುಗಳನ್ನು ಶ್ರೀಮಾನ್ ಅ. ನ. ಕೃಷ್ಣರಾಯರು ಸಂಪಾದನೆ ಮಾಡಿದ್ದಾರೆ. ಪ್ರಕಾಶಕರು ಪ್ರಗತಿಶೀಲ ಲೇಖಕರ ಸಂಘ ಬೆಂಗಳೂರು ಮತ್ತು ಕರ್ನಾಟಕ ಸಾಹಿತ್ಯ ಭಾಂಡಾರ ಧಾರವಾಡ. ಕ್ರೌ. ಅ. ೩೭+೧೬೮ ಪುಟಗಳು. ಬೆಲೆ ೨ ೦-೦.

೭೪ **ಕೋಡುಬಳೆ** (ಶಿಶು ಸಾಹಿತ್ಯ). ಬರೆದವರು ಹುಲಿಮನೆ ಕಾಳೆ ಚಕ್ರಪಾಣಿ ಅವರು. ಪ್ರಕಾಶಕರು ಸಾಧನ ಪ್ರಕಟನಾಲಯ ಸಾಗರ-ಶಿವಮೊಗ್ಗಾ. ಫ್ಲೂ. ಕ್ಯಾ. ಅ. ೧೬ ಪುಟಗಳು. ಬೆಲೆ ೦-೨-೦

೭೫ **ಮುಂಗಾಲ್ ಪುಟಿಗೆ** (ಹರಟೆಗಳ ಸಂಗ್ರಹ.) ಶ್ರೀಮಾನ್ ಎನ್. ಕೆ. ಕುಲಕರ್ಣಿ ಎಂ. ಎ. ಬಿ. ಟಿ. ಅವರು ಬರೆದವರು. ಪ್ರಕಾಶಕರು ಶ್ರೀ. ಬ. ನಾ. ಜಾಗಲವಾಡಿ, ಸಾಧನ ಪ್ರೆಸ್, ಧಾರವಾಡ. ರೊಯಲ್ ೧೫೭ ಪುಟಗಳು; ಬೆಲೆ ೧-೧೩-೦.

೭೬ **ಶೂದ್ರಮುನಿ** (ಏಕಾಂಕ ನಾಟಕ) ಬರೆದವರು ಶ್ರೀಮಾನ್ ಸಿ. ಕೆ. ನಾಗರಾಜರಾವ್. ಪ್ರಕಾಶಕರು ಪ್ರಭಾತ್ ಏಜನ್ಸೀಸ್, ಬೆಂಗಳೂರುನಗರ. ಕ್ರೌ. ಅ. ೩೨ ಪುಟಗಳು. ಬೆಲೆ ೦-೬-೦

೭೭ **ಸಿಂಹಾವಲೋಕನ** (ಡಾಕ್ಟರ್ ಫೋಂಜೋ ಕೇಶವ ಕರ್ಕಿಯವರ ಇಂಗ್ಲಿಷ್ ಆತ್ಮಚರಿತ್ರೆಯ ಕನ್ನಡ ಭಾಷಾಂತರ) ಭಾಷಾಂತರಕಾರರು ಶ್ರೀಮಾನ್ ಎಜ್. ಯೋಗನರಸಿಂಹ ಎಂ. ಎ., ಬಿ. ಟಿ. ಮೈಸೂರು ಪ್ರಕಾಶಕರು 'ಸತ್ಯಶೋಧನ' ಪುಸ್ತಕ ಭಂಡಾರ, ಕೋಟೆ-ಬೆಂಗಳೂರು ನಗರ. ಕ್ರೌ. ಆ. ೨೧೬ ಪುಟಗಳು, ಬೆಲೆ ೧-೧೨-೦.

೭೮ **ರವೀಂದ್ರರ ಕಥೆಗಳು** (ಅನುವಾದಿತ ಕಥಾಸಂಗ್ರಹ) ಅನುವಾದಕರು ಶ್ರೀ. ಆ. ನಾರಾಯಣಸ್ವಾಮಿ ಬೆಂಗಳೂರು. 'ಸತ್ಯಶೋಧನ'ದವರ ಪ್ರಕಟನೆ. ಕ್ರೌ. ಅ. ೧೬೨ ಪುಟಗಳು. ಬೆಲೆ ೧-೦-೦.

೭೯ **ಬಣ್ಣದ ಚಿಟ್ಟೆ** (ಶಿಶು ಸಾಹಿತ್ಯ) ಬರೆದವರು ಟಿ. ಎಂ. ಆರ್. ಸ್ವಾಮಿ 'ಕನ್ನಡಿಗರ ಕಣಜ' ಬೆಂಗಳೂರು ನಗರ 'ಸತ್ಯಶೋಧನ'ದವರ ಸಚಿತ್ರ ಪ್ರಕಟನೆ. ಕ್ರೌ. ಅ. ೨೮ ಪುಟಗಳು; ಬೆಲೆ ೦—೪—೦.

೮೦ Hints on Electroculture(ವಿದ್ಯುಚ್ಚಿಕಿತ್ಸಾ ವಿಷಯಕ ಕಿರುಪೊತ್ತಿಗೆ)ಬರೆದವರು ಶ್ರೀಮಾನ್ ಎಚ್. ಜೆ. ಕೃಷ್ಣರಾವ್, ವಕೀಲರು ಮತ್ತು ಎಲೆಕ್ಟ್ರೊಕಲ್ಚರಿಸ್ಟ್, ಚಿತ್ರದುರ್ಗ. ಪುಸ್ತಕದ ಪ್ರತಿಗಳು ಬೇಕಾದವರು ಅಂಚೆಯ ವೆಚ್ಚ ಕಳುಹಿಸಿ ಲೇಖಕರಿಂದ ಪುಕ್ಕಟೆಯಾಗಿ ಪಡೆಯಬಹುದು. ಫ್ಲೂ. ಕ್ಯಾ. ಅ. ೬೨ ಪುಟಗಳು.

ಪುಸ್ತಕ ದೊರೆಯುವ ಸ್ಥಳ:—
ವಾಗ್ವಿಲಾಸ ಬುಕ್-ಡಿಪೊ, ಹುಬ್ಬಳ್ಳಿ

ಮುದ್ರಕರು:
ಶ್ರೀ. ಎನ್. ಎಸ್. ಬೆಂಗೇರಿ, ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು:
ಶ್ರೀ. ಎಂ. ಸ್ವಿ. ಮೆಳ್ಳಿಗಟ್ಟಿ, ಜಯಂತಿ ಕಾರ್ಯಾಲಯ, ಧಾರವಾಡ.



ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ

ಸಂಪುಟ ೭	೧೯ನೆಯ ಅಕ್ಟೋಬರ್ ೧೯೪೪	ಸಂಚಿಕೆ ೫

ಸಾಮಾಜಿಕನ ಸಂವಚನಗಳು

೧

'ಆಶೆಯುನಳಿ, ಆಶೆಯುನಳಿ!' ಎಂದು ಘೋಷಿಸಿಪ್ಪ ದೇಶಿಕ-ಶಿಖಾಮಣಿಗಳು ದೇಶದ ನಾಶಕ್ಕೆ ಕಾರಣರಪ್ಪರು ಕಾಣಿ ಭೋ! ಆಶೆಯೆ ಸಕಲ ಚೇತನದ ಮೂಲಸದ್ಧರ್ಮ ಕೇಳಿ ಭೋ! ಜಗದ ಜೀವಜಂಗುಳಿಯ ಮುಂದುವರಿತಕ್ಕೆ ಆಶೆಯೇ ಅಶುಪೇಗದ ಕುದುರೆ ಕಾಣಿ ಭೋ! ಆಶೆಯನೊಲ್ಲದವನಿಗೆ ಅರುಹಿನ ಬೆಳಕೇತಕ್ಕೆ, ಆಶೆಗೆ ಸಲ್ಲದವನಿಗೆ ಬಲುಹಿನ ಚಲವೇತಕ್ಕೆ? ಆಶೆಯುಳಿದವನಿಗೆ ಹೊನ್ನು ಹಣಗಳೆಲ್ಲಿಯವು, ಆಶೆಯುಳಿದವನಿಗೆ ಅನ್ನ-ಆರಿವೆ ಗಳೆಲ್ಲಿಯವು? ತಿಳಿವು-ಬಲುಹು-ಅನ್ನ-ಹೊನ್ನುಗಳಿರದ ಮಾನವ-ಜೀವಿಗೆ ಬದುಕಿನೊಳು ಹಂಬಲೇತರದು? ಅದರಿಂದಲೆ ಕಾಲರಾಯ ಕೆರಳಿ ಕೇಳುವ: 'ಆಶೆಯುನಳಿಯೆನ್ನುವ ಹೇಸಿ ಉಪದೇಶ! ನೀನೇತಕೆ ಜನಿಸಿದೆ, ಏತಕಾಗಿ ಜೀವಿಸುವೆ ಜಗದೊಳಗೆ?' ಎಂದು.

೨

ನೋಡುವ ಶಕ್ತಿಯನು ಕಂಗಳಿಗೆ ಕೊಟ್ಟುದು ಆಶೆ; ಕೇಳುವ ಸ್ವಭಾವವನು ಕಿವಿಗಳಿಗೆ ಕೊಟ್ಟುದು ಆಶೆ! ಮೂಗು ಮೂಸುವುದನರಿತುದು ಆಶೆಯ ನೆರವಿನಿಂದ; ನಾಲಗೆ ಸವಿಯುಲು ಕಲಿತುದು ಆಶೆಯ ಅಸರದಿಂದ! ಪ್ಪನಿ ಅಕ್ಷರಗಳಾದುದು ಆಶೆಯ ಕಾರಣದಿಂದ; ಅಕ್ಷರಮಾಲೆ ಅರ್ಥತುಂಬಿಕೊಂಡುದು ಆಶೆಯ ಆಜ್ಞೆಯಿಂದ! ಬುದ್ಧಿ ಒಳಿತು-ಕೆಡುಕು ವಿಮರ್ಶಿಸುವುದು ಆಶೆಯ ನೂತನ್ನು ಕೇಳಿ; ಹೃದಯ ಕೀಳು-ಮೇಲು ಭಾವಿಸುವುದು ಆಶೆಯಪ್ಪಣೆಯನ್ನು ತಾಳಿ! ಆಶೆಯೊಂದನಳಿಗರೆ ಕಣ್ಣಿದ್ದರೂ ಕುರುಡ, ಕಿವಿಯಿದ್ದರೂ ಕಿವುಡ ಕೇಳಯ್ಯಾ! ಆಶೆಯೊಂದನುಳಿದರೆ ಬುದ್ಧಿಯಿದ್ದರೂ ಎಗ್ಗ, ಭಾವನೆಗಳಿದ್ದರೂ ಕಗ್ಗ ಕಾಣು ತಂಡ! ಆಶೆಯ ರೆಕ್ಕೆಯ ಬಲುಹೊಂದಿದ್ದರೆ, ಚೇತನದ ಚೆಲ್ವಕ್ಕಿ ಗುರಿಯ ಗಗನವನಡರಲು ತಡೆಯೆ ಇರದೆಂದೊರೆವ ನನ್ನ ತತ್ತ್ವಜ್ಞಾನಿ ಕಾಲರಾಯ!

೩

ಆಶೆಯೇ ರೂಢಿಯಲಿ ನೂಡಿಸಿತ್ತು ನೋಡಾ ವೇದೋಪನಿಷತ್ತು, ಬೈಬಲ್-ಕುರಾಣಂಗಳನು; ಆಶೆಯೇ ನಾಡಿನಲಿ ಹಾಡಿಸಿತ್ತು ನೋಡಾ ರಾಮಾಯಣ, ಮಹಾಭಾರತ, ಇಲಿಯಡ್ ಮಹಾಪುರಾಣಂಗಳನು! ಆಯ್ಯಾ ಆಶೆಯೇ ಹಡೆಯಿತ್ತು ದೇಶ-ದೇಶಂಗಳಲಿ ಪ್ರಕಾಶಿಸಿದ ಪ್ರವಾದಿಗಳನು; ಆಶೆಯೇ ಹಡೆಯಿತ್ತು ರಸಲೋಕದ ಅರಸರಾದ ಕಾಲಿದಾಸ-ಪಂಪ-ಶೆಕ್ಸ್‌ಪಿಯರ್ ಮಹಾಕವಿಗಳನು! ಆಶೆಯ ಕೂಸುಗಳೇ ಕಾಣಾ ಬೆಳ್ಳೊಳದ ಗೊಮ್ಮಟೀಶ, ಹಳೆಯ ಬೀಡ ಹೊಯ್ಸಳೇಶ! ಆಶೆಯ ಕೈಚಳಕನೆ ಬೇಲೂರ ಶಿಲಾಶಿಲ್ಪ, ಆಶೆಯ ಕೈವಾಡವೆ ವಿಜಯಪುರದ ಗೋಳಗುಮ್ಮಟ ಕೇಳು ತಂದೆ! ಅಗ್ರಾನಗರದ ಸೊಬಗಿನ ಬೀಡು—ತಾಜಮಹಲು—ಆಶೆಯ ಮಾಟದ ಮೋಡಿ ಕಾಣಯ್ಯಾ! ಆಶೆಯೊಂದನಳಿದರೆ ಅವನಿಯ ಆಂದ-ಚೆಂದಗಳೆ ಅಳಿವುವೆಂದು ಸಾರುವ ನಮ್ಮ ಆಶಾವಾದಿ ಕಾಲರಾಯ!

೪

ಜೀವಕುಲದ ಜೀವ-ಜೀವಾಳವೇ ಆಶೆಯೆಂಬುದನರಿಯಿರೆ! ತಾಯ ಬಸಿರ ಬಯಕೆಯೊಳೆ ಜೀವದ ಸ್ವಭಾವಧರ್ಮ ಕಾಂಬುದನು ಕಾಣಿರೆ! ಅಯ್ಯಾ, ಬೀಜ-ಬೀಜದೊಳು ಹುದುಗಿಹುದು ಮೊಳೆತು ತಳಿರುವಾಶೆ; ತಳಿರು-ತಳಿರಲಿಯೂ ತುಂಬಿನಿಂದಿಹುದು ಮೊಗ್ಗೆಯ ಪಡೆವಾಶೆ; ಮೊಗ್ಗೆ-ಮೊಗ್ಗೆಯನೂ ಹಿಗ್ಗಿಸುತಿಹುದು ಅರಳಾಗಬೇಕೆಂಬಾಶೆ; ಅರಳರಳನೂ ಬಾಯ ತೆರೆಯಿಸಿ ಬಾಡಿಸುವುದು ಫಲವ ಪಡೆವಾಶೆ; ಫಲ-ಫಲಗಳನೂ ಪರಿಪಕ್ವಗೊಳಿಸುತ್ತಿಹುದು ಕುಲವನನವರತವೂ ಕಾಯಬೇಕೆಂಬಾಶೆ! ಇಂತೀ ಆಶೆಯ ಚಕ್ರವ ಮೇಲೆಯೆ ತಿರುಗುತಿದೆ ವಿಶ್ವದ ಚೈತನ್ಯಚಕ್ರ! ಇದನು ಮರೆತು ನಡೆವವನೆ ಲೋಕಕಂಟಕನಾದ ನಕ್ರ! ಕಾಲರಾಯನೇಗಲೂ ಕೂಗಿ ಹೇಳುವ ನೀತಿಯಿದೊಂದು: 'ಆಶೆಯು ಒಳ್ಳೆದನಿನಿಂದ ನಡೆವವನೆ ಆಗುವನು ಶಕ್ರ—ಆಗುವನು ಶಕ್ರ!' ಎಂದು!

ಮಹಾತ್ಮಾ ಗಾಂಧಿಯವರ ೭೫ನೆಯ ವರ್ಧಂತಿ

ಇದೇ ತಿಂಗಳ ೨ನೆಯ ತಾರೀಖಿಗೆ ಸೇವಾಗ್ರಾಮದಲ್ಲಿ ಮಹಾತ್ಮರ ವರ್ಧಂತ್ಯುತ್ಸವವು ಅಖಿಲ ಭಾರತೀಯ ಭಾವನೆಯಿಂದ ಜರುಗಲಿದೆ. ಭಾರತೀಯರೆಲ್ಲ ತಮ್ಮ ಶ್ರೇಯಃಪ್ರಾರ್ಥನೆಗಳೊಂದಿಗೆ 'ಕಸ್ತೂರಬಾ' ನಿಧಿಯ ೭೫ ಲಕ್ಷ ರೂಪಾಯಿಗಳ ಮೊತ್ತವನ್ನೂ ಅವರಿಗೆ ಅರ್ಪಿಸಲಿದ್ದಾರೆ. ಸದ್ಯ ನಡೆದಿರುವ ಗಾಂಧೀ-ಜಿನ್ನಾ ಮಾತುಕತೆಯು ಮೂಲಕ, ಭಾರತೀಯರಿಗೆ—ಅಷ್ಟೇಕೆ ಪ್ರಪಂಚಕ್ಕೇ—ಗಾಂಧಿಯವರು ಇನ್ನಿಷ್ಟು ಆಕರ್ಷಕರಾಗಿರುವುದರಿಂದ, ಈ ಸಮಾರಂಭಕ್ಕೆ ಈಗ ಇನ್ನಿಷ್ಟು ಮಹತ್ವ ಬಂದುಬಿಟ್ಟಿದೆ. ಭಾರತದ ಸಂಸ್ಥಾನಿಕೆಯನ್ನೂ ಸಂಪೂರ್ಣ ಸ್ವಾತಂತ್ರ್ಯವನ್ನೂ ಹೃತ್ಪೂರ್ವಕ ಬಯಸುತ್ತಿರುವ ಜಯಂತಿಯೂ ಮಹಾತ್ಮರಿಗೆ ತನ್ನ ಶ್ರೇಯಃಪ್ರಾರ್ಥನೆಗಳನ್ನು ಸಲ್ಲಿಸುತ್ತದೆ; ಅವರಿಗೆ ಆಯುರಾರೋಗ್ಯಗಳು ಹೆಚ್ಚುವಂತೆ ಭಾರತಭಾಗ್ಯವಿಧಾತನನ್ನು ಬೇಡಿಕೊಳ್ಳುತ್ತದೆ.

ಇದು ಗಾಂಧಿಯವರ ಮಹಾವ್ಯಕ್ತಿತ್ವಕ್ಕೆ—ಭಾರತೀಯರ ದೃಷ್ಟಿಯಿಂದ—ನಮ್ಮ ಕಾರಣದಿಂದಲೆ, ಅವರು ಕೈಕೊಂಡಿರುವ ರಾಜಕಾರ್ಯ. ಅವರ ರಾಜಕಾರ್ಯವನ್ನು ಬಹುಜನರು ಮನಸಾರೆ ಒಪ್ಪುತ್ತಿಲ್ಲವಾದರೂ, ಸ್ವಾಧ್ಯಕ್ಷತ್ಯಪೂರ್ಣವಾದ ಅವರ ಪ್ರಾಮಾಣಿಕ ಕಾರ್ಯವನ್ನು ಕಂಡು, ಎಲ್ಲರೂ ಕುತೂಹಲವನ್ನೂ ಆದರವನ್ನೂ ಮಹಾತ್ಮರಿಗೆ ಸಲ್ಲಿಸುತ್ತಿದ್ದಾರೆ. ಮಹಾಭಾರತ'ದಲ್ಲಿಯ ಧರ್ಮರಾಜನ ರಾಜಕಾರ್ಯವನ್ನೇ ಇಂದು ನೆನಪಿಗೆ ತರುವುದು ಮಹಾತ್ಮರ ರಾಜಕಾರ್ಯ. ಧರ್ಮರಾಜನ ರಾಜಕಾರ್ಯ ತಮ್ಮಂದಿರಾದ ಭೀಮಾರ್ಜುನರಿಗೆ ಸುಸಮ್ಮತವಾಗಿರಲಿಲ್ಲ; ನಕುಲ-ಸಹದೇವರೂ ಒಪ್ಪುತ್ತಿರಲಿಲ್ಲ; ಕೈಹಿಡಿದ ಹೆಂಡತಿ ದ್ರೌಪದಿಗಂತೂ ಅದು ಕನಸಿನಲ್ಲಿಯೂ ಒಪ್ಪಿಗೆಯಾಗಿರಲಿಕ್ಕಿಲ್ಲ. 'ರಾಜ್ಯದ ಸ್ಥಾಪನಾಚಾರ್ಯ'ನಾದ—ರಾಜಕಾರ್ಯ ಕುಶಲನಾದ—ಶ್ರೀಕೃಷ್ಣನಿಗೂ ಧರ್ಮರಾಯನ ರಾಜಕಾರ್ಯ ಕಳ್ಳುದಾಗಿ ಕಂಡಿರಲಾರದು. ಆದರೂ ಎಲ್ಲರೂ ಅವನನ್ನು ಆದರದಿಂದ ಕಂಡು, ಸುಮ್ಮನೆ ಅವನನ್ನು ಅನುಸರಿಸಿ ನಡೆಯುತ್ತಿದ್ದರು. ಹಾಗೆಯೆ ಇಂದಿನ ಮಹಾತ್ಮರ 'ಸತ್ಯಾಗ್ರಹ' ಮೊದಲಾದ ಚಳವಳಿಗಳು ಉಗ್ರವಿರೋಧವೆಂದು ಪ್ರಾಮಾಣಿಕ (ಮಾಳ್ಪರಿಗೆ ಒಪ್ಪಿಗೆಯಿಲ್ಲ ಅಹಿಂಸೆಯ ಬಗೆಗಿರುವ ಅವರ ಜೋಕೆ, ತೀವ್ರರಾಜಕಾರಣಿಗಳಾದ ತರುಣರಿಗೆ ಸಮ್ಮತವಿಲ್ಲ. ಪ್ರಜಾಪ್ರಭುತ್ವದ ಅವರ ಉದಾತ್ತೋದ್ದೇಶಗಳು ಹಲವು ಜನ ಹಿಂದುಗಳಿಗೆ ಬೇಡ; ಭಾರತವನ್ನು ನಿಚ್ಚೇದಿಸಲಾಗದೆಂಬ ಅವರ ರಾಷ್ಟ್ರೀಯ ಭಾವನೆ ಕೆಲವು ಜನ ಮುಸಲ್ಮಾನರಿಗೆ ಬೇಡ. ಹರಿಜನೋದ್ಧಾರ ಮೊದಲಾದ ಸಮಾಜ ಸುಧಾರಕ ಚಳವಳಿಗಳು, ಸಾಂಪ್ರದಾಯಿಕರ ಮನ ನೋಯಿಸಿಸಿ; ಅಸ್ಪೃಶ್ಯಬುದ್ಧಿ—ಭಾವಿಕಚಳವಳಿ ಮುಂತಾದುವು ಸುಧಾರಕರ ಶಿರಸ್ಕಾರಕ್ಕೆ ಗುರಿಯಾಗಿವೆ. ದೇಶದಲ್ಲಿ ಯುಂತ್ರಮಹತ್ತ್ವ ಬೆಳೆಯಲಾಗದೆನ್ನುವ ಅವರ ಆಭಿಪ್ರಾಯ, ಆಧುನಿಕ ಅರ್ಥಸಾಧಕ ಸರಿಯಂತರಿಗೆ ಸಮ್ಮತವಿಲ್ಲ; ಸರಿಯಂತರ ಅಸ್ತಿತ್ವವನ್ನು ಅಪೇಕ್ಷಿಸುವ ಅವರ ರೀತಿ ಇಂದಿನ ಕೂಲಿಕಾರ ಮುಂದಾಳುಗಳಿಗೆ ಒಪ್ಪಿಗೆಯಿಲ್ಲ. ದೂರವೇಕೆ, ಕಾಂಗ್ರೆಸಿನಲ್ಲಿ ಇದ್ದುಕೊಂಡೂ ಮಹಾತ್ಮರ ಆಜ್ಞಾರ್ಯ ಆದೇಶಗಳಿಗೆ ಒಳಗಾಗಿ, ಒಳಗೆಳೆಗೆ ಕುದಿವ ಭೀಮಾರ್ಜುನರಿಗೇನು ಕೊರತೆಯಿಲ್ಲ. ಆದರೂ ಎಲ್ಲರೂ ಇಂದು ಮಹಾತ್ಮರಿಗೆ ಶ್ರೇಮದ—ಆದರದ—ಕಾಣಿಕೆಗಳನ್ನು ಸಲ್ಲಿಸುತ್ತಾರೆ; ಕುತೂಹಲದಿಂದ ಅವರ ಚಟುವಟಿಕೆಗಳನ್ನು ನೋಡುತ್ತಿರುತ್ತಾರೆ. ಇದೊಂದು ಆಶ್ಚರ್ಯದ ಸಂಗತಿ; ಒಡೆಯದೆ ಬಗೆಟ. ಮಹಾತ್ಮರ ಮಹಾತ್ಮತ್ವದ ವೈಶಿಷ್ಟ್ಯವೇನಾದರೂ ಇದ್ದರೆ ಅದು ಇದೇ ಎಂದು ಹೇಳಬಹುದು. ೧೯೨೦ರಿಂದ ಇಲ್ಲಿಯವರೆಗೆ ಎರಡು ಪಟ್ಟಗಳಾದುವು; ಭಾರತವು ಮಹಾತ್ಮರ ವಿಚಾರಚ್ಛತ್ರದ ನೆರಳಲ್ಲಿಯೆ—ನಿಕಪ್ರಕಾರವಾಗಿ—ತನ್ನಯಾತ್ರೆಯನ್ನು ಮುಂದುವರಿಸುತ್ತಲಿದೆ. ಮಹಾತ್ಮರಷ್ಟು ಇನ್ನಾವ ಮುಂಮಾಳೂ ವಿರೋಧಗಳನ್ನು ಎದುರಿಸಿರಲಾರ; ಅದರಂತೆಯೆ ವಿರೋಧಗಳನ್ನು ಎದುರಿಸುತ್ತಲೆ ಇನ್ನೊಂದು ದೀರ್ಘಕಾಲ ಮುಂದಾಳಾಗಿ ಬಾಳಿರಲಾರ. ಮುಂದಿನ ಕಾಲದ ಜನಸಾಮಾನ್ಯಕ್ಕೆ ಇದೊಂದು ಹವಾಡವಾಗಿಯೂ ಕಂಡೀತು.

ಮಹಾತ್ಮರ ಈ ವೈಶಿಷ್ಟ್ಯ ಸಾಮಾನ್ಯರಿಗೆ ಒಡೆಯಲಾರದ ಒಗಟಾಗಿ ಕಂಡರೂ, ಸೂಕ್ಷ್ಮ ವಿಮರ್ಶಕರು ಅದರ ನೆಲೆಯನ್ನು ವಿಮರ್ಶಿಸಿ ಕಂಡು ಹಿಡಿಯಬಹುದು! ಮೊದಲನೆಯದಾಗಿ ಅವರು ಯಾವ ಸಂಕುಚಿತ ಅಭಿನಿವೇಶದ ಮಂಡಲದಲ್ಲಿ ಸಿಕ್ಕಿಕೊಳ್ಳದಿರುವುದು. ಎಂತಲೇ ಅವರು ಸ್ವತಂತ್ರ ವಿಚಾರದಿಂದ ತಾವು ಹೆಚ್ಚೆಯಿಡುತ್ತಾರೆ; ಬೇರೆಯವರಿಗೂ ಹಾಗೆ ಮಾಡಲು ಹೇಳುತ್ತಾರೆ. ಲೋಕದಲ್ಲಿ ಬಹುಜನರು ಯಾವುದಾದರೊಂದು ಅಭಿನಿವೇಶಕ್ಕೆ ಅಂಟಿಕೊಂಡೆ ಇರುವರು. ಅವರು ತಿರುಗುತ್ತಿರುವುದು ಅದರ ಬಂಧಚಕ್ರದ ಒಳಗಡೆ ಮಾತ್ರ. ನೋಡುತ್ತಿರುವುದೂ ಅದಷ್ಟೇ ಪ್ರದೇಶವನ್ನು. ತಮಗೆ ಕಾಣದಿರುವುದೆಲ್ಲ ಅವರಿಗೆ ಅಸತ್ಯ. ಆದಕ್ಕಾಗಿಯೆ ಮಹಾತ್ಮರ ವ್ಯಾಪಕದೃಷ್ಟಿಯ ದರ್ಶನ ಅಸತ್ಯವಾಗಿ ಕಾಣುವುದು; ಅದಶ್ಯವರು ವಿರೋಧವನ್ನು ಸೂಚಿಸತೊಡಗುವರು. ಆದರೆ ತಾವು ಕಂಡ ಮಂಡಲದ ಗುಣ-ದೋಷಗಳನ್ನು ತಮಗಿಂತಲೂ ಚೆನ್ನಾಗಿ ಕಂಡು ಚರ್ಚಿಸುವುದನ್ನು ನೋಡಿ, ಅವರಿಗೆ ಮಹಾತ್ಮರ ಬಗ್ಗೆ ಆಶ್ಚರ್ಯ. ಆದರ ಕೆಲವು ವೈಯಕ್ತಿಕ ಮಹತ್ತೆಯನ್ನಪೇಕ್ಷಿಸುವ ಹಟವಾದಿಗಳಿಗೆ ಗಾಂಧಿಯವರ ದರ್ಶನ ಸತ್ಯವೆಂದು ಒಳಗಣ್ಣಿಗೆ ಕಾಣುತ್ತಿದ್ದರೂ, ಒಪ್ಪಿದರೆ ತಮ್ಮ ಮಹತ್ತ್ವ ಕಡಿಮೆಯಾದೀತಲ್ಲ—ಎಂಬ ವಿಚಾರದಿಂದ, ತಮ್ಮ ತತ್ತ್ವಾಭಾಸವನ್ನು ಸುರಳಿ ಸುರಳಿ ಗಿಳಿಗಳಂತೆ ನುಡಿದು, ತಮ್ಮ ಸ್ಥಾನಬಲದ ಮೂಲಕ ಜನಸಾಮಾನ್ಯರನ್ನು ಮಂಕುಗೊಳಿಸುತ್ತಿರುವರು. ಅವರ ಒಳಗೊಳಗೆಯೆ ಮಹಾತ್ಮರ ಮಾತಿನ ಸತ್ಯತೆಯನ್ನೊಪ್ಪಿ, ಆದರೆ-ಕುತೂಹಲಗಳನ್ನವರಿಗೆ ಒಳಗೊಳಗೆಯೆ ಅರ್ಪಿಸುತ್ತಿರುವರು. ಮೈಗಳ್ಳರಾದ ಕೆಲವು ವಾಚಾಳಿಗಳಿಗೂ ಮಹಾತ್ಮರು ವಿರೋಧಿಗಳಾಗಿ ಕಾಣುವರು. ತ್ಯಾಗ, ಸೇವೆ, ಕಷ್ಟಸಹಿಷ್ಣುತೆ, ಕಾರ್ಯಸಾತತ್ಯಗಳನ್ನು ಅಪೇಕ್ಷಿಸುವ ಮಹಾತ್ಮರ ರಾಜಕಾರ್ಯ ಅವರಿಗೆ ಕಹಿಗೂಳಾಗಿ ಕಾಣುವುದು; ಆದರೆ ಕ್ರಿಯಾತ್ಮಕ ಚಳವಳಿಯ ಸತ್ವೆಲವು ಆಗಾಗ ಅನುಭವಿಸಲಿಕ್ಕೆ ಸಿಕ್ಕುವುದನ್ನು ಇವರು ಕಾಣುವರು; ಕೃತಘ್ನತಾ ಬುದ್ಧಿಯಿಂದ ಅದನ್ನು ಅನುಭವಿಸಲು ಮುಂದುವರಿಯುವರು. ಈಗಲೂ ಇಂತಹ ಮೈಗಳ್ಳರು ಮಹಾತ್ಮರನ್ನು ಮನಸಿಗೆ ಬಂದಂತೆ ಬೈಯುವರಾದರೂ, ಅವರ ಚಟುವಟಿಕೆಯತ್ತ ಕುತೂಹಲದ ಕಣ್ಣುಗಳನ್ನಿರಿಸಿ, ಸುಪ್ತಚಿತ್ತದಲ್ಲಿ ಅವರಿಗೆ ಆದರ-ವಿಶ್ವಾಸಗಳನ್ನು ಅರ್ಪಿಸುತ್ತಿರುವರು.

ಮಹಾತ್ಮರ ಇನ್ನೊಂದು ಜಾತಿಯ ವಿರೋಧಿಗಳೆಂದರೆ ಪರರಾಷ್ಟ್ರಗಳಲ್ಲಿ ಪೋಷಣೆ ಪಡೆದು ಬಿಸುಗಾಳಿಯನ್ನೆಬ್ಬಿಸಿದ ಕ್ರಾಂತಿಕಾರಕ ಚಟುವಟಿಕೆಗಳಿಗೆ ಸುಗುಳಾದ ಕೆಲವು ಕಲಿತ ತರುಣರ ತಂಡ. ಈ ತರುಣರಿಗೆ ವ್ಯವಹಾರದ ಅನುಭವ ಕಡಿಮೆ. ಭಾರತದ ಸರಿಸ್ಥಿತಿಯ ಸೂಕ್ಷ್ಮ ಅಭ್ಯಾಸವಿಲ್ಲ. ತಾವು ಎಂತಹ ವಾತಾವರಣದಲ್ಲಿದ್ದೇವೆಂಬುದರ ಕಲ್ಪನೆಯನ್ನೇ ಮಾಡಿರುವುದಿಲ್ಲ. ಎಂತಲೆ ಚಳಿನಾಡಿನ ರಸಿಯದವರು ತೊಡುವ ಉಣ್ಣೆಯ ಬಟ್ಟೆಯನ್ನು, ಬಿಸಿಲುನಾಡಿನ ಭಾರತೀಯರಿಗೆ ತೊಡಿಸಲು ಹವಣಿಸಿ ಕೂಗುತ್ತಿರುತ್ತಾರೆ. ವಾತಾವರಣ ವಿಜ್ಞಾನಿಗಳಾದ ಮಹಾತ್ಮರು 'ಇದು ಸರಿಯಲ್ಲ' ಎಂದು ಹೇಳಿದರೆ, ತಾರುಣ್ಯದ ಉತ್ಸಾಹವಿನುವ ಈ ತರುಣರು ಪೆಚ್ಚಿನ ವಿರೋಧದ ಹುಳ್ಚುಕೂಗನ್ನು ಎಬ್ಬಿಸಿಬಿಡುತ್ತಾರೆ.

(೧೩೨ನೆಯ ಪುಟದ ಅಡಿಯಲ್ಲಿ)



೧. ಸರಪಣಿಯ ಸ್ವಾತಂತ್ರ್ಯ

ಮುಂಬಯಿಯಲ್ಲಿ ಒಡೆಯರ ಸರಪಣಿ ಚೀಟಿ ಇಲ್ಲದ ನಾಯಿಗಳನ್ನು ಹಿಡಿದು ಹಾಕಿ ನಾಶಗೊಳಿಸಿದರೆಂದೂ, ಆಪ್ಪಣೆಚೀಟಿ ಇಲ್ಲದೆ ನಾಯಿಯನ್ನು ಇಡಕೊಡದೆಂದು ಹುಕುಂ ವಿಧಿಸಿದರೆಂದೂ ಕೇಳಿ-ಭಾರತೀಯ ತರುಣರೆಲ್ಲ ಹುಚ್ಚೆದ್ದು ಮುಂಗರಾಯನತ್ತ ಮೊರೆಯನ್ನಿಟ್ಟಿದ್ದಾರೆ. ಮುಂಬಯಿಯಂತಹ ನಗರದಲ್ಲಿ ಇಂತಹ ಯುಕುಮಿನ ಅನರ್ಥಪರಿಣಾಮ ಎಂತಾಗಬಹುದೆಂಬುದನ್ನರಿತಿದ್ದಾನೆ ಮುಂಗರಾಯ. ದೇಶದ ಎಲ್ಲ ಕಡೆಗಳಿಂದಲೂ ಹೊಟ್ಟೆ ಹೊರೆದು ಕೊಳ್ಳುವುದಕ್ಕಾಗಿ ಮುಂಬಯಿಗೆ ನುಗ್ಗುವರು 'ನನಜವಾನ'ರು. ಇವರೆಲ್ಲರೂ ಆಪ್ಪಣೆ ಚೀಟಿಯನ್ನೇ ಕಟ್ಟಿಕೊಂಡು ತಿರುಗಬೇಕೆಂಬುದು ಎಂತಹ ಘೋರ ಅನ್ಯಾಯ! ಇವೆಲ್ಲದೆ ನೋಕರಿಗಾಗಿಯೆ ಮುಳುಗಿದ ತರುಣರು, ಒಡೆಯರ ಸರಪಣಿಯ ಹಿಡಿತವಲ್ಲಿಯೆ ಅಲೆದಾಡಬೇಕೆಂದರೆ? ನಿಜ, ಇದೆಲ್ಲವನ್ನೂ ಮುಂಗರಾಯನು ಚೆನ್ನಾಗಿ ಅರಿತಿದ್ದಾನೆ; ಅಂತೇ ಮೊರೆಯಿಟ್ಟ ತರುಣರಿಗೆ ಅಭಯವಚನವನ್ನು ದಯಪಾಲಿಸುವ ಧೈರ್ಯ ದಿಂದಿದ್ದಾನೆ. ತರುಣರೆ, ತವಕಪಡಬೇಡಿರಿ; ತರುಣರೆ, ಕಂಡತಂಡಾಗಿರಿ; ತರುಣರೇ, ಸ್ವಾಭಿಮಾನದಿಂದ ನಿಮ್ಮ ಕಂದ ತುಂತುಂಬಿ ಬರಲಿ,- ಸರಪಣಿ ಸಾಲದಂತೆ. ಹೊಸ ಕಾಲ ಬಂದಿದೆ, ಅದನ್ನೂ ಊರಿರಿ; ಭವಿಷ್ಯತ್-ಕಾಲವನ್ನೂ ಗುರಿಯಾಗಿರಿಸಿರಿ; ಹೀಗೆ ಇವೆರಡು ಮುತ್ತು ದೇವರು ಮುಂಚಿತವಾಗಿಯೆ ಕೊಟ್ಟ ಎರಡು, ಅಂತೂ ನಾಲ್ಕು—ಕಾಲ್ಗಳಿಂದ ನಡೆಯುವಿರಾದರೆ, ಸರಪಣಿ ನಿಮಗೆ ಅನುಕೂಲವಾಗುವುದು, ಆಪ್ಪಣೆ ಚೀಟಿ ಎಂಬುದು ನಿಮ್ಮ ಕಂಠದಲ್ಲಿ ವಿಜಯಮಾಲೆಯಾಗುವುದು. ಆ ಮೇಲೆ ತಿರುಗಾಡಲು ಯಾರ ಅಡ್ಡಿ?

ಬೋಲೊ—
ಭಾರತಮಾತಾಕೀ ಜೈ
ತರುಣರ ತ್ರಾತಾಕೀ ಜೈ
ನಿರುದ್ಯೋಗ ನೇತಾಕೀ ಜೈ
ಸರಪಣಿಯಿಂದ ಎಳೆದೇ ಒಯ್!

\+ + + +

೨. ಪ್ರ-ಗ-ತಿ-ಚೀಲ ಸಾಹಿತ್ಯ

ಪ್ರಗತಿಶೀಲ ಸಾಹಿತ್ಯವೆಂದರೇನು? ಎಂದು ಅನೇಕ ಕನ್ನಡ 'ಬಾಲ'ಸಾಹಿತಿಗಳು ಬಾಲ. ಬಹಾದ್ದೂರ್' ಮುಂಗರಾಯನಲ್ಲಿ ಕ್ಲಿಷ್ಟ (ತಿಳಿದು ಕೊಳ್ಳುವ) ಮಂಡಳವನ್ನು ಕಳುಹಿಸಿಕೊಟ್ಟಿದ್ದಾರೆ. ಮುಂಗರಾಯನ 'ಮುರಗತಿ' ಸಾಹಿತ್ಯಮೀಮಾಂಸೆಯಿಂದ, ಆರ್ಥಾತ್, ಈ ತರುಣರ ಕಾವ್ಯಕಂದೀಲಿಗೆ ಬೆಳಕಿನ ಬತ್ತಿ ದೊರೆತಿಲ್ಲ. ಗಿಡದಿಂದ ಗಿಡಕೆ ಹಾರುವ ಮುರಗತಿಶೀಲ ಸಾಹಿತ್ಯದ ವೈಶಿಷ್ಟ್ಯವೆ ಪ್ರಗತಿಶೀಲ ಸಾಹಿತ್ಯದ ವೈಶಿಷ್ಟ್ಯ. ಅಥವಾ 'ಪ್ರಗತಿಶೀಲ' ಎಂಬ ಪದದ ಅರ್ಥವನ್ನೆ ನೋಡಬಹುದಲ್ಲ? ಪ್ರ-ಗತಿಶೀ-ಲ ಎಂದು ಅರ್ಥವನ್ನು ಹಚ್ಚಿದಲ್ಲಿ 'ಪ್ರಸಿದ್ಧವಾಗಿ ಗತಿಸಿ ಲಯ ಹೊಂದುವುದು' ಎಂಬ ತಾತ್ಪರ್ಯಾರ್ಥ ಹೊರಡುವುದು; ಇಲ್ಲವೆ 'ಪ್ರಜೆಗಳನ್ನು ಗತಿಗೆಡಿಸುವ ತಿರಸ್ಕಾರ ಸ್ವಭಾವ (ಶೀಲ) ದ್ದು!' ಇಲ್ಲವೆ 'ಪ್ರತ್ಯಕ್ಷವಿದ್ದುದನ್ನು ಗತಿಸುವ (ಹಾರಿಸುವ, ಮರೆಯಿಸುವ) ಶೀಲವುಳ್ಳದು' ಆಥವಾ 'ಪ್ರಸಿದ್ಧನೆನ್ನಿಸಿಕೊಳ್ಳುವ ಗತಿಯನ್ನು (ಹಾದಿಯನ್ನು)ಸಿಕ್ಕುವಂತೆ ಮಾಡುವುದು'—ಹೀಗೆ ಅನೇಕಾನೇಕ ಅರ್ಥಗಳು ಹೊರಡುವವೆಂಬೇ, ಪಾಪ! ತರುಣ ಸಾಹಿತಿಗಳು ನೋವು ಮಾಡಿಕೊಂಡ ಮುಂಗನಂತೆ ಮೈ ಕೆದರಿಕೊಳ್ಳುತ್ತಿದ್ದಾರೆ. ಇಂತಹರಿಗಾಗಿ, ಕನಿಕರ ಬುದ್ಧಿಯಿಂದ ಮುಂಗರಾಯನು ಈ ವಿಷಯದ ಮೇಲೆ ಸರ್ವಸುಲಭವಾಗುವಂತೆ ಕನ್ನಡ ಭಾಷ್ಯವನ್ನು ಬರೆಯಲುದ್ಯುಕ್ತಿಸಿದ್ದಾನೆ. ಆರ್ಥಾತ್, 'ಪ್ರಗತಿಶೀಲ ಸಾಹಿತ್ಯ' ಎಂಬ ಅನೇಕಾರ್ಥ ಸಂಸ್ಕೃತ ಪದವನ್ನು ಕನ್ನಡೀಕರಿಸುವಂಥಾತ್ತನಾಗಿದ್ದಾನೆ. ಆ ಕನ್ನಡೀಕರಣವು ಎಂತೆಂದರೆ:—

ಪ್ರಗತಿಶೀಲ ಸಾಹಿತ್ಯ (ಷ) = ಪ್ರ-ಗ-ತಿ- ಚೀಲ ಸಾಹಿತ್ಯ (ವ್ಯ); ಈ ಕನ್ನಡೀಕರಣವ ಅರ್ಥವೆಂದರೆ: ಪ್ರಚಾರಕ್ಕಾಗಿ ಗತಿಗೆಟ್ಟು ತಿರುಗುವವನ ಚೀಲ ದೊಳಗಿನ ಸಾಹಿತ್ಯ. ಇಂತೀ

ಪ್ರಗತಿಯಾದವರ ಸಾಹಿತ್ಯ!
ಚೀಲಕೆ ತುತ್ತಿನ ನ್ಯೆನೇಮ್ಯ॥

\+ + + +

೩. ಕೆರಗ್ರಹಣ

ಮದುವೆಯೆಂದರೆ ಕೈಯಲ್ಲಿ ಕೈ ಕೊಡುವುದು ಎಂದರೆ ಸನಾತನಭೂತಗಳ ಸಾಕ್ಷಿಯಾಗಿ ಕರ. ಗ್ರಹಣ—ಎಂಬ ರೂಢಿಯು ಮುಂಗಶಾಸ್ತ್ರದ ಪ್ರಚಾರದಿಂದ ಬದಲಾಗುತ್ತಿದೆ ಎಂದು ಸಾರಲು ಮುಂಗರಾಯನಿಗೆ ಕಂದ ತುಂಬಿ, ದನಿ ಸಾಲದಂತಾಗಿದೆ. ಕರಗ್ರಹಣದಲ್ಲಿ ಸನಾತನ ಸಂಪ್ರದಾಯಕ್ಕೆ ಅನುಸರಿಸಿ ನಭೂತಪರಿಕಲ್ಪನೆಯನ್ನಿಟ್ಟಿರುವು; ಆದರೆ ಈ ಮುಂಗಗುಂಗಿದಲ್ಲಿ ಪ್ರಜಾಪ್ರಭುತ್ವದ ಸಮಸ್ಯಾಶಕ್ತಿಯಾಮುನರಿಂದ, ಮದುವೆಯ ಕರ. ಗ್ರಹಣದಲ್ಲಿ ಪ್ರಜಾಸ್ವಭುತ್ವದ ಸಾಕ್ಷಿಯೂ ಇರುತ್ತದ್ದಾಗಿದೆ. ಎಂತೇ ಮದುವೆಯ ಕರಗ್ರಹಣದಲ್ಲಿ ನೊದಲ ಭಾಗವು ಪ್ರಜಾಸ್ವಭುತ್ವದ ಪ್ರತಿನಿಧಿಯಾದ ಸ್ಥಾನಿಕ ಸಂಸ್ಥೆಗೆಯೆ ಸಲ್ಲುವೇಕಾಗಿದೆ. ಈ ಮುಂಗ್ ಶಾಸ್ತ್ರದ ಮುಖಾಸೂತ್ರದ ಮರ್ಮವನ್ನರಿಯದ ಕೆಲ ತರುಣರು, ವಿಜಾಪುರ ನಗರಸಭೆಯು ವಿಧವೆ ಮುಂಗರಾಯನಿಗೆಯು ತಕಂರಾವನ್ನು ಕಂದಿದ್ದಾರೆ. 'ಮದುವೆಯು ಮೇಲೆ ಕರವನ್ನು ಹೇರಿ ನಮ್ಮ ನಗರಸಭೆಯವರು ಇಂದಿಲ್ಲ ನಾಳೆ ಸುತದಾರರಿಲ್ಲದ ಚುನಾವಣೆಯು ಏರ್ಪಾಡನ್ನು ಮಾಡಿಸಿದ್ದಾರೆ!' ಎಂದು ಬಬ್ಬಿನ ಮೊರು; 'ಮುಂದಿನ ವರುಷ ಸ್ಥಾಪಿತವಾಗಲಿರುವ ಕಾಲೇಜಿನ ತರುಣ-ತರುಣಿಯರಿಗಾಗಿ ಮುಂಜಾಗ್ರತೆ ಇದು' ಎಂದು ಇನ್ನೊಂದು ಮೊರು; 'ಕಾನುವನ್ನು ಸುಟ್ಟ ಶಿವನ ಚಂದ್ರಗ್ರಹಣದಂತೆ, ಅರ್ಧಶಿವನು ಕಾಮುನಿಗೆ ಕೊಟ್ಟ ಅರ್ಧ ಚಂದ್ರಗ್ರಹಣವಿದು' ಎಂದು ಮತ್ತೊಬ್ಬ—ಹೀಗೆ ನಾಳೆಗೆಟ್ಟು ನೂರಾರು ತರುಣರ ಕಾಗಿನ ಹಂಡಿವೆ ಮುಂಗರಾಯನ ಕಚೇರಿಯಲ್ಲಿ. ಇಂತಹರ ಅಜ್ಞಾನಕ್ಕಾಗಿ ನೊಂದು ಬೆಂದು ಕಳವಳಕ್ಕೀಡಾದ ಕವಿರಾಯನು, ಬೇರೆ ಯಾವ ಸಂತಸನನ್ನು ಕೊಡ ಬಲ್ಲನು? ಮುಂಗತನ ಬಿಟ್ಟುದಕ್ಕೆ ಮಾನಸನಿಗಿಂತ ಪ್ರಾಯಶ್ಚಿತ್ತ ಎನ್ನಬಹುದೇ? ಒಂದು ಕರವನ್ನು ನಗರಸಭೆಗೆ, ಇನ್ನೊಂದು ಕರವನ್ನು ವಧುವಿನಿಗೆ ನೀವಿ ಕಾಲ್ಗಳಿಗೆಯ ಬುದ್ಧಿ ಹೇಳಲು ಇದು ಉತ್ತೇಜನನೆನ್ನಬೇಕೆ? ಶಿಸ್ಯನೇಮಂ ಎಂದು ನನ್ನ 'ಧಾದಿ' ಮಾಡು ಎಂಬ ಅಜುನನಂತಾಗಿನೆ ಈ ಸಮಸ್ಯೆ.

\+ + + +

ಪ್ರಗತಿಶೀಲ ಸಾಹಿತ್ಯ *

(ವಿಚಾರ ವಿಮರ್ಶೆ)

ಬರೆದವರು: ಪ್ರೊಫೆಸರ್ ಆರ್. ಸ್ಪಿ. ಜಾಗಿರದಾರ

'ಪ್ರಗತಿಶೀಲ ಸಾಹಿತ್ಯ' ಎಂಬ ಹೆಸರು ಮೊತ್ತಮೊದಲು ನನಗೆ ೧೯೪೩ರ ಮೇ ತಿಂಗಳಲ್ಲಿ ಗೊತ್ತಾದುದು. ಆಗ ಮುಂಬಯಿಯಲ್ಲಿ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನವಿದ್ದಿತು. ಆ ಸಮ್ಮೇಳನದ ಬೇರೆ ಬೇರೆ ಭಾಷೆಗಳ ಅಧ್ಯಕ್ಷಮಾಲಿಕೆ (presidium) ಯಲ್ಲಿ ಕನ್ನಡದ ಪರವಾಗಿ ನಾನು ಅಧ್ಯಕ್ಷನಾಗುವ ಪ್ರಸಂಗ ಬಂದಿತು. ಈ 'ಪ್ರಗತಿಶೀಲ' ಎಂಬುದೇನೊ ಹೊಸ ಹುಚ್ಚು, ನನಗೆ ಅರಿಯದ ಹುಚ್ಚು, ಅಧ್ಯಕ್ಷಪದಕ್ಕೆ ನಾನೇಕೆ ಆಹುತಿಯಾನೆ—ಎಂಬ ಸಂಶಯ. ವೃತ್ತಿಯಿಂದಲೆ ಸಮ್ಮೇಳನದಲ್ಲಿ ಭಾಗವಹಿಸಿದೆ. ಆದರೆ ಮುಂದೆ ಎಲ್ಲ ಕಾರ್ಯಕ್ರಮವನ್ನು ನೋಡಲಾಗಿ 'ಇಂತಹ ಹುಚ್ಚು ನನಗೆ ಹೊಸತಲ್ಲ' ಎನ್ನಿಸಿತು. ಕನ್ನಡದ ಬರೆಹಗಾರನೆನ್ನಿಸಿಕೊಳ್ಳಬೇಕೆಂಬ ಆಕಾಂಕ್ಷೆ ಮೂಡಿದಾಗಿನಿಂದಲೂ ನಾನು 'ಸವ್ಯದ ನಮ್ಮ ಸಾಹಿತ್ಯವು ನಮ್ಮ ಜೀವನಕ್ಕೆ ಸಂಬಂಧಿಸಿಲ್ಲ' ಎಂಬ ವಾದವನ್ನೆಬ್ಬಿಸಿದವನಾದ್ದರಿಂದ, ಮುಂಬಯಿ ಸಮ್ಮೇಳನವು ನನಗೆ ಹೊಸತಾದ ಅನುಭವವಾಗಲಿಲ್ಲ. ಆದರೆ ಆದೇ ಸಮ್ಮೇಳನದಲ್ಲಿ ಕಂಡ ಬೇರೆ ಕೆಲವು ಅನುಭವಗಳಿಂದ ನನಗೆ ತೃಪ್ತಿಯಾಗಿತ್ತು. ಈಗ ಕನ್ನಡದಲ್ಲಿ ಪ್ರಕಟವಾದ 'ಪ್ರಗತಿಶೀಲ ಸಾಹಿತ್ಯ' ಎಂಬ ಗ್ರಂಥದಿಂದ ಆ ತೃಪ್ತಿ ಮತ್ತೆ ತಲೆ ಎತ್ತಿದೆ. ಆದಕಾಗಿ, ಆ ಸಂದರ್ಭವನ್ನನುಲಕ್ಷಿಸಿಯೆ, ನನ್ನ ಕೆಲವು ವಿಚಾರಗಳನ್ನು ಇಲ್ಲಿ ಬರೆಯುವವನಿದ್ದೇನೆ.

'ಬಂಡು' ಮಾನವ ಸಮಾಜದಲ್ಲಿ ಯಾವ ಕಾಲಕ್ಕೂ ಹೊಸತೆನಿಸಿಲ್ಲ. ಕಾಲಕಾಲಕ್ಕೆ ಅಯಾಕಾಲದ ರೂಢಿಗಳು ನಿರುಪಯುಕ್ತವಾದೊಡನೆ, ಇಲ್ಲವೆ ಸಮಾಜರಚನೆಯಾಗಲಿ ವಿಚಾರಧೋರಣೆಯಾಗಲಿ ಬೆಳೆದೊಡನೆ, ಬಂಡು ಸಹಜವಾಗಿಯೆ ತಲೆ ಎತ್ತಿದೆ. ಚಂಪೂಗ್ರಂಥಗಳ ಕಾಲಕ್ಕೆ ಪಟ್ಟಿದೀ ಗ್ರಂಥಗಳು ಪ್ರಗತಿಶೀಲವೆನ್ನಿಸಿಕೊಂಡಿದ್ದರೆ ಆಶ್ಚರ್ಯವಿಲ್ಲ; ವೀರಶೈವ ಮತಪ್ರಸಾರದ ಕಾವ್ಯಗಳು ಹೆಚ್ಚಾದಾಗ, ವೈಷ್ಣವಮತೀಯ ಕಾವ್ಯಗಳು ಪ್ರಗತಿಶೀಲವೆನ್ನಿಸಿಕೊಂಡಿದ್ದರೂ ಆಶ್ಚರ್ಯದ ಮಾತಲ್ಲ. ಇಂದಿನ ಪ್ರಗತಿಶೀಲರೆಂದು ಹೇಳಿಕೊಳ್ಳುವ ನಾವು ಈ ಮಾತನ್ನು ಲಕ್ಷ್ಯದಲ್ಲಿಡಬೇಕು. 'ಯಾರೂ ಎಂದೂ ಮಾಡದ್ದನ್ನು ನಾವು ಮಾಡುತ್ತಲಿದ್ದೇನೆ' ಎಂಬ ತಪ್ಪು ಕಲ್ಪನೆಯಿಂದ ನಾವು ಮುಂಬರಿದರೆ, ನಮ್ಮ ಕಾರ್ಯಕ್ಕೆ ತಡೆಯುಂಟಾಗಬಹುದು.

ಅದರಂತೆಯೆ, ಇನ್ನೊಂದು ಮಾತು: ಹಳೆಯದನ್ನು (ಅದರ ದೋಷಗಳಿಗಾಗಿ) ಟೀಕಿಸುವ ಹೊಸಬನ ಹೊಣೆಯು ದೊಡ್ಡದಾಗಿದೆ. ಯಾವ ದೋಷಗಳಿಗಾಗಿ ಹಳಬರನ್ನು ಟೀಕಿಸುವೆವೊ ಅಂತಹ ದೋಷಗಳೆ ನಮ್ಮಲ್ಲಿದ್ದರೆ ನಮ್ಮ ಟೀಕೆಗೆ ಬಲ ಬಾರದು. ನಮ್ಮ ಆಚಾರ ಹಾಗೆ ಪ್ರಾಮಾಣಿಕವಾಗಿರಬೇಕಾದರೆ, ನಮ್ಮ ವಿಚಾರಗಳು ಮುಂಚೆ ನಮಗೆಯೆ ಸ್ಪಷ್ಟವಾಗಿರಬೇಕು.

ಈ ಎರಡು ಮಾತುಗಳನ್ನು ನಾನು ಮುಂಚೆ ಹೇಳುವುದಕ್ಕೆ ನನ್ನ ಮುಂದಿದ್ದ 'ಪ್ರಗತಿಶೀಲ ಸಾಹಿತ್ಯ' ಗ್ರಂಥದ ಮುನ್ನುಡಿಯೆ ಪ್ರೇರಕವಾಗಿದೆ. ಇಂತಹ ಮುನ್ನುಡಿಗಳಿಂದ ನಮ್ಮ ವಿಚಾರವು ಸ್ಪಷ್ಟವಾಗಿ ಜನರಿಗೆ ಮುಟ್ಟುವುದಿಲ್ಲ, ನಮ್ಮ ಉದ್ದೇಶದ ಅರ್ಥ ಅವರಿಗಾಗುವುದಿಲ್ಲ, 'ನಮ್ಮ ವಿಚಾರ ನಮಗಾದರೂ ತಿಳಿದಿದೆಯೆ?' ಎಂದು ಅವರು ಸಂದೇಹಪಡಲೂ ಬಹುದು—ಎಂದು ನನ್ನ ಹೆದರಿಕೆ. ಯುದ್ಧಪರಿಸ್ಥಿತಿ, ಕಾಂಗ್ರೆಸಿನ ಸಭೆಗಳ ಇತಿಹಾಸ, ಕ್ರಿಪ್ಸ್ ಸಂಧಾನ, ಜಪಾನ-ಜರ್ಮನಿ-ಚೀನಾ-ರಶಿಯಾಗಳ ರಾಜಕಾರಣ—ಮೊದಲಾದ ವಿಷಯಗಳನ್ನು ಹತ್ತು ಪುಟ (vii—xvii) ಗಳ ವರೆಗೆ ವರ್ಣಿಸಿದಾಗ, 'ಪ್ರಗತಿಶೀಲ ಸಾಹಿತ್ಯ'ವೆಂದರೆ ಸದ್ಯದ ಯುದ್ಧಕಾಲದಲ್ಲಿ ಲೇಖಕರ 'ನ್ಯಾಶನಲ್ ವಾರ್‌ಫ್ರಂಟ್' ಆಗಿದೆಯೆ ಎಂದೆನ್ನಿಸುವುದು. ಇಷ್ಟೇ ಅಲ್ಲ, ಮುಂದೆ ಒಮ್ಮೆಲೆ 'ಭಾರತೀಯ ಲೇಖಕರು ಹಿಂದೆ ವಿದ್ಯಾರಣ್ಯರು ಸಾಯಣರಿಗೆ ಹೇಳಿದ "ಎಳು ಸಾಯಣ ಕಟ್ಟು ಗ್ರಂಥವ" ಎಂಬ ಮಾತನ್ನು ಪಾಲಿಸಬೇಕಾಗಿದೆ' ಎಂಬ ವಾಕ್ಯ ಬಂದು, ಇದೇನು ನಿಜವಾಗಿಯೆ ಲೇಖಕರನ್ನು ಯುದ್ಧಕ್ಕೆ ರಿಕ್ರೂಟ್ ಮಾಡುತ್ತಿದ್ದಾರೆಯೆ ಎಂದೆನ್ನಿಸುವುದು. ಮುನ್ನುಡಿಯ ಉದ್ದೇಶವು ಸುತರಾಂ ಅಂತಹದಲ್ಲ ಎಂದು ನಮಗೆ. ಭಾವನೆ ಇದ್ದರೂ 'ಉದ್ದೇಶ ಯಾವುದು?' ಎಂದು ತಿಳಿಯದೆ ನಾವು ಪೇಚಿನಲ್ಲಿ ಸಿಕ್ಕುವೆವು.

ಬೇರೆ ಅನೇಕ ವಾಕ್ಯಗಳಿಂದ ಈ ಅಸಂದಿಗ್ಧತೆ ಇನ್ನಿಷ್ಟು ಹೆಚ್ಚುತ್ತಿದೆ. 'ಕನ್ನಡ ಸಾಹಿತ್ಯದಲ್ಲಿ ಸಾಮ್ರಾಜ್ಯವಾದ ತುಂಬಿಹೋಗಿದೆ' (ಪು. iii) ಎಂದು, ಮುಂದೆ ಸಾಹಿತ್ಯಪರಿಷತ್ತಿನ ಅಡಳಿತದ ಉದಾಹರಣೆಯನ್ನು ಕೊಟ್ಟಾಗ 'ಸಾಹಿತ್ಯ' ಪತ್ರ, 'ಸಾಹಿತ್ಯ ಪರಿಷತ್ತು' ಇವೆರಡರ ಗೊಂದಲಕ್ಕೆ ಈ ಲೇಖಕರು ಸಿಕ್ಕಿದ್ದಾರೆ, ಇಲ್ಲವೆ ಅವರ ಆ ವಾಕ್ಯಕ್ಕೆಯೆ ಅರ್ಥವಿಲ್ಲ ಎಂದು ಹೇಳಬೇಕಾಗುವುದು. ಒಂದೆಡೆ 'ಭಾರತೀಯ ಲೇಖಕರಲ್ಲಿ ಬಹುಮಂದಿ ಶ್ರಮಜೀವಿಗಳೇ' ಎಂದು ಹೇಳಿ, ಮುಂದೆ ಕರ್ನಾಟಕದಲ್ಲಿ ಮಾತ್ರ 'ಮಧ್ಯಮವರ್ಗದ ಬೂರ್ಜ್ವಾ(?)ಗಳೆ' ನಮ್ಮ ಸಾಹಿತಿಗಳು ಎನ್ನುವಾಗ, ಎಲ್ಲಿಯೊ ಎಣಿಕೆ ತಪ್ಪಿದೆ ಎಂದೆನ್ನಿಸುವುದು ನಮಗೆ. ಯಾಕೆಂದರೆ ಸದ್ಯದ ಭಾರತದ ವಿಶ್ಲೇಷಣಕ್ರಮದಿಂದ ಮಧ್ಯಮವರ್ಗದ ಬೂರ್ಜ್ವಾಗಳೆ ಲೇಖಕರಾಗಿರುವ ಅನಿವಾರ್ಯತೆ ಇಡಿಯ ದೇಶದಲ್ಲಿ ಕಂಡುಬರುತ್ತಿದೆ.

ಯಾವ ಪ್ರಚಾರದಲ್ಲಾದರೂ ಅಸಂಬದ್ಧವಾದ ಮಾತುಗಳೂ ಅಸತ್ಯವಾದ ಅನುಭವಗಳೂ ಸೇರಿಕೊಂಡರೆ, ಆ ಪ್ರಚಾರ ಅಷ್ಟರ ಮಟ್ಟಿಗೆ ಕುಗ್ಗುವುದು. ಇಂದಿನ ಸಾಹಿತಿಗಳು 'ಸುಲಿಗೆಗಾರ'ರಾಗಿದ್ದಾರೆ ಎಂದರೆ, ನಮ್ಮ ದೇಶದ ಸಾಹಿತ್ಯದ ಬೆಳೆವಣಿಗೆಯಲ್ಲಿ ಅದೊಂದು ಅಸತ್ಯವಾದ ಅನುಭವನೆನ್ನಿಸುವುದು. ನಮ್ಮ ಸಮಾಜಜೀವನದಲ್ಲಿಯೆ ಇನ್ನೂ ಅಂತಹ ಪ್ರಗತಿ ಇಲ್ಲದಿರುವಾಗ, ನಮ್ಮ ಸಾಹಿತ್ಯಗಳು ಇತ್ತೀಚಿನಿಂದಲೆ ಹೊಸರೂಪವನ್ನು ತಾಳುತ್ತಿರುವಾಗ 'ಸುಲಿಗೆ'ಯ ವಿಚಾರವು ಕೇವಲ ಹೊರಗಿನಿಂದ ಕಲಿತುಬಂದುದು, ನಮ್ಮಲ್ಲಿ ಬೆಳೆದು

* ಪ್ರಗತಿಶೀಲಸಾಹಿತ್ಯ (೨೩ ಪ್ರಬಂಧಗಳು), ಸಂಪಾದಕರು ಶ್ರೀ. ಅ. ನ. ಕೃಷ್ಣರಾಯರು, ಪ್ರಕಾಶಕರು, ಪ್ರಗತಿಶೀಲ ಲೇಖಕರ ಸಂಘ, ಬೆಂಗಳೂರು ಮತ್ತು ಕರ್ನಾಟಕ ಸಾಹಿತ್ಯಮಂದಿರ, ಧಾರವಾಡ. ಪುಟ ೨೧೨, ಬೆಲೆ: ೩/- ರೂ.

ನಿಂದುದಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. 'ಪ್ರಜಾಪ್ರಭುತ್ವದ ದೇವವಾಣಿಯಾಗಬೇಕಿದ್ದ ನಮ್ಮ ಸಾಹಿತ್ಯಕ್ಕೆ 'ಇಂತಹದನ್ನೆ ಬರೆ' ಎಂದು ಸರ್ವಾಧಿಕಾರಿಯಂತೆ ಹೇಳುವವನು ಪ್ರಗತಿಶೀಲನೆನ್ನಿಸಲಾರ. 'ಸಾಮಾನ್ಯರಿಗಾಗಿ ಸಾಹಿತ್ಯ' ಎಂಬುದರ ಅರ್ಥವೇನು? ಸಾಮಾನ್ಯರ ಜೀವನಕ್ಕೆ ಸಂಬಂಧಿಸಿದ ಸಾಹಿತ್ಯವೆಂದೊ? ಇಲ್ಲವೆ, ಸಾಮಾನ್ಯರಿಗೆ ಅರ್ಥವಾಗುವಂತಹ ಶಬ್ದಗಳಲ್ಲಿ ಬರೆವ ಸಾಹಿತ್ಯವೇಂದೊ? ನಾಳೆ ಚಿತ್ರಕಲೆ--ಶಿಲ್ಪಕಲೆಗಳೂ ಸಾಮಾನ್ಯರಿಗೆ ತಿಳಿಯುವಂತಹ ಶೈಲಿಯಲ್ಲಿಯೆ ಇರಬೇಕೆನ್ನುವುದಾದರೆ, ಸಾಹಿತ್ಯಕ್ಕೂ ಈ ಮಾತು ಅನ್ವಯಿಸಬಹುದು. ಆದರೆ ಎಲ್ಲ ಕಲೆಗಳಲ್ಲಿ ಸಾಹಿತ್ಯಕಲೆಯೊಂದೇ ವಯಸ್ಕರ ವಿದ್ಯಾಪ್ರಚಾರಮಾಲೆಯಾಗಬೇಕೆನ್ನುವುದು ಶುದ್ಧ ಅನ್ಯಾಯ. ಇಂತಹ ಹಟತೊಡುವುದಾದರೆ 'ವಜ್ರಾಂಗಸುಂದರ ಪಾಕ'ದ ಜಾಹೀರಾತುಗಳೆ ಸಾಹಿತ್ಯವೆನ್ನಿಸುವುವು. ಈ ವಿಚಾರ ಪದ್ಧತಿ ಪ್ರಸ್ಪವಾಗಿದೆ ಎಂದು ನನ್ನ ಅಭಿಪ್ರಾಯ. ಸಾಮಾನ್ಯರ ಅಸಂಸ್ಕೃತ ಮನಸ್ಸಿನ ಸುಲಿಗೆಯನ್ನು ಮಾಡಿಕೊಳ್ಳಬೇಕೆಂಬುವವರಿ ಈ ವಾದವನ್ನು 'ಪ್ರಗತಿಶೀಲ'ತೆಯ ಹೆಸರಿನಿಂದ ಸಾಧಿಸುವಂತಿದೆ. ರಶಿಯಾದಲ್ಲಿ ಕೂಡ ಕಪಾಯಿತಿನ ಸಾಹಿತ್ಯವಿದೆ' ಎಂದು ಹೇಳಿದರೂ ನನಗೆ ಹೆದರಿಕೆ ಇಲ್ಲ. ಯಾವ ಹೆಸರಿನಿಂದಲೆ ಆಗಲಿ—ಪ್ರಚಾರವೂರ್ವಕ ಸಾಹಿತ್ಯವೆಂದರೆ 'ಸ್ವಾತಂತ್ರ್ಯವಿಘಾತಕ ಸಾಹಿತ್ಯ' ಎಂದು ನನ್ನ ಅಭಿಪ್ರಾಯ. ವಿಚಾರಸ್ವಾತಂತ್ರ್ಯ, ಆಚಾರಸ್ವಾತಂತ್ರ್ಯ—ಇವಿಲ್ಲದಲ್ಲಿ ಪ್ರಗತಿ ಎಂಬುದು ಎಂದಿಗೂ ಶಕ್ಯವಿಲ್ಲ.

ಹಾಗಾದರೆ ಪ್ರಗತಿಶೀಲಸಾಹಿತ್ಯವೆಂದರೇನು? ಕಾಲಮಾನಕ್ಕೂ ಜೀವನಕ್ಕೂ ಹೊಂದಿಕೊಂಡ ಸಾಹಿತ್ಯ ಪ್ರಗತಿಸಾಹಿತ್ಯ. 'ಹೊಂದಿಕೊಂಡು' ಎಂದರೆ 'ಒಪ್ಪಿಕೊಂಡು' ಎಂದರ್ಥವಲ್ಲ. ಇಂದಿನ ಜೀವನಕ್ಕೆ ಸಂಬಂಧಿಸಿದ್ದ ಭಾವನೆ, ಸಂನಿವೇಶ; ಒಟ್ಟಾರೆ ಸಾಹಿತಿಯಲ್ಲಿ ಸಜೀವತೆ ಮತ್ತು ಪ್ರಾಮಾಣಿಕತೆ. ಇದೇ ಪ್ರಗತಿಶೀಲ ಸಾಹಿತ್ಯದ ಮುಖ್ಯ ಲಕ್ಷಣ ಎಂದು ಹೇಳಬಹುದು. ಇಲ್ಲವಾದರೆ, ಕೇವಲ ಪ್ರಚಾರಕ್ಕಾಗಿ ಜನಪ್ರಿಯತೆಗಾಗಿ ವಂಚಕರು ಕೂಡ ಕೆಲವು ತಾತ್ಕಾಲಿಕ ಗ್ರಂಥಗಳನ್ನು ಬರೆದು, ನಮ್ಮ ವಿಮರ್ಶಕರ ತತ್ತ್ವಗಳನ್ನು ಬುಡಮೇಲಾಗಿಸಬಹುದು ತಾತ್ಕಾಲಿಕತೆಯು ಭಾವನೆ ಮತ್ತು ಸಂನಿವೇಶಗಳ ಮಟ್ಟಿಗೆ ಮಾತ್ರ. 'ಆದ್ದರಿಂದ ಕೂಲಿಕಾರರ ರಾಜ್ಯವನ್ನು ಕಟ್ಟೋಣ' ಎಂದು ಕೊನೆಗೆ ನೀತಿಬೋಧನೆಯನ್ನು ಹೇಳಿದರೇನೆ ಅದು ಪ್ರಗತಿಶೀಲ ಗ್ರಂಥ ಎಂಬುದು ಅಲ್ಪಜ್ಞಾನದ ಲಕ್ಷಣ. ಮುಖ್ಯವಾದ ಮಾತೆಂದರೆ ಇದು:— ಇಂದು ಜೀವನವೂ ಬದಲಾಯಿಸಿದೆ, ಜೀವನದೃಷ್ಟಿಯೂ ಬದಲಾಯಿಸಿದೆ; ಇದನ್ನು ತನ್ನ ಸಾಹಿತ್ಯದಲ್ಲಿ ಪ್ರತಿಬಿಂಬಿಸದವ ಸಜೀವ ಸಾಹಿತಿಯಲ್ಲ. ಇಂದು ಸಾಕ್ಷರತೆಯು, ಸಮಾನ ಹಕ್ಕುಗಳ ಕಾಲ; ಆದಕಾಗಿ ಸಂಸ್ಕೃತ-ಇಂಗ್ಲಿಶ-ಸ್ಪೃಶ್ಯ ಪಂಡಿತರ ಸಾಹಿತ್ಯದ ಕಾಲವಲ್ಲ. ಒಟ್ಟಾರೆ, ತನ್ನ ಸುತ್ತಲನ್ನು ಮೈಗೂಡಿಸಿಕೊಂಡು ಬರೆವುದೆ ಶ್ರೇಷ್ಠ ಸಾಹಿತ್ಯದ ಒಂದು ಲಕ್ಷಣ

ಪ್ರಚಾರದ ಕನ್ನಡಕಗಳನ್ನು ಹಾಕಿಕೊಂಡೇ ಜೀವನವನ್ನು ನೋಡುವ ಸಾಹಿತಿ ಬೇರೆ.

ಜೀವನವನ್ನು ನಿರೀಕ್ಷಿಸಿ ತನ್ನ ಹೃದಯದಿಂದ ಹೊರ ಹೊಮ್ಮುವ ತತ್ತ್ವದರ್ಶಿ ಸಾಹಿತಿ ಬೇರೆ.

ನವವಧುವಿನ ಹಂಬಲ

ಶ್ರೀ. ಎಂ. ಜಿ. ಕುಲಕರ್ಣಿ, ಕಲ್ಯಾಣ

ದಾಂಟಿ ಬಂದೆನು ನಿನ್ನ ಮನೆಯ ಹೊಸ್ತಿಲ ನಲ್ಲ,
ನೋಳ್ಪೆ ನಿನ್ನಲ್ಲಿಂದು ಸಗ್ಗ-ಸಿರಿಯೆಲ್ಲ–
ತಾಯ್ತಂದೆ– ಬಂಧು–ಬಳಗದ ಬಂಧನವ ಕಿತ್ತು
ನೀನೆನ್ನ ಪರಮೈವವೆಂದೆಂದಿಗೆಂದರಿತು!

ಎನ್ನ ತವರೂರಿನ್ನು ಪರಕೀಯ ಸ್ಥಳವಾಯ್ತು,
ನಿನ್ನೂರು ಇನ್ನೆನಗೆ ಸಂತಸದ ಬೀಡಾಯ್ತು!
ಅದುವೆ ಸಂತಸದಲ್ಲಿ ಒಲಿಯೋಣ, ನಲಿಯೋಣ,
ಬಾಳ್ಗಡಲಲೆನ್ನು ಒಲವಿನ–ನಾವೆಯೆಳೆಯೋಣ!

ತಾಯ್ಮುಲದ ಹೊಂಗೊಡದಿ ಜಲಹೊತ್ತು ತಂದಿರುವೆ,
ನಿನ್ನ ವಂಶದ ಲತೆಗೆ ನೀರುಣಿಸ ಬಂದಿರುವೆ,
ಅದುವೆ ಲತೆಯಲಿ ಕಂಪ ಚೆಲ್ವ ಮಲರುಗಳನ್ನು
ಎಳಸಿ ಮೇಣಿಮ್ಮ ಬಾಳ್-ಬೆಳಕು ರನ್ನಗಳನ್ನು!

ಹೆಣ್ಣಿನಳು, ಸೊತ್ತು ತೊತ್ತೆಂದು ಜರೆಯುವುದಲ್ಲ,
ಬಗೆಮ ನೋಡಲು ನಾನಿದಾವ ತೆಗಳಕೆಗಲ್ಲ;
'ಗೃಹಲಕ್ಷ್ಮಿ' ಎಂಬೊಂದೆ ಪೆಸರಿಂದೆ ಬಂದೆನ್ನ
ಕರುಣದಲಿ ಮಮತೆಯಲಿ ಕಾಯುವುದು ಜನವನ್ನ!

ನಿನ್ನ ಸೇವೆಯಲಿ ಬೆವರ್ವನಿ ಸುರಿಸಿ ತಳ ಹೊಮ್ಮೆ,
ಪ್ರೇಮರಸದಲಿ ಚಿತ್ರ ಜೆಂದಾಗಿ ತೀಪುವೆ:
ಆಟ ಪಾಟ– ದಿನದ ಮಾಟ– ಚಿನ್ನದ ಸರಕ
ಸಂತಸವ ಸುಮನಸೆಯೆ ನಾ ಬರುವೆ ನಿನ ಕೆಲಕೆ!

ದಾಂಟಿ ಬಂದೆನು ನಿನ್ನ ಮನೆಯ ಹೊಸ್ತಿಲ ನಲ್ಲ,
ನೋಳ್ಪೆ ನಿನ್ನಲ್ಲಿಂದು ಸಗ್ಗ-ಸಿರಿಯೆಲ್ಲ–
ತಾಯ್ತಂದೆ– ಬಂಧು–ಬಳಗದ ಬಂಧನವ ಕಿತ್ತು
ನೀನೆನ್ನ ಪರಮೈವವೆಂದೆಂದಿಗೆಂದರಿತು!

ಚಕಮಕಿ *

(ಒಂದು ಸಂಸಾರಚಿತ್ರ)

ಶ್ರೀ. ಬೀಂದ್ರೆ ಲಕ್ಷ್ಮಣರಾಯರು, ಧಾರವಾಡ

ನಾನು ಹೊರಗಿಂದ ಮನೆಗೆ ಬರುವ ಹೊತ್ತಿಗೆ ರಾತ್ರಿ ಸುಮಾರು ಹತ್ತುಗಂಟೆಯಾಗಿತ್ತು. ನನ್ನ ಎರಡೂ ಮಕ್ಕಳು ನಿದ್ದೆ ಹೋಗಿದ್ದುವು ಈಕೆ ಹಾಸಿಗೆ ಹಾಸುವದರಲ್ಲಿ ತೊಡಗಿದ್ದಳು. ನನ್ನದು ಯಾವಾಗಲೂ ಹೊರಗಿಂದ ಬಂದಕೂಡಲೆ, ಹೊದಲು ನೇರವಾಗಿ ಅಡಿಗೆಮನೆಯವರೆಗೆ ಹೋಗಿಬರುವ ಪದ್ಧತಿ. ಇಂದುಕೂಡ ಹಾಗೆಯೆ ಅಲ್ಲಿಯವರೆಗೆ ಹೋಬೆ. ಅಡಿಗೆಮನೆಯಲ್ಲಿಯ ಅರ್ಧ ಜಾಗ ಕವ್ಹಬಸಿ, ತಿಂಡಿ ತಿಂದ ತಟ್ಟೆ. ನೀರು ಕುಡಿಯುವ ಪಾತ್ರೆ-ಲೋಟ ಇವುಗಳಿಂದ ತುಂಬಿಹೋಗಿತ್ತು. 'ನಾನು ಮನೆಯಿಲ್ಲಿಲ್ಲದಾಗ ಎಷ್ಟೊಂದು ಚಹ-ಫರಾಳ, ಏನಿದು ಅಪವ್ಯಯ!' ಎಂಬ ಭಾವನೆ ಮನಸ್ಸಿಗೆ ಬಾಧೆ ಕೊಟ್ಟಿತು.

ಒಂದೊಂದು ದಿನ—ಅದೇನು ಆ ದಿನದಲ್ಲಿ ನಮ್ಮ ಗ್ರಹಗತಿಯೆ ಹಾಗಿರುವುದೊ ಏನೊ! — ಯಾವ್ಹದೂ ನಮಗೆ ಅನುಕೂಲವಾಗಿ, ಸುಖಕರವಾಗಿ ಇರುವುದಿಲ್ಲ. ಅಂದು ಬೆಳಗಿನಿಂದ ಮನಸ್ಸಿಗೆ ವಿರುದ್ಧವಾದ ಸಂಗತಿಗಳೇ ಜರುಗುತ್ತ ಬಂದಿದ್ದುವು. ರಾತ್ರಿ ಮನೆಗೆ ಬರುವಾಗ, ನಿಷ್ಕಾರಣವಾಗಿ ನನ್ನೊಬ್ಬ ಸ್ನೇಹಿತನ ಜೊತೆಗೆ ಒಂದು ವಿಷಯದಲ್ಲಿ ವಾದಕ್ಕೆ ಬಿದ್ದು, ಚುಚ್ಚುಮಾತನ್ನಾಡಿಸಿಕೊಂಡಿದ್ದೆ; ಅಸಮಾಧಾನದ ಮನಸ್ಥಿತಿಯಲ್ಲಿಯೇ ಮನೆಗೆ ಬಂದೆ. ಹೆಂಡತಿಯನ್ನು ಕೇಳುವಾಗಲೆ ಮಾತು ತುಸು ಬಿರುಸಾಗಿ ಬಂತು:

"ಅಡಿಗೀಮನ್ಯಾಗ ಚಹಾದ ರಂದಿ ಹರವೀರಿ! ಯಾರು ಬಂದಿದ್ದರು– ಚಹಾಕ್ಕ?" ನಾನು ಗುಡುಗುಹಾಕಿದೆ.

"ಬರೋವರೇ ಬಂದಿದ್ದರು! ಅದನ್ನ ತೊಗೊಂಡು ನಿಮಗೇನು ಮಾಡೋದದ?" ಅಕೆ ಜರುಬು ತೋರಿಸಿದಳು.

"ಅಂದರ? ನಾ ಮನ್ಯಾಗಿಲ್ಲದಾಗ ಬರೋವರು ಬ್ಯಾರೇ ಇದ್ದಾರೇನು?"

"ಈ ಮಾತಿನ ಅರ್ಥ ಎಲ್ಲಿಗೆ ಮುಟ್ಟತಿದ ನೀನೇ ವಿಚಾರ ಮಾಡಿರಿ!"

"ಮತ್ತ ನಿನ್ನ ಮಾತಿನ ಅರ್ಥ ಏನಾಗ್ತದ ಅಂಬೋದು ನೀ ವಿಚಾರ ಮಾಡೀಯೇನು? 'ಬರೋವರು ಬಂದಿದ್ದರು' ಅಂದರ ಏನಂಬೋ ಅರ್ಥ?"

"ಬರೋವರು ಅಂದರ ನಮಗ ಜೀಕಾವರು! ನಿಮ್ಮ ಕಡಿಗೆ ಹ್ಯಾಂಗ ನಿಮ್ಮ ಮಂದಿ ಬರ್ತಾರ, ಹಾಂಗ ನಮ್ಮ ಕಡಿಗೆ ನಮ್ಮ ಮಂದಿ ಬರ್ತಾರ!"

"ಆದೇ ಅಲ್ಲಾs ಅಂಬೋದು!"

"ಇಂಥಾ ಅಸಹ್ಯ ಮಾತು ನನಗ ಸಹನಾಗೋದಿಲ್ಲ ನೋಡ್ರಿ!"

"ಅಲ್ಲ, ತಪ್ಪು ಮಾತು ಹೊದಲು ನಿನ್ನ ಬಾಯಿಂದ ಬಂತೊ ನನ್ನ ಬಾಯಿಂದ ಬಂತೊ?"

"ನಾಯೇನು ತಪ್ಪು ಮಾತಾಡಿದೆ? ನನ್ನ ಮಾತಿಗೆ ಹಚ್ಚಬಾರದ ಅರ್ಥ ಹಚ್ಚಿದ್ದು ನೀವೊ.... ನಾನೊ?"

"ಹೊದಲು ಅಂಥಾ ಅರ್ಥ ಬರೋಹಾಂಗ ಮಾತಾಡಿದ್ದು ನೀನೊ, ನಾನೊ?"

"ಈ ಮಂಗನ ಮಲ್ಲಿನಾಥತನ ಸಾಕು! ಅಂಗೀ ಕಳದು ಊಟ ಕ್ಕೇಳ್ರಿ"

"ನಾ ಊಟಾ ಮಾಡೋದಿಲ್ಲಿವತ್ತ!"

"ಅಂದರೇನಿದು? ಮನ್ಯಾಗ ಕಾಲಿಸೋ ಪುರಸತ್ತಿಲ್ಲದ ಈ ಎಡವಟ್ಟು ಮಾತ್ಯಾಕ ಸುರು ಆಗ್ಯಾವ?"

"ಎಡವಟ್ಟು ಮಾತು ಸುರುಮಾಡಿದ್ದು ಹೊದಲು ನಾನಲ್ಲ; ನೀನು! ಚಹಾಕ್ಕ ಯಾರು ಬಂದಿದ್ದರು ಅಂತ ಕೇಳಿದರ ಏನು ಜೊಗಳಿದಿ?"

"ಅಷ್ಟು ವಟ್ರಿಸಿಕೊಂಡು ಕೇಳಲಿಕ್ಕೆ ಏನಾತ್ಯದರಾಗ? ಸಮಾಧಾನದಿಂದ ಕೇಳಿದ್ದರ ಹೇಳ್ತಿದ್ದಿಲ್ಲೇನು? ನಾ ಒಂದಿನ ಮುಂದಿಗೆ ಚಹಾ ಕೊಟ್ಟರ ಇಷ್ಟು ಸಿಟ್ಟು ಬರತಕದ. ನೀವು ದಿನಾ ಹಾದೀಲೆ ಹೋಗೋವರನೆಲ್ಲಾ ಹಾಟೆಲಿಗೆ ಒಯಿತೀರಲ್ಲ? ಯಾಕ ಹಾಂಗ ಖರ್ಚುಮಾಡ್ತೀರಿ – ಅಂತ ನಾಯೇನಾರs ಕೇಳ್ತೀನೇನು ನಿಮ್ಮನ್ನ?"

"ನನ್ನ ಕೇಳ್ಳಕ್ಕೆ ಅಧಿಕಾರ ಎಲ್ಲ್ಯದ ನಿನಗ?"

"ಹುಂ, ಇರಲಿಕ್ಕೆಲ್ಲ.... ಪಾಪ!"

"ನಾವು ಗಳಿಸ್ತೀವಿ; ಖರ್ಚುಮಾಡ್ತೀವಿ!"

"ಗಂಡಸರಿಗದೊಂದು ಜಂಭ! ನಾವು ಮನ್ಯಾಗ ಸಾಯಬೀಳ ಮತೀದಿದ್ದರ, ನೀವು ಗಳಿಸೋದೆಲ್ಲ ಹೋಗ್ತಿತ್ತು ಹಳ್ಳಾ ಹಿಡಿದು!"

"ಮನಿ ನಿನುಗs ಬಿಟ್ಟಬಿಟ್ಟರ ಹಳ್ಳನs ಹಿಡಿಸವರು ನೀವು! ನಾವು ನಮ್ಮ ಕರ್ಣಬೆವರಿಕಿ ಇಟ್ಟತೀರ್ದವಿ ಅಂತ....."

"ಉಂ, ಬಹಾಳ ನಿಮ್ಮ ಕರ್ಣಬೆದರಿಕಿ! ನಾವು ಖರ್ಚು ಮಾಡಲಿಕ್ಕೆ ನಿಂತರ ನೀವು ತರೋದು ಒಂದು ದಿವಸಕ್ಕ ಸಾಲಲಿಕ್ಕಿಲ್ಲ!"

"ಈಗ ಅದs ಪರಿಸ್ಥಿತಿ ಬಂದ್ಹದ! 'ದಿವಸದಾಗ ಮೂರನೇ ಸಾರಿ ಚಹಾ ಮಾಡಬ್ಯಾಡ' ಅಂತ ಇದು ಮೂವತ್ತನೇ ಸಲ ಹೇಳಿದ್ದು ನಾನು! ಆದರೂ ನಿನ್ನ ಮಂಡತನ ನೀಯೇನೂ ಬಿಡವೊಲ್ಲೆ!"

ಅಷರೂಪದ್ಯಾಂಗ ಯಾರಾದರೂ ಬಂದರ ಹಾಂಗs ಕಳಿಸೋದದಕನ? ನಿಮಗೊಂದು ಚಹಾದಂಗಡಿ ಅವ, ನಾವೇನು ಮಾಡಬೇಕು?"

"ಬಂದವರಿಗೆ ಅರಿಸಿಣ, ಕುಂಕುಮ ಹಚ್ಚಬೇಕು, ಕಳಿಸಬೇಕು! ಹೆಂಗಸರಿಗೆ ಅದರಷ್ಟು ಪ್ರೀತಿ ಬ್ಯಾರೆ ಏನುಕೊಟ್ಟರೂ ಆಗೋದಿಲ್ಲ. ಇಷ್ಟಾಗಿ ನಿನ್ನಕಡಿಗೇನು ಕಲೆಕ್ಟರ್ ಬರೂದಿಲ್ಲ,

---

* 'ಚಕಮಕಿ' ಎಂಬದೊಂದು ಉತ್ತರಕರ್ನಾಟಕದಲ್ಲಿ ಎಲ್ಲರಿಗೂ ಪರಿಚಿತವಾದ ದೇಶಿನುಡಿ (ಈನಿಯುಮ್). ಸ್ವಲ್ಪಕಾಲದಲೆ ಆತಿ ರಭಸದಿಂದ ನಡೆದು, ಬೇಗನೆ ಮುಕ್ತಾಯವಾಗಿ ಹೋಗುವ ಜಗಳಾಟವನ್ನು ಈ ಸೊಗಸಿನಿಂದ ಕರೆಯುವರು. ಚಕಮಕಿಯು ಕಲ್ಲು ಬಿಚ್ಚಿಂದು ಸಣ್ಣಳಾಗಿ, ಕಿಡಿ ಕಂಡು ಕೂಡಲೆ ತಣ್ಣಗಾಗುವುದಿಲ್ಲವೆ? ಈ 'ಚಕಮಕಿ' ಅದರ ರೂಪಕ. ಸಂ. ಜ.

ಕೌನ್ಸಿಲರ್ ಬರೂದಿಲ್ಲ. ಹಂಗಸರೂಳಗ ಬಹಾಳ ದೂಡ್ಡವರು ಅಂತ ಬಂದರ....ಆ ಶತಾವರಿ ಶಕುಂತಲಾಬಾಯಿ, ನೀರಾವರಿ ಗೋದಾವರಿ ಬಾಯಿ; ಪಾಪ, ಆ ಇಬ್ಬರಿಗಂತೂ ಕುಂಕುಮ ಕೂಡ ಬೇಕಾಗೋದಿಲ್ಲ!

"ಯಾಕ, ಬಹಾಳ ಬಾಯಿ ಬಿಟ್ಟೀರಿವತ್ತ ?"

"ಬಾಯಿ ಬಿಡೋಹಾಂಗ ಮಾಡ್ತೀರಂತ ಬಾಯಿಬಿಡ್ತೀವಿ!"

"ನಿಮ್ಮ ಗುಡಸರದೆಷ್ಟು ನೋಡ್ರಿ, ಎಲ್ಲಾ ತಮ್ಮದೇ ಪಕಟಿಂಗ ಆಗಬೇಕು; ಒಂದು ಕಪ್ ಚಹಾ ಕೊಡಲಿಕ್ಕೆ ಕೂಡ ನಮಗ ಪರಾಧೀನ! ಹೇಣ್ತೀ ಅಂತ ಅನಿಸಿಕೊಂಡು ಹೆಣಾ ಬೀಳೋವರಿಗೂ ದುಡಿಯೋದಷ್ಟಕ ನಮ್ಮ ಹಣೆಬರದಾಗ ಬರದ್ಹಾಂಗ ಕಾಣಸ್ತದ!"

"ಹೆಂಡರ್ನ ಹಾಂಗಿಟ್ಟ ಗಂಡಸರೂ ಇದ್ದಾರ; ನಾ ಹಾಂಗಿಲ್ಲಲ್ಲ!"

"ಅಷ್ಟು ಸ್ವಾತಂತ್ರ್ಯಕೊಟ್ಟವರು ಹೀಂಗ ಕೇಳತೀರ್ಯಾಕ ಹಂಗಾರ ?"

"ಅದನ್ನು ಸರಿಯಾಗಿ ನಡಿಸ್ತೀರೋ ಇಲ್ಲೋ ಅಂತ ಕೇಳ್ತೀನಿ; ಕೇಳಿದರ ಸಿಟ್ಟ್ಯಾಕ ಬರಬೇಕು ?"

"ಕೇಳೋ ಹಾಂಗ ಕೇಳಿದರ ಸಿಟ್ಟ್ಯಾಕ ಬರ್ತದ? ನೀವು ಕೇಳಿದ್ದರಾಗ, ನಾ ಚಹಾ ಕೊಟ್ಟದ್ದು ತಪ್ಪು–ಅಂಬೋ ಧ್ವನಿ ಇತ್ತು, ಅದಕ್ಕ ಸಿಟ್ಟು ಬಂತು!"

"ಅಬಬಬಬ! ಶಬ್ದದೊಳಗಿನ ಧ್ವನಿಕೂಡ ತಿಳೀಲಿಕ್ಕೆ ಹತ್ತೈತಿನ್ನ ನಗ? 'ಕಾವ' ಪರೀಕ್ಷಾಕ್ಕ ಕೂಡಲಿಕ್ಕೆ ಅಡ್ಡಿಯಿಲ್ಲ ನೀನು!"

"ನಾ ಕೂಡಲಿ ಬಿಡಲಿ, ನೀವು ಮಾತ್ರ ಜಾಣರಾಗೀರಲ್ಲ ಮಾತು ಕೆರಳಸಲಿಕ್ಕೆ! ಮತ್ತೊಂದಲ್ಲ, ಮಗದೊಂದಲ್ಲ; ಒಂದು ಚಹಾಕ್ಕ ಸಾವಿರಮೂತಾಡಿದಿರಿ. ಅಯೂ ಅಷ್ಟರಂತ ಬಗೊವರಿಗೆ ನಾ ಎಂದೂ ಕೊಡ್ತಿನೋದಿಲ್ಲ! ಇನತ್ತು ದಾರಿತಪ್ಪಿ, ಆ ಅರಮೊಟ್ಟಿ ಅಪಣಾಚಾರ ಹೆಂಡತಿ, ಸೊಸಿನ್ನ ಕರಕೊಂಡು ಭೆಟ್ಟಿಗೆ ಬಂದಿದ್ಲು. ಆಕೀ ಸಂಗತಿ ನಾಕು ಮಕ್ಕಳೂ ಬಂದಿದ್ದುವು. ಏಳೆಂಟುಕಪ್ ಚಹಾ, ಅಷ್ಟು ಅವಲಕ್ಕಿ ಮಾಡಿದ್ದೆ. ಕೂಡಬೇಕಂದರ ಸುಡಲಿ, ಬ್ಯಾರೆಯೋನೂ ಇದ್ದಿದ್ದಿಲ್ಲ; ಏನು ಮಾಡಬೇಕು ಹಂಗಾರ?"

"ಇಷ್ಟು ಕೊಟ್ಟದ್ದು ಸಾಲದೇನು? ಮತ್ತೇನು ಕೊಡಬೇಕಂತ ಮಾಡಿದ್ದಿ ? ಏಳೆಂಟು ಕಪ್ ಚಹಾ ಅಂದರ ಮೂರು ದಿನದ ಸಕ್ಕರಿ ಬರ್ ಅಂದು ಹೋತ್ಯು! ರೇಶನ್ ಆಫೀಸರ್ ನಮ್ಮ, ಮಾವಾಗಿದ್ದರ, ನೀ ಎಷ್ಟು ಸಕ್ಕರಿ ಖರ್ಚುಮಾಡಿದ್ದರೂ ನಾ ದರಕಾರ್ ಮಾಡ್ತಿದ್ದಿಲ್ಲ; ಮಗಳಿಗೆ ಅಂತ ಸಕ್ಕರಿ ಇಲ್ಲದಿದ್ದರ ಕೊನೀಗೆ ಬೆಲ್ಲಾನಾದರೂ ಕೊಡ್ತಿದ್ದನಲ್ಲ?"

"ಅವನ ತಲಿ ಬೋಳಿಸಿತು. ಅವ ಯಾಕ ನಮ್ಮಪ್ಪಾಗ-ತಾನ? ಈ ಚುಚ್ಚುನಾತು ನನಗೂ ತೀಗತಾವ; ನಿಮ್ಮ ಎಂಟು ಕಪ್ಪಿನ ಸಕ್ಕರಿ ಹೌದಲ್ಲೊ—ನಾ ಹ್ಯಾಂಗಾದರೂ ತ್ತೀನಿ"

"ಹ್ಯಾಂಗಾದರೂ ಹ್ಯಾಂಗ ತರೋದು? ತಂದರ ಕಷಾನು ತರೋದು! ಕಳವು ಬ್ಯಾರೆ ಮಾಡೋ ಹಾಂಗಿಲ್ಲು? ಕದಾ ತಂದರಾವರೂ ತಿರಿಗಿ ಕೊಡಬೇಕಲ್ಲ? ಮತ್ತ ಕಸಿಮಿ ಬೀಳೋನವ!"

"ನಾ ಎಲ್ಲಾ ಬೀಳದ್ಹಾಂಗ ಮಾಡ್ತೀನಿ, ಅಂದರಾತ್ಯೋ ಇಲ್ಲೋ? ನಾ ಚಹಾ ಕೊಟ್ಟಿನಲ್ಲಾ ಅಂತ ನಿಮಗ ಸಂಕಟ! ಇನ್ನ ಮನೀಗೆ ಬಂದವರಿಗೆ ಚಹಾ ಮಾಡಿದರ ಕೇಳ್ರಿ! ನಿಮ್ಮವರಿರಲಿ, ನನ್ನವರಿರಲಿ, ಚಹಾ ಅಂತ ಮಾಡೋಹಾಂಗಿಲ್ಲ!"

"ಅದ್ಯಾಕ? ನಾಳೆ ಮುಂಗಳವಾರ ಅಲ್ಲಕ?.... ನಾಳೇ ಇಬ್ಬರು ಚಹಾಕ್ಕ ಬರೋವರಿದ್ದಾರ. ರೇಶನ್ ಬರೋದಕ್ಕಿಂತಾ ಮುಂಚೇ ಆಮಂತ್ರಣ ಕೊಟ್ಟೀನವರಿಗೆ!"

"ಕೊಟ್ಟದ್ದೀರಿ! ಅವರು ಚಹಾಕ್ಕ ಬರೋದ್ಹಾಂಗಿರಲಿ; ಮುಂಗಳವಾರ ಅಂದರ ನೆನಪಾತ್ಯ! ಮುಂದಿನವಾರ ಗೌರೀ ಹಬ್ಬ ಬಂತು, ನಾಳೆ ನಾಕು ಸೇರು ಬೆಣ್ಣಿ ಹೆಚ್ಚಿಗೆ ಬೇಕು!"

"ಅದೆಲ್ಲಾ ಸುಳ್ಳು! ಗೌರಿ–ಗಂಗಿ ನಮಗ ಸಂಬಂಧಿಲ್ಲ. ಎಲ್ಲಾ ದೇವರ್ನೂ ನಾವು ವಾರಾ ತೊಗೊಂಬೋ ಮೂರು ಸೇರಿನ್ಯಾಗs ಮುಗಿಸಬೇಕು!

"ಮೂರು ಸೇರಿನ್ಯಾಗ ಗೌರೀ-ಗಣಪ್ಪಾ ಹ್ಯಾಂಗಾಗ್ತsದದು? ದಿನಸರ್ತಿ ಊಟಕ್ಕs ತಿಪ್ಪಿಮಿಪ್ಪಿ ಆಗ್ತsದ!"

"ಮಾಡಿದರೆಲ್ಲಾ ಆಗ್ತsದ; ಆಗದೇನು ಮಾಡ್ತsದ? ಇನ್ನ ನೀ ಹೆಚ್ಚಿಗೇನsಬೇಕು ಜಂವರ, ನನ್ನ ಶ್ರಾದ್ಧಾಗ್ತsದ! ಅಷ್ಟೇ!"

"ಅಲ್ಲ, ಏನಿವ್ವು ಅಸಹ್ಯ ಅಸಹ್ಯ ಮಾತು? ಹಿಂಗೇನರs ಅಕಳಾ ಸಕಳಾ ಮಾತಾಡಬ್ಯಾಡ್ರಿ ನೋಡ್ರಿ! ತರೋದೇನು ತಪ್ಪಿದಿಲ್ಲ, ಆಗೋದೇನು ನಿಲ್ಲೂದಿಲ್ಲ. ಮನಸು ಸೊಯಿಸತೀರಷ್ಟಕ ಮಾತಾಡಿ! ಇದುವರಿಗೆ ಯಾವ ಹಬ್ಬ ಆಗದ ನಿಂತsದ?"

"ನಾ ತರದಿದ್ದರ ಹ್ಯಾಂಗಾಗ್ತದೋ ನೋಡ್ತೀನಿ!"

"ತರಬಾರದು ಅಂತ ನಿಮ್ಮ ಹಟಾನsಇದ್ದರ ಆಗಲಿ ಹಂಗಾರ!"

"ಆಗಲಿ ನನ್ನ ಹಟಾ ನಡೀತದೊ, ನಿನ್ನ ಹಟಾ ನಡೀತದೊ ನೋಡೇ ಬಿಡೋಣ!"

"ನನ್ನ ಹಟಾ ನಾ ಏನು ನಡಿಸಲಿಕ್ಕೆ ಕೂತಿಲ್ಲ. ಯಾವಾಗ್ಲೂ ಗಂಡಸರ ಹಟಾನೇ ನಡಿಯೋದು! ನನ್ಮಟೇನು ನಡೀತsದ? ಎಲಿ ಮ್ಯಾಲ ಕೂತಾಗ ತುಪ್ಪಾ ಕೇಳ್ರಿ, ಆಗ ಹೇಳ್ತೀನಿ! ಎರಡು ಸೌಟು ಹಾಕೊ ಅಲ್ಲೆ ಅರ್ಧಾ ಸೌಟು ಕಮ್ಮಿ ಹಾಕೆದರ, ಕಿಡಿಕಿಡಿ ಹಾಯ್ತೀರ್ತೀರಿ! ಈಗ ನಾಕು ಸೇರು ಹೆಚ್ಚಿಗೆ ಬೇಕೂ ಅಂಬೋದು ನಾವು ತಿನಲಿಕ್ಕಲ್ಲ; ನಿಮಗs ಬೇಕಾಗ್ತsದ! ನಮಗೇನು ಒಣಾದಿದ್ದರೂ ನಡೀತsದ."

"ನಮಗೂ ನಡೀತsದ"

"ಆಗಲಿ ಹಾಂಗಾದರ; ಪಾಪಾ ತರೋ ಅಪ್ಪsಕ ತ್ರಿ. ಅಷ್ಟ-ರಾಗs ಮಾಡೋದು ಪೌದಲ್ಲೊ?"

"ಹೌದು, ಅಷ್ಟರಾಗs ಮಾಡೋದು!"

"ಹತ್ತ ಹೊಡೀತು. ಊಟಕ್ಕರs ಏಳ್ತೀರೊ?"

"ಊ, ಎಲಿ ಪಾಕು!"

"ಪಾಕಿ ತಯಾರsದ. ಅನ್ನಾ ತೋದೋದೊಂದs ಬಾಕಿ!"

ನಾನು ಎಲೆಯಮೇಲೆ ಬುದು ಕುಳಿತೆ. ಆಕೆ ಅನ್ನಬಡಿಸಿ ತುಪ್ಪ-ವನ್ನು ತಂದಳು. ಪ್ರತಿದಿನ ಬಡಿಸುವಂತೆ ಎರಡು ಸೌಟು ಹೆತ್ತುಪ್ಪವನ್ನು

ಅನ್ನದ ಮೇಲೆ ನೀಡಿ ಆಕೆ ಹೋಗಬೇಕಿತ್ತು; ಅಂದು ಹಾಗೆ ಮಾಡಲಿಲ್ಲ. ಒಂದು ಸಣ್ಣ ಕಡಲೆಕಾಯಿಯಷ್ಟೇ ತುಪ್ಪವನ್ನು ಬರಣಿಯಿಂದ ತೆಗೆದು ಅನ್ನದ ಬದಿಗೆ ಇಟ್ಟಳು. ನಾನು ಆಕೆಯನ್ನು ನೋಡಲೆಣಿಸಿ ಮುಖ ಮೇಲಕ್ಕೆತ್ತಿದೆ. ಆಕೆ ಭಿರ್ರನೆ ಮುಖ ತಿರುಗಿಸಿ ಸಾಗಿಬಿಟ್ಟಿದ್ದಳು. ನನ್ನ ಮಂತ್ರ ನನಗೇ ಇಷ್ಟು ಬೇಗ ತಿರುಗಬಹುದೆಂದು ನಾನು ಅಂದುಕೊಂಡಿರಲಿಲ್ಲ. ನನ್ನ ಸ್ವಾಭಿಮಾನಕ್ಕೆ ಚುಚ್ಚಿದ ಹಾಗಾಯಿತು. "ಓಹೊ, ನಾನು ಬೆಣ್ಣೆ ಬೇಡೆಂದದ್ದಕ್ಕೆ ಈ ಆಟ ಹೂಡಿದೀನು?" ಎಂದು ಮನಸ್ಸಿನಲ್ಲಿ ಎಂದುಕೊಂಡು, ಆ ತುಪ್ಪದ ಗುಳಿಗೆಯನ್ನು ತೆಗೆದು ಉಪ್ಪಿನ ಮಗ್ಗುಲಲ್ಲಿಟ್ಟೆ. ನಾನು ಅನ್ನದ ಮೇಲೆಯೆ ದೃಷ್ಟಿಯನ್ನು ಏಕೀಕರಿಸಿ, ಒಣ ಅನ್ನವನ್ನೇ ಕಲಸುತ್ತಿದ್ದೆ. ಆಕೆ ಹುಳಿ ತಂದು ಬಟ್ಟಲಲ್ಲಿ ಬಡಿಸಿದಳು. ನಾನು ತುಪ್ಪ ತೆಗೆದಿಟ್ಟದ್ದನ್ನು ನೋಡಿ ಆಕೆ ಏನಾದರೂ ಕೇಳಬಹುದು ಎನಿಸಿತ್ತು, ಅಥವಾ ಆಕೆ ಕೇಳಬೇಕು ಎಂದೂ ನನಗೆ ಎನಿಸಿತ್ತು. ಆದರೆ ಆಕೆ ನೋಡಿಯೂ ನೋಡದ ಹಾಗೆ ತಿರುಗಿ ಹೋಗಿ ತನ್ನ ಜಾಗದಲ್ಲಿ ಕುಳಿತಳು. ಎಂಥ ಕಟ್ಟಪಳು ನೋಡಿ! ನನ್ನ ಮೂವತ್ತು ವರ್ಷದ ಆಯುಷ್ಯದಲ್ಲಿ ಒಂದು ಸಲವೇನೂ ನಾನು ಹೀಗೆ ಒಣ ಅನ್ನ ಉಂಡಿರಲಿಲ್ಲ. 'ನನ್ನ ತಾಯಿ ಇದ್ದರೆ ಹೀಗೆ ಮಾಡುತ್ತಿದ್ದಳೆ?' ಎನಿಸಿತು! ಎರಡು ತುತ್ತು ಅಂಥದನ್ನೇ ಬಾಯಲ್ಲಿ ತುರುಕಿದೆ. ಅಗುಳು ಗಂಟಲಲ್ಲಿ ಸುತ್ತಾಡಹತ್ತಿದುವು. ಒಂದು ಬಿಕ್ಕು ಬಂತು. ನೀರು ಕುಡಿದು ಅದನ್ನು ನಿಲ್ಲಿಸಿದೆ. ಆಕೆ ನನ್ನ ಭಾವ-ಭಂಗಿಗಳನ್ನು ತುಂಟನೋಟದಿಂದ ನೋಡುತ್ತಿದ್ದಳು. ನನಗೆ ಇನ್ನಷ್ಟು ಕೆರಳಿತು. ಬಟ್ಟಲ ತುಂಬ ಇದ್ದ ಹುಳಿಯನ್ನು ಅನ್ನದ ಮೇಲೆ ಸುರಿದುಕೊಂಡೆ. ಅದು ಎಲೆಯ ತುಂಬ ಹರಿದಾಡಹತ್ತಿತು. ಅಷ್ಟು ಹೊತ್ತಿಗೆ ನಾನು ತುಪ್ಪ ಬಿಟ್ಟಿದ್ದನ್ನು ಆಕೆ ನೋಡಿರಬೇಕು-'ತುಪ್ಪ ಹಾಕೇನಿ' ಎಂದಳು. ನಾನು ಹೂಂ ಇಲ್ಲ, ಹಾಂ ಇಲ್ಲ, ಸುಮ್ಮನಿದ್ದೆ. ಅನ್ನ ಮುಗಿಯಿತು, ಚಪಾತಿ ತಂದು ಎಲೆಯಲ್ಲಿ ಹಾಕಿದಳು. ಅದನ್ನು ತುಪ್ಪವಿಲ್ಲದೆ ತಿನ್ನುವುದು ಹೇಗೆ? ಜೋಳದ ರೊಟ್ಟಿ ಇದ್ದರೆ ತಿನ್ನಬಹುದು. ಚಪಾತಿಯನ್ನು ತಿನ್ನಬೇಕೂ ಬಿಡಬೇಕೂ ಎಂಬ ವಿಚಾರದಲ್ಲಿದ್ದೆ. ಆಕೆ ಅಷ್ಟರಲ್ಲಿ ತುಪ್ಪ ತಂದಳು. ಪೇರಲ ಕಾಯಷ್ಟು ತುಪ್ಪದ ಕರಣಿ ಕೈಯಲ್ಲಿ ಕಾಣುತ್ತಿತ್ತು.

'ಹಾಕಬ್ಯಾಡ!' ನಾನು ಗದ್ದರಿಸಿದೆ.

'ಯಾಕ?'

'ನನಗ ಬ್ಯಾಡ!'

ಹಾಕಿದರೂ ತಿನ್ನುವದಿಲ್ಲ ಎಂದೆನಿಸಿತೇನೋ! ತುಪ್ಪದ ಕರಣಿಯನ್ನು ಬರಣಿಯಲ್ಲೆಸೆದು ಹಿಂತಿರುಗಿದಳು. ತುಪ್ಪ ತಿನ್ನದಿದ್ದರೆ ಬೆಣ್ಣೆಯನ್ನಾದರೂ ತಿನ್ನಬಹುದು ಎಂದುಕೊಂಡು, ಅಂದೇ ಮನೆಯಲ್ಲಿ ಕಡೆದ ಬೆಣ್ಣೆಯನ್ನು ತಂದಳು! ಅದರೆ ನಮ್ಮಲ್ಲಿ ಜಗಳ ಬಂದದ್ದು ಬೆಣ್ಣೆಗಾಗಿಯೆ ಬಂದಿತ್ತು! ಅದನ್ನಂತೂ ಮೊದಲು ತಿನ್ನುವ ಹಾಗಿಲ್ಲ!

"ನೀ ಹಾಕಬ್ಯಾಡ, ನಾ ತಿನ್ನೂದಿಲ್ಲ!" ಆಕ್ರೋಶ ಮಾಡಿದೆ. ನನ್ನ ಆಕ್ರೋಶ ಕೇಳಿ ಆಕೆ ತೆಪ್ಪಗೆ ಹೋದಳು. ಇನ್ನಾಗುವ ಹೊತ್ತಿಗೆ ನಮ್ಮಾಕೆ ಝುರ್ರನೆ ಇಳಿದಂತಾಗಿ ಅಳುವ ಸ್ಥಿತಿಗೇ ಬಂದಿದ್ದಳು! ನಾನು ಯಾವುದನ್ನೂ ಲಕ್ಷಿಸದೆ, ಚಪಾತಿಯನ್ನು ಬದಿಗಿರಿಸಿ, ಕೊನೆಯ ಅನ್ನ ಹಾಕಿಸಿಕೊಂಡು ಹ್ಯಾಗೋ ಊಟ ಮುಗಿಸಿದೆ.

* * * *

ಮರುದಿನ ಬೆಳಗ್ಗೆ ಚಹಕ್ಕಾಗಿ ನಾನು ಒಳಗೆ ಹೋಗಲಿಲ್ಲ. ಕಾಗದ ಇಟ್ಟುಕೊಂಡು ಬರೆಯುತ್ತ ಕುಳಿತೆ. ನನ್ನ ಏಳು ವರ್ಷದ ಮಗು ಚಹ ತಂದುಕೊಟ್ಟಿತು. ನಾನದನ್ನು ನೋಡಿದರೂ ಕುಡಿದಿರಲಿಲ್ಲ. ಆಕೆ ಅಡಿಕೆಯ ಡಬ್ಬಿಯನ್ನು ಕೈಯಲ್ಲಿ ಹಿಡಿದು ಬಾಗಿಲಿಗೆ ಮರೆಯಾಗಿ ನಿಂತಿದ್ದಳು. ನಾನು ಹಾಗೆ ಹೀಗೆ ನೋಡಿ ಚಹ ಕುಡಿದು ಮುಗಿಸಿದೆ. ಚಹಾ ಮುಗಿದ ಮೇಲೆ, ಅಡಿಕೆ ಪುಡಿಯನ್ನು ತೆಗೆದು ನನಗೆ ಕೊಡಲು ಆಕೆಯೆ ಬಂದಳು. ಅವಳ ಕಣ್ಣು ತುಂಬ ನೀರು ತುಂಬಿಕೊಂಡಿತ್ತು. ಮಾತು ಹೊರಬರುವಾಗ ಧ್ವನಿ ಕಂಪಿಸಿತು. ತುಟಿ ನಡುಗಿದುವು:

"ನಂದು ತಪ್ಪಾತ್ಯ. ನಿನ್ನೆ ನಾ ಹಾಂಗಮಾಡಬಾರದಿತ್ತು. ನೀವು ಸರಿಯಾಗಿ ಊಟ ಕೂಡ ಮಾಡಲಿಲ್ಲ. ನನಗೂ ಊಟಕ್ಕ ಮನಸ್ಸಾಗಲಿಲ್ಲ; ಹಾಗೇ ಮಲಗಿದೆ!" ಎನ್ನುವಾಗ, ಅನುತಾಪದಿಂದ ಅವಳು ಅದೆಷ್ಟು ಕರಗಿಹೋಗಿದ್ದಳು!

"ಈಗ ಚಹಾ ಕುಡದ್ಯೊ ಇಲ್ಲೊ?" ಒನ್ಮೆಲೆ ನನ್ನ ಬಾಯಿಂದ ಬಂತು.

ಅವಳ ಅವನತ ದೃಷ್ಟಿ, ಮೂಕಭಾವ ನಕಾರವನ್ನು ಸೂಚಿಸಿದುವು. ನನಗೆ ಏನೋ ಆಯಿತು. ನಾನೂ ಹೃದಯದಲ್ಲಿ ಅವಳಷ್ಟೇ ಕರಗಿದೆ.

"ಹೋಗು, ಚಹಾ ಕುಡಿ ಹೋಗು! ಹಾಂಗಽ ಹೇಳಿದರ ನೀ ಕುಡೀಲಿಕ್ಕಿಲ್ಲ; ನಾನೂ ಬರ್ತೀನಿ ನಡಿ!" ಎಂದು ಅವಳನ್ನು ಕೈ ಹಿಡಿದು ಕರೆದೊಯ್ದೆ- ಆದರೆ ಅವಳಿಗಾಗಿ ಅಲ್ಲಿ ಚಹಾ ಎಲ್ಲಿತ್ತು?

"ನಿನಗಾಗಿ ನೀ ಚಹಾಮಾಡಿಕೊಂಡಿಲ್ಲ, ಹೌದಲ್ಲೊ? ಸೊತ್ತ ನನಗ-ಚಹಾ ಬ್ಯಾಡ-ನಿನ್ನೆ ರಾತ್ರಿ ಉಪಾಸಿದ್ದೀ- ಹಾಲು ತೊಗೊ!" ಎಂದು ನಾನೇ ಬಿಸಿಬಿಸಿ ಹಾಲನ್ನು ಕಪ್ಪಿನಲ್ಲಿ ಹಾಕಿ ಅವಳ ಮುಂದೆ ಹಿಡಿದೆ; ಆದರೆ ಒಬ್ಬಳೇ ಹಾಲು ಕುಡಿಯುವುದಕ್ಕೆ ಆಕೆಗೆ ಮನಸ್ಸಾಗಬೇಕಲ್ಲ! ನನಗೂ ಆಗ್ರಹಮಾಡಿದಳು. ಮುಕ್ಕಳೊಂದಿಗೆ ಇಬ್ಬರೂ ಹಾಲು ಕುಡಿದೆವು.

* * * *

ಮಧ್ಯಾಹ್ನ ಬೆಣ್ಣೆಯ ಮುದುಕಿ ಬೆಣ್ಣೆ ಎಷ್ಟು ಬೇಕು ಎಂದು ಕೇಳಬಂದಳು. ಯಾವಾಗಲೂ ಈಕೆಯನ್ನೇ ಕೂಗಿ ಕೇಳುವ ವಾಡಿಕೆ ಅವಳದು. ಅವಳು ಬರುತ್ತಲೇ ನಾನು ಕೈಸನ್ನೆಮಾಡಿ ಸುಮ್ಮಗಿರಿಸಿ, ನಾನೇ ಮೆಲ್ಲಗೆ ಹೇಳಿದೆ: 'ಈ ವಾರ ಎಂಟು ಸೇರು ಬೇಕು!'

ಊಟಕ್ಕೆ ಕುಳಿತಾಗ ಈಕೆ, 'ಬೆಣ್ಣೆಯ ಮುದಿಕಿ ಬರಲೇ ಇಲ್ಲ!' ಎಂದಳು. 'ಬಂದಿದ್ಲು, ಹೇಳೀನಿ.' ನಾನೆಂದೆ. ಎಷ್ಟು ಎಂದು ಆಕೆಯೂ ಕೇಳಲಿಲ್ಲ; ನಾನೂ ಹೇಳಲಿಲ್ಲ.

(ಮುಂದಿನ ಪುಟದ ಅಡಿಯಲ್ಲಿ)

ಪಾರ್ಥೆನಾನ್

(ಪ್ರಾಚೀನ ಶಿಲ್ಪ ಪರಿಚಯ)

ಶ್ರೀ. ಪ್ರ. ಬ. ನರೇಗಲ್ಲ ಎಂ. ಎ., ಬಿ. ಟಿ. ಹುಬ್ಬಳ್ಳಿ

(ಅಖಿಲ ಭಾರತ ಆಕಾಶವಾಣಿಯ ಮುಂಬೈ ಕೇಂದ್ರದಿಂದ ೧೦-೭-೫೪ರ ರಾತ್ರಿ ೪-೫೫ಕ್ಕೆ, ಶ್ರೀ. ಪ್ರ. ಬ. ನರೇಗಲ್ಲರು ಶಾಲೆಯ ಮಕ್ಕಳಿಗಾಗಿ ಮಾಡಿರುವ ಭಾಷಣವನ್ನು, ರೇಡಿಯೊ ಅಧಿಕಾರಿಗಳ ಅಪ್ಪಣೆ ಪಡೆದು ಪ್ರಕಟಿಸಲಾಗಿದೆ.)

ಕನ್ನಡ ನಾಡಿನ ಮಕ್ಕಳೇ!

ಇಂದು ನಾವು ಯುರೋಪು ಖಂಡದಲ್ಲಿರುವ ಗ್ರೀಸ್ ದೇಶದ ಅಥೆನ್ಸ್ ನಗರಕ್ಕೆ ತೆರಳೋಣ. ಅಲ್ಲಿಯ ಪ್ರಾಚೀನ ಗುಡಿಗಳಲ್ಲಿ ಪರಮಶ್ರೇಷ್ಠವೆನಿಸಿ, ಶುಭ್ರ ಸಂಗಮರವರಿ ಶಿಲಾಸ್ಥಾಪತ್ಯದಿಂದ ಸುಂದರ ಶಿಲ್ಪಗಳಲ್ಲಿ ಪ್ರಥಮಸ್ಥಾನ ಪಡೆದು, ಪೃಥ್ವಿಯಲ್ಲಿಯೆ ತಲೆಯೆತ್ತಿ ನಿಂತಿರುವ ಪವಿತ್ರ "ಪಾರ್ಥೆನಾನ್" ಎಂಬ ಗ್ರೀಕರ ಗುಡಿಯ ಬಗ್ಗೆ ನಾನು ನಿಮಗೆ ನಾಲ್ಕು ಮಾತು ಹೇಳುತ್ತೇನೆ.

ಆಗೋ! ಅಲ್ಲಿ ಅಥೆನ್ಸ್ ನಗರ! ಆ ನಗರದ ಅತಿ ಎತ್ತರದ ಭಾಗ ಕಾಣುತ್ತಿದೆಯಷ್ಟೇ? ಅದನ್ನು ಗ್ರೀಕರು 'ಎಕ್ರೊಪಾಲಿಸ್' ಎನ್ನುತ್ತಾರೆ. ಅಲ್ಲಿ ಸುಮಾರು ೫೦೦ ಅಡಿ ಎತ್ತರವಿದ್ದ ಬಂಡೆಗಲ್ಲಿನ ಬೆಟ್ಟವಿದೆ. ಈ ಬೆಟ್ಟ ಏರಲು ಪಶ್ಚಿಮದಿಕ್ಕಿನಿಂದ ಒಂದೇ ಒಂದು ಹಾದಿಯಿದೆ. ಬೆಟ್ಟವೇರುವಾಗ ನಿಮ್ಮ ಬಲಕ್ಕೆ ಎಂದರೆ ಬೆಟ್ಟದ ದಕ್ಷಿಣಕ್ಕೆ, ಬೆಟ್ಟದ ಮೇಲೆ ಥಳಥಳಿಸುವ ಬಿಳಿಯ ಕಲ್ಲಿನ ಕಟ್ಟಡವೊಂದು ಮಿರಿಮಿರಿ ಮಿಂಚುವುದು. ಅದೇ ಅಥೆನ್ಸ್ ನಗರದ ಕನ್ಯಕಾಪರಮೇಶ್ವರಿ— **ಅಥೇನಾ**- ದೇವತೆಗೆ ಅರ್ಪಿತವಾದ ಪಾವನ ದೇವಾಲಯ. ಇದಕ್ಕೇ ಗ್ರೀಕಭಾಷೆಯಲ್ಲಿ "ಪಾರ್ಥೆನಾನ್" ಎನ್ನುತ್ತಾರೆ.

ಈ ಗುಡಿಯನ್ನು ಕಟ್ಟಿದ ಕಾಲ ಇಂದಿಗೆ ೨೪೦೦ ವರ್ಷ ಹಿಂದೆ. ಅಂದಿಗೆ ಸುಮಾರು ೫೦ ವರ್ಷ ಹಿಂದೆ, ಗ್ರೀಕರಿಗೂ ಪಾರಸಿಕರಿಗೂ ಬೊಚ್ಚ ಯುದ್ಧ ನಡೆದು, ಪೊಪಲು ಪಾರಸಿಕರಿಗೆ ಜಯವಾಗಿ ಅಥೆನ್ಸ್ ನಗರ ಸುಟ್ಟು ಹೋದರೂ, ಕಡೆಗೆ ಕಡುಹಗೆಯಾದ **ಪ್ಲೆರೆಕ್ಲಸ್ಸ್** ನನ್ನು ಗ್ರೀಕರು ಹೊಡೆದಟ್ಟಿ ಜಯಶಾಲಿಗಳಾಗಿದ್ದರು. ಗ್ರೀಕ ಜನಾಂಗ ನವಚೈತನ್ಯದಿಂದ ಚೇತರಿಸಿಕೊಂಡಿದ್ದಿತು ಪ್ರಜಾಸತ್ತೆಯ ಪ್ರಭಾವ, ಸಾಗರೋತ್ತರ ವ್ಯಾಪಾರೋದ್ಯಮಗಳ ಅಭ್ಯುದಯ, ಲಲಿತ ಕಲೆಗಳ ವಿಕಾಸ, ಗ್ರೀಕ ವಾಗ್ಮಿಗಳು-ಕವಿಗಳು-ನಾಟಕಕಾರರು-ಋಷಿಗಳು—ಶಿಲ್ಪಿಗಳೇ ಮೊದಲಾದ ಪ್ರತಿಭಾವಂತರ ಉದಯ ಇವೆಲ್ಲಾ ಸಂಗತಿಗಳ ಮೂಲಕ, ಗ್ರೀಕಜನಾಂಗದ ನವಜನ್ಮದ ಕಾಲವದು. ಗ್ರೀಸದಲ್ಲೇ ಅಥೆನ್ಸ್ ನಗರರಾಜ್ಯ ತಲೆಯೆತ್ತಿ ಮೆರೆಯುತ್ತಿತ್ತು. ಆಗ **ಪೆರಿಕ್ಲೀಸ್**ನೆಂಬ ಮಹಾಪುರುಷ ಅಥೆನ್ಸ್‌ಗೆ ಮಹಾನಾಯಕನಾಗಿದ್ದ. ಕ್ರಿ. ಪೂ. ೪೬೧ ರಿಂದ ೪೩೦ ರವರೆಗೆ ರಾಜ್ಯಸೂತ್ರಧಾರಿಯಾಗಿ, ಇವನು ಅಂದಿನ ಅಥೆನ್ಸಿನ ವೈಭವದ ವಿಭೂತಿಪುರುಷನೆಂದೆನಿಸಿಕೊಂಡನು. ಜೀವನದ ನಾನಾಕ್ಷೇತ್ರಗಳಲ್ಲಿ ಮಹಾವ್ಯಕ್ತಿಗಳು ಆಗ ಮುಂದೆಬಂದರು. ಶಿಲ್ಪಕಲಾಕೋವಿದ **ಫೀಡಿಯಸ್**ನೆಂಬವನೂ ಆ ಕಾಲದ ಅಲೌಕಿಕ ವ್ಯಕ್ತಿಗಳಲ್ಲೊಬ್ಬನು. ಈತನು ಪೆರಿಕ್ಲೀಸನ ಪರಮಮಿತ್ರನು. ಈ ಫೀಡಿಯಸ್ಸನ ನೇತೃತ್ವದಲ್ಲಿಯೇ **ಇಕ್ಟಿನಸ್, ಕ್ಯಾಲಿಕ್ರೆಟೀಸ್** ಎಂಬಬ್ಬರು ನಿಪುಣಸ್ಥಪತಿಗಳು ಜೆಲುವಿನ ತವರಾನುನೆಯಾದ ಈ ಪಾರ್ಥೆನಾನ್ ಗುಡಿಯನ್ನು ಕಟ್ಟಿದರು. ಶಿಲ್ಪವರ ಫೀಡಿಯಸ್ಸನೂ ಆತನ ಸ್ನೇಹಿಯ ಶಿಷ್ಯರು—**ಅಲ್ಕಾಮಿನೀಸ್** ಮತ್ತು **ಅಗೊರಾಕ್ರೀಟಸ್** ಎಂಬವರೂ, ಗೋಡೆ-ಬೋನುಗೆ-ಕುಕಣಗಳಲ್ಲಿ ತರತರದ ಹೊಳಹುಗಳ ಕುಸುರಿನ ಕೆತ್ತನೆಯ ಕೆಲಸ ಮಾಡಿದರು.

ಕ್ರಿ. ಪೂ. ೪೫೫ ರಲ್ಲಿ ಗುಡಿ ಕಟ್ಟುವ ಕೆಲಸ ಆರಂಭವಾಗಿ ಕ್ರಿ. ಪೂ. ೪೩೮ ರಲ್ಲಿ ಕೆಲಸವೆಲ್ಲಾ ಮುಗಿದು, ಬಂಗಾರ-ಹಸ್ತಿದಂತಗಳಿಂದ ಫೀಡಿಯಸ್ಸನೇ ಮಾಡಿದ **ಅಥೆನಾ** ದೇವತೆಯ- ೪೭ ಅಡಿ ಎತ್ತರದ-ಭವ್ಯದಿವ್ಯ ಪ್ರತಿಮೆಯ ಪ್ರತಿಷ್ಠಾಪನೆ ಗರ್ಭಗುಡಿಯಲ್ಲಿ ಜರುಗಿ, ಅದೇ ವರ್ಷ ಆ ದೇವತೆಗೆ ಗುಡಿ ಅರ್ಪಿತವಾಯ್ತು. ಮುಂದೆ ೫ ವರ್ಷಗಳ ವರೆಗೂ ಗುಡಿಯ ಅಲಂಕಾರದ ಕಾರ್ಯ ಹಾಗೆಯೆ ಮುಂದುವರಿಯಿತು. ಫೀಡಿಯಸ್ಸನಿಂದಲೇ ನಿರ್ಮಿತವಾದ ನಗರದೇವತೆಯ ಒಟ್ಟು ೩ ಪ್ರತಿಮೆಗಳು ಎಕ್ರೊಪಾಲಿಸ್‌ನಲ್ಲಿ ಒಪ್ಪಿದುವು. ಇದೀಗ ಹೇಳಿದ ಮುಖ್ಯಪ್ರತಿಮೆಯಲ್ಲದೆ ಇನ್ನೊಂದು ಕಂಚಿನ ಪ್ರತಿಮೆ-**ಲೆಮೀನಿಯನ್ ಅಥೆನಾ** ಎಂಬುದು; ಹಾಗು ಮತ್ತೊಂದು ಕಂಚಿನ ಪ್ರತಿಮೆ ಪಾರ್ಥೆನಾನ್ ದೇಗುಲಕ್ಕೂ ಬೆಟ್ಟದ ಮಹಾದ್ವಾರ ಪ್ರೊಪೀಲಿಯಾಕ್ಕೂ ನಡುವೆ ಇದ್ದದ್ದು. ಇದಂತೂ, ಸಮುದ್ರದಲ್ಲಿ ಸಾಗಿಬರುವ ನಾವಿಕರಿಗೆ ಕೂಡ ದೂರದಿಂದಲೇ ಕಣ್ತುಂಬಾ ಕಂಡು, ಅವರು ಧನ್ಯರಾಗುವಷ್ಟು ದೊಡ್ಡದಿತ್ತಂತೆ. ಅಭಿಮಾನದ ಮಾತೇನೆಂದರೆ, ೫೦ ವರ್ಷಗಳ ಹಿಂದೆ ಕ್ಷೆರೆಕ್ಸ್ಸನು ಸುಟ್ಟು ಬೂದಿಮಾಡಿದ ಅಥೆನ್ಸೇ ಇಂದು ನೂತನ ನಗರನಿರ್ಮಾಣವ ಸುಕಲ್ಪಮಾಡಿದ ಪೆರಿಕ್ಲೀಸನ ಕಾಲದಲ್ಲಿ, ಮತ್ತೆ ಅತ್ಯಧಿಕ ತೇಜದಿಂದ ತೊಳಗತೊಡಗಿತು. ಪಾರ್ಥೆನಾನವ ಜೊತೆಗೆ 'ಓಡಿಯಾನ್' ಎಂಬ ನನ್ಯ ನಾಟ್ಯಮಂದಿರವೂ ಸಿದ್ಧವಾಗಿ ಕಂಗೊಳಿಸಿತೆಂಬುವನ್ನು ಲಕ್ಷ್ಯಿಸಿದರೆ, ಪರಮಾರ್ಥ-ಪುರುಷಾರ್ಥಗಳೆರಡನ್ನೂ ಏಕಕಾಲಕ್ಕೆ ಸಾಧಿಸುವ ಸಾಹಸೈಕ ವೀರರು ಗ್ರೀಕರೆಂಬುದು ನಮಗೆ ಒಡೆದು ತೋರುವುದು.

(೧೭೩ನೆಯ ಪುಟದಿಂದ)

ಸಾಯಂಕಾಲ ಮುದುಕಿ ಬೆಣ್ಣೆಯನ್ನು ತಂದು ಈಕೆಯ ಮುಂದಿಟ್ಟಳು.

"ಎಷ್ಟು ತಂದಿ?" ಕೇಳಿದಳೀಕೆ.

"ಎಂಟು ಸೇರು!" ಮುದುಕಿ ಹೇಳಿದಳು.

"ಇಷ್ಟ್ಯಾಕ ತಂದಿ? ಯಾರು ಹೇಳಿದರು?"

"ಅಲ್ಲಿ ಕುಂತಾನ್ನೋಡು- ನಿನ್ಮ ಹಿರಿಯ; ಅವನ್ನ ಕೇಳು. ಎಂಟು ಸೇರು ಅಂತ ಸನ್ನೀಮಾಡಿ ಹೇಳಿದ್ನವ್ವಾ, ಅಂವ ಹೇಳಿದಷ್ಟು ತಂದೆ! ಇವರಾಗ ನಿನಗ ತಿಳೀದ್ಹಾಂಗ ಇನ್ಯಾವಾಕಿಗೆ ಕೊಡಬೇಕಂತ ಮಾಡಿದ್ಹೊ ಯಾರಿಗ್ಹೊತ್ತು?"

ಅವಳ ಆ ಮಾತಿಗೆ ನಾನೂ ನಕ್ಕೆ; ಈಕೆಯೂ ಬಿದ್ದು ಬಿದ್ದು ನಕ್ಕಳು!

ೀಕ ಸ್ಥಾಪತ್ಯದಲ್ಲಿ ಕಂಬಗಳ ಹವಣಿಗನುಸಾರವಾಗಿ ಡೋರಿಕ್, ಆಯೊನಿಕ್, ಕೊರೆಂಥಿಕ್ ಎಂಬ ೩ ಶೈಲಿ ಉಂಟು. ಮೂರೂ ಶೈಲಿಗಳ ಗುಡಿಗಳು ಏಕರೂಪವಾಗಿದ್ದರೂ, ಸಾಮಗ್ರಿಗಳಲ್ಲಿ ವೈವಿಧ್ಯವೂ, ಕುಸುರು-ಹೊಳಹುಗಳಲ್ಲಿ ಬಗೆಬಗೆಯ ನಯವೂ, ಕಂಬಗಳ ರಚನೆಯಲ್ಲಿ ಹೊಸಹೊಸತನವೂ ಕಂಡುಬರುತ್ತವೆ. ಪಾರ್ಥೆನಾನ್ ಗುಡಿಯು ಡೋರಿಕ್ ಶೈಲಿಯದು. ಈ ಗುಡಿಯ ಹೊರ ಅಳತೆ ೨೩೮ ಅಡಿ ಉದ್ದ, ೧೦೦ ಅಡಿ ಅಗಲ, ೬೪ ಅಡಿ ಎತ್ತರ; ಒಳ ಅಳತೆ ೯೫ ಅಡಿ ಉದ್ದ, ೬೩ ಅಡಿ ಅಗಲ, ೬೩ ಅಡಿ ಎತ್ತರ. ಕಟ್ಟಿದಾಗ ನೊಟ್ಟನೊದಲು ಮುಂಭಾಗ-ಹಿಂಭಾಗಗಳಲ್ಲಿ ಎಂಟೆಂಟು ಕಂಬ, ಕೋನದ ಕಂಬ ಹಿಡಿದು, ಒಂದೊಂದು ಪಕ್ಕದಲ್ಲಿ ೧೭ ಕಂಬ-ಹೀಗೆ ಒಟ್ಟು ೪೬ ಕಂಬ ಇದ್ದುವಂತೆ; ಈಗ ೩೨ ಮಾತ್ರ ಉಳಿದಿವೆ. ಸ್ತಂಭಶ್ರೇಣಿಯು ಕೋನದ ಹಿಂದೆ ೬ ಕಂಬ, ಪ್ರಮಾಣದಲ್ಲಿ ತುಸು ಸಣ್ಣನಿವೆ. ಪ್ರತಿ ಕಂಬದ ಎತ್ತರ ೩೪ ಫೂಟು, ೫ ಇಂಚು. ಪ್ರತಿ ಕಂಬವೂ ನೆಲದಿಂದ ನೇರವಾಗಿ ಗೆರೆ ಹೊಡೆದಂತೆ ಕಂಡು, ಅಗಲವಾಗಿರುತ್ತಲೆ ಕಿರಿದಾಗಿ ಕೊನೆಗೊಂಡು, ಸರಳ ಮುಂಡನ್ನು ಗದ್ದುಗೆ-ಚೌಕಟ್ಟುಗಳಂತೆ ಕೀಲಗೊಂಡು, ಕಂಕಣ-ಬೋದುಗೆಯಿಂದ ಕೂಡಿಕೊಂಡು, ಆ ನೆಲೆ ಬಾಗುನೂಳಿಗೆಯಿಂದ ಸಂಧಿಸಲ್ಪಟ್ಟಿವೆ. ಕಲ್ಲನ್ನೇನು ಮೇಣವೆಂದು ತಿಳಿದು ಕರಗಿಸಿ ಹೀಗೆ ಬೇಕುಬೇಕಾದ್ದನ್ನು ಅದರಿಂದಲೇ ಮಾಡಿದವೋ ಏನೋ! [ಸೊರವಲಯದ ಕಂಕಣದಲ್ಲಿ, ಹೊದರುಳ್ಳ ಕಲ್ಲ ತೊಲೆಗಳ ನೂರು ಕೊನೆಗಳಿಂದ ಕೂಡಿದ ತ್ರಿಗ್ಲೋಫಲಕ (Tryglyph) ಗಳುಂಟು; ಎರಡು ತ್ರಿಗ್ಲೋಫಲಕಗಳ ನಡುವಿನ ಅಂತಃಪ್ರದೇಶದಲ್ಲಿ ಎರಡೆರಡು ಹೊಳಪುಗಳ ಕೃತಿಮಾಲೆಯುಂಟು.] ಗರ್ಭಗುಡಿಯ ಹೊರಗೋಡೆಯ ಗುಂಟ, ಪಕ್ಕಗಳಲ್ಲಿ ನಾಲುವರಿವ ಊರ್ಧ್ವಭಾಗದಲ್ಲಿ, ಬಣ್ಣ ಬಣ್ಣಗಳ ಕೆತ್ತನೆಯ ಸುಂದರ ಶಿಲ್ಪಕೃತಿ ಸೂರೆಸೂರೆಯಾಗಿವೆ. ಗ್ರೀಕರ ಅನೇಕ ಪೌರಾಣಿಕ, ಐತಿಹಾಸಿಕ, ಧಾರ್ಮಿಕ ಪ್ರಸಂಗಗಳ ದೃಶ್ಯ ಇಲ್ಲಿ ಚಿತ್ರಿತವಾಗಿವೆ. ಪೂರ್ವದ ಕಮಾನಿನಲ್ಲಿ ಅಥೆನಾ ದೇವತೆ ಮಹಾದೇವನ ಮಾನಸಪುತ್ರಿಯಾಗಿ-ಜಯೋನಿಜೆಯಾಗಿ-ಜನಿಸುವ ದೃಶ್ಯ ಕಂಗೊಳಿಸುವುದು. ಅಥೆನ್ಸ್ ರಾಜಧಾನಿಯಾದ ಆಟ್ಟಿಕಾನಾಡಿನ ಆಧಿಪತ್ಯಕ್ಕಾಗಿ, ಅಥೆನಾ ದೇವತೆಗೂ ಪಾಸಿಡಾನ್ ದೈತ್ಯನಿಗೂ ನಡೆದ ಯುದ್ಧದ ದೃಶ್ಯ ಪಶ್ಚಿಮದ ಕಮಾನಿನಲ್ಲಿದೆ. ಮತ್ತೆರಡು ಕಮಾನುಗಳಲ್ಲಿ ಮನುಷ್ಯಾಕೃತಿಯ ಇಮ್ಮಡಿ ಎತ್ತರದ ಪ್ರತಿಮೆಗಳ ವರ್ಣಚಿತ್ರಗಳುಂಟು. ಊರ್ಧ್ವಭಾಗದಲ್ಲಂತೂ ಗ್ರೀಕರ ಮಹೋತ್ಸವದ ಮೆರವಣಿಗೆಯ ದೃಶ್ಯ ದೃಗ್ಗೋಚರವಾಗುವುದು. ಪೂರ್ವಭಾಗದ ಮಧ್ಯಭಾಗದಲ್ಲಿ, ಗುಂಪುಗೂಡಿದ ಸಕಲ ಗ್ರೀಕ ದೇವತೆಗಳ ಸಂದರ್ಶನ ಸಕೃತ್‌ಕಾಲಕ್ಕಾಗುವುದು. ಇನ್ನು ಒಳಪಲಯದಲ್ಲಿ ೨ ಸಿಲಯಗಳಿದ್ದು, ಒಂದರಲ್ಲಿ ಅಥೆನಾದೇವತೆಯ ಆ ಭವ್ಯಪ್ರತಿಮೆಯಿತ್ತು. ಬೆಟ್ಟವೇರಿ ಗುಡಿಯ ಎದುರಿಗೆ ನಿಂತರೆ, ಸಂಗಮರವರು ಪುಭ್ರಶಿಲೆಯೊಳಗಿಂದ ಸೂಸಿಬರುವ ಹೊಳಿಹೊಳಿವ ಬೆಳಕಿನಲ್ಲಿಯೂ, ಮುಹಾಧ್ಯಾರದ ಪ್ರಕಾಶದಲ್ಲಿಯೂ ದೇವತಾದರ್ಶನವಾಗುತ್ತಿತ್ತು. ಈ ದೇವತಾಪ್ರತಿಮೆಯ ಪ್ರಭಾವಳಿಯಲ್ಲಿ ಅಳವಡಿಸಿದ ಬಂಗಾರದ ತೂಕ ೮೦೦ ಪೌಂಡು ಸ್ಟರ್ಲಿಂಗ್ ಭಾರವಿತ್ತು. ಗುಡಿಗೆ ಬೇಕಾದ ಎಲ್ಲಾ ಸಾಮಗ್ರಿ ಅತ್ಯಂತ ಅನೌಲ್ಯವಾದುದೇ ಇತ್ತು. ಸಾವಿರಾರು ಶಿಲ್ಪಿಗಳು, ಗುತ್ತಿಗೆದಾರರು, ವ್ಯಾಪಾರಿಗಳು, ಕೈಗಾರಿಕೆಯವರು ಇವರೇ ಮೊದಲಾದವರು ೨೦ ವರ್ಷಗಳ ವರೆಗೆ ಸತತ ಕೆಲಸ ಮಾಡಿದರೆಂದ ಮೇಲೆ, ದೇವತಾಕಾರ್ಯದಲ್ಲಿ ಗ್ರೀಕರಿಗಿದ್ದ ಅಭಿಮಾನವೆಂತಹದೆಂಬುದನ್ನು ನೀವೇ ಊಹಿಸತಕ್ಕದ್ದು.

ಈ ಗುಡಿ ಮುಂದೆ ೯೦೦ ವರ್ಷ ಅಚ್ಚಳಿಯದೆ ಉಳಿಯಿತು. ಅದು ಮುಗಿದ ೬೦೦ ವರ್ಷಗಳ ಬಳಿಕ ಅದನ್ನು ಕಣ್ಣಾರೆ ಕಂಡು ರೋಮಾಂಚಿತನಾದ ಪ್ಲುಟಾರ್ಕ್ ಎಂಬ ಚರಿತ್ರಕಾರನು ಇಂತು ಸಾರಿದ್ದಾನೆ:— "ಗುಡಿ ಮತ್ತು ಸಾರ್ವಜನಿಕ ಕಟ್ಟಡ ಕಟ್ಟುವ ಕೆಲಸದಲ್ಲಿ ಅಥೆನ್ಸ್‌ನವರು ಮೈಮರೆತು ಮೈಯುಬ್ಬಿ ಬಿಡುವುದುಂಟು. ಅನ್ಯರಿಗ ಇದೆಲ್ಲಾ ಅಗಾಧವೆನಿಸುವುದು; ಅವರಿಗೋ ಅದು ಲೀಲಾಜಾಲ! ಪಾರ್ಥೆನಾನಿನಂತಹ ಅತ್ಯದ್ಭುತ ದೇವಮಂದಿರ, ಓಡಿಯಾನಂಥ ನವೋನವ ನಾಟ್ಯಮಂದಿರ ಇವನ್ನು ಲೀಲೆಯಲ್ಲಿ ನಿರ್ಮಿಸಿದರಲ್ಲದೆ, ಅಲೌಲಿಕ ಸೌಂದರ್ಯ ನನೆಕೊನೆವೋಗುವಂತೆ ಪರಿಪೂರ್ಣತೆಗೆ ಮುಟ್ಟಿಸುವ ಕಾರ್ಯವನ್ನು ಶ್ರೇಷ್ಠರೀತಿಯಿಂದ ನೆರವೇರಿಸಿದ್ದಾರೆ. ಪ್ರತಿಶಿಲ್ಪಿಯೂ ಹೊಳಪುಗಳ ಕುಸುರುಗಳ ವಿವರಗಳಲ್ಲಿ, ನಾ ಮೇಲು ತಾಮೇಲೆಂದು ಸೂಕ್ಷ್ಮಸುಂದರ ಶಿಲ್ಪಕೃತಿಯನ್ನು ಸೃಷ್ಟಿಮಾಡಿದ್ದಾನೆ. ಇಷ್ಟು ನಯ-ನಾಜೂಕಿನ ಕೆಲಸವನ್ನು ವರು ಎಷ್ಟು ತ್ವರೆಯಿಂದ ನೆರವೇರಿಸತ್ತಿದ್ದರೆಂಬುದು ಬೆರಗುಗೊಳಿಸುವ ಸಂಗತಿಯೇ ಸರಿ. ೬೦೦ ವರ್ಷ ಕಳೆದರೂ ಇಂದಿಗೂ ಅವು ನಳನಳಿಸುವುವು. ಅವುಗಳ ಚೆಲುವಿನ ಮೀಸಲನ್ನು ಕಾಲಪುರುಷನೂ ಮುರಿಯಲಾರನು. [ಅಹಾ! ಅವು ಇಂದಿಗೂ ತಾರುಣ್ಯದಿಂದ ಪ್ರಜ್ವಲಿತವಾಗಿವೆ, ಕಲ್ಲಿನಲ್ಲೂ ಜೀವಕಳೆ ತುಂಬಿ ಅಮರ ಆತ್ಮ ಇಲ್ಲಿ ನೆಲೆಗೊಂಡಿವೆ!]

ಆದರೆ ಕಾಲ ಬದಲಾಯ್ತು. ಕ್ರೈಸ್ತಧರ್ಮದ ಪ್ರಸಾರವಾದಂತೆ, ಕ್ರಿ. ಶ. ೫ನೆಯ ಶತಕದಲ್ಲಿ ಅಥೆನಾ ದೇವತೆಯ ಭವ್ಯ ಪ್ರತಿಮೆಯ ಉತ್ಥಾಪನೆಯಾಯಿತು. ಗ್ರೀಕರ ಈ ಪಳೆಯ ಗುಡಿ ಸೇಂಟ್ ಸೋಫಿಯಾ ಚರ್ಚ್ ಆಗಿ, ಯೇಸುಪನ ಕುಮಾರಿಮಾತೆಗೆ ಅರ್ಪಿತವಾಯ್ತು. ಗುಡಿ ಚರ್ಚ್ ಆಗುವಾಗ, ಮೂಲಶಿಲ್ಪಕ್ಕೆ ಎಷ್ಟೋ ಭಂಗ ಬಂತು. ಬಾಗಿನ ಕೆಲ ಕಂಬ, ಮಾಳಿಗೆ ಕಳಚಿದುವು. ಗರ್ಭಗುಡಿ ಬೇಕೊಂದು ಬಾಗಿಲು ಆಯ್ತು.

ಮುಂದೆ ೧೪೫೭ ರಲ್ಲಿ ಅಥೆನ್ಸ್ ತುರ್ಕರ ದಾಳಿಗೆ ತುತ್ತಾಯ್ತು. ಬಳಿಕ, ಪಾರ್ಥೆನಾನ್ ಮಸೀದಿಯಾಯ್ತು. ಗುಡಿಯ ಮೇಲೆ ಮಿನಾರ ಮೆರೆಯಿತು. ಕಟ್ಟಡದಲ್ಲಿ ವಿಶೇಷ ಬದಲಾಗಲಿಲ್ಲ. ಈ ಸ್ಥಿತಿಯಲ್ಲಿದ್ದ ಪಾರ್ಥೆನಾನದ ಚಿತ್ರಗಳನ್ನು ಫ್ರೆಂಚ್ ಚಿತ್ರಕಾರ ಕ್ಯಾರಿ ಎಂಬವನು ೧೬೭೪ರಲ್ಲಿ ತಾನು ಕಂಡಂತೆ ಚಿತ್ರಿಸಿದ್ದಾನೆ. ೧೬೭೭ರಲ್ಲಿ ಸ್ಪಾನ್ ಮತ್ತು ವ್ಹೀಲರ್ ಎಂಬ ಪ್ರವಾಸಿಗಳು ವರ್ಣಿಸಿದ್ದಾರೆ. ೧೬೮೭ರಲ್ಲಿ ವೆನೀಯನ್ನರು ಮುತ್ತಿಗೆ ಹಾಕಿದಾಗ, ತುರ್ಕರು ಈ ಕಟ್ಟಡವನ್ನು ಮದ್ದಿನ ಉಗ್ರಾಣವಾಗಿ ಉಪಯೋಗಿಸಿದರು. ಆಗ್ಗಮದ್ದಿನ ಸ್ಫೋಟದಿಂದ ಗುಡಿಯ ಮಧ್ಯಭಾಗ ಹೊಡೆದೆದ್ದು ಹೊರಗೆ ಬಂತು. ಎಷ್ಟೋ ಕಂಬ ಕಳಚಿ ಅಸ್ತವ್ಯಸ್ತವಾದುವು. ಮುಂದೆ ಮೊರೋಸನಿಯೆಂಬವನು ಅಥೆನಾದೇವತೆಯ ರಥ ಕೆಳಗುರುಳಿಸಲು ವ್ಯರ್ಥ ಪ್ರಯತ್ನ ಪಟ್ಟಾಗ ಗುಡಿಯ ಶಿಲ್ಪಕೃತಿಗಳಿಗೆ ಮತ್ತಿಷ್ಟು ಧಕ್ಕೆ ತಗುಲಿತು. ಅವಶೇಷಗಳೊಂದಿಗೆ ಸಣ್ಣ ಮಸೀದಿಯೊಂದನ್ನು ಕಟ್ಟಲಾಯ್ತು. ಮುಂದೆ ೧೮ನೆಯ

ಶತಕದಲ್ಲಿ ಸಹಜ ಜೀರ್ಣಾಂಶಬಟ್ಟಿದೆ, ವಿಶೇಷ ಸ್ಥಿತ್ಯಂತರವಾಗಲಿಲ್ಲ ವೆಂಬುದಕ್ಕೆ ಜೇಮ್ಸ್ ಸ್ಟೂಅರ್ಟ್ ಹಾಗು ನೇಕೋಲಸ್ ರೆವ್ಹಿಟ್ ಎಂಬ ಆಂದಿನ ಚಿತ್ರಕಾರರು ತೆಗೆದ ರಮ್ಯ ರೇಖಾಚಿತ್ರಗಳೇ ಸಾಕ್ಷಿ.

ಬಳಿಕ ೧೮೦೧ ರಲ್ಲಿ ಗ್ರೀಸದಲ್ಲಿ ಇಂಗ್ಲಂಡಿನ ರಾಯಭಾರಿಯಾಗಿದ್ದ ಲಾರ್ಡ್ ಎಲ್ಜಿನ್‌ನೆಂಬ ಗೃಹಸ್ಥನು ಅಧಿಕಾರಪತ್ರ ಪಡೆದು, ಅಲ್ಲಿದ್ದ ಅನೇಕ ಶಿಲ್ಪಕೃತಿಗಳನ್ನು ಸ್ಥಳಾಂತರಿಸಿ ಇಂಗ್ಲಂಡಿಗೆ ಒಯ್ದನು. ಅವಶ್ಯವಿದ್ದ ಭಾಗ ಕೆಡವಿದ್ದೂ ಆಯ್ತು. ಎಕ್ರೊಪಾಲಿಸದ ನೆಲದ ಮೇಲೆಯೂ, ಎಸ್ಟೋ ತುರ್ಕಿ ಮನೆಗಳಲ್ಲಿಯೂ ಇದ್ದ ಬಿದ್ದ ಅವಶೇಷಗಳನ್ನೆಲ್ಲಾ ಈ ಗೃಹಸ್ಥನು ಒಯ್ದುಬಿಟ್ಟನು. ಹೀಗೆ ಸ್ಥಳಾಂತರಿಸಿದ್ದು ತಪ್ಪಾಯ್ತೆಂದು ಹೇಳಬಹುದು. ಆದರೆ ಇನ್ನಿತರ ಕಾರಣಗಳಿಂದ ಹಾಳಾಗಬಹುದಾದುದನ್ನು ತಪ್ಪಿಸಿ, ಅವಶೇಷಗಳನ್ನೆಲ್ಲಾ ಒತ್ತಟ್ಟಿಗೆ ಜಪ್ಪಿಸಿಟ್ಟು ಕಾಯ್ದ ಕೀರ್ತಿ ಮಾತ್ರ ಇವನಿಗೆ ಸಲ್ಲುವುದು. ಬ್ರಿಟಿಶ್ ಪಾರ್ಲಿಮೆಂಟಿನವರು ೪೫೦೦೦ ಪೌಂಡು ಹಣ ಕೊಟ್ಟು ಆ ಶಿಲ್ಪಕೃತಿಗಳನ್ನೆಲ್ಲಾ ಕೊಂಡುಕೊಂಡು, ಲಂಡನ್ನಿನ ಬ್ರಿಟಿಶ್ ವಸ್ತು ಸಂಗ್ರಹಾಲಯದಲ್ಲಿ ಇಟ್ಟಿದ್ದಾರೆ. ಇವುಗಳಿಗೆ Elgin Marbles ಎಂದು ಹೆಸರು ಬಿದ್ದಿದೆ. ಫೀಡಿಯಸ್ಸನಿಂದ ನಿರ್ಮಿತವಾದ ಅನೇಕ ಅಪೌಲ್ಯ ಶಿಲ್ಪಕೃತಿ ಈಗ ಲಂಡನ್ನಿನಲ್ಲೇ ನೋಡಲು ದೊರೆಯುತ್ತವೆ. ಹೀಗೆ ಜನರು ಆಗಾಗ ಎತ್ತಿಕೊಂಡು ಹೋದ ಶಿಲ್ಪಕೃತಿಗಳ ತುಣುಕುಗಳು ಕೊಪೆನ್‌ಹೆಗೆನ್ ಮುಂತಾದ ಇತರ ನಗರಗಳಲ್ಲೂ ಇವೆ. ಇಷ್ಟೆಲ್ಲಾ ಮಹತ್ತ್ವದ ಸುಂದರ ಕೃತಿ ಕಳೆದರೂ, ಅಥೆನ್ಸ್‌ನಲ್ಲಿ ಇಂದಿಗೂ ಪಾರ್ಥೆನಾನ್ ಗುಡಿಯಪ್ರದೇಶದಲ್ಲಾಗಲಿ Acrapolis Museum ನಲ್ಲಾಗಲಿ ಇನ್ನೂ ಅನೇಕ ರಮ್ಯ ಶಿಲ್ಪಕೃತಿಗಳು ನೋಡ ತಕ್ಕಂಥವು ಇದ್ದೇ ಇವೆ. ಆದರೂ ಗುಡಿಯು ಮೂಲವೈಭವದ ನನಸಿನ ಕಲ್ಪನೆ ನಮಗೆ ಬರಬೇಕಾದರೆ, ಕಳಚಿ ಆಗಲಿ ಹೋದ ಭಾಗಗಳನ್ನೆಲ್ಲಾ ಅಲ್ಲಲ್ಲಿ ಅಳವಡಿಸಿ, ಜಗತ್ತಿನ ಆಡಿ ಎತ್ತರದ ಆ ಗಿರಿಯ ಮೇಲೆ ಅವನ್ನೊಯ್ದು ತಕ್ಕ ಸ್ಥಳದಲ್ಲಿ ಪ್ರಸ್ಥಾಪಿಸಿದ್ದೇವೆಂಬ ಕನಸನ್ನೇ ಕಾಣಬೇಕು.

ಕನ್ನಡ ಮಕ್ಕಳೇ! ಇಂಥ ಗುಡಿಯ ಪ್ರಾಣವೆನಿಸಿದ ಆ ಅಥೆನಾ ಪ್ರತಿಮೆ ತನ್ನ ಸ್ಥಳದಲ್ಲಿ ಇಂದು ಇಲ್ಲವಾಗಿದೆ. ಆದರೆ ಅದರ ಎರಕದ ಕೆತ್ತನೆಯ ಸ್ಥಳ ಇಂದಿಗೂ ನಮಗೆ ಬೋಧಪ್ರದವಾಗಿ ಆನಂದಕರವಾಗಿದೆ. ಇದರ ಹಾಗು ಇತರ ಭಾಗಗಳ ಸುಂದರ ಭಾವಚಿತ್ರಗಳನ್ನು, **ಮಿ. ಎ. ಎಸ್. ಮುರ್ರೆ**ಯವರು ಬಹು ಚೆನ್ನಾಗಿ ತೆಗೆದು Sculpture of Parthenon ಎಂಬ ತಮ್ಮ ಗ್ರಂಥದಲ್ಲಿ ಪ್ರಸಿದ್ಧಿಸಿದ್ದಾರೆ. Book of Knowledge ಎಂಬ ಗ್ರಂಥಮಾಲೆಯ ೭೦ನೆಯ ಸಂಪುಟದ ೫೨೦೫ನೆಯ ಪುಟದಲ್ಲಿ, ಈ ಗುಡಿಯ ಸುಂದರ ಚಿತ್ರಗಳಿವೆ. Architecture Greek Art ಎಂಬ ಲೇಖನವಿದ್ದ Encyclopedia Britanica ಸಂಪುಟದಲ್ಲಿ ಈ ಬಗ್ಗೆ ಒಳ್ಳೆಯ ಚಿತ್ರಗಳಿವೆ. Historians' History of the world ಎಂಬ ಗ್ರಂಥಮಾಲೆಯ ೩೧ನೆಯ ಸಂಪುಟದ ೪೪೯ನೆಯ ಪುಟದಲ್ಲಿ, ಜೀರ್ಣೋದ್ಧಾರಗೊಂಡ ಈ ಗುಡಿಯ ಸುಂದರ ಚಿತ್ರವಿದೆ. ನಿಮ್ಮ ಶಾಲೆಗಳಲ್ಲಿ ಈ ಗ್ರಂಥ ಇದ್ದರೆ, ಈ ಚಿತ್ರ ತೆರೆದು ತೋರಿಸಲು ನಿಮ್ಮ ಶಿಕ್ಷಕರನ್ನು ಕೇಳಿರಿ. Last Days of Pompey ಎಂಬೀ ಕೆಲವು ಫಿಲ್ಮುಗಳಲ್ಲಿ, ಈ ಗುಡಿಯ ಕೆಲ ಚಿತ್ರ ತೋರಿಸುವರು; ಅಂತಹ ಫಿಲ್ಮು ಬಂದಾಗ ಅವಶ್ಯ ನೋಡಿರಿ; ನೀವು ದೊಡ್ಡವರಾದ ಮೇಲೆ ಪ್ರಪಂಚದ ಪ್ರವಾಸ ಕೈಕೊಂಡಾಗ ಅಥೆನ್ಸಿಗೂ ಲಂಡನಿಗೂ ಹೋಗಿ, ಜಗತ್ತಿನಲ್ಲೇ ಅದ್ವಿತೀಯವೆನಿಸಿದ ಈ ಶುಭ್ರಶಿಲಾಶಿಲ್ಪ ಮಂದಿರವನ್ನೂ ಇತರ ಶಿಲ್ಪಕೃತಿಗಳನ್ನೂ ಕಣ್ಣಾರೆ ಕಂಡುಬನ್ನಿರಿ! ಬಿಳಿಯ ಸಂಗಮರವರಿ ಶಿಲೆಯ ವೈಭವವನ್ನು ನಮ್ಮ ಭಾರತದಲ್ಲಿ ನೋಡುವುದಾದರೆ, ಆಗ್ರಾದ ಯಮುನಾತೀರದಲ್ಲಿ ಕಲ್ಲಿನಲ್ಲಿ ಕುಸುರಿಸಿದ ಕರುಣಾಗೀತವೇ ಆದ ಶಹಾಜಹಾನನ ತಾಜಮಹಲನ್ನು ನೋಡಿರಿ! ಕರಿಯ ಕಲ್ಲಿನ ಕಲೆಯ ಕುಸುರನ್ನು ಕಾಣಬೇಕಾದರೆ ನಮ್ಮ ವಿಜಾಪುರದ ಇಬ್ರಾಹಿಮರೋಜಾ ಕಟ್ಟಡ ನೋಡಿರಿ. ಅದರಂತೆಯೆ ಐಹೊಳೆ-ಪಟ್ಟದ ಕಲ್ಲು– ಬಾದಾಮಿ– ಬೇಲೂರು- ಸೋಮನಾಥಪುರ– ಹಂಪೆ– ಲಕ್ಕುಂಡಿ– ವೇರೂಳಗಳ ಎಲ್ಲಾ ಗುಡಿ ನೋಡಿ, ಕರ್ನಾಟಕ ಶಿಲ್ಪ-ಕಲೆಯ ಪರಿಚಯವನ್ನು ಮೊದಲು ನೀವು ಮಾಡಿಕೊಂಡರೆ, ಜಗತ್ತಿನ ಅಗಾಧ ಶಿಲ್ಪಕೃತಿ, ಸಿಸ್ಯಾಮಿಡ್-ಪಾರ್ಥೆನಾನಗಳ ಸ್ಪಷ್ಟಕಲ್ಪನೆ ನಿಮಗಾಗಬೀತು. ಅಥೆನಾ ದೇವತಾಪ್ರತಿಮೆಯ ಅದ್ಭುತರಮ್ಯಕಲ್ಪನೆ ಬರಬೇಕಾದರೆ, ಕನ್ನಡಿಗರ ಗೊಮ್ಮಟೇಶ್ವರನನ್ನು ಒಮ್ಮೆಯಾದರೂ ನೀವು ನೋಡಬೇಕು. ಕೊನೆಗೆ ಮಾಯಾದೀಪಗಳ ನೆರವಿನಿಂದಾದರೂ ನಿಮ್ಮ ಶಾಲೆಯಲ್ಲಿ, ಜಗತ್ತಿನ ಇಂತಹ ಶ್ರೇಷ್ಠ-ಜ್ಯೇಷ್ಠ ಕಟ್ಟಡಗಳ ಹಾಗು ಪ್ರತಿಮೆಗಳ ಚಿತ್ರ ನೋಡಿ ನಲಿಯಿರಿ. ಜಗತ್ತಿನ ಚರಿತ್ರೆ ಅತ್ಯದ್ಭುತವಿದೆಯೆಂಬುದಕ್ಕೆ ಇಂತಪ ಕಟ್ಟಡಗಳ ಕಲ್ಲು ಕೂಡ ಸೌನದಿಂದ ಸಾಕ್ಷಿ ನುಡಿಯುತ್ತಿವೆ. ಅವುಗಳ ಮೂಕಮಾತಿನ ಅರ್ಥ ತಿಳಿದುಕೊಳ್ಳುವ ಜಾಣರು ನೀವಾಗಬೇಕು. ಜಗತ್ತಿನ ಚರಿತ್ರೆಯಲ್ಲೇ 'ನ ಭೂತೋ ನ ಭವಿಷ್ಯತಿ' ಎಂಬಂತೆ, ಪೆರಿಕ್ಲೀಸನ ಕಾಲದಲ್ಲಿ ಸಕಲ ಗ್ರೀಕ ನಾಗರಿಕರೂ ಸುಂದರ ಕಲಾಭಿರುಚಿಯುಳ್ಳವರಾಗಿದ್ದರೆಂದು ತಿಳಿಯುತ್ತದೆ. ಅಂತಹ ಕಲಾಪ್ರಿಯ ರಸಿಕ ನಾಗರಿಕರು ನೀವಾಗಲೆಂದು ಪಾರ್ಥೆನಾನದ ಆ ಅಥೆನಾದೇವತೆಯಲ್ಲಿ ಬೇಡುವೆ.

ಕೊನೆಯದಾಗಿ, ಈ ಗುಡಿಯ ರಚನೆಯ ಒಂದು ದೊಡ್ಡ ವೈಶಿಷ್ಟ್ಯವೆಂದರೆ, ಗ್ರೀಕರ ಕಲಾಸುಂದರ ದೃಷ್ಟಿ ಮಹೋನ್ನತವಾಗಿತ್ತೆಂಬುದು. ತಮ್ಮ ಕಲಾಭಿರುಚಿಯಿಂದ ಭೂಮಿತಿಯನ್ನೂ ಹಿದ್ದಿ ತೋರಿಸುವ ಕೌಶಲ್ಯವನ್ನು ಅವರು ಅರಿತಿದ್ದರು. ಈ ಗುಡಿಯಲ್ಲಿ ಎಲ್ಲಿಯೂ ಸಂಪೂರ್ಣ ಸಪಾಟಾದ ಪ್ರದೇಶವೇ ಕಾಣುವುದಿಲ್ಲ. ಎಲ್ಲಾ ಕಂಬ ಸಮಾಂತರದಲ್ಲಿರದೆ, ಕೋನ ಸಮೀಪದುವುಗಳು ಸ್ವಲ್ಪ ಸಮಿಸಮೀಪದಲ್ಲಿನೆ. ಇನೆಲ್ಲವೂ ತಮ್ಮ ಕೇಂದ್ರದ ನಿಟ್ಟಿಗೆ ಕೊಂಚ ಹೊರಬದಿಗೆ ಬಾಗಿದಂತೆ ತೋರುವುದು ವಸ್ತು ಸ್ಥಿತಿಯಾಗಿದ್ದರೂ ಈ ಸಂಗತಿ ನಮ್ಮ ಕಣ್ಣಿಗೆ ತಿಳಿಯುವುದೇ ಇಲ್ಲ. ಇವರಲ್ಲಿಯೇ ಕಂಬಗಳ ಕಮನೀಯತೆಯ ರಹಸ್ಯವಿದೆ. ಇದರಿಂದಾಗಿ ಕಂಬಗಳ ಸಾಲುಗಳೂ ಗೋಡೆಗಳೂ– ಎಲೇಕ ಇಡೀ ಕಟ್ಟಡವೇ– ಮೋಡಗಳ ಮುಗಿಲಿನಲ್ಲಿ ಮರೆಯಾಗಿ ಬಿಡುವ ಅದಾವುದೋ ಒಂದು ಅದೃಷ್ಟಬಿಂದುವಿನ ಬದಿಗೆ ಒಳಗಡೆಗೆ ಬಾಗಿದಂತೆ ಭಾಸವಾಗುತ್ತದೆ; ಹಾಗು ಉಷ್ಣವಾವ ಸಕಲ ರೇಖೆಗಳೂ ಬಾಷ್ಪಗೋಲಾಕೃತಿಯ ಗೆರೆಗಳಾಗಿ ತೆರನು ತೋರುವುವು. ಅದರ ಇವೆಲ್ಲಾ ಬಹು ನಯವಾಗಿ ಒದಗಿ ಬರುವುದು. ಇಲ್ಲಿಯ ಯಾವುದೇ ಪ್ರದೇಶದಲ್ಲಿ ಕಣ್ಣು ಬೆಳಕೂ ಮೆಲ್ಲನೆ ತೇಲಿಬಂದಂತಾಗಿ, ಕಟ್ಟಡಕ್ಕೆ ಅಲೌಕಿಕ ಕಲಾಶೋಭೆಯೂ ಪೂರ್ಣ ಪ್ರಭಾವವೂ ಪ್ರಾಪ್ತವಾಗುತ್ತವೆ. ಇಜಿಪ್ತದ ಸಿಸ್ಯಾಮಿಡ್

ನೋಡುವಾಗ, ನೋಟ ಹತ್ತಿಕ್ಕೆ ಸನವರಿದಂತಾಗಿ ಹೊರಲಾರದಂತಾಗುವಂತೆ ಇಲ್ಲಿ ಆಗುವುದಿಲ್ಲ. ವೆಸ್ಟಿಣದ ಮುಂಭಾಗದಲ್ಲಂತೂ ಬಾಗು ವಿಕೆಯ ಏರಿಕೆ ಳ್ತಿ ಇಂಚಿನಷ್ಟು ಮಾತ್ರ ಆಗುವುದು. ಹೀಗೆ ನಮ್ಮ ನೋಟಕ್ಕೆ ಮಾಟವಾಡುವ ಇಂದ್ರಜಾಲಶಕ್ತಿ ಇಲ್ಲಿಯ ಶಿಲ್ಪಕ್ಕಿದೆ. ಇಷ್ಟೆಲ್ಲಾ ಅಸಾಧಾರಣ ಸೃಷ್ಟಿಯ ರೀತಿ ಕಂಡುಬರುವುದು ಇಲ್ಲಿಯ ಬಿಳಿಯಕಲ್ಲಿನ ಗುಣವೂ ಸರಿ; ಹಾಗೂ ಶಿಲ್ಪಿಗಳ ಗುರುವರ ವಿಶ್ವಕರ್ಮ ಷೀಡಿಯಸ್ಸನ ಆತ್ಮಶಕ್ತಿಯ ಶಾಂತ ಸತ್ತ್ವಾತಿಶಯದ ಪರಮ ಪ್ರಭಾವವೂ ಸರಿ. ಇಂತಹ ಸತ್ಯಸುಂದರ ಗ್ರೀಕ್ ಶಿಲ್ಪಕೃತಿಗಳ ಚೆಲುವನ್ನು ಕಂಡೇ ಕೀಟ್ಸ್‌ಕವಿ "Beauty is Truth & Truth is Beauty ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ" ಎಂಬ ಸೂತ್ರವಾಕ್ಯವನ್ನು ತನ್ನ ಅಮೃತವಾಣಿಯಿಂದ ಹೇಳಿರುವನಲ್ಲವೇ? ನಿಸರ್ಗದಲ್ಲೂ ಈ ಅಮೃತ ತತ್ತ್ವವನ್ನು ಅನುಭವಿಸಿದ ಭಾರತದ ಋಷಿಗಳು "ಸತ್ಯಂ ಶಿವಂ ಸುಂದರಂ" ಎಂಬ ಮಂತ್ರ ಉಸುರಿದರು. ಸತ್ಯ–ಸೌಂದರ್ಯಗಳು ಸೂರ್ಯಕಿರಣಗಳಂತೆ ನಮ್ಮನ್ನು ಚೈತನ್ಯ ಸ್ವರೂಪರೆಂದು ಎಚ್ಚರಿಸುವುವಲ್ಲದೆ ನಮಗೆ ಬೆಳಕನ್ನೂ ಕೊಡುತ್ತವೆ. ಶಿಲ್ಪಿಯ ದರ್ಶನ ತೀಕ್ಷ್ಣವಾಗಿ ಪೂರ್ಣತೆಯ ಅನುಭವವು ಅವನಿಗೆ ಫಲ ಕೊಡುತ್ತ ನಡೆದಂತೆ, ಅವನು ತನ್ನ ಅನುರೂಪಕೃತಿಗಳನ್ನು ನಿರ್ಮಿಸುತ್ತಾ ನಡೆಯುವನು. ಹೀಗೆ ಚತುರಶಿಲ್ಪಿಯು ನಿರ್ಮಿಸುವ ಶುಭಕೃತಿಗಳು ನೋಡಲು ನೆನೆಯಲು ಚೆಲುವಾಗಿರುವುವಲ್ಲದೆ ಸೂರ್ಯಕಿರಣಗಳಂತೆ ಜೀವಂತ ಸ್ಫೂರ್ತಿಯ ಉತ್ಸಾಹ ಶಕ್ತಿಯ ಉಗಮಸ್ಥಾನಗಳಾಗಿವೆ. ಇಂತಹ ಶಿಲ್ಪಕೃತಿಗಳ ಅಭಿಮಾನಿನೀವತೆಗಳನ್ನುದ್ದೇಶಿಸಿ ಕನ್ನಡ ನಾಡ ಹಿರಿಯರಲ್ಲೊಬ್ಬರಾದ **ಡಿ. ವಿ. ಗುಂಡಪ್ಪನವರು** ಬರೆದ ಪದ್ಯದ ಕೆಲವು ಚರಣಗಳನ್ನು ಕೊನೆಗೆ ನಿಮಗೆ ಅಂದು ತೋರಿಸುವೆ:

"ಅವ್ಯಕ್ತ ನಿನದದಿಂದಳಲಂಕಿತಾಂಗದಿಂ–
ದನ್ಯೂನ ಕರುಣತೆಯಿನಮಿತ ಯಶದಿಂ
ಚಿರಕಾಲಮೆನಿಪುದಾ ಚಿತ್ತವೇಥನಿಯರಿರ
ಕುದಿವ ಲೋಕಳೆ ಮುಂದಣ ತಣವ ಬೀರಿ;
ಸೌಂದರ್ಯಮೇ ವಿಶ್ವತತ್ತ್ವಮಾ ಪರತತ್ತ್ವ–
ಭಾಷನೇ ಸೌಂದರಮೆನುತ ಸಾರಿ,
ನಿಮಗೆ ಜನ್ಮವನಿತ್ತ ಚಿತ್ರಚತುರರ ಚಿತ್ತ.
ದೇಕಾಗ್ರ, ಭಕ್ತಿದೀಪಿಕೆಯ ಬೆಳಗಿ,

ಹೊಳೆಯಿರೌ ಸರಸ ಜೀವನಮಂತ್ರ ಗುರುಗಳೆನಿಸಿ;
ಹಳಿಯಿರೌ ಮಧುರಭಾವನ ಹಳಿವ ವಿಕೃತಮತಿಯಂ!
ಕಳೆಯಿರೌ ರಸಕಲಾ-ನಿಮುಖತೆಯ ಜನದ ಮನದಿಂ;
ಬೆಳೆಯಿರೌ ಪ್ರೇಮಧನೋದ್ಧರಣ ನಿಧಿಯೊಳೆಂದುಂ!"

"ಹಂಸ"

ಕವಿ:— **ಕೆ. ಅಶ್ವತ್ಥನಾರಾಯಣರಾವ್, ಮುಂಬಾ**

(ಕೋಟೀಶ್ವರ ಮಂತ್ರಮುಂಡಲಿಯವರ ಕವಿತಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದೆ.)

ತೂರುಮುಳೆ ತುಂತುರಿನ
ಮುಂಜಾನೆಯಂದು;
ಕಿಟಕಿಯಲಿ ಕೊನೆತೂರಿ
ನೋಡಿದೆನು ನಿಂದು;
ಮುಚ್ಚಿನೋಳುತೋರಿದುದು
ರಮ್ಯಚಿತ್ರವದು—
ತೆರೆಗಳಿದ ಅಪ್ಸರೆಯೊ
ನೆರೆ ಹುಡುಗಿಯವಳು!
ಹದಿಮೂರು ಹರಯದಾ
ಎಳ ಹೆಣ್ಣು ಚೆಲುವೆ;
ಬೇಲಿ ಬಾಗಿಲ ಸೇರಿ
ಚಿತ್ರಪಟದಂತೆ.
ತೆಳುದೇಹ ತಿಳಬಣ್ಣ
ಬಿಳಿಸೀರೆ, ರವಿಕೆ;
ಬೆಳಗುಮೊಗ ಬಾಳೆಗೊರ–
ಲುದ್ದ ಕಾಡಿಗೆಣೆ;
ಅಪ್ಪಿಬಾಗಿಲ ಬಳಸಿ
ಹೂಬಳ್ಳಿಗಾಗಿ,
ದೇಹಲತೆಗಾಧಾರ
ಬಲದೋಳುಬಾಗಿ—
ಹಸಿರು ತೋರಣ ಹೊಲುಸು
ಜಾಜಿಬಳ್ಳಿಗೆ ನೀಡಿ,
ತಾರೆಕುಸುಮವ ಸೇರಿ
ಎಡದ ಕೈಗೂಡಿ;
ಜೋಲ್ಬಿದ್ದ ಜಡೆಯೂಡಿ
ಮುಡಿದೊಂದು ಅಲರು
ಅರೆಯೆತ್ತಿನಗುವ ಮೊಗ
ತೊನೆವ ಬಿಡಿಕುರುಳು!
ಈಗೀಗ ಉಬ್ಬುವೆದೆ
ಸೆರಗ ಸೆಳೆದಲರು,
ಆಗಾಗ ಮುಚ್ಚುವೆವೆ
ಬಿಡುಗೈಯ್ಯ ಬಿಂಕ.
ನಸುಬಾಗುವೆಡೆ ಬಳುಕು
ಸಣ್ಣನಡು ತಳುಕು,
ಬೇಸಗೆಗೆ ಬಿಳಿಸೀರೆ
ನೆರಿಯವಳು ಸೀರೆ.
ಬಾಗಿಲಿನ ಮೇಲೂರಿ
ಎಡದ ಕಿರುಪಾದ,
ಇದಕಷ್ಟು ಮೆಲೆತ್ತಿ
ಚಿಗುರುಕಾಲ್ ಬಲದ.
ಆ ಎಳೆಯನೊಗದ ಸೊಗ
ಹೊಳೆಗಣ್ಣ ಮಿಂಚು,
ಹಾಲ್ಗೆನ್ನೆ ನಾ ಬಲ್ಲೆ
ನಿಮಗೆಲ್ಲ ಪಾಪ!
ಹಾಡಿಕೊಂಡಳು ಹುಡುಗಿ
ತನಗೆ ತಾನಾಗಿ–
ನುರಿತ ಬೆರಳಾಡಿಸಲು
ವೀಣೆ ನುಡಿವಂತೆ!
ಹೊತ್ತೆಷ್ಟು ನಾ ನಿಂತು
ನೋಡಿದೆನೊ ಕಾಣೆ!
ಆದರಾ ತಾಯಿದನಿ
ಕೂಗಿದುದು "ಹಂಸಾ"
ಹಂಸ ನಡೆದಳು ಇಳಿದು
"ಬಂದೆನಮ್ಮಾ" ಎಂದು,
ನಾ ಕುಳಿತೆ ನೀ ಕೆಲವು
ಪಜ್ಜೆಗಳಿಗಾಗಿ.
ತೂರುಮುಳೆ ತುಂತುರಿನ
ಮುಂಜಾನೆ ಯಂದು;
ಕಿಟಕಿಯಲಿ ಕೊನೆತೂರಿ
ನೋಡಿದೆನು ನಿಂದು!

ಎರಡು ಚಿತ್ರಗಳು

(ಒಂದು ಅನುಭವ)

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

ನನ್ನ ಹೆಂಡತಿಗೆ 'ಹಿಸ್ಟೀರಿಯಾ' ಎಂಬ ರೋಗ– ಈಗ ಹನ್ನೆರಡು ವರ್ಷಗಳಿಂದ! ಈ ರೋಗದಿಂದ ನನಗೆ ಡಾಕ್ಟರರ ಅನುಭವ ಬಹಳ. 'ದುಡ್ಡು ಹೋದರೂ ಹೊಯಿತು, ಈ ಅನುಭವವಷ್ಟೇ ಲಾಭವಲ್ಲಾ' ಎಂದು ಸಮಾಧಾನ.

ಮೊನ್ನೆ ಎಂದಿನಂತೆ ಹೆಂಡತಿಗೆ ಮಲರೋಗವು ಬಂತು....ಮಲಗು-ರೋಗ! ಹದಿನೆಂಟು, ಮೂವತ್ತಾರು, ಎಪ್ಪತ್ತೆರಡು ತಾಸುಗಳ ನಿದ್ರೆ! ಇಷ್ಟು ಎಂದೆಂದೂ ನಿದ್ರೆ ಬಂದಿರಲಿಲ್ಲ. ಡಾಕ್ಟರನ್ನು ಕರೆಯುವ ಹೊತ್ತು–ನಾಡಿ ನಡೆಯುತ್ತಿರಲಿಲ್ಲ, ಎದೆ ಕಾಲು ಬರ್ಫದಂತೆ ತಣ್ಣಗಾಗಿದ್ದುವು, ಹೃದಯವು ಮಾತ್ರ ಮದ್ದಳೆಯಂತೆ 'ಧಣಾಣ್ ಧಣಾಣ್' ಎಂದು. ಹೊಡೆಯುತ್ತಿತ್ತು. ನನಗೆ ಭಯ, ಏನಾಗುತ್ತದೋ ಏನೋ ಎಂದು ಚಟಕ್ಕೆನೆ ಎದ್ದು ಒಬ್ಬ ಡಾಕ್ಟರ ಕಡೆಗೆ ಹೋದೆ.... ಐದು ಮೈಲು ನಡೆಯುತ್ತ (ಯರವಡಾದಿಂದ ಪುಣೆ ಐದು ಮೈಲು. ನಾನು ಪುಣೆಯಲ್ಲಿರುವವ ಸ್ವಾಮಿಗಳ 'ಪುಣಾ ನಂ. ೬' ಎಂದರೆ ಯರವಡಾ.) ಒಬ್ಬ ಡಾಕ್ಟರು, ನಾಮಾಂಕಿತ, F. R. S. M. r.s. 100. Rs.

ಸಂಜೆಯ ಆರು ಗಂಟೆಯಾಗಿತ್ತು. ಒಂದು ದೊಡ್ಡ ಮೂರಂತಸ್ತಿನ ಪೆನ್ಷನಂಥ ಮನೆ. ಮನೆಯೆಲ್ಲವೂ ವಿದ್ಯುದ್ದೀಪಗಳಿಂದ ಅಲಂಕೃತವಾಗಿದ್ದಿತು. ಸೋಪಾನದ ಮೆಟ್ಟಲುಗಳಲ್ಲಿಯೂ ತರತರದ ಚಿತ್ರಗಳನ್ನು ತೆಗೆದಿದ್ದರು. ಬಾಗಿಲಲ್ಲಿ ಒಬ್ಬ ಜವಾನ ನಿಂತಿದ್ದ. ಅವನು ಒಳಗೆ ಕರೆದುಕೊಂಡು ಹೋದ. ವಿದ್ಯುತ್‌ಘಂಟೆಯ ಬಿರಡಿಯನ್ನು ಒತ್ತಿದ. "yes" ಎಂದು ಒಳಗಿನಿಂದ ಧ್ವನಿಯೊಂದು ಬಂತು. "ನಡೆಯಿರಿ ಒಳಕ್ಕೆ" ಎಂದು ಜವಾನನು ಒಳಕ್ಕೆ ಕರೆದುಕೊಂಡು ಹೋದ. ನಾನು ಹೋದದ್ದು ಒಂದು ದೊಡ್ಡ ಪಡಸಾಲೆಯಲ್ಲಿ. ಆಳುದ್ದರ ದೊಂದು ಕನ್ನಡಿಯು. ಕನ್ನಡಿಯ ಮುಂದೆ ಚಂದನದ–ಕರಿಯ ಚಂದನದ–ಟೇಬಲ್ಲು. ಟೇಬಲ್ಲಿನ ಮೇಲೊಂದು ಚಿತ್ರವಿಚಿತ್ರವಾದ ಟೇಬಲ್-ಕ್ಲಾಥು ಅದರ ಮೇಲೆ ಬಂಗಾರದ ಅಕ್ಷರಗಳಿಂದ ಬೆನ್ನು ಒಪ್ಪ ಮೂಡಿದ ಗ್ರಂಥಗಳು. ಒತ್ತು ಕಡಿದ ಪಟ್ಟಿಯ ಮೇಲೆ ಎದೆನೋಡುವ ಕೊಳವಿ ಬದ್ದಿತ್ತು. ನಾನು ಒಳಗೆ ಹೋದಕೂಡಲೆ, ಕನ್ನಡಿಯ ಮುಂದೆ ನಿಂತು ಅರಿವಿಗೆಗಳನ್ನು ಧರಿಸುತ್ತಿದ್ದ ಡಾಕ್ಟರು ನನ್ನ ಕಡೆಗೆ ಗೋಣು ಹೊರಳಿಸಿ "yes" ಎಂದರು. ಅವರು ನನ್ನನ್ನು ನೋಡಿದ ಕೂಡಲೆ ಸ್ವಲ್ಪ ಉದಾಸೀನರಾದರು. ಅವರು ಗೋಣು ಹೊರಳಿಸಿದ ಕೂಡಲೆ ಮೃದುಮಧುರವಾದ ನಗೆಯಿಂದ ಸೂಸುವ ಅವರ ಗಲ್ಲತಿಯು ಕಣ್ಣಿಗೆ ಬೀಳಬೇಕಾಗಿದ್ದಿತು; ಅವರ ಬದಲಾಗಿ ನಾನು! 'ಅಯ್ಯೋ!' ಎಂದುಕೊಂಡಿರಬಹುದು ಮನಸ್ಸಿನಲ್ಲಿ. ಆದರೂ ಸೌಜನ್ಯದಿಂದ 'ನಿಮಗೇನು ಬೇಕು?" ಎಂದು ನೆಕ್‌ಟಾಯ್ ಕಟ್ಟುತ್ತ ಕೇಳಿದರು. ನಾನು ಇಂಗ್ಲಿಷಿನಿಂದ "ನನ್ನ ಹೆಂಡತಿ, ಸೀರಿಯಸ್, ಹಿಸ್ಟೀರಿಯಾ!" ಎಂದು ನಡುಗಿದೆ. ಯಾರಿಗೆ ಗೊತ್ತು ಏನೆನ್ನುವರೋ? ಇಂಗ್ಲಂಡಿನಲ್ಲಿ ಕಲಿತುಬಂದ ಅಸಾಮಿ ಬೇರೆ. ಇದಿಷ್ಟು ನಡೆಯುವಷ್ಟರಲ್ಲಿ ಹೊರಗಿನಿಂದ ವಿದ್ಯುತ್‌ಗಂಟೆಯ ಬಿರಡಿಯ 'ಟಕ್' ಎಂಬ ಸಪ್ಪಳು! ಒಳಗೆ ಗಂಟೆ ಬಾರಿಸಹತ್ತಿತು; "yes" ಎಂದರು ಡಾಕ್ಟರು. ಇಷ್ಟು ಎನ್ನುವಷ್ಟರೊಳಗೆಯೆ, ಹಾವಿನ ಪರೆಯಷ್ಟು ಜಿನುಗಾದ ಪತ್ತಲನಸ್ಟುಂತಹ– ಸಡುಹರೆಯದ– ಯುವತಿಯೊಬ್ಬಳು ನಗುತ್ತ ಒಳಗೆ ಬಂದಳು. ದೇವತೆಯೋ ಅಪ್ಸರೆಯೋ ರಂಭೆಯೋ ಎನ್ನುವ ಹಾಗೆ ಆಕೆಯ ರೂಪು. ಜಾಕೇಟು ಹಾಕಿದ್ದರೂ ಅರ್ಧಎದೆಯು ಬರುಸೋಗುವವರಿಗೆ ಸಹಜವಾಗಿ ಕಾಣಿಸುತ್ತಿತ್ತು. ಕೈಯಲ್ಲಿ–ಕಂಕುಳ ವರೆಗೂ–ಏನೂ ಇದ್ದಿರಲಿಲ್ಲ. ಮುಂಗೈಯಲ್ಲಿ ಒಂದು ಬಂಗಾರದ ಬಳೆ–ಸೀರವಾದುಂಡಾದ್ದು–ಬರೇ ಮೊಣಕೈ ಹೊಡೆಯುತ್ತಿತ್ತು....ಹಿಂದೆ ಮುಂದೆ. ಕಾಲಲ್ಲಿಯೊ, ಜರತಾರೀ ಮುಖಮಲಿನ ಚೆಪ್ಪಲಿಗಳು. ಅಧರಕ್ಕೆ (lip-stick) ಕೆಂಪು ತೊಡೆದದ್ದರಿಂದ, ದೂರದಿಂದ ಚೆಂದ ಕಾಣುತ್ತಿದ್ದರೂ, ಸಮೀಪದಲ್ಲಿ ಸೌಂದರ್ಯದ ಭೂತದಂತೆ ಕಾಣಿಸಹತ್ತಿದಳು. ಡಾಕ್ಟರರ ಪ್ರಸಾಧನವೂ ಮುಗಿದಿತ್ತು. ಅವರು ನನ್ನ ಕಡೆಗೆ ಹೊರಳಿ "ಆಲ್ ರೈಟ್! ನಾವು ಒಂದಿಷ್ಟು ತಿರುಗಾಡಿ ಬರುತ್ತಲಿದ್ದೇವೆ; ಒಂದೆರಡು ಗಂಟೆ ತಡೆಯಿರಿ!" ಎಂದದ್ದೇ ಆ ಯುವತಿಯ ಬೆನ್ನನ್ನು ಜೆಪ್ಪರಿಸುತ್ತ, ಆಕೆಯ ಕೈಬೆರಳುಗಳನ್ನು ಹಿಸುಕುತ್ತ, "Good-Good" ಎನ್ನುತ್ತ ಆಕೆಯೊಡನೆ ಅಟ್ಟನನ್ನು ಇಳಿದು, ಮೋಟಾರಿನ ಒಳಗೆ ಕುಳಿತು–ಪೋಂ ಪೋಂ—ಹೋದರು. ನಾನು ಎರಡು ಗಂಟೆ ತಡೆಯಬೇಕು. ಆ ಮೇಲೆ ಏನಾಗುವುದೋ?—ನನ್ನ ಹೆಂಡತಿ, ಸೀರಿಯಸ್, ಹಿಸ್ಟೀರಿಯಾ–ಒಂದೂ ಅವರ ಹೃದಯವನ್ನು ಕರಗಿಸಲಿಲ್ಲವಲ್ಲ! ಯಾರ ಹೊಟ್ಟೆ ನೊಂದರೆ ಯಾರು ಅಜವಾನ ಮುಕ್ಕಬೇಕು?

ಬಾಯಿಲ್ಲ್ ಬೈಂಗನ್ (ಬೇಯಿಸಿದ ಬದನೇಕಾಯಿ) ಅಂತೆ ಮೋರೆ ಮಾಡಿಕೊಂಡು, ಆಟ್ಟಪ ಪಾಪಟಿಗೆಗಳನ್ನು ಇಳಿದೆ. ಹುಸ್ಸೆಂದೆ. ಜವಾನನಿಗೆ ನನ್ನ ವಿಷಯದಲ್ಲಿ ಕರುಣೆ ಬಂತು. ಅವನು ಡಾಕ್ಟರು ಈಗ ಬಂದಾರೆಂದು ನನ್ನ ಸಮಾಧಾನ ಮಾಡಿದ. ನಾನು ಮೋಟಾರಿನವನಿಗೆ "ಇನ್ನೊಬ್ಬ ಡಾಕ್ಟರರ ಕಡೆಗೆ ನಡೆ" ಎಂದೆ. "ಒಂದು ರೂಪಾಯಿ ಹೆಚ್ಚು" ಎಂದನವ; 'ಆಗಲಿ' ಎಂದೆ. ಹೊತ್ತು ಬಂದರೆ ಕತ್ತೆಯು ಕಾಲನ್ನೂ ಹಿಡಿಯಬೇಕಾಗುತ್ತದೆ.

* * *

ಎರಡನೆಯ ಡಾಕ್ಟರ ಮನೆಯ ಮೇಲೆಯೂ ಪಾಟಿ (ಪಲಗೆ) ಇದ್ದೇ ಇತ್ತು. ಈ ಪಾಟಿಯಲ್ಲಿ ಸಣ್ಣಸಣ್ಣ ವಿದ್ಯುದ್ದೀಪವಿದ್ದುವು. ಮಿನಿಟಿಗೊಮ್ಮೆ ಹೋಗುತ್ತಿದ್ದುವು, ಮಿನಿಟಿಗೊಮ್ಮೆ ಹೊಳೆಯುತ್ತಿದ್ದುವು, ಪ್ರಪಂಚದ ಚಂಚಲತೆಯನ್ನೋ, ಜೀವಿತದ ಚಾಂಚಲ್ಯತೆಯನ್ನೋ ತೋರಿಸುತ್ತಿದ್ದುವೆಂಬಂತೆ! ಒಳಗೆ ಹೋದೆ. ಜವಾನ! ಅವನೂ ಮೇಲಕ್ಕೆ ಕರೆದುಕೊಂಡು ಹೋದ. ಅದೇ ವಿದ್ಯುತ್‌ಘಂಟಾರವ! ಅದೇ "yes"! ಅದೇ ಪಡಸಾಲೆ! ಅಂತಹದೇ ಕನ್ನಡಿ; ಅಂತಹದೇ ಟೇಬಲ್ಲು; ಅಂತಹವೇ ಪುಸ್ತಕಗಳು; ಮುಂದಕ್ಕೆ ಅದೇ ಮನೆಗೆ ಬಂದೇನೋ ಏನೋ ಎನ್ನುವಂತಾಯಿತು. ಇಲ್ಲಿ ಹೊರಗೊಂದು ಪಂಜರದಲ್ಲಿ ಒಂದು ಗಿಳಿ ನುಡಿಯುತ್ತಿತ್ತು. ಕೆಳಗೆ ಸುಂದರವಾದ ತೋಟ. ತೋಟದಲ್ಲಿ ಅಲ್ಲಲ್ಲಿ ನಾಲ್ಕಾರು ಬಾವುಗಗಳು ಹುಲಿಯಂತಿದ್ದುವು. ಮೊದಲಿನ ಡಾಕ್ಟರರ ಗೆಲ್ಲತಿಯು ಕೋಣೆಯಲ್ಲಿ ಬಂದ ಕೂಡಲೇ ಗಮಗಮ– ವಸಂತ ಋತುವಿನ ತಂಗಾಳಿಯಂತೆ. ಇಲ್ಲಿ ಸ್ವಂತ ಡಾಕ್ಟರ ಮೈಯಿಂದಲೇ ಅಷ್ಟು ಸುಗಂಧ ಹೊರಹೊಮ್ಮುತ್ತಿತ್ತು. "yes" ಡಾಕ್ಟರರೆಂದರು. ನಾನು ಮತ್ತೆ ನನ್ನ ಪುರಾಣ

೫೨ ವರ್ಷಗಳಿಂದ ಅನುಭವ ಪಟ್ಟ

ಕರ್ಕ ಮತ್ತು ಕಂಪನಿ

ಇವರ

ಜ್ವರಗಡ್ಡೆಯ ಗುಳಿಗೆ

ಬಾಟ್ಲಿಗೆ ೧–೪–೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು!

ವಿಳಾಸ:– **ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ**

ಗಿರಗಾಂವ, ಮುಂಬಯಿ

ಬಿಚ್ಚಿದೆ: "ಟೈಫೋಯಿಡಾ, ಪಾಯಿಸನ್, ಸೀರಿಯಸ್, ಹನ್ನೆರಡು ವರ್ಷದಿಂದ....!" ಸೀರಿಯಸ್ ಎಂಬ ಶಬ್ದ ಜೊಳಗೆ ಏನು ನೂಟ ತುಂಬಿತ್ತೋ ಏನೋ, ಡಾಕ್ಟರರು ಜೆಟಕ್ಕನೆ ಎದ್ದರು. ವಿದ್ಯುತ್‌ಗಂಟೆಯನ್ನು ಬಾರಿಸಿದರು ಬಿರಡಿಯನ್ನೊತ್ತಿ. ಒಬ್ಬ ಹೆಂಗಸು ಓಡುತ್ತಲೇ ಬಂದಳು. ನಲವತ್ತೈದು ವರ್ಷದಾಕೆ; ನೌಪರ್ಯದ ದೃಷ್ಟಿಯಿಂದ ಶುಂಠಿ, ಮೈಮೇಲೆಯೊಂದು ಸರ್ವಸಾಧಾರಣವಾದ ಪತ್ತಲ; ಕೈಯೊಳಗೆರಡು ಬಂಗಾರದಂತೆ ಕಾಣುವಂತಹ ಬಳೆಗಳು. "Be ready with Hysteria bag" ಎಂಬ ಡಾಕ್ಟರರ ಅಪ್ಪಣೆಯ ಮೇರೆಗೆ, ಆಕೆ ಒಂದು ಚೀಲವನ್ನು ತೆಗೆದುಕೊಂಡಳು. ಡಾಕ್ಟರರಾದರೂ ಯುದ್ಧಕ್ಕೆ ತೆರಳುವಂತೆ ತಟಕ್ಷಣ ಕೆಳಕ್ಕಿಳಿದು. ನಾನು (ಸ್ವಲ್ಪ ವಿಸ್ಮಯಗಿದ್ದೇನೆ) ಪಾವಟಿಗೆಗಳನ್ನು ಇಳಿದು ಬರುವಷ್ಟರಲ್ಲಿ ನಾಲ್ಕು ಸಾರೆ ತಮ್ಮ ಮೋಟಾರನ್ನು 'ಪೋಂ ಪೋಂ' ಮಾಡಿದರು. ನಮ್ಮ ಮೋಟಾರಿನವನಿಗೆ ಒಂದು ರೂಪಾಯಿ ಕೊಟ್ಟು ಹೊರಟೆ.

ಮನೆ ಬಂತು. ಹೆಂಡತಿಯು 'ಸಿದ್ಧಾರೋಗ ಸಮಾಧಿಸ್ಥ'ಳಂತೆ ಮಲಗಿಕೊಂಡಿದ್ದಳು. ಡಾಕ್ಟರರು ಒಳಗೆ ಬಂದು ನಾಡಿ ನೋಡಿದರು; ಕಿವಿಯೊಳಗೆ ಕೊಳವಿ ಹಾಕಿಕೊಂಡು ಎದೆ ನೋಡಿದರು. "All right" ಎಂದೇ ಎನ್ನುತ್ತಿದ್ದರು....ಡಾಕ್ಟರರ ಪದ್ಧತಿಯಂತೆ. ಏನೋ ಮೂಸಿ ನೋಡಿದರು, ಹಣೆಯಲ್ಲಿ. ಸ್ವಲ್ಪ ನೋವೆಯ ಮೇಲೆ ನೀರನ್ನು ಸಿಂಪಡಿಸಿದರು, ಉಗ್ಗಿದರು, ಮೇಲೆ ಮೇಲೆಯಿಂದ ನೀರು ಗೊಜ್ಜಿದರು– ಊಹೂಂ! ನೀರನ್ನು ಒತ್ತಾಯದಿಂದ ಗೊಜ್ಜುವ ಕಾಲದಲ್ಲಿ ಡಾಕ್ಟರರ ಕೋಟೂ ಬೂಟೂ ತೊಯ್ದು ಹೋದುವು. ನಮ್ಮಂಥವರ ಕೋಟಲ್ಲ, ಬ್ಲೇಝರ್ ಕೋಟು ಸ್ವಾಮಿ, ನಲವತ್ತೈದು ರೂಪಾಯಿಗೊಂದು! ಏನು ಮಾಡಬೇಕೆಂದೋ, ನಸ್ಸ ಹಣೆಬರಹವೆಂದೋ ಹಣೆಯನ್ನು ತಿಕ್ಕಿದರು. ಚಿಗರಿಯಂತೆ ಜಟಕ್ಕನೆ ಮೋಟಾರಿಗೆ ಹೋಗಿ, ವಿದ್ಯುತ್-ಬ್ಯಾಟರಿಯನ್ನು ತಂದು, ಶಾಕ್‌ಗಳನ್ನು ಕೊಡಹತ್ತಿದರು. ಆಗ ಹೆಂಡತಿಯ ಸೈರಣೆ ಎಚ್ಚರಿಕೆ ಬಂತು. ಎಚ್ಚರಿಕೆ ಬಂದದ್ದೇ ತಡ, ಒಂದು ಕಾಲಿನಿಂದ ಒತ್ತಾಪ್ರಹಾರವನ್ನು ಮಾಡಿದಳು. ಯಾರಿಗೆಂದೊ! ಆಕೆಯು ಯಾರಿಗೆಂದು ಮಾಡಿದ್ದರೂ, ಇಲಿಯು ಹೊಡೆತ ಗಣಪತಿಗೆ ಬಿತ್ತು....ಡಾಕ್ಟರರಿಗೆ ಬಿತ್ತು.... ಕನ್ನಡಕದ ಮೇಲೆ. ಅವರ ಕನ್ನಡದ ಕೈ ಮುರಿಯಿತು. ಡಾಕ್ಟರರು "All right, she is a patient" (ಸರಿ ಸರಿ! ರೋಗಿಗಳು ಹೀಗೆ ಮಾಡುತ್ತಿರುತ್ತಾರೆ) ಎನ್ನುತಿದ್ದರು. ಅವರ ಸಂಗಡ ಬಂದ ನರ್ಸ್ ಬಾಯಿಯು ಒಂದು ಇಂಜೆಕ್ಶನ್ ಕೊಟ್ಟರು. ಹೆಂಡತಿಯು ಎದ್ದು ಕುಳಿತಳು. ಎಲ್ಲರಿಗೂ (ನನ್ನ ಹೆಂಡತಿಗೂ) ಕಾಫೀ ಪಾನವಾಯಿತು ಎಲ್ಲರಿಗೂ (ಆಯಿತೋ ಇಲ್ಲೋ ನನಗನ್ನಕಾ ಆಯಿತು) ಅತ್ಯಾನಂದವಾಯಿತು. ಡಾಕ್ಟರರು ನನಗೆರಡು ಔಷಧಗಳನ್ನು ಬರೆದುಕೊಟ್ಟು, ತಮ್ಮ ಕಡೆಗಿದ್ದ ಒಂದು ಚಿಕ್ಕ ಬಾಟಲಿಯನ್ನು ನನಗೆ ಕೊಟ್ಟರು. ನಾನು "ಅದೆಲ್ಲವಾಯಿತು, ನಿಮ್ಮ ಫೀ?" ಎಂದು ನಡುಗುವ ಸ್ವರದಿಂದ ಕೇಳಿದೆ. "ಐದು ರೂಪಾಯಿ" ಎಂದರು. ಅತ್ಯಾನಂದದಿಂದ ಕೊಟ್ಟೆ. "Thank you, Thank you" ಎನ್ನುತ್ತ ಗಾಡಿಯು ಹೊರಟಿತು.

ಎರಡೂ ಚಿತ್ರಗಳಲ್ಲಿ ವ್ಯತ್ಯಾಸವೆಷ್ಟು? "ಡಾಕ್ಟರರೆಂದರೆ ಸಜ್ಜನರೂ ಇರುತ್ತಾರೆ, ದುರ್ಜನರೂ...." ಎನ್ನುತ್ತಿದ್ದೆ; ದುರ್ಜನರಾರೂ ಇರುವುದಿಲ್ಲ, ಸೊಕ್ಕಿನವರಿರುತ್ತಾರೆ. ಎರಡನೆಯ ಡಾಕ್ಟರರೂ ಇಂಗ್ಲಂಡಿಗೆ ಹೋದವರು. ಮೂರು ಅಂತಸ್ತಿನ ಮನೆ, ವಿದ್ಯುದ್ದೀಪ, ಉಪವನ ಎಲ್ಲವೂ ಇವರಿಗೂ ಉಂಟಲ್ಲಾ! ಇವರಿಗೇನು ನಾನು ಕೊಬ್ಬರಿ-ಬೆಲ್ಲ ತಿನ್ನಿಸಿದ್ದು? ಇವರೇಕೆ ಇಷ್ಟು ಕರ್ತವ್ಯತತ್ಪರತೆಯುಳ್ಳವರೂ, ಸಹೃದಯಸ್ವಭಾವದವರೂ ಪರಹಿತಾಪೇಕ್ಷಿಗಳೂ, ಒಳ್ಳೆಯವರೂ, ಒಳ್ಳೆಯ ಮಾತಿನವರೂ ಇದ್ದಾರೆಂದು ಕೇಳದಿರಿ–ಏನು ಬೇಕಾಬೇಕು? ಸಂಪಿಗೆಯ ಸುಗಂಧವು ಸಂಪಿಗೆಗೆ, ಹೇಸಿಗೆ ಹೂವಿನ ಸುಗಂಧವು ಹೇಸಿಗೆ ಹೂವಿಗೆ! ಎರಡೂ ಹೊಗಳೇ ಎಂಬುದನ್ನು ಮರೆಯಲಾಗದು.

ಶೇಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್!

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧–೧೬–೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪರಾವ) **ಧಾಳಪ್ಪಾ**

ಒಡವ ಔಷಧಿ ಸರ್ವಿಸ್, ಸಿರಸಿ. ಉ. ಕಾನಡಾ

ಸಂಧ್ಯಾಕಾಲ*

(ಪಾತ್ರವಿಮರ್ಶೆ)

ಶ್ರೀ. ಆಮೂರ ಗುರುರಾಜ, ಧಾರವಾಡ

(ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ಸಾಹಿತ್ಯೋತ್ಸವದಲ್ಲಿ (೧೯೪೪), ಮೊದಲನೆಯ ಬಹುಮಾನ ಪಡೆದ ವಿಮರ್ಶೆಯಿದು. ಕರ್ನಾಟಕ ಸಂಘದ ಅನುಮತಿ ಪಡೆದು ಇದನ್ನಿಲ್ಲಿ ಪ್ರಸಿದ್ಧಿಸಲಾಗಿದೆ— ಸಂ. ಜ.)

'ನರಕದಲ್ಲಿ ನರಸಿಂಹ' 'ಪರಿಜಾತ್ಯಾರ'ಗಳು ಶ್ರೀರಂಗರ ರಂಗಶ್ರೀಯ ಯೌವನದ ರಭಸದ ಹಜ್ಜೆಗಳಾಗಿದ್ದರೆ 'ಸಂಧ್ಯಾಕಾಲ' ಪರಿಣತ ನರ್ತಕಿಯ ವಿಚಾರಪೂರಿತ ಭಾವಪ್ರದರ್ಶಕ ಹಜ್ಜೆ. 'ಸಂಧ್ಯಾಕಾಲ'ವು ಶಾಂತಿಸಾಗರದಲ್ಲಿಯ ಆನಂದಸಯಣದಂತಿದೆ. ಅಸಮಾಧಾನದ ಬಿರುಗಾಳಿಯು ಬೊಬ್ಬಿರಿದು ಬೀಸಿದ ಬಳಿಕ— ಸಮಾಜದ ದೋಷಗಳೆಡೆಗೆ ಜೊರಗಿನಿಂದ ಬೆರಳು ಮಾಡಿ ತೋರಿಸುವ ಆವೇಗ ತಗ್ಗಿದ ಬಳಿಕ -- ಸಮಾಜದೊಡನೆ ಒಂದಾಗಿ, ತಮ್ಮ ದೋಷಗಳನ್ನೇ ಎತ್ತಿ ಇಡುವಷ್ಟು ಮೃದುವಾದ ಧ್ವನಿಯಿಂದ, ಬಿಚ್ಚುಮನದ ಉಚ್ಚ್ವತೆಯಿಂದ ತೊಳಗುವ 'ಸಂಧ್ಯಾಕಾಲ,' ಶ್ರೀರಂಗಸಾಹಿತ್ಯದಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಸೃಷ್ಟಿಸಿರುತ್ತದೆ.

[ಮುಂಬರುವ ಪಾತ್ರವಿಮರ್ಶೆಯ ದೃಷ್ಟಿಯಿಂದ ಸಂಧ್ಯಾಕಾಲ ನಾಟಕದ ವಸ್ತುವನ್ನು ವಿವರಿಸಿಕೊಳ್ಳುವುದಗತ್ಯವಾಗಿದೆ. ಈ ನಾಟಕದ ವಸ್ತುವು ಒಬ್ಬ ಪೆನ್‌ಶನರ್ ಮುದುಕನ ಮನೆಯಲ್ಲಿ, ಒಂದು ದಿನದ ಮೂರು ಸಂಧ್ಯಾವಂದನೆಯ ಸಮಯಗಳಲ್ಲಿಯ ಚಿತ್ರ. ದೇವಧರ್ಮಗಳಲ್ಲಿಯಂತೆಯೆ ಬದ್ಧಿಯ ವ್ಯವಹಾರದಲ್ಲಿ ಆಸಕ್ತಿ ಇದ್ದ ಮುದುಕ ಪೆನ್‌ಶನರ್ ಒಂದು ಕಡೆ; ಹೊಸ ಸಿದ್ಧಾಂತಗಳ ಕುರುಹಿನಿಸ್ಸೇ ಹಿರಿಯರಿಗಾಗಿ ಹುದರಿಕೆ ಇವ್ವ ಅವನ ಮಗ ಪುಟ್ಟು ಇನ್ನೊಂದು ಕಡೆ; ಪುಟ್ಟುನ ಕಾಲೇಜ ಮಿತ್ರ ವೆಂಕಪ್ಪ ಒಂದು ಕಡೆ; ಜಾತಿಸಂಸ್ಥಾಗಿ ಸ್ವೆಗಳ್ಳು ನಾದಷ್ಟೆ ಮನಗಳ್ಳನಾದ ಆಳು ಧರೆಪ್ಪ ಇನ್ನೊಂದು ಕಡೆ; ಅವರ ನಡುವೆ ಸ್ಥಿರಸ್ವಭಾವದ 'ಅವ್ವ' ಪೆನ್‌ಶನರನ ಹೆಂಡತಿ. ಇಷ್ಟು ವಸ್ತುವಿಷಯಕ ಪೂರ್ವಪೀಠಿಕೆ]

ನಾಟಕದಲ್ಲಿ ಪಾತ್ರಗಳ ಸಂಖ್ಯೆ ಬಹಳವಿಲ್ಲದಿದ್ದರೂ ತೆಗೆದು ಕೊಂಡ ಪ್ರತಿಯೊಂದು ವ್ಯಕ್ತಿಯ ಮನೋವಿಶ್ಲೇಷಣೆಯಲ್ಲಿ ಸಹಜತೆಯು ಕಂಡು ಬರುತ್ತದೆ, ಇಂತಹ ವ್ಯಕ್ತಿಗಳೇ ನಮ್ಮ ಸಮಾಜದಲ್ಲಿ ಇಪ್ಪಾರೆ ಎಂದು ಹೇಳಬಯಸುವ ಪ್ರತಿಯೊಬ್ಬ ಸಮಾಜಸುಧಾರಕನೂ, 'ಸಂಧ್ಯಾಕಾಲ'ವನ್ನು ಕಂಡಾಗ, ತಾನು ಪ್ರತಿದಿನ ನೋಡುವ ವ್ಯಕ್ತಿಗಳೆ— ತಾನು ನೋಡಿದ ಬೆಳಕಿನಲ್ಲಿಯೆ— ಕಂಡು ಬರುವುದನ್ನು ನೋಡಿ ಮೈಮರೆಯುವಂತಿದೆ.

'ಇದ್ದ ಹೆಂಡತಿ ಬಿಟ್ಟು, ಕೆದ್ದು ಸೂಳೆಯ ನಾಡಿ, ಬಿದ್ದು ಮೊಳಕಾಲು ಒಡಕೊಂಡ; ಮುನಿರಾಯಾ, ಇದ್ದಷ್ಟು ಮಾನ ಕಳಕೊಂಡ!' ಎಂದು, ಪೊಟ್ಟವೊಲು ತೆರೆಯೋಳಾಗ ಕೇಳ ಬರುವ ಧ್ವನಿ ನಾಟಕದ ವಸ್ತುವನ್ನು ಸೂಚಿಸುವಂತಿದೆ. ಮುಖ್ಯ ಕಥಾವಸ್ತುವಿನ ಪರಿಣಾಮಕ್ಕೆ ನಾಟಕದಲ್ಲಿಯ ಎಲ್ಲ ಪಾತ್ರಗಳನ್ನು ಲಕ್ಷ್ಯೆ ವಿಟ್ಟು ಜೋಡಿಸಿಡುತ್ತಿದ್ದರೂ, ಪ್ರತಿಯೊಂದು ಪಾತ್ರವು— ಶ್ರೀರಂಗರ ಎಲ್ಲ ನಾಟಕಗಳಲ್ಲಿಯಂತೆ— ಸ್ವತಂತ್ರವಾಗಿ ಕೆಲಸ ಮಾಡುತ್ತದೆ

'ಸಂಧ್ಯಾವಂದನೆ, ಸಂಧ್ಯಾವಂದನೆ' ಎಂದು ಒಂದೇ ಸವನೆ ಕುಣಿಯುತ್ತ ಮನೆಯಲ್ಲಿ ತಿರುಗುತ್ತಿದ್ದರೂ, ಆ ಮುದುಕನ ಮನೋವೃತ್ತಿ 'ಅವ್ವ'ನ ಮಾತಿನ ಶೈಲಿಯನ್ನು ನೋಡಿದಾಗ ಸ್ಪಷ್ಟವಾಗುವುದು. 'ಅವ್ವ'ನ ಪ್ರತಿಯೊಂದು ಮಾತೂ ಅನುಭವದ ಆಳದಿಂದ ಹೊರಬಿದ್ದಂತೆ ಕಂಡರೂ, 'ಮುದುಕ'ನ ಸಹವಾಸದಿಂದ ಅವನ ಮನೋವೃತ್ತಿಯನ್ನು ಕಂಡು ಹಿಡಿಯುವ ವಿಚಕ್ಷಣತೆ ಅದರಲ್ಲಿ ಕಂಡುಬರುತ್ತದೆ. ಲಗ್ನ ಮಾಡಿಕೊಂಡ ಹೆಂಡತಿಗೆ ಕೂಡ 'ಸುಹಾಯಕ್ಕೆ, ಪೊದಲು ನನ್ನ ಸಂಧ್ಯಾವಂದನೆ ಮುಗಿಯಲಿ, ಆ ನೋಲೆ ಮಾತಾಡೋಣವಂತೆ' ಎಂದು ಹೇಳಿದ ವ್ಯಕ್ತಿ, ಸರ್ವಸಣಿವ ಧರಿಸ್ಪನೊಡನೆ ಎಷ್ಟು ಸಲುಗೆಯಿಂದ—ಮಡಿ ಮೈಲಿಗೆಯು ಮುಚ್ಚುಮೆಯನ್ನು ಕಲವೇಳೆಯಾದರೂ ತೆಗೆದಿಟ್ಟು— ನಡೆದುಕೊಂಡುದನ್ನು ನೋಡಿದಾಗ, 'ಸಂಧ್ಯಾವಂದನೆ ಯಾಗ ಯಾರ ಜೋಡೀ ಮಾತಾಡತಿರತಾರೋ ಯಾರಿಗೆ ಗೊತ್ತು?' ಎಂದ 'ಅವ್ವ'ನ ಮಾತಿನ ಸತ್ಯತೆ ಕಂಡು ಬರುವಂತಿದೆ. 'ಸಂಧ್ಯಾವಂದನೆಯೆಂದರೆ ಅದೊಂದು ಸುಸಾರವನ್ನು ಬಿಟ್ಟು ದೂರವಿರುವ ಸಂಗತಿ' ಎಂದು ತಿಳಿದುಕೊಂಡು, 'ಸಂಧ್ಯಾವಂದನೀನೂ ನಾನೇ ಮಾಡಬೇಕು; ಸಂಸಾರಾನೂ ನಾನೇ ನಡಸಬೇಕು!' ಎಂದು ಉದ್ಗಾರ ತೆಗೆಯುವ ಮುದುಕನ ಧರ್ಮದ ಕರ್ಮದ ಕಲ್ಪನೆಯ ಆಳ, ನಿಜವಾಗಿಯೂ 'ಅವ್ವ'ನಿಗೆ ತಿಳಿಯುವಂತಹದು. ಇಷ್ಟಾದರೂ ಮುದುಕನ ಆಡಂಬರದಲ್ಲಿ ಸ್ವಲ್ಪವೂ ಕಡಿಮೆಯಿಲ್ಲ. Sloven ಭರಭರಾಟ ಕೇಳದ ಕೂಡಲೆ ಅವನ ಮನಸ್ಸಿನ ಏಕಾಗ್ರತೆ ಅಳಸಿ ಹೋಗುವುದು; ಮೋರೆ ಕೆಂಪಡರುವುದು. ಪುಟ್ಟುನ ವಿನೋದಮೂರ್ತಿಯು, ವಿಶ್ವಾಮಿತ್ರ ಮೂರ್ತಿಯ ಕೋಪದ ಶಾಪಕ್ಕೆ ಬಲಿಯಾಗುವುದು. ನೌಕರಿ ಕೊಡಿಸುವ ಯೋಗ್ಯತೆ ತನ್ನಲ್ಲಿದ್ದರೂ ಕೂಡ ಮಗನಿಗೆ ನೌಕರಿಕೊಡಿಸುವುದಿಲ್ಲ. 'ತನ್ನ ಕೆಲಸ ಬಿಡಬಾರದು, ಮಂದಿಯ ಕೆಲಸದೊಳಗೆ ಕೈಹಾಕಬಾರದು ಎನ್ನೋದು ಒಬ್ಬರಿಗೂ ಗೊತ್ತೇ ಇಲ್ಲ ಈ ಮನೆಯೊಳಗೆ' ಎನ್ನುವ ತತ್ತ್ವಜ್ಞಾನಿ ಮುದುಕ, ಮಂದಿಯ ಕೆಲಸದಲ್ಲಿ ಕೈಹಾಕುತ್ತಲೇ ಮುಂಜಾವಿನಲ್ಲಿ ಪ್ರಾರಂಭಿಸಿದ ಸಂಧ್ಯಾವಂದನೆಯನ್ನು ಸಂಜೆಯಾದರೂ ಮುಗಿಸದಿರುವ. 'ಮುದ್ರೆ ಬಡಿದುಕೊಳ್ಳುವುದಷ್ಟೇ ಬರೆದಿದ ನಸ್ಸ ಹಣೆಯೊಳಗೆ' ಎಂದು ತನ್ನ ತಪ್ಪನ್ನೆಲ್ಲಾ ದೈವದ ಮೇಲೆ ಹೊರಿಸುವ ಮುದುಕನನ್ನು ಕಂಡಾಗ, 'ಚಂಡಿಕೆಯ ಸಂಗಡ ತಲೆಯೂ ಇಲ್ಲ ಇನಸಿಗೆ' ಎನ್ನಿಸುವುದು. 'ಸಂಸಾರಾನೂ ನಾನೇ ಮಾಡಬೇಕು; ಸಂಧ್ಯಾವಂದನೀನೂ ನಾನೇ ಮಾಡಬೇಕು!' ಎಂದು ನಿಟ್ಟುಸಿರುಗರೆಯುತ್ತಿದ್ದರೂ, ಹಣದ ವಿಷಯ ಬಂದ ಕೂಡಲ್ಲೇ ಮುದುಕನ ತಲೆ 'ನೆಕಸ್ಪ' 'ಪುಟ್ಟು' ಇವರ ತಲೆಗಿಂತಲೂ ಚುರುಕಾಗುವುದು. 'ಒಮ್ಮೊಮ್ಮೆ ಅನಿಸತಾವ ಕಾಶೀ ರಾಮೇಶ್ವರಾ ಅಂತ ಊರೂರು ಅಲೆದಾಡುವದಕ್ಕಿಂತ, ಇಪ್ಪಲ್ಲೇ

* ಸಂಧ್ಯಾಕಾಲ (ನಾಟಕ) ಬರೆದವರು ಶ್ರೀರಂಗ. ಪ್ರಕಾಶನ, ವಸಂತ ಗ್ರಂಥಮಾಲಾ, ಬೆಂಗಳೂರು. ಬೆಲೆ ೧-೦-೦.

ಬಜವರಿಗೆ ಯಾಕ ಸಹಾಯ ಮಾಡಬಾರದು' ಎಂದು ತನ್ನ ಉದಾರ-ಮನಸ್ಸನ್ನು ವೆಂಕಪ್ಪನಂತವನೆದುರಿಗೂ ಕೂಡ ತೋರಿಸುವ ಧೈರ್ಯ ಇದೆ ಮುದುಕನಿಗೆ. 'ಅವನ ಲೆಕ್ಕದ ಪ್ರಕಾರ ಸಾಲದ ಮೂರು ಪಟ್ಟು ಬಡ್ಡಿ ಗುಣಿಸಿಟ್ಟಾನೆ, ಪಾಪ! ಆಯಿತು-ಅವನಿಗೆ ಸಮಾಧಾನ ಆಗತಿದ್ದರೆ ನಾನಾದರೂ ಅಷ್ಟು ಯಾಕೆ ಹಟ ಹಿಡಿಯಬೇಕು ಅಂತ ಲಕ್ಷ್ಯಕ್ಕೆ ತಂದುಕೊಂಡಿಲ್ಲ' ಎಂದು ಧನವನ್ನು ತೃಣವನ್ನಾಗಿ ಎಣಿಸುವ ಮುದುಕನ ಬುದ್ಧಿಮತ್ತೆ ಎಂತಹ ಅಗಾಧವಾದುದು! ಜೀವನದ ತನ್ನ ವಿಶಾಲವಾದ ಅನುಭವದಿಂದ ದೊಡ್ಡದೊಂದು ತತ್ತ್ವವನ್ನೆ ಮುದುಕ ಕಲಿತಿದ್ದಾನೆ 'ನರಹರಿ, ನಿನಗೆ ಕೈಮುಗಿಯೋದೂ ಅಷ್ಟೇ, ನಿನ್ನ ಭಕ್ತರಿಗೆ ಕೈಯಿಂದ ನೀಡೋದೂ ಅಷ್ಟೇ' ಎಂದು. ಆದರೆ ಈ ತತ್ತ್ವವನ್ನು ವೆಂಕಪ್ಪನಂತಹ 'ನರಿಮರಿ'ಯನ್ನು ಮೋಸಗೊಳಿಸಲು ಉಪಯೋಗಿಸಲು ಪ್ರಯತ್ನಿಸುತ್ತಾನೆ. ಪಾಪ! ವೆಂಕಪ್ಪನ ದುರಾಸೆಯ ಕೆಳಗಿನ್ನುವು ಅವನಿಗೇನು ಗೊತ್ತು? 'ಅವನಿಗೇನು ಕೇಳುತೀರಿ? ಒಂದು ಪೂಜೆಯೇ! ಪುರಸ್ಕಾರವೆ? ದೇವರಿಂದರೇನೋ, ಭಕ್ತಿಯಿಂದರೇನೋ' ಎಂದು ಪುಟ್ಟುವನ್ನು ಮುದುಕ ತಿರಸ್ಕರಿಸುತ್ತಿದ್ದರೂ, ವೆಂಕಪ್ಪನ ಸ್ಥಳದಲ್ಲಿದ್ದವರಿಗೆ ಮುದುಕನ ರೀತಿಯನ್ನು ಕಂಡರೇನೇ ತಿರಸ್ಕಾರವುಂಟಾಗುವಂತಿದೆ. ಇದು ಪಾತ್ರರಚನೆಯ ಕೌಶಲ್ಯವ ಪರವಾನವಧಿಯೆಂದು ಎಂತಹ ವಿಮರ್ಶಕ ವಿಚಕ್ಷಣನೂ ಒಪ್ಪುವಂತಿದೆ. 'ಮುದುಕ ಅದೆ, ನನ್ನ ಮಾತು ಇನ್ನು ಯಾರೂ ಕೇಳುವರಿಲ್ಲ!' ಎಂದು ಮುದುಕ ದುಃಖಪಡುತ್ತಿದ್ದರೂ, ತಂದೆಯ ಹುದುಕಿಕೆಗೆ ಪುಟ್ಟು ಜನಿವಾರ ಹಾಕಿಕೊಳ್ಳುವುದನ್ನೇನೂ ಬಿಟ್ಟಿಲ್ಲ! 'ಹಾಂ, ಹಾಂ, ಅದೇನ ನೋಡ್ರಿ' ಎಂದಾಗ ಮುದುಕನ ಜೀರ್ಣಾಪಾದ ಹೃದಯ, ಯೌವನದ ಹುಮ್ಮಸ್ಸಿನಿಂದ ಹುಚ್ಚಿಟ್ಟು ಹರಿಯುತ್ತಿದ್ದರೂ ಕೂಡ 'ದೂರ ಸರಿಯೋ, ಮುಟ್ಟಬ್ಯಾ!' ಎಂದು ಧರಿಪ್ಪನವರಿಗೆ ತನ್ನ ಭಾವನೆಗಳನ್ನು ಮುಚ್ಚಿಡುವಷ್ಟು ಜಾಣ್ಮೆ ಮುದುಕನಲ್ಲಿದ್ದರೂ ಕೂಡ 'ಟಾಂಗಾದಲ್ಲಿ ಬಂದ ಜಾಸಯ್ಯನ' ಪ್ರಶ್ನೆ 'ಅವ್ವ'ನಿಗೆ ಒಗಟವಾಗಿ ಉಳಿಯುವುದಿಲ್ಲ. ಅವಳಿಗೆ ಗೊತ್ತು 'ಮ್ಯಾಲಿಂದ ಸ್ಯಾಲ ಬರಗಾಲ ಬಂಧಾಂಗ ಬಂದು ಮನೆ ತೊಳೆದು' ಹೋಗುವವಳು ಬಂದಿದ್ದಾಳೆಂದು. 'ಇಷ್ಟು ಉಲ್ಲಾಸ ತರೋ ಜಾಸಯ್ಯ' ಮತ್ತಾರಿರಬೇಕು? —ಎಂದು. ಕೊನೆಗೆ 'ಹೌದೋ, ಅವರ ಕಾಲ ಮುಗೀತು ಈಗ' ಎಂದು ಸ್ವತಃ ಮಗನು ತಂದೆಯು ವಿಷಯವಾಗಿ ಉದ್ಗಾರ ತೆಗೆಯುವ ಸ್ಥಿತಿಗೆ ತಂದೆ—ಮುದುಕ ಬರುವನು. 'ಕೊನೆಗೆ ಮುರಿಯಿತು....ಸಂಧ್ಯಾ ಸರಿಯಿತು, ಕಾಲ ಮುರಿಯಿತು' ಎಂದು ಪುಟ್ಟು ಎಂದೆಂದು ಮುದುಕನ ಮನಸ್ಸಿನಲ್ಲಿಯೂ ಮೂಡಿತ್ತೇನೋ ಎನ್ನುವ ಸ್ಥಿತಿಯನ್ನು ಮುದುಕ ಸುಟ್ಟುವ. ರಂಗಭೂಮಿಯ ತುಂಬೆಲ್ಲ ತನ್ನ ಜೀವನವಲ್ಲ ಕಲ್ಲೋಲ ಎಬ್ಬಿಸಿದಂತೆ ನಾವಗೊಂಡ ಮುದುಕನ ದನಿ ರಂಗಭಲ್ಲಿ ಕೇಳದಂತಾಗುವುದು. 'ಒಳಗೆ ಇಟ್ಟರ ಸೋಂಕೈತಿ, ಹೊರಗ ಒಯ್ದರ ಆರತೈತಿ' ಎನ್ನುವ ಕಂಡೀಲಿನ ಸ್ಥಿತಿ ಮುದುಕನಿಗೂ ಬಂದುದು. ಯೌವನ ಪಲ್ಲಿ ಬೆಳೆಯುವ—ವಿಶಾಲವಾಗಲಿಚ್ಛಿಸುವ— ತರುಣಹೃದಯವನ್ನು ಒತ್ತಿ ಹಿಡಿವ ಕೈನಡುಗುವುದು. ವೆಂಕಪ್ಪನ ಕಾಂತಿಕಾರಕ ಪ್ರಭಾವ ಪ್ರಭಸಕ್ಕೆ ಸಿಕ್ಕು, ಪುಟ್ಟನ ಸ್ವಾತಂತ್ರ್ಯವನ್ನು ಸಹಿಯಲು ಪ್ರಯತ್ನಿಸುವ ಹೃದಯದ ಒಟ್ಟಿಕ್ಕೆ ತಡೆಯಾಗಿ ಕಳತಿದ್ದ ಮುದುಕನ ಹೃದಯ ವಿಶಾಲವಾಯಿತೊ ಅಥವಾ ತರುಣ ಶಕ್ತಿಗಳನ್ನು ಬಿಳಿಯಲು ಬಿಟ್ಟು

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ರಂಗದಿಂದ ಸರಿಯಿತೊ- ಎನ್ನುವುದನ್ನು ಗೂಢವಾಗಿರಿಸಲೋ ಏನೋ ಎನ್ನುವಂತೆ, ತೆರೆಯು ಮುದುಕನನ್ನು ಮುಚ್ಚಿಕೊಳ್ಳುವುದು.

ಮುದುಕನ ಪಾತ್ರದಲ್ಲಿಯೇ ಇಷ್ಟೊಂದು ಪ್ರಕಟವಾದ ನಾಟ್ಯಕಲೆಯ ಮುಖ್ಯ ಅಂಗವಾದ ಪಾತ್ರರಚನೆಯಲ್ಲಿಯ ಕೌಶಲ್ಯವು, 'ಅವ್ವ'ನ ಪಾತ್ರರಚನೆಯಲ್ಲಿ, ನಾಟಕದಲ್ಲಿಯ ಪಾತ್ರದ ಎಲ್ಲೆಯನ್ನು ಮೀರಿರುವುದು. ಅವ್ವ ನಿಜವಾಗಿಯೂ ಇಂತಹ ಮುದುಕನ ಮನೋವೃತ್ತಿಗೆ ಬಲಿಯಾದವಳು ಎಂಬುವನ್ನು ಅವಳ ಪ್ರತಿಯೊಂದು ನುಡಿಯೂ ಸಾರುತ್ತದೆ. ತನ್ನ ಪತಿಯ ಸಂಧ್ಯಾವಂದನೆಯ ರೀತಿ ಗೊತ್ತಿದ್ದರೂ ಕೂಡ " ನೀವು ಸಂಧ್ಯಾನ ಮಾಡತಾ ಕೂತೀರಿ. ನಿಮಗ್ಯಾಕ ಹತ್ತಾಸಾಂತ ಹೊರಗಿನ ಪಡಸಾಲೆಯೊಳಗೆ ಪಲ್ಲೆ ಆರಿಸತಾ ಕೂತಿದ್ದೆ ". ಎನ್ನುವಷ್ಟು ತಾಳ್ಮೆ, ಸಹನಶೀಲತೆ ಅವ್ವನಲ್ಲಿದೆಯೆಂದೇ, ತಂದೆಯನ್ನು ಕಂಡರೆ 'ಪೂಜ್ಯಪಿತೃಪಾದರಕ್ಷೆಗಳವರಿಗೆ' ಎನ್ನುವಷ್ಟು ಉದ್ದಟನಾಗುತ್ತಿದ್ದ ಪುಟ್ಟು, ಅವಳ ವಿಷಯಕ್ಕೆ ಪೂಜ್ಯಭಾವನೆಯನ್ನು ತಾಳಿದ್ದ. ತಾಯಿಯಿಂದು ಪ್ರೀತಿಸುತ್ತಿದ್ದ. ನಿಜವಾದ ತಾಯಿ—ಮಗು ಸಂಬಂಧವು ಅವರಿರ್ವರಲ್ಲತ್ತು ಇಷ್ಟಾದರೂ ಗಂಡನ ಸ್ನೇಹವನ್ನು ಬಯಸುತ್ತಿದ್ದ ಹೆಣ್ಣಿನ ಹೃದಯ ಅವಳಲ್ಲಿದೆ. ಗಂಡನ ಎಲ್ಲ ತಪ್ಪುಗಳನ್ನು ಕಂಡು ಕಂಡೂ ಅವನನ್ನು ತಿರಸ್ಕರಿಸದಿರುವ ಉದಾರ ಹೃದಯ ಅವಳಲ್ಲಿದೆ. 'ಏನು ಸಂಧ್ಯಾನೋ ಏನೋ! ಒಬ್ಬರು ಮುಂಜಾನೆದ್ದು ಸಂಧ್ಯಾನಾಂತ ಮಾಳೆ ಹಿಡಿತಾರ..... ಮನೀನೇ ಮನೀ, ನಾನೇ ನಾನು!' ಎನ್ನುವಷ್ಟು ಅವಳು ಉದಾಸೀನಳಾಗಬೇಕಾದರೆ, ಮುದುಕನ ಮುಸ್ಸ್ವಭಾವ ನನುಗೆ ನುತ್ತಷ್ಟು ಅಸಹ್ಯಕರವಾಗುತ್ತದೆ. ಹೀಗಿದ್ದಮೇಲೆ

'ಯಾರ ಸಲುವಾಗಿ ಅಂತ ಮಾಡಬೇಕೋ, ಎಷ್ಟು ದಿವಸಾಂತ ಮಾಡಬೇಕೋ' ಎಂದು ಅವಳು ಗುಣುಗುಟ್ಟುವುದು ಸ್ವಾಭಾವಿಕ. ಮುದುಕನ ಪಾತ್ರದಲ್ಲಿ 'ಧಾತಾ ಯಥಾ ಪೂರ್ವಮಕಲ್ಪಯತ್' ಎನ್ನುವ ಅಸಹಜ ಮಾತುಗಳು ಬಂದಿದ್ದರೂ ಕೂಸ, ಅವ್ವನ ಪಾತ್ರ ಸರ್ವಾಂಗಸುಂದರವಾಗಿದೆ, ಸಹಜವಾಗಿದೆ. ಸ್ವಾಭಾವಿಕತೆಯ ಕಳೆ ತುಂಬಿ ತುಳುಕುತ್ತಿದೆ-- ಎಂದು ಧಾರಾಳವಾಗಿ ಹೇಳಬಹುದು.

ಯೌವ್ವನದ ದುಡುಕಿನ ಶಕ್ತಿಯನ್ನು ತಡೆಹಿಡಿಯುವ ಸಂಯಮಕ್ಕೆ, ಅನುಭವದಿಂದ ಬುದ್ಧಿಗಲಿತ ಅವ್ವನಲ್ಲಿದೆ. 'ಸಾಕು ಬಿಡು ಪುಟ್ಟೂ, ಹಾಂಗ ಕುಚೇಷ್ಟಾ ಮಾಡಬಾರದು; ಅಪರಾವರೂ ಏನು? ನಿನ್ನಷ್ಟು ಇದ್ದಾಗ ಹೀಂಗೇ ಎನಾದರೂ ಮಾಡುತ್ತಿದ್ದರು, ಈಗ ಮುಂಜಾನೆದ್ದು ಮೂಗು ಹಿಡಿತಾರ' ಎಂದು ಪುಟ್ಟೂನ ಮನಸ್ಸನ್ನು ಹಿಡಿತದಲ್ಲಿಡುವ ತಾಯಿಯ ಶಿಕ್ಷಕ ಗುಣ ಅವಳಲ್ಲಿದೆ. ಅದರ ಸಂಗಡವೇ, ತಾಯಿಯ ಹೃದಯಕ್ಕೆ ಒಂದೂ ಸಮಾಜದಲ್ಲಿ ಸಹಜವಾದ ಮಗನ ಮದುವೆಯ ಹಂಬಲವೂ ಅವಳ ಬಾಯಿಯ ಮೇಲಿಂದ ಮೇಲೆ ಒಡಮೂಡಿಸುತ್ತದೆ. ಅದು ಪುಟ್ಟೂಗೆ ಗೊತ್ತು. ಎಂತಲೇ ಅವನೆನ್ನುವುದು: 'ಅಂತೂ ಚಹಾ ಮಾಡಿಕೊಳ್ಳಕ್ಕಾದರೂ ಬೇಸತ್ತು ಮದಿವೆ ಮಾಡಿಕೊಳ್ಳತೀನಿ ಅಂತ ಆಶಾ ನಿನಗ' ಎಂದು. ಇಷ್ಟಾದರೂ ಶ್ರೀರಂಗರು ಅವ್ವನ ಪಾತ್ರವನ್ನು ಆದರ್ಶ ಮಾಡಲು ಹೊರಟು, ಹೆಣ್ಣಿನ ಹೃದಯದ ಭಾವನೆಗಳನ್ನು ತುಳಿಯಲು ಯತ್ನಿಸಿಲ್ಲ, ಅವಳಿಗೂ ಹೃದಯವಿದೆ, ಸಿಟ್ಟಿದೆ. ಗಂಡನು ಸಿಟ್ಟಿಗೆದ್ದರೆ ಮನಸ್ಸಿಗೆ ನೋವಾಗುತ್ತದೆ 'ಊರ ಗಂಡಸರ ಹೆಸರೆಲ್ಲ ನನಗೆ ಗೊತ್ತಿಪ್ಪ ಅಂತ ತೀಡೀಸೇನೋ!' ಎಂದು ಸಿಡುಕಿನಿಂದ ಅವಳು ನುಡಿದುದೂ ಉಂಟು ಗಂಡನಿಗೆ ಉದ್ಧತಳಾಗದಂತೆ ಅವಳು ಮಾತನಾಡುವ ದರಲ್ಲಿ ಹಾಸ್ಯದ ಝರಿಯೂ ತಿಳಿಯಾಗಿ ಹರಿಯುತ್ತದೆ. 'ಸಂಧ್ಯಾನದಾಗ ಯಾರ ಜೋಡೀ ಮಾತಾಡತಿರತಾರ ನನಗೇನು ತಿಳಿಯಬೇಕು ಹೇಂಗಸಿಗೆ?' ಎಂದು ಮೋರೆಯೆತ್ತದೆ ವಾಗ್ಬಾಣ ಬಿಡುವ ಮಾತಿನ ಜಾಣ್ಮೆಯೂ ಅವಳಲ್ಲಿದೆ ಹಿಂದೂ ಸಂಸ್ಕೃತಿ ಅವಳ ಮನಸ್ಸಿನೊಳಗಿನ್ನುಕೊಂಡ ಪರಪುರುಷನ ವಿಷಯಕ್ಕೆದ್ದ ಅವಳ ಭಾವನೆಯನ್ನು 'ಮನೆಗೆ ಬಂದ ಗಂಡಸರನ್ನು ನಾನು ಮಾತಾಡಿಸಬೇಕೆ?' ಎಂದು ಹೊರಗೆಡಹುವುದು. 'ಪಸ ದಿನಕ್ಕೆ ಸಂಧ್ಯಾನಕ್ಕಿಂತ ಜೈಯೋದೇ ಜೆಬ್ಬಾಗೇಪ' ಎನ್ನುವ ಸಂಗತಿಯೂ ಅವಳ ನಿಮರ್ಶಕ ಕಣ್ಣಿಗೆ ಮರೆಯಾಗಿಲ್ಲ. ಅವರೆ ಅಪನ್ನು ಅನ್ನುವ ರೀತಿ, ಪೇಳೆ (ಸಂವರ್ಧ), ಅವಳೇ ಹುಡುಕಿದುದು. ಮನೆಯ ಮರ್ಯಾದೆಯ ಸಂಪೂರ್ಣ ಹೊಣೆ ಹೆಂಡೂ ಸಮಾಜದಲ್ಲಿ ಹೆಂಗಸಿನ ಮೇಲಿದೆ, ಗಂಡುಸು ತಪ್ಪು ಹಾದಿ ಹಿಡಿಯಬಹುದು. ಆದರೆ ಹೆಣ್ಣಿಗೆ ಅದು ತರವಲ್ಲ 'ಅವ್ವ'ನು ಸಹ ಈ ನಿಯಮಕ್ಕೆ ಹೊರತಿಲ್ಲ. " ಮಂದಿ ಬಂದ ನಿಮಿತ್ತದಿಂದಾದರೂ ಮನೆಯೊಳಗೆ ಒಂದು ದಿವಸ ಒದರಾಟ ಬ್ಯಾಡ- ಅಂತ ಹೇಳದೆ, " ಎಂದು ತನ್ನ ಗಂಡನ ಸ್ವಭಾವವನ್ನು ಪಂಕಪ್ಪನಿಂದ ಮುಚ್ಚಲು ಪ್ರಯತ್ನಿಸುವಳು. ಇವನ್ನು ಸಮಾಜದಲ್ಲಿ ನಾವು ದಿನಕ್ಕೆಪ್ಪ ಸಲ ನೋಡುವುದಿಲ್ಲ?' 'ಅವನಿಗೂ ಒಂದು ಕೆಲಸ ಹಚ್ಚಿಕೊಡಿರಿ, ಅವನೂ ಪಾದಿಗೆ ಹತ್ತಾತ್ಯನ' ಎಂದು ಮಗನ ಸಲುವಾಗಿ ಗಂಡನಿಗೆ ದುಂಬಾಲು ಬೀಳುವ ತಾಯಿಯನ್ನು, ನಿರುದ್ಯೋಗ ಯುಗವಾದ ಈ ದಿವಸಗಳಲ್ಲಿ ದಿನಾಲು ಕಾಣಬಹುದು. 'ಏ,—ನೀನು ಯಾಕೆ ಬರತೀ ಇಲ್ಲಿ ಅಡಿಗೆ ಮನೆ ಬಿಟ್ಟು?' ಎಂದು ಗಂಡನು ಸಿಡುಕುಗೊಂಡರೂ ಅವಳ ತಾಯಿಯ ಹೃದಯ ಪುಟ್ಟುವಿನ ರಕ್ಷಣೆಗಾಗಿ ಓಡಿ ಬರುತ್ತದೆ. ಇದೆಲ್ಲವನ್ನು ನೋಡಿ ಅವ್ವನ ಮನಸ್ಸು ಸಿಡಿಮಿಡಿಗೊಂಡರೂ ಮುದುಕನು ಸಿಟ್ಟೆ ಗೇಳದಂತೆ 'ಮುಗುಳುನಗೆಯಿಂದ ' ಮನೆಯವರದು ಮುಗೀತು- ಇನ್ನು -ಸಾಪ. ಆ ಬೆಕ್ಕಿನ ಪಾಳಿ ಬಂದಿತೋ ಏನೋ' ಎಂದು ಮಾತಿನಿಂದ ಅವನನ್ನು ಚುಚ್ಚುವಳು. ಇದೆಲ್ಲ ಅನುಭವದ ಮಾತಿನ ಕಂತೆಗಳಿಂದ ಪಾತ್ರಕ್ಕೆ ಅಸಹಜತೆಯ ಬಣ್ಣಬಳಿಯದಂತೆ ಅವ್ವನ ಪಾತ್ರದಲ್ಲಿ ಹೆಣ್ಣಿನ ಆಶೆ ಆಕಾಂಕ್ಷೆಗಳೆಲ್ಲವೂ ಮೂಡುವಂತೆ ಮಾಡಿರುವ ಶ್ರೀರಂಗರ ಪಾತ್ರರಚನೆಯ ವೈಶಿಷ್ಟ್ಯ. 'ಅಕ್ಕಸಾಲಿಗನ ಮನೆಗೆ ಕಳುಹಿದ್ದಿರೇನು ಅವನ್ನ!' ಎಂದು ಕೇಳುವ 'ಅವ್ವ'ನ ಆಶೆ ಹೆಣ್ಣಿಗೆ ಸ್ವಾಭಾವಿಕವಲ್ಲವೆ? ಎಂತಹ ಆದರ್ಶ ಹೆಂಗಸಾದರೂ ಅವ್ವ ಹೆಂಗುಸಲ್ಲವೇ? ಅಂತೆಯೇ ಗಂಡನು 'ಬಂಗಲೆ' ಯ ವಿಷಯದ ಸುದ್ದಿ ಕೇಳುತ್ತಿರುವಾಗ, ತನ್ನ ಪ್ರೇಮಪಾಶವನ್ನು ಮೀತಿಕ್ಕಿ ಬೆಳ್ಳು ಕೆತ್ತುಕೊಳ್ಳುತ್ತಿದ್ದುದನ್ನು ಸಹಿಸದೆ 'ಏ ಹೊಲ್ಯಾ, ಗುರುತು ಹಿಡಿದರೆತೆ! ಹಿಡಿಯದೆ ಏನು ಮಾಡ್ತಾರ ಹಿಡಿಹಿಡಿ ದುಪ್ಪು ಹಿರಿದುಕೊಂಡು! ಮ್ಯಾಲಿಂದ ಮ್ಯಾಲೆ ಬಂದು ಬರಗಾಲದ್ದಾಂಗ ಮನೆತೊಳೆದು ಹೋಗ್ತಾಳ! ಇದರ ಕುಲ ಹಾಳಾಗಲಿ' ಎಂದು ಅವಳು ಕ್ರೋಧದಿಂದ ಕಂಗೆಟ್ಟು ರಪಿಸುವಳು. ಸಮಾಜದಲ್ಲಿ ಹೆಣ್ಣಿಗಿದ್ದ ಸ್ಥಾನ ಅವಳಿಗೆ ಸೊತ್ತಿದೆ. ' ಆಯ್ಯ ಒಂದು ಪಾತಾರು ಕೇಳಬಾರನು, ಒಂದು ಮನೆಯೊಳಗೆ ತಿರುಗಾಡಬಾರದು! ಹೋಗತೀನಿ ಆಯಿತೆ?' ಎಂದು ಮನ ನೊಂದು ಉಸಿರಬೇಕಾದರೆ, ಹೆಣ್ಣು ತನ್ನ ಸ್ವಾತಂತ್ರ್ಯ ಕಳೆದುಕೊಂಡುದು ಅವಳ ಮನಸ್ಸಿಗೆ ಎಷ್ಟು ಕಟುವಾಗಿ ಚುಚ್ಚುತ್ತಿರಬೇಡ! ಹೆಣ್ಣಿನ ಹೃದಯ ಒನ್ನೆ ಕಾಯಿಕೆಂದರೆ ಆರುವುದು ಕಠಿನ. ಆದರೆ ತನಗೆ ಎಷ್ಟೇ ಸಿಟ್ಟು ಬಂದಿದ್ದರೂ 'ನಿಮ್ಮ ನೆರಳಿನೊಳಗೆ ಕಾಲಿಡಬಾರದು.' ಎಂದಿಷ್ಟೇ ನುಡಿದು ಶಾಂತತೆಯಿಂದ ಒಳಸೇರುವಳು. ಸಮಾಜದಲ್ಲಿಯ ಪ್ರತಿಯೊಬ್ಬ ಅವಿವೇಕಿ ಗಂಡನ ಹೆಂಡತಿ ನುಡಿಯಬೇಕಾದುದನ್ನೇ ಅವ್ವ ನುಡಿದಿರುವಳು. 'ಇಂಥಾ ಪರಿಯಿಂದ ನಡಿಯೋದರಕಿಂತ ಬದಿನೀ ಮಾಡಿಕೊಳ್ಳೋದು ಸಾವಿರ ಪಾಲಿಗೆ ಬೇಕು. ನನ್ನದೇ ತಪ್ಪು; ಆವಾಗೇ ನಾನು ಹೇಳಬೇಕೆಂದರ ಅಷ್ಟು ಧೈರ್ಯನೂ ಇರಲಿಲ್ಲ. ಬುದ್ಧಿನೂ ಬರಲಿಲ್ಲ. ಹೆಂಗಸಿನ ಜಲಮಾನ ವ್ಯರ್ಥ. ಸಂಸಾರದೊಳಗ ಸಣ್ಣಕೆದ್ದಾಗ ಮಾತಾಡಬೇಕಂದರ ನಾಚಿಕೆಯಿಂದ ಧೈರ್ಯವಾಗುವದಿಲ್ಲ! ಮುದುಕಿ ಅನ ಮ್ಯಾಲ ನಾಚಿಕೆ ಬಿಟ್ಟು ಮಾತಾಡಿದರ ಮನೆಯವರು ಕೂಡಾ ಕೇಳೋದಿಲ್ಲ! ಗಂಡಸಿನ ಮಾತು ಬೇರೆ; 'ಬೇಡ' ಎನಿಸಿತು ಅಂದರೆ ಮನೆಬಿಟ್ಟು ನಡೆದರಾಯಿತು." ಎಂದು ಹೆಂಗಸಿನ ಬಾಯಿಂದ ಬರಬೇಕಾದರೆ ಅವಳೆಂದೂ 'ಅವ್ವ'ನಿಗಿಂತ ಹೆಚ್ಚು ಕಲಿತವಳಿರಬೇಕಾಗಿಲ್ಲ. ಅವ್ವನ ಹೃದಯದಂತಹ ಹೃದಯ ವೊಂದಿದ್ದರಾಯಿತವಳಿಗೆ. ಧರ್ಮದ ಪ್ರಮುಖವಾದ ಭಾವನೆಯೆಷ್ಟೋ ದಿನಗಳಿಂದ ತಳವೂರಿದ್ದರೂ, ಅವ್ವನ ಹೃದಯ ಸ್ತ್ರೀಯ ಹೃದಯಕ್ಕನುಗುಣವಾಗಿ, ಬೇಗನೇ ಪರಿಸ್ಥಿತಿಗನುಕೂಲವಾಗಿ ಪರಿವರ್ತಿಸುವಂತಹದು. 'ಡಾಕ್ಟರು ಹೇಳಿದರು ಅಂದ ಮ್ಯಾಲೆ ತಕ್ಕೊಳ್ಳಲಿಕ್ಕೆ ಏನು ಆಡ್ಡಿ?' ಎಂದು ಅವಳ ಮತ. ಸಂಕುಚಿತ ಮನಸ್ಸಿನ ಮುದುಕ ವೆಂಕಟರಮಣಾಚಾರಿ (?) ವೃತ್ಯಾಶಯೈಯ್ಯಂಗಿಂತ ಚಪ ಕುಡಿದು

ಪಾಠಗುಣವಿದ್ದರೂ ಕೂಡ ಕಷ್ಟ ಬಿಟ್ಟರೆ ಬೇರೆ ಏನೂ ಕೊಡಲಿಲ್ಲವೇನೋ ಇಲ್ಲವೋ! 'ನೀನೇನು ಬೇಕು ಅಂತ ಕೊಡೀತಿಯಾ ..... ಆಚಾರ್ರು ನಾವು ಮಾಡೋನು ಮಟ್ಟೋನು ಎಲ್ಲಾ ಸುಳ್ಳು. ಮನಸ್ಸಿನಾಗ ಹ್ಯಾಂಗಿರತೇವೋ ಅದೇ ಗಟ್ಟಿ ...ಸಾಂಗ ಮಾಡಬಾರದು ಪುಟ್ಟಾ, ಮುಂದಿಯ ಸಲುವಾಗಿ ನಾಡೋನು ಎಷ್ಟು ದಿನವಾ ಅಂತ ನಡಿದೀತು ಮಾತಾಗಲಿ ಮನಸಾಗಲಿ ನೂಜೋದಾಗಲಿ ಮನುಷ್ಯಗ ತನ್ನಷ್ಟೂ ಅಂತ ಒಮ್ಮ ಗಟ್ಟೀ ಇರಬೇಕು.. ನೀಗ ಜ್ಯಾಡಾವ್ರ ಬಿಟ್ಟುಬಿಡು!' ಎಂದು ಹೇಳುವ ಹೆಣ್ಣಿನ ಹೃದಯ ಅದೆಷ್ಟು ವಿಶಾಲವಾದುದು! ಅದೆಷ್ಟು ಅನುಭವಯುಕ್ತವಾದುದು! ಅದೆಷ್ಟು ಸ್ಪೆಜವಾದುದು! ಪಾತ್ರಂಜನೆ ಎಷ್ಟು ವಾಸ್ತವವಾದುದು! ಸಂಧ್ಯಾಕಾಲದಲ್ಲಿ ಮುನುಕನ ನೋವನ್ನು ಕಂಡು, ಸುಗರೂ ಹಾಗೇ ಜಗಬಂಧಿಯೆ ಎಂದು ತಳಮಳಗೊಳ್ಳುತ್ತ 'ಮುನಗೂ, ಪುಟ್ಟಿ ನೀ ಮಾತ್ರ ಸಂಧ್ಯಾನ ಮಾಡಬೇಡಪ - ನಿಂ ಸಂಧ್ಯಾನ ಬ್ಯಾಡ, ಎಂ ಕಾಲ ಮುಂದೂಡೋದೂ ಬ್ಯಾಡ!' ಎಂದು ಎಚ್ಚರಿಸುವಳು ಪುಟ್ಟಿಯನ್ನು. ಹೀಗೆಯೆ ಕಥೆ, ಅನುಭವ ನೂರಾರು ಪರಿಸರಗಳಿಂದ ತಲೆದೋರಿ ಪಾತ್ರಸೃಷ್ಟಿಗಳನ್ನು ತುಳಿದು ತಾಂಡವವಾಡಿಸುತ್ತ, ಕಡೆಗೆ ತಾಯಿಯ ಹೃದಯ ಗೆದ್ದಿತು! ಹೆಣ್ಣಿನ ಹೃದಯವನ್ನು ಚಿತ್ರಿಸುವುದರಲ್ಲಿ 'ಶ್ರೀರಂಗ'ರ ಕೈ ಮೀರಿತ್ತಿದುದು. ಹೆಣ್ಣಿನ ಹೃದಯದ ವಿಶಾಲತೆಯನ್ನು ಕಂಡು ಅನುಭವಿಸಿ ಬರೆದಷ್ಟು ಸುಭದ್ರವಾಗಿ ಮನೋಹರವಾಗಿ ಸೃಜಕೆಯು ಅರಳಿಯಲ್ಲಿ ಕಿರಂಗೆಟ್ಟಿದೆ.

ತಂದೆಯನ್ನು ಅಲಂಬಿಸಿದ ಕಲಿತ ಸಿರಿಮೊಗ್ಗೆಯ ಹೃದಯ ಚಿತ್ರಣ ಸಾಮಾನ್ಯವಾಗಿರದಿದ್ದರೂ ಅಸಹಜವಲ್ಲ. ತಾಯಿಯ ರಕ್ಷಣೆಯಲ್ಲಿನ್ನು ಚಿಂತೆಯನ್ನು ಕಾಣದ ಯುವಕನಿಗೆ ನಿರುದ್ಯೋಗದ ಬೇಗೆ ಪತ್ತದ ಪರಿಣಿಗೆ ವಿನೋದಿಯಾಗಿರಲು ಯಾವ ಅತಂಕವಿದೆ? ಸುಧಾರಕನೆಂದು ಹೊಗಳಿಸಿಕೊಳ್ಳುವ ಅಬ್ಬರದಲ್ಲಿ, ಯೌವನದ ಮುಬ್ಬಿನಲ್ಲಿ ವಿಧವಾ ವಿವಾಹದಂತಹ ಕೆಲಸಕ್ಕೆ ಗೊತ್ತಿಲ್ಲದೆ ಕೈಹಾಕಿ, ಹುಸಿಗಡಿಗೆ ತಂದೆಗೆ ಹೆದರಿ ಧೈರ್ಯಗೆಟ್ಟು ಪ್ರೇಮಭಂಗ ಪಾಡುವ ಮನಸ್ಸುಳ್ಳ ತರುಣ ಪುಟ್ಟಾ, ತನ್ನೆವರಿಗಿದ್ದ ಪ್ರಶ್ನೆಯನ್ನು ವಿಚಾರಿಸದಿದ್ದು ಅವನ ಸ್ವಭಾವ ಹಗುರಾದುದು. ಮೇಲಿಂದ ಮೇಲೆ ಸುಡಿಯನ್ನು ಕುರಿತು ಚೇಷ್ಟೆ ಮಾತುತ್ತ ತಂದೆಯನ್ನು ಟೀಕಿಸುತ್ತ ತಿರುಗುವ ತರುಣನವ. ಮಾತಿನ ಜಾಣತನ, ವಿನೋದವೃತ್ತಿಗಳೆಂಡನ್ನು ಬಿಟ್ಟರೆ ಹೇಳಿಕೊಳ್ಳುವ ಗುಣಗಳು ಇವನಲ್ಲಿ ಏನೂ ಇದ್ದಂತಿಲ್ಲ. ಇಂತಹ ನಿಶ್ಚಿಂತ ತರುಣನ ಪಾತ್ರಸೃಷ್ಟಿ ಹೊಸದಿದ್ದರೂ, ಸೃಷ್ಟಿಸುವ ರೀತಿ ಹೊಸದಿದ್ದರೂ ಅಸಹಜವಲ್ಲ ಕೆಲವು ಕಡೆಗೆ ಪುಟ್ಟುವನ್ನು ವಿನೋದ ಮೂರ್ತಿಯನ್ನಾಗಿ ಮಾಡುವ ಭರದಲ್ಲಿ, ಅವನ ಕೈಯಿಂದ ಕೆಲವು ಅಸಹಜಕೃತಿಗಳನ್ನು ಮಾಡಿಸಿದರೂ ಕೂಡ, ಒಟ್ಟಿನ ಮೇಲೆ ಅವನ ಪಾತ್ರಸೃಷ್ಟಿ ವಿಶಿಷ್ಟವಾದುದು. ಚೆನ್ನೇ ಸಹಜವಾದುದು. ತಲೆ ತಲೆಯ ಮೇಲೆ ಕೈಯಿಟ್ಟು 'ಚಂಡಿಕೆ ಎಲ್ಲಿ?' ಎಂಬ ಪ್ರಶ್ನೆಯನ್ನು ಕೇಳುವವನಂತೆ ನಟಿಸುತ್ತ 'ಇದು ಇಲ್ಲಂತೀರಿ' ಎಂದು ಕೇಳುವ ಪ್ರಶ್ನೆಯ ಸಹಜತೆಯೊಂದಿಗೆ 'ಮುಡಿಯೊಳಗೆ ಬರಲಿ ಅಂತ ಕಾಜು ತೆಗೆದು ಎರಡು ಕೃಷ್ಣಾಜಿನ ಪಟ್ಟೆ ಹಾಕಿಸಿದೆ' ಎನ್ನುವ ಅಸಹಜತೆಯೂ ಇವನಲ್ಲಿ ಕೂಡಿದೆ. ಪುಟ್ಟುನ ಪಾತ್ರವಿಲ್ಲದಿದ್ದರೆ 'ಸಂಧ್ಯಾಕಾಲ' ಈಗಿದ್ದ ಸ್ಥಿತಿಗೆ ಮುಟ್ಟುತ್ತಿದ್ದಿತೋ ಇಲ್ಲವೋ ಎನ್ನುವುದು ವಿವಾದಾಸ್ಪದ ಸಂಗತಿ.

ವೆಂಕಪ್ಪನ ಪಾತ್ರ 'ಸಂಧ್ಯಾಕಾಲ'ವಲ್ಲಿ ಎದ್ದು ಕಾಣುವಂತಿರುವುದು. ಮುನುಕನ ಮಾತುಗಾರಿಕೆಯನ್ನೂ, ಪುಟ್ಟುನ ವಿನೋದವೃತ್ತಿಯನ್ನೂ, ಅವ್ವನ ವಿಚಾರ ಮೂಲಿಕೆಯನ್ನೂ ಹೊರಗೆಡವಲು ಅವನು ಬೇಕು. ಅವನ ಜನಿವಾರ - ಧೋಲ್ಲಾಸ್ಕೀ', ಚಂಡಿಕೆಯ ಗದ್ದಲ ಕೆಲವು ಸಾಕ್ಷೀಕರಿಸಲೋಸ್ಕರ ಮೋಸವೂ ಕೂಡ, ಹಾಸ್ಯದ—ತೀಕ್ಷ್ಣವಾದ ಹಾಸ್ಯದ—ತೊರೆಯನ್ನು ಅವಿರತವಾಗಿ ಸುರಿಸುತ್ತ 'ಸಂಧ್ಯಾಕಾಲ'ವನ್ನು ಕ್ರೀಡೋದ್ಯಾನದ ಸರೋವರವನ್ನಾಗಿ ಗೆಸೆಯಲ್ಪಟ್ಟಿರುವ ಧವಳತೆಯ ತುಷಾರದ ತಂಪನ್ನು. ಕಾವ ನಬಿಲ್ಲಿನ ಸೊಂಪನ್ನು ನಿವಾರಿಸುವುದಲ್ಲದೆ, ನಾಟಕದ ಮುಖ್ಯವಸ್ತುವಿನಲ್ಲಿಯ ಪ್ರೇಕ್ಷಕರ ಆಕರ್ಷಣೆಯನ್ನು ಹೆಚ್ಚು ಮಾಡಲು ಸಹಾಯ ಮಾಡುತ್ತದೆ. ಪುಟ್ಟು–ವೆಂಕಪ್ಪರ ವಿನೋದ ಸಂವಾದ, ಪೋಸ್ಟ್‌ಮನ್ ಪ್ರಕರಣ, ದಾಸಯ್ಯನ ಜಿಗಣನ ಎಲ್ಲವೂ ಕತೆಯೊಡನೆ ಹೆಣೆದುಕೊಂಡು ಒಂದಾಗಿ, ಕತೆಯ ಸರಳತೆಗೆ ಜಾಳಿ ತರದಂತೆ ನಾಟಕೀಯತೆಯನ್ನು ಹೆಚ್ಚಾಗಿಸುವವು. 'ದಾಸಯ್ಯನನ್ನು ಪೋಸ್ಟ್‌ಮನ್‌ನ ಪತ್ತರವೇ ಏಕೆ ಮಡುಕಬೇಕು? ಪೋಸ್ಟ್‌ಮನ ನನ್ನು ರಂಗಭೂಮಿಗೆ ತಂದಿದು ಅನಾವಶ್ಯಕ' ಎಂದು ವಿಮರ್ಶಕದೃಷ್ಟಿಗೆ ಕಾಣುತ್ತಿದ್ದರೂ, ಪೋಸ್ಟ್‌ಮನ್‌ನು ರಂಗದ ಮೇಲೆ ಬಂದ ಸಹಜತೆ-ಸ್ವಾಭಾವಿಕತೆಗಳನ್ನು ಕಂಡಾಗ, ವಿಮರ್ಶಕ ಹೊಗಳಿಭಟ್ಟನಾಗುವಂತಿದೆ. 'ಏ, ನಿನಗೆ ಚಂಡಿಕೆ ಇಲ್ಲದಿದ್ದರೂ ತಲೀ ಅದ ನೋಡಪಾ' ಎಂದೆನ್ನಿಸಿಕೊಂಡ ವೆಂಕಪ್ಪನ ಪಾತ್ರ. ನಾಟ್ಯಸೃಷ್ಟಿಯಲ್ಲಿಯೇ ಅಜರಾಮರವಾಗಿ ಉಳಿಯುವಂತಿದೆ.

ಸಾಮಾನ್ಯವಾಗಿ ಶ್ರೀರಂಗರ ಬಹಳ ನಾಟಕಗಳಲ್ಲಿ ಧರಿಸಿದ್ದ ನಂತಹ ಪಾತ್ರಗಳನ್ನು ಕಾಣಬಹುದು ಹಳ್ಳಿಯ ಹುಂಬನ ಕೂಸಿನಂತಹ ಹೃದಯ. ಎಲ್ಲದರ ವಿಷಯವಾಗಿರುವ ಅವನ ಕೂತೂಹಲ, ವಿಚಿತ್ರ ವಾಕ್ಯಸರಣಿ ಶ್ರೀರಂಗರ ಮನಹಿಂಡಿದಿರಬೇಕು. ಧರಿಸಿದ್ದ ಇಷ್ಟು ಅಶಿಕ್ಷಿತನಿದ್ದರೂ ಕೂಡ ಅವನ ವ್ಯವಹಾರ ಬುದ್ಧಿ ಬಲು ಹರಿತವಾದುದು. ಅವನ ಪ್ರತಿಯೊಂದು ಮಾತು ನಾಗರಿಕನೊಬ್ಬನಿಗೆ ಅರ್ಥವಿಲ್ಲದುವುಗಳಾಗಿ ಕಂಡುಬಂದರೂ, ಅವನ ದೃಷ್ಟಿಯಿಂದ ನೋಡಿದಾಗ ಅನೆಷ್ಟು ಮನೋರಂಜಕವಾಗಿವೆ – ಅರ್ಥಪೂರ್ಣವಾಗಿವೆ—ಯೆಂಬುದು ಕಂಡುಬರುವುದು. ಅವನ ಮಾತಿನ ಜಾಣತನ ನಾಗರಿಕನಿಗೆ ಹೊಸದು. 'ತಂದೀಸ್ರೀ ಅಣ್ಣಾ; ಅಂದ್ರ ತರಲಾಕೇ ಅಂತ ಹೊಂಟಿದ್ದಿನ್ರಿ' ಎಂದು ಹೇಳಿ, ಮುದುಕನಷ್ಟಲಕ್ಷ್ಯವನ್ನು ಸಾಲಕೇಳಲು ಬರಬಹುದಾದ ವೆಂಕಪ್ಪನ ಕಡೆಗೆ ತಿರುಗಿಸಿ, ತಾನು ಪಾರಾದ ಜಾಣತನ, ಸರಿಬುದ್ಧಿ ಯಾವ ನಾಗರಿಕನಿಗೂ ಬರಲಾರದು 'ಯಾಳೀಕ ಇಲ್ಲ ಅನ್ನಾನ್ರಪ್ಪ; ನಾಕ ಮುದೀಕಿಂತ ಹೆಚ್ಚಿಗೆ ಕಾಡವ್ರಲ್ಲ' ಎನ್ನುವ ಮಾತಿನ ಹಿಂದೆ ಎಷ್ಟೊಂದು ಕಟುನಾಪ ಟಿಕೆಯಡಗಿದೆ! ಹೆಚ್ಚು ವಿಚಾರ ಮಾಡಲಾರನು ಅನಕರ ಸ್ವಭಾವ ಹಳ್ಳಿಯನೊಡನೆ ಸಾಮಾನ್ಯವಾಗಿ ಬೆಟ್ಟದೆ. 'ಆ ಹುಣಚೀಗಿಮಾ ಮಾತು ಒಡನುಡಿತ್ತೇನ್ರಿ?' ಎಂದು ಮುದುಕನ ಮಾತಿನಲ್ಲಿ ನಡುನೆ ಬಾಯಿ ಹಾಕುವ, ಅನಕರವ ಸ್ವಭಾವ ಧರಿಪ್ಪ ಸದು! ಕುತೂಹಲಬುದ್ಧಿ ಸಹಜವಾದುದು

ಹಳ್ಳಿಯವರಿಗೆ ಯಾಕೆಂದರೆ ಇವರ ನಡುವಿನ ಎಷ್ಟೋ ಚರ್ಚೆಯ ಕಾರಕ ಸಂಗತಿಗಳೊಡನೆ ಅಪರಿಚಿತರಾಗಿರುವರು. ಗ್ರಾಮೋಫೋನಿನ ಪ್ಲೇಟು ತಿರುಗಹತ್ತಿದ ಕೂಡಲೆ 'ಎಲೆ! ತಿರುಗಲಾಕ ಹತ್ತಿತಲ್ಲ ಇದು! ಹಿಂದಿನ ಜಮಾನದಾಗ ಗಾಣದ ಎತ್ತಗತ್ತ ಆಗಿತ್ತೇನೊ ಅಂತೇನಿ' ಎಂದು ಎರಡೂ ಕೈಗಳಿಂದ ಅದನ್ನು ತಡೆಯುವನು. ಅವನ ಸ್ವಭಾವ ಎಷ್ಟು ಮುಗ್ಧವಾಗಿದೆ! ಶ್ರೀರಂಗರ ಹೇಳುವ ರೀತಿ ಎಷ್ಟು ಸೊಗಸಾಗಿದೆ! ಇಷ್ಟು ಹಳ್ಳಿಯ ಮುಗ್ಧನಿದ್ದರೂ ಕೂಡ ತನ್ನ ಕೆಲಸ ಸಾಧಿಸಿಕೊಳ್ಳಲು ಮುದುಕನ ಮನವನ್ನು 'ಮಜಾಸಾನಿ'ಯ ಮದದಿಂದ ಮಂಕುಮಾಡಿದನಿವನು. ಧರೆಪ್ಪನ ಪಾತ್ರ ಹಳ್ಳಿಯ ಜೀವದ ಪ್ರತೀಕವಾಗಿದೆ,

ಪೋಸ್ಟ್‌ಮನ್ನನ ಪಾತ್ರ ರಂಗಭೂಮಿಯಲ್ಲಿ ತನ್ನ ಕೆಲಸವನ್ನು ತೀರಿಸಿ ಹೆಚ್ಚಿನ ಹೊತ್ತು-ಕತೆಗಳಲ್ಲದೆ ತಿರುಗುತ್ತದೆ. ಎಷ್ಟಾದರೂ Government servant ಅಲ್ಲವೇ ಅವನು? ಅದೂ 'To obstruct a public servant in the lawful pursuit of his.....' ಇರುವಾಗ ಹೆಚ್ಚು ಹೊತ್ತು ರಂಗವಾದರೂ ಹೇಗೆ ತಡೆಯಬಲ್ಲುದು ಅವನನ್ನ? ಅಂತೆಯೇ ಶ್ರೀರಂಗರೂ ಅವನನ್ನು ತಡೆದಿಲ್ಲ.

ಇದು ಪಾತ್ರರಚನೆಯ ವಿಚಾರ. ಇನ್ನು 'ಸಂಧ್ಯಾಕಾಲ'ವನ್ನು ಶ್ರೀರಂಗರ ಬೇರೆ ನಾಟಕಕ್ಕಿಂತ ವಿಶಿಷ್ಟ ಮಾಡಿದ ಬೇರೆ ಕೆಲವು ವಿಷಯಗಳನ್ನು ವಿಚಾರಿಸುವಾಗ, ಉಚಿತವಾದ ಹಾಸ್ಯವು ಸಂಧ್ಯಾಕಾಲದ ಸಂಶ್ಲಿಷ್ಟರಾಗದ ಬಣ್ಣಕ್ಕೆ ಸರಿಯಾದ ಹಿನ್ನೆಲೆಯನ್ನು ಕಲ್ಪಿಸುತ್ತದೆ. 'ಈ ನಾಟಕ ಬರೆಯುವಾಗಲೇ ಗೀತಾಗಾಂಭೀರ್ಯದ ಒರೆಪಣಿಗೆಗೆ ಪಾರಂಭವಾಗಿತ್ತು' ಎಂದು ನಾಟಕಕಾರರು ಹೇಳಿದ್ದಾರೆ– ಮುನ್ನುಡಿಯಲ್ಲಿ ತನಗೆ ಯುದ್ಧ ಬೇಡವೆನ್ನಿಸಿದಾಗ ಕೃಷ್ಣನ ಮುಂದೆ ಕೂಡಾ 'ಒಲ್ಲೆ' ಎಂದು ಹೇಳುವ ಧೈರ್ಯ ಇದಿತು ಅರ್ಜುನನಿಗೆ!' ಎನ್ನುವ ವಿಚಾರಗಳನ್ನು ನೋಡಿದಾಗ, ಗೀತೆಯ ಪರಿಣಾಮವು ವಿಚಾರಗಳ ಮೇಲೆ ಆಗಲೇ ಪ್ರಾರಂಭವಾಗಿದೆ.... ಎನ್ನುವದು ಸ್ಪಷ್ಟವಾಗುವುದು.

ಸಂಧ್ಯಾಕಾಲದ ಪ್ರಾರಂಭ ಬಹಳ ನಾಟ್ಯಕಲೆಯ ಲಕ್ಷಣಗಳಿಂದ ಕೂಡಿದುದಾಗಿದೆ (Dramatic. 'ಒಬ್ಬಳೆ ಕತೆಯೇನಿರಬಹುದು?' ಎನ್ನುವ ವಿಚಾರ ತರುವ ಆ ಮುದುಕನ ಮಂತ್ರ ಒಟಿಗುಟ್ಟುವುದು ಹಿನ್ನೆಲೆಯಲ್ಲಿಯ ಬೀಸುವ ಕಲ್ಲಿನ ಸಪ್ಪಳ, ಮುದುಕನ ಜಂಜಲ ತನ ಹೆಚ್ಚಾಗುವುದನ್ನು ಸೂಚಿಸುವ ಬೀಸುವ ಕಲ್ಲಿನ ವೇಗದಲ್ಲಿಯ ಅಂತರ ಎಲ್ಲವೂ ಕಲ್ಪನಾಜೀವಿಗೆ ಆನಂದ ತರುವಂತಹವು. ಪ್ರಾರಂಭ ಸ್ವಲ್ಪಂತ ಹೆಚ್ಚು Dramatic ಆಗಿದೆ ಅಂತವು. ಹಳೆಯ ಸಂಸ್ಕೃತಿಯ ಆಡಂಬರವನ್ನೆಳೆಯುವ ಎರಡು ತರುಣ ಶಕ್ತಿಗಳಂತಿರುವ ವೆಂಕಪ್ಪ— ಪುಟ್ಟರು, ಮುದುಕನ ಕಾಲು ಹಿಡಿಯುವುದು, ಮುದುಕನ ಉಚ್ಛ್ವಾಪದಂತೆ ನೆಲವ ಪಾಲಾವ ಕಂಬೀಲು- ಎಲ್ಲವೂ ನಾಟಕಕಾರನ ನಾಟ್ಯ ಕಲೆಯನ್ನು ವ್ಯಕ್ತಗೊಳಿಸುವಂತಹವು

ಶ್ರೀರಂಗರದೇ ಆದ ತಿಳಿಯಾವ ಹಾಸ್ಯದ ಝರಿ, ಕತೆಯಲ್ಲಿಯ ಕೆಲವು ದೋಷಗಳನ್ನೂ ಸ್ವಾಹದ ಗುಂಟ ತೇಲಿಸಿಕೊಂಡೊಯ್ದು ಪ್ರೇಕ್ಷಕನ ಮನಸ್ಸಿನಾನಂದವನ್ನು ಉನ್ನತಸ್ಥಿತಿಯಲ್ಲಿಯೆ ಇರಿಸುತ್ತದೆ, ಸುವಾದ ರಚಿಸುವುದರಲ್ಲಿಯು ಶ್ರೀರಂಗರ ಜಾಣ್ಮೆ 'ಸಂಧ್ಯಾಕಾಲ'ದಲ್ಲಿ ತನ್ನ ಉನ್ನತ ಸ್ಥಿತಿಯಲ್ಲಿದೆ: ಉದಾ:—

"ಮುದುಕ:— ನೀನು ಸಂಜೆಯ ಊಟ ಮಾಡಬೇಡ!"

ಪುಟ್ಟು :— ಇಲ್ಲ—ನೀನ್ನ ಬರುವ ತನಕ ಮಾಡುವುದಿಲ್ಲ

ಮುದುಕ (ನಿಟ್ಟುಸಿರಿಂದ) :— ನಾನು ಬರುವ ತನಕ ಆಲ್ಲೋ! ನಾಳೆ ಮಧ್ಯಾಹ್ನದ ಊಟದ ವರೆಗೆ ನಿನಗೆ ಊಟವಿಲ್ಲ!

ಪುಟ್ಟು: (ಚಕಿತನಾಗಿ):— ನಾಳೆ ಮಧ್ಯಾಹ್ನದ ವರೆಗೆ? ಅಂದರೆ ಈ ಹೊತ್ತು ರಾತ್ರಿ ನೀವು ಬರೋದೇ ಇಲ್ಲ!"

ಕೆಲವೊಂದು ಪಾತ್ರಗಳು ಕೆಲವೊಂದು ಸಂಗತಿಯ ಅಜ್ಞಾನದಿಂದ ಗೊಂದಲವೆಬ್ಬಿಸುತಿರುವಾಗ, ಆ ಗೊಂದಲವನ್ನು ಬಹಳ ಹೊತ್ತಿನ ನಂತರ, ನಿಜವಾಗಿಯೂ ಆ ಗೊಂದಲವೆದ್ದಿದ್ದರೆ ಅದು ನಡೆಯಬಹುದಾದಷ್ಟು ಕಾಲ, ರಂಗಭೂಮಿಯ ಮೇಲುಳಿಸುವ ಜಾಣ್ಮೆ ಇಲ್ಲಿದೆ. ಕೆಳಗಿನ ನಾಟಕದಲ್ಲಿ ಉದ್ಧರಿಸಿದ ಸಂವಾದದಲ್ಲಿ ಅದನ್ನು ಕಾಣಿಬಹುದು:

ಮುದುಕ:– (ಉಸುರ್ಗರೆದು) ಕಾಗದ ಪತ್ರಾನೂ ಈಗೆಯೇ ನಾಡಿ ಬಿಡೋಣ.

ವೆಂಕಪ್ಪ:— ಕಾಗದ ಪತ್ರಾದರೂ ಯಾಕೆ ಅಂತೀನಿ. ನಾವು ಕೊಳ್ಳುವವರು, ನೀವು ಕೊಂಬುವವರು.

ಮುದುಕ: (ಸಂದರ್ಭ ತಿಳಿಯದೆ ಅಂದರೆ ಅರಿಲ್ಲ. ನಿಮಗೆ ನೀನೇನು, ಎಷ್ಟೆಷ್ಟು ಬೇಕು– ಆದರೆ ನೋಟೆ ಅವಲಂಬಿಸಿದೆ.

ವೆಂಕಪ್ಪ :— ಚಕಿತನಾದವನಂತೆ) ನನಗೆ ಎಷ್ಟು ಬೇಕು!...ಛೇ... ಛೇ ಗಾಯತ ಅದು ಶಾಸ್ತ್ರದ ವಿರುದ್ಧ ..ಅಸಾಮಾಹ...ಶಾಸ್ತ್ರಾತ್ ರೂಢಿ ಬರಲಿಯಪೀ.

ಮುದುಕ :– (ತಿಳಿಯದೆ. ಶಾಸ್ತ್ರ? ಕೊಡಕೊಳ್ಳುವ ವ್ಯವಹಾರಕ್ಕೆ ಶಾಸ್ತ್ರಯಾಕೆ?

ವೆಂಕಪ್ಪ :— ಅಂದರೆ ಏನಂ ಕೊಟ್ಟುಬಿಟ್ಟಿರಿ!

ಮುದುಕ :— ಎಷ್ಟು ಪರ್ಷ ಅಂತ ತಿಳಿದವೆ—

ವೆಂಕಪ್ಪ :— ಬೇಕಾದರೆ ಇಳ ಆನ್ನರಿ ಬೇಕಾದರೆ ಇಳ ಆನ್ನರಿ; ಮೂಹೂರ್ತ ಏಂದು ನೋಡಿ ಬಿಟ್ಟೀರಿ..... .." ಆಮೇಲಿನ ಶ್ರೀರಂಗರ ಶೈಲಿಯೇ ಅವರೆಲ್ಲರ ಪಾತ್ರಗಳಲ್ಲಿಯೂ ಇವರಲ್ಲಿ ಅಲ್ಲಲ್ಲಿ ಕಾಣುತ್ತದೆ. ಉದಾ:— "ದೇಹದ evolution ಆಗಿ ಬಾಲಹೋದ ಹಾಗೆ, ಬುದ್ಧಿಯ evolution ಆಗಿ ಚಂಡಿಕೆ ಕೋಯಿತು ಅಂತೂ ಹೇಳಬಹುದಲ್ಲ"

ನಿಮರ್ಶಕನ ಬಾಣ ಇನ್ನು ಮುಂದೆ ಗುರಿತಪ್ಪುವುದು ಎಂದು ಹೆದರಿಸಿದಂತಿದೆ ಶ್ರೀರಂಗರು. ಮುನ್ನುಡಿಯಲ್ಲಿ. 'ತಮ್ಮ ವಿಚಾರಗಳ ಸಂಧ್ಯಾಕಾಲ, ನಾಟ್ಯಸೂರ್ಯನ ಅಸ್ತಕಾಲ' ಎಂದು ಹೇಳಿದ್ದಾರಷರು. ಸಂಧ್ಯಾಕಾಲದ ಹಿನ್ನೆಲೆ, ಮುನ್ನೆಲೆಗಳನ್ನು ತನ್ನ ಪ್ರಖರವಾದ ತೇಜಸ್ಸಿನಿಂದ ಬಿನ್ನಾನೆ ಬೆಳಗಿದ ನಾಟ್ಯಸೂರ್ಯ, 'ಸಂಧ್ಯಾಕಾಲ'ದ ಆದಿಯಿಂದ ಅಸ್ತದ ವರೆಗೆ ಸ್ಥಿರನಾಗಿ ನಿಂತಿದ್ದ ನಾಟ್ಯಸೂರ್ಯ, 'ಹರಿಜನ್ವಾರ'ದಲ್ಲಿ ಬೆಳಗಿದ ಸೂರ್ಯ, 'ನರಕದಲ್ಲಿ ನರಸಿಂಹ' ದಲ್ಲಿ ತೊಳಗಿದ ಸೂರ್ಯ ಅಸ್ತವನ್ನು ಇಷ್ಟು ಬೇಗನೇ ಹೊಂದುವನೇ? 'ಸಂಧ್ಯಾಕಾಲ'ವನ್ನು ಉತ್ಸವವಾಗಿಸುವ, ಸವ್ಯಸಾಚಿಯ ಬತ್ತಳಿಕೆಯಿಂದ ಜಗಿದ ಬಾಣಗಳಂತೆ ತೆಗೆದ ವಿಚಾರಗಳಿಗೆ ಇಷ್ಟು ಬೇಗನೆ ಅಸ್ತವೆ? ಅಶಕ್ಯ

ಸಾಹಿತ್ಯ ವಿಹಾರ

"ವಿಹಾರಿ"

ಸೈನಿಕರ ಸಾಹಿತ್ಯಚೌರ್ಯಲೀಲೆ!
ಮುಚ್ಚುಹೆಸರಿನ ಲೇಖಕರ ವಿಮಾನಯಾನ!

ಒಮ್ಮೊಮ್ಮೆ ವಿಮರ್ಶಕ ಒಳ್ಳೇ "ಪೀಕಲಾಟ"ದಲ್ಲಿ ಸಿಕ್ಕಿ ಬೀಳುವುದುಂಟು. ಈಗಷ್ಟೆ ಒಂದು ಸಮಾಚಾರ ಇತ್ತೀಚೆಗೆ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಆಸ್ಟ್ರೇಲಿಯನ್ನ ಸೈನಿಕರಿಬ್ಬರು ಕೇವಲ ಮೋಜಿಗಾಗಿ ಹಳೆಯ ನಾಲ್ಕಾರು ಕವನಸಂಗ್ರಹಗಳನ್ನು ದೊರೆಕಿಸಿ, ಅವುಗಳೊಳಗಿಂದ ಅಲ್ಲಿಂದೊಂದು ಇಲ್ಲಿಂದೆರಡು ಸಜ್ಜಿಗಳನ್ನು ಕೂಡಿಸಿ ಕವನಸಂಗ್ರಹವೊಂದನ್ನು ತಯಾರಿಸಿದರಂತೆ. ಪ್ರಕಟನೆಗಾಗಿ ಪ್ರಕಾಶಕರ ಕಡೆಗೆ ಆ ಹೊಸ ಕವನಸಂಗ್ರಹ ಬರಲಾಗಿ, ಸೈನಿಕರಿಂದ ಬಂದ ಸಂಗ್ರಹವೆಂಬ ಕಾರಣದಿಂದಲೋ, ಮತ್ತಾವ ಕಾರಣದಿಂದಲೋ, ಅದು ಕೂಡಲೆ ಪ್ರಸಿದ್ಧಿಪಡೆಯಿತು. ಈ ಕವನಸಂಗ್ರಹವನ್ನು ವಿಮರ್ಶಿಸುತ್ತ, ಪ್ರಸಿದ್ಧ ಪತ್ರಿಕೆಯ ಸಂಪಾದಕರೊಬ್ಬರು, ಕವನಸಂಗ್ರಹವು "ಅಭೂತಪೂರ್ವವೆಂದೂ," ಅದನ್ನು ಬರೆದ ಸೈನಿಕರಿಬ್ಬರೂ ದೇಶದ ಕವಿಸಾರ್ವಭೌಮರೆಂದೂ ಇನ್ನು ಏನೇನೋ ಹೊಗಳಿ, ಅವರನ್ನು ಕೀರ್ತಿಯ ಶಿಖರಕ್ಕೇರಿಸಿದರು. ಆದರೆ ಸೈನಿಕರು ಆ ಕೆಲಸವನ್ನು ಮಾಡಿದ್ದು ಪ್ರಕಾಶಕರನ್ನೂ ವಿಮರ್ಶಕರನ್ನೂ ಬಲಿಪಾಕಬೇಕೆಂಬ ಉದ್ದೇಶದಿಂದಲೇ ಎಂಬ ಮಾತು ಅವರ ಹಿಂದುಗಡೆಯ ಹೇಳಿಕೆಯ ನೋಲಿಂದ ಸ್ಪಷ್ಟವಾಗಿದೆ. ಈ "ಗತ್ತ"ನ್ನು ಅವರು ಕೇವಲ ಮೋಜಿಗಾಗಿ ಮಾಡಿದ್ದರೆಂದೂ, ಪ್ರಾಜಕರು, ವಿಮರ್ಶಕರು, ಪ್ರಕಟನಕಾರರು ಯಾವ ರೀತಿಯಲ್ಲಿ ಕಣ್ಣುಮುಚ್ಚಿಕೊಂಡೇ ತಮ್ಮ ತಮ್ಮ ಕೆಲಸ ನಡೆಯಿಸುತ್ತಿರುತ್ತಾರೆಂಬುದನ್ನು ತೋರ್ಪಡಿಸುವುದಕ್ಕಾಗಿಯೇ ಈ ಆಟವನ್ನು ಹೂಡಿದ್ದರೆಂದೂ ಹೇಳಿದರಂತೆ. ಇದು ವಿಮರ್ಶಕರಿಗೆ ಒಳ್ಳೆಯ ಎಚ್ಚರ! ಆದ್ದರಿಂದಲೇ ಈ ಕಥೆಯನ್ನು ಇಲ್ಲಿ ಹೇಳುತ್ತಿದ್ದೇನೆ. ಸಮಸ್ಯೆಯಿಲ್ಲಿ ವಿಮರ್ಶಕರನ್ನೇ ನೋಡಬಹುದಲ್ಲ! ಯಾವ ಪುಸ್ತಕದ ಸಮಾಲೋಚನೆಯನ್ನೇ ನೋಡಿ, ಲೇಖಕನ "ಅಭಿನಂದನೆ"ಯಿಂದಲ್ಲದೆ ಬೇರೆ ಯಾವ ರೀತಿಯಲ್ಲಿಯೂ ಸಮಾಲೋಚನೆ ಮುಗಿಯುವುದು ಸಾಧ್ಯವೇ ಇಲ್ಲ. ಒಂದೆರಡು ತಪ್ಪು-ತಡೆಗಳನ್ನು ಬಯಲಿಗೆಳೆದಿದ್ದರೂ ಕೊನೆಯಲ್ಲಿ ಅಭಿನಂದನೆ ಇರಲೇಬೇಕು. ಈ ವಿಷಯ ಹೇಗೂ ಇರಲಿ ಮೇಲಿನ ಕಥೆಯ ಮೇಲಿಂದ ವಿಮರ್ಶಕ ಯಾವ ರೀತಿ ಎಚ್ಚರತಪ್ಪಿಯೊ, ಅಜ್ಞಾನದಿಂದಲೊ, ನಗೆಗೀಡಾಗಬಹುದೆಂಬುದನ್ನು ನಾವು ನೋಡಬಹುದು. ನಿಜವಾದ ವಿಮರ್ಶಕನಿಲ್ಲಿರಬೇಕಾದುದು ಕೇವಲ ಬಂದವರನ್ನೆಲ್ಲ ಅಭಿನಂದಿಸುವ ವೃತ್ತಿಯಲ್ಲ. ಬಂದವ ನಿಜವಾಗಿಯೂ ಬರಿಹಾರನೆನೋ, ಕಳ್ಳನೋ, ಕುಚೋದ್ಯಗಾರನೋ ಎಂಬುದನ್ನು ತಪ್ಪಿಸದೆ ಗ್ರಹಿಸುವ ಸಾಮರ್ಥ್ಯವುಳ್ಳವನಾಗಿರಬೇಕು. ಇದು ಸಾಧ್ಯವಾಗಬೇಕಾದರೆ ಅವನಿಗೆ ತನ್ನ ಸಾಹಿತ್ಯದ, ಅದರಂತೆಯೆ ತಕ್ಕಮಟ್ಟಿಗೆ ಅದಕ್ಕೆ ಸಂಬಂಧಪಟ್ಟ ಇತರ ಸಾಹಿತ್ಯಗಳ, ವಿಶಾಲವಾದ ಪರಿಚಯ ಬೇಕು. ತನ್ನ ಮುಂದಿನ ಕೃತಿಯನ್ನು ಒಳಹೊಕ್ಕು ಅದರ ತಪ್ಪು-ಒಪ್ಪುಗಳನ್ನು ಅಳೆಯುವ ಶಕ್ತಿ ಬೇಕು.... ಇತ್ಯಾದಿ. ಒಂದು ದೃಷ್ಟಿಯಿಂದ ಇಂತಹ "ಸಾಹಿತ್ಯಿಕ ಹುಡುಗಾಟಿಕೆ" ವಿಮರ್ಶಕನನ್ನು ಒರೆಗೆ ಹಚ್ಚುವುದಕ್ಕೆ ಉಪಯೋಗವಾಗುವುದರಲ್ಲಿ ಸಂಶಯವಿಲ್ಲ. ಇಂಥದೊಂದು ಉಪಕ್ರಮವನ್ನು ಕನ್ನಡದಲ್ಲಿ ಯಾರಾದರೂ ಮಾಡಿದರೆ, ಇಂಥವರಿಗೆ ಕೂಡಲೆ "ಮಹಾಕವಿ"ಯಾಗುವ ಸುಸಂಧಿ ಸಹಜವಾಗಿ ದೊರಕಬಹುದಾಗಿದೆ. ಇಂಥವಾ ಈಗಲೆ ಈ ಒಟವನ್ನು ಯಾರಾದರೂ ಸಾಧಿಸಿದ್ದಾರೊ! ಯಾರು ಬಲ್ಲರು! ವಿಮರ್ಶಕ ಇನ್ನೊಮ್ಮೆ ಎಚ್ಚರದಿಂದ ಪರ್ಯಾಲೋಚಿಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು! ಒಳ್ಳೆ ಸಂಕಟವಲ್ಲದೆ ಮತ್ತೇನು?

× × ×

ಇತ್ತೀಚೆಗೆ ಕನ್ನಡದಲ್ಲಿಯ ಹೊಸ ಲೇಖಕರು ಹೆಚ್ಚಾಗಿ ಮುಚ್ಚು ಹೆಸರಿನ ಸಂಪ್ರದಾಯವನ್ನು ಬಳಸುತ್ತಿದ್ದಾರೆ. ಕಾರಣವನ್ನು ಹೇಳಲಾಗುವುದಿಲ್ಲ. ಯಾವ ಪತ್ರಿಕೆಯ ಯಾವ ಸಂಚಿಕೆಯನ್ನೂ ತೆರೆದುನೋಡಿ; ಸುಮಾರಾಗಿ ನೂರಕ್ಕೆ ಎಂಭತ್ತು ಜನ ಬರೆಹಗಾರರು ತಮ್ಮ ಮುಖದ ಮೇಲೆ ಮುಚ್ಚು ಹೆಸರಿನ ಮುಸುಕನ್ನು ಎಳೆದುಕೊಂಡಿದ್ದು ಕಂಡು ಬರುತ್ತದೆ. ಈ "ಬುರುಖಾ" ಪದ್ಧತಿಯು ಇತ್ತೀಚೆಗೆ ವಿಪರೀತವಾಗಿ ಬೆಳೆಯುತೊಡಗಿದೆ. ಆದ್ದರಿಂದ ಈ ಮುಚ್ಚು ಹೆಸರಿನ ವಿಮಾನಯಾನ ಒಂದಿಷ್ಟು ಅವಶ್ಯಕವೆಂದು ತೋರುತ್ತದೆ. 'ತನ್ನ ಎಲೆಯನ್ನು ಬಿಟ್ಟು ಎರಡನೆಯವರ ಎಲೆಯ ಮೇಲಿನ ನೊಣ ಜಾಡಿಸಲಿಳಸುವವನಂತೆ "ವಿಹಾರಿ"ಯು ತಾನೇ ಮುಚ್ಚು ಹೆಸರಿನಿಂದ ಬರೆಯುತ್ತಿದ್ದು ಎರಡನೆಯವರ ಬಗೆಗೆ ಹೀಗೆ ಅಸಹನೆ ತೋರುವುದು ಸರಿಯೆ?' ಎಂದು ಯಾರಾದರೂ ಕೇಳಬಹುದು. ಅದಕ್ಕೆ ಒಂದು ಸಮಾಧಾನವನ್ನು ಕೇವಲ ಸಮಾಧಾನವನ್ನಲ್ಲ,—ಸಮರ್ಪಕವಾದ ಉತ್ತರವನ್ನು ಹೇಳಬಹುದು. ಅದೇನೆಂದರೆ, ಇಲ್ಲಿ ನಡೆಯುವುದ ಸಾಹಿತ್ಯ-ವಿಹಾರ-ವಿಮರ್ಶೆ. ವಿಮರ್ಶೆಯಲ್ಲಿ ವ್ಯಕ್ತಿಗೆ ಸ್ಥಾನವಿಲ್ಲ ವ್ಯಕ್ತಿಗೆ ಮಹತ್ವವಿದ್ದಲ್ಲಿ ವಿಮರ್ಶೆ ಅಭಿಪ್ರಾಯವಾಗಿಬಿಡುವುದುಂಟು. ಆದ್ದರಿಂದ ಈ ವಿಹಾರವನ್ನು ಯಾರು ಬರೆದರೂ ಸರಿಯೆ, ಬರೆದವ "ವಿಹಾರಿ". ವಿಹಾರಿ ಬರೆದವನ ಮುಚ್ಚುಹೆಸರಲ್ಲಿ ಎಂಬುದನ್ನು ಸ್ಪಷ್ಟಪಡಿಸುವುದಕ್ಕೂ, ಬರೆದುದೆಲ್ಲವೂ ಕೇವಲ ಬರೆದವನ ವೈಯಕ್ತಿಕ ಅಭಿಪ್ರಾಯವಾಗಿರದೆ ಅದಕ್ಕೊಂದು ವಿಮರ್ಶೆಯ ಸ್ಥಾನವಿದೆ ಎಂಬುದನ್ನು ಸೂಚಿಸುವುದಕ್ಕೂ "ವಿಹಾರಿ" ಎಂಬ ಹೆಸರಿನಿಂದ ಬರೆಯುತ್ತಿದ್ದೇನೆ. ಆದ್ದರಿಂದ ಈ ಮುಚ್ಚುಹೆಸರು ಅನಿವಾರ್ಯ ಅಥವ ಉಳಿದವರಿಗೇಕೆ ಈ ಸೋಗು? ಎಲ್ಲಿ ನೋಡಿದರೂ ಈ ಗೋಡೆಯ ಹಿಂದೆ ನಿಂತುಕೊಂಡು ಹಾಡುವ ಅಭ್ಯಾಸವೇ. ಬರಬಾರದೆ ಮುಂದಕ್ಕೆ? ಆದೈರ್ಯವೆ? ನಾಚಿಕೆಯೆ? ವಿನಯವೆ? ದಾಕ್ಷಿಣ್ಯವೆ? ಕಥೆ-ಕವನಗಳನ್ನು ಬರೆಯುವುದೆಂದರೆ ಇಂಥದೇನು ನಾಚಿಕೆಗೇಡಿನ ಕೆಲಸ ಅಲ್ಲವಲ್ಲ! ಆದ್ದರಿಂದ, ಮುಚ್ಚುಹೆಸರಿನಲ್ಲಿಯೇ ಮೆರೆಯುವ ಸಾಹಿತಿಗಳೇ, ಧೈರ್ಯವಾಗಿ ಮುಂದಕ್ಕೆ ಬನ್ನಿ, ನಿಮ್ಮ ಬರೆವಣಿಗೆಯ ಅಕ್ಕೊಂದು ಒಳ್ಳೆಯದಾಗಿರದೆ ಹೋದರೆ ಇಲ್ಲಿ ಯಾರೂ ಶಿಕ್ಷೆ ವಿಧಿಸಲು ನಿಂತಿಲ್ಲ; ಉತ್ತಮವಾಗಿದ್ದರೂ ಕೂಡ ಯಾರೂ ಕೈಯಲ್ಲಿ ಮಾಲೆಯನ್ನು ಹಿಡಿದುಕೊಂಡು ನಿಮ್ಮವರಾಗಿಲ್ಲ! ವಿಮರ್ಶಕನನ್ನು ಎದುರಿ

ಸುವ ಧೈರ್ಯವಿರದಿದ್ದರೆ, "ಸಾಹಿತಿ" ಎನಿಸಿಕೊಳ್ಳುವುದು ನಾಚಿಕೆ ಎನಿಸುತ್ತಿದ್ದರೆ, ಇದ್ದ ಹೆಸರನ್ನು ಬಯಲಿಗೆ ತರುವುದು ಅವಿನಯ ವೆಂದು ತೋರುತ್ತಿದ್ದರೆ, ತಮಗೇನೂ ಪ್ರಸಿದ್ಧಿ ಬೇಡವೆಂಬ ದಾಕ್ಷಿಣ್ಯ ಭಾವವಿದ್ದರೆ, ಕವನಗಳನ್ನೂ ಕಥೆಗಳನ್ನೂ ಪ್ರಕಟನೆಗಾಗಿ ಪತ್ರಿಕಾ ಸಂಪಾದಕರ ಕಡೆಗೆ ಯಾಕೆ ಕಳುಹಿಸಬೇಕು? ತಾನು ಬರೆಯುವುದು ಕೇವಲ ತನ್ನ ಸಮಾಧಾನಕ್ಕಾಗಿದ್ದರೆ, ಈ ಅನಾವಶ್ಯಕವಾದ ಪ್ರಸಿದ್ಧಿಯ ಆತುರ ಏತಕ್ಕೆ? ಇವರ ಹಿಂದಿನ ಮನೋವೃತ್ತಿ ಯಾವುದೋ ತಿಳಿಯದು. ಏನಿದ್ದರೂ "ಪಿಡುಗು" ಮಾತ್ರ ಹಬ್ಬುತ್ತಲಿದೆ. ಶೀಘ್ರದಲ್ಲಿಯೇ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಯಾರು ಯಾರೆಂಬುದು ಗೊತ್ತಾಗದೆ, ಈಗ ಸುಪ್ರಸಿದ್ಧರಾಗಿದ್ದ ಸಾಹಿತಿಗಳ ಸರತಿ ಮುಗಿದ ಬಳಿಕ, ಸಾಹಿತ್ಯ ಪರಿಷತ್ತಿನ ವಾರ್ಷಿಕ ಅಧಿವೇಶನಕ್ಕೆ ಅಧ್ಯಕ್ಷರನ್ನು ಚುನಾಯಿಸುವ ಕೆಲಸ ತೀರ ಕಷ್ಟದ್ದಾಗುವ ಸಂಭವ ಕಾಣುತ್ತದೆ.

ಆದರೆ ಹೀಗೆ ಹೇಳುವುದು ಕೇವಲ ಟೀಕಾತ್ಮಕ ದೃಷ್ಟಿಯಿಂದಾಯಿತು. ಇದೆಲ್ಲ ಹಾಳು ಹರಟೆಯೆನಿಸೀತು. ಈ ಮುಚ್ಚುಹೆಸರಿನ ಮುಖವಾಡಗಳನ್ನು ಧರಿಸುವವರ ದೃಷ್ಟಿಯಿಂದ ಇವಕ್ಕೆ ಏನಾದರೂ ಉದ್ದೇಶವಿರಲೇಬೇಕು. ಈ ವಿಷಯದಲ್ಲಿ ಸ್ಪಷ್ಟವಾದ ಸಮರ್ಥನೆಯನ್ನು ಯಾರೂ ಪ್ರಸಿದ್ಧಪಡಿಸಿಲ್ಲವಾದ್ದರಿಂದ, ಇರಬಹುದಾದ ಉದ್ದೇಶಗಳನ್ನು ಊಹಿಸಲು ಮಾತ್ರ ಸಾಧ್ಯ. ಮುಖ್ಯವಾದ ಒಂದು ಮಾತೆಂದರೆ, ಈ ಮುಖವಾಡಗಳು ಬಹು ವೈವಿಧ್ಯಪೂರ್ಣವಾಗಿರುತ್ತವೆ. ಒಬ್ಬೊಬ್ಬನ್ನೆ ವಿಚಿತ್ರವಾಗಿಯೂ ಇರುವುದುಂಟು. ಹೆಚ್ಚಾಗಿ ತಮ್ಮ ತಾಯಿ-ತಂದೆಗಳನ್ನೊ ಆಪ್ತ-ಮಿತ್ರರನ್ನೊ, ಹೆಂಡತಿಯನ್ನೊ "ಪ್ರೇಯಸಿ"ಯನ್ನೊ ನೆನೆದುಕೊಳ್ಳಲಿಕ್ಕೆ ಇದೊಂದು ಸಂಧಿ ತೋರುತ್ತದೆ. ಯಾಕೆಂದರೆ ಮುಚ್ಚುಹೆಸರುಗಳು ಬಹುತರವಾಗಿ "ಕುಮಾರ," "ತನಯ," "ಕಾಂತ" "ಪ್ರಿಯ," "ವಲ್ಲಭ," "ಮಿತ್ರ" ಮುಂತಾದ ಶಬ್ದಗಳಿಂದಾಗಲಿ, ಅಥವಾ ಇನ್ನೂ ಅನೇಕ ಸಮಾನಾರ್ಥಕವಾದ ಶಬ್ದಗಳಿಂದಾಗಲಿ ಮುಗಿಯುತ್ತವೆ. ಉದಾಹರಣೆಗಳನ್ನು ಕೊಡುತ್ತ ಹೋದರೆ ಹನುಮಂತನ ಬಾಲವನ್ನು ಅಳತೆ ಮಾಡುವ ಹವ್ಯಾಸ ಮಾಡಿದಂತಾದೀತಲ್ಲದೆ, ಹೇಳಬಹುದಾದ ಹೆಸರುಗಳನ್ನು ಬಳಸುವ ಲೇಖಕ ಮಹಾಶಯರು ಹುಟ್ಟಿನಿಂದ ಹೊರಬಿದ್ದಾರು! ಇನ್ನೂ ಕೆಲವರು ತನ್ನ ಇಷ್ಟದೇವತೆಯನ್ನೊ, ಗುರುಶಿಷ್ಯ ಸಂಬಂಧವನ್ನೊ ನೆನೆದುಕೊಂಡು, ಹೊಸ ಹೆಸರುಗಳನ್ನು ಕಲ್ಪಿಸಿಕೊಳ್ಳುತ್ತಿರುವಂತೆ ಊಹಿಸಬಹುದಾಗಿದೆ. ಇಲ್ಲಿ "ಭಕ್ತ" "ಶಿಷ್ಯ" ಮುತಾದ ಅಂಕಿತಗಳ ಪ್ರಯೋಗ ಕಡು ಬರುತ್ತದೆ. ಇನ್ನೊಂದು ಪಂಗಡವಿದೆ, ಅವಕ್ಕೆ ಸೇರಿದವರು, ಯಾವ ದೇವ-ಮಾನವರನ್ನೂ ಲೆಕ್ಕಿಸದೆ, ತಾವೇ ಪುರಾಣಪುರುಷರಾಗಬಯಸುತ್ತಾರೆ. ಹೀಗಾಗಿ ಸಪ್ತರ್ಷಿಗಳ ಅವತಾರ ನಮ್ಮಲ್ಲಿ ಪ್ರತಿನಿತ್ಯವೂ ನಡೆಯುತ್ತಿದೆ. "ಸಂಜಯ" "ಪಾರ್ಥಸಾರಥಿ" "ಕೌಶಿಕ" "ಚಂಡಕೌಶಿಕ" "ಜಮದಗ್ನಿ" "ವಿಶ್ವಾಮಿತ್ರ" ಎಷ್ಟು ಜನಬೇಕು? ನಾರದರ ಅವತಾರ ಕೂಡ ಆಗಿದೆ. ಇನ್ನು ಕೆಲವರು, ಇಷ್ಟು ದೊಡ್ಡದಾದ ಮಹತ್ತ್ವಾಕಾಂಕ್ಷೆಗಳನ್ನು ಬೆಳಸದೆ ಅಲ್ಪಸಂತುಷ್ಟರಾಗಿ, ತಮ್ಮ ವ್ಯವಸಾಯವನ್ನು ಸೂಚಿಸುವಂತೆ "ಶಿಕ್ಷಕ" "ರೈತ" ಇತ್ಯಾದಿಯಾಗಿ ನಾಮಗ್ರಹಣವನ್ನು ಮಾಡುವುದುಂಟು. ಮತ್ತೊಂದು "ಜಾತಿ" ಯವರು, ಹೆಸರು ಸೂಚಿಸುವ ಆತುರ ಒಂದುಕಡೆ, ಮುಚ್ಚುಹೆಸರಿನ ಮೋಹ ಮತ್ತೊಂದು ಕಡೆ, ಹೀಗಾಗಿ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದು, ಎರಡೂ ಪಕ್ಷಗಳಿಗೂ ಸಮಾಧಾನವಿರಲೆಂಬ ಬುದ್ಧಿಯಿಂದ ತಮ್ಮ ಹೆಸರಿನ ಮೊದಲಕ್ಷರವನ್ನು ಮಾತ್ರ ಪ್ರಯೋಗಿಸುವವರೂ ಪ್ರಚಾರದಲ್ಲಿದ್ದಂತೆ ತೋರುತ್ತದೆ. ಇಂತಹ ಹೆಸರುಗಳು ಆವರವರ ಹೆಸರುಗಳಿಗೆ ತೀರ ಸವಿಾಪವಾಗಿರುವುದರಿಂದ ಉದಾಹರಣೆ ಬೇಡ. ಇನ್ನೂ ಕೆಲವರು ತಮ್ಮ ದೇಹಸ್ಥಿತಿಯನ್ನಾಗಲಿ, ರೀತಿ-ನೀತಿಗಳನ್ನಾಗಲಿ, ತಮ್ಮಲ್ಲಿರಬಹುದಾದ ತಾತ್ತ್ವಿಕ ಬೌದ್ಧಿಕ ಹಂಬಲಗಳನ್ನಾಗಲಿ ಉಸಿರುವಂತೆ ವೈವಿಧ್ಯಪೂರ್ಣವಾಗಿ, ವೈಚಿತ್ರ್ಯಮಯವಾಗಿ ಮುಚ್ಚುಹೆಸರುಗಳನ್ನಾರಿಸಿಕೊಳ್ಳುತ್ತಾರೆ. ಈ ಮುಚ್ಚುಹೆಸರುಗಳು, ಬರೆಯುತ್ತಿರುವ ವ್ಯಕ್ತಿಯಿಂದ ಮೊದಲು ಮಾಡಿ ಬರೆಯುವ ವಿಷಯಗಳ ವರೆಗೆ ಅನ್ವಯಿಸುವಂತೆಯೂ ಕೂಡ, ಎಷ್ಟೋ ಸಲ ಬರೆಹಗಾರನ ಹೆಸರು ಬದಲಾಯಿಸುತ್ತ ಹೋಗಬಹುದು. ತುಂಬಾಕು ಸೇದುವವನೊಬ್ಬ ತನ್ನ ಚಟದ ಸಮರ್ಥನೆಯೊಂದನ್ನು ಬರೆಯುವುದಾದರೆ, ಅತನು "ಸೇದುಗ" ಎಂದು ಹೆಸರಿಟ್ಟುಕೊಳ್ಳುವುದೂ ಸಾಧ್ಯ; ಅದರಂತೆ "ಚುಟ್ಟಮಿತ್ರ" ಎಂದು ಹೆಸರಿಟ್ಟುಕೊಳ್ಳುವುದೂ ಸಾಧ್ಯ. 'ಚುಟ್ಟಮಿತ್ರ'ನೇ ಇರಲಿ, 'ಸೇದುಗ'ನೇ ಇರಲಿ, ಈ ಮುಚ್ಚುಹೆಸರಿನ ಹುಚ್ಚು ಓದುಗನನ್ನು ಕೆರಳಿಸುವುದರಲ್ಲಿ ಯಾವ ಸಂಶಯವೂ ಇಲ್ಲ! "ಸುಸೂತ್ರವಾಗಿ 'ತಾಯಿ-ತಂದೆಗಳು ಅಕ್ಕರತೆಯಿಂದ ಇಟ್ಟ ಹೆಸರನ್ನು ಬಳಸಬಾರದೆ? ಯಾಕೆ ಈ ಉಸಾಬ್ದಾರ್ಯ? ಸಾಹಿತ್ಯನಿರ್ಮಿತಿಯೆಂದರೆ ಹೆಣ್ಣು ಮಕ್ಕಳ ಮದುವೆಯೇ? ಮದುವೆಯಾನಂತರ ಹೆಣ್ಣು ಮಕ್ಕಳ ಹೆಸರನ್ನು ಬದಲಾಯಿಸುತ್ತಿದ್ದಂತೆ, ಮನುಷ್ಯನಾಗಿದ್ದವನು 'ಸಾಹಿತಿ'ಯಾದ ಕೂಡಲೆ ಅವನ ಹೆಸರೂ ಬದಲಾಯಿಸಲೇಬೇಕೆ?" ಎಂದು ಯಾರಾದರೂ ಕೇಳಬಹುದು. ಆದರೆ ಈ ಮುಚ್ಚುಹೆಸರಿನ ಮಹಾನುಭಾವರು ಉತ್ತರರೂಪವಾಗಿ ಪ್ರಶ್ನೆಯನ್ನು ತೇಳಬಹುದು: "ಹೆಸರಿನಲ್ಲಿ ಏನಿದೆ ಮಹಾಸ್ವಾಮಿ! ನಿಮಗೆ ನಾಮಮಾತ್ರ ಅರ್ಥವಿದ್ದರೆ ಬರೆವಣಿಗೆಯನ್ನು ಸಮಾಲೋಚಿಸಿ! ಬರೆವಣಿಗೆಯ ಹೆಸರಿಗನುಗುಣವಾಗಿ "ವಿಮರ್ಶೆ" ಬದಲಾಯಿಸುತ್ತಿರುವ ಸಾಹಿತ್ಯ ಪ್ರಪಂಚವಲ್ಲಿ, ಹೆಸರುಗಳನ್ನು ಅಳಿಸಿದರೆ ನಿರ್ವಾಹ್ಯವಾದ ವಿಮರ್ಶೆ ಬೆಳೆಯುವುದಕ್ಕೆ ಸಹಾಯವಾಗಲಿಕ್ಕಿಲ್ಲವೆ?" ಇತ್ಯಾದಿ. ಇದೂ ಸರಿಯೆ, ಒಂದು ದೃಷ್ಟಿಯಿಂದ. ಹೀಗಾಗಿ ಮುಚ್ಚುಹೆಸರು ಒಂದು ಕನಡುಗಟ್ಟಿಕ ಸಮಸ್ಯೆಯಾಗಿ ನಿಂತಿದೆ. ಈ ಮುಚ್ಚುಹೆಸರಿನ ಪರವೆಯ ಹಿಂದಿನಿಂದ ಸಾಹಿತ್ಯಸೇವೆಯನ್ನು ಮಾಡಬಯಸುವ ಲಜ್ಜಾವಂತರು (ಲಜ್ಜಾವತಿಯರು ಕೂಡ ಇರಬಹುದು), ತೆರೆಯ ಮರೆಯಿಂದ ಹೊರಬಂದು, ಈ ವಿಷಯದಲ್ಲಿ ತಮ್ಮ ಹೇಳಿಕೆಯನ್ನು ಕೊಡುವ ಹೊರತು ಈ 'ಪದ್ಮಿನೀ ಪ್ರಕರಣ' ಬಗೆಹರಿಯುವಂತೆ ಕಾಣುವುದಿಲ್ಲ.

ಸಾಹಿತ್ಯ ವಿಹಾರ

"ವಿಹಾರಿ"

卐

ಸೈನಿಕರ ಸಾಹಿತ್ಯಚೌರ್ಯಲೀಲೆ!
ಮುಚ್ಚುಹೆಸರಿನ ಲೇಖಕರ ವಿಮಾನಯಾನ!

卐

ಒಮ್ಮೊಮ್ಮೆ ವಿಮರ್ಶಕ ಒಳ್ಳೇ "ಪೀಕಲಾಟ"ದಲ್ಲಿ ಸಿಕ್ಕಿ ಬೀಳುವುದುಂಟು. ಹಾಗೆಯೊಂದು ಸಮಾಚಾರ ಇತ್ತೀಚೆಗೆ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಆಸ್ಟ್ರೇಲಿಯನ್ನ ಸೈನಿಕರಿಬ್ಬರು ಕೇವಲ ಮೋಜಿಗಾಗಿ ಹಳೆಯ ನಾಲ್ಕಾರು ಕವನಸಂಗ್ರಹಗಳನ್ನು ದೊರೆಕಿಸಿ, ಅವುಗಳೊಳಗಿಂದ ಅಲ್ಲಿಮೊಂದು ಇಲ್ಲಿಂದೊಂದು ಪದ್ಯಗಳನ್ನು ಕೂಡಿಸಿ ಕವನಸಂಗ್ರಹವೊಂದನ್ನು ತಯಾರಿಸಿದರಂತೆ. ಪ್ರಕಟನೆಗಾಗಿ ಪ್ರಕಾಶಕರ ಕಡೆಗೆ ಆ ಹೊಸ ಕವನಸಂಗ್ರಹ ಬರಲಾಗಿ, ಸೈನಿಕರಿಂದ ಬಂದ ಸಂಗ್ರಹವೆಂಬ ಕಾರಣದಿಂದಲೋ, ಮತ್ತಾವ ಕಾರಣದಿಂದಲೋ, ಅದು ಕೂಡಲೆ ಪ್ರಸಿದ್ಧಿಪಡೆಯಿತು. ಈ ಕವನಸಂಗ್ರಹವನ್ನು ವಿಮರ್ಶಿಸುತ್ತ, ಸುಪ್ರಸಿದ್ಧ ಪತ್ರಿಕೆಯ ಸಂಪಾದಕರೊಬ್ಬರು, ಕವನಸಂಗ್ರಹವು "ಅಭೂತಪೂರ್ವವೆಂದೂ" ಅದನ್ನು ಬರೆದ ಸೈನಿಕರಿಬ್ಬರೂ ದೇಶದ ಕವಿನಾರ್ವಭೌಮರೆಂದೂ ಇನ್ನು ಏನೇನೋ ಹೊಗಳಿ, ಅವರನ್ನು ಕೀರ್ತಿಯ ಶಿಖರಕ್ಕೇರಿಸಿದರು. ಆದರೆ ಸೈನಿಕರು ಆ ಕೆಲಸವನ್ನು ಮಾಡಿದ್ದು ಪ್ರಕಾಶಕರನ್ನೂ ವಿಮರ್ಶಕರನ್ನೂ ಬಲಿಹಾಕಬೇಕೆಂಬ ಉದ್ದೇಶದಿಂದಲೇ ಎಂಬ ಮಾತು ಅವರ ಹಿಂದುಗಡೆಯ ಹೇಳಿಕೆಯ ಮೇಲಿಂದ ಸ್ಪಷ್ಟವಾಗಿದೆ. ಈ "ಗತ್ತ"ನ್ನು ತಮಾಷೆಗಾಗಿ ಮಾಡಿದ್ದರಿಂದೂ, ವಾಚಕರು, ವಿಮರ್ಶಕರು, ಪ್ರಕಟನಕಾರರು ಯಾವ ರೀತಿಯಲ್ಲಿ ಕಣ್ಣುಮುಚ್ಚಿಕೊಂಡೇ ತಮ್ಮ ತಮ್ಮ ಕೆಲಸ ನಡೆಯಿಸುತ್ತಿರುತ್ತಾರೆಂಬುದನ್ನು ತೋರ್ಪಡಿಸುವುದಕ್ಕಾಗಿಯೇ ಈ ಆಟವನ್ನು ಹೂಡಿದ್ದರೆಂದೂ ಹೇಳದರಂತೆ. ಇದು ವಿಮರ್ಶಕರಿಗೆ ಒಳ್ಳೆಯ ಎಚ್ಚರ! ಆದ್ದರಿಂದಲೇ ಈ ಕಥೆಯನ್ನು ಇಲ್ಲಿ ಹೇಳುತ್ತಿದ್ದೇನೆ. ನಮ್ಮಲ್ಲಿಯ ವಿಮರ್ಶಕರನ್ನೇ ನೋಡಬಹುದಲ್ಲ! ಯಾವ ಪುಸ್ತಕದ ಸಮಾಲೋಚನೆಯನ್ನೇ ನೋಡಿ, ಲೇಖಕನ "ಅಭಿನಂದನೆ"ಯಿಂದಲ್ಲದೆ ಬೇರೆ ಯಾವರೀತಿಯಲ್ಲಿಯೂ ಸಮಾಲೋಚನೆ ಮುಗಿಯುವುದು ಸಾಧ್ಯವೇ ಇಲ್ಲ. ಒಂದೆರಡು ತಪ್ಪು-ತಡೆಗಳನ್ನು ಬಯಲಿಗೆಳೆದಿದ್ದರೂ ಕೊನೆಯಲ್ಲಿ ಅಭಿನಂದನೆ ಇರಲೇಬೇಕು. ಈ ವಿಷಯ ಹೇಗೂ ಇರಲಿ ಮೇಲಿನ ಕಥೆಯ ಮೇಲಿಂದ ವಿಮರ್ಶಕ ಯಾವ ರೀತಿ ಎಚ್ಚರತಪ್ಪಿಯೊ, ಅಜ್ಞಾನದಿಂದಲೊ, ನಗೆಗೀಡಾಗಬಹುದೆಂಬುದನ್ನು ನಾವು ನೋಡಬಹುದು. ನಿಜವಾದ ವಿಮರ್ಶಕನಲ್ಲಿರಬೇಕಾದುದು ಕೇವಲ ಬಂದವರನ್ನೆಲ್ಲ ಅಭಿನಂದಿಸುವ ವೃತ್ತಿಯಲ್ಲ. ಬಂದವ ನಿಜವಾಗಿಯೂ ಬರೆಹಗಾರನೋ, ಕಳ್ಳನೋ, ಕುಜೋದ್ಯಗಾರನೋ ಎಂಬುದನ್ನು ತಟ್ಟನೆ ಗ್ರಹಿಸುವ ಸಾಮರ್ಥ್ಯವುಳ್ಳವನಾಗಿರಬೇಕು. ಇದು ಸಾಧ್ಯವಾಗಬೇಕಾದರೆ ಅವನಿಗೆ ತನ್ನ ಸಾಹಿತ್ಯವ, ಅದರಂತೆಯೆ ತಕ್ಕಮಟ್ಟಿಗೆ ಅದಕ್ಕೆ ಸಂಬಂಧಪಟ್ಟ ಇತರ ಸಾಹಿತ್ಯಗಳ, ವಿಶಾಲವಾದ ಪರಿಚಯ ಬೇಕು. ತನ್ನ ಮುಂದಿನ ಕೃತಿಯನ್ನು ಒಳಹೊಕ್ಕು ಅವರ ತಪ್ಪು-ಒಪ್ಪುಗಳನ್ನು ಅಳೆಯುವ ರಕ್ಕಿ ಬೇಕು.... ಇತ್ಯಾದಿ. ಒಂದು ದೃಷ್ಟಿಯಿಂದ ಇಂತಹ "ಸಾಹಿತ್ಯಿಕ ಹುಡುಗಾಟಿಕೆ" ವಿಮರ್ಶಕನನ್ನು ಒರೆಗೆ ಹಚ್ಚುವುದಕ್ಕೆ ಉಪಯೋಗವಾಗುವುದರಲ್ಲಿ ಸಂಶಯವಿಲ್ಲ. ಇಂಥದೊಂದು ಉಪಕ್ರಮವನ್ನು ಕನ್ನಡದಲ್ಲಿ ಯಾರಾದರೂ ಮಾಡಿದರೆ, ಅಂಥವರಿಗೆ ಕೂಡಲೆ "ಮಹಾಕವಿ"ಯೊಂದರ ಸುಸಂಧಿ ಸಹಜವಾಗಿ ದೊರಕಬಹುದಾಗಿದೆ. ಅಥವಾ ಈಗಲೆ ಈ ಬಟವನ್ನು ಯಾರಾದರೂ ಸಾಧಿಸಿದ್ದಾರೊ! ಯಾರು ಬಲ್ಲರು! ವಿಮರ್ಶಕ ಇನ್ನೊಮ್ಮೆ ಎಚ್ಚರದಿಂದ ಪರ್ಯಾಲೋಚಿಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು! ಒಳ್ಳೆ ಸಂಕಟವಲ್ಲದೆ ಮತ್ತೇನು?

× × ×

ಇತ್ತೀಚೆಗೆ ಕನ್ನಡದಲ್ಲಿಯ ಹೊಸ ಲೇಖಕರು ಹೆಚ್ಚಾಗಿ ಮುಚ್ಚು ಹೆಸರಿನ ಸಂಪ್ರದಾಯವನ್ನು ಬಳಸುತ್ತಿದ್ದಾರೆ. ಕಾರಣವನ್ನು ಹೇಳಲಾಗುವುದಿಲ್ಲ. ಯಾವ ಪತ್ರಿಕೆಯ ಯಾವ ಸಂಚಿಕೆಯನ್ನೂ ತೆರೆದುನೋಡಿ; ಸುಮಾರಾಗಿ ನೂರಕ್ಕೆ ಎಂಭತ್ತು ಜನ ಬರೆಹಗಾರರು ತಮ್ಮ ಮುಖದ ಮೇಲೆ ಮುಚ್ಚು ಹೆಸರಿನ ಮುಸುಕನ್ನು ಎಳೆದುಕೊಂಡಿದ್ದು ಕಂಡು ಬರುತ್ತದೆ. ಈ "ಬುರುಖಾ" ಪದ್ಧತಿಯು ಇತ್ತೀಚೆಗೆ ವಿಪರೀತವಾಗಿ ಬೆಳೆಯತೊಡಗಿದೆ. ಇದ್ದರಿಂದ ಈ ಮುಚ್ಚು ಹೆಸರಿನ ವೀಸಾನೆ ಒಂದಿಷ್ಟು ಅವಶ್ಯಕವೆಂದು ತೋರುತ್ತದೆ. 'ತನ್ನ ಎಲೆಯನ್ನು ಬಿಟ್ಟು ಎರಡನೆಯವರ ಎಲೆಯ ಮೇಲಿನ ನೊಣ ಜಾಡಿಸಲೆಳಸುವವನಂತೆ "ವಿಹಾರಿ"ಯು ತಾನೇ ಮುಚ್ಚು ಹೆಸರಿನಿಂದ ಬರೆಯುತ್ತಿದ್ದು ಎರಡನೆಯವರ ಬಗೆಗೆ ಹೀಗೆ ಅಸಹನೆ ತೋರುವುದು ಸರಿಯೆ?' ಎಂದು ಯಾರಾದರೂ ಕೇಳಬಹುದು. ಅದಕ್ಕೆ ಒಂದು ಸಮಾಧಾನವನ್ನು ಕೇವಲ ಸಮಾಧಾನವನ್ನಲ್ಲ,—ಸಮರ್ಪಕವಾದ ಉತ್ತರವನ್ನು ಹೇಳಬಹುದು. ಅದೇನೆಂದರೆ, ಇಲ್ಲಿ ನಡೆಯುವುದು ಸಾಹಿತ್ಯ-ವಿಹಾರ-ವಿಮರ್ಶೆ. ವಿಮರ್ಶೆಯಲ್ಲಿ ವ್ಯಕ್ತಿಗೆ ಸ್ಥಾನವಿಲ್ಲ. ವ್ಯಕ್ತಿಗೆ ಮಹತ್ವವಿದ್ದಲ್ಲಿ ವಿಮರ್ಶೆ ಅಭಿಪ್ರಾಯವಾಗಿಬಿಡುವುದುಂಟು. ಆದ್ದರಿಂದ ಈ ವಿಹಾರವನ್ನು ಯಾರು ಬರೆದರೂ ಸರಿಯೆ, ಬರೆದವ "ವಿಹಾರಿ". ವಿಹಾರಿ ಬರೆದವನ ಮುಚ್ಚುಹೆಸರಲ್ಲ ಎಂಬುದನ್ನು ಸ್ಪಷ್ಟಪಡಿಸುವುದಕ್ಕೂ, ಬರೆಯದೆಲ್ಲವೂ ಕೇವಲ ಬರೆದವನ ವೈಯಕ್ತಿಕ ಅಭಿಪ್ರಾಯವಾಗಿರದೆ ಅವಕ್ಕೊಂದು ವಿಮರ್ಶೆಯ ಸ್ಥಾನವಿದೆ ಎಂಬುದನ್ನು ಸೂಚಿಸುವುದಕ್ಕೂ "ವಿಹಾರಿ" ಎಂಬ ಹೆಸರಿನಿಂದ ಬರೆಯುತ್ತಿದ್ದೇನೆ. ಇದ್ದರಿಂದ ಈ ಮುಚ್ಚುಹೆಸರು ಅನಿವಾರ್ಯ. ಆದರೆ ಉಳಿದವರಿಗೇಕೆ ಈ ಸೋಗು? ಎಲ್ಲಿ ನೋಡಿದರೂ ಈ ಗೋಡೆಯ ಹಿಂದೆ ನಿಂತುಕೊಂಡು ಹಾಡುವ ಅಭ್ಯಾಸವೇ. ಬರಬಾರದೇ ಮುಂದಕ್ಕೆ? ಅಧೈರ್ಯವೆ? ನಾಚಿಕೆಯೆ? ವಿನಯವೆ? ದಾಕ್ಷಿಣ್ಯವೆ? ಕಥೆ-ಕವನಗಳನ್ನು ಬರೆಯುವುದೆಂದರೆ ಅಂಥದೇನು ನಾಚಿಕೆಗೇಡಿನ ಕೆಲಸವಲ್ಲವಲ್ಲ! ಆದ್ದರಿಂದ, ಮುಚ್ಚುಹೆಸರಿನಲ್ಲಿಯೇ ಮೆರೆಯುವ ಸಾಹಿತಿಗಳೇ, ಧೈರ್ಯವಾಗಿ ಮುಂದಕ್ಕೆ ಬನ್ನಿ, ನಿಮ್ಮ ಬರೆವಣಿಗೆ ಅಷ್ಟೊಂದು ಒಳ್ಳೆಯದಾಗಿರದೆ ಹೋದರೆ ಇಲ್ಲಿ ಯಾರೂ ತಿಕ್ಷ್ಣ ವಿಧಿಸಲು ನಿಂತಿಲ್ಲ; ಉತ್ತಮವಾಗಿದ್ದರೂ ಕೂಡ ಯಾರೂ ಕೈಯಲ್ಲಿ ಮಾಲೆಯನ್ನು ಹಿಡಿದುಕೊಂಡು ನಿದ್ದರಾಗಿಲ್ಲ! ವಿಮರ್ಶಕನನ್ನು ಎನುರಿ-

ಸುವ ಧೈರ್ಯವಿರದಿದ್ದರೆ, "ಸಾಹಿತಿ" ಎನಿಸಿಕೊಳ್ಳುವುದು ನಾಚಿಕೆ ಎನಿಸುತ್ತಿದ್ದರೆ, ಇದ್ದ ಹೆಸರನ್ನು ಬಯಲಿಗೆ ತರುವುದು ಅವಿನಯವೆಂದು ತೋರುತ್ತಿದ್ದರೆ, ತಮಗೇನೂ ಪ್ರಸಿದ್ಧಿಬೇಡವೆಂಬ ದಾಕ್ಷಿಣ್ಯ ಭಾವವಿದ್ದರೆ, ಕವನಗಳನ್ನೂ ಕಥೆಗಳನ್ನೂ ಪ್ರಕಟನೆಗಾಗಿ ಪತ್ರಿಕಾ ಸಂಪಾದಕರ ಕಡೆಗೆ ಯಾಕೆ ಕಳುಹಿಸಬೇಕು? ತಾನು ಬರೆಯುವುದು ಕೇವಲ ತನ್ನ ಸಮಾಧಾನಕ್ಕಾಗಿದ್ದರೆ, ಈ ಅನಾಮಧೇಯವಾದ ಪ್ರಸಿದ್ಧಿಯ ಆತುರ ಎತಕ್ಕೆ? ಇವರ ಹಿಂದಿನ ಮನೋವೃತ್ತಿ ಯಾವುದೋ ತಿಳಿಯದು. ಏನಿದ್ದರೂ "ಪಿಡುಗು" ಮಾತ್ರ ಹಬ್ಬುತ್ತಲಿದೆ. ಶೀಘ್ರದಲ್ಲಿಯೇ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಯಾರು ಯಾರೆಂಬುದು ಗೊತ್ತಾಗದೆ, ಈಗ ಸುಪ್ರಸಿದ್ಧರಾಗಿದ್ದ ಸಾಹಿತಿಗಳ ಸರತಿ ಮುಗಿದ ಬಳಿಕ, ಸಾಹಿತ್ಯ ಪರಿಷತ್ತಿನ ವಾರ್ಷಿಕ ಅಧಿವೇಶನಕ್ಕೆ ಅಧ್ಯಕ್ಷರನ್ನು ಚುನಾಯಿಸುವ ಕೆಲಸ ತೀರ ಕಷ್ಟದ್ದಾಗುವ ಸಂಭವ ಕಾಣುತ್ತದೆ.

ಆದರೆ ಹೀಗೆ ಹೇಳುವುದು ಕೇವಲ ಟೀಕಾತ್ಮಕ ದೃಷ್ಟಿಯಿಂದಾಯಿತು. ಇದೆಲ್ಲ ಹಾಳು ಹರಟೆಯೆನಿಸೀತು. ಈ ಮುಚ್ಚುಹೆಸರಿನ ಮುಖವಾಡಗಳನ್ನು ಧರಿಸುವವರ ದೃಷ್ಟಿಯಿಂದ ಇದಕ್ಕೆ ಏನಾದರೂ ಉದ್ದೇಶವಿರಲೇಬೇಕು. ಈ ವಿಷಯದಲ್ಲಿ ಸ್ಪಷ್ಟವಾದ ಸಮರ್ಥನೆಯನ್ನು ಯಾರೂ ಪ್ರಸಿದ್ಧಪಡಿಸಿಲ್ಲವಾದ್ದರಿಂದ, ಇರಬಹುದಾದ ಉದ್ದೇಶಗಳನ್ನು ಊಹಿಸಲು ಮಾತ್ರ ಸಾಧ್ಯ. ಮುಖ್ಯವಾದ ಒಂದು ಮಾತೆಂದರೆ, ಈ ಮುಖವಾಡಗಳು ಬಹು ವೈವಿಧ್ಯಪೂರ್ಣವಾಗಿರುತ್ತವೆ. ಒಮ್ಮೊಮ್ಮೆ ವಿಚಿತ್ರವಾಗಿಯೂ ಇರುವುದುಂಟು. ಹೆಚ್ಚಾಗಿ ತಮ್ಮ ತಾಯಿ-ತಂದೆಗಳನ್ನೊ ಆಪ್ತ-ಮಿತ್ರರನ್ನೊ, ಹೆಂಡತಿಯನ್ನೊ "ಪ್ರೇಯಸಿ"ಯನ್ನೊ ನೆನೆದುಕೊಳ್ಳಲಿಕ್ಕೆ ಇದೊಂದು ಸಂಧಿ ತೋರುತ್ತದೆ. ಯಾಕೆಂದರೆ ಮುಚ್ಚುಹೆಸರುಗಳು ಬಹುತರವಾಗಿ "ಕುಮಾರ," "ತನಯ," "ಕಾಂತ" "ಪ್ರಿಯ," "ವಲ್ಲಭ," "ಮಿತ್ರ" ಮುಂತಾದ ಶಬ್ದಗಳಿಂದಾಗಲಿ, ಅಥವಾ ಇನ್ನೂ ಅನೇಕ ಸಮಾನಾರ್ಥಕವಾದ ಶಬ್ದಗಳಿಂದಾಗಲಿ ಮುಗಿಯುತ್ತವೆ. ಉದಾಹರಣೆಗಳನ್ನು ಕೊಡುತ್ತ ಹೋದರೆ ಹನುಮಂತನ ಬಾಲವನ್ನು ಉಳತೆ ಮಾಡುವ ಹವ್ಯಾಸ ಮಾಡಿದಂತಾದೀತಲ್ಲದೆ, ಹೇಳಬಹುದಾದ ಹೆಸರುಗಳನ್ನು ಬಳಸುವ ಲೇಖಕ ಮಹಾಶಯರು ಹುತ್ತಿನಿಂದ ಹೊರಬಿದ್ದಾರು! ಇನ್ನೂ ಕೆಲವರು ತಮ್ಮ ಇಷ್ಟದೇವತೆಯನ್ನೊ, ಗುರುಶಿಷ್ಯ ಸಂಬಂಧವನ್ನೊ ನೆನೆದುಕೊಂಡು, ಹೊಸ ಹೆಸರುಗಳನ್ನು ಕಲ್ಪಿಸಿಕೊಳ್ಳುತ್ತಿರುವಂತೆ ಊಹಿಸಬಹುದಾಗಿದೆ. ಇಲ್ಲಿ "ಭಕ್ತ" "ಶಿಷ್ಯ" ಮುಂತಾದ ಅಂಕಿತಗಳ ಪ್ರಯೋಗ ಕಂಡು ಬರುತ್ತದೆ. ಇನ್ನೊಂದು ಪಂಗಡವಿದೆ, ಅದಕ್ಕೆ ಸೇರಿದವರು, ಯಾವ ದೇವ-ಮಾನವರನ್ನೂ ಲೆಕ್ಕಿಸದೆ, ತಾವೇ ಪುರಾಣಪುರುಷರಾಗಬಯಸುತ್ತಾರೆ. ಹೀಗಾಗಿ ಸಪ್ತರ್ಷಿಗಳ ಅವತಾರ ನಮ್ಮಲ್ಲಿ ಪ್ರತಿನಿತ್ಯವೂ ನಡೆಯುತ್ತಿದೆ. "ಸಂಜಯ" "ಪಾರ್ಥಸಾರಥಿ" "ಕೌಶಿಕ" "ಚಂಡಕೌಶಿಕ" "ಜಮದಗ್ನಿ" "ವಿಶ್ವಾಮಿತ್ರ" ಎಷ್ಟು ಜನಬೇಕು? ನಾರದರ ಅವತಾರ ಕೂಡ ಆಗಿದೆ. ಇನ್ನು ಕೆಲವರು, ಇಷ್ಟು ದೊಡ್ಡದಾದ ಮಹತ್ತ್ವಾಕಾಂಕ್ಷೆಗಳನ್ನು ಬೆಳಸದೆ ಅಲ್ಪಸಂತುಷ್ಟರಾಗಿ, ತಮ್ಮ ವ್ಯವಸಾಯವನ್ನು ಸೂಚಿಸುವಂತೆ "ಶಿಕ್ಷಕ" "ರೈತ" ಇತ್ಯಾದಿಯಾಗಿ ನಾಮಗ್ರಹಣವನ್ನು ಮಾಡುವುದುಂಟು. ಮತ್ತೊಂದು "ಜಾತಿ" ಯವರು, ಹೆಸರು ಸೂಚಿಸುವ ಆತುರ ಒಂದುಕಡೆ, ಮುಚ್ಚುಹೆಸರಿನ ಮೋಹ ಮತ್ತೊಂದು ಕಡೆ, ಹೀಗಾಗಿ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದು, ಎರಡೂ ಪಕ್ಷಗಳಿಗೂ ಸಮಾಧಾನವಿರಲೆಂಬ ಬುದ್ಧಿಯಿಂದ ತಮ್ಮ ಹೆಸರಿನ ಮೊದಲಕ್ಷರವನ್ನು ಮಾತ್ರ ಪ್ರಯೋಗಿಸುವವರೂ ಪ್ರಚಾರದಲ್ಲಿದ್ದಂತೆ ತೋರುತ್ತದೆ. ಇಂತಹ ಹೆಸರುಗಳು ಅವರವರ ಹೆಸರುಗಳಿಗೆ ತೀರ ಸಮೀಪವಾಗಿರುವುದರಿಂದ ಉದಾಹರಣೆ ಬೇಡ. ಇನ್ನೂ ಕೆಲವರು ತಮ್ಮ ದೇಹಸ್ಥಿತಿಯನ್ನಾಗಲಿ, ರೀತಿ-ನೀತಿಗಳನ್ನಾಗಲಿ, ತಮ್ಮಲ್ಲಿರಬಹುದಾದ ತಾತ್ತ್ವಿಕ ಬೌದ್ಧಿಕ ಹಂಬಲಗಳನ್ನಾಗಲಿ ಉಸಿರುವಂತೆ ವೈವಿಧ್ಯಪೂರ್ಣವಾಗಿ, ವೈಚಿತ್ರ್ಯಮಯವಾಗಿ ಮುಚ್ಚುಹೆಸರುಗಳನ್ನಾರಿಸಿಕೊಳ್ಳುತ್ತಾರೆ. ಈ ಮುಚ್ಚುಹೆಸರುಗಳು, ಬರೆಯುತ್ತಿರುವ ವ್ಯಕ್ತಿಯಿಂದ ಮೊದಲು ಮಾಡಿ ಬರೆಯುವ ವಿಷಯಗಳ ವರೆಗೆ ಅನ್ವಯಿಸುವಂತೆಯೂ ಕೂಡ, ಎಷ್ಟೋ ಸಲ ಬರೆಹಗಾರನ ಹೆಸರು ಬದಲಾಯಿಸುತ್ತ ಹೋಗಬಹುದು. ತುಂಬಾಕು ಸೇದುವವನೊಬ್ಬ ತನ್ನ ಚಟದ ಸಮರ್ಥನೆಯೊಂದನ್ನು ಬರೆಯುವುದಾದರೆ, ಅವನು "ಸೇದುಗ" ಎಂದು ಹೆಸರಿಟ್ಟುಕೊಳ್ಳುವುದೂ ಸಾಧ್ಯ; ಅದರಂತೆ "ಚುಟ್ಟಮಿತ್ರ" ಎಂದು ಹೆಸರಿಟ್ಟುಕೊಳ್ಳುವುದೂ ಸಾಧ್ಯ. 'ಚುಟ್ಟಮಿತ್ರ'ನೇ ಇರಲಿ, 'ಸೇದುಗ'ನೇ ಇರಲಿ, ಈ ಮುಚ್ಚುಹೆಸರಿನ ಹುಚ್ಚು ಓದುಗನನ್ನು ಕೆರಳಿಸುವುದರಲ್ಲಿ ಯಾವ ಸಂಶಯವೂ ಇಲ್ಲ! "ಸುಸೂತ್ರವಾಗಿ ತಾಯಿ-ತಂದೆಗಳು ಅಕ್ಕರತೆಯಿಂದ ಇಟ್ಟ ಹೆಸರನ್ನು ಬಳಸಬಾರದೆ? ಯಾಕೆ ಈ ಉಸಾಬ್ಯಾಸ? ಸಾಹಿತ್ಯನಿರ್ಮಿತಿಯೆಂದರೆ ಪಣ್ಣುಮುಕ್ಕಳ ಮದುಮಕ್ಕಳ ಆಟವೇ? ಮದುವೆಯಾದನಂತರ ಹೆಣ್ಣುಮಕ್ಕಳ ಹೆಸರನ್ನು ಬದಲಾಯಿಸುತ್ತಿದ್ದಂತೆ, ಮನುಷ್ಯನಾಗಿದ್ದವನು 'ಸಾಹಿತಿ'ಯಾದ ಕೂಡಲೆ ಅವನ ಹೆಸರೂ ಬದಲಾಯಿಸಲೇಬೇಕೆ?" ಎಂದು ಯಾರಾದರೂ ಕೇಳಬಹುದು. ಆದರೆ ಈ ಮುಚ್ಚುಹೆಸರಿನ ಮುಹಾನುಭಾವರು ಉತ್ತರರೂಪವಾಗಿ ಪ್ರಶ್ನೆಯನ್ನು ಕೇಳಬಹುದು: "ಹೆಸರಿನಲ್ಲಿ ಏನಿದೆ ಮಹಾಸ್ವಾಮಿ! ನಿಮ್ಮಕಾರ್ಯಸಾಮರ್ಥ್ಯವಿನ್ನಿರೆ ಬರೆಪಣಿಗೆಯನ್ನು ಸಮಾಲೋಚಿಸಿ! ಬರೆದವನ ಹೆಸರಿಗನುಗುಣವಾಗಿ "ವಿಮರ್ಶೆ" ಬದಲಾಯಿಸುತ್ತಿರುವ ಸಾಹಿತ್ಯ ಪ್ರಪಂಚದಲ್ಲಿ, ಹೆಸರುಗಳನ್ನು ಕಳಿಸಿ ವರೆ ನಿರ್ವಾಪ್ಯವೆಣ್ಯವಾವ ವಿಮರ್ಶೆ ಬೆಳೆಯುವುದಕ್ಕೆ ಸಮಾಯಣಾಗ ಲಿಕ್ಕಿಲ್ಲವೆ?" ಇತ್ಯಾದಿ. ಇದೂ ಸರಿಯೆ, ಒಂದು ದೃಷ್ಟಿಯಿಂದ. ಹೀಗಾಗಿ ಮುಚ್ಚುಹೆಸರು ಒಂದು ಕವಡುಗಂಟಿಕೆ ಸಮಸ್ಯೆಯಾಗಿ ನಿಂತಿದೆ. ಈ ಮುಚ್ಚುಹೆಸರಿನ ಪಂಚೆಯ ಹಿಂದಿನಿಂದ ಸಾಹಿತ್ಯಸೇವೆಯನ್ನು ಮಾಡಬಯಸುವ ಲಜ್ಜಾವಂತರು (ಲಜ್ಜಾವತಿಯರು ಕೂಡ ಇರಬಹುದು), ತೆರೆಯ ಮರೆಯಿಂದ ಹೊರಬಂದು, ಈ ವಿಷಯದಲ್ಲಿ ತನ್ನ್ಯ ಹೇಳಿಕೆಯನ್ನು ಕೊಡುವ ಹೊರತು ಈ 'ಪದ್ಮಿನೀ ಪ್ರಕರಣ' ಬಗೆಹರಿಯುವಂತೆ ಕಾಣುವುದಿಲ್ಲ.

———



ಬುದ್ಧಿಗೆ ಬೀಗ

ಸಪ್ಟೆಂಬರ್ ೯ ಕ್ಕೆ ಪ್ರಾರಂಭವಾದ ಗಾಂಧಿ-ಜಿನ್ನಾ ಮಾತುಕತೆ, ಈ ನೋಟ ವಾಚಕರ ಕೈಸೇರುವ ಸಮಯಕ್ಕೆ ಮುಗಿಯುವುದೆ? — ಎಂಬ ಸಂದೇಹ, ಮುಗಿಯಲಿಕ್ಕಿಲ್ಲ ಎಂಬ ಅನುಮಾನ. 'ಈ ಭೆಟ್ಟಿ ಕೂಡಲೆ ಮುಗಿಯಲಿಲ್ಲವಾದ್ದರಿಂದ, ಇನ್ನು ಪರಿಣಾಮವು ಅತಿಶಯ ಆಯಕವಾಗಿದೆ' ಎಂದು ಕೆಲವರು; 'ಭೆಟ್ಟಿಯು ಅವಧಿ ಬೇಕಾದಂತೆ ಒಪ್ಪಂದದ ಸಂಭವ ಕಡಮೆ' ಎಂದು ಕೆಲವರು; ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ಹುದುಗಿದ ಬಯಕೆಗೆ ಅನುಗುಣವಾಗಿ ತರ್ಕವನ್ನು ಹೊರಡಿಸುತ್ತಿದ್ದಾನೆ. ತಮ್ಮ ಮಾತುಕತೆಯ ಗುಟ್ಟು ಬಯಲಿಗೆ ಬೀಳುವುದು ಶಕ್ಯವಿಲ್ಲ, ಆದಕಾಗಿ ಯಾರೂ ಅಸಂಬದ್ಧ ತರ್ಕವನ್ನು ಹೂಡುವಾರದು, ದೇಶದ ಹಿತದ ದೃಷ್ಟಿಯಿಂದ ಪ್ರತಿಯೊಬ್ಬನೂ ತಾತ್ಕಾಲಿಕವಾಗಿ ಸುಮ್ಮನಾಗಬೇಕು. ಯಾರಿಗೂ ಅಹಿತವಾಗದಂತೆ ನೋಡಿದ ಹೊಣೆ ತಮಗೆ ಸೇರುತ್ತದೆ ಎಂದು ಮಹಾತ್ಮರು ಸಾರ್ವಜನಿಕರಿಕ್ಕೆ—ವಿಶೇಷವಾಗಿ, ಪತ್ರಿಕಾಸುದ್ದಿಗಾರರಲ್ಲಿ— ಮೊರೆ ಇಟ್ಟಿದ್ದಾರೆ. ಈ ಮಾತುಕತೆಯ ಮೇಲೆ ದೇಶದ ಸ್ವಾತಂತ್ರ್ಯದ ಭವಿತವ್ಯತೆ ಅವಲಂಬಿಸಿದ್ದರಿಂದ, ಜನತೆಯು ಅದರ ಪರಿಣಾಮಕ್ಕಾಗಿ ಆತುರವಾಗಿರುವುದೂ ಸಹಜ; ಈ ಮಾತುಕತೆಯ ಮಹತ್ವವನ್ನು ಅರಿತೆ ಮಹಾತ್ಮರು ಮಿಕ್ಕವರಿಗೆ ಸುಮ್ಮನಿರುವಂತೆ ಹೇಳಿಕೊಂಡದ್ದು ಸಹಜ. ಆದರೆ ಜನತೆಯ ತರ್ಕವು ಕಿಡಿಗೇಡಿತನವನ್ನೆಬ್ಬಿಸುವುದು ಎಷ್ಟು ಅನಿಷ್ಟವೋ, ಅಷ್ಟೆ ಯಾರೂ 'ಬ್ರ' ಎನ್ನಬಾರದೆಂಬ ಸ್ವದೇಶೀ ಅರ್ಡಿನನ್ಸೂ ಅನಿಷ್ಟ ಎಂದು ನಾವಿಲ್ಲಿ ಹೇಳದಿರಲಾರೆವು. ದೇಶಾಭಿಮಾನಿಗಳ ಬುದ್ಧಿಗೆ ಹೀಗೆ ಬೀಗವನ್ನು ಬಡಿಯುವುದೇಕೆ?

ಹೊಣೆ ಹೊರುವರಾರು?

ಒಂದು ದೃಷ್ಟಿಯಿಂದ ಹೇಳುವುದಾದರೆ, ಹೀಗೆ ಮಾತುಕತೆ ನಡೆದ ಸಮಯಕ್ಕೇ ಸಾರ್ವಜನಿಕರೂ ತಾತ್ತ್ವಿಕ ಚರ್ಚೆಯನ್ನು ನಡೆಯಿಸಿದರೆ ಅದು ಪೋಷಕವೆ ಆಗುವುದೆಂದು ಹೇಳಬಹುದು. ಹಿಂದು-ಮುಸ್ಲಿಂ ಪ್ರಶ್ನೆ, ಬ್ರಿಟಿಶರಲ್ಲಿ ಕೆಲವರು ಹೇಳುವಂತೆ ಕೇವಲ ಸುಶಿಕ್ಷಿತ ಮುಂದಾಳುಗಳಿಗೆಯೆ ಸಂಬಂಧಪಟ್ಟದ್ದೆಯೆ, ಇಲ್ಲವೆ ಇಡಿಯ ದೇಶದ ಸಾಮಾನ್ಯ ಜನತೆಗೂ ಅನುಭವವಾಗಿದೆಯೇ? ಒಂದು ವೇಳೆ ಇಂದು ಈ ಪ್ರಶ್ನೆಗೆ ದೊರೆತ ಮಹತ್ತ್ವ ಬ್ರಿಟಿಶರು ನಮಗೆ ಕೊಟ್ಟ ಪಾಠದ ಫಲವಾಗಿದ್ದರೆ, ಎಂದರೆ—ನಿಜವಾಗಿ ಹಳ್ಳಿಹಳ್ಳಿಗಳಲ್ಲಿ ಈ ಪ್ರಶ್ನೆ ಒಬ್ಬೊಂದು ಜನರ ಜೀವನವನ್ನು ಕೆಡಿಸದೆ ಇದ್ದರೆ—ಈ ಮಾತುಕತೆಗಳಿಂದ ಹಾದಿಯ ಭೂತವನ್ನು ಹಿಡಿದು ತಂದಂತಾಗುವುದು. ಇನ್ನು ನಿಜವಾಗಿಯೆ ಹಿಂದು-ಮುಸ್ಲಿಂ ವಿರೋಧವು ಸಾಮಾನ್ಯ ಜನತೆಯ ಅನುಭವವಾಗಿದ್ದರೆ ಅದು ಯಾವ ರೀತಿಯಲ್ಲಿ ತೊಡಕಾಗಿದೆ, ಯಾವ ರೀತಿಯಲ್ಲಿ ಅದನ್ನು ಬಿಡಿಸಬಹುದು—? ಎಂಬುದನ್ನು ತನ್ನ ಅನುಭವದಿಂದ ಜನತೆ ಹೇಳುವುದು ಯೋಗ್ಯವಲ್ಲವೆ? ಅದನ್ನೆಲ್ಲ ಬಿಟ್ಟು ಪ್ರಳಿಕ ಮುಂದಾಳುಗಳು 'ಭೆಟ್ಟಿಯಶಸ್ವಿಯಾಗಲಿ' ಎಂದು ನಾಟಕದ ಸೂತ್ರಧಾರನಂತೆ ಸಭೆಯಲ್ಲಿ ಹೇಳಿ, ಮಿಕ್ಕವರ ಮಾತನ್ನು ಅಡಗಿಸಿ, ವಿಚಾರವನ್ನು ಬೇರೆ ಹಾದಿಗೆ ಎಳೆಯುವುದು ಎಂತಹ ಅಪಾಯಕಾರಕ! ಜನತೆಗೆ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಲು ಅವಕಾಶವನ್ನುಂಟು ಮಾಡಿಕೊಡಬೇಕು. ದೇಶದ ಒಲವು ಯಾವ ಕಡೆಗಿದೆ ಎಂಬುದನ್ನು ಇಬ್ಬರೂ ಮುಂದಾಳುಗಳ ನಿದರ್ಶನಕ್ಕೆ ತಂದುಕೊಡಬೇಕು. ಅದನ್ನೆಲ್ಲ ಬಿಟ್ಟು, ಹುಡುಗರನ್ನು ಕೇಳದೆಯೆ ಅವರ ಮದುವೆಯನ್ನು ಗೊತ್ತುಪಡಿಸುವ ಹಿರಿತನದ ಈ ಹಾದಿಯನ್ನು ಹಿಡಿದರೆ, ಮದುವೆಯ ಪರಿಣಾಮವನಂತೆ ಈ ಮಾತುಕತೆಗಳ ಪರಿಣಾಮಕ್ಕೂ ತರುಣರು ಹೊಣೆಯನ್ನು ಹೊತ್ತುಕೊಳ್ಳಲಿಕ್ಕೆಲ್ಲ.

ಸಾಮಾನ್ಯನ ಸ್ವಾತಂತ್ರ್ಯ

ಗಾಂಧಿ-ಜಿನ್ನಾ ಮಾತುಕತೆಗಳ ಬಗ್ಗೆ ನಮ್ಮ ಅಭಿಪ್ರಾಯದ ಪ್ರಚಾರವನ್ನು ಮಾಡಬೇಕೆಂಬ ಹಟದಿಂದ ನಾವು ಈ ಮಾತನ್ನು ಹೇಳುವುದಿಲ್ಲ. ಕಳೆದ ಎರಡು ತಿಂಗಳ ನೋಟದಲ್ಲಿ ಈ ವಿಷಯವನ್ನು ನಾವು ಕೂಲಂಕಷವಾಗಿ ಚರ್ಚಿಸಿದ್ದೇವೆ. ಇಷ್ಟೇಕೆ? ಕಳೆದ ಅನೇಕ ವರ್ಷಗಳಿಂದ 'ಈ ನೋಟ'ದಲ್ಲಿ ನಾವು ಹಿಂದು-ಮುಸ್ಲಿಂ ಸಮಸ್ಯೆಯ ಬಗ್ಗೆ ಒಂದು ನಿಶ್ಚಿತ ಧೋರಣವನ್ನು ತಳೆದು ಅನೇಕ ಸಲ ಚರ್ಚಿಸಿದ್ದೇವೆ. ಈ ಪ್ರಶ್ನೆಯು ಧರ್ಮದ ತಳಹದಿಯ ಮೇಲೆ ನಿಂತಿದ್ದರೆ ಆರ್ಥಿಕ ಮತ್ತು ರಾಜಕೀಯ ಜೀವನದಲ್ಲಿ ಅದಕ್ಕೆ ಸ್ಥಾನವಿಲ್ಲ; ಇನ್ನು ಈ ಪ್ರಶ್ನೆ ಆರ್ಥಿಕ ಇಲ್ಲವೆ ರಾಜಕೀಯವೆ ಆಗಿದ್ದು ಅದಕ್ಕೆ ಪ್ರಚಾರಬದ್ಧಿಯಿಂದ ಧರ್ಮದ ಬಣ್ಣವನ್ನು ಸವರಿದ್ದಾದರೆ ಇಂತಹ ಪುನರಾವೃತ್ತಿಯ ಮುಂದಾಳುಗಳೊಡನೆ ಎಷ್ಟು ಚರ್ಚಿಸಿ

ದರೂ ವ್ಯರ್ಥ. ಇಷ್ಟನ್ನು ತಿಳಿದುಕೊಳ್ಳಲು ದೂರೂ ಮುಂದಾಳಾಗಬೇಕಾಗಿಲ್ಲ. ಆದರೆ ಮುಂದಾಳಾದವರು ಮಾತ್ರ ಇದನ್ನು ತಮ್ಮ ಆಚರಣೆಯಲ್ಲಿ ತರುವ ಹೊಣೆಗೆ ಬದ್ಧರಾಗುವರು. ಕಳೆದ ಯುದ್ಧದ ನಂತರ ವೆರ್ಸಾಯಿದ ಒಂದು ಸುಂದರಶಾಲೆಯಲ್ಲಿ ಕುಳಿತು, ಮುಂದೆ ಮೇಜಿನ ಮೇಲಿದ್ದ ನಕಾಶೆಯಲ್ಲಿ, ಯುರೋಪಿನ ದೇಶಗಳನ್ನು ನಿರ್ಮಿಸಿವ್ದಕ್ಕೆ ಇಂದಿನ ಯುದ್ಧ ಅನಿವಾರ್ಯವಾಗಿದೆ. ನುಲಭಾರಿನ ಆಡುವೆಟ್ಟದಲ್ಲಿ ಕುಳಿತು ಹಿಂದುಸ್ತಾನದ ನಕಾಶೆಯಲ್ಲಿ ಗೆರೆಗಳನ್ನು ಕೊರೆದುದಕ್ಕೆ ನಮ್ಮಲ್ಲೂ ಅಶಾಂತಿ ಅನಿವಾರ್ಯವಾಗಬಾರದು.... ಎಂಬ ಮಾತನ್ನು ಮುಂದಾಳುಗಳ ಲಕ್ಷ್ಯಕ್ಕೆ ತಂದುಕೊಡುವುದು ಮಿಕ್ಕ ಅನೇಕರಿಗೆ ಹೊಣೆ ಎನಿಸಿದೆ. ಹಿಂದುಸ್ತಾನವೆಂಬುದು ಎಷ್ಟರ ಮಟ್ಟಿಗೆ ನಕಾಶೆಯಲ್ಲಿದೆ, ಎಷ್ಟರ ಮಟ್ಟಿಗೆ ಹೃದಯದಲ್ಲಿದೆ ಎಂಬ ಅನುಭವವೂ ಸಾಮಾನ್ಯನಿಗಿದೆ. ಆ ಅನುಭವಕ್ಕಾಗಿ ಅವನಿಗೂ ಅಧಿಕಾರ ಬಂದಿದೆ, ಈ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಕಾಗೆಸುವುದಕ್ಕೆ.

ಪಟ್ಟಿನು ಗಾಳಿ!

ಇಂದಿನ ವರೆಗೆ ಮಹಾತ್ಮರ ಮತ್ತು ಜ್ಯಾ. ಜಿನಾ ಅವರ ಮಾತುಕತೆಗಳು ಯಾವ ಹಾದಿಯನ್ನು ಹಿಡಿದಿವೆ ಎಂಬುದರ ಸುಳಿವು ಸ್ಪಷ್ಟವಾಗಿ ನಮ್ಮ ದೇಶದಲ್ಲಿ ಜನತೆಗೆ ಇಲ್ಲದಿದ್ದರೂ, ಮೇಲೆ ಹೇಳಿದಂತೆ ಕೆಲವರು ತಂತಮ್ಮ ಇಂಗಿತವನ್ನು ಮಲಕ್ಷಿಸಿ ತರ್ಕವನ್ನು ಹೂಡುತ್ತಿದ್ದಾರೆ. ಅದರೆ ಗಾಂಧಿ-ಜಿನ್ನಾ ಭೆಟ್ಟಿಯ ಬಗ್ಗೆ ಇಂಗ್ಲೆಂಡ್-ಅಮೆರಿಕೆಗಳಲ್ಲಿ ನಡೆದ ಪ್ರತಿಕ್ರಿಯೆಯನ್ನು ನೋಡಿದರೆ, ನಮ್ಮ ದೃಷ್ಟಿಯಿಂದ ಪರಿಸ್ಥಿತಿ ಆಶಾದಾಯಕವೆನಿಸುವಂತಿದೆ (ಎಂದರೆ ಮಾತುಕತೆಗಳು ಸಮಾಧಾನಕಾರಕ ರೀತಿಯಲ್ಲಿಯೆ ಯಶಸ್ವಿಯಾಗಬಹುದು ಎಂದು ಹೇಳುವಂತಿದೆ). ಮೊದಲು ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಈ ಭೆಟ್ಟಿಗೆ ವಿಶೇಷ ಮಹತ್ವವನ್ನು ಕೊಟ್ಟಿಲ್ಲ ಎಂಬ ಸುದ್ದಿ. ಅನಂತರ 'ಮಹತ್ವ ಕೊಟ್ಟಿಲ್ಲ' ಎಂಬ ಸುದ್ದಿಯನ್ನೆ ಹಟದಿಂದ ಮೇಲಿಂದ ಮೇಲೆ ಕಳುಹಿಸುವುದರಲ್ಲಿಯೆ ಒಂದು ಮಹತ್ವವಿದೆ ಎಂದು ನಮ್ಮ ತರ್ಕ. ಈ ತರ್ಕಕ್ಕೆ ಪೋಷಕವಾಗುವಂತೆ ಒಂದೇಡು ಸಂಗತಿಗಳೂ ಇವೆ. ಮೊದಲು ಭಾರತ ಸಂತ್ರಿಗಳಾದ ಅಮೆರಿಯವರು, ಅನಂತರ ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ಹೇಳಿದ ಮಾತು:- 'ಕಾಂಗ್ರೆಸ್-ಲೀಗ್ ಗಳ ನಡುವೆ ಒಪ್ಪಂದವಾದರೆ ಹಿಂದುಸ್ತಾನದ ಅಲ್ಪಸಂಖ್ಯಾಕರ ಪ್ರಶ್ನೆ ಪೂರ್ತಿಯಾಗಿ ಬಗೆಹರಿದಂತಾಗಲಿಲ್ಲ. ಇನ್ನೂ ಕೆಲವು ಮಹತ್ವದ ಅಲ್ಪಸಂಖ್ಯಾಕ ಘಟಕಗಳಿವೆ' ಎಂದು ಈ ಇಬ್ಬರು ಸಾಹೇಬರ ಏಕಮುಖದ ವಾಕ್ಯ. ಗಾಂಧಿ-ಜಿನ್ನಾ ಭೆಟ್ಟಿ ಯಶಸ್ವಿಯಾಗುವುದೆಂಬ ಹೆದರಿಕೆ ಇವರಿಗೆ ಇದೆ ಎಂದು ಹೇಳಬಹುದಲ್ಲವೆ? ಹಿಂದು-ಮುಸಲ್ಮಾನರ ತೊಡಕು ಎಂದಿಗೂ ಬಿಡದೆಂಬ ಆತ್ಮವಿಶ್ವಾಸದ ಸಾಹೇಬರು ಇಂದು ಹೆದರಿದ್ದಾರೆಂದರೆ, ಅದಕ್ಕೆ ಸಮರ್ಪಕವಾದ ಕಾರಣವೂ ಇರಬಹುದಲ್ಲವೆ? ಇವರಿಬ್ಬರು ಮುಂದಾಳುಗಳು ಒಮ್ಮತದಿಂದ ಘಟನೆಯನ್ನೆ ಒಪ್ಪಿಕೊಂಡರೆ, ಪ್ರಸಂಗ ಕೈಮೀರೀತೆಂಬ ಹೆದರಿಕೆಯಿಂದ ಸರ್ ಅಲ್‌ಫ್ರೆಡ್ ವಾಟ್ಸನ್‌ರಂತಹ ಕೆಲ 'ತಜ್ಞ'ರು 'ಬ್ರಿಟಿಶ ಸರಕಾರವು ಈ ಒಪ್ಪಂದ ಯೋಜನೆಯಲ್ಲಿ ಭಾಗವನ್ನು ವಹಿಸಬೇಕು' ಎಂದು ಸೂಚಿಸುತ್ತಲಿದ್ದಾರೆ.

ಶಾಂಡ್ಲರರ ಸಿಡಿಮದ್ದು

ಅಮೆರಿಕೆಯಲ್ಲೂ ಕಾಂಗ್ರೆಸಿನ ಸಿನೇಟರರಾದ ಶಾಂಡ್ಲರ್ ಎಂಬವರು ಗಾಂಧಿ-ಜಿನ್ನಾ ಭೆಟ್ಟಿ ಗೊತ್ತಾದ ಸಮಯಕ್ಕೆ (ಅಗಸ್ಟ್ ತಿಂಗಳಲ್ಲಿ ಮೊದಲು ಈ ಭೆಟ್ಟಿ ಗೊತ್ತಾಗಿದ್ದು, ತರುವಾಯ ಮುಂದೆ ಬಿದ್ದಿತು) ಫಿಲಿಪ್ಸರ ವರದಿಯನ್ನೂ ಪತ್ರವನ್ನೂ ಹೊರಗೆಡಹಿದರು ಈಗಾಗಲೆ ಹಿಂದುಸ್ತಾನದ ಸ್ವಾತಂತ್ರ್ಯದ ಪ್ರಶ್ನೆಯಲ್ಲಿ ಅಮೆರಿಕೆಯು ಯಾವ ಹೊಣೆಯನ್ನು ಹೊತ್ತುಕೊಳ್ಳಬೇಕೆಂಬುದನ್ನೂ, ಈ ವಿಷಯ ಮಾತನಾಡಲು ಅಮೆರಿಕೆಗೆ ಅಧಿಕಾರವಿದೆ ಎಂದೂ ಫಿಲಿಪ್ಸರು ಧೈರ್ಯವಾಗಿ ಬರೆದಿದ್ದಾರೆ. ಈ ಪತ್ರವ್ಯವಹಾರವನ್ನು ಈಗ ಬಯಲಿಗೆ ತರುವುದರಲ್ಲಿ ಅಮೆರಿಕೆಯ ಅಧ್ಯಕ್ಷ ಚುನಾವಣೆಗಿಂತ ಹೆಚ್ಚು ಮಹತ್ವವಿದ್ದಾದ ಬೇರೊಂದು ಕಾರಣವಿದೆ ಎಂದು ನನ್ನ ಅಭಿಪ್ರಾಯ. ಆ ಕಾರಣವೆಂದರೆ ಗಾಂಧಿ-ಜಿನ್ನಾ ಭೆಟ್ಟಿ. ಈ ಭೆಟ್ಟಿ ಯಶಸ್ವಿಯಾಗಾಗಲೂ ಬ್ರಿಟಿಶರು ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಡಲಿಕ್ಕಿಲ್ಲ. ಹಾಗಾದರೆ ಹಿಂದುಸ್ತಾನದ ಸೌಹಾರ್ದವನ್ನೂ ಸಖ್ಯವನ್ನೂ ಉಳಿಸಿಕೊಳ್ಳುವ ಕೊನೆಯ ಸಂಧಿಯನ್ನು ಬ್ರಿಟಿಶರು ಕಳೆದುಕೊಂಡಂತಾಗುವುದು, ಇದರ ಫಲವಾಗಿ ಜಪಾನಿನ ವಿರುದ್ಧ ಯುದ್ಧದಲ್ಲಿ ಇಡಿಯ ಹಿಂದುಸ್ತಾನದ ವಿರೋಧ ಬಂದು, ಅಮೆರಿಕೆಯ ಹಿತಕ್ಕೆ ಧಕ್ಕೆ ತಗಲೀತು; ಇದಕ್ಕಾಗಿ ಅಮೆರಿಕೆಯ ಅಧಿಕಾರಿ ವರ್ಗದ ಅಭಿಪ್ರಾಯವನ್ನೂ ಭಾರತೀಯರಿಗೆ ತಿಳಿಸೋಣ—ಇಂತಹ ವಿಚಾರ ಸರಣಿಯೆ ಈ ಅಬ್ಬೊಲಕಲ್ಲೋಲಕ್ಕೆ ಕಾರಣವಾಗಿದೆ.

ಹೀಗೆ ಭಾರತ, ಇಂಗ್ಲೆಂಡ್ ಮತ್ತು ಅಮೆರಿಕೆ ಈ ಮೂರೂ ದೇಶಗಳು ಗಾಂಧಿ-ಜಿನ್ನಾ ಮಾತುಕತೆಗಳ ಪರಿಣಾಮಕ್ಕಾಗಿ ಆತುರತೆಯಿಂದ ಕಾದು ನಿಂತಿವೆ.

ಅಕ್ಟೋಬರ ೧೫ ಕ್ಕೆ

ದಾರಿಕಾಯುರಿ ಪ್ರಕಟವಾಗುವದು

ತ್ರಿವೇಣಿಯವರ

ಸ್ವಪ್ನವೃಷ್ಟಿಯ ಸಾರಸ್ಯ

ವಿನೋದಪ್ರಚುರ ಹರಟೆಗಳು

ಬೆಲೆ ೮—೪—೦

ರಂಗ-ಮಂಗ ಪ್ರಕಾಶನ

C/o ಜಯಂತಿ, ಧಾರವಾಡ

ದೀನೆ

ಶ್ರೀ. ಬಿ. ಎಚ್. ಶ್ರೀಧರ, ಎಂ. ಎ., ಭಟ್ಕಳ

ಎನಗಿದು ತಿಳಿಯದು ಎನಗಿದು ಹೊಳೆಯದು,
ಎನಗಿದರರಿವಿನಿತೂ ಇಲ್ಲ !
ಅನುಮಾನಿಸಿ ಅನುಮಾನಿಸಿ ಮಾನಿಗ-
ಳನುನಯ ಗೈದೆನು ಬಹು ಬಲ್ಲ ॥ ೧ ॥

ಬೆಳಗಿನ ನುಲಮಲ ಮುಲರುವ ನುಲ್ಲಿಗೆ–
ಯೊಳಗೂ ವಿಷವಿರಬಹುದೆಂದೇ ?
ನೆಳನಿಲ್ಲದ ತಿಳಿವೊನಲೂ ತಮ್ಮನು
ಸೆಳೆದೀತಂತಹ್ರ್ದಯಕೆಂದೆ ? ॥ ೨ ॥

ಅರಿಯದ ಮುಗುದೆಯ ಬೆರಗಿನ ನೋಟದಿ
ಇನಿಸಾದರು ನಂಜಿದ್ದೀತೆ ?
ಪರಯುವ ಹೂನಗೆಯುರಳಿದ ಮಾತ್ರಕೆ
ಹೆಂವರ ಬಿಪಿಗೆಮು ಗುದ್ದಿತೆ ? ॥ ೩ ॥

ಎನ್ನೆದೆವಾತಿಗೆ ತಮ್ಮೆದೆವಾತನು
ಕೊಡದೇತಕೆ ಜನ ತಡೆಯುವರು ?
ಎನ್ನೊಲವಿಗೆ ಒಲವೀಯದೆ ಜಣಜಣ–
ದಲ್ಲೀತಕೆ ನೊಗದಿರುಹುವರು ? ॥ ೪ ॥

ಎಳದಳಿರಿನ ಎಳಗೆಂಪಿನ ವಾನುರ-
ದೆಳನೆಗೆ ಮಚ್ಚರ ಹುಟ್ಟೀತೆ ?
ಕಳವಳಿಯು ತೆನೆಗಳ ಮೇಲುಲಿದಾಡುವ
ಎಳಗಿಳಿ ಪಾಪವ ಮುಟ್ಟೀತೆ ? ॥ ೫ ॥

ಹಾಲಲಿ ಹುಳಿಯಿವೆಯೆನ್ನುವ ಲೋಕವ
ಕಾಲಿನ ತುಳಿತಕೆ ವುಡಿಯಾವೆ,
ಕಾಲಕೆ ನಮ, ಕಂಕಾಲಕೆ ನಮವೀ
ಬಾಲೆಯ ತನು—ಬರಿ ಹಿಡಿಯಾವೆ ॥ ೬ ॥

ಬಾಲಕ ಬಾಯಲಿ ಜೆರಳನುಂಡು ಸೊಲೆ-
ವಾಲ ಕುಡಿದೆನೆನ್ನುವ ತೆರದಿ,
ತಾಳ ಹಾಕೆ ನನ್ನಕ್ಕನ ಕುಣಿದದ
ನೆಜ್ಜುವರೆಯುಬ್ಬಿಪೆ ಭರದಿ ! ॥ ೭ ॥

ಕುಂಕುಮವಿಡೆ ಕುಂದೆಂಬರು, ಬರಿಪಣೆ
ಕಂಠರೆ ಕೆಡಿಯುಗುಳ್ವರು ಬಿಡದೆ;
ಲಂಕೆಯ ಪುಳಿದಾ ಪಾಪಕೆ ಸೀತೆಯ
ಬೆಂಕೆಯು ತಾ ಬಿಟ್ಟಿತು ಸುಡದೆ ! ॥ ೮ ॥

ಒಲವೋ ಒಲವೆಂದುಲಿದುಲಿದರಗಿಳಿ
ಬಲಗುಂದಿತು ಪಂಜರದಲ್ಲಿ,
ಚಿಲುಮೋ ಚಿಲುಮೆಂದೀ ಜಗವಳಲನೆ
ನಲವೆಂದಿತು ಸುಖಮ್ಮದದಲ್ಲಿ ! ॥ ೯ ॥

ನಾಥರ ಕಾಣದನಾಥೆಯ ಒಡಲಿನ
ಪ್ರೀತಿಯ ಹಸಿವಿಂಗಿಪರಾರು ?
ಪೂತಾತ್ಮರ ಸುಖಕೀ ರಟ್ಟೆಗಳನು
ನವೆದ ದಿನವ ಲೆಕ್ಕಿಪರಾರು ? ॥ ೧೦ ॥

ಹಾ ಹೃದಯವೆ ಹಾ ! ಹಸುಳೆಯೆ ಹಾಹಾ !
ಆರಸಿಕ ಅಕರುಣ ಸಮಾಜದಲಿ,
ಹಾ ಪೆಂದಿದೆ, ಹಾ ಕುಂದಿದೆ, ಕಂದಿದೆ,
ನೊಂಪೆ ಬೆಂದೆ ನಿಂದಾಗ್ನಿಯಲಿ ! ॥ ೧೧ ॥

ಕುಂದದ ಕಂದಳಿಯಂದದ ಮೃದುಮಧು-
ಬಂಧದ ಕರುಣಾಕ್ರಂದನವ,
ಒಂದಿನಿತೂ ಲೆಕ್ಕಿಸದಿಹರೇತಕೆ
ಬಂಧುಗಳೂ ? ತಿಳಿಯೆನು ನಿಜವ ! ॥ ೧೨ ॥

ಕರುಣವೆ ರಸವೆಂದೋ ಕರುಣಾರ್ಣವ-
ಕವಿ ನಿನ್ನಲಿ ? ಇಂದಿಗೆ ಸುಳ್ಳು !
ಶರಣೆಂದರು ಎದೆಗರಗದ ಜನವಿರೆ
ಮರಣವೆ ಶರಣಲ್ಲನೆ ಹೇಳು ? ॥ ೧೩ ॥

(೧೩ನೆಯ ಪುಟದಿಂದ ಮುಂದರಿಸಿದ್ದು)

ಆದರೂ ಭಾರತದ ಸ್ವಾತಂತ್ರ್ಯವನ್ನು ಆಸೇಕ್ಷಿಸುವ ಪ್ರಾಮಾಣಿಕ ಬುದ್ಧಿಯ ಈ ತರುಣರು, ಭಾರತದ ಸ್ವಾತಂತ್ರ್ಯಕ್ಕಾಗಿಯೆ ದೇಹವನ್ನು ತೇಯ್ಯುತ್ತಿರುವ ಮಹಾತ್ಮರನ್ನು ಶ್ರೇಷ್ಠರಾದ ಗಳಿಂದ ಕಾಣುತ್ತಿರುವರು. ಹೀಗೆ ಎಲ್ಲೆಲ್ಲಿಯೂ ತಮಗೆ ವಿರೋಧ-ಆದರಗಳಿದ್ದರೂ ಕಾಣುತ್ತಿರುವುದನ್ನು ಕಂಡು ಮಹಾತ್ಮರು ಆಶ್ಚರ್ಯಪಡುತ್ತಿರಬಹುದು. ಮಹಾತ್ಮರಲ್ಲದೆ ಇನ್ನೊಬ್ಬನಾಪನಾದರೂ ನಿರಾಯಕನಾಗಿದ್ದರೆ, ಇಂತಹ ವಿಪರೀತ ಪರಿಸ್ಥಿತಿಯು ಮೂಲಕ ಕಂಗೆಟ್ಟು, ದಾರಿ ತಪ್ಪಿ ನಡೆದು, ತೊಳಲಿ ಬಳಲಿ, ವೇಷಕ್ಕು ಬಿದ್ದುಕೊಳ್ಳಬಹುದಾಗಿತ್ತು. ಆದರೆ ಮಹಾತ್ಮರು ಅತ್ಯಲ್ಪಸಂಖ್ಯಾತ ಸ್ಥಿತಪ್ರಜ್ಞರು. ಭಗವದ್ಗೀತೆಯು ೨ನೆಯ ಅಧ್ಯಾಯದಲ್ಲಿ ವರ್ಣಿತವಾಗಿರುವ ಸ್ಥಿತಪ್ರಜ್ಞತ್ವವೇ ಮಹಾತ್ಮರ ಮನುಷ್ಯತ್ವದ ಆದರ್ಶ. ಆ ಆದರ್ಶವನ್ನೆಂದು ಅವರು ಮುಟ್ಟಿದ್ದಾರೆ. ಸಾಕ್ಷಾತ್ಕಾರವೂ ಆ ದಾರಿಯಿಂದ ನಡೆದರೆ ಇದ್ದ ದ್ವಂದ್ವಗಳೆಲ್ಲವೂ ಇದ್ದಲ್ಲಿಯೇ ಮಾಯವಾದಾವು, ಭಾರತೀಯರಿಗೆ ಅದರಿಂದಲೇ ಮೋಕ್ಷವು ದೊರಕೀತು. ದೇಶ-ಭಾಷೆ-ದೇಹ-ವಿಚಾರ-ಅಭಿಪ್ರಾಯಗಳ ದ್ವಂದ್ವದಲ್ಲಿ ಸಿಕ್ಕಿ ಸೋತುಹೋಗಿರುವ ಭಾರತೀಯರಿಗೆ, ಮಹಾತ್ಮರ ಆದರ್ಶಜೀವನವೆ ಸಂಜೀವಿನಿ; ಅವರ ದೀರ್ಘಜೀವನದಿಂದ ನಮಗೆಲ್ಲ ಆ ಸಂಜೀವಿನಿಯು ಸಂತತವೂ ಸಿಕ್ಕುತ್ತಿರಲಿ!

—ಸಂಪಾದಕರು

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಪೋಷಕವಾಗುವಂತಹದೆ ಈ ಸಾಹಿತ್ಯದ ವಸ್ತುವಾಗುವುದು. ಹೀಗಿರುವಾಗ ಸಮಾಜಜೀವನಕ್ಕೆ ವಿಘಾತುಕವಾದ ಎಲ್ಲ ಸಾಹಿತ್ಯ—ಅದು ಸಾಂಪ್ರದಾಯಿಕವಿದ್ದರೂ—ಅಶ್ಲೀಲ ಸಾಹಿತ್ಯ ಎಂದು ಹೇಳಬೇಕು.

ಪ್ರ. ಶೀ ವಾದ ಸಾಹಿತ್ಯದ ವೈಶಿಷ್ಟ್ಯ

ಸಂಪ್ರದಾಯದ ಸಾಹಿತ್ಯಕ್ಕೆ ಅನ್ವಯಿಸುವ ಅನೇಕ ತಾತ್ತ್ವಿಕ ಮಾತುಗಳು ಈ ಸಾಹಿತ್ಯಕ್ಕೂ ಅನ್ವಯಿಸುವುವು ಎಂದು ಹೇಳಿದೆಯಷ್ಟೆ? ಅದನ್ನು ಸರಿಯಾಗಿ ತಿಳಿದುಕೊಳ್ಳುವುದಗತ್ಯ. 'ಸಾಹಿತ್ಯ ಕಲೆಯಾಗಿರಬೇಕು, ಸಾಹಿತ್ಯದಲ್ಲಿ ಭಾವನೆಗೆ ಯೋಗ್ಯ ಸ್ಥಾನವಿರಬೇಕು,' ಎಂದು ಹೇಳಲಾಗುತ್ತಿದೆ. ಈ ಮಾತು ಪ್ರ. ಶೀ. ವಾದದ ಸಾಹಿತ್ಯಕ್ಕೂ ಅನ್ವಯಿಸುವುದು. ಪ್ರ. ಶೀ. ವಾದದ ಸಾಹಿತ್ಯವೆಂದರೆ ಕೇವಲ ಚುನಾವಣೆಯ ಪಕ್ಷಪತ್ರಿಕೆಯಲ್ಲ. ಅದಕ್ಕೆ ಜೀವನದಲ್ಲಿ ಸ್ಥಾನವಿದೆ, ಮಾನವನ ಇತಿಹಾಸದಲ್ಲಿ ಸ್ಥಾನವಿದೆ. 'ಕಲೆಗಾಗಿ ಕಲೆ' ಎಂಬ ಗಾದೆಯ ಮಾತನ್ನು 'ಜೀವನಕಲೆಗಾಗಿ ಸಾಹಿತ್ಯಕಲೆ' ಎಂದು ಸಮರ್ಪಕವಾಗಿ ಅದು ತಿಳಿಮಾಡಿಕೊಂಡಿದೆ. ಅದಕಾಗಿಯೆ "ಈ ಸಾಹಿತ್ಯದಲ್ಲಿ ಭಾವನೆಗೆ ಸ್ಥಾನವಿದೆ ಸಾಹಿತಿಯ ಭಾವನೆಗಳನ್ನೆ ಹೊಡೆದೆಬ್ಬಿಸಿ ಇದು ರೂಪುಗೊಂಡು, ಓದುಗರ ಭಾವನೆಗಳನ್ನು ಕೆಣಕುವುದು. ಸಮಾಜದ ಪ್ರತಿಬಿಂಬವಾಗಬಯಸುವ ಈ ಸಾಹಿತ್ಯದಲ್ಲಿ, ಸತ್ಯಾನ್ವೇಷಣ ಬುದ್ಧಿ ಹೆಚ್ಚು ತೀವ್ರವಾಗಿರುವುದು. ಜೀವನದ ಸೌಂದರ್ಯವನ್ನು ಎಲ್ಲರೂ ಸವಿಯಲೇಬೇಕು ಎಂಬ ವೃತ್ತಿಯಿಂದ ಇದು ಸೌಂದರ್ಯೋಪಾಸನೆಯ ಸಾಹಿತ್ಯವೂ ಎನ್ನಿಸುವುದು. ಹೀಗೆ ಮಿಕ್ಕ ತರದ ಸಾಹಿತ್ಯದ ಬಗ್ಗೆ ಹೇಳುವ ಸಾಮಾನ್ಯ ಮಾತುಗಳನ್ನು ಇದರ ಬಗ್ಗೆಯೂ ಹೇಳಬಹುದಾದರೂ, ಈ ಪ್ರ. ಶೀ. ವಾದ ಸಾಹಿತ್ಯದ ವೈಶಿಷ್ಟ್ಯವನ್ನು ನಾವು ಮರೆಯುವಂತಿಲ್ಲ. ಜೀವನವೆ ಇದರ ವಸ್ತು, ಸಮಕಾಲೀನ ಮಾನವನೆ ಇದರ ನಾಯಕ, ಜೀವನದ ಬೆಳೆವಣಿಗೆಯೆ ಇದರ ರಸ.

ವಿಶಾಲವಾದ ದೃಷ್ಟಿ ಇದೆ

ತಪ್ಪು ಕಲ್ಪನೆಯಿಂದ ಇಲ್ಲವೆ ಬುದ್ಧಿಪೂರ್ವಕ ವಿಪರ್ಯಾಸದಿಂದ ತಲೆ ಎತ್ತಿದ ಕೆಲವೊಂದು ಆಕ್ಷೇಪಗಳಿಗೆ ಉತ್ತರ ಕೊಡುವುದು ಅಗತ್ಯವೆನ್ನಿಸಿದ್ದರಿಂದ, ಚರ್ಚೆಯ ದಾರಿಯನ್ನು ಬಿಟ್ಟು ಇಷ್ಟೊಂದು ಅಡ್ಡದಾರಿಗೆ ನಡೆಯಬೇಕಾಯಿತು. ಈಗ ಮತ್ತೆ ಆ ದಾರಿಯನ್ನು ಕೂಡಿಕೊಳ್ಳೋಣ. ಪ್ರ. ಶೀ. ಸಾ. ವಾದವು ತನ್ನ ಕಾರ್ಯವನ್ನು ಪ್ರಕಾಶನರೂಪದಿಂದ ನಡೆಯಿಸಬೇಕೆಂದು ಹೇಳುತ್ತಿದ್ದೆವು. ಆ ಪ್ರಕಾಶನವೆಂದರೆ ಕೇವಲ ತಮ್ಮಲ್ಲಿಯ ಸಾಹಿತಿಗಳನ್ನೆ ಪ್ರಕಟನೆಯಿಂದ ಪ್ರೋತ್ಸಾಹಿಸುವುದೆಂದಲ್ಲ. ಪ್ರ. ಶೀ. ಸಾ. ವಾದದ ದೃಷ್ಟಿಯು ವಿಶಾಲವಾಗಿದೆ. ಸದ್ಯದ ನಮ್ಮ ದೇಶದ ಪರಿಸ್ಥಿತಿಯಲ್ಲಿ ಇಡಿಯ ನಮ್ಮ ದೇಶವಷ್ಟೆ ನಮ್ಮ ಸಮಾಜ ಎಂದು ಆ ದೃಷ್ಟಿಯನ್ನು ಸಂಕುಚಿತಗೊಳಿಸಬೇಕಾಗಿದೆ. ಆದರೆ ಬರಿಯ ನಮ್ಮ ಭಾಷೆಯ ಸಾಹಿತ್ಯ ಎಂದು ಅದನ್ನು ಇನ್ನಿಷ್ಟು ಸಂಕುಚಿತಗೊಳಿಸಬೇಕಾಗಿಲ್ಲ. ನಮ್ಮ ದೇಶದ ಬೇರೆ ಬೇರೆ ಸಾಹಿತ್ಯಗಳನ್ನು ನಮ್ಮ ಭಾಷೆಯಲ್ಲಿ, ನಮ್ಮ ಸಾಹಿತ್ಯವನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುವುದೂ ಪ್ರ. ಶೀ. ಸಾ. ವಾದದ ಸಂಘಗಳ ಮುಖ್ಯ ಕರ್ತವ್ಯವಾಗಿದೆ.

ಕೊನೆಯ ಮಾತು

ಒಂದೇ ಒಂದು ಲೇಖನದಲ್ಲಿ ಎಲ್ಲ ಮಾತುಗಳನ್ನು ಹೇಳುವುದು ಶಕ್ಯವಿಲ್ಲ, ಹೇಳಬೇಕೆಂಬ ಆತಿಯಾಸೆಯೂ ನನಗಿಲ್ಲ. ಈಗಲಾದರೂ ಪ್ರ. ಶೀ. ಸಾಹಿತ್ಯವಾದದ ಪ್ರಚಾರಕ್ಕಾಗಿ ನಾನು ಲೆಕ್ಕಣಿಕೆಯನ್ನು ಎತ್ತಿಲ್ಲ. ಬೇರೆ ಸಂದರ್ಭಗಳಾಗಿ ಈಗಾಗಲೆ ನಾನು ಈ ವಿಷಯ ಎರಡು ಲೇಖನಗಳನ್ನು ಬರೆಯಬೇಕಾಗಿ ಬಂದಿತು. ಆ ಸಂದರ್ಭಗಳಲ್ಲಿ ಆ ಲೇಖನಗಳು ಬರಿಯ ವಿನಮ್ರಾತ್ಮಕವಾದುವು. ಯಾವುದು ಪ್ರ. ಶೀ. ಸಾ. ವಾದವಲ್ಲ ಎಂಬುದನ್ನು ತೋರಿಸುವುದೆ ಹೆಚ್ಚಾಗಿ ಅಲ್ಲಿನನ್ನ ಉದ್ದೇಶವಿದ್ದಿತು. ಆದರೆ ಆ ಲೇಖನಗಳಿಂದ ನನ್ನ ಅಭಿಪ್ರಾಯಗಳು ಓದುಗರಿಗೆ ಪೂರ್ತಿಯಾಗಲಿ ಸಮರ್ಪಕವಾಗಲಿ ತಿಳಿಯುವುದಿಲ್ಲ. ಇಷ್ಟೆ ಅಲ್ಲದೆ ಅರ್ಧಮರ್ಧವಾಗಿ ತಪ್ಪಾದ ಕಲ್ಪನೆಯಾಗಬಹುದೆಂದು ತೋರಿದ್ದರಿಂದ, ಇಲ್ಲಿ ಹೆಚ್ಚು ವಿವರವಾಗಿ ಬರೆದಿದ್ದೇನೆ. ಪ್ರ. ಶೀ. ಸಾ. ವಾದದ ಬಗ್ಗೆ ನಾನಿಲ್ಲಿ ವೇದವಾಕ್ಯಗಳನ್ನು ಬರೆದಿಲ್ಲ ಎಂಬ ನನ್ನ ಅಭಿಪ್ರಾಯವನ್ನು ಓದುಗರೂ ಲಕ್ಷ್ಯದಲ್ಲಿಡಬೇಕೆಂದು ಬೇಡುತ್ತೇನೆ.

೫೦ ವರ್ಷಗಳಿಂದ ಅನುಭವ ಪಟ್ಟ
ಕರ್ಕ ಮತ್ತು ಕಂಪನಿ
ಇವರ
ಜ್ವರದ ಗುಳಿಗೆಗಳು
ಬಾಟ್ಲಿಗೆ ೧–೪–೦
ಎಲ್ಲ ಪ್ರಕಾರದ ಜ್ವರಗಳ ಮೇಲೆ ದಿವ್ಯೌಷಧ!
ವಿಳಾಸ:– ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ

ನನ್ನ ಸ್ವಾಮಿ * [ಸಣ್ಣಕತೆ]

ಶ್ರೀ. ವಿ. ಸೀ. ಹಿತ್ತಲಮನಿ (ಕನ್ನಡ ಜಾಣ)

(ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ಸಾಹಿತ್ಯೋತ್ಸವದಲ್ಲಿ [೧೯೪೪] ಮೊದಲನೆಯ ಬಹುಮಾನ ಪಡೆದ ಸಣ್ಣಕತೆಯಿದು. ಕರ್ನಾಟಕ ಸಂಘದ ಅನುಮತಿ ಪಡೆದು ಇದನ್ನಿಲ್ಲಿ ಪ್ರಕಟಿಸಲಾಗಿದೆ— ಸಂ. ಜ.)

"ಅಯ್ಯೋ, ಆ ದಿನವೇ ಸತ್ತುಹೋಗಿದ್ದರೆ, ಇಷ್ಟೆಲ್ಲ ಎಲ್ಲಿ ಆಗುತ್ತಿತ್ತು? ನಾನೇನೊ ಸುಖವಾಗಿದ್ದೇನೆ!... ಸುಖವೆಲ್ಲಿಯದು?.. ನನಗೆ ಸುಖವೆ?.... ಹೃದಯ ನುಂಗಿರದ ದೇವನೇ ಮಣಿದಲ್ಲಿದ್ದಾನೆ, ಸುಖವೆಲ್ಲಿಂದ ಬಂದೀತು? ಶಾಸ್ತ್ರಕ್ಕೆ ಸರಿಯಾಗಿ ಎಲ್ಲ ನಡೆದಿದೆ. ಎಂಥ ದುಃಖವೇ ಇರಲಿ, ಈ ಭಂಡಹೊಟ್ಟೆ ಕೇಳಬಲ್ಲದೆ? ದಿನಕ್ಕೆ ಎರಡು ಸಲ ಊಟ ಮಾಡುತ್ತೇನೆ; ಕೇವಲ ಯಂತ್ರದಂತೆ ಮನೆ-ಗೆಲಸ ಮಾಡುತ್ತೇನೆ. ಇಲ್ಲವಾದರೆ ಹೊಟ್ಟೆಗೆ ಹಿಟ್ಟು ಹಾಕುವವನು ಕೇಳಯಾನೇ? ಅವನಿಗಾಗಿ ಅಷ್ಟಾದರೂ ಮಾಡಬೇಡವೆ? ದಿನದ ಎಲ್ಲ ಕೆಲಸಗಳ ಜೊತೆಗೆ ಆ ಕೆಲಸ ಒಂದನ್ನೂ ಮಾಡುವೆ. ನಾನಲ್ಲದೆ ನನ್ನ ದೇವನನ್ನಾರು ನೋಡಿಕೊಳ್ಳುವರು? ನನ್ನ ಹೊಟ್ಟೆಯುರಿದು ಕಳವಳವಾಗುವಂತೆ ಮತ್ತಾರಿಗೆ ಕಳವಳವಾಗುವುದು? ಇಂದಿನ ಅವನ ಸ್ಥಿತಿ ಹಸುಗೂಸಿನಂತಹದು. ಒಂದೂ ಸಂಕಟ ಹೇಳುದಿಲ್ಲ ಇಂದು ಅವನಿಗೆ. ಅವನ ಮುಖವು ಮಗುವಿನ ಮುಖದಂತೆ ನಿಶ್ಚಿಂತವಾಗಿದೆ. ಹೊಟ್ಟೆ-ಬಟ್ಟೆಗಳ ಅರಿವೂ ಅವನಿಗಿಲ್ಲ. ನಾನೇ ಏನನ್ನಾದರೂ ಕೈಯೆತ್ತಿ ಕೊಟ್ಟರೆ, ನನ್ನ ಎದುರಲ್ಲಿಯೇ ತಂದು ತೀರಿಸಿ ಕೈಕೊಡಹಿಬಿಡುವನು. ಯಾರೂ ಅವನಿಗೆ ಏನನ್ನೂ ಕೊಡುವುದಿಲ್ಲ; ಕೊಟ್ಟರೂ ಅವನು ಮುಟ್ಟ-ಲಾರನು. ಅವನಿಗೆಲ್ಲಿ ಹಿಂದಿನ ದಿನಗಳ ನೆನಹು? ಎಲ್ಲವೂ ನನ್ನನ್ನೆ ಕಿಕ್ಕಿ-ಮುಕ್ಕುತ್ತವೆ. ಇಲ್ಲ, ನನ್ನವೇನೂ ಆಪಂಥವಿಲ್ಲ ಇವರಲ್ಲಿ. ನಾನು ಹೇಳಿದಂತೆ ಅವನು ಕೇಳಲಿಲ್ಲ ಎಂದು; ಎಂದು ಅವನು ನನ್ನ ಮಾತನ್ನು ಕೇಳಿದ್ದರೆ, ಇಂದು ತಲೆತಿರುಕನಾಗಿ ಬೀದಿಯಲ್ಲಿ ತಿರುಗುತ್ತಿದ್ದನೆ? ಈ ಸೌಭಾಗ್ಯವನ್ನು ನಾನೆಲ್ಲಿ ನೋಡುತ್ತಿದ್ದೆ? ಇಂದು ಅವನ ಹೊಟ್ಟೆ-ಸತ್ತಿಗಳನ್ನು ನೋಡಿಕೊಳ್ಳುವುದಕ್ಕಾಗಿ ನಾನಿನ್ನೂ ಈ ನನ್ನ ಭಂಡಜೀವವನ್ನು ಮುಂದುವರಿಸಬೇಕಾಗಿದೆ. ಒಬ್ಬರ ಮನೆಯ ಆಳಾಗಬೇಕಾಗಿದೆ. ಅವರು ಕೊಟ್ಟ ಪೀಡನೆಗಳನ್ನು ಸಹಿಸಬೇ-ಕಾಗಿದೆ. ಅಹುದು, ಹೃದಯೇಶ್ವರನ ನೆರಳನಂತಿರುವುದು ಅವನ ರಾಣಿಯ ಧರ್ಮ. ಅವನ ಕಷ್ಟ-ಸುಖಗಳು ಅವಳವು. ಏನೇ ಆಗಲಿ; ನಾನು ಸೌಭಾಗ್ಯವತಿ! ನನ್ನ ದೇವನ ದರ್ಶನವು ದಿನದಿನವೂ ನನಗೆ ಲಭಿಸುವುದು. ಇಷ್ಟು ದೊರೆತನಮೇಲೆ ಇನ್ನೇನು ಬೇಕು....ಸತಿಯೆಂಬ ಬಳಿಗೆ? ಇನ್ನೂ ಕೆಲವು ಕಾಲ ಈ ನಿರಾಶಾಜೀವನವನ್ನು ಮುಂದೂ-ಡುವೆ! ಯಾರ ಸಲುವಾಗಿ?.... ನನ್ನ ದೇವನ ಸಲುವಾಗಿ!"

‡ ‡ ‡ ‡

"ಇಷ್ಟು ದಿನಗಳು ಕಳೆದ ಮೇಲೂ, ಅಂದಿನ ಆ ನೆನಹುಗಳು ಅಚ್ಚಳಿಯದೆ ಹಾಗೆಯೆ ಇವೆ— ಹೇಗೆ ಮರೆಯಬಹುದು? ಅವು ಪವಿತ್ರವಾದ ನೆನಹುಗಳು: ಆಗಿನ್ನೂ ನಾನು ಸಣ್ಣವಳು. ಮನೆಯಲ್ಲಿ ಎಲ್ಲರೂ ಚೇಷ್ಟೆ ಮಾಡುತ್ತಿದ್ದರು. ಆದರೆ ಅದು ಮೊದ-ಮೊದಲು ನನ್ನ ಮನಸ್ಸಿ ಗೆ ವ್ಯಥೆಯನ್ನು ತಂದೊಡ್ಡಿದರೂ ನಿತ್ಯದ ಅಭ್ಯಾಸ ದಿಂದ ರೂಢಿಯಾಗಿಬಿಟ್ಟಿತು. ಮೊದಲು ಯಾರಾದರೂ ಹಾಗೆಂದಕೂಡಲೆ ಅಳುತ್ತ ಅಮ್ಮನ ಹತ್ತಿರಹೋಗಿ ಹೇಳುತ್ತಿದ್ದೆ; ಅವಳೂ ಕೋಪದಿಂದ, 'ಹೋಗೇ, ಜನರು ಅಂದ ಮಾತ್ರಕ್ಕೆ ಅವನೇನೂ ನಿನ್ನ ಗಂಡ-ನಾಗಲಿಲ್ಲ!' ಎಂದು ಗದ್ದರಿಸಿ ಬಿಡುತ್ತಿದ್ದಳು.

"ಇನ್ನಾರ ಹತ್ತಿರ ಹೋಗಬೇಕು ನಾನಾಗ? ತಂದೆ ಇದ್ದರು; ಆದರೆ ಆಗಿನ ಅವರ ಸ್ಥಿತಿ ಉತ್ಪಾನುಪಾದ ರಾಜನ ಸ್ಥಿತಿಯಂತಾ-ಗಿದ್ದಿತು. ನನ್ನ ಮೇಲೆ ಅವರ ಪ್ರೇಮ ಅದೆಷ್ಟೋ ಇದ್ದರೂ, ಚಿಕ್ಕಮ್ಮನ ವಕ್ರದೃಷ್ಟಿಯ ಫಲವಾಗಿ ಅವರು ನನ್ನನ್ನೆಂದೂ ಎತ್ತಿ ಮುದ್ದಾಡುತ್ತಿ-ರಲಿಲ್ಲ; ಒಂದಾದರೂ ನಲ್ಮೆಯ ನುಡಿಯನ್ನು ನನ್ನೊಂದಿಗೆ ಆಡುತ್ತಿರ-ಲಿಲ್ಲ. ಚಿಕ್ಕಮ್ಮನಿಗೂ ನನ್ನ ಸರಿವರಯವ ಒಬ್ಬ ಮಗಳು ಇದ್ದಳು; ಈಗಲೂ ಇದ್ದಾಳೆ. ತಂದೆಯವರು ಆಕೆಯನ್ನು ಎಂದು ಎಷ್ಟೆಷ್ಟೋ ಎತ್ತಿ ಆಡಿಸುತ್ತಿರಬೇಕು; ನಾನು ಒಂದು ಮೂಲೆಯಲ್ಲಿ ಕುಳಿತಿರಬೇಕು! ಚಿಕ್ಕಮ್ಮ ತಂದೆಯ ಕಿರಿಯ ಹೆಂಡತಿಯಲ್ಲವೆ? ಅಮ್ಮನೂ ಅವಳೂ ಯಾಪಾಗಲೂ ಒಬ್ಬರಿಂದೊಬ್ಬರು ದೂರವಾಗಿರಲು ಯತ್ನಿಸುತ್ತಿ-ದ್ದರು ನಮ್ಮ ತಾಯಿ ಸಕಲಗುಣಸಂಪನ್ನೆಯೆಂದು ನಾನಿಲ್ಲಿ ಹೇಳ-ಹೊರಟಿಲ್ಲ; ಸವತಿ ಮತ್ಸರ ಅವಳಲ್ಲಿಯೂ ಇತ್ತು. ಅದೇನೇ ಇರಲಿ ಮನೆಯ ನೂತು! ನನಗೆ ಮಾತ್ರ ತಂದೆ, ತಾಯಿ, ಬಂಧು, ಬಳಗ ಎಲ್ಲವೂ ಅಮ್ಮನೇ ಆಗಿದ್ದಳು. ಅವಳೇ ಹಾಗೆಂದು ನುಡಿದಮೇಲೆ ಕೇಳುವವರಾದರೂ ಯಾರು? ಕೆಲವು ದಿನಗಳ ತನಕ ನಾನು ಅವನನ್ನು ದ್ವೇಷಿಸುತ್ತಲೇ ಇದ್ದೆ. 'ಅವನು ಹುಟ್ಟದಿದ್ದರೆ ನನಗಾರು ಚೇಷ್ಟೆ ಮಾಡುತ್ತಿದ್ದರು? ಈಗೇನಾಯಿತು, ಸತ್ತುಹೋಗಬಾರದೆ ಅವನು? ನನಗೆ ಚೇಷ್ಟೆಯಾದರೂ ಕಡಿಮೆಯಾದೀತು!' ಎಂದು ನೂರಾರು ಸಲ ಮನದಲ್ಲಿ ಶಪಿಸುತ್ತಿದ್ದೆ. ಆಗ ಈ ವಿಚಾರಗಳು ನನಗೆ ಬಂದಿರಲಿಲ್ಲ: 'ಅವನಿಗೆ ಬದಲಾಗಿ ನಾನು ಹುಟ್ಟದಿದ್ದರೆ ಅಥವಾ ನಾನೇ ಸತ್ತರೆ—?' ಎಂದು. ಅವನನ್ನು ನಾನು ಅಲ್ಲಿಯ-ವರೆಗೆ ಒಮ್ಮೆಯಾದರೂ ಕಂಡಿರಲಿಲ್ಲ. ಏನು ದೈವಲೀಲೆಯೋ ತಿಳಿಯದು; ಕೆಲವು ದಿನಗಳ ನಂತರ ಅವನ ಮೇಲಿನ ದ್ವೇಷವೂ ಕಡಿಮೆಯಾಯಿತು. ಅದಕ್ಕೆ ಪ್ರತಿಯಾಗಿ ಆದರವು ಹೆಚ್ಚಾಯಿತು. ಅವನನ್ನು ಕಾಣಲು ಮನಸ್ಸು ಹಾತೊರೆಯ ತೊಡಗಿತು. ಜನರು ಎಷ್ಟು ಚೇಷ್ಟೆ ಮಾಡಿದರೂ, ಮೇಲೆ ಮೇಲೆ ಮಾತ್ರ ಸುಳ್ಳು ಕೋಪ ಪ್ರಕಟಮಾಡುತ್ತಿದ್ದೆ; ಒಳಗೊಳಗೆ ಅದೆಷ್ಟೋ ಆನಂದ ಅನುಭವಿಸು-ತ್ತಿದ್ದೆ. ಊರಿಂದ ಯಾವುದಾದರೊಂದು ಪತ್ರ ಬಂದರೆ ಸಾಕು, ಅವ-ರಲ್ಲಿ ಅವನ ಹೆಸರಿದ್ದರೆ ಆ ಓಲೆ ನನಗೆ ಅತಿ ಸುಂದರವಾಗಿ ತೋರು-ತ್ತಿತ್ತು; ಆ ಅಂಚೆಯನ್ನು ನಾನು ಸಾವಿರಸಲ ಓದುತ್ತಿದ್ದೆ. ಅಂಥ ಎಷ್ಟೋ ಅಂಚೆಗಳನ್ನು ನನ್ನ ಬ್ಯಾಗಿನಲ್ಲಿ ಕಾಯ್ದಿಡುತ್ತಿದ್ದೆ. ಈಗಲೂ ಮನಸ್ಸು ಮಾಡಿ ಅರಸಿದರೆ ಅವು ಸಿಕ್ಕಬಹುದು. ಅವನ ಹೆಸರು ಇಲ್ಲದ ಅಂಚೆಯ ಕಾಗದ ಎಂದಾದರೂ ಬಂದರೆ, ಅವುಗಳನ್ನು ನಾನು ನನ್ನ ಕೈಗಳಿಂದಲೂ ಮುಟ್ಟುತ್ತಿರಲಿಲ್ಲ.....

"ಕೆಲದಿನ ಕಳೆದುವು. ಅವನನ್ನು ಕಾಣುವ ಸುಯೋಗ ಬಂದಿತು. ಸ್ವತಃ ಅವನೇ ಪತ್ರಬರೆದಿದ್ದ ಅಮ್ಮನಿಗೆ. ಅವರ ಊರಲ್ಲಿ ರಥೋತ್ಸವ ವಿತ್ತಂತೆ. ಪತ್ರದಲ್ಲಿ ಇದೊಂದು ಮಾತೂ ಮುಖ್ಯವಾಗಿದ್ದಿತು: 'ಪೂಜ್ಯ ಅತ್ತೆಯವರೇ, ಬಹಳ ದಿನಗಳಾಯಿತು ಸುನಂದೆಯನ್ನು ಕಂಡಿಲ್ಲ; ಬರುವಾಗ ಅವಳನ್ನು ಬಿಟ್ಟು ಬರಬಾರದು!' ಈ ಪತ್ರ-ವನ್ನಂತೂ ನಾನು ಅತಿ ಜತನದಿಂದ ಕಾಯ್ದಿಟ್ಟೆನಾಗ. ಊರಿಗೆ

ಹೋದಾಗ ಅವನಿಗೆ ಏನಾದರೂ ಕಾಣಿಕೆ ಅರ್ಪಿಸಬೇಕೆಂಬ ಹೆಬ್ಬಯಕೆ ಯಾಯಿತು. "ಯಾವ ಕಾಣಿಕೆ ಅರ್ಪಿಸಲಿ?" ಎಂದು ಯೋಚಿಸಿ ಯೋಚಿಸಿ, ಕಡೆಗೆ ಶಾಲೆಯಿಂದ ಬರುವಾಗ ಪೇಟೆಯಲ್ಲಿಯೇ ಒಂದು ನಯವಾದ ಮೈಸೂರು ರೇಶ್ಮೆಯ ಬಿಳಿಯ ಕರವಸ್ತ್ರವನ್ನು ಕೊಂಡು ತಂದು, ಅದರ ಸುತ್ತಲೂ ಮನೋಹರವಾದ ಬಳ್ಳಿಯ ಕಸೀದೆ ಹೆಣೆದು, ಮಧ್ಯದಲ್ಲಿ "ಶ್ರೀಕಾಂತನಿಗೆ" ಎಂದು ಬಣ್ಣಬಣ್ಣದ ರೇಶ್ಮೆಯಿಂದ– ಹೊಳೆ ಹೊಳೆಯುವಂತೆ– ಹೆಣೆದು, ಒಂದು ಮೂಲೆಯಲ್ಲಿ "ಸುನಂದೆಯ ಕಿರಿಯ ಕಾಣಿಕೆ" ಎಂಬಕ್ಷರಗಳನ್ನೂ ಹೆಣೆದಿದ್ದೆನು. ನಿಶ್ಚಯಿಸಿದ ದಿನ ಬಂದಿತು. ಊರಿಗೆ ಹೊರಟು, ಅವರ ಊರ ಸಮೀಪದ ರೇಲ್ವೆ ನಿಲ್ದಾಣಕ್ಕೆ ಬಂದು ಗಾಡಿಯಿಂದ ಇಳಿದೆವು. ಅವರ ಊರು, ನಿಲ್ದಾಣದಿಂದ ಸ್ವಲ್ಪ ದೂರವಿತ್ತು. ಅದೊಂದು ಸರ್ವಸಾಧಾರಣ ಹಳ್ಳಿ. ಎತ್ತಿನ ಬಂಡಿ ನಮಗಾಗಿ ಬಂದು ಹೊರಗೆ ಕಾದಿತ್ತು. ಶ್ರೀಕಾಂತ ಸ್ವತಃ ಸ್ಟೇಶನಿಗೆ ಬಂದಿದ್ದ. ನನ್ನ ಪರಿಚಯ ಅವನಿಗಿರಲಿಲ್ಲ. ಅಮ್ಮನ ಪರಿಚಯ ಸಾಕಷ್ಟಿತ್ತು. ಅಮ್ಮನಿಗೆ ಅವನು ನಮಸ್ಕಾರ ಮಾಡಿ ಸ್ವಾಗತಿಸಿದ. ನಾನು ನಿಂತು ಅವನನ್ನೇ ನೋಡುತ್ತಿರುವಾಗ ಅಮ್ಮ ಎಂದರು:

'ಏನು ಸುನಂದೆ, ಸುಮ್ಮನೆ ನಿಂತಿರುವೆಯಲ್ಲಾ ಕಲ್ಲಿನ ಹಾಗೆ! ಮಾವನಿಗೆ ನಮಸ್ಕಾರ ಮಾಡು!'

ನಾನು ಅವನ ಪಾದಗಳನ್ನು ಮುಟ್ಟಿ ನಮಸ್ಕರಿಸಿದೆ. ಅವನು ನನ್ನನ್ನು ತನ್ನ ಕೈಗಳಿಂದ ಹಿಡಿದು ಎಬ್ಬಿಸಿದ. ಅದೇ ನಾನು ನನ್ನ ಪತಿದೇವನಿಗೆ ಅರ್ಪಿಸಿದ ಮೊದಲ ವಂದನೆ. ಆದರೆ ಆಗ ಅವನೇ ಶ್ರೀಕಾಂತನೆಂದು ತಿಳಿದಿರಲಿಲ್ಲ. ಬಂಡಿ ಹತ್ತಿ ಊರಿಗೆ ನಡೆದಿದ್ದೆವು. ಅವನು ನನ್ನ ಪಕ್ಕದಲ್ಲಿರವೇ ಕುಳಿತಿದ್ದ. ಮಾತನಾಡುತ್ತ ಅಮ್ಮನು ಕೇಳಿದಳು.

'ಏನು ಶ್ರೀಕಾಂತ, ಮನೆಯಲ್ಲಿ ಎಲ್ಲರೂ ಕ್ಷೇಮ ತಾನೆ? ಅಪ್ಪ ಅಮ್ಮ ಚೆನ್ನಾಗಿದ್ದಾರೆಯೆ?'

'ಅಜ್ಜಿ ಅಜ್ಜ ಎಲ್ಲರೂ ಕ್ಷೇಮದಿಂದಿದ್ದಾರೆ' ಎಂದು ಅವನು ಅಮ್ಮನಿಗೆ ಹೇಳಿದ. ಆಗಲೇ ನನಗೆ ತಿಳಿಯಿತು, ಅವನೇ ಶ್ರೀಕಾಂತನೆಂದು. ಆಗ ನನ್ನ ಆನಂದ ಹೇಳತೀರದು. ಆ ನನ್ನ ಇಷ್ಟದೈವತ ನನ್ನ ಮಗ್ಗುಲಲ್ಲಿ ಕುಳಿತವೇಳೆ ನನಗೆ ಆನಂದವಾಗಬೇಡವೆ? ಇಷ್ಟು ಸಮಯದ ವರೆಗೆ ಯಾರೋ ಅಪರಿಚಿತರೆಂಬ ಸಂಕೋಚದಿಂದ ಕುಳಿತ ನಾನು, ಆಗ ಅತಿ ಆನಂದಿತಳಾಗಿ ಸಾವಕಾಶವಾಗಿ—ಅವನಿಗೆ ತಿಳಿಯದಂತೆ— ಮೈಗೆ ಮೈ ತಾಗಿಸಿ ಕುಳಿತೆನು. ನನ್ನ ಮನೋವೇಗವನ್ನು ಅಮ್ಮ ಗ್ರಹಿಸಿದಳೋ ಎನೋ!

'ಏನೇ ಸುನಂದೆ, ಶ್ರೀಕಾಂತನೆಂದರೆ ಎಷ್ಟು ಉರಿದು ಬೀಳುತ್ತಿದ್ದೆಯಲ್ಲ! ಈಗ ಹೇಗೆ ಅವನ ಪಕ್ಕದಲ್ಲಿ ಮೈಗೂಡಿಸಿ ಕುಳಿತಿರುವೆ?' ಅಮ್ಮ ನಕ್ಕು ಕೇಳಿದಳು. ನಾನು ನಸುನಗುತ್ತ ನಾಚಿಕೆಯಿಂದ ತಲೆಬಾಗಿಸಿದೆ. ನನ್ನ ಪರವಾಗಿ ಶ್ರೀಕಾಂತನೇ ಮಾತನಾಡಿ, ಮಾತಿನ ಓಘವನ್ನೇ ಬದಲುಮಾಡಿದ:

'ಅತ್ತೆಮ್ಮಾ, ಸುನಂದೆ ಎಷ್ಟು ದೊಡ್ಡವಳಾಗಿ ಬಿಟ್ಟಿದ್ದಾಳೆ? ನಾನು ಈಗ ಹತ್ತು ವರ್ಷಗಳಿಂದ ಅವಳನ್ನು ಕಂಡೇ ಇಲ್ಲ; ನೀವೂ ನಮ್ಮಲ್ಲಿಗೆ ಬಹಳ ಬರುವುದಿಲ್ಲ. ಈಗ ಹತ್ತು ವರ್ಷಗಳಲ್ಲಿ ಒಂದೆರಡು ಸಲ ಬಂದಿದ್ದಿರೆಂಬಂತೆ ತೋರುವುದು. ಆಗ ನಾನು ಅಣ್ಣನೊಂದಿಗೆ ಓದು ಕಲಿಯುವುದಕ್ಕೆಂದು ಹೋದವನು ಊರಲ್ಲಿ ಇರಲಿಲ್ಲ. ಹತ್ತು ವರ್ಷಗಳ ಕೆಳಗೆ ನಾನು ಸುನಂದೆಯನ್ನು ಕಂಡಮ್ಮ. ಆಗಿನ್ನೂ ಅವಳಿಗೆ ಐದು ವರ್ಷಗಳು ಆಗಿದ್ದುವಲ್ಲವೆ? ಈಗಲೂ ಶಾಲೆಗೆ ಹೋಗುತ್ತಲಿರುವಳಲ್ಲವೆ? ಏನು ಇಷ್ಟರಲ್ಲಿ ಬಿಡಿಸಿ ಬಿಟ್ಟಿರಾ?'

"ಇಲ್ಲಪ್ಪಾ ಬಿಡಿಸಿಲ್ಲ, ಇನ್ನೂ ಕಲಿಯುತ್ತಿದ್ದಾಳೆ. ಹೇಗೂ ಹೇಗೂ ಮ್ಯಾಟ್ರಿಕ್ ಪರೀಕ್ಷೆಯ ಸಮೀಪಕ್ಕೆ ಬಂದಿದ್ದಾಳೆ. ಅದಾದ ನಂತರವೇ ಬಿಡಿಸಿದರಾಯಿತೆಂದು ಬಿಟ್ಟಿದ್ದೇವೆ. ಮನೆಯಲ್ಲಿ ಸುನಂದೆಯ ಚಿಕ್ಕಮ್ಮ ಈಗಲೇ ಬಿಡಿಸಿದರಾಯಿತೆಂದು ಮೊನ್ನೆ ಹಟ ಹಿಡಿದಿದ್ದಳು. ಅವಳಿಗೂ ಒಬ್ಬಳು ಮಗಳಿದ್ದಾಳೆ; ಅವಳಿಗೆ ಈಗ ಹದಿನೈದು ವರ್ಷಗಳು. ಸುನಂದೆಗಿಂತ ಒಂದು ವರ್ಷಕ್ಕೆ ಹಿರಿಯಳು. ಅವಳೆನ್ನೂ ನಾಲ್ಕನೆಯ ವರ್ಗದಲ್ಲಿ ಓದುತ್ತಿದ್ದಾಳೆ. ಇಬ್ಬರಿಗೂ ಖರ್ಚು ಬಹಳ ಬರುವುದಂತೆ. 'ಹೇಗಾದರೂ ಸುನಂದೆ ಬಹಳ ಕಲಿತಿದ್ದಾಳೆ; ಅವಳು ಈಗ ಬಿಟ್ಟರಾಯಿತು! ಅವಳಷ್ಟೇ ಕಲಿತ ಮೇಲೆ ತನ್ನ ಮಗಳನ್ನೂ ಬೇಕಾದರೆ ಬಿಡಿಸಿದರೆ ಬಂದೀತು!'....ಎಂದು ಅವಳ ವಾದ. ನಾನೇನು ಅದಕ್ಕೆ ಇಂಬುಗೊಡದೆ, ಅವಳೊಂದಿಗೆ ಜಗಳಮಾಡಿ, ಸುನಂದೆಯನ್ನು ಇನ್ನೂ ಶಾಲೆಗೆ ಕಳಿಸುತ್ತಲೇ ಇದ್ದೇನೆ. ಸರಿ, ಶ್ರೀಕಾಂತಾ, ನೀನು ಯಾವ ವರ್ಗದಲ್ಲಿ? ನಿನಗೂ ಈಗ ಹದಿನೇಳು ವರ್ಷಗಳೆಂದು ತೋರುತ್ತದೆ. ಸುನಂದೆಯನ್ನು ಗರ್ಭವತಿಯಾಗಿ ಐದು ತಿಂಗಳಾಗಿತ್ತು; ನಾನು ಆಗ ಊರಿಗೆ ಬಂದಾಗ, ನೀನು ಎರಡುವರೆ ವರ್ಷದವನಿದ್ದೆ. ಸುಮಾರು ಮೂರು ವರ್ಷಕ್ಕೆ ಸುನಂದೆಗಿಂತ ಹಿರಿಯ ನೀನು. ಹೆಣ್ಣು ಮಕ್ಕಳೇ ಬೆಳಗೆಯವೆಂದು ನಾವು ತಿಳಿದಿದ್ದೆವು. ನೀನು ಅವರಿಗಿಂತ ಹೆಚ್ಚಾಗಿಯೇ ಬೆಳೆದಿರುವೆಯಲ್ಲ!' ಅಮ್ಮ ಮಾತನಾಡುತ್ತಿದ್ದಳು; ನಾನು ಸುಮ್ಮಗೆ ಕುಳಿತು ಕೇಳುತ್ತಿದ್ದೆ. ಚಕ್ಕಡಿ ಸಾವಕಾಶವಾಗಿ ಸಾಗಿತ್ತು. ಆ ದಿನ ಶ್ರೀಕಾಂತನ ಚಿತ್ತದಲ್ಲಿ ಏನಿತ್ತೋ ನಾನು ಕಾಣೆ; ಅವನ ಮುಖವನ್ನೇ ದಿಟ್ಟಿಸಿ ನೋಡುತ್ತ ಕುಳಿತಿದ್ದೆ. ಬಂಡಿಯ ಚಕ್ರಗಳ ಧ್ವನಿಯು ಎತ್ತುಗಳ ಕೊರಳಲ್ಲಿನ ಕಟ್ಟಿದ ಹುರಿಗೆಜ್ಜೆಯ ಸ್ವರಗಳೊಂದಿಗೆ ಬೆರೆತುಕೊಂಡ ಒಂದು ತರದ ಹೊಸ ಗಪ್ಪಳ, ಮನಸ್ಸನ್ನು ಆನಂದಪಡಿಸುತ್ತಿತ್ತು. ಧಡಿಕೆ ಬಂದಾಗ ಚಕ್ರಗಳು ಅಚ್ಚಿಗೆ ಹಾಕಿದ ಕೀಲುಗಳಿಗೆ ಬಡಿದು, ಅವುಗಳ ತುದಿಗಳಲ್ಲಿರುವ ಗೆಜ್ಜೆಗಳಿಂದ ನಾದವನ್ನು ಹುಟ್ಟಿಸುತ್ತಿದ್ದುವು. ಎತ್ತುಗಳಿಂದ ಎದ್ದ ಮಾರ್ಗದ ಧೂಳಿ ಆಕಾಶಕ್ಕೆ ಏರುತ್ತಿತ್ತು. ಇದನ್ನೆಲ್ಲ ನೋಡಲು ಆಗ ನನಗೆ ಸಮಯವೆಲ್ಲಿ? ಇವೆಲ್ಲವುಗಳನ್ನೂ ಮರೆ ಮಾಜಿಸಿತ್ತು ಶ್ರೀಕಾಂತನ ಚಂದ್ರವದನ. ಅಮ್ಮನ ಮಾತಿಗೆ ಉತ್ತರವೆಂದು ಶ್ರೀಕಾಂತ ಹೇಳಿದ:

'ನಾನೂ ಈ ವರ್ಷ ಮ್ಯಾಟ್ರಿಕ್ ಪರೀಕ್ಷೆಗೆ ಓದುತ್ತಿದ್ದೇನೆ. ಅಭ್ಯಾಸ ಸರಿಯಾಗಿ ಸಾಗಿದೆ.'ಸುನಂದೆಯನ್ನೂ ಮ್ಯಾಟ್ರಿಕ್ ಪರೀಕ್ಷೆಯ ವರೆಗೆ ಓದಿಸಿರಿ, ನಡುವೆಯೇ ಬಿಡಿಸಬೇಡಿರಿ! ಒಂದು ವೇಳೆ ಅಲ್ಲಿ ಅಡ್ಡಿ-ಆಡಚಣಿಗಳು ಬಂದರೆ, ಅಣ್ಣನಿಗೆ ಹೇಳುವೆ; ಅಲ್ಲಿಗೇ ಕಳಿಸಿರಿ!'

ಅವನು ಮಾತು ಮುಗಿಸಿ ನನ್ನನ್ನು ನೋಡಿದ. ಇಬ್ಬರ ದೃಷ್ಟಿಗಳೂ ಒಂದಾದುವು. ಇವೇ ನಮ್ಮಿಬ್ಬರ ಪ್ರಥಮ ದೃಷ್ಟಿಗಳ ಮಿಲನ. ಏಕೋ ಆಗ ನನಗೆ ತಿಳಿಯಲಿಲ್ಲ; ನನ್ನ ನೋಟವನ್ನು ಅವನ ನೋಟದಿಂದ ಬೇರ್ಪಡಿಸಿ ಬೇರೆ ಕಡೆಗೆ ಹರಿಬಿಟ್ಟೆ. ಹಾಗೂ

ಹೀಗೂ ಮಾತಿನಲ್ಲಿ ಮಗ್ನರಾಗಿರುವಾಗ ಊರು ಬಂತು. ನಾನು ಇಷ್ಟು ದಿವಸ ಪಟ್ಟಣದಲ್ಲಿ ಇದ್ದು ಹೋದವಳು; ಆ ಹಳ್ಳಿ ನನಗೆ ಹೇಗೆ ಹಿಡಿಸಬೇಕು? ಶ್ರೀಕಾಂತನೊಬ್ಬ ಅಲ್ಲಿ ಇರದಿದ್ದರೆ ಏನಾದರೂ ನೆಪಹೇಳಿ, ಅಮ್ಮನನ್ನು ಕೂಡಿಕೊಂಡು ಮರುದಿನವೇ ಊರಿಗೆ ತಿರುಗಿ ಹೊರಟೇ ಬಿಡುತ್ತಿದ್ದೆ. ಅಲ್ಲಿ ಸರಿಯಾಗಿ ನಾನು ಅರ್ಧಮಾಸವಿದ್ದೆ. ಯಾವಾಗಲೂ ಅವನ ನೆರಳಿನಂತೆ ಅವನನ್ನೇ ಹಿಂಬಾಲಿಸುತ್ತಿದ್ದೆ. ಮುಂಜಾನೆ ಎದ್ದ ಕೂಡಲೆ– ಅವರ ಊರಿಗೆ ನದಿಯಿದೆ–ನದಿಯ ದಂಡೆ ಹಿಡಿದು ಕಾಲುಸೋಲುವವರೆಗೆ ತಿರುಗಾಡಲಿಕ್ಕೆ ಹೋಗುವೆವು. ಮಧ್ಯಾಹ್ನವಾಯಿತೆಂದರೆ ಹೊಳೆಗೆ ಜಳಕಕ್ಕೆ ಹೋಗುವೆವು. ಅಮ್ಮ ಎಷ್ಟು ಬೇಡವೆಂದರೂ ಕೇಳುತ್ತಿರಲಿಲ್ಲ. ಹದಿನೈದು ದಿನಗಳಲ್ಲಿ ಅವನ ಅವಿಶ್ರಾಂತಶ್ರಮದಿಂದ ಈಜಲು ಕಲಿತೆ. ಒಮ್ಮೊಮ್ಮೆ ಈಜುತ್ತ ಇಬ್ಬರೂ ಹೊಳೆಯಲ್ಲಿ ಬಹಳ ದೂರ ಹೋಗಿ, ಒಂದು ಬಂಡೆಯನ್ನೇರಿ ಹರಟೆ ಕೊಚ್ಚುತ್ತಿದ್ದೆವು. ಇದೊಂದು ಆ ಹಳ್ಳಿಯ ಜನರಿಗೆ ಆಶ್ಚರ್ಯವಾಗಿ ತೋರುತ್ತಿತ್ತು. ಅವರು ನದಿಯ ದಂಡೆಯ ಮೇಲೆ ನಿಂತು, ನಮ್ಮನ್ನು ಕಿತ್ತುತಿನ್ನುವಂತೆ, ಬಿರಿಬಿರಿ ನೆಟ್ಟ ನೋಟದಿಂದ ನೋಡುತ್ತಿದ್ದರು. ನಾನು ಅದೇ ಹೊಸತಾಗಿ ಈಜಲು ಕಲಿತವಳು, ಕೈ ಸೋಲುತ್ತಿದ್ದುವು; ಆಗ ಹೆದರಿ ಅವನ ಕೊರಳಿಗೆ ತಕ್ಕೆ ಬೀಳುತ್ತಿದ್ದೆ. ಅವನು ದಂಡೆಗೆ ಎಳೆದು ತರುತ್ತಿದ್ದ. ಸುಧ್ಯಾಹ್ನ ಊಟವಾದನಂತರ ಅವನ ಕೋಣೆಯಲ್ಲಿ ಕುಳಿತು ಯಾವುದಾದರೂ ಕತೆ, ಕಾದಂಬರಿ ಓದುವೆವು. ಅವನಲ್ಲೊಂದು ಪುಟ್ಟ–ಮನೆಯ ವಾಚನಾಲಯವಿತ್ತು; ಕತೆ-ಕಾದಂಬರಿಗಳು ಬಹಳವಿದ್ದುವು. 'ಶರಚ್ಚಂದ್ರ'ರ ಎಲ್ಲ ಕಾದಂಬರಿಗಳನ್ನೂ ನಾನು ಅಲ್ಲಿಯೆ ಓದಿ ಮುಗಿಸಿದೆ. ಓದುವುದು, ಇಲ್ಲದಿದ್ದರೆ ಹರಟೆ ಕೊಚ್ಚುವುದು. ಅದು ಬೇಸರಾದರೆ, ಅವನು ನನಗೆ ಹೊಸತಾಗಿ 'ಹುಲಿಮನೆ' ಎಂಬ ಜರಿಲಿನ ಆಟ ಕಲಿಸಿದ್ದ– ಅದು ಈಗಲೂ ನನ್ನ ಸ್ನೇಹಿತೆಯ ಆಟಗಳಲ್ಲೊಂದು— ಅವನನ್ನು ಆಡುವುದು. ಹಾಂ! ಮರೆತಿದ್ದೆ. ನಾನು ಅವನಿಗಾಗಿ ಶ್ರಮಪಟ್ಟು ತಯಾರಿಸಿದ ಪಸ್ತ್ರವನ್ನು, ಒಂದು ದಿನ ಸುಧ್ಯಾಹ್ನದಲ್ಲಿ ಊಟವಾದ ನಂತರ ಮಾತನಾಡುತ್ತ ಕುಳಿತಾಗ, ಅವನಿಗೆ ಅರ್ಪಿಸಿ, ಅವನ ಪಾದಕಮಲಗಳಿಗೆ ಹಣೆ ಮುಟ್ಟಿಸಿದೆ. ಅವನೂ ನನ್ನನ್ನು ತನ್ನ ಕೈಗಳಿಂದ ಹಿಡಿದೆತ್ತಿ ಆಶೀರ್ವದಿಸಿ, ನನ್ನ ಉಲ್ಲಕಾಣಿಕೆ ಸ್ವೀಕರಿಸಿದ. ಅಂದಿನಿಂದ ಅವನಲ್ಲಿ ಏನೋ ಒಂದು ಬದಲಾವಣೆಯಾಯಿತೆಂದು ನನಗೆ ಎನಿಸಹತ್ತಿತು.....

....ಇಬ್ಬರೂ ಆಗಲಿ, ನಾನು ನನ್ನ ಊರಿಗೆ ಅಮ್ಮನೊಂದಿಗೆ ಬಂದೆ. ಬರುವಾಗ ಕರೆತರಲಿಕ್ಕೆ ಬಂದಂತೆ ಶ್ರೀಕಾಂತ ಈಗ ಕಳಿಸಲಿಕ್ಕೂ ಬಂದಿದ್ದ. ಅದೇ ಮಾರ್ಗ, ಅದೇ ಬಂಡಿ, ಅವೇ ಎತ್ತುಗಳು, ಅದೇ ಬಂಡಿ ನಡೆಸುವವನು; ಆದರೆ ಮೊದಲಿನಂತೆ ನನಗೆ ಆನಂದವಿರಲಿಲ್ಲ. ಕ್ಷಣಕ್ಷಣಕ್ಕೂ ದುಃಖ ಒತ್ತರಿಸುತ್ತಲಿತ್ತು. ಶ್ರೀಕಾಂತನಾದರೂ ದುಃಖಿತನಾಗಿದ್ದ. ಮೊದಲಿನಂತೆ ಉಮ್ಮಸ್ಸಿನ ಸಂಗಡ ಮಾತನಾಡುತ್ತಿರಲಿಲ್ಲ. ಏನಾದರೂ– ನಡುನಡುವೆ–ನನ್ನನ್ನೇ ಒಂದೊಂದು ಸಲ ಮಾತನಾಡಿಸುತ್ತಲಿದ್ದ. ಹೇಗೆ ಆಗಲಿಪೆನೋ ಆಗ ಆಗಲಿದೆ....

* * * *

"ನನ್ನ ಮ್ಯಾಟ್ರಿಕ್ ಪರೀಕ್ಷೆ ಮುಗಿಯಿತು. ಅವನು ಕಳಿದ ಸಲವೇ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ಕಾಲೇಜನ್ನು ಸೇರಿ ಎಫ್. ವಾಯ್. ಸೈನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದ. ಈ ನಡುವೆ ಅವನು ನಮ್ಮೂರಿಗೆ ನಾಲ್ಕಾರು ಸಲ ಬಂದುಹೋಗಿದ್ದ. ಕಾಲೇಜಿಗೆ ರಜೆಯಿದ್ದಾಗ ಅಲ್ಲಿಗೆ ಬಾರದೆ ಹೋಗುತ್ತಿರಲಿಲ್ಲ. ಪ್ರತಿವಾರಕ್ಕೊಂದರಂತೆ ಪತ್ರ ಬರೆಯುತ್ತಿದ್ದ. ನಾನೂ ಅದಕ್ಕೆ ಉತ್ತರವಾಗಿ ಬರೆಯದೆ ಇರುತ್ತಿರಲಿಲ್ಲ. ನಮ್ಮ ಸುಖ-ದುಃಖಗಳು ಇಬ್ಬರಲ್ಲಿಯೂ ವಿನಿಮಯವಾಗುತ್ತಿದ್ದುವು. ನಾನು ಯಾವ ಕೆಲಸವನ್ನೂ ಅವನ ಸಲಹೆಯಿಲ್ಲದೆ ಮಾಡುತ್ತಿರಲಿಲ್ಲ. ಯಾವುದಾದರೊಂದು ಪುಸ್ತಕ ಓದುವಾಗ ಕೂಡ ಅವನು ಸೂಚಿಸಿದ ಪುಸ್ತಕವನ್ನೆ ಓದುತ್ತಿದ್ದೆ. ಇನ್ನೊಂದು ಮಹತ್ತ್ವದ ವಿಷಯ: ಅವನ ಊರಿಗೆ–ತೊಡಿಗೆ ಶುದ್ಧ ಖಾದಿ. ಅದೂ ಅಖಿಲಭಾರತ ಚರಕಾ ಸಂಘದಿಂದ ಪ್ರಶಸ್ತಿ ಪಡೆದದ್ದಿರಬೇಕು. ಯಾರಾದರೂ 'ಖಾದಿ' ಎಂದು ಹೇಳಿ ಕೊಟ್ಟರೆ ಅದನ್ನೆಂದೂ ಧರಿಸುವವನಲ್ಲ. ಅವನ ಇಚ್ಛೆಯ ಮೇರೆಗೆ ಅಂದಿನಿಂದ ನಾನೂ ಖಾದಿ ಬಟ್ಟೆಗಳನ್ನೇ ತೊಡಲು ಮೊದಲು ಮಾಡಿದೆ. ಈಗಲೂ ಅನೇ ಪರಿವಾರ ರೂಢಿಯಲ್ಲಿದೆ. ಅವನ ಮೈಮೇಲೆ ಈಗಲೂ ಖಾದಿ ಬಟ್ಟೆಗಳು ಶೋಭಿಸುತ್ತವೆ. ಅವನ ಮನದ ಬಯಕೆ ನನಗೆ ಗೊತ್ತು; ಅಂತೆಯೆ ಖಾದಿಯನ್ನೇ ಅವನಿಗೆ ನಾನು ತೊಡಲಿಕ್ಕೆ ಕೊಡುವೆನು. ಇಂತಹ ಸ್ಥಿತಿಯಲ್ಲಿಯೂ ಆತ ಬೇರೆ ಬಟ್ಟೆ ಧರಿಸಲಾರನು. ಹಿಂದೆ ಒಂದು ಸಲ ನನ್ನೆದುರಿನಲ್ಲಿ ಹೇಳಿದ್ದ :

'ನಾನು ಸಾಯುವ ವರೆಗೂ ಖಾದಿಯನ್ನೇ ಧರಿಸುವೆ. ತಪ್ಪಿ ಯಾದರೂ ಬೇರೆ ಬಟ್ಟೆ ಧರಿಸಿದರೆ ಪ್ರಾಯಶ್ಚಿತ್ತ ತಕ್ಕೊಳ್ಳುವೆ - ಒಂದು ವೇಳೆ ನೈಮರೆತಾಗಲೂ ಖಾದಿಯೇ ನನ್ನ ಮೈಮೇಲೆ ಶೋಭಿಸಬೇಕು!'

:, ಈಗ ಅವನಿಗೆ ತಾನು ಯಾರೆಂಬುದು ತಿಳಿಯದು; ಅವನ ಸಂಕಲ್ಪವನ್ನು ನಾನು ಪೂರಯಿಸಬೇಡವೆ? ಆ ಮಾತಿರಲಿ! ಬೇಸಗೆಯ ಬಿಡುವಿನಲ್ಲಿ ಅವನು ನಮ್ಮೂರಿನಲ್ಲಿಯೇ ಇದ್ದ. ಪುನಃ ಕಾಲೇಜಿಗೆ ನಡೆದ. ನಾನು ಕಾಲೇಜಿಗೆ ಹೋಗಲಿಲ್ಲ. ಎಷ್ಟು ಹಟ ಮಾಡಿದರೂ ಮನೆಯವರು ಕಳುಹಿಲಿಲ್ಲ. ಅಂದಿನಿಂದಲೆ ನನ್ನ ಜೀವನದ ಕಗ್ಗತ್ತಲೆಯ ಕಾಲ ಪ್ರಾರಂಭವಾಯಿತೆನ್ನಬಹುದು. ಬೇಸಗೆಯ ಬಿಡುವಿನಲ್ಲಿಯೆ ಇಬ್ಬರೂ ಒಂದು ದಿನ ಲಗ್ನವಾಗುವುದಾಗಿ ಚಂದ್ರಮನನ್ನು ಸಾಕ್ಷಿಯಿಟ್ಟು, ಬೆಳುದಿಂಗಳಿನ ಇರುಳಲ್ಲಿ, ಮನೆಯ ಮುಂದಿನ ತೋಟದಲ್ಲಿ ನಿಶ್ಚಯಿಸಿದ್ದೆವು. ಆದರೆ ಈ ವಿಷಯವನ್ನು ಮನೆಯವರಿಗೆ ಅವನೂ ತಿಳುಹಿರಲಿಲ್ಲ; ನಾನೂ ತಿಳುಹಿರಲಿಲ್ಲ. ನಾನು ಅವನಿಗೆ ದೊಡ್ಡತ್ತಿಕನ್ನೆಯಾಗುವೆನೆಂದು ಯಾರ ಗಮನವೂ ಅವನೆಡೆಗೆ ಸುಳಿದಿದ್ದಿಲ್ಲ. ನಾನಾದರೂ ಆ ವಿಷಯ ಬಿಚ್ಚಿಹೇಳಿದ್ದಿಲ್ಲ. ಅದೇ ನಾನಾಗ ಮಾಡಿದ ಅಪರಾಧ. ಅದರ ಫಲ ಇಂದು ಉಣ್ಣಬೇಕಾಗಿದೆ. ನನಗೆ ಬೇರೆ ವರನನ್ನು ಹುಡುಕಿದ್ದಾಯಿತು. ಎಲ್ಲವನ್ನೂ ಪ್ರತಿವಾರ ಅವನಿಗೆ ಬರೆದು ತಿಳಿಸುತ್ತಿದ್ದೆ. ಅವನೂ ಅದಕ್ಕೆ ಉತ್ತರ ಬರೆದು 'ನೋಡೋಣ' ಎಂಬರ್ಥದ ಆಶೆಯೊಂದನ್ನು ಪ್ರತಿಪತ್ರದಲ್ಲಿಯೂ ಸೇರಿಸುತ್ತಿದ್ದ. ನನ್ನ ಲಗ್ನದ ದಿನ ನಿಶ್ಚಯಿಸಿದ್ದರೂ ಅದನ್ನು ಅವನಿಗೆ ಬರೆದು ತಿಳಿಸಿದರೂ, ಆಗಲೂ 'ನೋಡೋಣ' ಎಂದೇ ಉತ್ತರ ಸಿಕ್ಕಿತು. ಕಡೆಗೊಮ್ಮೆ ನಿರುಪಾಯಳಾಗಿ 'ನೀನು ಯಾವುದಾದರೊಂದು ನಿಶ್ಚಿತವಾದ ಮಾತನ್ನು ಹೇಳದಿದ್ದರೆ, ನನ್ನ ಮನಸ್ಸಿಗೆ ತಿಳಿದುದನ್ನು ನಾನು ಮಾಡಲು ಸಿದ್ಧಳಿರುವೆ' ಎಂದು ಬರೆದೆ. ಅವನು ಬಂದೇ ಬಿಟ್ಟ. ಮನೆಯಲ್ಲಿ ಅಮ್ಮ ಕೇಳಿದಳು. :

'ಏನು, ಶ್ರೀಕಾಂತ! ಈಗ ಕಾಲೇಜಿಗೆ ರಜೆಯೇನೂ ಇಲ್ಲವಷ್ಟೆ? ಏತಕ್ಕೆ ಬಂದೆ? ಮೈಯಲ್ಲಿ ನೆಟ್ಟಗಿಲ್ಲವೆ? ಏನೇ ಇರಲಿ, ಬಂದುದು ಒಂದು ರೀತಿಯಿಂದ ಜೆನ್ನಾಗಿಯೇ ಆಯಿತು; ಇನ್ನು ೧೦-೧೨ ದಿನಗಳಲ್ಲಿ ಸುನಂದೆಯ ಲಗ್ನ ಬಂತು! ಪತ್ರ ಬರೆದು ಕರೆಯಿಸಿಕೊಳ್ಳಬೇಕೆಂದಿದ್ದೆವು. = ಬಂದೇ ಬಿಟ್ಟೆಯಲ್ಲ! ಅಲ್ಲಿಯವರೆಗೆ ಇದ್ದು ಲಗ್ನ ಮುಗಿಸಿಕೊಂಡೇ ಹೋಗಿ ಬಿಡು!'

ಆಗ ಅವನಿಗೆ ಏನೆನಿಸಿತೋ ನನಗೆ ತಿಳಿಯದು. ಇಬ್ಬರೂ ಕೂಡಿ ಮರುದಿನ ವಿಚಾರ ಮಾಡಿ, ಕೊನೆಗೆ ನಿರುಪಾಯರಾಗಿ ಇಬ್ಬರೂ ಅಮ್ಮನನ್ನು ಕರೆದು ಈ ವಿಷಯ ತಿಳಿಸಿದೆವು. ಅವಳು ಹೇಳಿದಳು:

'ನೊದಲಾದರೂ ಹೇಳಬಾರದಿತ್ತೆ? ಈಗೇನು ಮಾಡುವುದದೆ? ಎಲ್ಲ ನಿಶ್ಚಯವಾಗಿದೆ! ಇದರಲ್ಲಿ ನಾನೇನು ಮಾಡುವುದು? ಅವರಿದ್ದಾರೆ!'

'ಏನಾದರೂ ಮಾಡಿ ಈ ಲಗ್ನವನ್ನು ಸುಳ್ಳುಮಾಡದಿದ್ದರೆ ಖಂಡಿತ ಉಳಿಯಲಾರೆ!' ಎಂದು ಗಟ್ಟಿಯಾಗಿ ಅಂದು ಹೇಳಿದೆನಾದರೂ ಇನ್ನೂ ಜೀವದಿಂದ ಇದ್ದೇನೆ. ಅಮ್ಮ ಪಂದೆಯವರಿಗೆ ಹೇಳಿದಳೆಂದು ತೋರುತ್ತದೆ; ಆದರೆ ಏನೂ ಪ್ರಯೋಜನವಾಗಲಿಲ್ಲ. ಶ್ರೀಕಾಂತನ ಮನೆಯವರಿಗೂ ಈ ಸುದ್ದಿ ತಿಳಿಯಿತು; ಅವರೂ ಹೆಚ್ಚಾಗಿ ಈ ವಿಷಯದಲ್ಲಿ ಮನಸ್ಸು ಹಾಕಲಿಲ್ಲ. ಅವರಾದರೂ ತಮ್ಮ ಸೊಸೆಯೆಂಬ ಅಧಿಕಾರದಿಂದ ಬಲವಂತ ಮಾಡಿ ಲಗ್ನ ಮಾಡಿಕೊಂಡಿದ್ದರೆ, ನಾನು ಹೀಗಿರುತ್ತಿದ್ದೆನೆ? ನನ್ನ ಸ್ವಾಮಿ ತಲೆಕೆಟ್ಟು ತಿರುಗುತ್ತಿದ್ದನೆ? ನಾನೊಬ್ಬಳೇ ಆಗ ಧೈರ್ಯಮಾಡಿದೆ; ಅವನು ಮಾಡಲಿಲ್ಲ. ಮನೆ, ಮಠ, ಕಾಲೇಜು ಮತ್ತು ಜಗತ್ತು ಎಲ್ಲವನ್ನೂ ತೊರೆದು ನನ್ನನ್ನು ಹಿಂಬಾಲಿಸಲು ಹಿಂದು ಮುಂದು ನೋಡಿದ. ಅವನು ಹೇಡಿ! ತನ್ನ ಹೇಡಿತನಕ್ಕಾಗಿ ತನ್ನ ಜೀವನ ಹಾಳುಮಾಡಿಕೊಂಡ; ನನ್ನ ದನ್ನೂ ಮಣ್ಣುಗೂಡಿಸಿದ. ಲಗ್ನದ ದಿನವೂ ಬಂದಿತು. ಅವನು ಮನೆಯಲ್ಲಿಯೆ ಇದ್ದ. ಗಂಡುಸಾಗಿ ಹುಟ್ಟಿ ಒಂಚಾದರೂ ಉಪಾಯ ಯೋಚಿಸಲಿಲ್ಲ; ಏನನ್ನೂ ಸೂಚಿಸಲಿಲ್ಲ. ನನಗೆ ಅವನ ಮೇಲೆ ಮಿತಿಮೀರಿದ ಕೋಪ ಬಂತು. ಹಿಂದಿನ ದಿನ ಅವನ ಹತ್ತಿರ ಸುಳಿಯಲೇ ಇಲ್ಲ. ಲಗ್ನನ ಸಡಗರದಲ್ಲಿ ತನ್ನನ್ನು ಮರೆತಳೆಂದು ತಿಳಿದಿದ್ದರೂ ತಿಳಿದಿರಬೇಕು. ಇಡಿ ರಾತ್ರಿ ಕಣ್ಣೀರು ಹಾಕುವುದೇ ನನ್ನ ಕೆಲಸವಾಗಿತ್ತು. ಕೊನೆಯ ಸಲವೆಂದು ಅಮ್ಮನನ್ನು ಪ್ರಾರ್ಥಿಸಿಕೊಂಡೆ; ಸಾಧ್ಯವಾಗಲಿಲ್ಲ. ಆದ ದ್ದಾಗಲೆಂದು ಹಾಗೆಯೆ ಹಾಸಿಗೆಯಲ್ಲಿ ಕೆಲವು ಗಂಟೆ ಉರುಳಾಡಿದೆ. ನಾಲ್ಕು ಘಂಟೆ ರಾತ್ರಿಯಾಗಿತ್ತು. ಮನೆಯಲ್ಲಿ ಎಲ್ಲರೂ ಎದ್ದಿದ್ದರು. ಮದುವೆಯ ಮಂಗಲವಾದ್ಯವು ಮೊಳಗುತ್ತಿತ್ತು. ಎಲ್ಲರೂ ಗಡಿಬಿಡಿಯಿಂದ ಕೆಲಸದಲ್ಲಿ ತೊಡಗಿದ್ದರು. ಹಿಂದಿನ ದಿನ ರಾತ್ರಿಯಲ್ಲಿಯೆ, ಮದುಮಗನ ಕಡೆಯವರು ಬಂದಿದ್ದರಂತೆ. ಬೆಳಗಾಯಿತೆಂದರೆ ನನ್ನ ಕೊರಳಲ್ಲಿ ಮಂಗಲಸೂತ್ರವು ಮಂಗಲವಾಗಿ ಮೆರೆಯಲಿದ್ದಿತು. ಆದರೆ ಅದು ಶ್ರೀಕಾಂತ ಕಟ್ಟಿದುದಲ್ಲ; ಅದಾವನೋ ಅಧಿಕಾರವಿಲ್ಲದವನು ಕಟ್ಟಿದುದು. ಏನೋ ವಿಚಾರ ಹೊಳೆಯಿತು. ಹಾಸಿಗೆಯಿಂದ ಚಟಕ್ಕನೆ ಎದ್ದು, ನನ್ನ ಆಭರಣಗಳನ್ನೆಲ್ಲ ಮೈಮೇಲಿಂದ ಬಿಚ್ಚಿ ಒಂದು ವಸ್ತ್ರದಲ್ಲಿ ಕಟ್ಟಿದೆ. ಆ ವಸ್ತ್ರದ ಗಂಟನ್ನೂ ನಾಲ್ಕಾರು ಸೀರೆಗಳನ್ನೂ ನನ್ನ ಹ್ಯಾಂಡ್‌ಬ್ಯಾಗಿನಲ್ಲಿ ಹಾಕಿಕೊಂಡೆ. ಶ್ರೀಕಾಂತನ ಕೋಣೆಗೆ ಹೋಗಿ ಅವನನ್ನು ಎಬ್ಬಿಸಿ ಬಾಗಿಲನ್ನು ತೆಗೆಯಿಸಿ ಒಳಗೆ ಹೋದೆ. ಅವನು ದೀಪ ಹಚ್ಚಹೋದ; ನಾನು ಹಚ್ಚಗೊಡಲಿಲ್ಲ. ತಂದ ಸಾಮಾನನ್ನು ಮೂಲೆಯೊಂದರಲ್ಲಿ ಇಟ್ಟು, ಅವನ ಪಾದಗಳನ್ನು ಬಿಗಿಯಾಗಿ ಹಿಡಿದುಕೊಂಡು, ನನ್ನ ಕೊನೆಯ ಪ್ರಾರ್ಥನೆಯನ್ನು ಮನ್ನಿಸ ಬೇಕೆಂದು ಬೇಡಿಕೊಂಡೆ. ಅವನಿಗೂ ದುಃಖವಾಗಿತ್ತು. ನನ್ನನ್ನು ತಬ್ಬಿಕೊಂಡು ಅತ್ತು ಬಿಟ್ಟ. ನಾನೇ ಮಾತಿಗೆ ಮೊದಲುಮಾಡಿದೆ:

'ಏಳು! ಬೆಳಗಾಯಿತೊ, ನಾವಿಬ್ಬರೂ ಬೇರೆ ಬೇರೆ ಆದಂತೆಯೆ! ಹಾಗೆ ಆದಲ್ಲಿ ನಾನು ಸರ್ವಥಾ ಪ್ರಾಣದಿಂದಿರಲು ಸಾಧ್ಯವಿಲ್ಲ. ನಿನಗೆ ಯಾವ ಉಪಾಯ ತೋಚದಿದ್ದರೂ ನನಗೊಂದು ಉಪಾಯ ತೋಚಿದೆ. ಅದು ಭಯಂಕರವಿದೆ. ಹಾಗೆ ಮಾಡದಿದ್ದರೆ ನಡೆಯುವಂತಿಲ್ಲ. ನೀನು ಆದಕ್ಕೆ ಸಿದ್ಧನಾಗಲೇ ಬೇಕು. ಇದು ನನ್ನ ಆಗ್ರಹದ ವಿನಂತಿ. ಏಳು, ಬೆಳಗಾಗುವುದರಲ್ಲಿ—ಯಾರಿಗೂ ತಿಳಿಯದಂತೆ—ನಡೆದು, ಇಲ್ಲಿಂದ ದೂರ ಹೋಗಿಬಿಡೋಣ! ಎಲ್ಲಿಗಾದರೂ ಹೋಗಿ ಇರೋಣ! ಸಧ್ಯಕ್ಕೆ ನನ್ನ ಆಭರಣ ಮಾರಿ ಕಾಲಕಳೆಯುವುದು; ಮುಂದೆ ನೀನು ಯಾವುದಾದರೊಂದು ಕೆಲಸ ಹುಡುಕುವೆಯಂತೆ! ಕೆಲಸ ಸಿಕ್ಕರೆ ಸರಿ; ಇಲ್ಲವಾದರೆ ನಾಲ್ಕುದಿನ ಚೆಕ್ಕಂದದಿಂದ ನಲಿದಾಡಿ, ಒಂದುದಿನ ದೊಪ್ಪನೆದಾದ ಗುಡ್ಡದ ಶಿಖರವನ್ನು ಏರಿ, ಕೈ ಕೈ ಹಿಡಿದುಕೊಂಡು ಬಳಯಲ್ಲಿಯ ಕೊಳ್ಳದಲ್ಲಿ ಹಾರಿ ಪ್ರಾಣಕೊಟ್ಟು ಬಿಡೋಣ! ವಿಚಾರವೇನೋ ಅತಿ ಭಯಂಕರವಾಗಿದೆ; ಆದರೆ ಅವರಂತೆ ನಡೆಯದಿದ್ದರೆ ನಿರ್ವಾಹವೇ ಇಲ್ಲ!' ಈಗ ಶ್ರೀಕಾಂತ ತಳಮಳಿಸಿದ. ನಾವಿಗೆ ಅಂಜಿದನೆಂದು ತೋರುತ್ತದೆ. ಹಾಗೆಯೇ 'ಸುನಂದಾ' ಎಂದ. ನನ್ನ ಮಾತಿಗೆ ಯಾವ ಉತ್ತರವನ್ನೂ ಕೊಡಲಿಲ್ಲ, ಹೊರಡಲು ಸಿದ್ಧನೂ ಆಗಲಿಲ್ಲ. ನಾನು ಎಷ್ಟು ಒತ್ತಾಯ ಪಡಿಸಿದರೂ, ಕಣ್ಣೀರು ಕರೆಯುತ್ತ ತಪಸ್ಸನಾಚರಿಸುವ ಯತೀಶ್ವರನಂತೆ ಹಾಗೆಯೆ ಹಾಸಿಗೆಯ ಮೇಲೆ ಕುಳಿತಿದ್ದ. ಬೆಳ್ಳಗೆ ಬೆಳಗಾಯಿತು, ಲಗ್ನವೂ ಆಯಿತು ಆಗ ನಾನು ಸುಮಂಗಲೆಯೂ ಆದೆನು.....

× × × ×

"ಶ್ರೀಕಾಂತ ಬಿ. ಎಸ್ ಸಿ. ಪರೀಕ್ಷೆ ಪಾಸಾಗಿ ಒಮ್ಮೆ ಊರಿಗೆ ಬಂದ ಮೂರು ವರ್ಷ ಕಳೆದರೂ ನಾನು ಇನ್ನೂ ಮದುವೆಯ ಗಂಡನ ಮನೆಯನ್ನು ಕಂಡಿರಲಿಲ್ಲ. ಈಗಿಷ್ಟು ದಿನಗಳಂದ ನೋಡಿದ್ದೇನೆ; ನನ್ನ ಮದುವೆಯ ಪತಿದೇವನು– ನನಗೆ ಹಾಗೆನ್ನಲು ಮನಸ್ಸಿರದಿದ್ದರೂ ಜನರ ದೃಷ್ಟಿಯಿಂದ ಅವನು ನನಗೆ ಪತಿದೇವ—ನಿಜವಾಗಿಯೂ ಕರುಣಾಳು! ನಾನು ಮೂರು ವರ್ಷ ತವರುಮನೆಯಲ್ಲಿದ್ದರೂ ನನ್ನ ಇಚ್ಛೆಯ ವಿರುದ್ಧ ತನ್ನ ಮನೆಗೆ ಕರೆಮೊಯ್ಯಲು ಇಚ್ಛಿಸಲಿಲ್ಲ. ಲಗ್ನ ಸಮಯದಲ್ಲಿ, ಕಂಡಕಂಡವರ ಕಾಲು ಬಿದ್ದು ಬೇಡಿಕೊಳ್ಳದೆ, ಅವರೊಬ್ಬರ ಕಾಲುಗಳನ್ನು ಹಿಡಿದು ನಿಜಸಂಗತಿ ತಿಳಿಸಿ ಬೇಡಿಕೊಂಡಿದ್ದರೆ, ಕೆಲಸ ಸಾಧಿಸಿಬಿಡುತ್ತಿತ್ತು. ಅವರಲ್ಲಿ ಸುಶಯವಿಲ್ಲ. ಸ್ವತಃ ಅವನೇ ನಿಂತು ನಮ್ಮಿಬ್ಬರ ಲಗ್ನ ಮಾಡುತ್ತಿದ್ದರು. ಅವರ ಸ್ವಭಾವ ಅಷ್ಟು ಒಳ್ಳೆಯದು. ಅಂಥವರೂ ಇಂದು ನನಗೆ ಹೆಸರಿಗೇನೋ ಪತಿದೇವರು, ಆದರೆ ನಿಜವಾಗಿಯೂ ನನಗೆ ಬಂಧುಸಮಾನರು! ಶ್ರೀಕಾಂತ ಊರಿಗೆ ಬಂದಾಗ ನಾನು ಹಿಗ್ಗಿದೆ. ಅವನ ಮೇಲೆ ಅಪಾರವಾದ ಕೋಪವಿದ್ದರೂ ಮನಸ್ಸಿನಲ್ಲಿ ಎಷ್ಟೋ ಸಹಾನುಭೂತಿಯಿತ್ತು. ಅಂತೆಯೇ ಅವನನ್ನು ಕಂಡಾಗ, ತೋರಿಕೆಯ

ಕೋಪವು ಮಾಯವಾಯಿತು. ಅವನು ಅದೆಷ್ಟೋ ಪತ್ರ ಬರೆದಿದ್ದ. ಅವನಿಗೇಕೆ ಪುನಃ ಪುನಃ ಪತ್ರ ಬರೆದು ದುಃಖ ಕೊಡಬೇಕೆಂದು ನಾನು ಒಂದಕ್ಕೂ ಉತ್ತರ ಬರೆದಿರಲಿಲ್ಲ. ಮೂರು ವರ್ಷಗಳ ನಂತರ, ನನ್ನ ಹೃದಯಸೀತದಲ್ಲಿಯ ದೇವನನ್ನು ನಾನು ಪ್ರತ್ಯಕ್ಷ ಕಂಡೆನಾಗ, ಮನಸ್ಸಿಗೆ ಅತಿ ದುಃಖವಾಯಿತು. ಸೊರಗಿ ಕಡ್ಡಿಯಾಗಿದ್ದ. ಅವನ ದುಂಡಾನೆಯ ಮೈಕಟ್ಟು ಮೂಳೆಗಳೆದ್ದು ಅತಿ ಅಸಹ್ಯವಾಗಿ ತೋರುತ್ತಿತ್ತು. ಮುಖದ ಮೇಲೆ ಹಿಂದಿನ ತೇಜಸ್ಸು ಓಜಸ್ಸು ಯಾವುದೂ ಇಲ್ಲ. ಕಣ್ಣುಗಳು ಗುಡ್ಡೆಸೇರಿದ್ದುವು. ಹಿಂದಿನ ಯಾವ ಸಂಗತಿಯನ್ನೂ ಇಂದು ತೆಗೆಯಲಿಲ್ಲ. ನಾಲ್ಕಾರು ದಿನಗಳದ್ದು ಊರಿಗೆ ಹೊರಟೆ. ನನಗೆ ದುಃಖವಾಗಿ 'ನಾನೇ ನನ್ನ ದೇವನ ಹಿಂದೆ ನಡೆದು, ಅವನ ಸುಖದುಃಖ ನೋಡಿಕೊಳ್ಳಬೇ?' ಎನಿಸಿತು; ಆದರೆ ಅದಕ್ಕೆ ನಾನೇನೋ ಸಿದ್ಧಳಿದ್ದೇನೆ; ಆದರೆ ಅವನು! ಎಲ್ಲ ಜನರ ವಿರುದ್ಧ ನಡೆಯಲು ಅತನಿಗೆ ಮನಸ್ಸಿರಲಿಕ್ಕಿಲ್ಲ; ಹಾಗೆ ಮಾಡಿ ನಾನು ಇನ್ನಿಷ್ಟು ದುಃಖಕೊಟ್ಟರೆ ಯಾವ ನ್ಯಾಯ! '—ಎಂದು ಮನದಲ್ಲಿ ಯೋಚಿಸಿ, 'ದೇವನು ಎಲ್ಲಿಯಾದರೂ ಸುಖದಿಂದ ಇದ್ದರೆ ಸಾಕು; ನನ್ನ ಜೀವನ ಕೆಟ್ಟರೆ ಅವನದೂ ಏಕೆ ಕಾಳಾಗಬೇಕು? ಅವನು ಸುಖದಿಂದಿದ್ದರೆ ನಾನು ಸುಖದಿಂದಿದ್ದಂತೆಯೆ! ಲಗ್ನವಾದ ಮೇಲೆ, ಬಂದನಳ ಕಂಕಣಬಲದಿಂದ ದೇವಾರ್ಚೋಗ್ಯವನ್ನು ಕಾಪಾಡಿಕೊಂಡು ನೆಮ್ಮದಿಯಿಂದ ಇರಬಹುದು!' ಎಂದು ತಿಳಿದು ಅವನಿಗೆ ಸೂಚಿಸಿದೆ:

'ನೀನು ಹೀಗೆ ಒಬ್ಬಂಟಿಗನಾಗಿದ್ದರೆ ನಿನ್ನ ಸ್ಥಿತಿ ಇನ್ನೂ ಕೆಡುವ ಸಂಭವವಿದೆ; ನಿನ್ನ ಈ ಸ್ಥಿತಿ ಸುಧಾರಿಸಿಕೊಳ್ಳಲಿಕ್ಕೆ ಒಬ್ಬ ಸಂಗಾತಿ ಅವಶ್ಯ! ಇದಕ್ಕಾಗಿ ನೋಡಿ ಒಳ್ಳೆಯ ಬಂದು ಕನ್ನೆಯನ್ನು ಲಗ್ನವಾಗು!' ಶ್ರೀಕಾಂತ ತಕ್ಷಣವೇ ಹೇಳಬಿಟ್ಟ. ಅವೇ ಅವನ ಪ್ರೇಮ ಭರಿತ ಕೊನೆಯ ಪಾಣಿಗಳನ್ನು ನಾನು ಕೇಳಿದುದು. ಅಂತಹ ನುಡಿಗಳನ್ನು ಇಂದು ಅವನಾಡನು:

'ನುಸುಂಪಾ, ನೀನು ದೇವಿ, ದೇವಿಯನ್ನು ಕೈ ಬಿಟ್ಟವೇಲೆ ನನ್ನ ಪಾಡೇನು? ಲಗ್ನವಾಗೆಂದು ಹೇಳುತ್ತಿಯಲ್ಲಾ! ಹೇಳಲಿಕ್ಕೆ ಮನ ಸ್ವಾದರೂ ಹೇಗೆ ಬಂತು? ಅದರಲ್ಲಿಯೂ ಒಳ್ಳೆಯ ಕನ್ನೆಯರ ಬೇಕೆನ್ನುವೆ; ನಿನ್ನಂತಹ ಕನ್ನೆಯನ್ನು ಬಿಟ್ಟವೇಲೆ ಬೇರೆ ಒಳ್ಳೆಯ ಕನ್ನೆಯರು ಸಿಕ್ಕುವರೆ? ಲಗ್ನ ಯಾರಿಗೆ? ನನಗೇತಕ್ಕೆ ಲಗ್ನ!!!'

ಅವನ ಮಾತಿನಲ್ಲಿ ನಿರಾಶೆಯ ಕಠೋರತೆಯಿತ್ತು. ನನಗೆ ಅತಿ ದುಃಖವಾಗಿ, ಅತ್ತು ಅವನ ಪಾದಧೂಳಿಯನ್ನು ನನ್ನ ತಲೆಯ ಮೇಲಿಟ್ಟುಕೊಂಡು ಅವನನ್ನು ಆಗ ಬೀಳ್ಕೊಟ್ಟೆ. ಎಷ್ಟು ದಿನ ತವರ ಮನೆಯಲ್ಲಿರುವುದೆಂದು ಗಂಡನ ಮನೆ ಸೇರಿದೆ. ತವರು ಮನೆಯವರ ಒತ್ತಾಯವೂ ಇದಕ್ಕೆ ಕಾರಣವಾಯಿತು."

× × × ×

"ಎಂಟು ಹತ್ತು ವರ್ಷಕಳೆದುವು. ಈ ಅವಧಿಯಲ್ಲಿ ನನ್ನ ದೇವನ ದರ್ಶನ ಒಮ್ಮೆ ಕೂಡ ಆಗಿರಲಿಲ್ಲ. ದಿನದಿನವೂ ಅವನ ನೆನಹು ಕೊರಗಿ ಸೊರಗಿ ಸಾಯಲಾಗಿದ್ದೆ. ಒಮ್ಮೆ ಅವನ ದರ್ಶನವಾದರೆ ಸಾಕೆಂದು ಮನೆಯ ದೇವರುಗಳೆಲ್ಲಕ್ಕೂ ಮುಡಿಪು ಕಟ್ಟಿದ್ದೆ. ದೇವರು ದಯತೋರಿಸಿದಂತೆ ಕಾಣುತ್ತದೆ. ಒಂದು ದಿನ ನನ್ನ ಆ ದೇವರು ಬೀದಿಯಲ್ಲಿ ಸಿಕ್ಕಿದ. ಆ ದಿನವೇ ಅವನನ್ನು ಕರೆತಂದು ಮನೆಯಲ್ಲಿ ಇಟ್ಟುಕೊಂಡಿದ್ದೇನೆ. ನನ್ನ ಮನೆಯ ಯಜಮಾನನೂ ಒಪ್ಪಿದ. ಎಲ್ಲ ಸಂಗತಿ ತಿಳಿಸಿದಮೇಲೂ ನನ್ನ ಗಂಡ ನಾನು ತಿಳಿದಂತೆ ರೇಗಿಗೆ ಏಳಲಿಲ್ಲ; ಹಾಗೆಯೆ ನಿಟ್ಟುಸಿರಿಟ್ಟು 'ಆದದ್ದಾಯಿತು; ಮುಂಚೆ ಹೋದ ಮಾತಿಗೆ ಚಿಂತಿಸಿ ಫಲವೇನು?' ಎಂದನು. ನನ್ನ ವಿರಹವ್ಯಥೆಯಿಂದ ಹಾಗಾಗಿರುವನೊ ಏನೊ ಎಂದು ಅದೆಷ್ಟೋ ಪರಿಯಾಗಿ ಕೇಳಿ ತಿಳಿಯಲಿಕ್ಕೆ ಯತ್ನಿಸಿದರೂ, ಅವನಿಂದ ಯಾವ ಉತ್ತರವೂ ಸಿಗಲಿಲ್ಲ. ಕಡೆಗೊಮ್ಮೆ ಲಜ್ಜೆಯನ್ನು ತೊರೆದು, ಎಂಥ ಪಾಪ ಬಂದರೂ ಬರಲೆಂದು ಮನದ ನಿಶ್ಚಯ ತಿಳಿಸಿದೆ!! 'ದೇವಾ, ನನ್ನ ಗಂಡನು ನಿಜವಾಗಿ ನನ್ನ ಸ್ವಾಮಿಯಲ್ಲ; ಅವನೆಂತು ನಿನ್ನ ಹೃದಯೇಶ್ವರಿಯ ಸ್ವಾಮಿಯಾಗಬಹುದು? ಮನುವೆಯಾದ ಮಾತ್ರಕ್ಕೆ ಸ್ವಾಮಿಯಾದಂತಾದನೇ? ನನ್ನ ಅವನ ಸಂಬಂಧ ಅಣ್ಣ-ತಂಗಿಯರ ಸಂಬಂಧವಿದ್ದಂತೆ ಇದೆ. ಎಂದೋ ನಿಶ್ಚಯಿಸಿದಂತೆ ಈ ದೇಹಕ್ಕೆ ನೀನೇ ಸರ್ವಾಧಿಕಾರಿಗಳು!' ಎಷ್ಟು ಪರಿಯಾಗಿ ಅತ್ತು ಕರೆದು ಬಿನ್ನವಿಸಿಕೊಂಡರೂ ಅವನಲ್ಲಿ ಯಾವ ಬದಲಾವಣೆಯಾದಂತೆ ಕಾಣಲಿಲ್ಲ. ಹಾಗೇ ಕಲ್ಲಿನಂತೆ ನಿಂತಿದ್ದನು. ಮೈಮೇಲಿನ ಬಟ್ಟೆ-ಬರೆಗಳೆಲ್ಲ ಹರಿದು ಹೊಲಸಾಗಿ ಹೋಗಿದ್ದುವು; ತಲೆ ಕೆದರಿ ಗಡ್ಡ-ಮೀಸೆಗಳು ಬೆಳೆದು ಅಸಹ್ಯವಾಗಿ ತೋರುತ್ತಿದ್ದನು. ಪೇಟೆಯಲ್ಲಿಂದ ಮರುದಿನ ಅವನಿಗಾಗಿ ಬಟ್ಟೆ-ಬರೆ ತರಿಸಿ, ಗಡ್ಡ-ಮೀಸೆಗಳನ್ನು ತೆಗೆಯಿಸಿ, ನೊದಲಿನಂತೆ ಅವನು ಸ್ವಲ್ಪಾದರೂ ಕಾಣುವಂತೆ ಮಾಡಿದ ನಂತರ, ಮನೆಗೆ ಡಾಕ್ಟರರನ್ನು ಕರೆದು ತೋರಿಸಿದ್ದಾಯಿತು. ಅವರು ಅವನ ತಲೆ ಕೆಟ್ಟಿದೆಯೆಂದು ಅಭಿಪ್ರಾಯ ಪಟ್ಟರು. 'ಹುಚ್ಚರ ಆಸ್ಪತ್ರೆಗೆ ಕಳಿಸಿದರೂ ಸಾಧ್ಯವಿಲ್ಲ ಪುನಃ ಗುಣವಾಗಲು; ಆದರೂ ಕಳಿಸಿನೋಡಿರಿ' ಎಂದರು. ಆದರೆ ಅವನನ್ನು ಅಗಲಲು ನನ್ನ ಮನಸ್ಸು ಒಪ್ಪಲಿಲ್ಲ. ಒಮ್ಮೆ ಕಳೆದು ಹೋದ ಧನ ಸಿಕ್ಕಿದೆ; ಈಗ ನಾನಾಗಿಯೆ ಅದನ್ನು ಕಳೆದುಕೊಂಡರೆ ಸಿಕ್ಕಲಿಕ್ಕಿಲ್ಲ; ಅದರಲ್ಲಿಯೂ ಗುಣವಾಗುವ ಲಕ್ಷಣಗಳಿಲ್ಲವೆಂದಮೇಲೆ ಆಸ್ಪತ್ರೆಗೆ ಕಳಿಸುವುದಾದರೂ ಏತಕ್ಕೆ? 'ನನ್ನ ಸ್ವಾಮಿ ಹೇಗೇ ಇದ್ದರೂ ನನಗೆ ಸ್ವಾಮಿ! ಅವನೇ ನನ್ನ ದೇವರು' ಎಂದು ಅವನನ್ನು ಎಲ್ಲಿಗೂ ಕಳಿಸಲಿಲ್ಲ. ಅಂದಿನಿಂದಲೂ ನನ್ನ ಹತ್ತಿರವೇ ಇದ್ದಾನೆ. ಎರಡು ಹೊತ್ತು ಊಟ ಮಾಡುವನು; ಮನಸ್ಸಿಗೆ ಬಂದರೆ ಬೀದಿ ಬೀದಿ ತಿರುಗಿ ಪುನಃ ಮನೆಗೆ ಬರುವನು, ಇಲ್ಲವಾದರೆ ಮಲಗಿ ನಿದ್ರೆ ಮಾಡುವನು. ನನ್ನ ದೇವರು ಹೇಗೆಯೆ ಇರಲಿ, ನನ್ನ ಹತ್ತಿರವೇ ಇದ್ದಾನೆ!! ನನ್ನ ಸ್ವಾಮಿ ಶ್ರೀಕಾಂತ!!!"

ಶ್ರೀರಂಗರ

ಸ್ವಲ್ಪದಲ್ಲಿ ಸ್ವಾರಸ್ಯ

(ವಿನೋದ ಪ್ರಚುರ ಹರಟೆಗಳು)

ಪ್ರಕಟವಾಗಿದೆ! ಬೇಗನೆ ನಿಮ್ಮ ಪ್ರತಿ ತರಿಸಿಕೊಳ್ಳಿರಿ!

ಹರಟೆಗಳ ತಂತ್ರನನ್ನು ಕುರಿತು ಸ್ವಾರಸ್ಯವಾಗಿ
ಬರೆದ ಮುನ್ನುಡಿಯನ್ನೊಳಗೊಂಡಿದೆ.

ಬೆಲೆ ೧-೦-೦

ರಂಗ-ಮುಂಗ ಪ್ರಕಾಶನ

C/o 'ಜಯಂತಿ' ಕಾರ್ಯಾಲಯ, ಧಾರವಾಡ

ನಾಲ್ಕೂ ನಿಟ್ಟಿನ ನೋಟ

ಇದೆ ಕೊನೆಯದಾಗಲಿ !

ಗಾಂಧಿ-ಜಿನ್ನಾ ಮಾತು.ಕತೆಗಳು ಮುರಿದು ಒಂದು ತಿಂಗಳ ಸಮಯವಾಯಿತು. ಬೇರೆ ಬೇರೆ ಮುಂದಾಳುಗಳೂ ಪತ್ರಿಕೆಗಳೂ ತಮ್ಮ ಅಭಿಪ್ರಾಯವನ್ನು ನಾನಾರೀತಿಯಾಗಿ ವ್ಯಕ್ತಪಡಿಸಿವೆ. ಮಾತುಕತೆ ಮುರಿದದ್ದನ್ನು, ಹೊರಗೆ ಕಾದು ನಿಂತ ಪತ್ರಿಕಾಕರ್ತರಿಗೆ ತಿಳುಹಿಸುವಾಗ 'ಇದರಿಂದ ಯಾರಿಗೂ ನಿರಾಶೆಬೇಡ, ಇದು ನಮ್ಮ ಪ್ರಯತ್ನದ ಕೊನೆಯಲ್ಲ' ಎಂದು ಜಿನಾಸಾಹೇಬರು ಸಾರಿದರು. ಆದರೆ ಇದು ಪ್ರಯತ್ನದ ಕೊನೆಯಲ್ಲವೆಂದು ಇಬ್ಬರೂ ಮುಂದಾಳುಗಳು ನಿಜವಾಗಿಯೆ ತಿಳಿದಿದ್ದರೆ, ಅವರು ವಸ್ತುಸ್ಥಿತಿಯನ್ನು ಒಪ್ಪಿಕೊಂಡು 'ಇದೇ ನಿಜವಾದ ಕೊನೆ, ಇನ್ನು ಮುಂದೆ ಇಂತಹ ಯತ್ನವನ್ನು ಸಹಸಾ ಮಾಡಬಾರದು' ಎಂದು ನಿಶ್ಚಯಿಸಿಕೊಳ್ಳಬೇಕೆಂದು ನಮ್ಮ ಸೂಚನೆ. ದೇಶದ ಮುಂದಾಳುತನದ ಗೌರವ, ದೇಶದ ಭವಿತವ್ಯತೆ, ಜನರ ಹಿತರಕ್ಷಣೆ, ಜನತೆಯ ಅಭಿಪ್ರಾಯ—ಇವೆಲ್ಲವುಗಳ ದೃಷ್ಟಿಯಿಂದಲೂ ಹೀಗೆ ನಿಶ್ಚಯಿಸುವುದೆ ಯೋಗ್ಯವಾದ ಮಾರ್ಗ—ಎಂದು ನಮ್ಮ ಅಭಿಪ್ರಾಯ. ಅದರಂತೆಯೆ ಈ ಇಬ್ಬರು ಮುಂದಾಳುಗಳ ಪ್ರಕಟವಾದ ಪತ್ರವ್ಯವಹಾರವನ್ನು ನೋಡಿದರೂ ನಮ್ಮ ಅಭಿಪ್ರಾಯಕ್ಕೆ ಪುಷ್ಟಿಯೆ ದೊರೆಯುವಂತಿದೆ.

ಉದ್ಧಟತನ ಇಲ್ಲವೆ ಬುದ್ಧಿಗೇಡಿತನ

ಪತ್ರವ್ಯವಹಾರವನ್ನು ಓದುವಾಗ ಒಂದು ಸಂಗತಿ ಕಣ್ಣೊತ್ತುವಂತಿದೆ. ಅದೆಂದರೆ, ಜಿನಾಸಾಹೇಬರಲ್ಲಿ ಹೊಣೆಗಾರಿಕೆಯ ಮುಂದಾಳತನಲ್ಲಿರಬೇಕಾದ ಗೌರವ ಇಲ್ಲ. ಎಲ್ಲದರಲ್ಲೂ ಗೆದ್ದೆನೆಂದು ತೋರಿಸಬೇಕೆಂಬ ಹುಡುಗ-ಮನೋವೃತ್ತಿಯೂ ಇದೆ. ದೃಷ್ಟಾಂತಕ್ಕಾಗಿ ಒಂದು ಮಾತನ್ನು ನೋಡಬಹುದು: 'ನೀವು ಯಾರ ಪ್ರತಿನಿಧಿ ಅಲ್ಲವೆಂಬುದು ನನಗೆ ದೊಡ್ಡ ತೊಡಕಾಗಿದೆ' ಎಂದು ಗಾಂಧಿಜಿಯವರಿಗೆ ಪ್ರತಿಯೊಂದು ಪತ್ರದಲ್ಲಿ ಜಿನಾ ಅವರು ಬರೆಯುತ್ತಾರೆ. ಸದ್ಯದ ಪರಿಸ್ಥಿತಿಯಲ್ಲಿ ತಾವು ಯಾರ ಪ್ರತಿನಿಧಿಯಾಗಿ ಮುಂದೆ ಬರುವುದಿಲ್ಲವೆಂದೂ ಆದರೂ ತಮ್ಮ ಎಲ್ಲ ವರ್ಚಸ್ಸನ್ನು ಪಯೋಗಿಸಿ ಕಾಂಗ್ರೆಸ್ಸನ್ನು ಒಲಿಸಲು ಯತ್ನಿಸುವರೆಂದೂ, ಕಳೆದ ಜೂನದಲ್ಲಿ ರಾಜಾಜಿಯವರ ಯೋಜನೆ ಪ್ರಕಟವಾದಂದಿನಿಂದ ಗಾಂಧಿಜಿಯವರು ಹೇಳುತ್ತಲಿದ್ದಾರೆ. ಹೀಗಿರುವಾಗ ಜಿನಾಸಾಹೇಬರಿಗೆ ಮೊನ್ನಿನವರೆಗೆ ಅದರ ಅರ್ಥವೆ ಆಗಿದ್ದಿಲ್ಲವೆ—ಅಥವಾ—ಒಪ್ಪಂದ ಬೇಡವೆಂಬ ತಮ್ಮ ಇಚ್ಛೆ ಹೊರಗೆಡಹಲಾರದಕ್ಕೆ ಈ ಮಾತಿನ ನೆವವನ್ನು ಮುಂದೆ ಚಾಚುತ್ತಿದ್ದರೆ? ಇಲ್ಲವೆ 'ಅಲ್ಪನಿಗೆ ಐಶ್ವರಿ ದೊರೆತ' ರೀತಿಯ ಉದ್ಧಟತನವೆ? ಗಾಂಧಿಜಿಯವರು ಪ್ರತಿನಿಧಿಯಲ್ಲವೆಂಬ ಮಾತು ತೊಡಕಾಗುತ್ತಿದ್ದರೆ ಮಾತುಕತೆಗೆ ಒಪ್ಪುವ ಆಗತ್ಯವಿದ್ದಿರಲಿಲ್ಲ; ತಮ್ಮ ವರ್ಚಸ್ಸನ್ನು ಉಪಯೋಗಿಸುವರೆಂಬ ಗಾಂಧಿಜಿಯವರ ಮಾತಿನಲ್ಲಿ ವಿಶ್ವಾಸವಿದ್ದರೆ 'ಪ್ರತಿನಿಧಿಯಲ್ಲದ್ದು ತೊಡಕು' ಎಂದು ಕೀಸರಾಗುವಂತೆ (ಗಾಂಧಿಜಿಯವರೆ ಕೊನೆಗೆ—ad nauseum ಎಂದು—ಹೀಗೆ ಹೇಳಿದರು) ಬರೆಯಬೇಕಾಗಿದ್ದಿಲ್ಲ. ಅದರೇನು? ಜಿನಾಸಾಹೇಬರು ವಕೀಲಿವೃತ್ತಿಯಲ್ಲಿ ಹೆಸರಾದವರು! ಯಾವ ಸಮಸ್ಯೆಯೂ ಅವರಿಗೆ ತಿಳಿಯುವಂತಿಲ್ಲ! ಇಡಿಯ ಜನ್ಮ ವಕೀಲರಾಗಿ ಒಂದೇ ಪಕ್ಷವನ್ನು ತಿಳಿದುಕೊಳ್ಳುವ ಸಂಕುಚಿತತೆಗೆ ಅವರ ಬುದ್ಧಿ ನಿಂತು ಬಿಟ್ಟಿದೆ! ಅದಕ್ಕೇ ಹೇಳಿದ್ದು, ಮುಂದಾಳಿಗೆ ಬೇಕಾದ ಹೊಣೆಗಾರಿಕೆ ಮತ್ತು ವಿಶಾಲದೃಷ್ಟಿ ಅವರಲ್ಲಿಲ್ಲವೆಂದು.

ಮೊದಲ ಹೆಜ್ಜೆಗೇ ಕಾಲು ಜಾರಿತು !

ಜಿನಾಸಾಹೇಬರ ಈ ಮನೋವೃತ್ತಿಗಾಗಿ ಮಾತುಕತೆ ವಿರಸ್ಯದಲ್ಲಿಯೆ ವ್ಯಾರಂಭವಾದುದು ಏನೂ ಆಶ್ಚರ್ಯವಲ್ಲ. 'ಭಾರತದ ಮುಸಲ್ಮಾನರು ಮತ್ತು ಅಖಿಲಭಾರತ ಮುಸ್ಲಿಂ ಲೀಗ್ ಇವರ ಪ್ರತಿನಿಧಿ ತಾನು' ಎಂದು ಜಿನಾ ಅವರು ಹೇಳಿಕೊಂಡದ್ದರಲ್ಲಿ ಔಚಿತ್ಯವೆ ಇಲ್ಲ. ಯಾಕೆಂದರೆ, ಸಂಸ್ಥಾನದ ಮುಸಲ್ಮಾನರಲ್ಲದೆ ಆರ್ಯಾವರ್ತ-ಮೋಮಿನ್ ಜಮಿಯತ್-ಉಲ್ ಉಲೇಮಾ-ಶಿಯಾ ಮುಂತಾದ ಅಖಿಲಭಾರತ ಮುಸ್ಲಿಂ ಸಂಸ್ಥೆಗಳು ಜಿನಾಸಾಹೇಬರ ಮುಂದಾಳುತನವನ್ನು ಒಪ್ಪುವದಿಲ್ಲ. ಮುಸ್ಲಿಂ ಲೀಗದಲ್ಲಿ ಕೂಡ ಕಾಂಗ್ರೆಸಿನಲ್ಲಿದ್ದಂತೆ ಕೆಳಗಿನಿಂದ ಪ್ರತಿನಿಧಿಗಳ ಚುನಾವಣೆ ಇದೆಯೊ ಇಲ್ಲವೊ ಸಂದೇಹ. ಇತ್ತ ಗಾಂಧಿಜಿಯವರು ಕಾಂಗ್ರೆಸ (ಎಲ್ಲ ಜಾತಿ ಮತ್ತು ಇಡಿಯ ದೇಶಕ್ಕೆ ಸಂಬಂಧಿಸಿದ) ಸಂಸ್ಥೆಗೆ ನಾಯಕರು; ಸಪ್ರು, ಶ್ಯಾಮಪ್ರಸಾದ ಮುಕರ್ಜಿ, ಶೀಖ ಮೊದಲಾದ ಅಲ್ಪ ಸಂಖ್ಯಾತ ಸಮಾಜಗಳ ಮುಂದಾಳುಗಳು—ಇವರೆಲ್ಲರೂ ಗಾಂಧಿಜಿಯವರನ್ನು ಮುಂಚೆ ಭೆಟ್ಟಿಯಾಗಿದ್ದಾರೆ. ಇಷ್ಟಿದ್ದರೂ ಗಾಂಧಿಜಿಯವರು ತಾನು ಯಾರ ಪ್ರತಿನಿಧಿಯೂ ಅಲ್ಲವೆಂದು ಹೇಳಿದರು; ಯಾಕೆ? ದಾಸ್ಯದಲ್ಲಿದ್ದ ದೇಶದ ದುರ್ದೈವವದು. ಬೇಕಾದವನೊಬ್ಬನೆದ್ದು 'ಇವರು ನಮ್ಮ ಪ್ರತಿನಿಧಿಯಲ್ಲ' ಎಂದು ಹೇಳಬಹುದಾಗಿದೆ ಈ ದೇಶದಲ್ಲಿ. ಅದರಿಂದ ಅಪಪ್ರಚಾರವನ್ನು ಮಾಡಲು ಬಯಸಿದವರಿಗೆ ಉಪಕಾರವೆ ಆಗುವುದು. ಈ ಅನಿಷ್ಟವೆ ಬೇಡ ಎಂದು ಗಾಂಧಿಜಿಯವರು ಪ್ರತಿನಿಧಿತ್ವದ ಮಾತನ್ನು ಬಿಟ್ಟುಕೊಟ್ಟದ್ದು. ಜಿನಾಸಾಹೇಬರಿಗೆ ಇಂತಹ ವಿಶಾಲದೃಷ್ಟಿ ಇರುವುದು ಹೇಗೆ? ಒಂದು ವೇಳೆ ಒಪ್ಪಂದವಾಗಿದ್ದರೆ ಎಲ್ಲ ಮುಸಲ್ಮಾನರನ್ನು ಒಲಿಸುವ ಹೊಣೆಯನ್ನು ಜಿನಾ ಅವರು ಹೊರುತ್ತಿದ್ದರೆ? ಹೊರುವೆನೆಂಬ ಒಣ ಹೆಮೆಯಿದ್ದರೂ ಇದು ಶಕ್ಯವಿರಲಿಲ್ಲ ಎಂಬುದು ಮೇಲೆ ಕಾಣಿಸಿದ ಮಾತಿನಿಂದ ಸ್ಪಷ್ಟವಾಗುವುದು.

ಇಬ್ಬರ ಹಾದಿಯೆ ಬೇರೆ !

ಇದಲ್ಲದೆ ಜಿನಾಸಾಹೇಬರ ಮೊದಲ ಪತ್ರದಲ್ಲಿಯೆ (೧೦-೯-೧೯೪೪) "ಹಿಂದು ಮತ್ತು ಮುಸಲ್ಮಾನ ಇವೆರಡೂ ಎರಡು ಭಿನ್ನ 'ರಾಷ್ಟ್ರ'ಗಳು ಮತ್ತು ಹಿಂದು-ಮುಸ್ಲಿಂ ಪ್ರಶ್ನೆ ಬಗೆಹರಿಯದೆ ಸ್ವಾತಂತ್ರ್ಯ ದೊರೆಯುವುದಿಲ್ಲ" ಎಂಬ ಅಭಿಪ್ರಾಯವಿದೆ ಈ ಅಭಿಪ್ರಾಯವನ್ನು ರಾಜಾಜಿ ಯೋಜನೆಯಾಗಲಿ ಗಾಂಧಿಜಿಯವರಾಗಲಿ ಮೊದಲು ಒಪ್ಪಿಲ್ಲ, ಮುಂದೂ ಒಪ್ಪಲು ನಿರಾಕರಿಸಿದರು. ಹಿಂದು ಮತ್ತು ಮುಸಲ್ಮಾನ ಇವು 'ರಾಷ್ಟ್ರ'ಗಳಲ್ಲ, ಇದಲ್ಲದೆ ಸ್ವಾತಂತ್ರ್ಯ ದೊರೆಯದ ಹೊರತು ಈ ಸಮಸ್ಯೆ ಬಗೆ ಹರಿಯುವಂತಿಲ್ಲ ಎಂದು ಗಾಂಧಿಜಿಯವರ ಅಭಿಪ್ರಾಯ! ಹೀಗಿರುವಾಗ ಇವರು ಭೆಟ್ಟಿಯಾದುದಾದರೂ ಯಾಕೆ—ಎಂದು ಅನೇಕರಿಗೆ ಆಶ್ಚರ್ಯವಾಗಬಹುದಾಗಿದೆ. 'ಹಿಂದುಸ್ತಾನದ ಮುಸಲ್ಮಾನರು ಎಲ್ಲ ದೃಷ್ಟಿಗಳಿಂದಲೂ ಪ್ರತ್ಯೇಕ ಜನಾಂಗ' ಎಂದು

ಜಿನಾಸಾಹೇಬರು ಹೇಳಿದರೆ, 'ಧರ್ಮಾಂತರಿಸಿದ ಮಾತ್ರಕ್ಕೆ ವಂಶಾನುವಂಶ ಹಿಂದೀಯತೆ (ಪರಂಪರೆ) ಹೋಗುವುದಿಲ್ಲ' ಎಂದು ಗಾಂಧಿಜಿಯವರ ವಾದ. 'ನಾವು ಒಂದು ಕುಟುಂಬದಂತೆ; ಅಗತ್ಯ ಕಂಡರೆ ಸ್ವಸಂತೋಷದಿಂದ ಸಾಲು ಮಾಡಿಕೊಳ್ಳೋಣ' ಎಂದು ಮಹಾತ್ಮರು ಹೇಳಿದರೆ, 'ನಾವು ಎರಡು ರಾಷ್ಟ್ರ; ಅಗತ್ಯವಿದ್ದರೆ ಒಪ್ಪಂದವನ್ನು ಮಾಡಿಕೊಳ್ಳೋಣ' ಎಂದು ಜಿನಾಸಾಹೇಬರ ಜಂಭ.

ಆಧಿಕಾರಲಾಲಸೆಯ ತೊಡಕು

ಮಾತುಕತೆಗಳು ಮುರಿದುದಕ್ಕೆ ಬೇರೊಂದು ಕಾರಣವಿದೆ, ಆ ಕಾರಣ ಇರುವನರೆಗೆ ಮಾತುಕತೆಗಳನ್ನು ನಡೆಸುವುದೆಂದರೆ ವೇಳೆಯ ಅಪವ್ಯಯ—ಹೊಣೆಗಾರಿಕೆಯ ದುರುಪಯೋಗ—ಎಂಬುದು ಒಂದು ಸಂಗತಿಯಿಂದ ಸ್ಪಷ್ಟವಾಗುವುದು. 'ಮುಸಲ್ಮಾನರಿಗೆ ಬೇಕಿದ್ದರೆ ಅವರು ಬೇರೆಯಾಗಲಿ; ಅದಕಾಗಿ ಮುಸಲ್ಮಾನರು ಅಖಂಡವಾಗಿ ಬಹುಸಂಖ್ಯಾಕರಾಗಿ ವಾಸವಾಗಿದ್ದ ಸ್ಥಳಗಳನ್ನು (Contiguous areas of Muslim majority) ಪ್ರತ್ಯೇಕಿಸೋಣ' ಎಂದೂ ಗಾಂಧಿಜಿಯವರು ಒಪ್ಪಿದರು. ಮುಸಲ್ಮಾನರ ಸ್ವಾತಂತ್ರ್ಯ, ಇಸ್ಲಾಂ ಸಂಸ್ಕೃತಿಯ ಹಿತರಕ್ಷಣೆ ಇದೇ ನಿಜವಾಗಿ ಜಿನ್ನಾಸಾಹೇಬರ ಉದ್ದಿಶ್ಯವಾಗಿದ್ದರೆ ಅವರು ಈ ಮಾತಿಗೆ ಒಪ್ಪಬಹುದಾಗಿತ್ತು. ಆದರೆ ಸಾಹೇಬರ ಉದ್ದೇಶವು ಅದಕ್ಕೂ ದೊಡ್ಡದಿದೆ. ಮುಸಲ್ಮಾನರ ಸ್ವತಂತ್ರ ರಾಷ್ಟ್ರ ಪಟ್ಟಿದೆ; ಮುಸಲ್ಮಾನರ ಸಾಮ್ರಾಜ್ಯ ಬೇಕಾಗಿದೆ....ಮುಸ್ಲಿಂ ಲೀಗಿನ ಸರ್ವಾಧಿಕಾರಿತ್ವಕ್ಕೆ! ಅದಕ್ಕಾಗಿ, ಮುಸಲ್ಮಾನರಿದ್ದ ಪ್ರದೇಶವಷ್ಟೆ ಸಾಲದೆ, ನೂರಕ್ಕೆ ಳಜ ರಷ್ಟು ಮುಸಲ್ಮಾನೇತರರಿದ್ದ ಪಂಜಾಬ್-ಬಂಗಾಲ-ಅಸಾಮು (ಈಗಿದ್ದ ಕ್ಷೇತ್ರದ) ಪ್ರಾಂತಗಳೂ ಬೇಕಿವೆ. ಇದು ದೊರೆಯಲಿಕ್ಕಿಲ್ಲ ಎಂದು ಅವರಿಗೇ ಸಂದೇಹ. ಅದು ದೊರೆಯದಿದ್ದರೆ ತಮ್ಮ ಅಧಿಕಾರಲಾಲಸೆಯನ್ನು ಬೇರೆ ರೀತಿಯಲ್ಲಿ ತೃಪ್ತಿಗೊಳಿಸಿಕೊಳ್ಳಲು ಹವಣಿಸಿದ್ದಾರೆ. ರಾಜಾಜಿಯವರ ಯೋಜನೆಯಂತೆ ಸದ್ಯಕ್ಕೆ ತಾತ್ಪೂರ್ತಿಕ ಭಾರತಸರಕಾರವನ್ನು ರಚಿಸಬೇಕೆಂಬ ಸೂಚನೆಗೆ ಜಿನಾಸಾಹೇಬರು 'ಆ ಸರಕಾರದಲ್ಲಿ ಮುಸಲ್ಮಾನರಿಗೆ ಎಷ್ಟು ಅಧಿಕಾರ?' ಎಂದು ನಿರ್ಣಯಿಸಿಕೊಳ್ಳುವ ದೃಷ್ಟಿಯಿಂದ ಸಂದೇಹಗಳನ್ನೆತ್ತಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಬೇಕೆಂಬ ಗಾಂಧಿಜಿಯವರ ದೃಷ್ಟಿ ಎತ್ತ, 'ನನ್ನಷ್ಟಕ್ಕೆ ಇದು ಬೇಕು-ಅದು ಬೇಕು' ಎಂಬ 'ಇಸ್ಲಾಮ'ದ ದೃಷ್ಟಿ ಎತ್ತ?

ಸಂಧಾನ ಸಾಧು

ಜಿನಾಸಾಹೇಬರು ಈ ಮನೋವೃತ್ತಿಯನ್ನು ತಾಳುವವರೆಗೆ ಸಂಧಾನದ ಯತ್ನಗಳೆಲ್ಲ ನಿರರ್ಥಕವಿಷ್ಟೇ ಅಲ್ಲ, ಅಪಾಯಕಾರಕ ಎಂದು ಹೇಳಬಹುದು. ಮಾತುಕತೆಗಳನ್ನು ಮುರಿದುಕೊಂಡು ಪರಸ್ಪರ ದೋಷಾರೋಪಣೆಗಳನ್ನು ಮಾಡುತ್ತ, ಈಗಾಗಲೆ ನಾವು ಬ್ರಿಟಿಶರ ಅಪಪ್ರಚಾರವನ್ನು ಪುಷ್ಟಗೊಳಿಸುತ್ತಲಿದ್ದೇವೆ. ಈ ಸ್ಥಿತಿಯನ್ನು ಮುಂದರಿಸಿ 'ಪ್ರಜಾಪ್ರಭುತ್ವದಸಂಸ್ಕೃತಿಯು ಇಂದಿನ ಕಾಲದಲ್ಲಿ ಜಗತ್ತಿನ ಅಪಹಾಸ್ಯಕ್ಕೆ ಗುರಿಯಾಗುವುದು ಬೇಡ. ಹಿಂದುಸ್ತಾನವು ಒಂದು ದೇಶವಿದೆ. ಆದರೊಳಗಿನ ಘಟಕಗಳ ಭಿನ್ನತೆಯನ್ನು ನಾವು ಒಪ್ಪೋಣ. ಮನೆ ಒಂದು; ಕಲ್ಲು, ಮಣ್ಣು, ಕಟ್ಟಿಗೆ, ಗಚ್ಚು—ಇವೆಲ್ಲ ಘಟಕಗಳು ಬೇರೆಬೇರೆ ವಸ್ತುಗಳೆಂದರೆ ಮನೆಯನ್ನು ಮುರಿಯಬೇಕೆಂದು ಅದರರ್ಥವಲ್ಲ. ಪರದೇಶದಿಂದ ಬಂದು ನೆಲಸಿದ ಪಾರ್ಸಿ ಜನರು ತಾವು ಹಿಂದುಸ್ತಾನಕ್ಕೆ ಹೊರತಾದ ಜನಾಂಗ ಎಂದು ಹೇಳಿಕೊಳ್ಳುವುದಿಲ್ಲ, ಧರ್ಮಾಂತರವನ್ನು ಹೊಂದಿದ ಮಾತ್ರಕ್ಕೆಯೆ ಲಕ್ಷಾವಧಿ ಭಾರತೀಯ ಕ್ರೈಸ್ತರು ಕಾವು ಭಾರತೀಯರಲ್ಲ ಎಂದು ಸಾರಿಲ್ಲ. ಮುಸಲ್ಮಾನರ ವಿಷಯದಲ್ಲಿಯೆ ಈ ಮಾತನ್ನು ಒಪ್ಪುವ ಅಗತ್ಯವಿದೆಯೆ? ಮುಸಲ್ಮಾನರನ್ನು ಈ ವಿಚಾರಕ್ಕೆ ಪ್ರೋತ್ಸಾಹಿಸುವುದು ಬುದ್ಧಿಮತ್ತೆಯ ಲಕ್ಷಣವೆ? ಇಂದಿನ ಜಿನ್ನಾರೊಡನೆ ಸಂಧಾನ ಶಕ್ಯವಿಲ್ಲ, ಸಂಧಾನದ ಯತ್ನವೆಂದರೆ ದುರ್ಬುದ್ಧಿಗೆ ಪ್ರೋತ್ಸಾಹ ಮಾತ್ರ. ಆದುದರಿಂದ ಸಂಧಾನ ಸಾಕು.

ಸಮಸ್ಯೆ ಇಲ್ಲ, ಆಧಿಕಾರವೂ ಇಲ್ಲ

ಈ ಮಾತಿನ ಮಹತ್ತ್ವವನ್ನು ಲಕ್ಷ್ಯದಲ್ಲಿಟ್ಟು, ಪತ್ರವ್ಯವಹಾರದ ದೃಷ್ಟಿಯಿಂದ ಜಾತೀಯ ಸಮಸ್ಯೆಯನ್ನು ಕೂಲಂಕಷವಾಗಿ ಚರ್ಚಿಸಬೇಕೆಂದಿದ್ದ ನನ್ನ ವಿಚಾರವನ್ನು ಬಿಟ್ಟುಕೊಟ್ಟಿದ್ದೇವೆ. ಜಾತಿಜಾತಿಗಳಲ್ಲಿ ಅವಿಶ್ವಾಸ-ವೈಮನಸ್ಯಗಳಿದ್ದರೆ ಅದನ್ನು ಚರ್ಚಿಸಬಹುದು; ವಿಶ್ವಾಸವನ್ನೂ ಸೌಹಾರ್ದವನ್ನೂ ಹುಟ್ಟಿಸುವಂತೆ ಯೋಜಿಸಬಹುದು; ದೇಶದ ಆಂತರಿಕ ಪ್ರಶ್ನೆ ಎಂದು ಅದನ್ನು ಬಿಡಿಸಲು ಎಲ್ಲ ಯತ್ನಗಳನ್ನು ಮಾಡಬಹುದು. ಆದರೆ ದೇಶವನ್ನು ವಿಚ್ಛೇದಿಸುವುದು ಜಾತೀಯ ಸಮಸ್ಯೆ ಎನ್ನಿಸದು, ವಿಜಾತೀಯ ಸಮಸ್ಯೆ ಎನ್ನಿಸುವುದು. ಅಂತಹ ಸಮಸ್ಯೆ ನನ್ಮಲ್ಲಿದೆ ಎನ್ನಲು ಜಿನಾ ಅವರಿಗೆ ಅಧಿಕಾರವಿಲ್ಲ, ಆಯಾ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರಿಗೆ ಮಾತ್ರ ಇದೆ. ಈ ಮಾತನ್ನೂ ಜಿನಾ ಸಾಹೇಬರು ಒಪ್ಪಿಲ್ಲ, ಒಪ್ಪುವವರೆಗೆ ಅವರೊಡನೆ ಮಾತುಕತೆಗಳಿಂದ ಲಾಭವೂ ಇಲ್ಲ. 'ನಿಮ್ಮೊಡನೆ ಮತ್ತೈಕ್ಯ ಶಕ್ಯವಾಗದಿದ್ದರೆ ಕೂಡಿ ಕೆಲಸ ಮಾಡಲು ಇಚ್ಛೆಯಿದ್ದ ಮಿಕ್ಕೆ ಎಲ್ಲ ಪಕ್ಷಗಳನ್ನು ಸ್ವಾತಂತ್ರ್ಯಯುದ್ಧಕ್ಕಾಗಿ ಸಂಘಟಿಸುವೆ' ಎಂದು ಮಹಾತ್ಮರು ತಮ್ಮ ಒಂದು ಪತ್ರದಲ್ಲಿ ಕಾಣಿಸಿದ್ದಾರೆ. ಇದೇ ಮಾತಿನಂತೆ ಈಗ ಕಾರ್ಯವನ್ನು ಮುಂದುವರಿಸುವ ಅಗತ್ಯವಿದೆ ಎಂದು ಮಹಾತ್ಮರಿಗೆ ನಮ್ಮ ಸೂಚನೆ.

ಪ್ರಚಾರಕ್ಕಾಗಿ ಮರುಳು

'ಹಿಂದು-ಮುಸಲ್ಮಾನರ ಐಕ್ಯವಿಲ್ಲದೆ ಹಿಂದುಸ್ತಾನಕ್ಕೆ ಯುದ್ಧದ ತರುವಾಯದಲ್ಲಿ ಕೂಡ ಸ್ವಾತಂತ್ರ್ಯದ ಆಸೆ ಇಲ್ಲ' ಎಂದು ಹೇಳುವುದೊಂದು ವಾಡಿಕೆಯಾಗಿದೆ ಈಗ. ಆದರೆ ಮಹಾತ್ಮರೆ ಈ ಮಾತನ್ನು ಒಪ್ಪುವುದಿಲ್ಲವೆಂಬುದು ಸಂತೋಷದ ವಿಷಯವಾಗಿದೆ. 'ಮೊದಲು ಸ್ವಾತಂತ್ರ್ಯ, ಆ ಮೇಲೆ ಜಾತೀಯ ಒಡಂಬಡಿಕೆ' ಎಂದು ಗಾಂಧಿಜಿಯವರು ಲೀಗಿನ ಸರ್ವಾಧಿಕಾರಿಗೆ ಸ್ಪಷ್ಟವಾಗಿ ಬರೆದಿದ್ದಾರೆ. ಬ್ರಿಟಿಶರು ಈ ರೀತಿ ಪ್ರಚಾರ ಮಾಡಿ ಮಾಡಿ, ನಾವು ಕೂಡ ಅದನ್ನು ನಂಬುವಂತೆ ಮಾಡಿದ್ದಾರಲ್ಲದೆ, ಆ ಮಾತಿನಲ್ಲಿ ಸತ್ಯತೆಯು ಇಲ್ಲ ಬ್ರಿಟಿಶರು ಕೂಡ ಕೊನೆಯ ವರೆಗೂ ಆ ಮಾತಿಗೆ ಅಂಟಿಕೊಳ್ಳಲಿಕ್ಕಿಲ್ಲ. ಯುದ್ಧಾನಂತರದ ಜಗತ್ತಿನಲ್ಲಿ ದಬ್ಬಾಳಿಕೆಯಿಂದ ಹಿಂದುಸ್ಥಾನವನ್ನಾಳುವುದು ಬ್ರಿಟಿಶರಿಗೆ ಶಕ್ಯವಿಲ್ಲ, ಅಮೆರಿಕೆಗೆ ಹಿತಕರವಲ್ಲ. ಇದಲ್ಲದೆ, ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಕೊಡದಿದ್ದಲ್ಲಿ 'ಹಿಂದುಸ್ತಾನದ ಸೈನ್ಯ-ಸಾಮಗ್ರಿಗಳ ಸಹಾಯವು ಆಪಾರವಾಗಿದೆ, ಸ್ವಸಂತೋಷದ್ದಾಗಿದೆ' ಎಂದು ಒಂದೇ ಸನನೆ ಬ್ರಿಟಿಶರು ಹೇಳುತ್ತಿದ್ದುದು ಸುಳ್ಳೆನಿಸುವುದು, ಇಲ್ಲವೆ ಮೋಸವಾಗುವುದು. ಮುಸ್ಲಿಂ ಲೀಗವು ಇದೇ ದುರಹಂಕಾರದ ನಿಷ್ಠುರ ಧೋರಣವನ್ನು ತಳೆದರೆ, ಬ್ರಿಟಿಶರಿಗೆ ಅದೊಂದು ನೆವವಾಗುವುದು. ನಿಜವಿದ್ದ ಮಾತೆಂದರೆ, ಹಿಂದುಸ್ತಾನದ ವಿಚ್ಛೇದವು ಬ್ರಿಟಿಶರಿಗೆಯೆ ಬೇಕಿಲ್ಲ. ಹಿಂದುಸ್ತಾನವು ಸ್ವತಂತ್ರವಾದರೂ ತನ್ನೊಡನೆ ವ್ಯಾಪಾರವನ್ನು ವಿಶೇಷವಾಗಿ ಬೆಳೆಸಬಹುದೆಂಬ ಆಶೆ ಇದೆ ಇಂಗ್ಲಂಡಕ್ಕೆ.

ಸಾದರ ಸ್ವೀಕಾರ

೮೧ ಡೊಂಕುಬಾಲ (ವಿಡಂಬಕ ಲೇಖನಸಂಗ್ರಹ). ಲೇಖಕರು ಶ್ರೀಮಾನ್ ನಾ. ಕಸ್ತೂರಿ ಅವರು. ಧಾರವಾಡದ ಲಲಿತಸಾಹಿತ್ಯ ಮಾಲೆಯ ೯ನೆಯ ಕುಡಿ. ಕ್ರಾ. ಅ. ೧೧೦ ಪುಟಗಳು. ಬೆಲೆ ೯–೮–೦.

೮೨ ಗಾಂಧೀವಾದ (ವಿಷಯ ವಿವೇಚನಾತ್ಮಕ ಗ್ರಂಥ). ಲೇಖಕರು ಶ್ರೀಮಾನ್ ವಿ. ಎಸ್. ನಾರಾಯಣರಾವ್, ಬೆಂಗಳೂರು. ಸಂಪಾದಕರು ಶ್ರೀ ಬುರ್ಲಿ ಬಿಂದುಮಾಧವ ಅವರು. ಧಾರವಾಡದ 'ಮಿಂಚಿನಬಳ್ಳಿ'ಯ ೬ನೆಯ ವರ್ಷದ ೪ನೆಯ ಕುಡಿ. ಕ್ರಾ. ಅ. ೧೨೦ ಪುಟಗಳು. ಬೆಲೆ ೧–೪–೦.

೮೩ ದಾಸರ ಹುಡುಗಿ (ಸಣ್ಣ ಕತೆಗಳ ಸಂಗ್ರಹ). ಲೇಖಕರು ಶ್ರೀಮಾನ್ ಟೇಂಗ್ಸೆ ಗೋವಿಂದರಾಯರು ಬಿ. ಎ. ಎಲ್ ಎಲ್. ಬಿ. ಅವರು. ಸಂಪಾದಕರು ಪ್ಯಾಟಿ ಶಾಮರಾಯರು. ಬೆಳಗಾಂವಿಯ ವಿಜಯ ಗ್ರಂಥಮಾಲೆಯ ೧೩ನೆಯ ಕುಡಿ. ಕ್ರಾ. ಅ. ೧೦೪ ಪುಟಗಳು. ಬೆಲೆ ೧–೪–೦.

೮೪ ಶಿವಶರಣರ ಚರಿತ್ರೆಗಳು(ಭಾಗ ೧). ಲೇಖಕರು ರಾವ್‌ಬಹದ್ದೂರ್ ಸ. ಗು. ಹಳಕಟ್ಟಿ ಬಿ. ಎ., ಎಲ್‌ಎಲ್. ಬಿ. ಅವರು. ವಿಜಾಪುರದ ಶಿವಾನುಭವ ಗ್ರಂಥಮಾಲೆಯ ೬೧ನೆಯ ಗ್ರಂಥ. ಡೆ. ಔ. ೩೦+೧೬೨ ಪುಟಗಳು. ಬೆಲೆ ೧೯–೧೬–೦.

೮೫ ಕೋಗಿಲೆ ಮತ್ತು ಸೋನಿಯೆಟ್ ರಷ್ಯಾ (ಕವನ ಸಂಗ್ರಹ). ಶ್ರೀಮಾನ್ 'ಕುವೆಂಪು' ವಿರಚಿತ. ಪ್ರಕಾಶಕರು ಶ್ರೀಮಾನ್ ಕೆ. ವಿ. ಪುಟ್ಟಪ್ಪ ಎಂ. ಎ. ಮೈಸೂರು. ಕ್ರಾ. ಅ. ೬೮ ಪುಟಗಳು. ಬೆಲೆ?

೮೬ ಕೊಳಲು (ಕವನಸಂಗ್ರಹದ ೨ನೆಯ ಆವೃತ್ತಿ). ಶ್ರೀಮಾನ್ 'ಕುವೆಂಪು' ವಿರಚಿತ. ಪ್ರಕಾಶಕರು ಶ್ರೀಮಾನ್ ಕೆ. ವಿ. ಪುಟ್ಟಪ್ಪ ಎಂ. ಎ. ಮೈಸೂರು. ಕ್ರಾ. ಅ. ೧೨೦ ಪುಟಗಳು. ಬೆಲೆ?

೮೭ ಪಾಂಚಜನ್ಯ (ಕವನಸಂಗ್ರಹದ ೨ನೆಯ ಆವೃತ್ತಿ). ಶ್ರೀಮಾನ್ 'ಕುವೆಂಪು' ವಿರಚಿತ. ಪ್ರಕಾಶಕರು ಕಾವ್ಯಾಲಯ ಮೈಸೂರು. ಕ್ರಾ. ಅ. ೭೬ ಪುಟಗಳು. ಬೆಲೆ ೧ ೪–೦.

೮೮ ಸಾಹಿತ್ಯಪ್ರಚಾರ ಮತ್ತು ಇತರ ಭಾಷಣಗಳು (ಆರು ಭಾಷಣಗಳ ಸಂಕಲನ) ಭಾಷಣಕಾರರು ಶ್ರೀಮಾನ್ 'ಕುವೆಂಪು' ಅವರು. ಮೈಸೂರು ಕಾವ್ಯಾಲಯದ ಪ್ರಕಟನೆ ಕ್ರಾ. ಅ. ೭೬ ಪುಟಗಳು. ಬೆಲೆ ೧–೪–೦.

ಇದರಲ್ಲಿರುವ 'ವಿದ್ಯಾರ್ಥಿ ಕವಿಗಳಲ್ಲಿ' ಎಂಬ ಮೊದಲನೆಯ ಭಾಷಣವು, ೧೯೩೮ನೆಯ ಇಸವಿ ಡಿಸೆಂಬರ್ ತಿಂಗಳ ೧೫ನೆಯ ತಾರೀಖಿನಲ್ಲಿ, ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ನಡೆದ ವಿದ್ಯಾರ್ಥಿ ಕವಿಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣವು. ಎರಡನೆಯ 'ಸಾಹಿತ್ಯ ಪ್ರಚಾರ' ಎಂಬುದು ಶಿವಮೊಗ್ಗೆಯ ಕರ್ನಾಟಕ ಸಂಘದ ಆರುಘೋತ್ಸವದಲ್ಲಿ (ತಾ. ೮–೧೧–೩೦) ಮಾಡಿದ ಭಾಷಣ. ಮೂರನೆಯದಾದ 'ಕಾವ್ಯದಕಣ್ಣು ಕವಿಯದರ್ಶನದಲ್ಲಿ' ಎಂಬುದು, ಹುಬ್ಬಳ್ಳಿಯಲ್ಲಿ ಕರೆಯಿಸಿದ ೧೯ನೆಯ ಕರ್ನಾಟಕ ಸಾಹಿತ್ಯಸಮ್ಮೇಳನದ ಸಮಯದ ಕವಿಸಮ್ಮೇಳನದಲ್ಲಿ [೩೦–೧೨–೨೧] ಮಾಡಿದ ಅಧ್ಯಕ್ಷಭಾಷಣ. 'ಹೊಸ ಸಾಹಿತ್ಯ ಮತ್ತು ಹೊಸದೃಷ್ಟಿ' ಎಂಬ ನಾಲ್ಕನೆಯ ಭಾಷಣ ಎಲ್ಲಿ ಎಂದು ಮಾಡಿದ್ದು ಎಂಬುದು ಗೊತ್ತಾಗುವುದಿಲ್ಲ. 'ಕನ್ನಡ ಸಾಹಿತ್ಯ' ಎಂಬ ಐನೆಯ ಭಾಷಣವು ಮೈಸೂರಿನಲ್ಲಿ ೧೪-೧೨-೩೭ರಲ್ಲಿ ನಡೆದ 'ಕನ್ನಡದ ಉತ್ಸವ' ದ ಕಾಲದಲ್ಲಿ ಕೊಟ್ಟ ಉಪನ್ಯಾಸ. ಆರನೆಯದಾದ 'ದೇಶದೇವತೆಯ ಪೂಜೆಗೆ ಬನ್ನಿ' ಎಂಬುದು ಶಿವಮೊಗ್ಗೆಯ ಕರ್ನಾಟಕ ಸಂಘದವರು ಆಚರಿಸಿದ ನಾಡಹಬ್ಬದಲ್ಲಿ [೩೦-೯-೪೮ ರಲ್ಲಿ] ಮಾಡಿದ ಅಧ್ಯಕ್ಷ ಭಾಷಣ- ಎಲ್ಲ ಭಾಷಣಗಳೂ ವಿಚಾರ ಪರಿಪ್ಲುತವಾಗಿರುವುದೆಲ್ಲವೆ—ಒಂದೇ ವ್ಯಕ್ತಿಯವಾಗಿರುವುದರಿಂದ — ಕಾಲಾನುಕ್ರಮದಲ್ಲಿ ಬುದ್ಧಿಭಾವನೆಗಳಲ್ಲಾದ ವಿಕಾಸ-ಕ್ರಾಂತಿಗಳನ್ನೂ ಮನವರಿಕೆಮಾಡಿಕೊಡುವಂತಿವೆ. ಓದಿ ಮನನ ಮಾಡುವಂತಹ ಉಪನ್ಯಾಸಗಳು ಒಟ್ಟುಗೂಡಿಸಿ ಪ್ರಕಟಿಸಿದ ಪ್ರಕಾಶಕರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

೮೯ ಸಂಸ್ಕೃತ ಬಸವೋದಾಹರಣಂ (ಸ್ತೋತ್ರಗ್ರಂಥ) ಮಹಾಕವಿ ಪಾಲ್ಕುರಿಕಿ ಸೋಮನಾಥ ವಿರಚಿತ. ಸಂಪಾದಕರು ಕೇರ್ತನ ಕೇಸರಿ ಶ್ರೀಮಾನ್ ಬಿ. ಶಿವಮೂರ್ತಿ ಶಾಸ್ತ್ರಿ ಹುಲಕುಂಟಿಮಠ, ತುಮಕೂರು. ಸಂಪಾದಕರೇ ಪ್ರಕಾಶಕರು. ಡೆ. ಅ. ೨೦ ಪುಟಗಳು. ಬೆಲೆ?

೩೮ ಪದ್ಯಗಳಿಂದೊಡಗೂಡಿದ ಈ ಸ್ತೋತ್ರವು ಪುಸ್ತಕದಪ್ರಾರಂಭದ ೬ ಪುಟಗಳಲ್ಲಿ ಅಡಕವಾಗಿದ್ದು, ಮುಂದಿ ೨೦ನಾಲ್ಕು ಪುಟಗಳಲ್ಲಿ 'ಬಸವೇಶ್ವರ ಚರಿತ್ರೆ' ಎಂಬ ೨ನೆಯ ಅನುಬಂಧವೂ 'ಗ್ರಂಥಸ್ಥ ಶಿವಶರಣರು' ಎಂಬ ೩ನೆಯ ಅನುಬಂಧವೂ ಪ್ರಕಟವಾಗಿವೆ.

೯೦ ಮುಡಿಪು (ಕಿರಿಯರ ಕವನಸಂಗ್ರಹ) ಮುಡಿಪಿನವರು 'ಕಿರಿಯರು'- ಉಡುಪಿಯ ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನದ ಕಾಲದಲ್ಲಿ ಪ್ರಕಟಿಸಲ್ಪಟ್ಟಿವೆ. ಪ್ರಕಾಶಕರು ಕಲಾಮೃತ ಪ್ರಕಟಣಾಲಯ, ಉಡುಪಿ. ಮಾಡರ್ನ್ ನ್ಯೂಸ್ ಏಜನ್ಸಿ ಉಡುಪಿ. ಇಲ್ಲಿ ಪ್ರತಿಗಳು ಸಿಕ್ಕುವುವು. ಕ್ರಾ. ಅ. ೧೮ ಪುಟ. ಬೆಲೆ ೦–೪–೦.

ಇದರಲ್ಲಿ ಬೇರೆ ಬೇರೆ ಕಿರಿಯ ಕವಿಗಳು ಬರೆದ ೧೫ ಕವನಗಳಿವೆ. ಕಿರಿಯರ ಕವಿತೆಗಳನ್ನು ಕೌತುಕದಿಂದ ಕುದು ಆದರಿಸಬೇಕಲ್ಲದೆ ನಿಮರ್ಶೆಯ ಒರೆಗಲ್ಲಿಗೆ ತಿಕ್ಕಿ ನೋಡಲಾಗದು. ವಾತ್ಸಲ್ಯವಿಲ್ಲದಿದ್ದರೆ ಮಗುವಿನ ತೊದಲುನುಡಿಗೆ ಬೆಲೆಯೇಇರದು?

೯೧ ಸ್ವಲ್ಪ ದಿನಗಳಲ್ಲಿ ಸ್ವಾಸ್ಥ್ಯ (ಹರಟೆಗಳು) ಶ್ರೀರಂಗರು ಬರೆದುವು. 'ಶ್ರೀರಂಗ ಸಾರಸ್ವತ' ದ ೨ನೆಯ ಗ್ರಂಥ. ಪ್ರಕಾಶಕರು ರಂಗಮಂಗ ಪ್ರಕಾಶನ ಧಾರವಾಡ. ಕ್ರಾ. ಅ. ೧೦೦ ಪುಟಗಳು. ಬೆಲೆ ೧-೦–೦.

ಮುದ್ರಕರು :

ಶ್ರೀ. ಎಸ್. ಎಸ್. ಬೆಂಗೇರಿ, ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು :

ಶ್ರೀ. ಎಂ. ಪಿ. ಮೆಳ್ಳಿಗಟ್ಟಿ, ಜಯಂತಿ ಕಾರ್ಯಾಲಯ, ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ನಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!
- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ನಿಮೂಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಸ್ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಪಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಮ್. ಗೋವರ್ಧನರಾವ, ಮ್ಯಾನೇಜರ್

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!
ಹಾಗೆ ಚೆನ್ನಾಗಿರುವುದೆಂದರೇನು?
ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!
ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ–ತರುಣಿಯರು ಬರಿಯ ಕಣ್ಣು ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆ ಇದ್ದರೂ ಅದು ವ್ಯರ್ಥವೆನಿಸುವುದು.

ಅದಕ್ಕಾಗಿಯೇ ಆಯುರ್ವೇದದ ತಜ್ಞರಿಂದ ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ತಯಾರಿಸಲಾದ "ಮುಕುಲ" ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಮುಕುಲ
ದಿನ ದಿನವೂ ಉಪಯೋಗಿಸಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗ
ಕರ್ನಾಟಕ ಶಾಖೆ : ಸ್ಟೇಶನ್‌ರೋಡು, ಹುಬ್ಬಳ್ಳಿ.



ಡಿಸೆಂಬರ್
೧೯೪೪

ಸಂಪುಟ ೭ ⇒ ಸಂಚಿಕೆ ೭

printed on newsprint
Seen

ಸಂಪಾದಕರು: ಬೆಟಗೇರಿ ಕೃಷ್ಣಶರ್ಮ

●

ಮುಖ್ಯ ವಿಷಯಗಳು

ಹೊಸ ವಿಶ್ವ ಬೇಕಾಯ್ತು ! (ಕವಿತೆ)
ಶ್ರೀ. 'ಶ್ರೀರಂಗ' ೧೫೭

ಪಾಕಿಸ್ತಾನ (ವಿಭಜನಾತ್ಮಕ ವಿಮರ್ಶೆ)
ಶ್ರೀ ಜೆ. ರಾಮಚಂದ್ರ, ಧಾರವಾಡ ೧೬೦

ಮಾಂಟೆಸೊರಿ ಶಾಲಾಗೃಹ (ಶೈಕ್ಷಣಿಕ)
ಶ್ರೀ. ಹ. ಮ. ಬಬಲೇಶ್ವರ, ಕೊಡೆಕೆನಾಲ್ ೧೬೨

ರಶಿಯನನ ದೇಶಭಕ್ತಿ (ಪತ್ತಕಥೆ)
ಶ್ರೀ ಗೋ. ಮೆಂ. ಚುಳಕಿ, ಧಾರವಾಡ ೧೬೫

ಅಭ್ರಕದ ಅದ್ಭುತ ಬಲ (ಖನಿಜ ವಿಚಾರ)
ಶ್ರೀ. ಜಿ. ಕೆ. ಪಾಳ್ಳೇಕರ, ಬಿ. ಎ, ಎಲೆಲ್ ಬಿ. ೧೬೮

ನಲ್ಲ-ನಲ್ಲೆಯರು (ಕವನ)
ಶ್ರೀ. ಮಾನ್ವಿ ನರಸಿಂಗರಾಯರು, ಎಂ. ಎ. ೧೭೧

ಚೆಲುವಿನಿಂದಲೆ ಒಲವು ಮೊಳೆಯುವುದು (ವಾದಭೂಮಿ)
ಶ್ರೀ. ಜಿ. ವೆಂಕಟರಾಯರು, ಕೂಡಲಸಂಗಮ ೧೭೨

ಸರ್ವ-ವಿಶಾಲ-ವಿಶ್ವಕರ್ನಾಟಕ ಸಮ್ಮೇಲನ (ವ್ಯಂಗ್ಯ ಪ್ರಬಂಧ)
ಶ್ರೀ. ಮಾನೋಳಕರ ಶ್ರೀಧರರಾಯರು, ಪುಣೆ ೧೭೪

ಹೊಳೆ ದಾಟುವಾಗ (ಒಂದು ಸಮಾಜಚಿತ್ರ)
ಶ್ರೀ. ಪಿ. ಜಿ. ಶಾನಭಾಗ, ಕುಮಟಾ ೧೭೬

ಅಲ್ಲದೆ

ಸಂಪಾದಕೀಯ, ಮಂಗನ ಮಲ್ಲಿನಾಥತನ, ಸಾಹಿತ್ಯವಿಹಾರ,
ನಾಲ್ಕೂ ನಿಟ್ಟಿನ ನೋಟ ಮುಂತಾದುವುಗಳು.

ಪ್ರಕಾಶಕರು

ಸಾದರ ಸ್ವೀಕಾರ

೯೨. ನಕ್ಕಳಾತಾಯಿ (ಹಳಗನ್ನಡ ಸಾಹಿತ್ಯದಲ್ಲಿರುವ ಹಾಸ್ಯದ ಪರಿಚಯ). ಲೇಖಕರು ಶ್ರೀಮಾನ್ ಜಿ. ಪಿ. ರಾಜರತ್ನಂ, ಎಂ. ಎ. ಅವರು. ಧಾರವಾಡದ ಮನೋಹರ ಗ್ರಂಥಮಾಲೆಯ ೬೭ನೆಯ ಕುಸುಮ. ಕ್ರೌನ್ ೮. ೧೪೪ ಪುಟಗಳು. ಬೆಲೆ ೧-೧೨-೦.

೯೩. ಸಾವಿನ ಉಡಿಯಲ್ಲಿ (ಸ್ವತಂತ್ರ ಸಾಮಾಜಿಕ ಕಾದಂಬರಿಯ ೧-೨ ಭಾಗಗಳು). ಲೇಖಕರು ಶ್ರೀಮಾನ್ ಎನ್. ಕೆ. ತುಲಕರ್ಣಿ, ಎಂ. ಎ., ಬಿ. ಟಿ. ಅವರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೫-೬ನೆಯ ಪುಸ್ತಕಗಳು. ಎರಡೂ ಭಾಗ ಸೇರಿ ಫ್ಲೂಲ್‌ಸ್ಕ್ಯಾಪ್ ಅಷ್ಟಪತ್ರದ ೩೩೪ ಪುಟಗಳು. ಬೆಲೆ ೩-೦-೦.

೯೪. ಕಸ್ತೂರಿ (ಕಥಾಸಂಗ್ರಹ). ಬರೆದವರು ಶ್ರೀಮತಿ 'ವಾಣಿ' ಅವರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೧೧ನೆಯ ಕುಡಿ. ಕ್ರೌ. ೮. ೯೬ ಪುಟಗಳು; ಬೆಲೆ ೧-೪-೦.

೯೫. ಸಂಗಮ (೫ ಕಥೆಗಳ ಸಂಕಲನ). ಲೇಖಕರು ಶ್ರೀಮಾನ್ ಸಿ. ಕೆ. ನಾಗರಾಜರಾಯರು. ಪ್ರಕಾಶಕರು ಲರ್ನ್ ವಿಜನ್ಸ್‌ಗೇಜ್, ಬೆಂಗಳೂರು ನಗರ. ಕ್ರೌನ್ ೮. ೬೪ ಪುಟಗಳು. ಬೆಲೆ ೦-೧೨-೦.

೯೬. ಪೂಜ್ಯ ಗಾಂಧೀಜಿ, ಧನ್ಯ ಕಸ್ತೂರಿಬಾ (ವ್ಯಕ್ತಿಪರಿಚಯಾತ್ಮಕ ಗ್ರಂಥ) ಲೇಖಕರು ಶ್ರೀಮಾನ್ ಬಿ. ಎ. ಆರ್. ಕೃಷ್ಣದೇವ ಅವರು. ಪ್ರಕಾಶಕರು ಸತ್ಯಶೋಧನ ಪುಸ್ತಕ ಭಾಂಡಾರ, ಕೋಟೆ—ಬೆಂಗಳೂರು ನಗರ. ಕ್ರೌ. ೮. ೧೩೬ ಪುಟಗಳು. ಬೆಲೆ ೧-೪-೦.

೯೭. ಸ್ಟ್ಯಾಂಡರ್ಡ್ ಡಿಕ್ಷನರಿ (ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟು). ಕೂಡಿಸಿದವರು ಶ್ರೀಮಾನ್ ಡಿ. ಕೆ. ಭಾರದ್ವಾಜ, 'ವೈದ್ಯಗುರು' ಅವರು. ಪ್ರಕಾಶಕರು ಶ್ರೀ. ಬಿ. ಜಿ. ಸಂಕೇಶ್ವರ ಅಥವಾ ತುಬಚಿ, ಶ್ರೀಸರಸ್ವತೀ ಪುಸ್ತಕ ಭಾಂಡಾರ, ಗದಗ (ಎಂ. ಎಸ್. ಎಂ. ಆರ್. ಸೈ.) ರಾಯಲ್ ಸೈಜಿನ ೬೪೪ ಪುಟಗಳು. ಬೆಲೆ ೫-೦-೦.

೯೮. ಕೈಯಿಂದ ಕೆತ್ತಿ ಮಾಡಿದ ಚಿತ್ರದ ಪಡಿಯಚ್ಚುಗಳು. ಪಡಿಯಚ್ಚುಗಾರರು ಶ್ರೀಮಾನ್ ಯು. ವಿ. ಹಿರೆಗಂಗೆ, ಕಾರ್ಯದರ್ಶಿ ಕೆಳೆಯರ ಕೂಟ, ಗೋಕರ್ಣ.

ಕನ್ನಡಿಗರಲ್ಲಿ ಯಾವುದರ ಕೊರತೆಯೂ ಇಲ್ಲ. ಕಸವನ್ನು ರಸವನ್ನಾಗಿ ಮಾಡುವ ಪಣತಪ್ಪಿದರು ಜಿನ್ನಾಗಿ ಬಲ್ಲರು. ಆದರೆ ಕರ್ನಾಟಕದ ಇಂದಿನ ಕೊಡೆಗೆಟ್ಟ ಸನಿಷ್ಠಿತಿಯ ಮೂಲಕ, ಯಾವ ರಕ್ತಿಯ ನೊಳಕೆಗೂ ಬೆಳೆದು ಫಲ ಪಡೆಯಲಿಕ್ಕೆ ಅವಕಾಶ ವಿಲ್ಲದಂತಾಗಿದೆ. ನಮಗೆ ಕಳುಹಿರುವ ಪಡಿಯಚ್ಚುಗಳ ಈ ಮುದ್ರಿತ ಪ್ರತಿಗಳನ್ನು ನೋಡಿ ಯಾರೂ ಆಶ್ಚರ್ಯವನ್ನೂ ಅಭಿಮಾನವನ್ನೂ ಪಡುವಂತಿದೆ. ಉತ್ತರ ಕನ್ನಡ ಜಿಲ್ಲೆಯ ಕಾಡಿನಲ್ಲಿ ಬೆಳೆಯುವ ಒಂದು ವಿಧದ ಮರಕ್ಕಾಗುವ ಗಂಟುಮುಳ್ಳುಗಳನ್ನು ತಂದು, ಪದಪೂಡಿ ಕೆತ್ತಿ, ಪಡಿಯಚ್ಚಿಗೆ ತಕ್ಕವುಗಳನ್ನಾಗಿ ಮಾಡಿಕೊಂಡು, ಅದರ ಮೇಲೆ ಬೇರೆ ಬೇರೆ ಚಿತ್ರಗಳ ಪಡಿಯಚ್ಚುಗಳನ್ನು ಕೊರೆದಿದ್ದಾರೆ. ಕೆಲವು ಲೈನ್ ಬ್ಲಾಕಿನಂತಿವೆ; ಕೆಲವು ಹಾಫ್‌ಟೋನ್ ಬ್ಲಾಕಿನಂತಿವೆ. ಹಿಟ್ಲರ್, ಲೋಕಮಾನ್ಯ ತಿಲಕ, ಮಾಲವೀಯಾಜಿ ಮೊದಲಾದವರ ರೇಖಾಚಿತ್ರಗಳು ಸುಂದರವಾಗಿವೆ. ತಾಜಮಹಾಲಿನ ಹಾಫ್‌ಟೋನ್ ಸದೃಶ ಪಡಿಯಚ್ಚೂ ಬೇರೆ ಕಾರ್ಟೂನ್ ಚಿತ್ರಗಳೂ ಚಿತ್ತಾಕರ್ಷಕವಾಗಿವೆ. ಕಟ್ಟಿಗೆಯ ಮೇಲೆ ಇಷ್ಟೊಂದು ಸಯಪಾಗಿ ಕೆಲಸ ಮಾಡಬಲ್ಲ ಶ್ರೀ. ಹಿರೇಗಂಗೆಯವರು ಸೀಸ-ತವರಗಳ ಮೇಲೂ ಜೆನ್ನಾಗಿ ಕೆಲಸಮಾಡಬಹುದು. ಆದರ ಈ ಕಲೆಯು ಉಪಯೋಗ ಕನ್ನಡನಾಡಿಗೆ ತಕ್ಕರೀತಿಯಿಂದ ಸಿಕ್ಕಬೇಕಾದುದು ಅತ್ಯಗತ್ಯ. ಪಡಿಯಚ್ಚಿನ ಸಲಕರಣೆಗಳು ಸಾಕಷ್ಟು ಸಿಕ್ಕದಿರುವ ಇಂದಿನ ಕಾಲದಲ್ಲಿ, ಶ್ರೀ. ಹಿರೇಗಂಗೆಯವರಂತಹ ಕಲ್ಪಕರು ಮುಂದೆ ಬಂದು ಅದರ ಕೊರತೆಯನ್ನು ಸಿಸ ಪಂಥೆ ಮಾಡಬೇಕೆಂದೂ, ಕನ್ನಡಿಗರು ಇಂತಹವರಿಗೆ ತಕ್ಕ ಅನುಕೂಲತೆಯನ್ನು ಒದಗಿಸಿಕೊಡಬೇಕೆಂದೂ ನಮ್ಮ ಹಾರೈಕೆ.

"ವ್ಯಾಯಾ" ಕೊಪ್ಪಳದ ಚಂದಾದಾರರಲ್ಲಿ

ಇತ್ತೀಚೆಗೆ ಕೊಪ್ಪಳ ಮಾರ್ಗವಾಗಿ ಚಂದಾದಾರರಿಗೆ ಹೋಗುತ್ತಿರುವ ಸಂಚಿಕೆಗಳು ಅವರಿಗೆ ತಲ್ಪುತ್ತಿಲ್ಲವೆಂದು ದಿನದಿನವೂ ತಕರಾರುಗಳು ಬರುತ್ತಲಿವೆ. ಕೆಲವರಿಗಂತೂ ೭-೮ ತಿಂಗಳ ಸಂಚಿಕೆಗಳೂ ತಲ್ಪಿಲ್ಲವಂತೆ. ಹೀಗೇಕೆ ಆಗುತ್ತಲಿದೆಯೊ ತಿಳಿಯದಾಗಿದೆ. ಎಲ್ಲ ಚಂದಾದಾರರಿಗೂ ಪ್ರತಿತಿಂಗಳ ೧೫ನೆಯ ತಾರೀಖಿಗೆ ತಲ್ಪುವಂತೆ ಆ ಆ ತಿಂಗಳ ಸಂಚಿಕೆಗಳನ್ನು ಅಂಚೆಯಿಂದ ಕಳುಹಿಸಲಾಗುವುದು. ಮಿಕ್ಕೆಲ್ಲ ಕಡೆಗೂ ಸರಿಯಾಗಿ ತಲ್ಪಿ ಕೊಪ್ಪಳಮಾರ್ಗವಾಗಿ ಹೋಗುವ ಸಂಚಿಕೆಗಳು ಮಾತ್ರ ಮಾಲಕರಿಗೆ ತಲ್ಪದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಅಲ್ಲದೆ ಮಾಲಕರಿಗೆ ತಲ್ಪದಿದ್ದ ಸಂಚಿಕೆಗಳು ಮರಳಿ ನಮ್ಮ ಕಾರ್ಯಾಲಯಕ್ಕೂ ಬರುತ್ತಿಲ್ಲ. ಸ್ಪೆಶಾಮ್ ಸ್ಟೇಟಿನಲ್ಲಿ ಜಯಂತಿಗೆ ಪ್ರತಿಬಂಧವೇನೂ ಇಲ್ಲ. ಅನೇಕ ಸರಕಾರಿ ವಿದ್ಯಾಸಂಸ್ಥೆಗಳಿಗದು ಹೋಗುವುದಲ್ಲದೆ ಹೈದರಾಬಾದ್, ಗುಲಬುರ್ಗಾ, ರಾಯಚೂರು, ಯಾದಗಿರಿ ಮೊದಲಾದ ಊರುಗಳಲ್ಲಿ ಜಯಂತಿಯ ಏಜನ್ಸಿಗಳಿವೆ. ಆದುದರಿಂದ ಸಂಚಿಕೆ ತಲ್ಪದಿರುವ ಚಂದಾದಾರರು ಸ್ಥಳೀಯ ಅಂಚೆಯ ಆಫೀಸಿನಲ್ಲಿ ವಿಚಾರಮಾಡಿ, ಅವರ ತಕರಾರುಗಳೇನಾದರೂ ಇದ್ದರೆ ದಯವಿಟ್ಟು ಕಾರ್ಯಾಲಯಕ್ಕೆ ತಿಳಿಸಬೇಕಾಗಿ ಬಿನ್ನಹ.

ಮ್ಯಾನೇಜರ್ 'ಜಯಂತಿ' ಧಾರವಾಡ

ಮುದ್ರಕರು:
ಶ್ರೀ. ಎನ್. ಎಸ್. ಬೆಂಗೇರಿ, ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು:
ಶ್ರೀ. ಎಂ. ವಿ. ಮೆಳ್ಳಿಗಟ್ಟಿ, ಜಯಂತಿ ಕಾರ್ಯಾಲಯ, ಧಾರವಾಡ.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಆಚಿವೆಜ್ಞ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೭ | ೧೦ನೆಯ ಡಿಸೆಂಬರ್ ೧೯೪೪ | ಸಂಚಿಕೆ ೭

ಹೊಸ ವಿಶ್ವ ಬೇಕಾಯ್ತು!

'ಶ್ರೀರಂಗ'

ದೇಗುಲದಿ ಕೇಳುತಿದೆ ಪೂಜಾರಿಯಾ ಗಂಟೆ.
ಬಾಗಿಲಲಿ ಕೇಳುತಿವೆ ಪಾದರಕ್ಷೆಯ ತಂಟೆ,
ಇದುವೆ ಲೋಕಾಚಾರ!
ಇದುವೆ ಅನುಭವ ಸಾರ!

೧

ವಿಶ್ವದೇಗುಲದಲ್ಲಿ ಗುಂಕರಿಸುತಿದೆ ಕೇಳು....
ಸರ್ವಾಧಿಕಾರಿತನದಾ ಪ್ರಚಾರ!
ತುದಿಗೇರಿ ಕನ್ನಡದ ನಾಡಿನೊಳು ಗುಣುಗುತಿದೆ
'ತನ್ನ ದಾವುದು ಜಾತಿ?' ಈ ವಿಚಾರ!
ಬ್ರಹ್ಮಾಂಡ ಉರುಳುತಿದೆ, ಜೀವಾಣು ನರಳುತಿದೆ—
ಸರ್ವ ಭಕ್ಷಕ ಶಕ್ತಿಯಡಿಗಳಲ್ಲಿ!
ಸ್ವಾತಂತ್ರ್ಯ ಜಾರುತಿದೆ, ಜಾತಿತನ ನಾರುತಿದೆ—
ಭಾರತದ ಕನ್ನಡದ ನರಹುಳುಗಳ!
ಬಾಯ ತತ್ತ್ವವ ಸಾರಿ
ನಡೆವಾಗ, ಹೊಲೆಗೇರಿ
ಸುತ್ತಲಿದೆ ಎನೆಹಾರಿ,
ಕಾಣನೀ ಅವಿಚಾರಿ—
ಜಗವನ್ನು ಸುಡಲಿದ್ದ ಶಕ್ತಿ ತತ್ತ್ವವನು;
ವ್ಯಕ್ತಿಯನು ಬಿಗಿಯುವಾ ಶಕ್ತಿಮೋಹವನು!
ಇದುವೆ ಲೋಕಾಚಾರ,
ಇದುವೆ ಜೀವನ ಸಾರ!

೨

ಸಾಹಸದ ಮಾನವನು ಯಂತ್ರಶಕ್ತಿಯ ತಂದ,
ವಿಶ್ವವದು ಒಂದೆಂದು ನಮ್ಮನಿಲ್ಲಿ
ಬಂಧಿಸಿತು ಸಂಕೋಲೆ ಒಂದಾಗಿ; ಮೈನೋವು
ಸಂಧಿಸಿತು, ಸಾಂನಿಧ್ಯ ಬೇಡವೆನ್ನೆ;
ವಿಶ್ವಮೇಧದಿ ಜೀವರಾಶಿಗಳ ಬೇಯಿಸಿತು
ವಿಶ್ವೈಕ್ಯ ಸಾರುತ್ತ ಯಂತ್ರಶಕ್ತಿ;
ಭೂಮಿಲೆಯ ಬಿಗಿತದಲಿ ಮೈಗೆ ಮೈ ತಿಕ್ಕುತಲಿ
ಐಕ್ಯ ಬೇಡೆಂದಿತ್ತು ದಾಸ್ಯಯುಕ್ತಿ!
ಯಂತ್ರದಾ ವಿಶ್ವೈಕ್ಯ
ರಾಷ್ಟ್ರಗಳ ಸ್ಪರ್ಧೆಯೆನೆ
ರಾಷ್ಟ್ರದಾ ದಾಸ್ಯೈಕ್ಯ
ಬಾಂಧವ್ಯವಲ್ಲವೆನೆ
ಇತಿಹಾಸ ಸುಳ್ಳಾಯ್ತು, ಸಂಸ್ಕೃತಿಯು ಜೊಳ್ಳಾಯ್ತು,
ಪ್ರಗತಿ ಬರಿ ಮಾತಾಯ್ತು, ಸುಖವು ಸವಿದೇ ಹೋಯ್ತು,
ಹಸನ ಜೀವನಕಾಗಿ
ಹೊಸ ವಿಶ್ವ ಬೇಕಾಯ್ತು!

ದೇಗುಲದಿ ಕೇಳುತಿದೆ ಪೂಜಾರಿಯಾ ಗಂಟೆ,
ಬಾಗಿಲಲ್ಲಿ ಕೇಳುತಿದೆ ಪಾದರಕ್ಷೆಯ ತಂಟೆ!
ಇದುವೆ ಲೋಕಾಚಾರ, ಇದುವೆ ಅನುಭವಸಾರ!

ಕರ್ನಾಟಕ ಏಕೀಕರಣ ಮತ್ತು ರಾಷ್ಟ್ರೀಯ ಮಹಾಸಭೆ

ಭಾರತ ರಾಷ್ಟ್ರಸಭೆಯು ಭಾಷಾನುಗುಣ ಪ್ರಾಂತ್ಯಪದ್ಧತಿಯನ್ನು ಪುರಸ್ಕರಿಸಿ, ಕರ್ನಾಟಕ ಪ್ರಾಂತ್ಯದ ಅಸ್ತಿತ್ವವನ್ನು ಎಂದೋ ಒಪ್ಪಿಬಿಟ್ಟಿದೆ. ಕರ್ನಾಟಕದ ಹೆಸರು ಭಾರತದಲ್ಲಿ ಇತ್ತೀಚೆಗೆ ಕೇಳತೊಡಗಿದುದು ರಾಷ್ಟ್ರಸಭೆಯ ಪುರಸ್ಕಾರದ ತರುನಾಯನೆ; ಅಲ್ಲದೆ ಕರ್ನಾಟಕದ ಅಂತರಿಕ ಜಾಗೃತಿಯಾಗತೊಡಗಿದುದೂ ಆಮೇಲೆಯೆ. ಕರ್ನಾಟಕ ಏಕೀಕರಣದ ಚಟುವಟಿಕೆಗೆ ಭಾರತ ರಾಷ್ಟ್ರಸಭೆಯು ಎಂದೂ ಅಡೆ-ತಡೆಯನ್ನೂ ಒಡ್ಡಿಲ್ಲ; ನಿಟುಗಳನ್ನೂ ಹಾಕಿಲ್ಲ. ಅದು ಎಲ್ಲಿಯಾದರೂ ಏಟುಹಾಕಿದೆಯೆಂದು ಎನಿಸುತ್ತಿದ್ದರೆ ಅದಕ್ಕೆ ಕನ್ನಡಿಗರೇ ಹೊಣೆಗಾರರಲ್ಲದೆ ರಾಷ್ಟ್ರೀಯ ಮಹಾಸಭೆಯಲ್ಲ.

ಯಾವುದಾದರೊಂದು ಪ್ರಾಂತ್ಯದ ಜನತೆ ತಮ್ಮ ಪ್ರತಿನಿಧಿಯೆಂದು ಆಯ್ದುಕೊಟ್ಟವರನ್ನು, ರಾಷ್ಟ್ರೀಯ ಸಭೆಯು ಆ ಪ್ರಾಂತ್ಯದ ಮುಂದಾಳುಗಳೆಂದು ತಿಳಿಯುವುದು; ಅವರ ಮಾತುಗಳ ಮೇಲೆ ಭರವಸೆಯಿಡುವುದು ಸಹಜವು ಕನ್ನಡಿಗರ ಪ್ರತಿನಿಧಿಗಳಾಗಿ ಹೋದ ಕೆಲವು ಮುಮ್ಮುಂದಾಳುಗಳ—ಕರ್ನಾಟಕ ಏಕೀಕರಣದಲ್ಲಿ ಆಶ್ರದ್ಧೆಯಿರುವ ಕರ್ನಾಟಕ ಧುರೀಣರ ಮಾತುಗಳಲ್ಲಿ ಭರವಸೆಯಿಟ್ಟರೆ ರಾಷ್ಟ್ರೀಯ ಸಭೆಯ ದೋಷವೆ? ತಮಗೆ ನಿಜವಾದ ಹಿತವನ್ನಾಡುವವರಾರೆಂಬ ಕಲ್ಪನೆ ಕನ್ನಡಿಗರಿಗೆ ಇರಬೇಡವೆ? ಕರ್ನಾಟಕ ವಿರೋಧ್ಯಾಕ್ಷ್ಯನೈಕಗಳು ಕರ್ನಾಟಕ ಏಕೀಕರಣ ವಿರೋಧಿಗಳು. ಕನ್ನಡ ನಾಡಿನಿಂದ ನುಂಗ್ರಿಗಳಾಗಿ ಹೋದವರಿಗೆ 'ಕರ್ನಾಟಕ' ಎಂಬ ಶಬ್ದಕೂಡ ಆಗದು. ಇವರನ್ನು ಬಿಟ್ಟು ಉಳಿದವರಿಗೆ ಕನ್ನಡವ ಹೃದಯವಿದ್ದರೂ ಬಾಯಿಗೆ ಸಿಪ್ಪು-ಸಂಸಾರಿಗಳ ಬೀಗ ಬಿದ್ದಿರುವುದು. ಕನ್ನಡಿಗರು ತಮ್ಮ ಕಾಲ ಮೇಲೆ ತಾವೆ ಕಲ್ಲು ಚೆಲ್ಲಿಕೊಂಡರೆ, ರಾಷ್ಟ್ರೀಯ ಸಭೆಯೇನು ಮಾಡಬೇಕು?

ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸಿದುದು ರಾಷ್ಟ್ರೀಯ ಮಹಾಸಭೆಯ ತಪ್ಪೆ? ಆದರಿಂದ ನಿಯುಕ್ತವಾದ ವಿಚಾರಣಾಸಮಿತಿ ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸಿತು, ಸರಿ; ಅದಕ್ಕಾಗಿ ಆ ಸಮಿತಿಯೆದುರು ಆಂಧ್ರರು ಸಾಕ್ಷಿ-ಪುರಾವೆಗಳನ್ನಿರಿಸಿ ಸ್ವಪಕ್ಷಿತವಾಗಿ ತರ್ಕಹೂಡಿರಬಹುದು; ಅವರ ಪಕ್ಷ ಸತ್ಯವೆಂಬ ಅಭಿಪ್ರಾಯದಿಂದ ಸಮಿತಿಯವರು ವಿಭಾಗದ ತೀರ್ಪನ್ನು ಕೊಟ್ಟಿರಬಹುದು. ಆದರೆ ಅದನ್ನು ವಿರೋಧಿಸುವ ಚಳವಳಿಯನ್ನು ಕನ್ನಡಿಗರು ಹೂಡಿದುದುಂಟೆ? ಇದಕ್ಕಾಗಿ ಅದನಾನಿ, ಅಲೂರ., ದಾಯದುಗರ್ ತಾಪ್ಲಿಂಕುಗಳ ಕನ್ನಡಿಗರನ್ನು ಜಾಗೃತಗೊಳಿಸಿದುದುಂಟೆ? ಅಲ್ಲಿಯ ಕನ್ನಡಿಗರು 'ನಾವು ಆಂಧ್ರಪ್ರಾಂತಕ್ಕೆ ಸೇರಲಾರೆವು' ಎಂದು ಹೇಳಿ, ತಮ್ಮ ಬಹುಸಂಖ್ಯಾಬಲವನ್ನೂ ಕನ್ನಡದ ಪ್ರೀತಿಯನ್ನೂ ತೋರಿಸಿದ್ದರೆ, ರಾಷ್ಟ್ರೀಯ ಸಭೆಯು ಒಪ್ಪದಿರುತ್ತಿದ್ದಿತೆ? ಆ ಪ್ರದೇಶದ ಕನ್ನಡಿಗರಲ್ಲಿ ಕನ್ನಡತನದ ಕಲ್ಪನೆಯಿಲ್ಲದಿರಬಹುದು ಆದರೆ ಹೊರಗಿನ ಕನ್ನಡಿಗರು ಆ ಮೂರು ತಾಲ್ಲೂಕುಗಳು ಕರ್ನಾಟಕಕ್ಕೇ ಸೇರಬೇಕಾದುವುಗಳೆಂಬ ಮಾತನ್ನು ಅಂಕಿ-ಸಂಖ್ಯೆಗಳಿಂದ ಸಿದ್ಧಮಾಡಿ ತೋರಿಸಿ, ತಮ್ಮ ಹಕ್ಕನ್ನು ಸಪ್ರಮಾಣ ಸಮರ್ಥಿಸಿಕೊಂಡಿದ್ದರೆ ರಾಷ್ಟ್ರೀಯಸಭೆ ಅನ್ಯಾಯ ಮಾಡುತ್ತಿದ್ದಿತೆ? ತಮ್ಮ ಬಡುಕು-ಭಾಗ್ಯದ ಸೃಷ್ಟಿಕೆ ತಪ್ಪುಗಿಲ್ಲದೆ ಹೋದರೆ ರಾಷ್ಟ್ರಸಭೆ ಏನು ಮಾಡಬೇಕು?

ನೈಝಾಮ್ ಕರ್ನಾಟಕವನ್ನು ಅಖಿಲಭಾರತ ನೂಲುವ ಸಮಿತಿಯವರು ಕರ್ನಾಟಕಕ್ಕೆ ಸೇರಿಸದಿರುವುದೊಂದು ಅಪರಾಧವಂತೆ. ಅಖಿಲ ಭಾರತ ನೂಲುವ ಸಮಿತಿಯಲ್ಲಿ ಕರ್ನಾಟಕದ ಪ್ರತಿನಿಧಿಗಳಿರಲಿಲ್ಲವೆ? ಅವರು ಮೇಲಿನ ಅಧಿಕಾರಿಗಳಿಗೆ ಈ ವಿಷಯವನ್ನು ಏಕೆ ತಿಳಿಸದೆ ಹೋದರು? ತಿಳಿಸಿದ್ದರೂ ಹೀಗೆ ನೈಝಾಮ್ ಕರ್ನಾಟಕವನ್ನು ಬೇರೆ ಕೇಂದ್ರಕ್ಕೆ ಸೇರಿಸಿದ್ದರೆ, ಆಗಲೆ ಕನ್ನಡ ಜನತೆ ಚಳವಳಿ ಮಾಡದೆ ಸುಮ್ಮನೆ ಮಲಗಿಕೊಂಡಿತೇಕೆ? ಒಂದು ವಸ್ತುವಿನ ಮೇಲೆ ಒಬ್ಬರು ತಮ್ಮ ಹಕ್ಕನ್ನು ಹೇಳುವಾಗ— ಬೇರೆಯವರಾರೂ ತಮ್ಮ ಹಕ್ಕಿದೆಯೆಂದು ಮುಂದೆ ಬಾರದಿರುವಾಗ— ಮುಂದೆ ಬಂದರೂ ತಕ್ಕ ಪ್ರಮಾಣ ಕೊಟ್ಟು ಪಕ್ಷ ಸಾಧಿಸಿಕೊಳ್ಳದಿರುವಾಗ ಅಧಿಕಾರಿಗಳು ಏನು ಮಾಡಬಲ್ಲರು? ಧೈರ್ಯದಿಂದ ತಮ್ಮ ಹಕ್ಕನ್ನು ಹೇಳುತ್ತ ಮುಂದೆ ಬಂದವರಿಗೆ ಅದನ್ನು ಒಪ್ಪಿಸುವರು. ಇದು ಅನ್ಯಾಯವೆಂದು ಅಳುತ್ತ ಯಾರಾದರೂ ಮನೆಯಲ್ಲಿ ಕಾಲು ಹೊಸೆಯುತ್ತ ಕುಳಿತುಕೊಂಡರೆ ಆಗುವ ಪ್ರಯೋಜನವೇನು?

ರಾಷ್ಟ್ರೀಯ ಸಭೆಯ ಮುಂದಾಳುಗಳು ಕರ್ನಾಟಕಕ್ಕೆ ಮಾಡಿದ್ದ ಇನ್ನೊಂದು ದೊಡ್ಡ ಅನ್ಯಾಯವೆಂದರೆ 'ಕಸ್ತೂರಬಾ ನಿಧಿ'ಯ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ್ಯವನ್ನು ವಿಭಾಗಿಸಿದುದು. ಸತ್ಯದ ಕನ್ನಡಕದಿಂದ ನೋಡಿದರೆ ಇದರಲ್ಲಿ ರಾಷ್ಟ್ರೀಯ ಮಹಾಸಭೆಯ ಅಪರಾಧ ಕಾಣದೆ, ನಮ್ಮ ಪ್ರಾಂತ್ಯದಲ್ಲಿಯ ಪ್ರಾದೇಶಿಕ ಧುರೀಣ-ಧುರೀಣರಲ್ಲಿಯ ಸ್ಪರ್ಧೆ-ಈರ್ಷೆಗಳು ಕಾರಣವೆಂದು ಕಂಡುಬರಬಹುದಾಗಿದೆ. ಮೈಸೂರು-ಕೊಡಗುಗಳ ಮುಂದಾಳುಗಳೂ ಬ್ರಿಟಿಷ್ ಕರ್ನಾಟಕದ ಮುಂದಾಳುಗಳೂ ಸೇರಿ, ಎಲ್ಲರೂ ಏಕಮುಖವಾಗಿ ಕರ್ನಾಟಕದ ಏಕತ್ವವನ್ನೊಪ್ಪಲು ಕೇಂದ್ರ ಮಂಡಲಕ್ಕೆ ತಿಳುಹಿದ್ದರೆ, ಕನ್ನಡನಾಡಿನ ವಿಭಾಗಕಾರ್ಯಕ್ಕೆ ಅವಕಾಶವಿರುತ್ತಿದ್ದಿತೆ? ಈ ಮಾತನ್ನು ಹಸಿಗ ಹಚ್ಚಲು ಹೋದರೆ, ನಮ್ಮ ಮುಂದಾಳುಗಳೆನಿಸಿಕೊಳ್ಳುವವರಲ್ಲಿಯ ವರಸ್ಪರ ದ್ವೇಷಾಸೂಯೆ, ಈರ್ಷೆ-ಸ್ಪರ್ಧೆ, ಅಧಿಕಾರ ಲಾಲಸೆ, ಒಂದು ಬಗೆಯ ಹುಚ್ಚು ಸ್ವಾರ್ಥ ಇವು ಮಾತ್ರ ಕಂಡುಬಂದಾವು. ಈ ಮಾನವಸಹಜ ಅಶಕ್ತತೆಗಳನ್ವರಿತ ವಿಭಿಯ ಕೇಂದ್ರಸಮಿತಿ ಕೆಲಸದ ಸುಯಂತ್ರತೆಯ ಕಡೆಗೆ ಲಕ್ಷ್ಯವಿರಿಸಿ, ಅಲ್ಲಲ್ಲಿಯ ಮುಂದಾಳುಗಳ ಮಾತನ್ನು ಒಪ್ಪಿ ನಡೆದರೆ ತಪ್ಪು ಅವರದೆನಿಸಬಹುದೆ?

ಎಲ್ಲ ತಪ್ಪುಗಳಿಗೂ ನಾವೇ— ಕನ್ನಡಿಗರೇ— ಹೊಣೆಗಾರರು. ನಮ್ಮ ನಿಜವಾದ ಮುಂದಾಳುಗಳಾರೆಂಬುದನ್ನು ಅರಿತುಕೊಳ್ಳುವ ದೃಷ್ಟಿ ನಮಗಿನ್ನೂ ಬಂದಿಲ್ಲ. ಮುಂದಾಳುಗಳು ಮಾಡಿದ ತಪ್ಪನ್ನು ವಿರೋಧಿಸಿ ಚಳವಳಿ ಎಬ್ಬಿಸಲು ನಮ್ಮ ದಾಕ್ಷಿಣ್ಯದ ಮನಸ್ಸು ಸಿದ್ಧವಾಗುತ್ತಿಲ್ಲ. ನಮ್ಮ ಕರ್ತವ್ಯಗೇದಿತನದ ಕಹಿಗೊಬ್ಬಲು ಬದುಕಿನಲ್ಲಿ ಕಂದು ತೊಂದರೆ ಕೊಡಲು ತೊಡಗಿದಾಗ, ಪರಿಸ್ಥಿತಿಯನ್ನು ವಿಶ್ಲೇಷಿಸಿ ನೋಡಿ, ಆವ ತಪ್ಪನ್ನು ಕಂಡು ತಿದ್ದಿಕೊಳ್ಳಲು ನಾವು ಸಿದ್ಧರಾಗುತ್ತಿಲ್ಲ. ಇಂತಹ ತಪ್ಪುಗಳ ಮುದ್ದೆಗಳಾದ ನಮಗೆ ಇನ್ನೊಬ್ಬರ ಮೇಲೆ ತಪ್ಪು ಹೊರಿಸಲು ಅಧಿಕಾರ ಬರುವುದು ಹೇಗೆ?

ಕನ್ನಡಿಗರಲ್ಲಿ ಏಕೀಕರಣದ ಬಗೆಗೆ, ಚಹಾ ವ್ಯಸನಿಗಳಿಗೆ ಚಹ ಸಿಕ್ಕದಾಗಿನ ತತುರ-ಕಾತರ ಮನೆಮಾಡಬೇಕು. ಬಲಿತ ತರುಣರಿಗೆ ನೌಕರಿಗಾಗಿ ಇರೆದೋರುವ ಹಂಬಲು ಹತ್ತಬೇಕು. ಚಲಚ್ಚಿತ್ರ ನಾಟಕಗಳನ್ನು ನೋಡುವ ಕೆಲಸದಲ್ಲಿ ಇರುವಷ್ಟು ಆಸ್ಥೆ-ಶ್ರದ್ಧೆಗಳನ್ನೂ ನಾವು ಕರ್ನಾಟಕ ಏಕೀಕರಣದ ಬಗೆಗೆ ತಾಳದಿರುವಾಗ— ತಪಸ್ಸಿನಿಂದ ತ್ಯಾಗದಿಂದ ಸಿಕ್ಕಬಹುದಾದ—ಆ ಫಲಕ್ಕೆ ನ್ಯಾಯ ಮಾತುಗಳನ್ನು ಬಳಸುತ್ತ ಕುಳಿತರೆ ಏನು ಮಾಡಿದಂತಾಗುವುದು? ಏಳಬೇಕು; ಮುಂದುವರಿದು ಕಾರ್ಯ ಮಾಡಬೇಕು!

—ಸಂಪಾದಕರು



೧. ಮುಥನ-ಕನನ

(ಇದರಲ್ಲಿ ಅಚ್ಚಿನ ತಪ್ಪು ಒಂದೂ ಇಲ್ಲ— ಸಂ.)

ಒಂದು ಊರಲ್ಲಿ ಮುದಿ ಮಾನನ್ಮ ಎಂಬ ಹಸ
ರಂ ತಳೆದ ಮುದುಕಿ ಇದ್ದಳು. ರಾಮಾಯಣದ ಸಂ
ಬಂಧಿಕಳು ಎಂಬಷ್ಟು ಹಳೆಬಳು. ಆವಳ ಕಿವಿ
ಮಂದ, ಕಣ್ಣು ಅಂಧ, ಬುದ್ಧಿಗಂತೂ ಯಾವುದೂ
ಗಂಧ ಇಲ್ಲ. ಒಂದನ್ನು ಹೇಳಿದರೆ ಮತ್ತೊಂದು ಕೇ
ಳಿಸುವುದು. 'ಬಂದೆಯಾ, ಮಾವೆಮ್ಮ' ಎಂದರೆ
'ಮಂದಿಯ ಬೈಪೆಮ್ಮ' ಎಂದು ಕೇಳಿಸಿ
ದಂತಾಗಿ ಕಪಿಸಿಸುವಳು. 'ಹಳೆಯ ಕಾಲದ ಆಜ್
ಜಿ' ಎಂದರಂತೂ ಕಿವಿ. 'ತಂದೆ ಹೆಳಿಬ
ನೊಡೆ ನೀನು ಹುಟ್ಟಿದಿ' ಎನ್ನುವಳು! ತಾನೂ
ಇಂದಿನವಳೆಂದು ತೋರಿಸಲು ಆ ಇಜಂ ಈ ಇ
ಜಂದ ಶೀನಿಯಲಿ ಮಾತಾಡುವಳು. ಪಾಪ!
ಸಮಾಜದೊಡನೆ ಪಾದಿಸಿದರೆ ಸಮಾಜನಾವವ
ದೆಂದು ತಿಳಿಯುವಳು. ಕಿರುಚಿ ಕೆಮ್ಮಿ ಹತ್ತಿ ಕ
ಫನನ್ನು ಹೊರಗೆ ಹಾಕುವುದು ಲೋಕವನ
ನ್ಹ ಹನನ ಮಾಡಿದಂತೆ ಎನ್ನುವಳು! ಓಡುವ ತ
ರುಣರಿಗೆ ಕಾಲ್ತೊದಕಾಗಿ ಅವರ ಮುನ್ದ್
ಓಡುವುದು ನುನ್ಗೋಟ ಎನ್ನುವಳು! ನು
ದುಕಿಯಾಗಿದ್ದು ಇದೆಲ್ಲ ತರವೆ—ಎನ್
ನಲು ರೇಗುವಳು, ಬಯ್ಯುವಳು.
ಬಯ್ಯುತ್ತ ಬಯ್ಯುತ್ತ ಬಾಯಿ ಚಪಲವೆ ಪ್
ರಗತಿ ಎಂದು ಕೊನೆಗೆ ಬಾಯಿ ಮುಚ್ಚುವಳು.

* * * *

೨. ಸಅಂಣ ಕತೆ

ವಯಸ್ಸಾದ ಒಬ್ಬ ಸಾಹಿತಿಗೆ ಇಬ್ಬರು ಹೆಂಡಂದಿರಿದ್ದರಂತೆ; ಒಬ್ಬಾಕೆ ಸಂಪ್ರದಾಯಶೀಲೆ, ಇನ್ನೊಬ್ಬಾಕೆ ಪ್ರಗತಿಶೀಲೆ. ಪ್ರದಾಯಶೀಲೆ ತನ್ನನ್ನು ಸಂಶಯ ಎಂದ ನೋಡಬಾರದೆಂದು ಆ ಸಾಹಿತಿ ಆಕೆಯ ಸನ್ನಿಧಿಯಲ್ಲಿ 'ಸಂಜಾಪ'ನ್ನು ನಿಸುತ್ತಿದ್ದನಂತೆ; ಪ್ರಗತಿಶೀಲೆಯೂ ತನ್ನನ್ನು ಸಂಶಯದಿಂದ ಕಾಣಬಾರದೆಂದು ಈಯ ಇದಿರಿನಲ್ಲಿ ಕ್ರಾಪನ್ನು ಧರಿಸುತ್ತಿದ್ದನಂತೆ. ಇಬ್ಬರು ಹೆಂಡಂದಿರು ಬ್ಬರನ್ನೊಬ್ಬರು ಅರಿಯದ ಕಾಲವೆಲ್ಲ ಈ ಸಾಹಿತಿಗೆ ತೊಂದರೆ ಇಲ್ಲದೆ

> ಮನು ಎಂಬುದೇ ಅಸ್ತಿ ನನ್ನ ಜ್ಞಾನವೆ ಜಾಸ್ತಿ
> ಎಂಬನೆದೆಬುದ್ಧಿಗಳ ಕತೆಯೆ ಸಣ್ಣ-
> ದಿರೆ ಕಗ್ಗವಾಗದೇ ಸಾಹಿತ್ಯ? ಜೀವನವೆ
> ಅಗ್ಗವಾಗದೆ ಹೇಳು—ಮಂಗೆನಣ್ಣ.

ಹೋಯಿತು. ಆದರೆ ಒಬ್ಬಾಕೆಯ ಸುಳಿವು ಇನ್ನೊಬ್ಬಾಕೆಗೆ ಪತ್ತಿ ಇಬ್ಬರೂ ಇದಿರಿದಿರಾಗಲು, ಸಕಾಲಕ್ಕೆ ಇಬ್ಬರನ್ನೂ ಇದಿರಿಸಬೇಕಾದ ಮಾದಿಸಾಹಿತಿ ಸಂಜಾಪು-ಕ್ರಾಪುಗಳನ್ನು ಆಕೆ ಈಕೆಗಾಗಿ ಕಾಣಿಸುವಂತಾಗಬೇಕೆಂಬ ಆವಸರದಲ್ಲಿ ಹೌಹಾರಿ ಕತ್ತನ್ನೆ ಕುಯ್ದುಕೊಂಡನಂತೆ!

ತಾನು ಎಲ್ಲರಿಗೂ ಬೇಕಾಗಲೆಸುವವನ ತಲೆ ಇವೇ ರೀತಿ ಕಳಬಿ, ಅನುಸಿಗೆ 'ಆತಲ' ಗತಿ ಒದಗುವುದು.

* * * * *

೩. ರಬಕವಿ ರೇಶನಿಂಗ್

'ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಹಲವರ ಹೆಸರು ಸೂಚಿತವಾಗಿ ಮತಗಳ ಹೆಚ್ಚಳದಿಂದ ಒಬ್ಬರನ್ನು ಆರಿಸುವುದೆನ್ನುವುದು ಅಷ್ಟು ಉಚಿತವಲ್ಲೆಂದು ನನ್ನ ತಿಳುವಳಿಕೆ' ಎಂದು ಪರಿಷತ್ತಿನ ಜೀವನದ ಸಮಸ್ಕರನ್ನು ಸಂಖಾಡಿಸಿದ್ದಾರೆ—ಅಲ್ಲಲ್ಲಲ್—ಜೀವನದ ಸಂಪಾನಕರು ಪರಿಷತ್ಪದಸ್ಕರನ್ನು ಸಂಬೋಧಿಸಿದ್ದಾರೆ. 'ಮುಂಗನ ಮಲ್ಲಿನಾಥತನ' ಎಂಬ ಸಾಮಾನ್ಯ ವಿಚಾರವನ್ನು 'ಮಲ್ಲಿನಾಥ ಮುಂಗರಾಯರು' ಎಂದು ವ್ಯಕ್ತಿನಿಶೇಷವಾಗಿ ತಿಳಿಸವರ 'ತಿಳುವಳಿಕೆ' ಎಂಬ ಆಭಿಮಾನದಿಂದ ಮುಂಗರಾಯರನು ಈ 'ಪ್ರಗತಿಶೀಲ'—ಎಂದರೆ ಕಾಲಕ್ಕೆ ತಕ್ಕಂತೆ ಬೆಳೆವ—'ತಿಳುವಳಿಕೆ'ಯನ್ನು ನಾವಕರ ಲಕ್ಷ್ಯಕ್ಕೆ ತರಬಯಸಿದ್ದಾನೆ. ಇಂದಿನದು ರೇಶನಿಂಗಿನ ಕಾಲ. ಎಲ್ಲವೂ ಎಲ್ಲರಿಗೂ ದೊರೆಯಬೇಕು, ಇದು ಇಂದಿನ ಸಮಾಜಜೀವನದ ನ್ಯೇಯ. ಇದನ್ನು ಸಾಧಿಸಲು ರೇಶನಿಂಗ್ (ಸೀಮಾ) ಪದ್ಧತಿಯೆ ಸಾಧನ. ಆದ್ದರಿಂದ ಸಾಹಿತ್ಯ ಸಮ್ಮೇಳನಗಳ (ಪರಿಷತ್ತು ಅಲ್ಲ) ಅಧ್ಯಕ್ಷಪದವಿಗೂ ರೇಶನಿಂಗ್ ಬೇಕೇಬೇಕು. ಇಲ್ಲವಾದರೆ ಎಂತಹ ಅನರ್ಥ! ಎಂತಹ ಅನ್ಯಾಯ! ಬೇಕಾದವರು ಅಧ್ಯಕ್ಷರಾಗತೊಡಗುವುದೆ? ಶಾಂತಂ ಪಾಪಂ. ಬಾಜಾಸರಿಗೆ ಬೇಕಾದವರೆ ಅಧ್ಯಕ್ಷರಾಗತೊಡಗಿದರೆ? ಇನ್ನಿಸ್ಸು ಪಾಪಂ ಶಾಂತಂ! ಮಿಕ್ಕವರ ಪಾಡೇನು? ಅದ್ದರಿಂದ ಎಲ್ಲರಿಗೂ ಇದು ಜೊರೆಯುವಂತೆ ಏರ್ಪಾಡಾಗುವುದೆ ಯೋಗ್ಯ. ಯಾರಾರಿಗೆ ಅಧ್ಯಕ್ಷ ಪದವಿ ಬೇಕಾಗಿದೆಯೊ ಅವರು ಕೂಡಲೆ ಆರ್ಜಿ ಹಾಕಿ ಕಾರ್ಡನ್ನು (ಕೂಪನ್) ಪಡೆದುಕೊಳ್ಳಬೇಕು. ಇಲ್ಲವಾದರೆ ಇದೇ ವರ್ಷದಂತೆ ಮುಂದೆ ಕೂಡ—ಅಲ್ಲಲ್ಲ—ಆಂಶೂ ಜೀವನ ಸಾಗಿಸಬೇಕೆನ್ನುವವರು ಜೀವನದಿಂದ ಆರ್ಜಿತೆಯ ಕಾರ್ಡನ್ನು—ಆಂದ್ರೆ, ಸೀಮಾ ಕೂಪನ್ನನ್ನು—ಒಟ್ಟು—ನಂ-ನಿನು? ಸಂಪಾದಕರು ಕರೆದಿದ್ದಾರೆಯೆ?

ಪಾಕಿಸ್ತಾನ

(ವಿಭಜನಾತ್ಮಕ ವಿಮರ್ಶೆ)

ಬರೆದವರು :-

ಜೆ. ರಾಮಚಂದ್ರ

ಪಾಕಿಸ್ತಾನ-ಹಿಂದುಸ್ತಾನದ ಗೊಂದಲದಲ್ಲಿ ಸಿಲುಕಿ ಹಿಂದೀಯನಿಗೆ ಗತಿಗಾಣದಾಗಿದೆ. ಈ ಗೊಂದಲವು 'ವಾಹ' ಎಂದು ಪರದೇಶೀಯರಿಗೆ ಮೊರೆಯಿಡುವ ದುರವಸ್ಥೆಗೆಲ್ಲಿ ದೂಡುವುದೊ ಎಂದವನು ಕಾತರನಾಗಿದ್ದಾನೆ. 'ಮೊದಲು ಮೂರನೆಯವರನ್ನು ಹೊರಗೆ ಕಳಿಸಿರಿ; ಸಮಸ್ಯೆಗಳು ಇದ್ದುದಿದ್ದ ಹಾಗೆಯೆ ನಿರ್ಣಾಮವಾಗುವುವು' ಎಂಬ ಗಾಂಧೀವಾದವು ಕೇವಲ ಗಾರುಡಿಗತನವೆ? ಇಲ್ಲವೆ ಪಾಕಿಸ್ತಾನ, ವನ್ನು ಬೀಡುವುದು ವಾಸ್ತವತ್ಯನೆ?— ಎಂಬ ಪ್ರಶ್ನೆಗಳು ಇಂದು ಕರಾಳರೂಪದಕೆದು ನಿಂತಿವೆ. ಭೀಕರವಾದ ಬಾಹ್ಯಾವರಣವನ್ನು ಬದಿಗಿರಿಸಿ ನಿಜದ ನೆಲೆಯನ್ನರಿವುದು ನಿಷ್ಪಕ್ಷಪಾತಿಯಾದ ವಿದ್ಯಾರ್ಥಿಗೆ ಮಾತ್ರ ಸಾಧ್ಯವೆಂದು, ವಿದ್ಯಾಸರ್ಧಕ ಸಂಘವು ನಿಷ್ಣಾತರೆನಿಸಿದ ಪ್ರಾಧ್ಯಾಪಕರ ವ್ಯಾಖ್ಯಾನಗಳನ್ನೇರ್ಪಡಿಸಿತು. ಸಂಸ್ಥೆಯ ಹೆಸರು ಸಾರ್ಥಕವಾಗಿದೆಯೆಂದು ತೋರಿಸುವುದಲ್ಲದೆ, ನಾಗರಿಕರಿಗೆ ದಿವ್ಯದೃಷ್ಟಿಯನ್ನಿತ್ತಿತು. ಆಗು-ಹೋಗುಗಳನ್ನು ತಿಳಿದುಕೊಳ್ಳುವ, ಒಳತು-ಕೆಡಕುಗಳನ್ನು ವಿಂಗಡಿಸುವ ವಿಮರ್ಶಾತ್ಮಕ ಬುದ್ಧಿಯುಳ್ಳವನಿಗೆ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಟ್ಟಿತು.

ಹಿಂದುಸ್ತಾನದಲ್ಲಿ ಅನೇಕ ಜನಾಂಗಗಳು ಬಂದು ನೆಲಸಿದುವು ಎಂದು ಇತಿಹಾಸವು ಹೇಳುತ್ತಿದೆ. ಮೊದಲು ಬಂದವರು ಆರ್ಯರು. ಆರ್ಯರ ಮೊದಲನೆಯ ಗುಂಪು ನೆಲಸಲು ಬಂದಾಗ, ಮೂಲದೇಶೀಯರನ್ನು ಕಂಡು ಅವರು ಅನಪೇಕ್ಷಿಸಿಕೊಳ್ಳುತ್ತಿದ್ದರು. 'ಡೊಣ್ಣೆ ಮೂಗು' 'ಕಾಗೆಯ ಬಣ್ಣ' ಮುಂತಾಗಿ ವರ್ಣಿಸುತ್ತಿದ್ದರು. ಆದರೆ ಆರ್ಯರ ಎಣಿಕೆಯು ಗುಣಿಸಿ ಆಗಮನದಿಂದ ಈ ದೂರವಿರಿಸುವ, ಅಸಹ್ಯಪಟ್ಟುಕೊಳ್ಳುವ ಪ್ರವೃತ್ತಿ ಮಾಯವಾಯಿತು. ಇದಲ್ಲದೆ ಮದುವೆಗಳೂ ಜರುಗಿ ಆ ಜನಾಂಗಗಳು ಬೆರತುಕೊಂಡುವು. ಸ್ವಲ್ಪ ಕಾಲ ಗತಿಸಿದ ಮೇಲೆ ಎಂದರೆ ಮುಂದಿನ ಪೀಳಿಗೆಯಲ್ಲಿ, ಇವನು ಆರ್ಯ, ಇವನು ಮೂಲದೇಶೀಯನೆಂದು ಗುರುತಿಸುವುದಸಾಧ್ಯವಾಯಿತು. ಆರ್ಯರ ಉದ್ದ ಮೂಗಿದ್ದರೂ ಬಣ್ಣ ಕಪ್ಪು, ಮೂಲದೇಶೀಯನಂತಹ ಮೂಗಿದ್ದರೂ ಬಣ್ಣ ಕೆಂಪು.... ಹೀಗೆ ಆ ಜನಾಂಗಗಳು ಅಭಿನ್ನವಾಗಿ ಬೆರತುಕೊಂಡುವು. ಶಿಥಿಯನ್ನರು ನಮ್ಮ ದೇಶಕ್ಕೆ ಹೊರಗಿನಿಂದ ಬಂದವರು. ಅವರ ಪ್ರಮುಖರಲ್ಲಿ ಶಕ (ಶಾಲಿವಾಹನ) ನೊಬ್ಬನು. ಆದರೆ ಇಂದು ಎಲ್ಲ ಹಿಂದೂ ಜನರು 'ಆರ್ಯಾವರ್ತೇ.... ದಕ್ಷಿಣೇತೀರೇ ಶಾಲಿವಾಹನ ಶಕೇ' ಎಂದು ನುಡಿಯುವುದನ್ನು ಕಂಡರೆ, ಆರ್ಯಾವರ್ತದಲ್ಲಿ ಶಾಲಿವಾಹನ ಬಂದು ಬೆರತುಕೊಂಡನೆಂಬುದು ಸ್ಪಷ್ಟವಾಗುವುದು. ಗೆಲ್ಲುವುದಕ್ಕೆಂದು ಇಲ್ಲಿಗೆ ಬಂದರೂ, ಇಲ್ಲಿ ನಿಲ್ಲುವುದಗತ್ಯವೆನಿಸಲು ಇಲ್ಲಿಯ ಐಕ್ಯತೆಗೆ ಮೊರೆಹೊಕ್ಕರು. ಮುಂದೆ ಪೈಗಂಬರರು ಜನಜೀವನವನ್ನು ಉದ್ಧರಿಸುವುದಕ್ಕೆಂದು ಹೊಸ ಮತವನ್ನು ಪ್ರಾರಂಭಿಸಿದ ಕೂಡಲೆ, ಉಳಿದ ಧರ್ಮಗಳಂತೆ ಇದನ್ನೂ ಬರಮಾಡಿಕೊಂಡಿತು ಹಿಂದುಸ್ತಾನ. ಆಶ್ರಯವನ್ನೂ ಇತ್ತಿತು. ತತ್ತ್ವವನ್ನರಿಯದೆ ಧರ್ಮಾಂಧತೆಯಿಂದ ಕೇವಲ convert ಮಾಡಬಂದ ಗಝನಿಯ ಮಸೀದನಕ್ಕಾಗಲಿ, ಘೋರಿಯ ಮಸೆತನಕ್ಕಾಗಲಿ ಚಿರಕಾಲ ಸ್ಥಾನ ದೊರೆಯಲಿಲ್ಲ. ಬಾಬರನು ಮೊಗಲರ ಸಾಮ್ರಾಜ್ಯವನ್ನು ಸ್ಥಾಪಿಸಿದರೂ ಬಹುಕಾಲ ಬಾಳಲಿಲ್ಲ. ಅದನ್ನು ಭದ್ರವಾದ ತಳಹದಿಯ ಮೇಲೆ ಕಟ್ಟಿದವನು ಅಕಬರನು. ಅವನ ರಾಜ್ಯಪದ್ಧತಿ, ತೋಡರಮಲ್ಲ—ತಾನಸೇನ—ಬೀರಬಲ್ಲರಿಗೆ ಉಚ್ಚಸ್ಥಾನ ಕೊಟ್ಟುದು, ಮಾನಸಿಂಗನ ಮಗಳನ್ನು ಮದುವೆಯಾಗಿ ಅಂತಹ ಮದುವೆಗಳಿಗೆ ಪ್ರೋತ್ಸಾಹವನ್ನಿತ್ತುದು ಇವೆಲ್ಲ. ಬೆರೆತುಕೊಂಡು ಹಿಂದೀಯ (Indian) ನಾಗುವ ಅವನ ಹಂಬಲವನ್ನು ತೋರಿಸುತ್ತಲಿವೆ. ಧರ್ಮಗಳನ್ನು ಅಯಾ ಸಂದಿತರಿಂದ ಅಭ್ಯಸಿಸಿ, ಎಲ್ಲ ಧರ್ಮಗಳ ತಿರುಳನ್ನೊಳಗೊಂಡ ದಿನ್-ಇ-ಇಲಾಹಿ ಸಂಧವನ್ನು ಪ್ರಚಾರದಲ್ಲಿ ತಂದುದು ಅವನ ದೃಷ್ಟಿವೈಶಾಲ್ಯಕ್ಕೆ ಸಾಕ್ಷಿಯಾಗಿದೆ. ಆದುದರಿಂದಲೆ ಅವನ ಕಾಲವು ಇತಿಹಾಸದಲ್ಲಿ ಮಹತ್ತ್ವದ್ದಾಗಿ ಮನ್ನಣೆ ಪಡೆಯಿತು. ಜಹಾಂಗೀರನೂ ಹಿಂದೂಸ್ತ್ರೀಯರನ್ನು ಮದುವೆಯಾದನು. ಶಹಾಜಹಾನನು ರಜಪೂತ ರಾಣಿಯ ಮಗನು. ಔರಂಗಜೇಬನು ಈ ಇತಿಹಾಸ ಪರಂಪರೆಗೆ ವಿರುದ್ಧವಾಗಿ ನಡೆದುಕೊಂಡುದರಿಂದಲೆ, ಹಿಂದು-ಮುಸಲ್ಮಾನರು ಹಿಂದೀಯರೆಂಬ ದೃಷ್ಟಿಯಿಂದ ನೋಡದುದರಿಂದಲೆ, ಅವನು ಮುಳುಗಿದನು. ಹದಿನೇಟನೂರಾ ಐವತ್ತೇಳನೆಯ ಇಸ್ವಿಯ ಬಂಡಾಯದಲ್ಲಿ ಹಿಂದು-ಮುಸಲ್ಮಾನರೆಂಬ ಭೇದವಿಲ್ಲದೆ ಹೋರಾಡಿದರು. ಅದೇಕೆ? ಇಂದಿನ ಸ್ವಾತಂತ್ರ್ಯ ಸಮರದಲ್ಲಿಯೂ, ಆಜಾದ್, ಗಫರ್‌ಖಾನ್, ಮೌಲಾನಾ ಮಹಮ್ಮದ್ ಅಲಿ, ಅಸಂಖ್ಯ ಮುಸಲ್ಮಾನ್ ಸೇವಕರು ಹೋರಾಡಿದ್ದಾರೆ—ಹೋರಾಡುತ್ತಲಿದ್ದಾರೆ. ಪರಸ್ಪರರ ಸಲುವಾಗಿ ತ್ಯಾಗಕ್ಕೆ ಸಿದ್ಧರಾಗುವರೆಂದ ಮೇಲೆ, ಹಿಂದುಸ್ತಾನ ಒಂದು ರಾಷ್ಟ್ರವೆಂದೆನ್ನಲು ಏನೂ ಪ್ರತ್ಯವಾಯವಿಲ್ಲವೆಂದು ಇತಿಹಾಸ ಕೈಯೆತ್ತಿ ಸಾರುತ್ತಿದೆ.

ಭೌಗೋಲಿಕ ದೃಷ್ಟಿಯಿಂದಲೂ ಈ ಪ್ರಶ್ನೆಯನ್ನು ನೋಡಬಹುದು. ಹಿಂದುಸ್ಥಾನದಲ್ಲಿ ಭಿನ್ನ ಭಿನ್ನ ವಾತಾವರಣ-ಪರಿಸ್ಥಿತಿಯಿರುವುದು ಕಂಡು ಬರುವುದು. ಇದರಿಂದ ಬೇರೆಬೇರೆಡೆಗಳಲ್ಲಿ ವಿಧವಿಧವಾದ ಜನರಿರುವರು. ಪಂಜಾಬದ ಸಬಲಸೈನಿಕರು, ಮದ್ರಾಸ-ಬಂಗಾಲಗಳಲ್ಲಿಯ ಧೀಮಂತರು, ಮುಂಬಯಿಯ ಯಂತ್ರವೈಜ್ಞಾನಿಕರು-(technicians) ಹೀಗೆ ಬೇರೆ ಬೇರೆ ಭಾಗಗಳಲ್ಲಿಯ ಜನರ ವೈಶಿಷ್ಟ್ಯವನ್ನು ಸ್ಥೂಲವಾಗಿ ಹೇಳಬಹುದು. ಈ ಎಲ್ಲ ಜನರೂ ರಾಷ್ಟ್ರದ ರಚನೆಗೆ ಬೆಳೆವಣಿಗೆಗೆ ಬೇಕು. ಐಕ್ಯಭಾವದಿಂದವ್ವರೆಯೆ ಹಿಂದುಸ್ತಾನ (India) ಹಿರಿಯ ದೇಶವಾಗುವುದು. ಇವರೆಲ್ಲ ದೇಹಕ್ಕೆ ಅವಯವಗಳಂತಿರುವರು ಎಂದು ಹೇಳಬಹುದು. ತಲೆಯ ಮೇಲೆ ಕೂದಲಿವೆ, ಅಂಗಾಲಿಗಿಲ್ಲವೆಂದು ತಲೆ-ಅಂಗಾಲುಗಳನ್ನು ವಿಂಗಡಿಸಬಹುದೆ? ಮಾನವನಾಗಲು ಎಲ್ಲ ಇಂದ್ರಿಯಗಳೂ ಅವಶ್ಯ; ಅವರಂತೆ ಹಿಂದುಸ್ತಾನ ರಾಷ್ಟ್ರವೆನಿಸಿಕೊಳ್ಳಲು ಇವರೆಲ್ಲರೂ ಬೇಕು. ಇವರಲ್ಲಿ ದೃಷ್ಟಿಭೇದವಿದೆ. ಆದುದರಿಂದ ಒಕ್ಕಟ್ಟು ಒಳತೆನಿಸಿದರೂ ಆಗುವುದಸಾಧ್ಯವೆಂದೆನ್ನಬಹುದು. ಆದರೆ ಸಂಸ್ಕೃತಿ, ಜೀವನವನ್ನು ನೋಡುವ ದೃಷ್ಟಿಗಳು ಸಾಮೂಹಿಕವಾದುವೆಂದರೆ ಸಮಾಜದಿಂದ ಜನಿಸಿದುವು. ಹಿಂದೂ-ಮುಸಲ್ಮಾನರು ಕೂಡಿರತೊಡಗಿ ಐದಾರು ಶತಮಾನಗಳು ಕಳೆದಿವೆಯೆಂದ ಮೇಲೆ—

ಮೂಲ ಮಹಸ್ಯಾವೀಯ ದೃಷ್ಟಿಕೋನ ಹಿಂದೀಯರಿಂದ ಬೇರ್ಪಟ್ಟ ಬ್ದೆಂದು ಒಪ್ಪಿದರೂ— ಈ ಬೆರೆತುಕೊಂಡ ಮುಸಲ್ಮಾನರ ದೃಷ್ಟಿಯಲ್ಲಿಲ್ಲಿ ಹಿಂದೀಯರ ನೋಟವೆ ಕಾಣುವುದು. ಆದರಂತೆಯೆ ಹಿಂದುಗಳೂ ಹಿಂದೀಯರಾಗಿರುವರು: ಮೊಹರಂ ಹಬ್ಬದಲ್ಲಿ ತಲಾಯಿ ದೇವರಿಗೆ ಬ್ರಾಹ್ಮಣರೂ ಹೋಗಿಬರುವುದು ರೂಢವಾಗಿದೆ. ಬಂಗಾಲದ ಬಡವರು ಬರಗಾಲದಿಂದ ಬಳಲುವಾಗ,ಎಲ್ಲ ಪ್ರಾಂತಗಳೂ ಸಹಾಯವನ್ನು ಸಲ್ಲಿಸಿದುವು. ಸಾಯುವವರು ಹಿಂದುಗಳೊ ಮುಸಲ್ಮಾನರೊ ಎಂದು ಯಾರೂ ಪ್ರಶ್ನಿ ಸಲಿಲ್ಲ. 'ಉಪವಾಸದಿಂದ ಉರುಳಾಡುವವರು ಹಿಂದಿಯರು' ಎಂದು ಸೇವೆ ಸಲ್ಲಿಸಿತು ಭರತಖಂಡ. ಸ್ವತಃ ಹಿಂದು ಮಹಾಸಭೆಯ ಪ್ರಮುಖರಲ್ಲೊಬ್ಬರಾದ ಶಾಮಪ್ರಸಾದ ಮುಜರ್ಜಿಯವರೆ ಹಣ ಕೂಡಿಸಿ ಸೇನೆಮಾಡುವುದಕ್ಕಾಗಿ ಟೊಂಕಕಟ್ಟಿದರು.

ಅರ್ಥಶಾಸ್ತ್ರ ತಜ್ಞನಿಗೆ ಇಂದು ರಾಷ್ಟ್ರರಚನೆಯ ಕಾರ್ಯದಲ್ಲಿ ಪ್ರಮುಖ ಸ್ಥಾನ ದೊರೆತಿದೆ. ಹೊಟ್ಟೆಗೆ ಹಿಟ್ಟು ಮೈಗೆ ಬಟ್ಟೆ ಒದಗಿಸಿ ಕೊಡುವುದು, ಪ್ರತಿಯೊಬ್ಬ ಬಾಲಕನಿಗೆ—ಅವನು ಪಂಡಿತನ ಪುತ್ರನೆ ಆಗಿರಲಿ, ಕೂಲಿಕಾರನ ಕಂದನೆ ಆಗಿರಲಿ—ತನ್ನ ಗೊತ್ತು-ಗುರಿಗಳನ್ನು ಕಂಡುಕೊಳ್ಳಲು ನೆರವಾಗುವುದು, 'ಸ್ವಲ್ಪದಲ್ಲಿ' ಮಾನವನಿಗೆ ಮುಂದುವರಿಯಬೇಕಾದರೆ ಅಗತ್ಯವಾದ ಸೌಕರ್ಯಗಳನ್ನೊದಗಿಸಿ ಕೊಡುವುದು ರಾಷ್ಟ್ರೀಯ ಸಂಘಟನೆಯ ಗುರಿ. ಈ ಗುರಿಯನ್ನು ಸಾಧಿಸಬೇಕಾದರೆ ಅರ್ಥಶಾಸ್ತ್ರದ ಅರಿವು ಅವಶ್ಯವಾಗಿದೆ ಆದುದರಿಂದ ಅರ್ಥಶಾಸ್ತ್ರಜ್ಞನ ದೃಷ್ಟಿ ನಮಗೆ ಅಗತ್ಯವಿದೆಯಲ್ಲದೆ ಅದು ಹೆಚ್ಚು ಮಹತ್ವದ್ದಾಗಿದೆ.

ಹಿಂದುಸ್ತಾನ (India) ಕ್ಕೆ ಸೃಷ್ಟಿದೇವತೆ ತನ್ನ ವರಪಹಸ್ತದಿಂದ ಎಲ್ಲ ಸಂಪತ್ತನ್ನು ಕೊಟ್ಟಿರುವಳು. ಪಂಜಾಬದಲ್ಲಿ ಗೋದಿ, ಬಂಗಾಲದಲ್ಲಿ ಅಕ್ಕಿ, ಜೂಟು, ಮುಂಬಯಿಯಲ್ಲಿ ಹತ್ತಿ ಸೊದಲಾಮವನ್ನು ಬೆಳೆಯಲು ಬೇಕಾದ ಉತ್ತಮ ಭೂಮಿ-ವಾತಾವರಣವಿದೆ. ಮುಂಬಯಿ ಪ್ರಾಂತವು ತನಗೆ ಬೇಕಾಗುವಷ್ಟು ಗೋದಿಯನ್ನು ಬೆಳೆದುಕೊಳ್ಳಬಯಸುವುದು ಆರ್ಥಿಕ ದೃಷ್ಟಿಯಿಂದ ಅನರ್ಥವೆನಿಸುವುದು. ಆದರೆ ನಮ್ಮೀ ಭೂಭಾಗವನ್ನು ಇಬ್ಭಾಗಿಸುವುದರಿಂದ ಆ ಭೂತ ನಮ್ಮ ಬೆನ್ನು ಬಿಡದು. ಎರಡು ದೇಶಗಳಂತೆ ಆ ಭಾಗಗಳು ನಡೆದುಕೊಳ್ಳತಕ್ಕವು ಎಂದರೆ (ಬೇರೆ ಶಬ್ದದಲ್ಲಿ ಹೇಳುವುದಾದರೆ) ಒಪ್ಪಂದವನ್ನು ಮುರಿದು, ಪರಸ್ಪರ ಸೌಕರ್ಯಗಳ ಕರಾರುಗಳನ್ನು ಕಾಗದದ ಮೇಲೆಯೆ ಉಳಿಸಿ, ಬಾಂಬುಗಳನ್ನು ಬರಮಾಡಿಕೊಳ್ಳುವುವು. ಎರಡನೆಯ ದೇಶವನ್ನು ಅವಲಂಬಿಸುವುದೊಳಿತಲ್ಲ ನೆಂದು ಸ್ವಯಂ ಪೂರಿತ (Self sufficient) ರಾಷ್ಟ್ರಗಳಾಗಲು ಯತ್ನಿಸುವುದರಲ್ಲಿ ಸಂಶಯವಿಲ್ಲ. ಗೋದಿಯು ಬೆಳೆಗೆ ಕಾಮಧೇನುವಿನಂತಿದ್ದ ಪಂಜಾಬ ದೇಶವು ಬೇರೆಯಾಗಿ ಮುಂಬಯಿಯ ಹತ್ತಿಯ (ಹತ್ತಿಗೆ ಬೇಕಾದ) ಭೂಮಿಯನ್ನು ಗೋದಿ ಬೆಳೆಯಲುಪಯೋಗಿಸಬೇಕಾಗುವುದು. ಇದರಿಂದ ಗೋದಿ-ಹತ್ತಿಗಳ ಬೆಳೆಗೆ ಬಾಧೆ ತಟ್ಟುವುದು. ಹೀಗೆ ಅನರ್ಥ ಅನಿವಾರ್ಯವಾಗುವುದು. ಇಷ್ಟಲ್ಲದೆ ಸ್ವಸಂರಕ್ಷಣೆಗೆಂದು ಸೈನ್ಯದ ಸಂಖ್ಯೆ ಬೆಳೆಯುವುದು. ಇದರಿಂದ ಜನವಸತಿ ಬೆಳೆಯುತ್ತಲೆ ಹೋಗುವುದು. ಈಗಲೆ ಜನವಸತಿ ಮಿತಿವಿಲ್ಲದೆಯೆಂಬ ಕೂಗು ಕಿವಿಗಡಚಿಕ್ಕುವಂತೆ ಕೇಳಿಬರುತ್ತಿರಲು, ಆ ದುರವಸ್ಥೆಯನ್ನು ತಂದುಕೊಳ್ಳಬಹುದೆ? ಇದು ಹಿಂದುಸ್ತಾನದ ಹಿತಕ್ಕೆ ಅತಂಕವಾಗುವುದಲ್ಲದೆ, ಮಾನವ-ಪ್ರಗತಿಗೆ ಘಾತುಕವಾಗಿದೆ. ಖನಿಜೋತ್ಪತ್ತಿಯನ್ನು ನೋಡಬಹುದು. ಪೆಟ್ರೋಲಿಯಂ ಪಾಕಿಸ್ತಾನಕ್ಕೆ ಹೋಗುವುದು. ಕಬ್ಬಿಣ, ಬಂಗಾರ, ಅಭ್ರಕ ಮೊದಲಾದುವೆಲ್ಲವೂ ಹಿಂದುಗಳ ದೇಶಕ್ಕೆ ಬರುವುವು. ಔದ್ಯೋಗಿಕ ಪ್ರಗತಿಯನ್ನರಿತವನು ಇದು ನಿಜವಾಗಿ ದೇಹದ ಅವಯವಗಳನ್ನು ಬೇರ್ಪಡಿಸಿದಂತೆಯೆ ಆಗುವುದೆಂದು ಹೇಳುವನು. ಮತ್ತೆ ಈ ದೇಶಗಳು ಇಂದಿನಂತೆ ಕಚ್ಚಾಮಾಲು ಪರದೇಶಕ್ಕೆ ಕಳಿಸಿ ಪಕ್ಕಾ ಮಾಲನ್ನು ಪಡೆದುಕೊಳ್ಳಬೇಕಾಗುವುದು. ಇದರಿಂದ ನನ್ನ್ಮ ಗೋರಿಯನ್ನು ನಾವೆ ಕಟ್ಟಿಕೊಂಡಂತಾಗುವುದೆಂದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. "United we live; Divided we starve".

ಕನ್ನಡ ಕತೆಗಾರರಲ್ಲಿ:

ನಮ್ಮ ಕತೆಗಾರರಿಗೆ ಪ್ರತಿಫಲ ಧನ! ಜಯಂತಿಯ ಮೊಸ ನಿರ್ಧಾರ!

ಜಯಂತಿಯಲ್ಲಿ ಬರಲಿರುವ ಕತೆಗಳೆಲ್ಲವೂ ಒಳ್ಳೆಯವಾಗಿರಬೇಕೆಂದು ವಾಚಕರು ಅಪೇಕ್ಷೆಯಿರುವುದು ಸ್ವಾಭಾವಿಕ. ಹಾಗೆ ಒಳ್ಳೆಯ ಕತೆಗಳನ್ನು ಪ್ರಕಟಿಸಬೇಕೆಂದು ಜಯಂತಿಯು ಆಶೆಯಿಟ್ಟಿದೆ. ಅದಕ್ಕಾಗಿ ಕತೆಗಾರರಿಗೆ ಪ್ರತಿಫಲ ಧನವನ್ನು ಕೊಡುವುದಾಗಿ ಜಯಂತಿಯ ಸಂಚಾಲಕರು ನಿರ್ಣಯಿಸಿದ್ದಾರೆ. ಸಂಪಾದಕ ಮಂಡಲಿ ಪ್ರಕಟಿಸಿಗೆ ತಕ್ಕುದೆಂದು ಒಪ್ಪಿಗೆ ಕೊಟ್ಟು, ಕತೆ ಮುದ್ರಿತವಾದ ಒಂದು ವಾರದಲ್ಲಿಯೆ, ಕತೆಗಾರರಿಗೆ—ಕತೆಯ ಆಕಾರ-ಗುಣಗಳ ಯೋಗ್ಯತೆಯಂತೆ—೪ ರಿಂದ ೧೦ ರೂಪಾಯಿಗಳ ವರೆಗೆ ಪ್ರತಿಫಲವನ್ನು ಸಲ್ಲಿಸಲಾಗುವುದು. ಕನ್ನಡನಾಡಿನ ಒಳ್ಳೆಯ ಕತೆಗಾರರೆಲ್ಲ ಪಯೆಯಿಟ್ಟು ಜಯಂತಿಗೆ ತಂತಮ್ಮ ರಸಪತ್ತಾರ ಸ್ವತಂತ್ರ ಕತೆಗಳನ್ನು ಕಳುಹಿ, ಈ ನಮ್ಮ ಯೋಜನೆ ಫಲಕಾರಿಯಾಗುವಂತೆ ಮಾಡಬೇಕು. ಇದೊಂದು ಸಣ್ಣ ಕತೆಯ ಮೇಲಾಟವಲ್ಲವೆಂಬುದನ್ನು ಎಲ್ಲರೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಜಯಂತಿಯಲ್ಲಿ ಪ್ರಕಟವಾದ ಸ್ವತಂತ್ರ ಕತೆಗಳಿಗೆಲ್ಲ ಪ್ರತಿಫಲ ಕೊಡಲಾಗುವುದು.

ಸಂಪಾದಕ, 'ಜಯಂತಿ'.

ಮೊಂಟೆಸೊರಿ ಶಾಲಾಗೃಹ

ಶ್ರೀ. ಹ. ಮು. ಬಲೇಶ್ವರ, ಡೈರೆಕ್ಟರ್ ಮೊಂಟಿಸೊರಿ ಸ್ಕೂಲ್, ಕೊಡೆಕನಾಲ್

ಶಾಲೆಯ ಕಟ್ಟಡ

ಮಕ್ಕಳ ಶಾಲಾ ಕಟ್ಟಡಗಳ ಬಗ್ಗೆ ಅನೇಕ ಜನರು ಅನೇಕ ವಿಧವಾಗಿ ಅಭಿಪ್ರಾಯ ಪಡುತ್ತಾರೆ. ಸಾಮಾನ್ಯವಾಗಿ ಆಧುನಿಕ ಶಾಲಾಗೃಹಗಳೆಲ್ಲ ಕೇವಲ ಮಕ್ಕಳ ಆರೋಗ್ಯವನ್ನವಲಂಬಿಸಿ ಕಟ್ಟಿದುವು ಗಳಾಗಿವೆ. ಶಾಲೆಗಳಲ್ಲಿ ಮಕ್ಕಳಿಗೆ ಆರೋಗ್ಯವಷ್ಟೇ ಸಾಲದು; ಮುಖ್ಯವಾಗಿ ಬೇಕಾದುದು ಅವರ ಮಾನಸಿಕ ಉನ್ನತಿ. ಈ ಮಾನಸಿಕ ಉನ್ನತಿಯನ್ನವಲಂಬಿಸಿ ಶಾಲಾಕಟ್ಟಡಗಳಿರಬೇಕಾಗುವುದು.

ಚಿಕ್ಕಮಕ್ಕಳ ಶಾಲೆಗಳನ್ನು ಕಟ್ಟುವುದರಲ್ಲಿ ಪ್ರಾಮುಖ್ಯವಾಗಿ ಗಮನಿಸತಕ್ಕ ವಿಷಯವೆಂದರೆ ಆಕಾರ ಹಾಗು ಅಳತೆ. ಈಗಿರುವ ಶಾಲಾ ಕಟ್ಟಡಗಳೆಲ್ಲ. ಶಿಕ್ಷಕನ ಆಕಾರ, ಅಳತೆಗಳಿಗೆ ಸರಿಯಾಗಿ ಹೊಂದಿಕೊಂಡಿರುತ್ತವೆ. ಸಾಕಷ್ಟು ಗಾಳಿ-ಬೆಳಕುಗಳಿಗಾಗಿ ಎತ್ತರವಾದ ಕಿಟಕಿಗಳು, ಅವುಗಳಿಗೆ ಉದ್ದವಾದ ಗಾಜುಗಳು ಧಾರಾಳವಾಗಿ ಉಪಯೋಗಿಸಲ್ಪಡುತ್ತವೆ; ಆದರೆ ಮಕ್ಕಳ ಶಾಲೆಗಳಲ್ಲಿ ಕಿಟಕಿಗಳಿರುವುದು ಗಾಳಿ-ಬೆಳಕುಗಳಿಗಲ್ಲ. ಗಾಳಿ-ಬೆಳಕುಗಳಿಗೆ ಬೇರೆ ವ್ಯವಸ್ಥೆ ಮಾಡಬಹುದು; ಎತ್ತರವಲ್ಲದ ಕಿಟಕಿಗಳನ್ನು ನಿರ್ಮಿಸಬಹುದು. ಮಕ್ಕಳ ದೃಷ್ಟಿಯಿಂದ ಹಾಗು ಅವರ ಆಕಾರಮಾನದಿಂದ, ಚಿಕ್ಕ ಚಿಕ್ಕ ಕಿಟಕಿಗಳು, ಕಿರಿಯ ಎತ್ತರದಲ್ಲಿ ಶಾಲಾ-ಗೋಡೆಗಳನ್ನು ಅಲಂಕರಿಸಿಕೊಂಡಿರಬೇಕು. ಮಕ್ಕಳು ಕಿಟಕಿಯ ಬಳಿಯಲ್ಲಿ ನಿಂತಾಗ, ಹೊರಗಿನ ಕೈತೋಟದ, ಹೂ-ಬಳ್ಳಿಗಳು, ಆಟದ ಬಯಲು, ಮಕ್ಕಳು ಆಡುತ್ತಿರುವುದು—ಎಲ್ಲವೂ ನಿರಾಯಾಸವಾಗಿ ಅವರ ಗಮನಕ್ಕೆ ಬರಬೇಕು. ಅವರು ಶಾಲೆಯಲ್ಲಿ ಕೆಲಸಮಾಡಿ ಬೇಸರಪಟ್ಟು ಮುಖವನ್ನು ಮೇಲೆತ್ತಿದಾಗ, ಕಿಟಕಿಯ ಹೊರಗಿನ ಪ್ರಶಾಂತವಾದ ಹಾಗು ಮನೋಹಾರಿಯಾದ ವಾತಾವರಣವು ಅವರ ಬೇಸರಿಕೆಯನ್ನು ಕಳೆದು ಮತ್ತೆ ಕೆಲಸಕ್ಕೆ ಪುಷ್ಟಿ ಕೊಟ್ಟಿರಬೇಕು. ವರ್ಗಗಳು ಕೂಡ ಮಕ್ಕಳ ಆಕಾರಮಾನಕ್ಕೆ ಸರಿಹೋಗಬೇಕು.

ಮಕ್ಕಳ ವರ್ಗಗಳು ಬಹು ಎತ್ತರವಾಗಿದ್ದರೆ ಅವುಗಳ ಜೆಪ್ಪರ ತಮ್ಮ ರಾಜ್ಯಕ್ಕೆ ಸಂಬಂಧಪಟ್ಟವುಗಳಲ್ಲವೆಂದೇ ಮಕ್ಕಳು ಭಾವಿಸುತ್ತಾರೆ; ವರ್ಗಗಳು ಬಹು ಅಗಲವಾಗಿದ್ದರೆ ಎಲ್ಲಿಯೋ ಒಂದು ಮೂಲೆಯಲ್ಲಿ ಮಕ್ಕಳು ಆಟವಾಡಿ, ಉಳಿದ ಭಾಗ ತಮ್ಮದಲ್ಲವೆಂದು ತಿಳಿದುಕೊಳ್ಳುತ್ತಾರೆ. ವರ್ಗಗಳು ತೀರ ಚಿಕ್ಕವುಗಳಾದರೂ ಕಷ್ಟ; ಆವೂ ಮಕ್ಕಳ ಮನಸ್ಸಿಗೆ ಹಿಡಿಯುವುದಿಲ್ಲ. ಮಕ್ಕಳ ಆಕಾರಮಾನಕ್ಕೆ ತಕ್ಕ ಕಟ್ಟಡಗಳಿರದಿದ್ದರೆ, ಎಷ್ಟು ಹಣ ನೆಚ್ಚವಾಗಿದ್ದರೂ ಅಂತಹ ಕಟ್ಟಡಗಳು ಉಪಯೋಗಕ್ಕೆ ಬಾರವು. ಮಕ್ಕಳಿಗಾಗಿ ಆದರ್ಶ ಶಾಲಾಕಟ್ಟಡಗಳನ್ನು ಸ್ವಲ್ಪ ನೆಚ್ಚದಲ್ಲಿಯೇ ನಿರ್ಮಿಸಲು ಸಾಧ್ಯವಿದೆ. ಸಾಧಾರಣವಾಗಿ ಈಗಿರುವ ಶಾಲಾಕಟ್ಟಡಗಳೆಲ್ಲ ಬಹು ನೆಚ್ಚದಿಂದ ಕಟ್ಟಿದುವುಗಳಾಗಿವೆ. ಆದರೂ ಅವುಗಳಿಂದ ಮಕ್ಕಳ ಸರಿಯಾದ ಬೆಳೆವಣಿಗೆಗೆ ಜನಕಾರವಿಲ್ಲ. ಹೀಗಿರುವಾಗ ಅನಾವಶ್ಯಕವಾಗಿ ಹೆಚ್ಚು ಹಣವನ್ನು ಏಕೆ ಹಾಳು ಮಾಡುವುದು? ತೀರ ಸ್ವಲ್ಪ ಹಣವಲ್ಲಿ ಆದರ್ಶ ಶಾಲಾ ಕಟ್ಟಡಗಳು ಸಿದ್ಧವಾಗುವ ಹಾಗಿದ್ದರೆ, ಶಿಕ್ಷಣತಜ್ಞರು ಇತ್ತ ಕಡೆಗೆ ಏಕೆ ಗಮನಿಸಬಾರದು?

ಟ್ರೇನಿಂಗ್ ಕಾಲೇಜುಗಳಿಗೆ ಹೊಂದಿಕೊಂಡಿರುವ ಶಾಲಾಗೃಹಗಳಾದರೂ ಆದರ್ಶವಾದುವುಗಳಾಗಿರಬೇಕು. ಇಂತಹ ಶಾಲೆಗಳಲ್ಲಿ ಪ್ರೇಕ್ಷಕರ ಸಿಡುಗು ಹೆಚ್ಚಾಗಿರುವುದರಿಂದ, ಮಕ್ಕಳ ಶಿಕ್ಷಣ ಸುಗಮವಾಗಲಾಗಲಾರದು. ಒಬ್ಬರಾದ ಮೇಲೆ ಒಬ್ಬರು ಬಂದು ಮಕ್ಕಳನ್ನು ತೊಂದರೆಗೆ ಒಳಪಡಿಸುತ್ತಾರೆ; ಅಭ್ಯಾಸದ ವಾತಾವರಣವನ್ನೇ ನಿರ್ನಾಮಗೊಳಿಸಿ ಬಿಡುತ್ತಾರೆ. ಇಂತಹ ಶಾಲೆಗಳಲ್ಲಿ ಪ್ರೇಕ್ಷಕರಿಗಾಗಿ ಪ್ರತ್ಯೇಕ ಮೇಲಟ್ಟದ ವ್ಯವಸ್ಥೆ ಮಾಡುವುದು ಉತ್ತಮ. ಇಲ್ಲವಾದರೆ ಶಾಲೆಯಲ್ಲಿ ಅಪೇಕ್ಷಿಸುವ ಪರಿಣಾಮ ಕಂಡುಬಾರದು. ರೋಮ್ ನಗರವಲ್ಲಿ ದೊಡ್ಡ ದೊಡ್ಡ ಪುರಾತನ ಕಟ್ಟಡಗಳನ್ನು ಶಾಲೆಗಳ ಉಪಯೋಗಕ್ಕಾಗಿ ಕೊಟ್ಟಾಗ—ಕೆಲವು ಮಾದರಿಯ ವ್ಯವಸ್ಥೆಯನ್ನು ಮಾಡಲಾಯಿತು. ಪ್ರೇಕ್ಷಕರಿಗಾಗಿ, ಒಳಗೋಡೆಯ ಸುತ್ತಲೂ ಮೇಲಟ್ಟದ ವ್ಯವಸ್ಥೆ ಮಾಡಿದುದರಿಂದ, ಚಿಕ್ಕಮಕ್ಕಳಿಗೆ ಅತಿ ಎತ್ತರದ ಜೆಪ್ಪರದ ಕಲ್ಪನೆ ದೂರವಾಯಿತು. ಮಕ್ಕಳಿಗೆ ಹಲವು ಸಲ ಏಕಾಂತವಾಸ ಬೇಕಾಗುತ್ತದೆ. ಇದರ ವ್ಯವಸ್ಥೆಗಾಗಿ ಈ ಭವ್ಯ ಮಂದಿರಗಳಲ್ಲಿ ಅಲ್ಲಲ್ಲಿ ಕಿರಿಯ ಎತ್ತರದ ತಾತ್ಕಾಲಿಕ ಗೋಡೆಗಳನ್ನು ನಿರ್ಮಿಸಿ, ಅವುಗಳ ಮೇಲೆ ಜಲಚರ ಹಾಗು ಅನೇಕ ಬಗೆಯ ಬಳ್ಳಿಗಳ ಪಾತ್ರೆಗಳನ್ನು ಇರಿಸುವ ವ್ಯವಸ್ಥೆಮಾಡಲಾಯಿತು. ಮಕ್ಕಳು ವಿಶ್ರಾಂತಿ ಬಯಸಿದಾಗ, ಈ ಗೋಡೆಗಳ ಹಿಂದೆ ಹೋಗಿ ಕೆಲಕಾಲ ಕಳೆಯುವಂತಾಯಿತು.

ಶಾಲಾ ಕಟ್ಟಡದ ನಿರ್ಮಾಣದಲ್ಲಿ ಇನ್ನೂ ಒಂಗು ಅತಿ ಸೂಕ್ಷ್ಮವಾದ ವಿಚಾರವನ್ನು ಲಕ್ಷ್ಯಕ್ಕೆ ತರಬೇಕು. ದೊಡ್ಡ ಪಟ್ಟಣಗಳಲ್ಲಿ ಇರುವ ಮನೆಗಳು ಚಚ್ಚೌಕಾಗಿ ಅತಿ ಚಿಕ್ಕವುಗಳಾಗಿರುತ್ತವೆ. ಇಂತಹ ಮನೆಗಳಲ್ಲಿ ಬಹುಜನ ದೊಡ್ಡವರೊಂದಿಗೆ ಕೆಲವು ಜನ ಚಿಕ್ಕ ಮಕ್ಕಳು ಸೇರಿಯುವಾಗ, ಈ ಚಚ್ಚೌಕು ಮನೆಗಳ ಬಗ್ಗೆ ಮಕ್ಕಳಲ್ಲಿ ಸ್ವಾಭಾವಿಕವಾದ ಅಸಹ್ಯತೆಯೊಂದು ಹುಟ್ಟುತ್ತದೆ. ನಮ್ಮ ಪುರಾತನ ದೇವಾಲಯಗಳೆಲ್ಲ ಕಮಲದ ಆಕಾರ ಇಲ್ಲವೆ ಬೇರೆಬೇರೆ ಆಕಾರವಲ್ಲಿರುವುದಕ್ಕೆ ಇದೇ ಕಾರಣ. ಬುದ್ಧಿವಂತನಾದ ಮನುಷ್ಯ—ಚಚ್ಚೌಕಾದ ಚಿಕ್ಕ ಮನೆಗಳಲ್ಲಿ ವಾಸಮಾಡಿ ಬೇಸರಪಟ್ಟು, ತನ್ನ ಬುದ್ಧಿ ಸರಿಪಡಿಸಿಕೊಳ್ಳಲು ಹೋಗಲು, ದೇವಾಲಯಗಳನ್ನು ಈ ರೀತಿಯಾಗಿ ವಿವಿಧಾಕಾರಗಳಲ್ಲಿ ನಿರ್ಮಿಸಿದ್ದಾನೆ. ಮಕ್ಕಳ ದೇವಾಲಯಗಳಾದ ಶಾಲೆಗಳು ಕೂಡ ಇದೇ ಮಾದರಿಯವುಗಳಾಗಿರಬೇಕು. ಅವುಗಳ ಆಕಾರವು ಮಕ್ಕಳ ಪ್ರಸನ್ನತೆಗಾಗಿ ತ್ರಿಕೋಣ, ವರ್ತುಳ ಇಲ್ಲವೆ ಅಂಡಾಕೃತಿಯಾಗಿರುವುದು ಶ್ರೇಯಸ್ಕರ. ಈಗಿರುವ ಭವ್ಯ ಕಟ್ಟಡಗಳ ಪೂರ್ವಭಾಗಗಳಲ್ಲಿ, ತಾತ್ಕಾಲಿಕ ಕಿರಿಯ ಎತ್ತರದ ಗೋಡೆ ನಿರ್ಮಿಸಿ-

* ಡಾ. ಮೇರಿಯಾ ಮೊಂಟಿಸೊರಿಯವರು ಕೆಲವು ಜನ ಶಿಕ್ಷಕರಿದುರು ಕೊಟ್ಟ ಉಪನ್ಯಾಸದ ಆಧಾರದಿಂದ. —ಲೇ.

ದರೂ ಶಾಲೆಯ ಆಕಾರ ಮೋಹಕವಾಗುವುದಲ್ಲದೆ—ಈ ಗೋಡೆಗಳ ಹಿಂಬದಿಯ ಸ್ಥಳವನ್ನು ಅನೇಕ ರೀತಿಯಲ್ಲಿ ವಸ್ತುಸಂಗ್ರಹಾಲಯ, ವಾಚನಾಲಯ, ವಿಶ್ರಮಿಸುವ ಕೋಣೆ ಮೊದಲಾದುವುಗಳನ್ನಾಗಿ ಉಪಯೋಗಿಸಿಕೊಳ್ಳಬಹುದು. ಆದರೆ ಕಿರಿಯಗಲವಾದ ಚರ್ಚ್ಚಾಕು ಮನೆಗಳಲ್ಲಿ ಮಕ್ಕಳನ್ನು ತುಂಬುವುದೆಂದರೆ ಅವರ ಜೀವವನ್ನು ಹಿಂಡಿದಂತೆಯೆ.

ಮಕ್ಕಳ ಶಾಲಾಗೃಹಗಳ ನೆಲವು ಕೂಡ ಆಕರ್ಷಕವಾಗಿರಬೇಕು. ಗೋಡೆಗಳಿಗಿಂತ ಇಂತಹ ಶಾಲೆಗಳಲ್ಲಿ ನೆಲಕ್ಕೆ ಹೆಚ್ಚು ಪ್ರಾಮುಖ್ಯತೆಯಿದೆ. ಚಿಕ್ಕ ಮಕ್ಕಳು ಹೆಚ್ಚಾಗಿ ನೆಲದ ಕಡೆಗೇ ಲಕ್ಷ್ಯ ಕೊಡುತ್ತಾರೆ. ಗೊಡೆಗಳ ಕಡೆಗೆ ಅಷ್ಟು ಗಮನಿಸುವುದಿಲ್ಲ. ಇಂತಹ ನೆಲವು, ಬಣ್ಣ ಬಣ್ಣದ ಹಂಚುಗಳಿಂದಾಗಲಿ, ಸುಣುಸಾದ ಮೇಣದಿಂದ ಸವರಿದ ಮರದ ತುಂಡುಗಳಿಂದಾಗಲಿ ಹೊದಿಸಿದುದಿರಬೇಕು. ಇಂತಹದೇ ಇರಬೇಕೆಂಬ ಕಟ್ಟುನಿಯಮವಿಲ್ಲ. ಚಾಣಾಕ್ಷನಾದ ಶಿಲ್ಪಿಗೆ ಈ ಕಾರ್ಯವನ್ನು ಒಪ್ಪಿಸಿದರೆ, ಆತನು ಹೇಗಾದರೂ ಮಕ್ಕಳು ಮೋಹಿಸುವಂತೆ ನೆಲವನ್ನು ನಿರ್ಮಿಸುತ್ತಾನೆ.

ಉದ್ಯಾನವನ

ಶಾಲಾಗೃಹದಂತೆ ಉದ್ಯಾನವನವೂ ಮಕ್ಕಳ ಆಕಾರಮಾನಕ್ಕೆ ತಕ್ಕಂತಿರಬೇಕು. ಬಹುದೊಡ್ಡ ಕೈತೋಟವಿದ್ದರೆ, ಮಕ್ಕಳಿಗೆ ಅದರಲ್ಲಿ ಆಸಕ್ತಿ ಹುಟ್ಟುವುದಿಲ್ಲ. ತೀರ ಚಿಕ್ಕದಿದ್ದರೂ ಅಷ್ಟೇ. ಅವರ ಮನಸ್ಸಿಗೆ ತಕ್ಕಂತೆ ತೋಟವಿದ್ದು, ಅದಕ್ಕೆ ಆವಾರವ ಗೋಡೆ ಇರದಿದ್ದರೆ ಮಕ್ಕಳು ನಿರ್ಭಯವಾಗಿ ಅಲ್ಲಿ ಹೋಗಲಾರರು. ಈ ಭಯವನ್ನು ಹೊಡೆದು ಹಾಕುವುದಕ್ಕೋಸ್ಕರ ಅದಕ್ಕೆ ಸುತ್ತಲು ಗೋಡೆ ಇರಬೇಕು. ತೋಟವ ಒಳಭಾಗವು ಕೂಡ, ಶಾಲಾಗೃಹದಲ್ಲಿಯ ವಸ್ತುಗಳಂತೆ ಅಂದವೂ ಚೆಂದವೂ ಆಗಿರಬೇಕು. ಅದರಲ್ಲಿಯೂ ಮುಖ್ಯವಾಗಿ ಗಮನಿಸತಕ್ಕ ವಿಚಾರಗಳು:—

೧. ತೋಟವು ಅಂದವಾಗಿದ್ದು ಅದರಲ್ಲಿ ಸಾಕಷ್ಟು ಸುಂದರವಾದ ಬಣ್ಣ ಬಣ್ಣದ ಹೂಗಳು ತುಂಬಿಕೊಂಡಿರುವುದಲ್ಲದೆ, ತರತರದ ಸಾಸನೆಯ ಗಿಡ-ಬಳ್ಳಿಗಳಿಗೆ ಅಲ್ಲಿ ಸ್ಥಾನವಿರಬೇಕು. ಈ ಕೆಲಸವನ್ನು ಜಾಣನಾದ ತೋಟಗಾರನಿಗೆ ಒಪ್ಪಿಸುವುದು. ಮಕ್ಕಳು ಹೂಬಳ್ಳಿ ಹಾಗು ಅವುಗಳ ಮಡಿಗಳನ್ನು ಮರ್ಯಾದಿಸುವಂತೆ ಮಾಡುವುದೇ ಶಿಕ್ಷಣದ ಉದ್ದೇಶ.

೨. ಸಾರ್ವಜನಿಕ ಉದ್ಯಾನಗಳಲ್ಲಿ ಹೂಬಳ್ಳಿಗಳನ್ನು ಮುಟ್ಟಗೊಡುವುದಿಲ್ಲವಾದ್ದರಿಂದ, ಮಕ್ಕಳಿಗೆ ಅವುಗಳಲ್ಲಿ ಆಸ್ಥೆಯಿರದು. ಶಾಲೆಯ ತೋಟಗಳಲ್ಲಿ ಅವರಿಗೆ, ಮುಡಿಪಾಡಿ ಮಣ್ಣು ಹರಡಿ, ಕಸ ಕಡ್ಡಿ ತೆಗೆಯಲು ಅವಕಾಶವಿರಬೇಕು. ಹುಡುಗರೆಲ್ಲರೂ ಒಟ್ಟಾಗಿ ತೋಟದ ಕೆಲಸಮಾಡಿ, ಅದರ ಪರಿಣಾಮದ ಫಲವನ್ನು ಒಟ್ಟಾಗಿಯೆ ಅನುಭವಿಸಬೇಕು. ಅದರಲ್ಲಿಯೇ ಅವರಿಗೆ ಸಂತೋಷವಿರುವುದು. ತೋಟವನ್ನು ವಿಂಗಡಿಸಿ ಪ್ರತಿಯೊಬ್ಬರಿಗೆ ಬೇರೆ ಬೇರೆ ಸ್ಥಳಮಾಡಿ ಕೊಟ್ಟರೆ, ಅದರಿಂದ ಬರುವ ಫಲ ಅಷ್ಟು ಹಿಡಿಯುವುದಿಲ್ಲ. ತೀರ ಚಿಕ್ಕ ಮಕ್ಕಳಲ್ಲಿ ಸ್ವಾರ್ಥಪರತೆಯಿರುವುದಿಲ್ಲ. ಒಟ್ಟಾಗಿ ಕೆಲಸಮಾಡಿ ಒಟ್ಟಾಗಿ ಸಂತೋಷ ಪಡುವುದೇ ಅವರ ಮನಸ್ಸಿನ ರೀತಿಯಾಗಿದೆ. ಅವರಿಗೆ ತೋಟಗಾರಿಕೆಯ ಜ್ಞಾನವನ್ನು ತಿಳಿಸಿಹೇಳಿ, ಅವರಲ್ಲಿ ನಿಜವಾದ ಕಲಾಕೃತಿಯ ಬಗ್ಗೆ ಅರಿವನ್ನುಂಟು ಮಾಡಬೇಕು. ತನ್ನ ಸುತ್ತಲಿನ ವಾತಾವರಣದಲ್ಲಿ ಸೌಂದರ್ಯವನ್ನು ಹರಡುವುದು ಮಾನವ ಸ್ವಭಾವಗುಣವಾದುದರಿಂದ, ತೋಟಗಾರಿಕೆಯ ಶಿಕ್ಷಣದಲ್ಲಿ ಸೌಂದರ್ಯೋಪಾಸನೆಗೆ ಹೆಚ್ಚಾಗಿ ಮಹತ್ತ್ವ ಕೊಡಬೇಕು.

೩. **ಕಾಯಿ-ಪಲ್ಲೆ ವಿಭಾಗ**:— ಇದರಲ್ಲಿ ಮತ್ತೆ ಎರಡು ವಿಭಾಗ ಮಾಡಬಹುದು. (೧) ತೋಟಗಾರನ ತೋಟ ಹಾಗು (೨) ಮಕ್ಕಳ ತೋಟ.

ಹೂದೋಟವು ಮಕ್ಕಳಿಗೆ ಭಾವಬೋಧಕವಾದರೆ ಕಾಯಿ-ಪಲ್ಲೆಯ ತೋಟ ಕ್ರಿಯಾಬೋಧಕವಾದುದು. ಮಕ್ಕಳು ಒಟ್ಟಾಗಿ ಕೆಲಸ ಮಾಡುವುದರಿಂದ ಅದರ ಫಲವು ಕೂಡ ಹುಲುಸಾಗಿ ಬರುವುದು. ಬೇರೆ ಬೇರೆ ದಿನಮಾನಗಳಲ್ಲಿ ಬೇರೆ ಬೇರೆ ಕಾಯಿಪಲ್ಲೆಗಳನ್ನು ಬೆಳೆದು, ಅವನ್ನು ಉಪಯೋಗ ಮಾಡುವುದರಲ್ಲಿ ಮಕ್ಕಳಿಗೆ ಎಲ್ಲಿ ಇಲ್ಲದಷ್ಟು ಸಂತೋಷ. ಗಡ್ಡೆ-ಗೆಣಸುಗಳನ್ನು ಬೆಳೆದು ಅವನ್ನು ಅಗಿದು ತೆಗೆಯುವಾಗ, ಭೂಮಿ-ತಾಯಿಯ ಆಹಾರ-ಸಂಪತ್ತಿನ ಕಲ್ಪನೆ ಮಕ್ಕಳಿಗೆ ಬಾರದಿರದು.

೪. **ಬೆಚ್ಚನ್ನ ಮನೆ**:— ಕೆಲವು ಗಿಡ-ಬಳ್ಳಿಗಳಿಗೆ ಹೆಚ್ಚು ಶಾಕಬೇಕು; ಕೆಲವಕ್ಕೆ ಕಡಿಮೆ. ಈ ರಕ್ಷಣೆಯ ವಿಧಾನವನ್ನು ಮಕ್ಕಳಿಗೆ ಹೇಳಿಕೊಟ್ಟು—ಅದನ್ನು ಹೇಗೆ ರಕ್ಷಿಸುವುದೆಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಡಬೇಕು.

೫. **ಪ್ರಯೋಗಶಾಲೆ**:— ತೋಟದ ಒಂದು ಕಡೆಯಲ್ಲಿ ಸಸ್ಯಶಾಸ್ತ್ರದ ಪ್ರಯೋಗಶಾಲೆಯೊಂದು ಇರುವುದು ಅತ್ಯವಶ್ಯ. ಇಲ್ಲಿ, ಗಿಡ-ಬಳ್ಳಿಗಳ ಬೆಳೆವಣಿಗೆ, ನೀರು-ಬೆಳಕುಗಳ ಪರಿಣಾಮ, ಬೇರುಗಳ ಉತ್ಪತ್ತಿ ಹಾಗು ಬೆಳೆವಣಿಗೆ ಮುಂತಾದುವುಗಳನ್ನು, ಸಚಿತ್ರವಾಗಿ ಹಾಗು ಸಪ್ರಯೋಗಿಕವಾಗಿ ತೋರಿಸಿಕೊಡುವುದರಿಂದ— ಮಕ್ಕಳ ಮಾನಸಿಕ ಬೆಳೆವಣಿಗೆಯಾಗುವುದಲ್ಲದೆ ಈ ಶಾಸ್ತ್ರದಲ್ಲಿ ಅಭಿರುಚಿಯೂ ಹುಟ್ಟುವುದು.

೬. **ಹಣ್ಣಿನ ತೋಟ**:— ಹಣ್ಣಿನ ತೋಟವು ಮಕ್ಕಳಲ್ಲಿ ಗಿಡ ಏರುವುದು, ಹಗ್ಗದ ಏಣಿ ಉಪಯೋಗಿಸುವುದು ಮುಂತಾದ ಶಾರೀರಿಕ ಅಂದೋಲನವನ್ನು ಒದಗಿಸುವುದು. ಅನೇಕ ಹಣ್ಣಿನ ಗಿಡಗಳು ಸುಂದರವಾದ ಹೂಗಳಿಂದ ಅಲಂಕರಿಸಿರುವುದರಿಂದ, ಮಕ್ಕಳಲ್ಲಿ ಸೌಂದರ್ಯದ ಕಲ್ಪನೆಯನ್ನು ತಂದುಕೊಡುವುವು. ಪಕ್ವಫಲಗಳನ್ನು ಗಿಡದಿಂದ ಇಳಿಸುವ ವಿಧಾನವು ಅವರಿಗೆ ಬಹು ಮೋಹಕವಾದುದು

ತೋಟದ ಇನ್ನೊಂದು ಭಾಗವು ಮಕ್ಕಳ ಆಟಗಳಿಗೆ ಮೀಸಲಾಗಿರಬೇಕು. ಇಂತಹ ಆಟದ ಬಯಲು ಸಾಕಷ್ಟು ದೊಡ್ಡದಿದ್ದು ಹುಲ್ಲುಹಾಸಿಗೆಯಿಂದ ಹೊದಿಸಿದುದಾಗಿರಬೇಕು. ಒಂದು ಬದಿಗೆ ಮಕ್ಕಳು ಆಟವಾಡುವುದನ್ನು ನಿರೀಕ್ಷಿಸುವುದರ ಸಲುವಾಗಿ ಎತ್ತರವಾದ ದೊಡ್ಡ ಕಟ್ಟೆ ಇದ್ದು, ಮತ್ತೊಂದು ಬದಿಗೆ, ಚಿಕ್ಕ ಆಂಗಡಿ

ಗಳಿಗೆ ಸ್ಥಳವಿರಬೇಕು. ಮಗುಮೊಮ್ಮಗ ಬದಿಗೆ ಆಟದ ಸಲಕರಣೆಗಳ ಮನೆಗಳು; ಈ ಆಟದ ಬಯಲಿಗೆ ಸ್ವಲ್ಪ ದೂರದಲ್ಲಿ ಉಸುವ ಹೊಂಡ ನೋಂದು– ಮಕ್ಕಳ ಆಕಾರಮಾನಕ್ಕೆ ತಕ್ಕಂತೆ- ಎಲ್ಲ ಸಲಕರಣೆಗಳಿಂದ ಕೂಡಿರಬೇಕು. ಈ ಹೊಂಡದ ನೀರನ್ನು ಕಾಲಕಾಲಕ್ಕೆ ಹೊರಗೆ ತೆಗೆದು, ಬೇರೆ ಹೊಸ ನೀರನ್ನು ತುಂಬುವ ವ್ಯವಸ್ಥೆಯಿರಬೇಕು.

ಮಕ್ಕಳ ಆಟ

ಆಟದ ಕ್ರಮವು ಕೂಡ ಪ್ರತಿಯೊಂದು ದೇಶದ ಹಣಮಾನಕ್ಕೆ ತಕ್ಕಂತೆ ಬದಲಾಗುತ್ತವೆ. ಯುರೋಪು–ಅಮೇರಿಕಾ ದೇಶಗಳಲ್ಲಿ ಟೆನಿಸ್ ಆಟ ಪ್ರಸಿದ್ಧವಾದರೆ. ಹಿಂದುಸ್ತಾನಕ್ಕೂ ಅದು ಒಗ್ಗುವುದೆಂದರೆ ತೀರ ತಪ್ಪು ತಿಳಿವಳಿಕೆ. ಉಳಿದ ಆಟಗಳ ಬಗ್ಗೆಯೂ ಹೀಗೆಯೇ ಹೇಳಬಹುದು. ಕೆಲವು ಕಡೆಯಲ್ಲಿ ತೂಗುವ ಮರದ ಕುದುರೆಯನ್ನು ಮಕ್ಕಳಿಗೆ ಕೊಡುತ್ತಾರೆ. ಆದರೆ ಇದರಿಂದ ಮಕ್ಕಳಿಗೆ ಯಾವ ಹಿತವೂ ಆಗುವುದಿಲ್ಲ. ಪ್ರತಿಯಾಗಿ ಅವರ ಚಲನವಲನ ಒಂದು ಸ್ಥಿಮಿತಕ್ಕೆ ಬಂದು - ಸ್ವಾಭಾವಿಕವಾದ ಚಲನೆಗೆ ಅಡ್ಡಿ ಬರುತ್ತದೆ; ಅವರ ಬೆಳವಣಿಗೆ ಕುಗ್ಗುತ್ತದೆ; ಅವರಿಗೆ ಯಾವ ಸಲಕರಣೆಯೂ ಬೇಡ. ಸಾಕಷ್ಟು ದೊಡ್ಡದಾದ ಹುಲ್ಲು ಹೊದಿಸಿದ ಆಟದ ಬಯಲು ಇದ್ದರೆ, ಅವರು ಸಂತೋಷದಿಂದ ತಮ್ಮ ಮನಸ್ಸಿಗೆ ಬಂದ ಹಾಗೆ ಆಟವಾಡಿಕೊಳ್ಳುತ್ತಾರೆ. ಜಾರಹತ್ತುವುದು, ಹಗ್ಗದ ಏಣಿ ಏರುವುದು, ದೂರದವರೆಗೆ ಓಡುವುದು, ಎತ್ತರದಲ್ಲಿ ನೆಗೆಯುವುದು ಮೊದಲಾದ ಆಟಗಳಲ್ಲಿ ಮಕ್ಕಳು ಮನಸ್ಸು ಹಾಕುವುದರಿಂದ, ಅವರು ತಮ್ಮ ಸ್ನಾಯುಬಲವನ್ನು ಪ್ರಸ್ತಗತ ಮಾಡಿಕೊಳ್ಳುತ್ತಾರೆ. ಆಟದ ಧ್ಯೇಯವೇ ಇದು.

ಕುದುರೆ ಸವಾರಿ, ಗಿಡಮಂಗನ ಆಟ, ಸೈಕಲ್ ಸವಾರಿ-ಗಳಲ್ಲಿ ಮಕ್ಕಳಿಗೆ ಆಸ್ಥೆಯಿರುವುದಲ್ಲದೆ ತಮ್ಮ ಚಲನವಲನಗಳಲ್ಲಿ ಒಂದು ಬಗೆಯ ಭರವಸೆಯೂ ಕೂಡ ಅವರಲ್ಲಿ ಬರುತ್ತದೆ.

ಶ್ರಾವಣದಲ್ಲಿ

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ
ಮೈಸೂರು.

ರಾಗ–ರಾಗವ ಲಹರಿ ರಂಜಿಸಿತ್ತು ;
ಸಿತ ಶ್ರಾವಣದ ಸಿರಿಯು—ಕುಸುಮ ಪರಿಷತ್ತು !

ಕೆಂಪು, ನೀಲವು, ಹಳದಿ, ರೋಜ, ಮುತ್ತು; —
ಸಪ್ತ ಹಿನ್ನೆಲೆಯಲ್ಲಿ ಕೋಫೆನೆತ್ತು !

ನೇಲೆ ನೆತ್ತಿಯೊಳಲ್ಲಿ ಘನ-ಜುಂಬಿ ಬಾನು !
ಅಲ್ಲಿ, ಆ ದೂರದಲಿ ಪೃಥ್ವಿ ನೀಲ ಸಾನು !

ಸಂಜೆಯೆಲರೊಯ್ಯನೊಯ್ಯನೆ ತೀಡುತಿತ್ತು ;
ಗಿಡ, ಬಳ್ಳಿ, ಎಲೆ, ಹೂವ ಕುಣಿ--ಕುಣಿಸುತಿತ್ತು !

ಮುಳೆಯು ತುಂತುರ್ವನಿಯು ಪನ್ನೀರುಗೆತ್ತು
ಸಿಂಪಡಿಸುತಿರ್ದತ್ತು :— ಹಸಿ ತೋರ ಮುತ್ತು !

ಪ್ರಕೃತಿ ತಾಯಿಯ ಬಸಿರು ಬೆಸಲೆಯಾಗಿತ್ತು :
ನವ-ಸೃಷ್ಟಿ ಸಂಭ್ರಮಕೆ ಪುಳಕವಾಂತಿತ್ತು !

ಉದ್ಯಾನ ವೀಥಿಯಲಿ ಕವಿ-ಮಿತ್ರ, ನಾನು
ಬರುತಿರಲು, ಚೈತನ್ಯ ಜಲಧಿಗೆಮ್ಮನ್ನು

ಬೀಸಿತ್ತು ಪ್ರಕೃತಿ ರತಿ, ಆಡಗೆ ಜಡವಿಕೃತಿ :
ಸೌಂದರ ರಜಾಲೋಕ ಕವಿಗೆ ಶ್ರೀಮುಕುತಿ !

ದೇವರಲ್ಲಿ

೧

ಎನ್ನ ಜೀವನವೆಲ್ಲ ಒಂದು ನೀರವ ಧ್ಯಾನ-
ವಪ್ಪಂತೆ ಕರುಣಿಸೈ ದೇವ-ಮಾನ್ಯ !
ಎನ್ನ ಚಿಂತನೆಯೆಲ್ಲ ನಿನ್ನ ಕುರಿತಾಗಿರಲು
ಸನ್ನುತನೆ ಕರುಣಿಸಾ ದಿವ್ಯಪುಣ್ಯ !

೨

ಎನ್ನೆಲ್ಲ ಕೃತಿಗಳೂ ನಿನ್ನೊಳಗೆ ಅರ್ಪಿತವು;—
ದೇವ, ಸ್ವೀಕರಿಸಿ ಗೈಯನ್ನ ಧನ್ಯ !
ಎನ್ನ ಬಾಳುವೆಯ ನಿನ್ನಾಣತಿಗೆ ಒಳಗಾಗಿ,—
ಮೀರದೆಯೆ,— ನಡೆಯಿಸೈ, ಶ್ರೀವರೇಣ್ಯ !

೩

ಎನ್ನೊಳಿತಾವುದೋ ಅದನಾನಿಯೆನಯ್ಯ ,
ಕೈ ಹಿಡಿದು ನಡೆಸಯ್ಯ ತಾಯಿಯಾಗಿ;
ಎನ್ನ ತಪ್ಪುಗಳೆಲ್ಲ ಮಡಿಲಲ್ಲಿ ಧರಿಸಯ್ಯ ;
ಮೂರ್ಖ ಸುಗನನು ಪೆತ್ತ ತಾಯಿಯಾಗಿ !

* * * *

ಎನ್ನ ಜೀವನವೆಲ್ಲ ಒಂದು ನೀರವ ಧ್ಯಾನ-
ವಪ್ಪಂತೆ ಕರುಣಿಸೈ ದೇವಮಾನ್ಯ !

ರಶಿಯನನ ದೇಶಭಕ್ತಿ

(ಒಂದು ಸತ್ಯಕತೆ)*

●

ಶ್ರೀ. ಚುಳಕಿ ಗೋವಿಂದರಾಯರು, ಧಾರವಾಡ

●

೧೮೧೨ನೆಯ ಇಸವಿ. ದಿಗ್ವಿಜಯಿಯಾದ ನೆಪೋಲಿಯನ್ ಚಕ್ರವರ್ತಿಯು ರಶಿಯಾದೇಶವನ್ನು ಮುತ್ತಿದ್ದನು. ರಶಿಯನರು 'ತ್ರಾಹಿ ತ್ರಾಹಿ' ಎಂದು ಬಾಯಿಬಿಡುತ್ತಿದ್ದಾರೆ. ಅವರಿಗಾದ ಕಷ್ಟ-ನಷ್ಟಗಳನ್ನು ನೆನೆದರೆ ಮೈಮೇಲೆ ಮುಳ್ಳು ಬರುವುವು. ಫ್ರೆಂಚ್ ಸೀಪಾಯಿಗಳು ರಶಿಯನರ ಮೇಲೆ ಮಾಡಿದ ಅತ್ಯಾಚಾರ, ಹಿಂಸೆ ಅಷ್ಟಿಷ್ಟೆಂದು ಹೇಳಿ ತೀರದು. ಊರಿಗೂರುಗಳನ್ನೇ ಉಧ್ವಸ್ತಮಾಡಿ, ನಿರಪರಾಧಿ ಜನರನ್ನು ಬಲಿ ತೆಗೆದುಕೊಳ್ಳುತ್ತ, ಒಮ್ಮೆ ಒಂದು ಸಾಯಂಕಾಲ ಒಂದು ಹಳ್ಳಿಯನ್ನು ತಲುಪಿದರು. ಹಳ್ಳಿಗೆ ಕೊಳ್ಳಿಯಿಟ್ಟರು. ಊರ ಜನರನ್ನು ಹೊರಕ್ಕೆ ತಳ್ಳಿದರು. ಇನ್ನೂ ಅನೇಕಾನೇಕ ಅನನ್ವಿತ ಕೃತಿಗಳನ್ನು ಜರುಗಿಸಿ, ರಾತ್ರಿಯನ್ನು 'ಕಳೆಯುವುದಕ್ಕಾಗಿ ಆ ಊರೊಳಗೇ ಇದ್ದೊಂದು ದೇವಾಲಯದಲ್ಲಿ ತಳವೂರಿದರು. ವಿಶಾಲವಾದ ದೇವಾಲಯ—ಕೇಳುವುದೇನು; ಮನಬಂದಂತೆ ವಿಶ್ರಮಿಸತೊಡಗಿದರು.

ಈ ನರರಾಕ್ಷಸರ ಕೈಯೊಳಗಿಂದ ಪಾರಾಗಿ ಜೀವ ಉಳಿಸಿಕೊಳ್ಳಲು ಕೆಲವು ಜನರು ಹೇಗೋ ತಪ್ಪಿಸಿಕೊಂಡು, ಸಮೀಪದ ಗುಡ್ಡದ ದರಿಯಲ್ಲಿ ಅಡಗಿಕೊಂಡಿದ್ದರು. ನಡುರಾತ್ರಿ ಕಳೆದಿತ್ತು, ಕತ್ತಲೆ ಕವಿದಿತ್ತು, ಚಳಿಯೂ ವಿಪರೀತ. ಮನೆ-ಮಾರು ಕಳೆದುಕೊಂಡು, ಆಪ್ತೇಷ್ಟರ ಮರಣವಾರ್ತೆಯಿಂದ ಜರ್ಜರಿತರಾಗಿ, ಕೈಯಲ್ಲಿ ಜೀವ ಹಿಡಿದುಕೊಂಡು ಓಡಿ ಬಂದ ಆ ಜನರು ಹೌಹಾರಿ, ಆ ಕಾಳರಾತ್ರಿ ಹೇಗೆ ಕಳೆದೀತೋ ಎಂಬ ವಿಚಾರದಲ್ಲಿ ಮಗ್ನರಾಗಿದ್ದರು. ಈ ಜನರು ಓಡಿ ಬರುವಾಗ, ಇವರೊಳಗಿನ ೨೧ ವರುಷದ ತರುಣಿಯೊಬ್ಬಳಿಗೆ ಆ ಕ್ರೂರ ಸೀಪಾಯಿಗಳ ಗುಂಡು ಬಡಿಯಿತು; ಅದರಿಂದ ಅವಳಿಗೆ ಬಹು ಗಾಯವಾಯಿತು. ಅಂಥವಳನ್ನೇ ಅವಳ ಗಂಡನು ಹೊತ್ತುಕೊಂಡು ಬಂದು, ತೊಡೆಯ ಮೇಲೆ ಮಲಗಿಸಿಕೊಂಡು ಸಮಾಧಾನಪಡಿಸುತ್ತ ಆರೈಕೆ ಮಾಡತೊಡಗಿದ್ದಾನೆ. ಪ್ರತಿ ಕ್ಷಣಕ್ಕೂ ಅವಳ ಆಯುಷ್ಯವು ಕಡಮೆಯಾಗುತ್ತ ನಡೆದಿದೆ. ಅಂತಹವರಲ್ಲಿಯೆ ಆ ತರುಣಿಯು ಸ್ಖಲಿತಸ್ವರದಲ್ಲಿ "ಪ್ರಿಯ ಮಿಚಲಾ, ನನ್ನ ಮರಣಸಮಯದ ಒಂದಿಚ್ಛೆ ಇದೆ; ಅದನ್ನು ಪೂರ್ತಿ ಮಾಡುತ್ತೀಯಾ? ಆ ಇಚ್ಛೆ ಸಫಲವಾದರೆ ನಾನು ಸಂತೋಷದಿಂದ ಈ ಲೋಕಯಾತ್ರೆಯನ್ನು ಮುಗಿಸುವೆನು. ಇಲ್ಲ...." ಎಂದು ಗಂಡನನ್ನು ಕುರಿತು ಮಾತನಾಡಿದಳು.

ಮುಂದೆ ಅವಳ ಬಾಯಿಂದ ಶಬ್ದ ಹೊರಡಲಿಲ್ಲ. ಹೆಂಡತಿಯ ಈ ಹೃದಯದ್ರಾವಕ ಅವಸ್ಥೆಯನ್ನು ಕಂಡು ಮಿಚಲನ ಅಂತಃಕರಣ ಕರಗಿ ನೀರಾಯಿತು. ನೀರಾಗಿ ಉಪಯೋಗವೇನೆಂದು ಧೈರ್ಯ ತಂದುಕೊಂಡು ಆವೇಶದಿಂದ "ಹೇಳು, ಹೇಳು, ಇಚ್ಛೆಯಾದರೂ ಯಾವುದದು? ಎಷ್ಟು ದುಸ್ಸಾಧ್ಯವಿದ್ದರೂ ನಾನು ಪೂರ್ಣಮಾಡುವೆನು. ಪ್ರಿಯೆ, ಬೇಗನೆ ಹೇಳು, ಆ ನಿನ್ನ ಇಚ್ಛೆ ಯಾವುದು?" ಎಂದು ಅವನು ಆತುರತೆಯಿಂದ ವಿಚಾರಿಸಿದನು. ಅಗ್ನಿನಾರಾಯಣನಿಗೆ ಅರ್ಪಿತವಾದ ತನ್ನ ಊರ ಕಡೆಗೆ ದೃಷ್ಟಿಯನ್ನು ಬೀರಿ ಆ ತರುಣಿಯು 'ನಮ್ಮೂರ ದೇವಾಲಯದಲ್ಲಿ ಗೋಡೆಗೆ ತೂಗುಹಾಕಿದ ನಮ್ಮ ಪೂಜ್ಯ ಮಹಂತನ ಚಿತ್ರವನ್ನು ತಂದು ನನಗೆ ತೋರಿಸಿದರೆ, ನಾನು ಸುಖದಿಂದ ಸಾಯುವೆನು....' ಎಂದು ಅವಳು ತನ್ನ ಇಚ್ಛೆಯನ್ನು ಪ್ರಕಟಮಾಡಿದಳು.

ಕಾಲ ಕಳೆಯುವಂತಿಲ್ಲ, ವಿಲಂಬವು ಉಪಯೋಗದ್ದಲ್ಲ—ಎಂದು ಚಿಂತಿಸಿ, ಮಿಚಲನು ಕಲ್ಲೆದೆಯನ್ನು ಮಾಡಿ, ಹೆಂಡತಿಯ ತಲೆಯನ್ನು ನೆಲದ ಮೇಲಿರಿಸಿದನು. ಪ್ರೇಮದುಂಬಿದ ಕಣ್ಣುಗಳಿಂದ ಅವಳನ್ನು ಮತ್ತೊಮ್ಮೆ ನೋಡಿ, ಗಲ್ಲಗಳನ್ನು ಹಿಡಿದು 'ಹೊರಡುವೆನು' ಎಂದು ಸನ್ನೆಯನ್ನು ಮಾಡಿದನು.

ಅಲ್ಲಿಂದೆದ್ದು ಓಡತೊಡಗಿದವನು, ತನ್ನೂರ ಸಮೀಪ ಸಾರಿಯೆ ನಿಂತನು. ಎಷ್ಟು ವೇಗದಿಂದ ಓಡಿದ್ದನೊ ಅವನಿಗೇ ಗೊತ್ತು. ಸುತ್ತೂ ಕಡೆಗೆ ನಿರೀಕ್ಷಿಸಿದನು. ಸದ್ದು ಮಾಡದೆ ದೇವಾಲಯದ ಹಾದಿಯನ್ನೇ ಹಿಡಿದನು. ಸುದೈವದಿಂದ ಗದ್ದಲವೆಲ್ಲವೂ ಶಾಂತವಾಗಿತ್ತು. ಯಾರೂ ಅಡ್ಡವಾಗಿ ಬರಲಿಲ್ಲ. ಕೆಲಹೊತ್ತಿನ ಮೇಲೆ ಅವನು ಆ ದೇವಾಲಯಕ್ಕೆ ಬಂದೇಬಿಟ್ಟನು. ಹೆಂಡತಿಯು ತರಹೇಳಿದ ಆ ಮಹಂತನ ಚಿತ್ರವೂ ಅವನ ಕಣ್ಣಿಗೆ ಬಿದ್ದಿತು. ಆ ಚಿತ್ರ ಕಣ್ಣಿಗೆ ಬಿದ್ದೊಡನೆ ಅವನಿಗದೆಷ್ಟು ಆನಂದವಾಯಿತು! ಎಂತಹ ಆವೇಶ ಬಂದಿತೊ ಹೇಳಲು ಬರುವಂತಿಲ್ಲ. ಆ ಚಿತ್ರ ತನಗೆ ಬೇಕಾಗಿತ್ತು; ಆದರೆ ಅದನ್ನು ದೊರೆಕಿಸುವ ಬಗೆ ಯಾವುದು? —ಎಷ್ಟು ದುರ್ಘಟವಿದೆ!—ಎಂಬ ವಿಚಾರ ಅವನನ್ನು ಧೈರ್ಯಗೆಡಿಸಲಿಲ್ಲ. ಚಿತ್ರವನ್ನು ದೊರೆಕಿಸುವುದೆಂದರೆ ತನ್ನ ಜೀವವನ್ನು ಬದುಕಿಸಿಕೊಳ್ಳಬೇಕು....ಎಂಬ ಮಾತೂ ನಿರ್ವಿವಾದವಾದುದು. ತನ್ನ ಪ್ರಾಣಪ್ರಿಯೆಯ ಕಡೆಯ ಇಚ್ಛೆಯನ್ನು ಪೂರ್ತಿಗೊಳಿಸಲು ಮಿಚಲನು ತನ್ನ ಜೀವವನ್ನು ಪಣಕ್ಕೆ ಒಡ್ಡಿದ್ದನು. ಯಾವ ಧೈರ್ಯದಿಂದ ಅವನು ಇಲ್ಲಿಯ ವರೆಗೆ ಬಂದಿದ್ದನೊ ಅದೇ ಧೈರ್ಯದಿಂದ 'ಚಿತ್ರವನ್ನು ತಂದೇ ತರುವುದು' ಎಂದು ಮುನ್ನುಗ್ಗಿದ್ದನು. ಯಾವ ವಿಚಾರಕ್ಕೂ ಅವಕಾಶ ವೀಯದೆ ಅವನು ಆ ಚಿತ್ರದ ಕಡೆಗೆ ಮೆಲ್ಲಗೆ ನುಸುಳಿದನು.

ದೇವಾಲಯದಲ್ಲಿ ದೀಪಗಳು ಉರಿಯುತ್ತಿವೆ. ಕೃತಾಂತ ಸ್ವರೂಪಿಗಳಾದ ೫೦-೬೦ ಫ್ರೆಂಚ್ ಸೀಪಾಯಿಗಳು ಅಸ್ತವ್ಯಸ್ತರಾಗಿ ಬಿದ್ದುಕೊಂಡು ಗೊರಕೆ ಹೊಡೆಯುತ್ತಿದ್ದುದು ಮಿಚಲನ ಕಣ್ಣಿಗೆ ಬಿದ್ದಿತು. ಆದರೆ ಆ ರಾಕ್ಷಸರನ್ನು ಕಂಡು ಮಿಚಲನು ಎಳ್ಳಷ್ಟಾದರೂ ಬೆದರಲಿಲ್ಲ. ಏನೂ ಸಪ್ಪಳ ಮಾಡದೆ ಗಂಭೀರತೆಯಿಂದ ಆ ಚಿತ್ರವನ್ನು ಕೈಗೆ ತೆಗೆದುಕೊಂಡನು; ಬಗಲಲ್ಲಿಟ್ಟುಕೊಂಡು ಮುಖವನ್ನು ತಿರುಗಿಸಿದನು. ಆದರೆ! ಅಷ್ಟರಲ್ಲಿ ಕಟ್ಟಿಗೆಯ ತುಂಡೊಂದು ಛಟ್‌ಛಟೆಂದು ಸಿಡಿದು, ಕಿಡಿಯೊಂದು ಸೀಪಾಯಿಯೊಬ್ಬನ ಮುಖದ ಮೇಲೆ ಬಿದ್ದಿತು. ಅವನು ಗಾಬರಿಗೊಂಡು ಎಚ್ಚೆತ್ತನು; ಉಳಿದವರನ್ನು ಎಬ್ಬಿಸಿದನು.

* ಇಂಗ್ಲಿಷಿನಿಂದ ಅನುವಾದ. —ಲೇ.

"ಏನು—ಏನು—ಯಾರು—ಯಾರು—ಹಿಡಿಯಿರಿ!" ಎಂಬ ಕೋಲಾಹಲವೇ ಎದ್ದಿತು. ಮಿಚಲನು ಆ ಶತ್ರುಗಳ ಕೈಯಲ್ಲಿ ಸಿಕ್ಕಿ ಬಿದ್ದನು. ಶತ್ರುಗಳ ಕಡೆಯಿಂದ ಬಂದ ಗುಪ್ತ ಚಾರನಿರಬಹುದೆಂದು ಅವನನ್ನು ಆ ಸೀಪಾಯಿಗಳು ಬಂಧಿಸಿದರು. ಎಲ್ಲರೂ ಕತ್ತಿಗಳನ್ನು ಒರೆಯಿಂದ ಹಿರಿದರು. ಒಂದೇ ಕ್ಷಣದಲ್ಲಿಯೆ ಮಿಚಲನ ದೇಹವು ಚೂರುಚೂರಾಗಬಹುದಿತ್ತು. ಆದರೆ ಆ ಸೀಪಾಯಿಗಳ ಮುಖ್ಯಸ್ಥನು ಮುಂದೆ ಬಂದು 'ತಡೆಯಿರಿ, ತಡೆಯಿಂ!' ಎಂದು ಕೂಗಿದನು. ನರಬಲಿಯನ್ನು ತೆಗೆದುಕೊಳ್ಳಲು ನಿಂತಂತಹ ಆ ಸೀಪಾಯಿಗಳಿಗೆ ಮುಖ್ಯಸ್ಥನ ಮಾತನ್ನು ಕೇಳಿ ಬ್ರಹ್ಮಾಂಡ ಸಿಟ್ಟುಬಂದಿತು. ಆದರೆ ಮಾಡುವುದೇನು? ಸುಮ್ಮನೆ ಅವರು ನಿಂತುಕೊಂಡರು. ಎಲ್ಲರನ್ನೂ ಶಾಂತಗೊಳಿಸಿ ಆ ಮುಖ್ಯಸ್ಥನು ಮಿಚಲನನ್ನು ವಿಚಾರಿಸತೊಡಗಿದನು:

"ನೀನು ಕಂಕುಳಲ್ಲಿ ಏನನ್ನು ಮುಚ್ಚಿಟ್ಟುಕೊಂಡಿರುವೆ? ಹೇಳು! ಸುಳ್ಳುಹೇಳಿದೆಯಾದರೆ ಕ್ಷಣಾರ್ಧದಲ್ಲಿಯೆ ನೀನು ಯಮಸದನಕ್ಕೆ ತೆರಳಬೇಕಾದೀತು!" ಎಂದು ಮುಖ್ಯಸ್ಥನು ದೊಡ್ಡ ಧ್ವನಿಯಿಂದ ಕೂಗಿದನು.

ಮಿಚಲನು ಕಿಂಚಿತ್ತಾದರೂ ಬೆದರಲಿಲ್ಲ. ಅವನು ಧೈರ್ಯದಿಂದ ತಾನು ದೇವಾಲಯಕ್ಕೆ ಬಂದ ಕಾರಣವನ್ನು ಹೇಳಿ, ಚಿತ್ರವನ್ನು ತೋರಿಸಿದನು. ಮಿಚಲನು ಹೇಳಿದ ಮಾತನ್ನು ಕೇಳಿ, ಅವನ ಕೈಯಲ್ಲಿಯ ಚಿತ್ರವನ್ನು ನೋಡಿ, ಅಸಂಖ್ಯರೆಲ್ಲರು ಗಟ್ಟಿಯಾಗಿ ನಗತೊಡಗಿದರು. ಆ ಕಲ್ಲೆದೆಯ ರಕ್ಕಸಸಂತತಿಗೂ ಅವನ ಹೃದಯದ್ರಾವಕ ಕಥೆಯಿಂದ ಕರುಣೆ ಹುಟ್ಟಲಿಲ್ಲ. ಆ ಮಹಂತನ ಚಿತ್ರದರ್ಶನದಿಂದಾದರೂ, ಒಬ್ಬನಲ್ಲಿಯೂ ಶ್ರದ್ಧೆಯಾಗಲಿ, ಭಕ್ತಿಯಾಗಲಿ ಹುಟ್ಟಲಿಲ್ಲ. ಅವರು ಅವನ ಜೀವ ತೆಗೆದುಕೊಳ್ಳಲು ಸಿದ್ಧರಾದರು. ವಿಜಯ ಪಡೆದ ಸೀಪಾಯಿಗಳ ರಾಕ್ಷಸೀ ಹೃದಯದ ವೀರಶ್ರೀಗೆ ವಿಲಕ್ಷಣ ಸ್ಫುರಣ ಬಂದಂತಾಗಿತ್ತು. ಆದರೆ ಆ ತಂಡದ ಮುಖ್ಯಸ್ಥನು ಮಾತ್ರ ಅಂತಹ ವೀರಾಗ್ರೇಸರನಿರಲಿಲ್ಲವೆಂದೇ ಮಿಚಲನ ಪತ್ನೀಪ್ರೇಮ, ದೇಶಭಕ್ತಿ, ರಾಜಭಕ್ತಿಗಳು ಜಗತ್ತಿನ ನಿದರ್ಶನಕ್ಕೆ ಬಂದುವು. ಪಾಪವಕುಲದಲ್ಲಿಯೂ ಒಮ್ಮೊಮ್ಮೆ ದೇವನು ಜನ್ಮಧಾರಣ ಮಾಡುತ್ತಾನೆಂಬುದರ ನಿದರ್ಶನವು ಇಂತಹ ಪ್ರಸಂಗಗಳಿಂದ ವ್ಯಕ್ತವಾಗುವುದು.

ಮಿಚಲನ ಶಿರಚ್ಛೇದನವನ್ನು ಯಾವಾಗ ಮಾಡುವೆವೋ ಎಂಬ ವಿಚಾರದಲ್ಲಿ ಆ ರಾಕ್ಷಸರು ಆತುರರಾಗಿದ್ದರು. ಆದರೆ ಅವರ ಮುಖ್ಯಸ್ಥನು ಸೂಕ್ಷ್ಮಬುದ್ಧಿಯುಕ್ತಿಯಿಂದ ಅದನ್ನು ನಿವಾರಿಸಿ "ಮಿಚಲಾ, ನಿನ್ನೆದುರು ಮೃತ್ಯುವು ಸಾಕ್ಷಾತ್ತಾಗಿ ನಿಂತಿದೆಯೆನ್ನುವುದು ನಿನಗೆ ಕಂಡೇಕಾಣುತ್ತದೆ. ನೀನು ನನ್ನ [illegible] ಮಾನ್ಯಮಾಡಿ ಅದರಂತೆ ವರ್ತಿಸಿದೆಯಾದರೆ, ನಿನಗೆ ಜೀವದಾನ ಕೊಡುವೆನು. ನೀನು ನಮ್ಮ ತುಡದೊಡನಿದ್ದು ನಮಗೆ ನೆರವಾಗಬೇಕು! ನಮ್ಮ ಅನ್ನ ಸಾಮಗ್ರಿಯು ತೀರಿಹೋಗಿದೆ. ಅದು ಇಲ್ಲಿ ಎಲ್ಲಿ ದೊರೆಯಬಹುದು, ಗುಪ್ತ ಸಂಗ್ರಹಗಳು ಎಲ್ಲಿವೆ?....ಮೊದಲಾದುದನ್ನು ತಿಳಿಸಿ ನೆರವು ಕೊಡಲು, ನಿನ್ನಂಥವನು ಬೇಕಾಗಿತ್ತು! ಅನಾಯಾಸವಾಗಿ ದೊರಕಿರುವೆ. ನಿನ್ನಿಂದ ನಮಗೆ ನೆರವು ದೊರೆಯುವುದು; ನಿನ್ನ ಪ್ರಾಣರಕ್ಷಣೆಯಾಗುವುದು!" ಎಂದು ಮುಂತಾಗಿ ಬುದ್ಧಿವಾದವನ್ನು ಹೇಳಿದನು.

ಆದರೆ ಮಿಚಲನು ಕಣ್ಣು ಕೆಂಪಗೆ ಮಾಡಿ, ದವಡೆಗಳನ್ನು ಕಚ್ಚುತ್ತ "ನೀಚಾ, ನನಗೆ ವಂಚಕತನವನ್ನು ಕಲಿಸುತ್ತೀಯಾ? ನನಗೆ ನನ್ನ ಮಾನ-ಮರ್ಯಾದೆಗಳಲ್ಲವೆಂದು ತಿಳಿದಿರುವೆಯಾ? ಇದೋ, ನೋಡು—ನನ್ನ ಕುತ್ತಿಗೆಯು ಸಿದ್ಧವಿದೆ. ಆದರೆ ಅಂಥ ನೀಚತನವು ಜೀವ ಹೋದರೂ ನನ್ನಿಂದ ಸಾಧ್ಯವಿಲ್ಲ. ನನ್ನ ಜೀವಕ್ಕಿಂತಲೂ—ಎಲ್ಲಕ್ಕಿಂತಲೂ—ನನ್ನ ದೇಶವು ನನಗೆ ಅತ್ಯಂತ ಪ್ರಿಯಕರವಿದೆ. ನಾನು ನನ್ನ ಜನ್ಮಭೂಮಿಗೆ ದ್ರೋಹವನ್ನು ಬಗೆಯಲಾರೆ. ಮಹಾರಾಜಾಧಿರಾಜ ಅಲೆಕ್ಸ್ಯಾಂಡರ್ ಬಾದಶಹನ ಪ್ರಜೆ ನಾನಿದ್ದೇನೆ. ನನ್ನ ದೇಹದಲ್ಲಿ ಉಸಿರಿರುವವರೆಗೂ ನಾನು ಝುಂಜಾರನ ಪ್ರಜೆಯಾಗಿಯೆ ಉಳಿಯುವೆನು. ನನ್ನ ರಾಜನ ಶತ್ರುಗಳಿಗೆ ನಾನು ಯಾವ ತೆರದ ನೆರವನ್ನು ನೀಡಲೂ ಸಿದ್ಧನಿಲ್ಲ!" ಎಂದು ಒಂದೇ ಉಸಿರಿನಿಂದ ಗಡಗಡನೆ ಮಾತನಾಡಿದನು.

"ಛಲೆ, ಛಲೆ" ಎಂದು ಆ ಮುಖ್ಯಸ್ಥನ ಬಾಯಿಂದ ಉದ್ಗಾರಗಳು ತಾವೇ ಹೊರಬಂದುವು. ಅದರೆ ಸೀಪಾಯಿಯರ ಕತ್ತಿಗಳು ಝಳಪಿಸತೊಡಗಿದುವು. ಆದರೂ ಮುಖ್ಯಸ್ಥನ ಚಾಣಾಕ್ಷತನದಿಂದ ಆ ಪ್ರಸಂಗವು ಒದಗಿ ಬರಲಿಲ್ಲ; ಆದರೆ ಅವರ ಸೆರೆಯಾಳಾಗಬೇಕಾಯಿತವನಿಗೆ. ಸೀಪಾಯಿಯೊಬ್ಬನು 'ಎನ್ (N)' ಎಂಬಕ್ಷರವುಳ್ಳ ಮುದ್ರೆಯನ್ನು ಧಗಧಗಿಸುವ ಬೆಂಕಿಯಲ್ಲಿ ಚೆಲ್ಲಿ, ಉಳಿದ ಸೀಪಾಯರನ್ನುದ್ದೇಶಿಸಿ "ಇವನು ಬೇಕಾದಷ್ಟು ಹಾರಾಡಿದನು; ನಾವು ಮಾತ್ರ ಇವನನ್ನು ನಪೋಲಿಯನ್ ಬಾದಶಹನ ಪ್ರಜೆಯನ್ನಾಗಿ ಮಾಡುವೆವು. ಏನು ಬೇಕಾದುದಾದರೂ ಇವನ ಮುಂಗೈಯ ಮೇಲೆ 'ಎನ್' ಮುದ್ರೆಯನ್ನು ಒತ್ತಿ, ನೆಪೋಲಿಯನ್ನನ ಪ್ರಜೆಯನ್ನಾಗಿ ಮಾಡದೆ ಇರಲಾರೆವು!" ಎಂದು ಭಾಷಣ ಮಾಡಿ ಬೆನ್ನು ಚೆಪ್ಪರಿಸಿಕೊಂಡನು.

ಆಮರಣ ಅಲೆಕ್ಸ್ಯಾಂಡರನ ಪ್ರಜೆಯೆ ಆಗಿ ಉಳಿಯುವ ನಿರ್ಧಾರ ಮಾಡಿದ್ದ ಮಿಚಲನ ಕಿವಿಗೆ ಮೇಲಿನ ಶಬ್ದಗಳು ಬಿದ್ದುವು. 'ಎನ್' ಅಕ್ಷರದ ಮುದ್ರೆಯು ಕಾದು ಕೆಂಡವಾಗಿದ್ದುದನ್ನು ನೋಡಿದೊಡನೆ. ಅವನ ಶರೀರವು ಕಂಪಾಯಮಾನವಾಯಿತು. ತನ್ನ ಪವಿತ್ರದೇಹವನ್ನು ಕಲಂಕಿತ ಮಾಡಿಸುವುದಕ್ಕಿಂತ ಅದಕ್ಕೆ ಮುಕ್ತಿಯನ್ನೀಯಬೇಕೆಂಬ ವಿಚಾರದಲ್ಲಿ ಒಮ್ಮೆಲೆ ಅವನು ಟೊಂಕಕ್ಕೆ ಕಟ್ಟಿದ ಕೊಡಲಿಗೆ ಕೈಹಾಕಿದನು. ಅವನು ಕೆಲಸ ಮುಗಿಸಬಹುದಾಗಿತ್ತು; ಅಷ್ಟರಲ್ಲಿಯೆ ಮಿಚಲನು ಶುದ್ಧಿಯ ಮೇಲೆ ಬಂದನು. ಇನ್ನು ಕೆಲಪೊಂದು ಘಳಿಗೆ ಅವನ ಅಧಿಕಾರವು ಅವನ ದೇಹದ ಮೇಲೆ ನಡೆಯುವಂತಿರಲಿಲ್ಲ. ತನ್ನ ಪ್ರಿಯೆಯ ಇಚ್ಛಾಪೂರ್ತಿಗಾಗಿ ಆ ಮಹಂತನ ಚಿತ್ರವನ್ನು ಅವನು ಒಯ್ಯಲು ಬಂದಿದ್ದನು. ಅದು ಪೂರ್ತಿಯಾಗುವ ಮೊದಲು, ತಾನೆ ತನ್ನ ದೇಹದ ನಾಶವನ್ನೆಂತು ಮಾಡಿಕೊಂಡಾನು? ದಿಕ್ಕೆಟ್ಟವನಾಗಿ ನಿಂತಲ್ಲಿಯೆ ನಿಂತುಬಿಟ್ಟನು. ಅಷ್ಟರಲ್ಲಿ "ನಡೆ, ಎಲ್ಲವೂ ಸಿದ್ಧವಾಗಿದೆ!" ಎಂದು ಸೀಪಾಯಿಯೊಬ್ಬನು ಮಿಚಲನಿಗೆ ಹೇಳಿದನು.

ಇಷ್ಟು ಮಾತಾಡುವಷ್ಟರಲ್ಲಿಯೆ ನಾಲ್ವರು ಸೀಪಾಯರು ಬಂದು ಅವನನ್ನು ಗಟ್ಟಿಯಾಗಿ ಹಿಡಿದುಕೊಂಡರು. ಮಿಚಲನು ಈಗ ಯಾವ ತರದ ಗೊಂದಲವನ್ನೂ ಮಾಡಲಿಲ್ಲ. ಅವನು ಬಂದಂಥ ಪ್ರಸಂಗಕ್ಕೆ ಶಾಂತರೀತಿಯಿಂದ ಸಿದ್ಧನಾದನು. ಒಬ್ಬನು ಮುದ್ರೆಯನ್ನೊತ್ತುವುದಕ್ಕಾಗಿ ಮಿಚಲನ ಎಡಗೈಯನ್ನು ಮುಂದೆ ಹೂಡಿದನು. ಮಿಚಲನು ತನ್ನ ಭುಜವನ್ನು ಮುಂದೆ ಮಾಡುವ ಯತ್ನ ನಡೆಯಿಸಿದನು. ಆಗ

ಕೆಲವು ಸಿಪಾಯರು "ಇಲ್ಲ, ಇಲ್ಲ! ಭುಜದ ಮೇಲೆ ಬೇಡ! ಕೈಯ ಹೊರಭಾಗಕ್ಕೇ ಮುದ್ರೆ ಒತ್ತಿದರೆ ಅದು ಜಗತ್ತಿಗೇ ಕಾಣುತ್ತದೆ!" ಎಂದು ಚೀರಾಡತೊಡಗಿದರು.

ಮಿಚಲನ ಕೈ ನಡುಗಲಾರಂಭಿಸಿತು. ಈಗ ಮಾತ್ರ ಸ್ವಲ್ಪ ಜಗ್ಗಾಟ ನಡೆಯಿಸಿ ತನ್ನ ಅಸಮ್ಮತಿಯನ್ನು ಪ್ರದರ್ಶಿಸಿದ. ಆದರೆ ಆ ಸೀಪಾಯಿಯರು ಪಶುಗಳು. ತಮ್ಮ ಕೆಲಸವನ್ನು ಸಾಧಿಸದೆ ಬಿಡಲಿಲ್ಲ. ಕೂಡಲೆ ವಿಕಟ ಹಾಸ್ಯ ಪ್ರಕಟವಾಯಿತು. ಇನ್ನೇನು, ಮಿಚಲನು ನೆಪೋಲಿಯನ್ನನ ಪ್ರಜೆಯೆಂದು ಪರಿಗಣಿಸಿ, ಅವನೊಡನೆ ಪ್ರೇಮ-ಭಾವನೆಯಿಂದ ಎಲ್ಲರೂ ವರ್ತಿಸತೊಡಗಿದರು.

ಮಿಚಲನು ಇಷ್ಟೊತ್ತು ಈ ಪ್ರಕಾರವನ್ನು ಶಾಂತರೀತಿಯಿಂದ ಸಹಿಸಿಕೊಂಡನು. ಪಾಪ! ಏನು ಮಾಡಿಯಾನು? ಸೀಪಾಯಿಯರು ತಮ್ಮ ಕೆಲಸವನ್ನು ಜರುಗಿಸಿದ ಮೇಲೆ, ಅವನು ಅಲ್ಲಿಯೇ, ಸನಿಹವ ದಲ್ಲಿದ್ದ ಮೇಜಿನ ಮೇಲೆ ಮುದ್ರೆ ಬಿದ್ದ ಆಂಗೈಯನ್ನು ಇಟ್ಟು, ಅದರ ಕಡೆಗೆ ಲಕ್ಷ್ಯಗೊಟ್ಟು ನೋಡುತ್ತ ನಿಂತನು. ಕ್ಷಣಾರ್ಧದಲ್ಲಿಯೆ ಅವನ ಬಲಗೈಯೊಳಗಿನ ಕೊಡಲಯು ಮೇಲಕ್ಕೆತ್ತಲ್ಪಟ್ಟಿತು. ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗಾಗಿ 'ಎನ್' ಎಂಬಕ್ಷರದ ಮುದ್ರೆ ಬಿದ್ದ ಭಾಗವು ಕತ್ತರಿಸಿ, ತುಂಡಾಗಿ ಸಿಡಿದುಬಿದ್ದಿತು. ಆಶ್ಚರ್ಯದಲ್ಲಿ ಮಗ್ನರಾದ ಆ ಫ್ರೆಂಚ್ ಸಿಪಾಯರ ಮೈಮೇಲೆ ಆ ತುಂಡನ್ನು ಎಸೆದು "ನಿಮ್ಮ ನೆಪೋಲಿಯನ್ನನ ಭಾಗವನ್ನು ತೆಗೆದುಕೊಳ್ಳಿರಿ; ನಾನು ರಶಿಯನ್! ರಶಿಯನ್ನನಾಗಿಯೇ ಇರುವೆನು, ನೋಡಿರಿ!" ಎಂದು ಕೇಕೆ ಹೊಡೆದನು.

ಈ ಅದ್ಭುತ ಪರಾಕ್ರಮವನ್ನು ನೋಡಿ ಆ ಮಾನವ ದೇಹಧಾರಿ ಗಳಾದ ರಾಕ್ಷಸರು ಆಶ್ಚರ್ಯಚಕಿತರಾದರು. ಆ ತಂಡದ ಮುಖ್ಯಸ್ಥನು 'ಧೀರಾ, ವೀರಾ, ಭಲೆಭಲೆ!' ಎಂದು ಕೂಗಿ ತನ್ನ ಸೀಪಾಯಿಗಳಿಗೆ 'ಎಚ್ಚರ, ಯಾರಾದರೂ ಇವನಿಗೆ ತೊಂದರೆ ಕೊಟ್ಟರೆ! ನಿಜವಾದ ವೀರನಿಗೆ ಮರ್ಯಾದೆ ಹೇಗೆ ಮಾಡಬೇಕೆಂಬುದು ಫ್ರೆಂಚರಿಗೆ ಗೊತ್ತಿದೆಯೆಂಬುದು ಜಗತ್ತಿಗೆ ಗೊತ್ತಾಗಲಿ! ಈ ವೀರನನ್ನು ಸನ್ಮಾನ ದಿಂದ ಕಾಣಬೇಕು!' ಎಂದು ಆಜ್ಞೆಯನ್ನಿತ್ತನು.

ಮುಖ್ಯಸ್ಥನ ಆಜ್ಞೆಯಂತೆ ಸೀಪಾಯಿಗಳೆಲ್ಲ ಮಿಚಲನನ್ನು ಸನ್ಮಾನಪೂರ್ವಕವಾಗಿ ಆದರಿಸಿದ ಮೇಲೆ, ಅವನು ಆ ಮಹಂತನ ಚಿತ್ರ ವನ್ನು ತೆಗೆದುಕೊಂಡು ತ್ವರೆಯಿಂದ ತನ್ನ ಪುಡದಿಯ ಕಡೆಗೆ ಧಾವಿಸಿ ದನು. ದಾರಿಯಲ್ಲಿ ಅವನು ಉಸಿರನ್ನು ಕೂಡ ಬಿಡದೆ ಸಾಗಿದ್ದನು. ಅವನಿಗೆ ಆ ವೇದನೆಯ ಪರಿವೆ ಕೂಡ ಇರಲಿಲ್ಲ.

ಗಂಡನ ಮಾರ್ಗಪ್ರತೀಕ್ಷೆ ಮಾಡುತ್ತ, ಕಂತದಲ್ಲಿ ಮಾತ್ರ ಜೀವ ವನ್ನಿಟ್ಟುಕೊಂಡಂತಹ ಹೆಂಡತಿಯ ಕಣ್ಣಿದುರು, ಆ ಮಹಂತನ ಚಿತ್ರ ವನ್ನು ಹಿಡಿದನು. ಅವಳ ಮರಣ ಸಮಯದ ಇಚ್ಛೆಯು ಫಲಿಸಿದ್ದ ರಿಂದ ಅವಳಿಗೆ ಹೇಳತೀರದಷ್ಟು ಆನಂದವಾಗಿತ್ತೆಂಬುದು ಅವಳ ಮುಖದ ಮೇಲೆ ಒಡೆದು ಕಾಣುತ್ತಿತ್ತು. ಅವಳಿಗೆ ಈ ಆನಂದವಲ್ಲದೆ ಮಿಚಲನಿಗಾದ ಸಂಕಟದ ಕಲ್ಪನೆ ಕೂಡ ಬರುವುದು ಸಾಧ್ಯವಿರಲಿಲ್ಲ; ಸಮಯವೂ ಇರಲಿಲ್ಲ. ಅವಳ ಬಾಯಿಂದ ಒಂದೆರಡೆ ಅಸ್ಪಷ್ಟ ಶಬ್ದಗಳು ಮಾತ್ರ ಹೊರಬಂದುವು. ಪ್ರಿಯಕರನಿಗೆ ಕಡೆಯ ಚುಂಬನವನ್ನು

ಶೇಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಆರಕ್ತತೆಗಳ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ ಡಾಕ್ಟರರು ದವಾಖಾನೆಗಳಲ್ಲಿ ಪಾವರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧೬-೦ ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾಪ) ಧಾಕಪ್ಪಾ

ಬಡವ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ಕೊಡಬೇಕೆಂದು ಹವ್ಯಾಸಪಡುತ್ತಿರುವಾಗ ಅವಳ ಜೀವಾತ್ಮವು ಪರಮಾತ್ಮನಲ್ಲಿ ಲೀನವಾಗಿ ಹೋಯಿತು.

‡ ‡ ‡ ‡

ಕೆಲ ದಿನಗಳ ನಂತರ ಈ ಸುದ್ದಿಯು ಅಲೆಕ್ಷಾಂಡರನ ಕಿವಿಗೆ ಬಿದ್ದಿತು. ಝಾರನು ಮಿಚಲನನ್ನು ಕರೆಯಿಸಿ, ಬಹು ಗೌರವಪೂರ್ವಕ ವಾಗಿ ಮಾನಮರ್ಯಾದೆ ಸಲ್ಲಿಸಿ, ಅವನ ಜೀವಮಾನವಿರುವ ವರೆಗೆ ಜೀವನಾಂಶವನ್ನು ದಯೆಪಾಲಿಸಿದನು. ಇಂಥ ಉಜ್ವಲ ದೇಶಪ್ರೇಮಿಯ ಕೈಹಿಡಿಯಲು ಅನೇಕಾನೇಕ ರೂಪ, ಗುಣ, ಯೌವನ, ಧನವುಳ್ಳ ತರುಣಿಯರು ಬಲೆಯನ್ನು ಬೀಸಿದರು. ಆದರೆ ಮಿಚಲನು ಮಾತ್ರ ಕೈಹಿಡಿದಾಕೆಯನ್ನು ನೆನೆಯುತ್ತ ಬೇರೆಯವರ ಕೈಹಿಡಿಯಲು ಮನಸ್ಸು ಮಾಡಲಿಲ್ಲ.

ಮಿಚಲನಂತಹ ದೇಶಭಕ್ತರು ಯಾವ ದೇಶದಲ್ಲಿ ಜನಿಸುವರೋ ಅಂತಹ ದೇಶವು ನಿಜವಾಗಿಯೂ ಪುಣ್ಯಭೂಮಿಯಲ್ಲದೆ ಮತ್ತೇನು?

ನಗೆ

ಹಾಸ್ಯವ ಬಗೆಗೆ ನಿಚಾರಪೂರ್ಣವಾದ 'ಶ್ರೀರಂಗ'ರ ಸ್ವತಂತ್ರ ಗ್ರಂಥ ಬೇಗನೆ ಪ್ರಕಟವಾಗಲಿದೆ.

ಅಭ್ರಕದ ಅದ್ಭುತ ಬಲ

ಶ್ರೀ. ವಾಳ್ವೇಕರ ಗುರುರಾಯರು

ಬಿ. ಎ., ಎಲ್. ಎಲ್. ಬಿ. ಹುಬ್ಬಳ್ಳಿ

'ಭರತಖಂಡವು ಸುವರ್ಣಭೂಮಿ' ಎಂದು ಹೆಸರಾಗಿದೆ. ಇಲ್ಲಿ ಎಲ್ಲ ತರದ ಹವಾಮಾನವಿದೆ. ಈ ದೇಶದಲ್ಲಿ ಅತ್ಯಂತ ಉಷ್ಣ ಪ್ರದೇಶಗಳನೆ, ಅತ್ಯಂತ ಶೀತಪ್ರದೇಶಗಳವೆ. ಎಲ್ಲ ತರದ ಧಾನ್ಯ ಬೆಳೆಯಲು ಅನುಕೂಲವೆನಿಸುವಂತಹ ಭೂಮಿಯಿದೆ. ನಿಬಿಡವಾದ ಅರಣ್ಯಗಳನೆ. ಅವುಗಳಲ್ಲಿ ನಾನಾತರದ ವನಸ್ಪತಿಗಳು ದೊರೆಯುತ್ತವೆ. ಅವಂತೆ ಖನಿಜ ಸಂಪತ್ತಿಯೂ ಬೇಕಾದಷ್ಟಿದೆ. ಬಂಗಾರದ ಕಣಿಗಳನೆ; ಮೊನ್ನೆಮೊನ್ನೆಯಂತ ಹೆಚ್ಚು ಉಪಯುಕ್ತವಾದ ಕಬ್ಬಿಣ-ಕಲ್ಲಿದ್ದಲಿಗಳ ಕಣಿಗಳನೆ. ಅವರೆ 'ಯೋಜಕಸ್ತತ್ರ ದುರ್ಲಭಃ' ಎಂಬುತೆ ಯೋಜಕರಿಲ್ಲ. ಹಿಂದಿನಕಾಲದಲ್ಲಿ ಗೊನಳಕೊಂಡವಲ್ಲಿ ಪಜ್ರದ ಕಣಿಗಳಿದ್ದುನೆಂಬ ಸುದ್ದಿ ಇತಿಹಾಸದಿಂದ ತಿಳಿಯುತ್ತದೆ. ಆದರೆ ಸದ್ಯಕ್ಕೆ ನಜ್ರಕ್ಕಿಂತ ಅನೇಕಮಡಿ ಹೆಚ್ಚು ಉಪಯುಕ್ತನಾದ ವಸ್ತುವೆಂದರೆ ಅಭ್ರಕ (mica). Dr. J. A. Dunn ಎಂಬ ಖನಿಜಶಾಸ್ತ್ರ ನಿಶಾರದರು ಹೀಗೆ ಬರೆದಿದ್ದಾರೆ :— "It is difficult to imagine what form electrical machinery would have taken had mica not been available" ಅಭ್ರಕವು ದೊರೆಯದಿದ್ದರೆ ವಿದ್ಯುತ್ತಂತ್ರಗಳು ಯಾವ ಸ್ವರೂಪವನ್ನು ತಾಳುತ್ತಿದ್ದುವೋ ಹೇಳಲಿಕ್ಕಾಗುವುದಿಲ್ಲ.

ಅಭ್ರಕದ ತವರೂರು

ಭರತಭೂಮಿಯು ಪ್ರಕೃತಿದೇವತೆಯ ವಿಶಿಷ್ಟ ಅನುಗ್ರಹಕ್ಕೆ ಪಾತ್ರವಾದ ದೇಶವಿದೆ. ಇದು ಕೇವಲ ವೃಥಾ ಅಭಿಮಾನದಿಂದ ಹೇಳುವ ಮಾತಲ್ಲ. ಕಳೆದ ಶತಮಾನದಲ್ಲಿ ನೀಲಿಯ ಉತ್ಪತ್ತಿಯು ಬಂಗಾಲದಲ್ಲಿ ಪಾತ್ರವಾಗುತ್ತಿತ್ತು; ಆದರೆ ಅದರ ಉತ್ಪತ್ತಿ ಹಾಗೂ ವ್ಯಾಪಾರವನ್ನು ಹದಗೆಡಿಸಿದ ಶ್ರೇಯಸ್ಸು ಯಾರಿಗಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಕೃತ್ರಿಮ ರಾಸಾಯನಿಕ ನೀಲಿಯು ನೈಸರ್ಗಿಕ ನೀಲಿಯನ್ನು ಕುಕ್ಕರಿಸಿ ಕೊಂದಿತು. ಸಣಬಿನ ನಾರು (Jute) ನಮ್ಮ ದೇಶದಲ್ಲಿ ಮಾತ್ರ ಬೆಳೆಯುತ್ತದೆ. ಬಂಗಾಲದಲ್ಲಿ ಅದರ ಗಿರಣಿಗಳವೆ. ಕಾಳು-ಕಡಿ ಹಾಕುವ ಚೀಲ, ಹತ್ತಿ ಹಾಕುವ ಪಾಟು ಮೊದಲಾದುವುಗಳು ಈ ಗಿರಣಿಗಳಲ್ಲಿ ತಯಾರಾಗುತ್ತವೆ. ಒಮ್ಮು ತೊಳೆ ಹತ್ತಿಯೂ ಬೆಳೆಯದ **ಲಾಂಕಾಶಾಯರ್** ಮತ್ತು **ಮ್ಯಾಂಚೆಸ್ಟರ್** ಗಿರಣಿಗಳು ನೂಲು ಮತ್ತು ಬಟ್ಟೆಗಳ ಉತ್ಪತ್ತಿಯ ಕೇಂದ್ರಗಳಾಗಿದ್ದುವು; ಈಗಲೂ ಆ ಮಿಗಿಲಾದ ಸ್ಥಾನವನ್ನು ಕಳಕೊಳ್ಳಬಾರದೆಂದು ಹೆಣಗಾಡುತ್ತಲಿವೆ. ಅದರಂತೆ ಒಂದು ನಾರಿನ ಸಿವುಡು ಹುಟ್ಟಿದ **ಡಂಡಿಯಲ್ಲಿ** ನಾರಿನ ಗಿರಣಿಗಳು ಭರದಿಂದ ನಡೆಯುತ್ತಿವೆ. ಇವೆಲ್ಲ ನಮ್ಮ ಆರ್ಥಿಕ ದಾಸ್ಯದ ಫಲಗಳು. ಮೂವರಿಗಾಗಿ ಈ ಉದಾಹರಣೆಗಳನ್ನು ಕೊಟ್ಟಿದ್ದೇನೆ. ಅಭ್ರಕದ ಉತ್ಪತ್ತಿಯಲ್ಲಿ ಬಿಹಾರವನ್ನು ಸರಿಗಟ್ಟುವ ಭಾಗವು ಭೂಪೃಷ್ಠದ ಮೇಲೆ ಬೇರೆ ಎಲ್ಲಿಯೂ ಇಲ್ಲ. ಜಗತ್ತಿನಲ್ಲೆಲ್ಲ ದೊರೆಯುವ ಅಭ್ರಕನಲ್ಲಿ ೧೦೦ಕ್ಕೆ ೮೦ ರಷ್ಟು ಅಭ್ರಕವು ಹಿಂದುಸ್ಥಾನದಲ್ಲಿ ದೊರೆಯುತ್ತದೆ. ಯಾವ ಯಾವ ದೇಶದಲ್ಲಿ ಎಷ್ಟು ಅಭ್ರಕ ದೊರೆಯುತ್ತದೆಂಬುದು ಕೆಳಗಿನ ಅಂಕೆಗಳಿಂದ ಕಂಡು ಬರುತ್ತದೆ. ಆದರ ಮೇಲಿಂದ ಭರತಭೂಮಿಯು ಅಭ್ರಕದ ತವರೂರಾಗಿದೆಯೆಂಬುದು ಒಡೆದು ಕಾಣುತ್ತದೆ.

ಟನ್ನು (Short Tons)

ಹಿಂದುಸ್ಥಾನ	೭೯೪೪ *
ಕಾನಡಾ	೯೩
ಆಫ್ರಿಕಾ ಖಂಡ	೧೦೨
ಅಮೇರಿಕಾ (U. S. A.)	೪೬೮
ಅರ್ಜೆಂಟೀನಾ	೨೪೪
ಬ್ರೆಝಿಲ	೧೬೧
ನಾರ್ವೆ ಮತ್ತು ಸ್ವೀಡನ್	೨
ಕೋರಿಯಾ	೯೬

ಅಭ್ರಕದ ಉದ್ಯೋಗ

ಹಿಂದುಸ್ಥಾನದಲ್ಲಿ ಅಭ್ರಕವು ದೊರೆಯುವ ಮುಖ್ಯ ಸ್ಥಾನವೆಂದರೆ ಬಿಹಾರ. ೧೯೩೮ ರಲ್ಲಿ ಬಿಹಾರದಲ್ಲಿ ೪೪೩೫೫ ಟನ್ ಅಭ್ರಕದ ಉತ್ಪತ್ತಿಯಾಯಿತು. ವಿದ್ಯುತ್ (electrical) ಯಂತ್ರಗಳಿಗೆ ಬೇಕಾಗುವ ಮೇಲ್ತರದ ಅಭ್ರಕವು ಮುಖ್ಯವಾಗಿ ಹಿಂದುಸ್ಥಾನದಲ್ಲಿಯೇ ದೊರೆಯುತ್ತದೆ. ಅಭ್ರಕವನ್ನು ಕಣಿಗಳೊಳಗಿಂದ ಆಗಿದು ತೆಗೆಯುತ್ತಾರೆ. ನೆಲದಲ್ಲಿ ಆದರ ಪೆಟಿಗೆಗಳಿರುತ್ತವೆ. ಕೆಲವು ಪೆಟಿಗೆಗಳು ಬಹಳ ತೆಳ್ಳಗಾಗಿರುತ್ತವೆ, ಕೆಲವು ದಪ್ಪಾಗಿರುತ್ತವೆ. ಅವುಗಳನ್ನು ತೆಗೆದು ಸ್ವಚ್ಛಮಾಡುತ್ತಾರೆ, ಕತ್ತರಿಸುತ್ತಾರೆ. ಅಭ್ರಕದ ಪರೆ ತೆಗೆಯುತ್ತಾರೆ. ೧/೮ ಇಂಚಿನಿಂದ ೧೫ ಇಂಚಿನ ವರೆಗೆ ತೆಳ್ಳಗಿರುವ ಪರೆಗಳನ್ನು, ಸೂಕ್ಷ್ಮವಾದ ಉಪಕರಣಗಳಿಂದ ಕೈಯಿಂದಲೇ ತೆಗೆಯುತ್ತಾರೆ. ಇವುಗಳಿಗೆ "micanite" ಎಂಬ ಹೆಸರು ಉಂಟು. Dr. Dunn ಅವರು ಹೀಗೆ ಬರೆದಿದ್ದಾರೆ :—

"The Province of Bihar, in particular, should regard itself as world's trustee for this mineral and conserve available sources with greatest care. The industry should be fostered; and encouragement should be for the investment of capital by reliable concerns rather than by individuals, who mine wastefully and with little financial backing."

---

* ಈ ಅಂಕೆಯು ೧೯೩೮ನೆಯ ವರ್ಷದುವೆ; ಮತ್ತು ಹಿಂದುಸ್ಥಾನದ ಸಂಬಂಧದ ಅಂಕೆಯು ಉತ್ಪತ್ತಿಯದಲ್ಲ, ನಿರ್ಯಾತದ್ದಿವೆ. ಆರ್ಥಿಕ ಉತ್ಪತ್ತಿ ಆದಕ್ಕೂ ಹೆಚ್ಚಿರಬೇಕು. ಹಿಂದುಸ್ಥಾನದಿಂದ ರಫ್ತು ಆದ ಅಭ್ರಕವು ಎಂದು ವರ್ಷಗಳಲ್ಲಿ ಇಷ್ಟಿಷ್ಟಿಯಾಗಿದೆ. ೧೯೩೮ ರಲ್ಲಿ ೩೩೪೬೭ ಟನ್ನು ರಫ್ತು ಆಯಿತು. ೧೯೩೮ ರಲ್ಲಿ ಆದು ೧೯೩೯ ಕ್ಕೆ ಏರಿತು.

"....ಅಭ್ರಕದ ಮಟ್ಟಿಗೆ ಬಿಹಾರ ಪ್ರಾಂತವು ತಾನು ಜಗತ್ತಿನ ವಿಶ್ವಸ್ತನಿದ್ದೇನೆಂದು ತಿಳಿದುಕೊಂಡು, ಅದರ ಕಣಿಗಳನ್ನು ಬಹಳ ಜಾಗರೂಕತೆಯಿಂದ ಉಪಯೋಗಿಸಬೇಕು. ಈ ಉದ್ಯೋಗವನ್ನು ಹಣದ ಪೂರಯಿಕೆಯಿಲ್ಲದವನಿಗೆ ಕೊಟ್ಟರೆ, ಅವನು ಕಣಿಗಳಿಂದ ಅಭ್ರಕವನ್ನು ತೆಗೆಯುವಾಗ ಅದನ್ನು ಬಹಳ ಹಾಳುಮಾಡಿ ಬಿಡುತ್ತಾನೆ. ಕಾರಣ ಸಾಕಷ್ಟು ಬಂಡವಾಳವನ್ನು ಈ ಉದ್ಯೋಗದಲ್ಲಿ ತೊಡಗಿಸಲು ಸಮರ್ಥವಿದ್ದ ಮತ್ತು ನಂಬಿಗಸ್ಥ ಸಂಸ್ಥೆಗೆ ಈ ಕೆಲಸವನ್ನು ಒಪ್ಪಿಸಬೇಕು." ಅಭ್ರಕದ ತೆಳ್ಳಗಿನ ಪಾಳೆಗಳನ್ನು ಮಾಡುವ ಕೆಲಸವು ಬಹಳ ನಾಜೂಕಿನದಾಗಿದೆ. ಇಂಥ ತೆಳ್ಳಗಿನ ಹಾಳೆಗಳನ್ನು ಅಥವಾ ಪರೆಗಳನ್ನು ತೆಗೆಯಲಿಕ್ಕೆ ಬರುವಂಥ ಅಭ್ರಕದ ಬಹುಭಾಗವು. ಎಂದರೆ ೧೦೦ಕ್ಕೆ ೭೫ ರಷ್ಟು ಭಾಗವು ಹಿಂದುಸ್ಥಾನ್ ಮತ್ತು ಮಡಾಗಾಸ್ಕರಿನಲ್ಲಿ ದೊರೆಯುತ್ತದೆ ಇಂಥ ಇಂಚಿನಷ್ಟು ತೆಳ್ಳಗಾದ ಪರಿಗಳನ್ನು ಸಹ ತೆಗೆಯಬೇಕಾಗುತ್ತದೆ. ಇಂಥ ಮಿಗಿಲಾದ ಮತ್ತು ಅತ್ಯಂತ ಬೆಲೆಯುಳ್ಳದಾದ ಅಲ್ಲದೆ ಬಹಳ ಉಪಯುಕ್ತವಸ್ತುವಿನ ಕಣಿಗಳು, ನಮ್ಮ ದೇಶದಲ್ಲಿ ಇರುವಷ್ಟು ಬೇರೆ ಯಾವ ದೇಶದಲ್ಲಿಯೂ ಇಲ್ಲವೆಂಬ ಸಂಗತಿಯು ಅಭಿಮಾನಾಸ್ಪದವಾದದ್ದಲ್ಲವೆ?

ಅಭ್ರಕದ ಉಪಯುಕ್ತತೆ

ಅಭ್ರಕದ ಉಪಯುಕ್ತತೆಯು ಹಿಂದುಳಿದ ಹಿಂದೀಯರಿಗಷ್ಟೇ ಅಲ್ಲ, ಭೌತಿಕ ಶಾಸ್ತ್ರದಲ್ಲಿ ಮುಂದುವರಿದ ಪಾಶ್ಚಾತ್ಯರಿಗೂ ಪೂರ್ಣವಾಗಿ ತಿಳಿದಿಲ್ಲ. ಸಾಮಾನ್ಯ ಜನರಿಗೆ ಅದರ ಅರಿವು ಇಲ್ಲವೇ ಇಲ್ಲ. ಇದರ ಬಗ್ಗೆ ಅಮೇರಿಕೆಯ (U. S. A.) Tariff Commission ನವರದಿಯು ವಾಚನೀಯವಾಗಿದೆ. ಅದರ ಮೇಲಿಂದ ಅವರ ಸಂಶೋಧನಾತ್ಮಕ ಬುದ್ಧಿ ಮತ್ತು ಉದ್ಯೋಗಪ್ರೀಯತೆ ಹಾಗೂ ಉದ್ಯೋಗಗಳ ಬಗ್ಗೆ ಅಲ್ಲಿಯ ಸರಕಾರದ ಜಾಗರೂಕತೆ ಮೊದಲಾದುವು ಕಂದು ಬರುತ್ತವೆ. ಅಭ್ರಕದ ಮುಖ್ಯ ಉಪಯೋಗ as a thin, flexible heat-proof and water-proof electrical insulator ಎಂತಿದೆ. ಎಂದರೆ ಅಭ್ರಕದ ತೆಳ್ಳಗಿನ ತಗದು ಮಣಿಸಲಿಕ್ಕೆ ಬರುತ್ತದೆ. ಜೇಕೆಯಲ್ಲಿ ಸುಡುವುದಿಲ್ಲ, ನೀರಿನಲ್ಲಿ ತೊಯ್ಯುವದಿಲ್ಲ ವಿದ್ಯುತ್ತಿನ ಯಂತ್ರಗಳಲ್ಲಿ ಇನ್ಸುಲೇಟರ್ (ಮಾಧ್ಯಮಿಕ)ನಂತೆ ಅದನ್ನು ಉಪಯೋಗಿಸುತ್ತಾರೆ. ಯುದ್ಧೋಪಯೋಗಿ (Strategic) ಮುಖ್ಯವಸ್ತುಗಳು ೨೩ ಇವೆ; ಅವುಗಳಲ್ಲಿ ಅಭ್ರಕವು ಒಂದಾಗಿದೆ. ಅಭ್ರಕವು ಎಲ್ಲ ದೇಶಗಳಲ್ಲಿ ಸಿಕ್ಕುವುದಿಲ್ಲ. ಅದರ ಹೊರತು ಕೆಲಸ ನಡೆಯುವುದಿಲ್ಲ. ಯುದ್ಧ ಪ್ರಾರಂಭವಾದ ಬಳಿಕ ಅದರ ವ್ಯಾಪಾರ ಹಾಗು ನಿರ್ಯಾತವು ಹೇಗೆ ನಡೆಯಿತೆಂಬುದನ್ನು ಮುಂದೆ ಬರೆಯುವೆ.

ವಿಮಾನಗಳಲ್ಲಿ ದೊಡ್ಡದೊಡ್ಡ ಮೋಟಾರುಗಳನ್ನು ಉಪಯೋಗಿಸುತ್ತಾರೆ. ಸ್ಪಾರ್ಕ್ ಪ್ಲಗ್ಸ್ (Spark plugs) ನ ಹೊರತು ಈ ಮೋಟಾರುಗಳನ್ನು ಉಪಯೋಗಿಸಲಿಕ್ಕಾಗುವುದಿಲ್ಲ. ಈ ಸ್ಪಾರ್ಕ್ ಪ್ಲಗ್ಸುಗಳಿಗೆ-ಇನ್ಸುಲೇಟಿಂಗ್ ಮಿಡಿಯಮ್(ಪೃಥಕ್ಕರಣದ ಮಾಧ್ಯಮಕ್ಕೆ— ಅಭ್ರಕವೇ ಅವಶ್ಯವಾಗಿ ಬೇಕು "The central electrode is wrapped with the finest quality mica films '00075–'0012 inch thick (known as "cigarette" mica) to a thickness of '03 inch"



ಡೋಂಗರೆ ಬಾಲಾಮೃತ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

೫೦,೦೦೦ ವೋಲ್ಟ್ ವಿದ್ಯುತ್‌ಶಕ್ತಿಯನ್ನು ಕಳಿಸುವಾಗ ಬೇಕಾಗುವ ಟ್ರಾನ್ಸ್‌ಫಾರ್ಮರ್ಸಿಗೆ(transformers) ಅಭ್ರಕದ ಪೃಥಕ್ಕರಣದ ಮಾಧ್ಯಮಕವೇ (mica insulator) ಬೇಕು.

ರೇಡಿಯೋಗಳಲ್ಲಿ ಅಭ್ರಕದ ಉಪಯೋಗ ಬಹಳ. ರೇಡಿಯೋ ಕಂಡೆನ್ಸರುಗಳಲ್ಲಿ ಅಭ್ರಕವನ್ನು ಉಪಯೋಗಿಸುತ್ತಾರೆ. ಮತ್ತು ಇವುಗಳಿಗೆ ಬೇಕಾದ ಅಭ್ರಕವು ಹಿಂದುಸ್ಥಾನದಲ್ಲಿಯೆ ದೊರೆಯುತ್ತದೆ. ಹಿಂದುಸ್ಥಾನದ ತರುವಾಯ ಇಂತಹ ಅಭ್ರಕವು ದೊರೆಯುವ ಎರಡನೆಯ ದೇಶವೆಂದರೆ ಬ್ರೇಝಿಲ್. ಅನೇಕ ರೀತಿಯಿಂದ ರೇಡಿಯೋಗಳಲ್ಲಿ ಅಭ್ರಕದ ಉಪಯೋಗವಿದೆ.

ಈಗ ಅನೇಕ ಮೈಲುಗಳ ದೂರವಿರುವ ದೃಶ್ಯವನ್ನು ನೋಡುವ ಯಂತ್ರಗಳು (Television) ಹೊರಟಿವೆ ಇಂಥ ಯಂತ್ರಗಳಲ್ಲಿ (Television) ಉತ್ತಮವಾದ ಅಭ್ರಕವನ್ನು, ಸೋಸುವ (Filter) ಕೆಲಸಕ್ಕೆ ಉಪಯೋಗಿಸುತ್ತಾರೆ.

ಇದಲ್ಲದೆ Armatuer, Comutaters ಮೊದಲಾದ ಅನೇಕ ಕೆಲಸಗಳಿಗೆ ಅಭ್ರಕದ ಉಪಯೋಗವಾಗುತ್ತದೆ. ಕೃತ್ರಿಮ ಅಭ್ರಕವನ್ನು ತಯಾರಿಸುವ ಶೋಧವೂ ನಡೆದಿದೆ. ಆದರೆ ಅದರ ಉಪಯುಕ್ತತೆ ನೈಸರ್ಗಿಕ ಅಭ್ರಕದಷ್ಟು ಆಗುತ್ತದೆಯೇ ?- ಪ್ರಯೋಗಶಾಲೆಯಲ್ಲಿ ಅದರ ಉತ್ಪಾದನೆಯಾಗಬಹುದು, ಆದರೆ ದೊಡ್ಡ ಪ್ರಮಾಣದಿಂದ

ಅಶಾಂತಿ ಪರ್ವ

ವಿಜಯನಗರದ ಐತಿಹಾಸಿಕ ಕಾದಂಬರಿ.

೨ನೆಯ ಆವೃತ್ತಿ ಇದೀಗ ಹೊರಕ್ಕೆ ಬಂದಿರುವುದು

ಬೆಲೆ ೨ರೂ. ೪ಆಣೆ.

ಈ ಕಾದಂಬರಿಯೆಂದರೆ ಆನಂದಕಂದರ ಅತ್ಯುತ್ತಮವಾದ ಕಲಾಕೃತಿ. ಮನೋವಿಶ್ಲೇಷಣೆಯ ತಳಹದಿಯ ಮೇಲೆ ಇಲ್ಲಿಯ ಕಥಾಪಾತ್ರಗಳು ಪರಿಪುಷ್ಟಿಗೊಂಡಿವೆ. ಕುತೂಹಲ ಕಾರಿಯಾದ ಸನ್ನಿವೇಶಗಳ ಮೂಲಕ, ಈ ಕಾದಂಬರಿಯನ್ನು ಒಮ್ಮೆ ಕೈಯಲ್ಲಿ ತೆಗೆದುಕೊಂಡವರು ಮುಗಿಸುವವರೆಗೆ ಕೆಳಕ್ಕಿಡರು. ವಿಜಯನಗರದ ಐತಿಹಾಸಿಕ ವಾತಾವರಣವನ್ನೂ ವ್ಯಕ್ತಿಗಳನ್ನೂ ಜನಜೀವನವನ್ನೂ ಕಣ್ಣಿಗುರು ತಂದು ನಿಲ್ಲಿಸು ವಂತಹ ಕಾದಂಬರಿಯಿದು.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ
ಬರೆದು ತರಿಸಿಕೊಳ್ಳಬೇಕು.

ಆದರ ಉತ್ಪತ್ತಿಯಾಗಿ ಅದರಲ್ಲಿ ನೈಸರ್ಗಿಕ ಅಭ್ರಕದಷ್ಟು ಅಗ್ಗವಾಗಿ ಮಾರಲಿಕ್ಕೆ ಶಕ್ಯವಿದೆಯೇ?— ಎಂಬ ಮುಂತಾದ ಮಾತುಗಳ ವಿಚಾರ ವಾಗಬೇಕು. ವಿದ್ಯುತ್ತಿನ ಉಪಯೋಗ ಬೆಳೆದಂತೆ ಅಭ್ರಕದ ಬೇಡಿಕೆ ಹೆಚ್ಚಾಗದೆ ಇರದು. ಕೃತ್ರಿಮ ಅಭ್ರಕವು ನೈಸರ್ಗಿಕ ಅಭ್ರಕಕ್ಕಿಂತ ಅಗ್ಗ ಮತ್ತು ಸಾಕಷ್ಟು ದೊರೆತರೆ, ಹಿಂದುಸ್ತಾನದಲ್ಲಿಯ ಅಭ್ರಕದ ಕಣಿಗಳು ಬೆಲೆ ಇಲ್ಲದುವುಗಳಾಗುವುವು. ಕಡಿಮೆ ತರದ ಅಭ್ರಕವು ವಿದ್ಯುತ್ ಯಂತ್ರಗಳ ಕೆಲಸಕ್ಕೆ ಬಾರದು. ಅದನ್ನು ಪುಡಿಮಾಡಿ Talc, Graphite ಮೊದಲಾವ ಪದಾರ್ಥಗಳ ಬದಲು ಉಪಯೋಗಿ-ಸುವುದುಂಟು.

ಅಭ್ರಕದ ವ್ಯಾಪಾರ

ಸದ್ಯದ ಮಹಾಯುದ್ಧವು ಪ್ರಾರಂಭವಾದ ಬಳಿಕ ಅಭ್ರಕದ ಬೇಡಿಕೆಗೆ ಮಿತಿ ಇಲ್ಲದಂತಾಗಿದೆ. ಇಂತಹ ಉಪಯುಕ್ತ ಮತ್ತು ಅವಶ್ಯ ವಾದ ಒಡವೆಯ ಕಳ್ಳಸಾಗಾಟ ಪ್ರಾರಂಭವಾದರೆ ಆಶ್ಚರ್ಯವೇನು? ಬ್ರಿಟನ್-ಅಮೇರಿಕಾಗಳಿಗೆ ಯುದ್ಧಕಾರ್ಯಕ್ಕೆ ಬೇಕಾದ ಅಭ್ರಕವನ್ನು ಕೊಳ್ಳಲಿಕ್ಕೆ Mica Mission(ಮಾಯ್‌ಕಾ ಮಿಶನ್=ಅಭ್ರಕ ಸಂಘ) ನಿರ್ಮಾಣವಾಗಿದೆ. ಅವರೇ ಅದನ್ನು ಕೊಳ್ಳಹತ್ತಿದ್ದಾರೆ. ಕಣಿಗಳಲ್ಲಿ ಆಗಿ ಯುವವರ ಸಂಖ್ಯೆ, ಅದನ್ನು ಪೇಟೆಗಳಿಗೆ ತರುವವರು ಮೊದಲಾದವರ ಸಂಖ್ಯೆ ಬೆಳೆದಿದೆ. ಬೇರೆಬೇರೆ ಯುನ್ಯೆಮಾನರಾಷ್ಟ್ರಗಳು ಬೇರೆಬೇರೆಯಾಗಿ ಕೊಳ್ಳಹತ್ತಿದರೆ, ಒಳ್ಳತಾಗುವುದಿಲ್ಲವೆಂದು ಒಂದು ಸಂಯುಕ್ತ ಸಂಘವನ್ನು ನಿರ್ಮಿಸಿದ್ದಾರೆ. ಸುಮಾರು ೫ ಲಕ್ಷ ಜನರು ಈ ಉದ್ಯೋಗ ಹಾಗೂ ವ್ಯಾಪಾರದಲ್ಲಿ ತೊಡಗಿದ್ದಾರೆ. ಬಿಹಾರ ಸರಕಾರವು ಈ ಉದ್ಯೋಗ ಹಾಗೂ ವ್ಯಾಪಾರದ ನಿರೀಕ್ಷಣ-ಪರೀಕ್ಷಣಕ್ಕಾಗಿ ಒಬ್ಬ ಅಧಿಕಾರಸ್ಥ ನನ್ನು ನಿಯಮಿಸುವುದಿದೆ. ಅಭ್ರಕವು ಬೇಕಾದಷ್ಟು ದೊರೆಯುತ್ತ ದೆಂದು ಅದರ ಕ್ರಯ ಇಳಿಸಬಾರದು ಮತ್ತು ಅದರ ಉಪಯೋಗವನ್ನು ಸಹ ಮಿತವ್ಯಯದಿಂದ ಮಾಡಬೇಕೆಂದು ಬಲ್ಲವರು ಹೇಳಹತ್ತಿದ್ದಾರೆ.

ಅಭ್ರಕದ ಸಂಬಂಧವಾಗಿ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಕೆಲವು ಪ್ರಶ್ನೋತ್ತರಗಳಾದುವು. ಅವುಗಳಲ್ಲಿ ಕೆಲವು ಮಾತುಗಳನ್ನು ಇಲ್ಲಿ ಕೊಡುತ್ತೇನೆ.

೧೯೪೦ರಲ್ಲಿ ದಿಲ್ಲಿಯಲ್ಲಿ Delhi Mica Conferemce ಆಯಿತು. ಆ ಕಾನ್‌ಫರನ್ಸಿನವರು Mica Advisory Committee ಎಂಬ ಕಮೀಟಿ ಯನ್ನು ನೇಮಿಸಬೇಕೆಂದು ಸರಕಾರಕ್ಕೆ ಸೂಚಿಸಿದರು. ಆದರೆ ಆ ಸೂಚನೆಯನ್ನು ಸರಕಾರದವರು ಸ್ವೀಕರಿಸಲಿಲ್ಲ.

ಮೆಸರ್ಸ್ ಜಾನ್ ಪೋಜರ್ ಆ್ಯಂಡ್ ಕೋ (Messers John Podger & Co. Ltd.) Mica Dealers & Exporters, Kodarma Behar) ಎಂಬ ಫರ್ಮಿನಲ್ಲಿ ಜಾನ್ ಪೋಜರ್ ಎಂಬ ಒಬ್ಬ ಡಾಯರೆಕ್ಟರ ರಿದ್ದರು. ಅವರು ಅದರ ಮಾಲಕರಲ್ಲಿ ಒಬ್ಬರಾಗಿದ್ದರು. ಅವರು ಗವ್ಹರ್ನ್‌ಮೆಂಟ್ ಮಾಯ್‌ಕಾ ಇನ್‌ಸ್ಪೆಕ್ಟರರಾಗಿ ನಿಯಮಿಸಲ್ಪಟ್ಟರು. ಅವರು ಈ ಕಂಪನಿಯಿಂದ ಸೇವಾನಿವೃತ್ತರಾಗುವವರಿದ್ದರಂತೆ. ಅಷ್ಟರಲ್ಲಿ ಅವರಿಗೆ ಸರಕಾರಿ ಅಭ್ರಕ ಇನ್‌ಸ್ಪೆಕ್ಟರರ ಕೆಲಸ ದೊರೆತ ಕೂಡಲೇ ಅವರು ಈ ಕಂಪನಿಯ ಕೂಡ ಇದ್ದ ತಮ್ಮ ಸಂಬಂಧ ಕಡಿದುಕೊಂಡರು. ಅವರ ತಮ್ಮಂದಿರು ಈ ಕಂಪನಿಯಲ್ಲಿ ಹಿತಸಂಬಂಧ ಉಳ್ಳವರಿದ್ದಾರೆ.

ಪ್ರಶ್ನೆ:— ಮಿಸ್ಟರ್ ಜಾನ್ ಪೋಜರ್ ಇವರು ಸರಕಾರಿ ಅಭ್ರಕ ಇನ್‌ಸ್ಪೆಕ್ಟರರಾದ ನಂತರ, ಮೆಸರ್ಸ್ ಜಾನ್ ಪೋಜರ್ ಕಂಪನಿಯು-೧೯೪೦ರಲ್ಲಿ ಅಮೇರಿಕೆಯ ಕೂಡ ಆದ- ವ್ಯವಹಾರವು ೧೯೩೯ಕ್ಕಿಂತ ಹೆಚ್ಚಾಯಿತೇನು?

ಉತ್ತರ:—ಸರಕಾರಕ್ಕೆ ಗೊತ್ತಿಲ್ಲ.

ಪ್ರಶ್ನೆ:— ಜಾನ್ ಪೋಜರ್ ಕಂಪನಿಗೆ ಜಿಯಾಲಾಜಿಕಲ್ (Geological) ಸರ್ವೇ ಆಫ್ ಇಂಡಿಯಾದಿಂದ ದೊಡ್ಡ ಆರ್ಡರುಗಳು ದೊರೆತಿವೆಯೋ?

ಉತ್ತರ:—ಸರಕಾರಕ್ಕೆ ಗೊತ್ತಿಲ್ಲ.

ಪ್ರಶ್ನೆ:—ಸರಕಾರದವರು ಗೊತ್ತುಮಾಡಿಕೊಳ್ಳಲಿಕ್ಕೆ ಯತ್ನಿಸಿ ದರೊ?

ಉತ್ತರ:—ಇಲ್ಲ, ಸ್ವಾಮೀ.

ಪ್ರಶ್ನೆ:—ಜಾನ್ ಪೋಜರ್ ಕಂಪನಿಗೆ ದೊರೆತ ಕಾಂಟ್ರಾಕ್ಟು ಗಳೆಷ್ಟು?

ಉತ್ತರ:—ಈ ಪ್ರಶ್ನೆಯ ಬಗ್ಗೆ ನೋಟೀಸು ಬೇಕು.

ಕಲಕತ್ತೆಯ (ಕಸ್ಟಮ್ ಹೌಸ್) ಜಕಾತಿ ಕಛೇರಿಯ ಮುಖಾಂ ತರವಾಗಿ ೧೯೪೦ರಲ್ಲಿ, ಒಂದು ಕೋಟಿ ೫೦ ಲಕ್ಷ ರೂಪಾಯಿಯ ಅಭ್ರಕವು ರಫ್ತು ಆಯಿತು.

ನಲ್ಲ-ನಲ್ಲೆಯರು

●

'ಮಾನ್ಸಿ'

೧

ತೂತುಗಣ್ಣು ಮೇಲ್ ಬಾತಗಲ್ಲ ಎಂ-
ದೇಕೆ ಮಾಡಿಕೊಂಡೆ....
ನಲ್ಲ— ಏಕೆ ಮಾಡಿಕೊಂಡೆ?
ಓತು ಬಂದವಗೆ ಒನಕೆ ಮುದ್ದು ಎಂ-
ದದಕೆ ಮಾಡಿಕೊಂಡೆ....
ನಲ್ಲೆ— ಅದಕೆ ಮಾಡಿಕೊಂಡೆ!

೨

ಜಗಳಗಂಟ ಹೆಣ್ಣೆಂದು ಹಳಿದು ನೀ-
ನೇಕೆ ಮಾಡಿಕೊಂಡೆ....
ನಲ್ಲ— ಏಕೆ ಮಾಡಿಕೊಂಡೆ?
ಕಂಟಿಯ ಕೇವಗಿ ಮುಡಿಯಲು ಬಾರದೆ?
ಅದಕೆ ಮಾಡಿಕೊಂಡೆ....
ನಲ್ಲೆ— ಅದಕೆ ಮಾಡಿಕೊಂಡೆ!

೩

ಮೊಂಡಮೂಗಿನಾ ಹೆಣ್ಣೆಂದೆಂದು ನೀ
ಹಳಿದು ಮಾಡಿಕೊಂಡೆ....
ಬಲುಬೀಳ್—ಗಳೆದು ಮಾಡಿಕೊಂಡೆ!
ಮೊಂಡ ಮೂಗಿಗೇ ಮೂಗುತಿ ಚೆಲುವೆಂ-
ದದಕೆ ಮಾಡಿಕೊಂಡೆ....
ನಲ್ಲೆ— ಅದಕೆ ಮಾಡಿಕೊಂಡೆ!

೪

ಉಡಲಿಲ ಉಣಲಿಲ, ಮಾತಿನ ಬೂಟಾಟ
ಬಡಿವಾರ ಬಿಡು ನಲ್ಲಾ....
ನಿನ್ನಯ— ಬಡಿವಾರ ಬಿಡು ನಲ್ಲಾ!
ಉಂಡರೆ ಅರಗಿತು, ಉಟ್ಟರೆ ಹರಿಯಿತು,
ನಿನಾಸಲೊಲವು ನಲ್ಲೆ....
ನಿನ್ನಯ— ನಿನಾಸಲೊಲವು ನಲ್ಲೆ!

೫

ಮಾತಿಲಿ ವೈಕುಂಠ ತೋರುವ ಕವಿ ನೀ
ಮುಗ್ಧೆಯು ನಾನಲ್ಲ....
ತಿಳಿಯನ— ಮುಗ್ಧೆಯು ನಾನಲ್ಲ!
ಹೃದಯದಿ ವೈಕುಂಠ ಬೈಚಿಟ್ಟ ಬಾಲೆಯೆ
ಗುಣದ ಗಾಡಿಕಾರ್ತಿ....
ನನಮನ— ಬೆಳಗಿದ ಚಿರಜ್ಯೋತಿ!

೬

ಕೆಸರಲಿ ಕಮಲವು ಹುಟ್ಟುವುದಿಲ್ಲವೆ?
ಬಸಿರ ಕೊಂಕು ಹಿರಿದೆ....
ಗುಣವಿರೆ— ಬಸಿರ ಕೊಂಕು ಹಿರಿದೆ?
ಕಣ್ಣಾ ಕಾಣದ ಚೆಲು ಮನಕಾಣುವುದೌ!
ಅದಕೆ ಮಾಡಿಕೊಂಡೆ....
ನಲ್ಲೆ— ಅದಕೆ ಮಾಡಿಕೊಂಡೆ!

೭

ದಪ್ಪದೇಹದಾ ದಿಂಡೆಯು ನೀನೆಂ-
ದೇಕೆ ಮಾಡಿಕೊಂಡೆ?....
ನಲ್ಲ— ಏಕೆ ಮಾಡಿಕೊಂಡೆ?
ಬಾಳ ತಕ್ಕಡಿಗೆ ತೂಕ ಕಟ್ಟಲೆಂ-
ದೊಲಿದು ಮಾಡಿಕೊಂಡೆ....
ನಲ್ಲೆ— ಒಲಿದು ಮಾಡಿಕೊಂಡೆ!

೮

ಮಿಟ್ಟೆಹಣೆಯ ಬಲು ಕೆಟ್ಟ ಹುಡುಗಿಯಂ-
ದೇಕೆ ಮಾಡಿಕೊಂಡೆ?....
ನಲ್ಲ— ಏಕೆ ಮಾಡಿಕೊಂಡೆ?
ಬೆಟ್ಟದ ನೇಸರ ತೆರದಿ ಕುಂಕುಮವು
ನೆರೆಯೆ ಮಾಡಿಕೊಂಡೆ....
ನಲ್ಲೆ— ನೆರೆಯೆ ಮಾಡಿಕೊಂಡೆ!

೯

ಹೊರಗಣ್ಣಿನ ಚೆಲು ರೂಪದ ಕೋಟಲೆ
ಒಲಿದ ಮನಕೆ ನಲ್ಲ— ನಲ್ಲೆ— ಬೆರೆತ ಆತ್ಮಕಲ್ಲ!

ಚೆಲುವಿನಿಂದಲೆ ಒಲವು ಮೊಳೆಯುವುದು!

(ಉತ್ತರಪಕ್ಷ)

ಶ್ರೀ. ಜಿ. ವೆಂಕಟರಾಯರು, ಕೂಡಲಸಂಗಮ

ಜಯಂತಿಯ ಆಗಸ್ಟ್ ಸಂಚಿಕೆಯಲ್ಲಿ ಶ್ರೀಮಾನ್ ಬಿದರಕುಂದಿ ವೆಂಕಟರಾಯರ ಒಂದು ಲೇಖನವು ' ಒಲವಿನಲಿಯೆ ಜೆಲುವು ಇಹುದು! ' ಎಂಬ ಶಿರೋಲೇಖನದಡಿಯಲ್ಲಿ ಪ್ರಕಟವಾಗಿದೆ. ಅದನ್ನು ಆಮೂಲಾಗ್ರ ಓದಿನ ನಂತರ, ಆ ವಿಚಾರಸರಣಿಯಲ್ಲಿ ಏನೋ ಕೊಂಚ ಅಪೂರ್ಣತೆಯಿವೆಯೆಂಬ ತೋರಿತು. ಆ ತೋರಿಕೆಯೆ ಪ್ರಕೃತ ಲೇಖನವನ್ನು ಬರೆಯಲು ಪ್ರೇರೇಪಿಸಿದ್ದು.

ಜೆಲುವು ಕಣ್ಣಿನ ನೋಟವೂ ನಿಜ; ಒಲವು ಹೃದಯದ ಆಟವೂ ಆಹುದು. ಆದರೆ, ಕಣ್ಣು ನೋಟವನ್ನು ಕಂಡುಕೊಂಡ ಮೇಲೆಯೆ ಹೃದಯವು ಆಟತೊಡಗುವುದು! ಅದರಿಂದ ಜೆಲುವಿನಿಂದಲೆ—ಜೆಲುವನ್ನು ಕಂಡಾಗಲೆ— ಒಲವು ಉಲಿಯತಕ್ಕುದೆಂದು ನನ್ನ ಭಾವನೆ.

' ಜೆಲುವು ' ಎಂಬ ಪದವು ಪ್ರಕೃತ ಲೇಖನದ ವಿಷಯವಾಗಿಯೂ, ಬಾರಿ ಬಾರಿಗೆ ಉಪಯೋಗಿಸಲ್ಪಡಬೇಕಾಗಿಯೂ ಇದ್ದುದರಿಂದ, ಅದರ ಅರ್ಥವನ್ನಷ್ಟು ಜೆನ್ನಾಗಿ ತಿಳಿದುಕೊಂಡು ಮುಂದಡಿಯಿಡೋಣ.

' ಜೆಲುವು ' ಎಂದರೆ ' ಸೌಂದರ್ಯ; ' ಹೃದಯದಲ್ಲಿ ಸ್ತಬ್ಧವಾಗಿ—ಅಡಕವಾಗಿದ್ದ ಒಲವಿನ ನೆಲೆಯನ್ನು ಕೆಣಕಿ, ಉಕ್ಕಿಸಿ ಹರಿಯಿಸುವ ವಿದ್ಯುಚ್ಶಕ್ತಿ! (ಅಥವಾ ಶ್ರೀ. ಬಿದರಕುಂದಿ ವೆಂಕಟರಾಯರು ಹೇಳಿದಂತೆ ಒಲಿದ ಹೃದಯಗಳು ಮಾತ್ರ ಕಾಣಬಯಸುವಾಪ ಮನಸ್ಪೃಷ್ಟಿಕರ ರಮಣೀಯತೆ.) ಇದು ಪ್ರಕೃತಿಲೀಲಾವಿಲಾಸದ ಸಹಜ ಸನ್ನಿವೇಶಗಳಲ್ಲಿ ಕೋಗುವುದು. ಇದನ್ನು ಕಂಡ ಮೇಲೆ, ಮನಸ್ಸು ಇದಕ್ಕಾಗಿ ಒಲಿಯುವುದು. ಒಲಿದ ಮನವು ಜೆಲುವಿನ ಆಶ್ಚರ್ಯವನ್ನು ಪ್ರವೇಶಿಸುವುದು. ಆಗ ಜೆಲುವು ತನ್ನ ಉಪಾಧಿಯ ಸರ್ವಸ್ವವನ್ನೂ ವ್ಯಾಪಿಸಿಕೊಳ್ಳುವುದು. ಅದರಿಂದ ಇದನ್ನು—ಸಾಮಾನ್ಯ ರೂಪದಲ್ಲಿಯೆ ಆಗಲಿ-ಕಂಡ ಮೇಲೆಯೆ ಒಲವು ಜಾಗೃತವಾಗುವುದು!

ಈ ಜೆಲುವೆಂಬುದು ದೃಶ್ಯವಾರ್ಥಗಳ ರೂಪ-ರೇಖೆ-ಬಣ್ಣಗಳ ವಿಶಿಷ್ಟ ಜೋಡಣೆಯಲ್ಲಷ್ಟೇ ಕಾಣುವುದಿಲ್ಲ. ಶ್ರೀ. ವೆಂಕಟರಾಯರೂ—ಅವರು ತೆಗೆದುಕೊಂಡ ಉದಾಹರಣೆಗಳ ಮೇಲಿಂದ—ಹಾಗೆ ಹೇಳಲ್ಲವೆಂದೇ ತಿಳಿಯಬೇಕಾಗುವುದು. ಅವರು ಹೇಳುವಂತೆ ನಾವು ಗಾಂಧೀಜಿಯವರನ್ನು ಒಲಿದಿದ್ದೇವೆ. ಇದು ಅವರ ರೂಪ ಲಾವಣ್ಯ (?) ಗಳಿಗಾಗಿಯಂತೂ ಅಲ್ಲ. ಅದರೆ ಏತಕ್ಕಾಗಿ? " ಆ ತ್ಯಾಗಮೂರ್ತಿಯು ನಮ್ಮವನು; ಆದರಿಂದಲೇ ಅವರಲ್ಲಿ ನಮ್ಮ ಒಲವು" ಎಂದು ಲೇಖಕರು ಹೇಳಿದ್ದಾರೆ. ಅವರು ನಮ್ಮಲ್ಲುಂಟಾದ ಈ ' ನನ್ನ ತನ'ಕ್ಕೂ ಒಂದು ಕಾರಣವಿದೆ. ಅದು ಗಾಂಧಿಜಿಯವರ ತ್ಯಾಗ! ನಾವು ಒಲಿದುದು ಅವರ ತ್ಯಾಗವನ್ನು ಕಂಡು ಅಥವಾ ಕೇಳಿದ ಮೇಲೆ. ಈ ತ್ಯಾಗದ ಲವಲೇಶವೂ ಇಲ್ಲದ-ಅವರಲ್ಲಿದ್ದುವುಗಳಿಗೆ ವಿರುದ್ಧವಾದ ಗುಣಗಳನ್ನೊಳಗೊಂಡ—ಒಬ್ಬ ಸ್ವಾರ್ಥಿ ಕಳ್ಳನಲ್ಲಿ ನಮ್ಮ 'ನನ್ನತನವು' ಎಂದಿಗೂ ಉಂಟಾಗಲಾರದು! ನಾವು ಅವನನ್ನು ಎಂದೂ ಒಲಿಯಲಾರೆವು! ನಮ್ಮ ಒಲವಿಗೆ ಮೂಲಕಾರಣವಾದ ಈ ತ್ಯಾಗವು ಒಂದು ಜೆಲುವೆ; ಅದು ಹೃದಯದ ಜೆಲುವು! ಈ ದೃಷ್ಟಿಯಿಂದ ಗಾಂಧೀಜಿಯವರು ಅತಿ ಜೆಲುವರು!! ಈ ಜೆಲುವನ್ನು ನೋಡಿಯೆ ನಾವು ಅವರನ್ನು ಒಲಿದಿರುವೆವು. ಹೀಗೆ ಒಲಿದ ಮೇಲೆ, ನಮಗೆ ಗಾಂಧೀಜಿಯವರ ಗುಣಸೌಂದರ್ಯವು ಅವರ ವ್ಯಕ್ತಿತ್ವದಲ್ಲೆಲ್ಲಾ ವ್ಯಾಪಿಸಿಕೊಂಡು ಮೆರೆಯುತ್ತದೆ. ನಮ್ಮಲ್ಲಿ ಪುನಃ ಒಲುಮೆಯ ಹೊನಲು ಹರಿಯುತ್ತದೆ! ಈ ಒಲುಮೆಯ ಹೊನಲಿನಲ್ಲಿ ಮಳುಗಿ ಗುಟುಕರಿಸುವಾಗ, ನಾವು ಅದರ ಮೂಲಕಾರಣವನ್ನೇ ಮರೆತು ಬಿಡುತ್ತೇವೆ!

ಹೀಗೆಯೇ ತ್ಯಾಗದ ಇನ್ನೊಂದು ಉದಾಹರಣೆ:— ರಾಮನು ತಂದೆಯ ಮಾತನ್ನು ನಡೆಯಿಸುವುದಕ್ಕಾಗಿ ರಾಜ್ಯವನ್ನು ತ್ಯಜಿಸಿದಲ್ಲಿಯೆ ಈ ಜೆಲುವಿದೆ. ತಿರುಗಿ ದಶರಥನ ಮರಣಾನಂತರ ಭರತನು ಪ್ರಾಪ್ತರಾಜ್ಯದ ಭೋಗವನ್ನು ಧಿಕ್ಕರಿಸಿ ರಾಮನನ್ನು ಕರೆಯ ಹೋದಲ್ಲಿ ಇನ್ನಿಷ್ಟು ಜೆಲುವಿದೆ. ಅದರಂತೆಯೇ " ಭರತ, ಮಾತುಗಳು ಅದುಭುತಾಗಿನಷ್ಟು ಸುಲಭ ಮಾಡುವಾಗ ತೋರುವುದಿಲ್ಲ. ನಾನು ನನ್ನ ವಚನವನ್ನು ಪಾಲಿಸಿದ ಮೇಲೆಯೆ ಹಿಂದಿರುಗತಕ್ಕವನು! " ಎಂದ ರಾಮನ ಮಾತಿನಲ್ಲಿಯೂ, ಅದರಂತೆಯೇ ನಡೆದ ಅವನ ಆಚರಣೆಯಲ್ಲಿಯೂ ಜೆಲುವಿನ ಅತಿರೇಕವಿದೆ. ಹೀಗೆ ಕೆಲವು ನುಡಿಗಳಲ್ಲಿ ಜೆಲುವಿರುತ್ತದೆ; ಕೆಲವು ನಡೆಗಳಲ್ಲಿ ಜೆಲುವಿರುತ್ತದೆ. ಹೀಗೆ ಸುಂದರ ನಡೆ-ನುಡಿಗಳನ್ನು ಕಂಡಾಗಲೆ ನಾವು ಒಲಿಯುವೆವು. ರಾಮಾಯಣದ ಈ ವೀರರ ನಡೆನುಡಿಗಳ ಬಗೆಗೆ ಓದಿದಾಗ—ಆಥವಾ ಕೇಳಿದಾಗ—ನಾವಷ್ಟೇ ಅಲ್ಲ, ಅವತಾರಗಳಲ್ಲಿ ನಂಬಿಕೆಯಿಲ್ಲದ—ಸಾಮಾನ್ಯ ದೃಷ್ಟಿಯಿಂದ ನೋಡುವ- ಪಾಶ್ಚಿನಾತ್ಯರೂ ಒಲಿದಿದ್ದಾರೆ, ಒಲಿಯುತ್ತಿದ್ದಾರೆ; ಇನ್ನೂ ಒಲಿಯುವರು.

ಒಬ್ಬ ಶಿಲ್ಪಿಯಿರುತ್ತಾನೆ. ಅವನೊಂದು ಸರ್ವೋತ್ಕೃಷ್ಟ ಕೃತಿಯನ್ನು—ಒಂದು ಸುಂದರ ಶಿಲಾಮೂರ್ತಿಯನ್ನು— ನೋಡಿದಾಗ, ಅದರ ಸೌಂದರ್ಯವು ನಮ್ಮ ಮನಸ್ಸನ್ನು ಪಡಿಯುತ್ತದೆ. ಅದರಲ್ಲಿ ತೋರಿದ ಕಲಾನೈಪುಣ್ಯವನ್ನು ಗೌರವಿಸುತ್ತೇವೆ. ಆ ಕಲಾಕಾರನ ಹೃದಯದಲ್ಲಿಯ ಕಲಾಸೌಂದರ್ಯವನ್ನು ಆರಾಧಿಸುತ್ತೇವೆ. ಅದನ್ನು ನಿರ್ಮಿಸುವಾಗ ಅವನಿಗುಂಟಾಗಿದ್ದ ಸಮಾಧಿಪರಿಸ್ಥಿತಿಯು ಕೆಲಕಾಲ ನಮಗೂ ಉಂಟಾಗುತ್ತದೆ. ಆಗ ಅವನನ್ನು ಪ್ರೀತಿಸತೊಡಗುತ್ತೇವೆ. ಅವನ ನಮ್ಮ ಆತ್ಮೀಯತೆಯು ಬೆಳೆಯುತ್ತದೆ. ಇದೇ ನಮ್ಮ ' ನನ್ನತನ! ' ಇದು ಸೌಂದರ್ಯವನ್ನು ಕಂಡಾಗಲಿ ಚಿಗುರತಕ್ಕುದು! ಇವರಂತೆಯೇ ಎಲ್ಲವೂ!

೫೨ ವರ್ಷಗಳಿಂದ ಅನುಭವ ಪಟ್ಟ

ಕರ್ಕಿ ಮತ್ತು ಕಂಪನಿ

ಇವರ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:- **ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ**

ಗಿರಗಾಂವ, ಮುಂಬಯಿ

ಇನ್ನು ಹಿಟ್ಲರನ ಉದಾಹರಣೆಯನ್ನು ನೋಡೋಣ:—ಅವನನ್ನು ನಾವು ಒಲಿದಿಲ್ಲ. ಜರ್ಮನಿಯು ಒಲಿದಿದೆ. ಇದಕ್ಕೂ ಕಾರಣವಿದೆ. ಜರ್ಮನಿಯು ಬಯಸುತ್ತಿರುವುದನ್ನೆ ಅವನು ಬಯಸುತ್ತಾನೆ. ಆದಕ್ಕಾಗಿ ಅದು ಅವನನ್ನು ಪ್ರೀತಿಸುತ್ತದೆ. ನಮಗೆ ಬೇಕಾದುದನ್ನು ಅವನು ಬಯಸುತ್ತಿಲ್ಲ; ಆದರಿಂದ ನಾವು ಒಲಿದಿಲ್ಲ. ಇಲ್ಲಿ ಅವನ ಚೆಲುವು—ಅವನ ವಿಚಾರಗಳ ಚೆಲುವು—ಸಂಕುಚಿತವಾದುದು, ಅದಕ್ಕಾಗಿ ಅವನ ಬಗ್ಗೆ ಉಂಟಾಗುವ ಒಲವೂ ವ್ಯಾಪಕವಾಗಿಲ್ಲ. ಕೇವಲ ನಾಝಿಗಳಷ್ಟೇ ಒಲಿದಿದ್ದಾರೆ. ಸೌಂದರ್ಯವು ಸ್ವಲ್ಪ ಸಹಜವೂ ವೈಶಾಲ್ಯವುಳ್ಳದ್ದೂ ಆಗುವುದೊ, ಅದಕ್ಕಾಗಿ ಆಗುವ ಒಲವೂ ಅಷ್ಟೇ ವ್ಯಾಪಕವಾಗಿರುತ್ತದೆ.

'ನಮ್ಮಾಕೆ'ಯದೂ ಹಾಗೆಯೆ. 'ನಾನು ನಿನಗಾಗಿ' ಎಂಬ ಕೆಯ ಮಾತು ಅಥವಾ ಅಕೆಯ ಪರ್ತನೆ—ಇವುಗಳ ಚೆಲುವನ್ನು ಡಾಗಲೆ ನಾವು ಒಲಿಯುವುದು. 'ನಾನು ನಿನಗಾಗಿಯಲ್ಲ.' ಎಂಬ ಲುವಿಲ್ಲದ—ಸೌಂದರ್ಯ ಹೀನವಾದ—ಮಾತನ್ನೊ, ನಡೆಯನ್ನೊ ರಿದಾಗ, ಅಕೆಯ ಕೇತರೆಯ ಗರಿಯಾದ ಮೂಗು ನಮಗೆ ಇನ್ನೇಕೆ ಗಿ ತೋರಬಹುದೋ ಎಂಬುದೊದು ಸಮಸ್ಯೆಯೆ! ಇದರಂತೆಯೆ ನ್ನ ಮನೆ, ನನ್ನ ಹೊಲಗಳು, ನನ್ನ ಮಕ್ಕಳು ಎಂಬ ಬಾಳುವೆಯ ಸ್ಥೈಯನ್ನು ಒಲುಮೆಯ ಜೀವಾಳದಿಂದ ಕಟ್ಟಿರುವುದೂ ನಿಜವೆ. ದರೆ ಇಲ್ಲಿಯೂ ಉಪಯುಕ್ತತೆಯು ಕಾರಣವಾಗಿದೆ. ಅದೇ ಲುವು! ಹೊಲವು ಬೆಳೆಯದೆ ಹೋದಾಗ, ಮನೆಯು ಬಾರಿಬಾರಿಗೂ ಳುತ್ತಿರುವಾಗ, ಮಗನು ಕೆಟ್ಟ ನಡತೆಯವನಾಗಿ ನಮಗೆ ದುಃಖ ನ್ನುಂಟು ಮಾಡಿದಾಗ, ಈ ಒಲವಿನ ಬಂಧನವು ಸಡಿಲಾಗುವುದು ಬುದೂ ನಿಶ್ಚಯ!

'ಆಕೆ' ಯೊಬ್ಬಳಿದ್ದಾಳೆ. ನನ್ನನ್ನೆಂದೂ ಕಂಡವಳಲ್ಲ, ಕೇಳಿದವಳಲ್ಲ. ನಾನೂ ಹಾಗೆಯೆ. ಕಂಡವನಲ್ಲ, ಕೇಳಿದವನಲ್ಲ. ಅಕಸ್ಮಾತ್ತಾಗಿ ನಳ ಯಾವುದೋ ಒಂದು ಚೆಲುವು—ರೂಪ ಲಾವಣ್ಯವೋ, ಗುಣ ಸೌಂದರ್ಯವೋ, ನುಡಿಯ ಚೆಲುವೋ, ನಡೆಯ ಸೊಬಗೋ—ನಾವುದೋ ಒಂದು- ನನ್ನ ಕಣ್ಮನಗಳನ್ನಾಕರ್ಷಿಸಿ ಬಿಟ್ಟಿತು. ನಾನು ನಿದೆನು. ಇಲ್ಲಿ ಅಕೆಯು ನನಗಾಗಿ ಯಾವ ಒಲವನ್ನೂ ತೋರಿಲ್ಲ. ಆದರೂ ಒಲಿದೆನು.... ಅವಳ ಸಹಜ ಚೆಲುವಿಗಾಗಿ! ಹೀಗೆ ಚೆಲುವನ್ನು ಕಂಡಾಗ ಒಲಿಯುವುದು ಮನಸಿನ ಧರ್ಮ. ಮುಂದೆ ನೋಡೋಣ—ನನ್ನ ಒಲುಮೆಯನ್ನು ಆಕೆಯೂ ಬರಿತಳು. (ನನ್ನ ಒಲವು ಸರಳವೂ ನಿಷ್ಕಲ್ಮಷವೂ ಆದಲ್ಲಿ) ಅವಳೂ ಒಲಿಯಬೇಕು. ಒಲಿದೇ ಒಲಿದಳು. ಯಾಕೆಂದರೆ ಸರಳತೆಯೆ ಒಲವಿನ ಚೆಲುವು! ಇಲ್ಲಿ ನನ್ನ ಒಲವೇ ಚೆಲುವಾಗಿ ಅವಳನ್ನು ಒಲಿಸಿತು. ಇಂತಹ ಸಂದರ್ಭಗಳಲ್ಲಿಯೆ ಜನರು ಮೋಸ ಹೋಗಿ, ಒಲವಿನಿಂದಲೇ ಚೆಲುವೆಂದು ನುಡಿದು ಬಿಡುವರು. ನನ್ನಲ್ಲಿ ನಿಷ್ಕಾರಣವಾಗಿ ಅವಳ ಒಲವುಂಟಾಗಿ ನನ್ನ ಚೆಲುವನ್ನು ಕಂಡುಕೊಂಡಿದ್ದರೆ ಹಾಗೆ ಹೇಳಬಹುದಾಗಿತ್ತು. ಆದರೆ ಹಾಗಿಲ್ಲ. ನನ್ನ ಒಲವೇ ಚೆಲುವಾಗಿ ಅವಳನ್ನು ಒಲಿಸಿತು.

'ಲೈಲಾ-ಮಜನೂ'ಗಳ ಕತೆಯನ್ನು ಕೇಳದವರಿಲ್ಲ. ಅಲ್ಲಿಯೂ ಇದೇ ಹಾಡು. ಮಜನೂ ಒಲಿದದ್ದು ಲೈಲಾನ ಕುರೂಪಕ್ಕಾಗಿಯಲ್ಲ; ಅವಳಲ್ಲಿ ಕಾಣಬರುತ್ತಿದ್ದ—ಯಾರ ಮೇಲೆಯೂ ಒಲಿಯದೆ, ಅವನನ್ನೂ ಒಲಿಸಬೇಕೆಂಬ ಬಯಕೆಯಿಲ್ಲದೆ, ತನ್ನಷ್ಟಕ್ಕೆ ತಾನೇ ತೋರಿ ಬರುತ್ತಿದ್ದ—ಸರಳ ಹೃದಯತೆ, ಗುಣಗೌರವ ಮುಂತಾದ ಸಂಕಲಿತ ಸೌಂದರ್ಯವು ಅವನ ಮನಸ್ಸನ್ನು ಸೂರೆಗೊಂಡಿತು. ಅನಂತರ ಅವನ ಒಲವು ಅವಳ ಮನಸನ್ನು ಒಲಿಸಿತು. ಅವಳಿಗೆ ತಾಯಿ-ತಂದೆಗಳ ಬಂಧನವಿತ್ತೆಂಬುದು ಬೇರೆ ಮಾತು. ಆದರೆ ಒಲಿದಳೆಂಬುದೇನೋ ನಿಜ.

ಆದ್ದರಿಂದ ಒಲವಿನಲ್ಲಿ ಚೆಲುವಿಲ್ಲ. ಚೆಲುವು ಪ್ರಕೃತಿಯ ಲೀಲಾವಿಲಾಸ. ಅದು ಸಹಜವಾಗಿಯೆ- ತನ್ನಷ್ಟಕ್ಕೆ ತಾನಾಗಿಯೆ- ಮೆರೆಯುತ್ತಿರುತ್ತದೆ. ಅವನ್ನು ಅಕಸ್ಮಾತ್ತಾಗಿ ಕಂಡ ಮನಸ್ಸು ಅದನ್ನು ಮೌನವಾಗಿ ಆರಾಧಿಸುತ್ತದೆ. ಆಗ ಮೊದಲು ಒಟ್ಟನಲ್ಲಿ ಸಾಮಾನ್ಯವಾಗಿ ನೋಡಿದ ಚೆಲುವನ್ನು ವಿಶಿಷ್ಟ ದೃಷ್ಟಿಯಿಂದ ನೋಡುತ್ತದೆ. ಮನವು ಚೆಲುವಿನ ಅಂತರಾಳದಲ್ಲಿ ಹೋಗುತ್ತದೆ. ಚೆಲುವು ಇಮ್ಮಡಿ, ಮುಮ್ಮಡಿ ನೂರ್ಮಡಿ—ಕಡೆಗೆ ಅಗಾಧವಾಗಿ-ಅನಂತವಾಗಿ ಕಾಣುತ್ತದೆ. ಮುಂದೆ ಅದರಲ್ಲಿ ಕೂಡಿ ಒಂದಾಗುವುದಕ್ಕಾಗಿ ಆ ಕಡೆ ಬಾಗುತ್ತದೆ—ಸಾಗುತ್ತದೆ. ಇದೇ ಒಲವು! ಇದೇ ಸೃಷ್ಟಿಮೂಲ ತತ್ತ್ವದ ರಹಸ್ಯ!! ಇದೇ ಜೀವನ ಧರ್ಮ !!!

ಶ್ರೀರಂಗರ

ಸ್ವಲ್ಪದ್ರಲ್ಲಿ ಸ್ವಾರಸ್ಯ

(ವಿನೋದ ಪ್ರಚುರ ಹಗಟೆಗಳು)

ಪ್ರಕಟವಾಗಿವೆ! ಬೇಗನೆ ನಿಮ್ಮ ಪ್ರತಿ ತರಿಸಿಕೊಳ್ಳಿರಿ!

ಹರಟೆಗಳ ತಂತ್ರವನ್ನು ಕುರಿತು ಸ್ವಾರಸ್ಯವಾಗಿ

ಬರೆದ ಮುನ್ನುಡಿಯನ್ನೊಳಗೊಂಡಿದೆ.

ಬೆಲೆ ೧—೦—೦

ಸಾರಾಟದ ಅಧಿಕಾರಿಗಳು :

ಮನೋಹರ ಗ್ರಂಥಭಾಂಡಾರ, ಧಾರವಾಡ

ಹೊಳೆ ದಾಟುವಾಗ

ಶ್ರೀ. ವಿ. ಜಿ. ಶಾನಭಾಗ, ಕುಮಟಾ

(ಇದೊಂದು ಉತ್ತರ ಕನ್ನಡ ಜಿಲ್ಲೆಯ ಸಾಮಾಜಿಕ ಚಿತ್ರ. ಶಿಥಿಲವಾಗಿ ಹೋಗಿರುವ ವರ್ಣಾಶ್ರಮಧರ್ಮ ಸಮಾಜಪದ್ಧತಿಯ ಇಂದಿನ ಕಾಲದಲ್ಲಿ, ಕನ್ನಡನಾಡಿನ ಯಾವಭಾಗದಲ್ಲಿಯೂ ಏತತ್ ಸದೃಶ ಚಿತ್ರಗಳು ನೋಡಲು ಸಿಕ್ಕಬಹುದು. ಸಂ. ಜ.)

ನಮ್ಮ ಬಸ್ಸು ಜಂಗಲ್* ಏರಿತು. "ಇಳಿತನ ಹೊತ್ತಾಗಿತ್ತು. ಆಚೆಯ ತೀರದಲ್ಲಿ ನೀರು ಕಡಮೆಯಾಗಿ ಜಂಗಲು ಡಕ್ಕೆಗೆ ತಾಗದೆ ಬಹಳ ಪೀಕಲಾಟಪಡಬೇಕಾದ ಸಂದರ್ಭ. ಅದಕ್ಕೇ ಖಲಾಸಿಗಳೂ ತಾರಿಯ ಮುಕ್ತೇದಾರರೂ "ಜಂಗಲಿಗೆ ಭಾರ ಹೆಚ್ಚಾಗುತ್ತದೆ! ಜಂಗಲನ್ನು ಎಲ್ಲರೂ ಹತ್ತಬೇಡಿ; ಕೆಲವರು ಡೋಣಿಗೆ ಬನ್ನಿ!" ಎಂದು ಕೂಗಿದರು. ಜಂಗಲಿನ ಈಜೆಯೇ ದೊಡ್ಡ ಡೋಣಿಯಿದ್ದರೂ ಯಾರೂ ಅದನ್ನು ಗಮನಿಸದೆ 'ಕೆಲವರು' ಎಂದರೆ ಇವರೆಂದು ಅವರು; ಅವರೆಂದು ಇವರು ತಮ್ಮತಮ್ಮಷ್ಟಕ್ಕೆ ನಿರ್ಣಯ ಮಾಡಿಕೊಂಡು, ಎಲ್ಲರೂ ಜಂಗಲನ್ನು ಏರಿದರು.

ಈ ಗಜಿಬಿಜಿಯಲ್ಲಿ ತ್ರಿಪುಂಡ್ರಧಾರಿಗಳಾದ ಆರು ಮಂದಿ ವೈದಿಕರು ತಲೆಯ ಮೇಲೆ ಒದ್ದೆಯಾದ 'ಅಂಗೋಸ್ತ್ರ'ವನ್ನು ಇಟ್ಟುಕೊಂಡು, ತಾವು ಬಸ್ಸಿನ ಪ್ರಯಾಣಿಕರಲ್ಲದಿದ್ದರೂ, ಎಲ್ಲರಂತೆ ತಾವೂ ಜಂಗಲ್ ಏರಿಕೊಂಡರು.

"ಜಂಗಲಿಗೆ ಭಾರ ಹೆಚ್ಚಾಗುತ್ತಿದೆ; ಆಚೆ ತೀರ ತಲ್ಪದು; ಕೆಲವರು ಡೋಣಿಗೆ ಬನ್ನಿ" ಎಂದು ಮುಕ್ತೇದಾರರು ತಿರುಗಿ ಕೂಗಿದರು. ಆದರೆ 'ಕೆಲವರ' ಲಿಸ್ಟಿ (List) ನಲ್ಲಿ ಯಾರು ಯಾರು ಸೇರ್ಪಡೆಯಾಗುತ್ತಾರೆ ಎಂಬುದನ್ನೇನೂ ನಿಶ್ಚಯಿಸಲಾರದೆ, ಇವರು ಅವರನ್ನು ನೋಡುತ್ತ ಅವರು ಇವರನ್ನು ನೋಡುತ್ತ ಪ್ರಯಾಣಿಕರು ನಿಂತಲ್ಲಿಯೆ ನಿಂತುಕೊಂಡರು. 'ಕೆಲವರೆಂದರೆ ವೈದಿಕರೆಂದು ಯಾವ ಶಾಸ್ತ್ರದಲ್ಲಿದೆ? ವೈದಿಕರ ಮನೆಯ ಬದಲು 'ಕೆಲವರ ಮನೆ' ಎನ್ನುವುದು ರೂಢಿಯಲ್ಲಿಯಾದರೂ ಇದೆಯೆ?' ಹೀಗೆ ಯೋಚಿಸಿಕೊಂಡು, 'ಕೆಲವರೆಂದರೆ ತಾವಲ್ಲವೆಂದು ಅಭಿಪ್ರಾಯಪಟ್ಟು, ನಿಶ್ಚಿಂತರಾಗಿ ವೈದಿಕರೂ ನಿಂತಲ್ಲಿಯೆ ನಿಂತುಳಿದರು.

"ನಮಗೇನು! ಡೋಣಿಗಳು ಹೂಳಿಕೂತರೆ ನಿಮಗೇ ತಡವಾಗುವುದು!" ಎಂದು "ತಡ"ದ ಸುಖ-ದುಃಖಕ್ಕೆ ನಮ್ಮನ್ನು ಬಿಟ್ಟು, ಮುಕ್ತೇದಾರರು ತಮ್ಮ ಜವಾಬ್ದಾರಿಯಿಂದ ಮುಕ್ತರಾದರು.

ಗಂಡಸರು, ಹೆಂಗಸರು, ಮಕ್ಕಳು-ಮರಿಗಳು, ಫ್ರಂಟಿನವರು, ಇಂಟರಿನವರು, ಥರ್ಡ್‌ಕ್ಲಾಸಿನವರು, ಸೈಡಿನಲ್ಲಿ ನಿಂತವರು, ಟಾಪಿನಲ್ಲಿ ಕುಳಿತವರು ಹಿಡಿದು, ಬಸ್ಸಿನಲ್ಲಿ ಮೂವತ್ತೊಂದು ಜನ; ಫುಲ್ ಸೀಟಿನ ಚಾರ್ಜು ಕೊಟ್ಟು ಸೀಟಿಲ್ಲದೆ ಸೀಟಿನ ನಡುವೆ ನಿಂತು ಬಂದ ಒಂದು ಆಡನ್ನು ಹಿಡಿದರೆ, ಒಟ್ಟು ಮೂವತ್ತೆರಡು ಪ್ರಯಾಣಿಕರಿದ್ದರು. ಮಧ್ಯವಯಸ್ಕ-ದತಲೆಹಣ್ಣಾದ-ಬಿಳಿಯ ಟೊಪ್ಪಿಗೆಯ ಸದ್ಗೃಹಸ್ಥರನ್ನು ಫ್ರಂಟಿನಲ್ಲಿ, ಎರಡು ಮೂರು ಹೆಂಗಳೆಯರನ್ನು ಇಂಟರಿನಲ್ಲಿ ಬಿಟ್ಟರೆ, ಉಳಿದ ಎಲ್ಲ ಪ್ರಯಾಣಿಕರು "ಬಿಸಿಲಾದರೆ ಚಿಂತೆಯಿಲ್ಲ, ತುಸು ಕೈಕಾಲಿಗಾದರೂ ವಿರಾಮವಾಗುವುದು" ಎಂದು ಜಂಗಲಿನ ಮೇಲೆ ಆಚೆ ಅಷ್ಟು ಜನ, ಈಚೆ ಇಷ್ಟು ಜನ ಹೀಗೆ ನಾಲ್ಕಾರು ಗುಂಪಿನಲ್ಲಿ ನಿಂತು, ಬೀಡಿ ಸೇದುವವರು ಬೀಡಿ ಸೇದುತ್ತ, ಎಲೆ ಅಡಿಕೆಯ ಭಕ್ತರು

* ಜಂ ಲ್ ಎಂದರೆ ಬಂದಕ್ಕಿಂತ ಹೆಚ್ಚು ಡೋಣಿಗಳನ್ನು ಕೂಡಿಸಿ ಕಟ್ಟಿ ಮಾಡಿದ--ಹೊಳೆದಾಟಿಸುವ ಸಾಧನ.

(೧೬೫ನೆಯ ಪುಟದಿಂದ ಮುಂದುವರಿದುದು.)

ನೀವೂ ಜಂಪ್ ಕೂಡಿದರೆ ದೊಡ್ಡ ಹುಳುವಾದ ಕೃಷ್ಣಸರ್ಪವಾಗುವಿರಿ" ಎಂಬುದೇ ಇತ್ಯರ್ಥವಿತ್ತು. ಆದರೂ ಹುಳುಗಳ ಭಾಗಗಳ ವಿವೇಚನೆಯನ್ನು ಮಾಡುವಾಗ ಸಭೆಯಲ್ಲಿ ಮೌನವೋ ನಿದ್ದೆಯೋ ಹರಡಿತ್ತು. ಆ ಮೇಲೆ ಅಧ್ಯಕ್ಷರಾದ ಪ್ರತಿವಾದಿಭಯಂಕರರು ವ್ಯಾಖ್ಯಾನಕ್ಕೆ ಮೊದಲು ಮಾಡಿದರು. ಅವರಲ್ಲಿ ತಮ್ಮ ಜೀವನದ ವಿಳಿತಗಳ ಸಮುಚಿತ ವರ್ಣನೆಯನ್ನು ಕೊಟ್ಟಿದ್ದಷ್ಟೆ, ತಮ್ಮನ್ನು ೧೨ ವರ್ಷದಿಂದಲೂ ಕೊರಗಿಸುತ್ತಿದ್ದ Asthma ಎಂಬ ರೋಗದ ಮೇಲೆ, ಕೆಪ್ಪುತ್ತಲೆ ಒಂದು ಇಡೀ ವ್ಯಾಖ್ಯಾನವಲ್ಲದಿದ್ದರೂ– ಮುಕ್ಕಾಲು ವ್ಯಾಖ್ಯಾನವನ್ನು ಜಡಿದರು. ನಾನೇ ಹಾರಗಳನ್ನು ಹಾಕಿದೆ ಎಲ್ಲರಿಗೂ. ನನಗೆ ಮಾತ್ರ ಮೂಸಿ ನೋಡೇನೆಂದರೆ ಒಂದು ಹೂವಿನ ಪಕಳೆಯೂ ಸಿಗಲಿಲ್ಲ! ಹೂವಿನಿಂದ ಪೊಟ್ಟೆ ತುಂಬುತ್ತದೆಯೆ? ಹೋಗಲಿ!

ನಮ್ಮ ಕಟ್ಟಿಕಡೆಯ ಪ್ರೋಗ್ರಾಮ್ ಎಂದರೆ ನಾಟಕ. ನಮ್ಮ ಆಧುನಿಕ ಭರತರಾಜರಾದ ಸಭಾಪತಿ ಲಕ್ಷ್ಮೀ ನೆಂಕಟೇಶರಮಣ Dramatist Doctor ಅವರಿಂದ ಬರೆದು, ತಿದ್ದಿ ಸುಧಾರಿಸಿದ ಆಸ್ಥಿತ್ಯಾದ "ಉಗುರಿನ ದೇವರು" ಎಂಬ ಗದ್ಯ-ಪದ್ಯ ರಹಿತವಾದ ಸುಂದರವಾದ ನಾಟಕದ ಅಭಿನಯನಾಯಿತು. ಯಾರಿಗೂ ನಾಟಕದ ಮರ್ಮವೇ ತಿಳಿಯದ್ದರಿಂದ, ಏನಾದರೂ ಗೂಢ ಸಂಕೇತದ ನಾಟಕವಿರಬೇಕೆಂದು ಎಲ್ಲರ ಅಭಿಪ್ರಾಯವಾಯಿತು. ಇಡಿ ನಾಟಕದಲ್ಲಿ ಒಂದೇ ಒಂದು ಹಾಸ್ಯಪ್ರಸಂಗವೆಂದರೆ ನಾಟಕದ ವೀರರಮಣಿ (heroine) ಯ ವೇಷವನ್ನು ತೆಗೆದುಕೊಂಡಿದ್ದವನ ಹೆರಳೇ ಬಿಚ್ಚಿ ಹೋಯಿತು. 'ಉಗುರಿನ ದೇವರು' ಎಂದರೆ ಶೂರ್ಪಣಖಿಯೆಂಬ ಅರ್ಥವೋ ಅನರ್ಥವೋ ಇವರಿಂದಾಯಿತೆಂದು ಹೋಗುವವರೆಲ್ಲ ಹೊಗಳಿದರು.

ಮುಗಿಯಿತು ನಮ್ಮ ಕಾರ್ಯಕ್ರಮ S. V. V. K. S. !!! ಅಧ್ಯಕ್ಷರನ್ನು ಕಳಿಸಿಬಂದೆ. ಹನ್ನೆರಡು ಹೊಡೆದಿತ್ತು. ಅಮಾಸಿ ಕತ್ತಲೆಯ ಮನೆಗೆ ಬಂದು ಲೆಕ್ಕ ಮಾಡಿದೆ. ಬಂದದ್ದು ೨೦೦ ರೂಪಾಯಿ. ಖರ್ಚಾದದ್ದು ೩೫೦ ರೂಪಾಯಿ. ದಿನ ಒಂದಕ್ಕೆ ೫೦ ರೂಪಾಯಿಯಂತೆ. ನೂರು ದಿವಸ ನಿದ್ದೆ ಹತ್ತಲಿಲ್ಲ!

ಅದರ ಪೂಜೆಯಲ್ಲಿ ನಿರತರಾಗಿ, ತಮ್ಮ ತಮ್ಮ ಸ್ವಭಾವಕ್ಕೆಯಾ ವ್ಯವಸಾಯಕ್ಕೆಯೂ ಅನುರೂಪವಾಗಿ ಮಾತನಾಡುತ್ತ ಇದ್ದರು.

ಅತ್ತ ಜಂಗಲಿಗೆ ಭಾರ ಹೆಚ್ಚಾದ ಕಾರಣ ಖಲಾಸಿಗಳ "ಓ ಪಾಮಾ ಲೇತಾ। ಒಗಿರೋ ಸಲಾಮಾ ॥ ಜೋರ ಮಾಡಿ ಜನರೇ!" ಎಂಬ ಬಾಯಿಗೆ ಬಂದ ಹಾಡೂ ಜೋರಾಗಿತ್ತು.

"ನನಗೆ ಯಲ್ಲಾಪ್ರಕ್ಕೆ ಹೋಗಬೇಕಿತ್ತು; ಇಲ್ಲಿಯೇ ಹನ್ನೊಂದು ಬಡಿಯಿತು! ಈ ಹೊತ್ತು ಮುಟ್ಟಲಿಕ್ಕೆ ಆಗುವುದೋ ಏನೋ!!" ಎಂದು ತಲೆಯ ಬಿಳಿಯ ಟೊಪ್ಪಿಗೆ ಹಿಂದೆ ಸರಿಸಿ, ನರೆನೆತ್ತಿಯ ಮೇಲೆ ಎಡಗೈ ಅಡಿಸುತ್ತ, ಮುಂದೆಯೂ ನೋಡದೆ ಹಿಂದೆಯೂ ನೋಡದೆ, ತಮಗೂ ಡ್ರೈವರನ ಸೀಟಿಗೂ ನಡುವಿದ್ದ ಕಟ್ಟಿಗೆಯ ಕಟಾಂಜನದ ಕಡೆ ನೋಡುತ್ತ, ಅದರ ಮೇಲೆ ಕೈಬೆರಳುಗಳನ್ನು ಬಾರಿಸುತ್ತ, ಅರ್ಧ ತಮ್ಮಷ್ಟಕ್ಕೆ– ಇನ್ನರ್ಧ ಶೀಘ್ರಕರ್ಣರು ಯಾರಾದರೂ ಬಸ್ಸಿನಲ್ಲಿದ್ದರೆ ಅವರಿಗೆ–ಎಂಬಂತೆ, ಫ್ರಂಟಿನ ಗೃಹಸ್ಥರು ಆಕಳಿಸುತ್ತ ನುಡಿದರು.

ಮುಲ್ಕೀ ಪರೀಕ್ಷೆ ಕೊಟ್ಟು ಹಿಂತಿರುಗಿದ ಮೂವರಲ್ಲಿ ಒಬ್ಬ ಹುಡುಗಿ ಇದನ್ನು ಕೇಳಿ, ಕತ್ತು ತಿರುವಿ ಫ್ರಂಟಿನವರನ್ನು ನೋಡಿದಳು. ಅವರು ಇದನ್ನು ನೋಡಿ "ಅಂಕೋಲೆಯ ದಾರಿಯಿಂದ ಹೋದರೆ ಇಷ್ಟೊತ್ತಿಗೆ ಮುಟ್ಟುತ್ತಿದ್ದೆ. ಅಂಕೋಲೆಯಿಂದಲೇ ಬೇಕೆಂತ ಈ ದಾರಿಯಿಂದ ಬಂದಂತಾಯಿತು." ಎಂದರು. ಆದರೆ ಆ ಹುಡುಗಿ ಗೃಹಸ್ಥರು 'ಹೋದರೆ'ಗೆ ಮುಟ್ಟುವಾಗಲೇ ಕತ್ತು ಈಚೆ ತಿರುವಿ ಗೃಹಸ್ಥರತ್ತ ಬೆನ್ನು ಮಾಡಿದ್ದರಿಂದ, ಅವರು "ಬಂದಂತಾಯಿತು" ಗೆ ಮುಟ್ಟಿ ಹೊಳೆ ನೋಡುತ್ತ ತಲೆಯ ಶಿರಸ್ತ್ರಾಣ ಮುಂಪೆ ಸರಿಸಿಕೊಂಡು ಸುಮ್ಮನಾದರು.

ಜಂಗಲಿನ ಮಧ್ಯದ ಗುಂಪಿನವರಲ್ಲಿ, ಕಿವಿಯಲ್ಲಿ ಕೆಂಪಿನಬೆಂಡೋಲೆ ಇಟ್ಟುಕೊಂಡ—ಗಲ್ಲಬಿದ್ದ—ಉದ್ದ ಮೋರೆಯ—ಬಣ್ಣ ಹಾರಿದ ನಾಶೀ ಪುಡಿ ಬಣ್ಣದ ಕೋಟನ್ನು ಧರಿಸಿದವರು, ನನ್ನ ಬಳಿ ಫರ್ಡಾಕ್ಲಾಸಿನಲ್ಲಿ ಕುಳಿತು ಬಂದ ರುಮಾಲಿನ ಜನರಿಗೆಂದರು: "ನಿಮ್ಮ ಮಗಳ ಮದುವೆ ಯಾಯಿತಂತೆ. ಮೊನ್ನೆ ಯಾರೋ ಈ ಸುದ್ದಿ ಪಟ್ಟಣದಲ್ಲಿ ಹೇಳಿದರು. ಯಾರು ಹೇಳಿದ್ದು?.....ಲಕ್ಷ್ಯದಲ್ಲಿ ಬರುವುದಿಲ್ಲ. ಅಂತೂ ಯಾರೋ ಹೇಳಿದರು!"

"ಜತೆಗೆ ನಾಣೆಯ ಮುಂಜಿಯನ್ನೂ ಮಾಡಿದೆ. ದಿನಮಾನ ಬದಲಾಗಿದೆ. ಊರಲ್ಲಿ ಈ ಕಾರ್ಯಮಾಡಿದರೆ ಊಟ-ದಕ್ಷಿಣೆಯ ಖರ್ಚಿಗೆ ನಮ್ಮಂಥವರು ತಡೆಯುವುದಿಲ್ಲ. ಅದಕ್ಕೆ ಮಂಜುಗುಣಿಯಲ್ಲಿಯೇ ಮಾಡಿಕೊಂಡು ಪಾರಾದೆ. ಏನು ಮಾಡುವುದು?" ರುಮಾಲಿನವರು ನುಡಿದರು.

ಆಗಲೇ ಒಬ್ಬ ವೈದಿಕರು– ಬಹುಪುಂಡ್ಯಲೇಪಿತರು- ಪೂರ್ವ ಪರಿಚಯದ ಪ್ರಮಾಣ ನೀಡುವ ದೊಡ್ಡ ಸ್ವರದಲ್ಲಿ, ಗುಂಪಿನ ನಡುವೆ ನುಗ್ಗುತ್ತ, ಕೆಂಪಿನ ಜೆಡ್ಡೋಲೆಯ ಗೃಹಸ್ಥನನ್ನು ನೋಡುತ್ತ ಹೇಳಿದರು: "ಏನ್ರೀ ಪ್ರಭುಗಳೇ, ನೀವೆಲ್ಲ ಕೂಡಿ ಪಟ್ಟಣದ ಶ್ರೀದೇವರಲ್ಲಿ ರಥೋತ್ಸವ ಏಕೆ ಮಾಡುವುದಿಲ್ಲ? ಏಕೆ— ಆ ಸ್ಥಾನ ಮಂಜುಗುಣಿಗಿಂತ ಕಡಿಮೆಯದೇ?"

ತನ್ನಧ್ಯೆ ಇದೇನು ಗಲಾಟೆಯೆಂದು ಜಂಗಲಿನ ಮೇಲಿನ ಎಲ್ಲ ಗುಂಪುಗಳಲ್ಲಿದ್ದ ಆಸ್ತಿಕರೂ ನಾಸ್ತಿಕರೂ ಸ್ಪರ್ಧಿಗಳೂ ವಿಧರ್ಮಿಗಳೂ ಎಲ್ಲರೂ ಈ ಗುಂಪಿನಲ್ಲಿ ಸೇರಿ, ಭಟ್ಟರ ಸುತ್ತಲೂ ಕಲೆತು, ಅವರ ಮೋರೆಯನ್ನು ಮಿಕಿ ಮಿಕಿ ನೋಡಹತ್ತಿದರು.

"ಪಟ್ಟಣದಲ್ಲಿ ರಥವೆಲ್ಲಿದೆ?" ಆಶ್ಚರ್ಯದಿಂದ ಪ್ರಭುಗಳು ಕೇಳುವಾಗಲೆ ಒಬ್ಬ ಮುದುಕರು "ಜೀರ್ಣವಾಗಿದೆಯೆ? ಹಾಗಿದ್ದರೆ ಸರಕಾರಕ್ಕೆ ಅರ್ಜಿಮಾಡಿದರೆ ದೇವರ ಕಾರ್ಯಕ್ಕೆ ಪುಕ್ಕಟೆ ಕಟ್ಟಿಗೆ ಕೊಡುತ್ತಾರೆ!" ಎಂದು 'ಜೀರ್ಣ-ಅಜೀರ್ಣದ ಗಡಿಬಿಡಿಯಿದ್ದರೆ ಅದಕ್ಕೆ ಒಂದು ಸರಿಹಾರ ಇದು' ಎಂದು ತನ್ನ ಅನುಭವನ್ನು ತಿಳಿಸಿದರು.

ಗುಂಪಿನಲ್ಲಿ ಒಬ್ಬರು, "ಛೆ! ಹಾಗೇನೂ ಇಲ್ಲ. ಅಲ್ಲಿ ರಥವೇ ಇಲ್ಲ! ರಥಬೇಕು ಎಂದು ದೇವರಿನ್ನೂ ಹಟ ತೊಡಲಿಲ್ಲ! ಭಟ್ಟರು ನೂತನವಾಗಿ ಆರಂಭಮಾಡಬೇಕು ಎಂದು ಸೂಚಿಸಿದರು." ಎಂದು ಭಟ್ಟರನ್ನು ನೋಡುತ್ತ ನುಡಿದರು.

"ಮುಂಜುಗುಣಿಯೂ ನೆಂಕಟೇಶನ ಸ್ಥಾನ; ಹಾಗೆಯೇ ಪಟ್ಟಣವೂ ವೆಂಕಟೇಶನ ಸ್ಥಾನವೇ! ಆ ದೇವರಿಗಿಂತ ಈ ದೇವರು ಕಡಿಮೆಯಪ್ಪೊ! ಇಲ್ಲೇಕೆ ನೀವುಗಳಿಲ್ಲ ಕೂಡಿ ನೂತನವಾಗಿ ರಥೋತ್ಸವ ಆರಂಭವಾಡಬಾರದು? ನಮ್ಮ ಜನರಿಗೆ ತಿಳುವಳಿಕೆಯಿಲ್ಲ! ನಿಜಾರ್ಥನೂ ವೆಂಕಟೇಶನ ಸ್ಥಾನ. ರಥ ಕಟ್ಟಿ ರಥೋತ್ಸವ ಮಾಡಲು ಹತ್ತು ಜನರಿಗೆ ನಮ್ಮ ಸೂಚನೆ ತಿಳಿಸಿದ್ದೇನೆ. ಪ್ರತಿಯೊಬ್ಬರನ್ನು ನೋಡುತ್ತೇನೆ: ಎದ್ದು ಮಂಜುಗುಣಿಗೆ ನಡೆದು ಮುಂಜಿ-ಮದುವೆ ಮಾಡುತ್ತಾರೆ. ಸುಮ್ಮನೆ ಮೋಟಾರಿಗೆ ದುಡ್ಡು ತುಂಬಲಿಕ್ಕೆ! ಈ ಪಟ್ಟಣದಲ್ಲಾಗಲಿ, ಈ ನಿರ್ಜಾನಿನಲ್ಲಾಗಲಿ ಏನಿಲ್ಲ? ಮಾಹಾತ್ಮ್ಯವಿಲ್ಲವೇ? ಪ್ರತಾಪವಿಲ್ಲವೇ? ಏನಿಲ್ಲ? ನಮ್ಮ ಜನರಿಗೆ ಸನಿಯದ ಸ್ಥಾನದಲ್ಲಿ ಭಕ್ತಿಯಿಲ್ಲ; ಶ್ರದ್ಧೆಯಿಲ್ಲ! ಸಿಕ್ಕ ಸಿಕ್ಕವರು ಎದ್ದು ಮಂಜುಗುಣಿಗೆ ಹೋಗುತ್ತಾರೆ! ಏನೆನ್ನ ಬೇಕೋ ಇವರಿಗೆ ತಿಳಿಯುವುದಿಲ್ಲ!" ಆಚಾರ್ಯರು ತನಗೊಬ್ಬನಿಗೇ ಆ ಮಹಾತ್ಮ್ಯ– ಪ್ರತಾಪ ಗೊತ್ತಿದೆಯೆಂಬಂತೆ—ಗಡ್ಡ-ಮಾಸೆ ಬೆಳೆದು ಅವುಗಳಲ್ಲಿ ಅರ್ಧ ಹುಗಿದ ತಮ್ಮ ತುಟಿಗಳನ್ನು ಕೊಂಚ ಅರಳಿಸಿ ನಗುತ್ತ—ಕಲೆತ ಜನರನ್ನು ಸಗರ್ವ ದೃಷ್ಟಿಯಿಂದ ನೋಡುತ್ತ ನಿಂತರು.

"ಭಟ್ಟರು ನಮ್ಮ ಹೊಟ್ಟೆಯ ಮೇಲೆ ಕಾಲ್ಕೊಡಬಾರದು!" ಬೀಡಿ ಎಳೆಯುತ್ತ ಗುಂಪಿನಲ್ಲಿ ನಿಂತ ಡ್ರೈವರನು ನಗುತ್ತ ನುಡಿದ.

ಕೊಂಚ ಹೊತ್ತು ಗುಂಪಿನಲ್ಲಿ ಸ್ತಬ್ಧತೆ ನೆಲಸಿತು. ಉಸುಕಿನಲ್ಲಿ ಡೋಣಿಗಳು ಹೂತಿವೆ, ಖಲಾಸಿಗಳು ಬಹುಪ್ರಯಾಸಪಡುತ್ತಿದ್ದಾರೆ– ಎಂಬುದು ಯಾರಿಗೂ ತಿಳಿಯಲಿಲ್ಲ.

"ಏನೆಂದರೂ ಮುಂಜುಗುಣಿ. ಪುರಾತನದಿಂದಲೂ ಪೂರ್ವಜರು ನಡೆದುಕೊಂಡು ಬಂದ ಸ್ಥಾನ!" ಅಲ್ಲಿಗೆ ಬರುಹೋಗುವ ಖರ್ಚು ವಿಶೇಷವಾದರೂ ಅದನ್ನು ಬಿಡುವುದು ಸುಸಾಧ್ಯವಿಲ್ಲ– ಎಂಬ ಅರ್ಥದಿಂದ, ಆಸ್ತಿಕರೊಬ್ಬರು ವಿನಯದಿಂದ ವಾದಿಸಿದರು.

"ಮಣ್ಣು! ಕೆಲಸವಿಲ್ಲ ನಿಮಗೆ!! ಈ ನಿರ್ಜಾನಿನಲ್ಲಿ, ಶ್ರೀದೇವರ ಸ್ಥಾನದಲ್ಲಿ, ವರ್ಷಂಪ್ರತಿ ರಥೋತ್ಸವಮಾಡುತ್ತ ಬಡವರು ಮುಂಜಿ-ಮದುವೆ ಮಾಡುತ್ತ ಬಂದರೆ, ಕೆಲವು ದಿನಗಳಲ್ಲಿ ಇದೂ ಕ್ಷೇತ್ರವಾಗುತ್ತದೆ. ಮುಂದಣ ಜನ ಇದು ಮಹಾಕ್ಷೇತ್ರವೆಂದು—ನಾವು ಮುಂಜುಗುಣಿಯನ್ನು ಒಪ್ಪುವಂತೆ–ಒಪ್ಪುತ್ತದೆ. ಒಂದು ಹತ್ತು ವರ್ಷ

ಕಾಲ ನಮ್ಮ ಜನ ಇಲ್ಲಿಯೇ ಮದುವೆ-ಮುಂಜಿ ಮಾಡುತ್ತ ಬಂದರೆ, ಮುಂಜುಗುಣಿಯ ಜನ ಮಂಜುಗುಣಿಯನ್ನು ಬಿಟ್ಟು ಇಲ್ಲಿ ಬರದಿದ್ದರೆ ಆಗ ಹೇಳಿ! ಈ ಸ್ಥಾನದಲ್ಲಿ ಏನಿಲ್ಲ? ಶಕ್ತಿಯಿಲ್ಲವೇ! ಮುಖ್ಯ ನಮ್ಮ ದೇವರ ಮೇಲೆ ಭಕ್ತಿಯಿಲ್ಲ!!" ಅಟ್ಟಹಾಸದಿಂದ ಭಟ್ಟರು ನುಡಿದು ನೆರೆದ ಜನರ ನೋರೆಗಳನ್ನು ಒಂದೊಂದಾಗಿ ನೋಡಹತ್ತಿದರು.

ನೆಗಡಿಯ ಬಾಧೆಯಿಂದ ನೋರೆ ಬಾಡಿದ—ಆಗಾಗ ಮೂಗು ಉಜ್ಜಿಕೊಳ್ಳುತ್ತ ಎಲ್ಲವನ್ನೂ ಆಸ್ಥೆಯಿಂದ ಕೇಳುತ್ತ ನಿಂತ— ಒಬ್ಬ ಯುವಕರು, ಆಗಲೆ ಮುಂದೆ ಸರಿದು ಹೇಳಿದರು: "ಆದರೆ ಒಂದು ವಿಷಯ. ಆಚಾರ್ಯರು ನಿಷ್ಕಪಟಿಗಳು; ಈ ಸ್ಥಾನಗಳ ಪ್ರತಾಪ ಅರಿತವರು. ನಿಸ್ವಾರ್ಥಬುದ್ಧಿಯಿಂದ ರಥವಿಲ್ಲದ ದೇವರಿಗೆ ರಥ ಕೊಡಿಸಿ ಧನ್ಯರಾಗಿರಿ ಎಂದು ಜನರಿಗೆ ಹೇಳಿದರು! ಚಿಂತೆಯಿಲ್ಲ. ಆದರೆ ಮುಂಜಲಗ್ನದ ಮಾತು, ರಥಕಟ್ಟಿ ಎಳೆಯುವುದಕ್ಕಿಂತ ತುಸು ಕಠಿಣ ಕಾಣುತ್ತಿದೆ. ನಮ್ಮ ಕರಾವಳಿಯ ಜನರಿಗೆ ಮಿರ್ಜಾನು ಮಧ್ಯದ ಸ್ಥಳ. ಮುಂಜುಗುಣಿ ಬಹು ದೂರದ ಸ್ಥಳ. ಮೇಲೆ ಸಿರ್ಸಿಯ ಸರ್ಕಸು ಅಲ್ಲಿಗೆ ಹೋಗುವುದಿಲ್ಲ. ಆಚಾರ್ಯರೆಂದಂತ ಬಸ್ಸಿನವನಿಗೆ ಪುಕ್ಕಟೆ ದೇರಳ ದುಡ್ಡು ಕೊಟ್ಟು 'ಇಸ್ಪೇಶಲ್' ಮಾಡಿ ಹೋಗಬೇಕಾಗುತ್ತದೆ. ಬಡವರಿಗೆ ಬಹು ಕಷ್ಟವಾಗುತ್ತದೆ. ಆದರೆ ಆಚಾರ್ಯರೂ ನಮ್ಮ ಕರಾವಳಿಯ ಎಲ್ಲ ವೈದಿಕರೂ ನಿಮಗೆ (ವೈದಿಕರಲ್ಲದವರಿಗೆ) ಅಭಯ ಕೊಟ್ಟರೆ, ಇಲ್ಲಿ ಮದುವೆ-ಮುಂಜಿ ಮಾಡಲು ಏನೊಂದೂ ಆಪತ್ತಿಯಿಲ್ಲ. ಇಲ್ಲದಿದ್ದರೆ ಹೋಟಾರಿಗೆ ತಗಲುವುದಕ್ಕಿಂತ ಮೂರು ಪಾಲು ಖರ್ಚು ದಕ್ಷಿಣೆಗೂ ಭೂರಿಭೋಜನಕ್ಕೂ ತಗಲುವುದು! ಆಶೀರ್ವಾದಗಳ ಮಾಹುಳ್ಯದಿಂದ ಯಜಮಾನನ ಮಾನದ ಜತೆಗೆ ಪುಣ್ಯವೂ ಕ್ಷಯಿಸುವುದು. ಹೊನ್ನೆ ತಾನೆ ನಮ್ಮನೆರೆಮನೆಯಲ್ಲಿ ಒಂದು ಮದುವೆ ಜರುಗಿತು. ಏಕಮಾತ್ರ ಪುತ್ರಿ, 'ಮನೆಯಲ್ಲಿಯೆ ಮೊದಲನೆಯ ಕಾರ್ಯವಾಗಲಿ' ಎಂದು ಮನೆಯಲ್ಲಿಯೆ ಮಾಡಿ, ಮನೆ ಅಡುವು ಮಾಡಿದ. ಕನ್ಯಾದಾನದ ಉಟಕ್ಕೆ ಹೊದಲು, ವೀಣಾಬಂಧರ ಉಟ್ಟು ನಮ್ಮಲ್ಲಿ ಒಂದ. "ಒಂದು ನೂರು ರೂಪ್ಯಾ ಜೇಕು! ನಿರೀಕ್ಷೆಗಿಂತ ಜೇಸ್ತಿ ವೈದಿಕರು ಆಗಮಿಸಿದ್ದಾರೆ. ದಕ್ಷಿಣೆ ಕೊಡದಿದ್ದರೆ ಉಳಿಗಾಲವಿಲ್ಲ. ಮರ್ಯಾದೆ ಹೋಗುತ್ತದೆ" ಎಂದ. "ಕೈಲಾಗದಿದ್ದರೆ ಆಮಂತ್ರಣದ ರಗಳೆಗೆ ಏಕೆ ಹೋದೆ?" ಎಂದ. ನಾನೆಂದೆ. "ಒಡೆ ಬೆದ್ದಾಗ ಹದ್ದುಗಳಿಗೆ ಆಮಂತ್ರಣ ಕೊಡಲು ಎಂದಾದರೂ ಯಾರಾದರೂ ಹೋಗಿದ್ದುಂಟೆ!" ಎಂದೆ. ನನ್ನ ಬಳಿ ರೂಪಾಯಿ ಇರಲಿಲ್ಲ. ನನ್ನ ಗೆಳೆಯರ ಮನೆಗೆ ಹೋಗಲು ಅವರು ಆಹುತಿಗೆ ಒಪ್ಪಿ; ನೂರು ಕೊಡಲು ಒಪ್ಪಿದರು. ಜೇಳುವ ಜಾತ್ಯರ್ಯ ಇಷ್ಟು: ವೈದಿಕರು ಒಂದು ಕರಾರು ನಮಗೆ ಬರೆದುಕೊಟ್ಟರೆ, ಮುಂಜುಗುಣಿ ಬಯಲು ಒಪ್ಪಿನವನನ್ನು ದಣಿಸಲು ಪಿರ್ಜಾನ್ನೇನ್ನು ಭಟ್ಟರ ಮನೆಯನ್ನೂ ಕ್ಷೇತ್ರವೆಂದು ನಂಬಿ, ಆಚಾರ್ಯರನ್ನು ದೇವರೆಂದು ಒಪ್ಪಲು ನಾವು ಸಿದ್ಧರೇ! ಇಲ್ಲದಿದ್ದರೆ ಜೀವನವನ್ನು ಹೊಡೆದು ಹದ್ದಿಗೆ ಸೀಪಿದಂತಾಗುವುದು!"

ಆಸ್ತಿಕರೂ ನಾಸ್ತಿಕರೂ "ಭಟ್ಟರು ಇದಕ್ಕೆ ಉತ್ತರ ಕೊಡಲಿ! ಹಾದು! ಹಾದು!! ನೀವೆನ್ನುವುದು ಸತ್ಯ" ಎಂದು ಬೊಬ್ಬಿರಿದರು.

ಆಚಾರ್ಯರು ಸ್ತಬ್ಧರಾಗಿ ನಿಂತರು. ಮೋರೆ ಸಪ್ಪಗಾದರೂ ಆಚಾರ್ಯರು ಧೈರ್ಯಗುಂದಲಿಲ್ಲ. "ಮುಂಜುಗುಣಿಯ ಸ್ಥಾನಾರಿಗಳು ಭಾರಿ ಹಿರಿದಿನ ಜನ! ಒಂದು ರೂಪಾಯಿಯ ಪಂಚಕಜ್ಜಾಯ ನೈವೇದ್ಯ ಮಾಡಿರೆಂದು ನೀವು ರೂಪಾಯಿ ಕೊಟ್ಟರೆ, ಯಾವುದೋ ಸುಟ್ಟಸಂವತ್ಸರದಲ್ಲಿ ಮಾಡಿದ, ಅನೇಕ ಬಾರಿ ನೈವೇದ್ಯ ತೋರಿಸಿದ ಪಂಚಕಜ್ಜಾಯ ದೇವರಿಗೆ ತೋರಿಸಿ, ರೂಪಾಯಿ ನೋಟಕ್ಕೆ ಸುತ್ತು ತ್ತಾರೆ. ನಿಮ್ಮಿಂದ ಪ್ರಸಾದ ಬಾಯಲ್ಲಿಡಲಾಗುವುದಿಲ್ಲ, ಅಷ್ಟು ಹಳಸಿದ್ದು ಅದು!" ಇದನ್ನು ನುಡಿದು ಆಚಾರ್ಯರು ನಗಹತ್ತಿದರು.

"ಜಾತಿ ಬೇರಾದರೇನು? ನಿಮಗೆಲ್ಲ ರೀತಿ ಒಂದೇಯಲ್ಲವೇ? ಅವರ ಮಾತು ಬಿಡಿ. ಅವರು ಬೇರೆ ಜಾತಿಯವರು! ಕುಮಟೆಯ ಶ್ರೀದೇವರ ಅರ್ಚಕರು ನಮ್ಮ ನಿಮ್ಮವರು! ಕೆಲವು ಕಾಲ ಪೂರ್ವದಲ್ಲಿ ಏನು ಸಂದರ್ಭವಾಯಿತೋ, ಒಂದು ದಿನ ನನ್ನ ಜಾತಕ ಬೇಡಿ ಕೊಂಡರು. ಒಳ್ಳೇ ಪರಿಚಯದವರು. ನನಗೆ ಬ್ರಹ್ಮಚರ್ಯ ಹೋಗಿ ಯಾದುದನ್ನು ಅವರು ಬಲ್ಲರು. 'ಅದನ್ನು ಇಳಿಸಿಬಿಡಲು ಒಂದು ಸುಸ್ಥಾನ ಶೋಧಿಸಲು ಕುಂಡಲಿ ಕೊಂಡರೇನೋ' ಎಂದು, ದಿನ ಹೆಚ್ಚು ಕಡಿಮೆ— ಅಂತೂ ಈ ಭಾರ ಇಳಿಯುವುದು ಎಂದು, ನೆಮ್ಮದಿಯಿಂದ ಇದ್ದೆ. ಒಂದು ದಿನ ನನ್ನ ಗ್ರಹಮಾನ ಬಹಳ ಕೆಟ್ಟ ಪಾಗೆ ಸುದ್ದಿ ತಂದರು. 'ಜೀವಹಾನಿಯಿಲ್ಲ ಬರೆ ಅರ್ಥನಾಶವಿದೆ!' ಎಂದರು. 'ಒಂದು ನಂದಾದೀಪ ಶ್ರೀದೇವರಲ್ಲಿ ಒಂದು ವರ್ಷ ಕಾಲ ಅವ್ಯಾಹತವಾಗಿ ನಡೆದರೆ, ಗ್ರಹಕ್ಕೆ ತತ್ಶಾಂತಿಯಾಗುವುದು' ಎಂದರು. 'ಆಗು ಹೋಗುಗಳ ಸ್ವಾಮಿ ನಾನಲ್ಲವೋ?' ಎಂದೆ. 'ಅದರೂ ತನ್ನ ಯತ್ನ ತಾನು ಮಾಡಬೇಕು!' ಎಂದು ಬಹಳ ಕಾಡಿ, ಒಂದು ಡಬ್ಬಿ ಕೊಬ್ಬರಿ ಎಣ್ಣೆ ತೆಗೆಸಿಕೊಂಡರು. ನಾಲ್ಕೆಂಟು ದಿನಗಳ ಮೇಲೆ, ದೇಗುಲದ ಬಳಿಯಿಂದ ಸಾಗುವಾಗ, ಅರ್ಚಕರಗಳೆಯಂಬನ್ನು ಜಂಪ್ರಸಾಲೆಯಲ್ಲಿ ಕಂಡು, ದೇವರ ಹೆಂಬಲಾಗಿ, ಬಾಗಿಲ ತೆರೆಯಿಸಿ ಕೈಮುಗಿದು ನಿಂತೆ. ಅರ್ಚಕರು ದೇವರ ಹಿಂದೆ ಕತ್ತಲಲ್ಲಿ ಮಾಯವಾದರು. ಪ್ರಸಾದ ತರುತ್ತಿರಬಹುದೆಂದು ಕರಜೋಡಿಸಿ ನಿಂತೆ. ಅವರು ಕೈಯಲ್ಲಿ ಒಂದು ನಂದಾದೀಪ ಹಿಡಿದುಕೊಂಡು ಬಂದು, ಅದನ್ನು ಒಂದು ಬದಿಯ ಎರಡನೆಯ ದೀಪಕ್ಕೆ ಜೋಡಿಸಿ ದೀಪ ಹಚ್ಚಿದರು. ಅವ್ಯಾಹತವಾಗಿ ನಡೆಯಿಸುವುದಕ್ಕೆ ತನಗೆ ಕಣ್ಣು ಕುಕ್ಕುತ್ತಿದೆ ಎಂದು ಅವರಿಗೆ ಎರಡನೆಯ ದೀಪಕ್ಕೆ ಶ್ರೀದೇವರು ಅಸ್ಪಣೆ ಕೊಟ್ಟಿರಲಿಕ್ಕಿಲ್ಲ. ಗ್ರಹಮಾನ ಕೆಟ್ಟ ಕಾಲದಲ್ಲಿ ವಿತ್ತಹಾನಿಯೆಂದರೆ ಎಣ್ಣೆಗೆ ತಗಲಿನ ಈ ವಿತ್ತ ಮಾತ್ರ. ಮುಂಜುಗುಣಿಯ ಭಟ್ಟರಿಗೆ ಹೆಸರಿಟ್ಟರೆ ನೀವು ಪುಸೀತರೆಂದು ಅರ್ಥವಾಗುತ್ತದೆಯೆ? ಈ ರಂಗಭೂಮಿಯಲ್ಲಿ ಆಟವಾಡುವ ದೇಹಧಾರಿಗೆ ಕೈಚಳಕ ತಪ್ಪಿದ್ದಲ್ಲ. ಅವರೂ ನಿಮ್ಮಂತೆಯೆ! ನಮ್ಮನ್ನೆ ಅವರ ನಿಂದೆ ಮಾಡಬೇಡಿ!" ಮೂಗು ಉಜ್ಜಿಕೊಳ್ಳುತ್ತ ಅವರೆಂದರು.

"ಇದಕ್ಕೇನೆನ್ನುತ್ತೀರಿ. ಆಚಾರ್ಯರೇ?" ಎಂದು ನೆರೆದ ಜನರು ಏಕಸ್ವರವಾಗಿ ಕೇಳಿದರು.

"ಏನು ಹೇಳಲಿಕ್ಕೂ ಧರ್ಮಲೋಪವಾದ ಕಾಲ! ಇಲ್ಲದಿದ್ದರೆ ಹೇಳಬಹುದಾಗಿತ್ತು!" ಆಚಾರ್ಯರು ನುಡಿದರು.

ಅಷ್ಟರಲ್ಲಿ ಹೇಗೋ ಜಂಗಲು ಧಡ ಸೇರಿತ್ತು. ಜನರೆಲ್ಲ ಜಂಗಲನ್ನು ಇಳಿದು ತಮ್ಮ ತಮ್ಮ ಸ್ಥಳ ಹಿಡಿದುಕೊಳ್ಳುವ ಹವ್ಯಾಸದಲ್ಲಿ ಆಚಾರ್ಯರನ್ನೂ ಚರ್ಚೆಯ ವಿಷಯವನ್ನೂ ಮರೆತು ಬಿಟ್ಟಿದ್ದರು. ಇಲ್ಲದಿದ್ದರೆ ಆಚಾರ್ಯರು 'ಹೇಳಬಹುದಿತ್ತು' ಎಂಬುದರೊಳಗಿಂದ ಏನು ಹೇಳುತ್ತಿದ್ದರೋ!

ಸಾಹಿತ್ಯ ವಿಹಾರ

'ವಿಹಾರಿ'

ಸಾಹಿತ್ಯ ಚರ್ಚೆಯು ಹೆಸರಿನಿಂದ ವ್ಯಕ್ತಿಗಳ ನಿಂದೆ!
ಸಾಹಿತ್ಯದಲ್ಲಿ ಅಶ್ಲೀಲವೆಂದರೇನು?

ಇತ್ತೀಚೆಗೆ; ಪ್ರಗತಿಶೀಲ ಸಾಹಿತ್ಯಕ್ಕಿಂತ ಅದರ ವಿಷಯವಾಗಿ ಮಿತಿಮೀರಿದ ಚರ್ಚೆ ನಡೆಯುತ್ತಲಿದೆ. ಕೆಲವು ಕಡೆಯಲ್ಲಿ ಈ ವಾದವಿವಾದ ಒಂದು ರೀತಿಯ ತಾತ್ತ್ವಿಕ ವಿನೋದಕ್ಕೆ ಕಾರಣವಾಗಿದ್ದರೆ, ಇನ್ನೊಂದೆಡೆಗೆ ಅದು ಅವಿಚಾರದ ಬೈಗಳದ ಮಟ್ಟಕ್ಕೆ ಇಳಯಹತ್ತಿದೆ. ಸಾಹಿತ್ಯದ ವಸಾತೇ ದೂರದಲ್ಲಿ ಉಳಿದು ವೈಯಕ್ತಿಕ ಟೀಕೆಗೆ ಆರಂಭವಾಗಿದೆ. ಇಲ್ಲದ ಸಾಹಿತ್ಯಕ್ಕೆ ಸಲ್ಲದ ಸಮರ್ಥನೆಯನ್ನು ಕಲ್ಪಿಸಿ ಹೊರಟ ಈ ಅತಿರಥಿ-ಮಹಾರಥಿಗಳಿಗೆ, ಈ ವಾದವಲ್ಲಿ ಆಸಕ್ತರಾಗಿರುವ "ಪ್ರಗತಿ" ಮತ್ತು "ಸಾಹಿತ್ಯ" ಎಂಬೆರಡೂ ಪದಗಳ ಅರ್ಥವಾದರೂ ಗೊತ್ತಿದೆಯೋ ಇಲ್ಲವೋ ಎಂಬ ಸಂಶಯ ಬರುವಷ್ಟು, ನಿರರ್ಥಕವಾದ ನಿಂದೆ ಸಾಹಿತ್ಯಚರ್ಚೆಯ ಹೆಸರಿನಲ್ಲಿ ನಡೆದಿದೆ. ಯಾವುದೊಂದು ಮತವಾಗಲಿ ಅಭಿಸ್ರಾಯವಾಗಲಿ ಖಂಡನಾರ್ಹವಾಗಿದ್ದರೆ, ಅದರ ಖಂಡನೆಯನ್ನು ಮಾಡಲಿಕ್ಕೆ ಬೇಕಾದಷ್ಟು ರೀತಿಗಳಿವೆ. ತಾತ್ತ್ವಿಕವಿನೋದನೆಗೆ ಯಾರಾದರೂ ಒಪ್ಪಬಹುದು. ತೀರ ವಿರುದ್ಧವಾದ ಮತಗಳ ಸಂಘರ್ಷಣವಲ್ಲಿ ನಿಜವಾವುದೆಂಬುದರ ನಿಷ್ಕರ್ಷ ಯಾದರೂ ಆಗಬಹುದು. ಆದರೆ ವಿನೋದನೆಯ ಹೆಸರಿನಲ್ಲಿ ವೈದಾಟಕ್ಕೆ ನಿಂತರೆ ಯಾವ ಪ್ರಯೋಜನವೂ ಇಲ್ಲ. ವೈಯುನವರ ಕೀಳು ಮನೋವೃತ್ತಿ ಮಾತ್ರ ಬಯಲಿಗೆ ಬರುವುದು. ಇಂಥದೊಂದು ಉದಾಹರಣೆ ಬೇಕಿದ್ದರೆ ನೊವ್ಹೆಂಬರ ತಿಂಗಳ "ಉಷಾ" ಪತ್ರಿಕೆಯನ್ನು ನೋಡಬಹುದು. ಮುಂಬಯಿ ಕರ್ನಾಟಕಸಂಘದ ನೇತೃತ್ವದಲ್ಲಿ ನಡೆದ ಚರ್ಚೆಯೊಂದರ ನಿಚಾರವಾಗಿ "ಕನ್ನಡ ನುಡಿ"ಯಲ್ಲಿ ಪ್ರಕಟವಾದ ವರದಿಯನ್ನು ಅವಲಂಬಿಸಿ, ಆ ಚರ್ಚೆಯಲ್ಲಿ ಭಾಗವಹಿಸಿದ ಕೆಲವರ ವಿಚಾರದಲ್ಲಿ ನಾಲ್ಕಾರು ಮಾತುಗಳನ್ನು ಆ ಪತ್ರಿಕೆಯಲ್ಲಿ ಹೇಳಲಾಗಿದೆ. ಶ್ರೀ. ನೆಗಳೂರ ಅವರಿಗೂ, ಶ್ರೀ ಇನಾಮದಾರ ಅವರಿಗೂ ಅಲ್ಲಿ ಮುಜುಗುಹೆಸರಿನ ಗೋಡೆಯ ಹಿಂದೆ ನಿಂತುಕೊಂಡು ಆಹ್ವಾನವನ್ನು ಕೊಟ್ಟಿದ್ದಾರೆ. ಅಲ್ಲಿ ಬಂದ ಮಾತುಗಳಲ್ಲಿಯ ವೈಯಕ್ತಿಕ ಭಾಗವನ್ನು ಬದಿಗಿರಿಸಲೇ ಬೇಕು. ಶ್ರೀ. ನೆಗಳೂರ ಮತ್ತು ಶ್ರೀ. ಇನಾಮದಾರರು ಅವುಗಳಿಗೆ ಉತ್ತರ ಕೊಟ್ಟಾದೂ ಕೂಡ ಬಹುದು. ವ್ಯಕ್ತಿಗಳಿಗಿಂತ ಮುಖ್ಯವಾದದ್ದು ತತ್ತ್ವವಾದ್ದರಿಂದ, ಅಲ್ಲಿ ಕೇಳಿದ ಒಂದೆರಡು ಮಾತುಗಳಿಗೆ ಒಂದೆರಡು ಮಾತುಗಳಲ್ಲಿ ಉತ್ತರ ಹೇಳಬೇಕಾಗಿದೆ. ನಿಜವಾಗಿ ನೋಡಿದರೆ ಆ ತೆರದ ಬರೆಹಕ್ಕೆ ತಾತ್ಸಾರವೇ ಯೋಗ್ಯವಾದ ಉತ್ತರ. ಹನ್ನೆರಡು ತಿಂಗಳುಗಳನ್ನೂ ಘಾಲ್ಗುಣವನ್ನೇ ಮಾಡಿಕೊಂಡು ಬೊಬ್ಬೆ ಇಟ್ಟರೆ, ವಿಚಾರವಂತರಾರೂ ಅದರ ಕಡೆಗೆ ಗಮನ ಕೊಡಲಾರರು. ತಿರುಗಿದ ತಲೆಗಳಿಗೆ ತೊಚಿದ್ದೇ ತತ್ತ್ವ, ಅಬ್ಬರದ ದನಿಯಲ್ಲಿ ಕಿರಿಚಿಕೊಂಡದ್ದೇ ಸತ್ಯ, ನಡೆದು ಬಂದ ಸ್ಟೆಲ್ಲವೂ ನೀಚ, ಔಚಿತ್ಯವನ್ನು ಮೀರುವುದೇ ಸ್ವಾತಂತ್ರ್ಯ– ಎಂದು ಬಗೆಯುವ ಅವಿಚಾರಿಗಳಿಗೆ, ಎಮ್ಮೆಗಳಿಯು ಯಾವ ಮಾತೂ ಒಪ್ಪಿಗೆಯಾಗದು. ಅವರೂ ಕೂಡ ಶ್ರೀ. ನೆಗಳೂರ ಅವರು ಹೇಳಿದ ಮಾತುಗಳನ್ನು ಖಂಡಿಸುತ್ತಿರುವೆನೆಂದು ತಿಳಿದುಕೊಂಡು ಬರೆದು ಬಂದ ಅವಿಚಾರ ಲಹರಿಯಲ್ಲಿ, ಒಂದೆರಡು ಪ್ರಶ್ನೆಗಳನ್ನು ಕೇಳಲಾಗಿದೆ. ಆ ಪ್ರಶ್ನೆಗಳಿಗೆ ಉತ್ತರ ಕೊಡುವುದು ಅವಶ್ಯಕ.

'ಸಾಹಿತ್ಯದಲ್ಲಿ ಅಶ್ಲೀಲವೆಂದರೇನು? ಇದು ಇರುವುದು ಬರೆಹದಲ್ಲಿಯೋ ಅದನ್ನು ಓದುವವನ ವೃಷ್ಟಿಯಲ್ಲಿಯೋ?' ಎಂಬ ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯ ಪ್ರಶ್ನೆಗೆ ಉತ್ತರ ಕೊಡುವುದು ಸುಲಭ. ಇದಕ್ಕೆ ಉತ್ತರವನ್ನು ಹತ್ತಾರು ಸಾಹಿತಿಗಳು ಹೇಳಿಯಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಯಾವುದು ಔಚಿತ್ಯವನ್ನು ಮೀರುವುದೋ ಅದು ಅಶ್ಲೀಲ. ಅದು ಹೆಣ್ಣು-ಗಂಡುಗಳ ಸಂಬಂಧದ ವಿಷಯವೇ ಇರಲಿ, ಇನ್ನಾವ ವಿಷಯವೇ ಇರಲಿ. ಸಮಾಜದಲ್ಲಿ ಗಂಡುಸೇ ಆಗಲಿ ಹೆಂಗುಸೇ ಆಗಲಿ, ಪಿತ್ತಲೆಯಾಗಿ ಬರಬಾರದೆಂಬುದು ಸಾಮಾಜಿಕ ಜೀವನದಲ್ಲಿಯ ಔಚಿತ್ಯಕ್ಕೆ ಸಂಬಂಧ ಪಟ್ಟ ಒಂದು ವಿಚಾರ. ಸಮಾಜದಲ್ಲಿ ಸಾಮಾನ್ಯ ಸಂಭಾವಿತ ವ್ಯಕ್ತಿಯಂತೆ ಬದುಕಿರ ಜೇಕಾಗಿದ್ದ ಪ್ರತಿಯೊಬ್ಬನೂ ಈ ಔಚಿತ್ಯದ ಕಟ್ಟಿನ್ನು ಪಾಲಿಸಬೇಕಾಗುವುದು, ತಲೆತಿರುಕನೋ, ತೀರ ಹುಚ್ಚರ ಆಸ್ಪತ್ರೆಗೆ ಸಾಗಿಸಲು ಯೋಗ್ಯನಾದವನೋ, ಅಥವಾ ಪಿನಲ್ ಕೋಡಿನ ಭೀತಿ ಇಲ್ಲದವನೋ ಈ ಸಾಮಾನ್ಯ ನಿಯಮವನ್ನು ಮೀರಿ, ಬೀದಿಯಲ್ಲಿ ಬೆತ್ತಲೆ ಬಂದು ತಾನು ಪ್ರಗತಿಶೀಲನೆಂದು ಸಾಧಿಸಬಹುದು. ಸಾಮಾಜಿಕ ಜೀವನದಲ್ಲಿಯ ಔಚಿತ್ಯ ಬಾಳಚಿತ್ರವಾದ ಸಾಹಿತ್ಯದಲ್ಲಿಯೂ ಸಿದ್ಧವಾದದ್ದು. ಯಾವುದು ಜೀವನದಲ್ಲಿ ಹೇಯವೋ ಅದು ಸಾಹಿತ್ಯದಲ್ಲಿ ತ್ಯಾಜ್ಯ ವೆಂಬ ಮಾತನ್ನು ಯಾರಾದರೂ ಒಪ್ಪಬಹುದು. ಲೇಖಕ ಆಯ್ದುಕೊಂಡ ವಿಷಯದಲ್ಲಿ. ಅದನ್ನು ಬೆಳಸಿಕೊಂಡು ಹೋಗುವ ರೀತಿಯಲ್ಲಿ ಔಚಿತ್ಯವನ್ನು ಮೀರಿದರೆ, ಅಶ್ಲೀಲಕ್ಕೆ ಎಡೆಕೊಟ್ಟಂತೆಯೇ. ಹೀಗೆ ಹೇಳಿದ ಕೂಡಲೆ ಪ್ರಗತಿಶೀಲ ಸಾಹಿತ್ಯವೆಂದರೆ 'ಅಶ್ಲೀಲಸಾಹಿತ್ಯ' ಎಂಬ ಅನುಮಾನವನ್ನು ಇಲ್ಲಿ ಸೂಚಿಸಲಾಗಿದೆ ಎಂದು ಭಾವಿಸಕೂಡದು. ಅದರೆ ಒಂದು ಸೂತು ಮಾತ್ರ ಸ್ಪಷ್ಟ: ನಿಜವಾದ ಪ್ರಗತಿಶೀಲ ಸಾಹಿತ್ಯ ಯಾವುದೇ ಇರಲಿ, ಹೇಗೆಯೇ ಇರಲಿ; ಇಂದು ನಮ್ಮಲ್ಲಿ ಪ್ರಗತಿಶೀಲ ಸಾಹಿತ್ಯವೆಂದು ಪ್ರಕಟವಾಗುತ್ತಿರುವ ಬರೆಹದ ವಿಷಯದಲ್ಲಿ ಮಾತ್ರ ಮೇಲಿನ ಅನುಮಾನ ಯಥಾರ್ಥವಾದದ್ದು. ಸಾಹಿತ್ಯದಲ್ಲಿ ಪ್ರಗತಿಯ ವಿಷಯವಾಗಿ ಶ್ರೀ. ಗೋಕಾಕರು ಹೇಳಿದ ವಿಚಾರಗಳನ್ನು, "ಪ್ರಗತಿಶೀಲ" ಎಂದು ಕೊಚ್ಚಿಕೊಳ್ಳುವ ಕುಚೋದ್ಯಗಾರರು ತಾವು ನಿರ್ಮಿಸಿದ (ಇದು ಇವರಿಗೆ ವಿಹಳ ಗೌರವದ ಶಬ್ದ) ಕೃತಿಗಳಿಗೆ ಸಮರ್ಥನೆಯೆಂದು ಹೇಳಿದರೆ, ಹೀಗೆ ಹೇಳುವವರಿಗೆ ಶ್ರೀ. ಗೋಕಾಕರು ಹೇಳಿದ ವಿಚಾರಗಳನ್ನು ತಿಳಿದುಕೊಳ್ಳುವ ಯೋಗ್ಯತೆ ಕೂಡ ಇಲ್ಲ ಎಂಬುದು ಮಾತ್ರ ಸ್ಪಷ್ಟವಾಗುವುದು. ಮುಖ್ಯವಾಗಿ ನಾವು ಇಂದು ನಿಜವಾದ ಪ್ರಗತಿಶೀಲ ಸಾಹಿತ್ಯವಾವುದು, "ಉಷಾ" ಪತ್ರಿಕೆಯ ಮುಖಾಂತರ ಹೊರಬೀಳುತ್ತಿದ್ದ ಹೊಲಸು ಯಾವ ಅರ್ಥದಲ್ಲಿ ಪ್ರಗತಿಶೀಲ? – ಎಂಬ ವಿಚಾರಗಳನ್ನು ನಿರ್ಧರಿಸಿಕೊಳ್ಳಬೇಕಾಗಿದೆ. ಅಶ್ಲೀಲವೆಂದರೇನೆಂದು ಕೇಳುವವರು ಅಂಥ ಬರೆಹದ ಉದಾಹರಣೆಗಾಗಿ ದೂರ ಹೋಗಬೇಕಿಲ್ಲ. ವಿಚಾರದ, ರೀತಿಯ, ಔಚಿತ್ಯವನ್ನು ಮುರಿತ ಅವರ ಬರೆಹವೇ ಅಶ್ಲೀಲಕ್ಕೆ ನಿದರ್ಶನ.

ಇನ್ನು ಎರಡನೆಯ ಪ್ರಶ್ನೆ: 'ಅಶ್ಲೀಲ ಬರೆಹದಲ್ಲಿಯೋ ಓದುಗನ ದೃಷ್ಟಿಯಲ್ಲಿಯೋ?' ಎಂದು ಕೇಳುವವರು, ಓದುಗನ ದೃಷ್ಟಿಗೆ ಹೆಚ್ಚಾದ- ತೀರ ಸಲ್ಲದ-ಮಹತ್ತ್ವವನ್ನು ಕೊಟ್ಟು, ಬರೆಹದಲ್ಲಿ ಅಶ್ಲೀಲತೆಯ ಇರುವುದೇ ಇಲ್ಲವೆಂಬ ಅರ್ಧಸತ್ಯವನ್ನು ಸೂಚಿಸಿದ್ದಾರೆ. ಒಂದು ಬರೆಹದ ವಿಚಾರದಲ್ಲಿ ಓದುಗನ ದೃಷ್ಟಿಗೆ ಮಹತ್ತ್ವವಿಲ್ಲದೆ ಇರದಿದ್ದರೂ ಆ ಮಹತ್ತ್ವವನ್ನ ವಲಂಬಿಸಿ ಬರೆಹದಲ್ಲಿ ಬೇಕಾದ ವಿಚಾರವನ್ನು ಪ್ರತಿಪಾದಿಸುವುದು ಸಾಹಿತ್ಯದೃಷ್ಟಿಗೆ ಎಂದೂ ಸಮಂಜಸವಾಗಲಾರದು. ಬರೆಹದಲ್ಲಿ ಇಲ್ಲದುದನ್ನು ಸಾಮಾನ್ಯ ಓದುಗ ಕಲ್ಪಿಸಿಕೊಳ್ಳಲಾರ. ಸಾಧುವಾದ ಅರ್ಥವನ್ನು ಕಲ್ಪಿಸಿಕೊಳ್ಳಬಲ್ಲ. ಅನುಚಿತವಾದ ವಿಚಾರಗಳನ್ನು ಸ್ಪಷ್ಟವಾಗಿ ಹೇಳಿ, ಒಳ್ಳೆಯ ದೃಷ್ಟಿಯುಳ್ಳ ಓದುಗನು ಅವುಗಳನ್ನು ಉಚಿತವಾದ ರೀತಿಯಲ್ಲಿಯೆ ತಿಳಿದುಕೊಳ್ಳುವನೆಂದು ಸಾಧಿಸುವುದು ಯಾವ ನ್ಯಾಯಕ್ಕೂ ಸಮ್ಮತವಾಗಲಾರದು. ಹೇಳಕೂಡದ ವಿಷಯಗಳನ್ನು ಸ್ಪಷ್ಟವಾಗಿ, ಅಸಂದಿಗ್ಧವಾಗಿ ಹೇಳಿ ಇದ್ದುದನ್ನು- ಇದ್ದಂತೆ ಹೇಳಲಾಗಿದೆ-ಎಂದು ವಾದ ಹೂಡಿದರೆ 'ವಾಸ್ತವತೆ ಗಾವರೂ ಒಂದು ಮಿತಿ ಇದೆ, ಇರಬೇಕು' ಎಂಬ ಸಾಹಿತ್ಯತತ್ತ್ವವನ್ನು ಅಲ್ಲಗಳೆದಂತಾಗುವುದು. ವಾಸ್ತವತೆ ಬೇಡವೆಂದು ಯಾರೂ ಹೇಳುವುದಿಲ್ಲ. ಆದರೆ ಅದನ್ನು ವಿಸ್ತರಿಸುವ ರೀತಿಗೆ ಇತಿ-ಮಿತಿಗಳಿವೆ ಎಂಬುದನ್ನು ನಮ್ಮಲ್ಲಿಯ ಪ್ರಗತಿಶೀಲ ವುರೋಹಿತರ ಹೊರತಾಗಿ ಎಲ್ಲರೂ ಒಪ್ಪುವರು. ಗಂಡುಹೆಣ್ಣುಗಳ ಶಾರೀರಿಕ ಸಂಬಂಧ ಎಷ್ಟೇ ಸ್ವಾಭಾವಿಕವಾಗಿದ್ದರೂ, ಅದು ಬರೆಹಕ್ಕೆ ವಿಷಯವಾದಾಗ-ಆ ಬರೆಹ ಸಾಹಿತ್ಯವೆನಿಸಿಕೊಳ್ಳಬೇಕೆಂಬ ಆಶೆ ಇದ್ದಾಗ- ಅದರ ನಿರೂಪಣೆ ಒಂದು ಹಿಡಿತದಲ್ಲಿರಬೇಕಾಗುವುದು. ಈ ಸಂಯಮ ಸಡಿಲಾದಾಗ ಶೃಂಗಾರ ಭೀಭತ್ಸವಾಗುವುದು. ಸಾಹಿತ್ಯವು ಒಂದು ಕಲೆಯಾದರೆ, ಕಲೆಯಾಗಬೇಕಾಗಿದ್ದರೆ, ಆ ಕಲಾಸ್ವರೂಪಕ್ಕೆ ಆ ಸಂಯಮ ತೀರ ಆವಶ್ಯಕ. ನಮ್ಮಲ್ಲಿಯ ಪ್ರಗತಿಶೀಲರಿಗೆ ಸಂಯಮ ಬೇಡ. ಹಿಡಿತ ಬೇಡ. ಅಸಂದಿಗ್ಧವಾಗಿ ಬರೆದದ್ದೇ ಸಾಹಿತ್ಯ, ಬಾಯಿಗೆ ಬಂದ ಹಾಗೆ ಬೊಗಳಿದ್ದೇ ಅದಕ್ಕೊಂದು ತಾತ್ತ್ವಿಕ ಸಮರ್ಥನೆ "ಉಷಾ" ಪತ್ರಿಕೆಯಲ್ಲಿಯ "ಹೂವಾಣ" ಇದಕ್ಕೆ ಏನಾದರೂ! ಇದರಿಂದ ನಡೆಯಬೇಕು. ಕನ್ನಡನ ಬುದ್ಧಾರ! ಇದೊಂದು ರೀತಿಲು ಬುದ್ಧಾರನೇ ಸರಿ!!

'ಜಾಳುಪದ ಕೋಳಿಗಳಿಂದು ಎರಡನೆಯವರನ್ನು ಬೀಳುಗಳೆಯುವ ನಮ್ಮ ಕೆಲ ಪ್ರಗತಿಶೀಲ ಸಾಹಿತ್ಯದ ಜಾಂಬವಂತರು, ತಮ್ಮ ಧ್ಯೇಯ ಧೋರಣೆಗಳನ್ನು ಎಲ್ಲಿಯಾದರೂ ವಿಶದಪಡಿಸಿದ್ದಾರೆಯೆ? ಪ್ರಗತಿಶೀಲರಲ್ಲದವರು ಎಲ್ಲ ಸಾಹಿತ್ಯಗಳಲ್ಲಿಯೂ ಒಸ್ಸೆತವಾಗಬಹುದಾದ ವಿಮರ್ಶಾತತ್ತ್ವಗಳನ್ನೇ ಆಗಲಿ, ಸಾಹಿತ್ಯಕೃತಿಯ ಸಂಪ್ರದಾಯವನ್ನೇ ಆಗಲಿ, ತಮ್ಮ ಅಭಿಪ್ರಾಯಗಳಿಗೆ ಆಧಾರವಾಗಿಟ್ಟುಕೊಂಡಂತೆ ಇಂದಿನ ನಮ್ಮಲ್ಲಿಯ ಪ್ರಗತಿಶೀಲರು ಯಾವ ಆಧಾರವನ್ನಿಟ್ಟುಕೊಂಡಿದ್ದಾರೆ? ಇವರ ಪ್ರಗತಿಶೀಲ ಸಾಹಿತ್ಯದ ಹಿನ್ನೆಲೆ ಯಾವುದು? ಇದನ್ನು ಎಲ್ಲಿಯಾದರೂ ಸ್ಪಷ್ಟವಾಗಿ ತಿಳಿಸಿದ್ದಾರೆಯೆ? ಬರೆಹಗಾರರ ತತ್ತ್ವವನ್ನು ಖಂಡಿಸಬೇಕಾದರೆ ತಮ್ಮ ತತ್ತ್ವವನ್ನು- ಅಂಥದೇನಾದರೂ ತಮ್ಮ ಹತ್ತಿರವಿದ್ದರೆ-ಮಂಡಿಸುವುದು ತೀರಾ ಅಗತ್ಯ. ಪ್ರಗತಿಶೀಲ ಸಾಹಿತ್ಯವೆಂದರೇನೆಂಬುದರ ನಿಜವಾದ ಕಲ್ಪನೆ ಈ ಕುಹಕಟೀಕಾಕಾರರಲ್ಲಿ ಯಾರಿಗಾದರೂ ಇದ್ದರೆ, ಅದನ್ನು ಒಹಿರಂಗವಾಗಿ ವಿಶದಪಡಿಸಬೇಕೆಂದು ಇದೋ ಆಹ್ವಾನ! ನೆಗಳೂರರಿಗೆ ಕೊಟ್ಟ ಆಹ್ವಾನಕ್ಕೆ ಪ್ರತಿಯಾಗಿ!

ಇಲ್ಲಿ ಎತ್ತಿದ ಆಕ್ಷೇಪಣೆ ಪ್ರಗತಿಶೀಲ ಸಾಹಿತ್ಯದ ವಿರುದ್ಧವಾಗಿ ಅಲ್ಲ; ನಮ್ಮಲ್ಲಿ ಪ್ರಗತಿಶೀಲರೆಂದು ಕೊಚ್ಚಿಕೊಳ್ಳುತ್ತಿರುವವರ ವಿರುದ್ಧವಾಗಿ—ಎಂಬುದನ್ನು ಮರೆಯಕೂಡದು. ನಿಜವಾಗಿಯೂ ಪ್ರಗತಿಶೀಲವಾದ ಜಗತ್ತಿನ ಯಾವ ಸಾಹಿತ್ಯವನ್ನು ಇವರು ಓದಿ ಕೊಂಡಿದ್ದಾರೆ? ಪ್ರಗತಿಶೀಲ ಸಾಹಿತ್ಯವು ಮೊದಲು ಸಾಹಿತ್ಯವಾಗಿರಬೇಕು, ಆ ಮೇಲೆ ಪ್ರಗತಿಪರವಾಗಿರಬೇಕೆಂಬುದನ್ನು ಇವರು ಮರೆತಿದ್ದಾರೆ. ಭಾವನೆಗಳನ್ನು ಬೆಳಗಿ ಅಂತಃಕರಣವನ್ನು ಉತ್ತೇಜಿಸಿ, ಅನುಭವಕ್ಕೊಂದು ತೀವ್ರತೆಯನ್ನು ತರಬಲ್ಲುದೇ ಒಳ್ಳೆಯ ಸಾಹಿತ್ಯ; ಅಂಥ ಸಾಹಿತ್ಯವೇ ಬಾಳಿಗೊಂದು ಬೆಳಕಾಗಬಹುದು ಅದಕ್ಕೆ ಪ್ರಗತಿಶೀಲತ್ವದ ಕೊರಳಚೀಟಿ ಬೇಕಾಗಿಲ್ಲ. ಸಂಪ್ರದಾಯದ ಒಪ್ಪಿಗೆಯೂ ಬೇಕಾಗಿಲ್ಲ. ಇಂಥ ಒಂದು ಕೃತಿಯನ್ನಾದರೂ ಈ ನಮ್ಮ ಅಭಿನವ ಸಾಹಿತ್ಯಾಚಾರ್ಯರುಗಳು ನಿರ್ಮಿಸಿದ್ದಾರೆಯೆ? 'ಅನ್ನ ಅನ್ನ' ಎಂದು ಎದೆಬಡಿದುಕೊಂಡರೆ ಅನ್ನವೂ ಸಿಗುವುದಿಲ್ಲ. ಪ್ರಗತಿಶೀಲ ಸಾಹಿತ್ಯವೂ ಹಾಗೆಯೆ. ಬೆಂಗಳೂರಿನಲ್ಲಿದ್ದು ಬಂಗಾಲದ ಬರಗಾಲದ ವಿಷಯವಾಗಿ ಬರೆಯಲೆಳಸುವ, ಮಂಗಳೂರಿನಲ್ಲಿ ಮಲಗಿಕೊಂಡು ಮಲಬಾರಿನಲ್ಲಿಯ ಕಷ್ಟಗಳ ವಿಷಯವಾಗಿ ಬರೆಯಲೆಳಸುವ ನಮ್ಮ ಪ್ರಗತಿಶೀಲರ ಬರೆಹಕ್ಕೆ ಯಾವ ಬೆಲೆ ಬಂದೀತು? ಅನ್ನದ ಸಮಸ್ಯೆ, ಬಡತನದ ಸಮಸ್ಯೆ, ರಾಜಕೀಯದ ಒಕ್ಕಟ್ಟು, ಇವೆಲ್ಲವುಗಳ ಬಗೆಗೆ ಸಾಮಾನ್ಯ ಓದುಗನನ್ನು ಜೀತರಿಸುವಂಥ ಸಾಹಿತ್ಯ ಹುಟ್ಟಬೇಕೆಂಬ ಅಭಿಲಾಷೆ ಇದ್ದರೆ, ಅವುಗಳ ವಿಚಾರವಾಗಿ ಅಭ್ಯಾಸ ಮಾಡಿದವರೂ ಅವುಗಳಲ್ಲಿಯ ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸಿದವರೂ ಬರೆಯಬಹುದೇ ಹೊರತು, ಆ ಆ ವಿಷಯಕ್ಕೆ ಸಂಬಂಧಪಟ್ಟ ನಾಲ್ಕಾರು ಮಾತುಗಳ ಚರ್ಪಟಪಂಜರಿಯನ್ನು ಗಿಳಿಯಂತೆ ಎಷ್ಟು ಎತ್ತರದ ದನಿಯಲ್ಲಿ ಹೇಳಿದರೂ ಸಾಗದು. ಮತ್ತೆ ಮತ್ತೆ ರಶಿಯದ ಸಾಹಿತ್ಯ, ರಶಿಯದ ರಾಜಕಾರಣ! ಗಾರ್ಕಿಯ ಅನುಭವದ ಸೂರರಲ್ಲೊಂದು ಪಾಲನ್ನಾದರೂ ನಮ್ಮ ಪ್ರಗತಿಶೀಲರು ಅನುಭವಿಸಿದ್ದಾರೆಯೆ? ಶೋಲೋಕೊವ್ಹ, ಮಾಯಾಕೊವ್ಹಸ್ಕಿಗಳ ಸಂವೇದನಾಶಕ್ತಿಯ ಸಾವಿರದಲ್ಲೊಂದು ಪಾಲಾದರೂ ಇವರಲ್ಲಿದೆಯೆ? ನಿಜವಾಗಿಯೂ ಪ್ರಗತಿಶೀಲರಾದ ಈ ರಶಿಯನ್ ಸಾಹಿತಿಗಳು, ಬಾಳಿನ ಆಳವನ್ನು ಹೊಕ್ಕು ನೋಡಿ ಅನುಭವಿಸಿದವರು. ಸಾಹಿತ್ಯಕ್ಕಿಂತ ಹೆಚ್ಚಾಗಿ ಆ ಸಾಹಿತ್ಯದ ವಿಷಯವಾಗಿ ನಿರರ್ಥಕವಾದ ಬೊಬ್ಬಾಟವನ್ನು ಎಬ್ಬಿಸಿದವರಲ್ಲ. ಬಂಗಾಲದ ಬರಗಾಲ ಯಾವ ಉಜ್ವಲವಾದ ಪ್ರಗತಿಶೀಲ ಸಾಹಿತ್ಯದ ನಿರ್ಮಿತಿಗೆ ಸ್ಫೂರ್ತಿಯನ್ನು ಕೂಡಬಹುದು?—ಎಂಬುದನ್ನು ಮನಗಾಣಬೇಕಿದ್ದರೆ, ಇತ್ತೀಚೆಗೆ ಪ್ರಕಟವಾದ ಏಲಾಸೇನ್ ಅವರ "ಡಾರ್ಕ್ ನೈಟ್ ಡೇಜ್" ಎಂಬ ಕಥಾ ಸಂಗ್ರಹವನ್ನು ನಮ್ಮ ಪ್ರಗತಿಶೀಲರು ಅವಶ್ಯವಾಗಿ ಓದಬೇಕು. ಅಲ್ಲಿ ಕಾಣಬರುವ ಪ್ರತ್ಯಕ್ಷ ಅನುಭವದ ಸಾಕ್ಷಿ ಅಲ್ಲಿಯ ಬರೆವಣಿಗೆಗೆ ಸತ್ಯದ ಉತ್ಕಟತೆಯನ್ನು ತಂದು ಕೊಟ್ಟಿದೆ. ನಡೆದ ಅನ್ಯಾಯಕ್ಕಾಗಿ ಓದುಗನನ್ನು ಕಿಡಿಕಿಡಿಯಾಗಿಸಬಲ್ಲ ಕಠೋರ ಉಗ್ರತೆ ಆ ಕಥೆಗಳಲ್ಲಿ ಉರಿಯುತ್ತಿದೆ. ಅದು ಪ್ರಗತಿಶೀಲ ಸಾಹಿತ್ಯ. ಬೆಂಗಳೂರು- ಮಂಗಳೂರಿನ ಇಮಿಟೇಶನ್ ಪ್ರಗತಿಶೀಲತೆಯಲ್ಲ!

(ಇಲ್ಲಿನೇ ಪುಟದ ಅಡಿಯಲ್ಲಿ)

ನಾಲ್ಕೂ ನಿಟ್ಟಿನ ನೋಟ

ಶಿವಮೊಗ್ಗೆ—ರಬಕವಿ

ಪ್ರತಿವರ್ಷದಂತೆ ಈ ಸಲದ ಸಾಹಿತ್ಯ ಸಮ್ಮೇಳನವೂ ವಿಜೃಂಭಣೆಯಿಂದ ಜರುಗುವುದರಲ್ಲಿ ಸಂದೇಹವಿಲ್ಲ. ಪರಭಾಷೆಯ ಸತ್ತೆಯ ಕೆಳಗೆ ಸಿಕ್ಕು ನರಳುವ ಸಂಸ್ಥಾನದ ಕನ್ನಡಿಗರು, ಈ ಸಮ್ಮೇಳನವನ್ನು ಉತ್ಸಾಹದಿಂದಲೂ ಆಸೆ ಭರವಸೆಗಳಿಂದಲೂ ನಡಿಸುವುದು ಖಂಡಿತ. ಆದರೆ ಇಂತಹ ಸಮ್ಮೇಳನಗಳು—ಕೇವಲ ನಮ್ಮ ಸಾಹಿತ್ಯ ಸಮ್ಮೇಳನ ಒಂದೇ ಅಲ್ಲ—ತಾತ್ಕಾಲಿಕ ಉತ್ಸಾಹವನ್ನ ಪ್ರೇರೇಪಿಸಿ ಹೆಚ್ಚಿನ ಅಸಮಾಧಾನಕ್ಕೆ ಕಾರಣವಾಗುವಂತೆ ಮುಂದಿನ ಅಧಿವೇಶನದವರೆಗೆ ನಿಷ್ಕ್ರಿಯವಾಗುವ ರೂಢಿ (ಅಥವಾ ಅನುಭವವೆನ್ನೋಣ) ಬೆಳ್ಳು. ಈ ದೃಷ್ಟಿಯಿಂದ ರಬಕವಿಯ ಸಮ್ಮೇಳನವು ಎಷ್ಟರ ಮಟ್ಟಿಗೆ ಯಶಸ್ವಿಯಾಗುವುದೊ ನೋಡಬೇಕಾಗಿದೆ. ಕಳೆದ ಸಮ್ಮೇಳನದಿಂದ ಇಂದಿನವರೆಗೆ ಎಷ್ಟರ ಮಟ್ಟಿಗೆ ಸಮ್ಮೇಳನದ ಚಟುವಟಿಕೆಗಳು ಕಾರ್ಯರೂಪದಲ್ಲಿ ಬಂದಿವೆ? ಕನ್ನಡ ಜನಾಂಗವನ್ನೂ, ಸಂಸ್ಕೃತಿಯನ್ನೂ, ಸಾಹಿತ್ಯವನ್ನೂ ಎಷ್ಟರ ಮಟ್ಟಿಗೆ 'ರಕ್ಷಿಸಿ'ಲಾಗಿದೆ ಮತ್ತು 'ಅಭಿವೃದ್ಧಿಸಿ'ಲಾಗಿದೆ? ಕನ್ನಡವ (ಯಾವುದೊಂದು ಸಂಸ್ಥೆಯವಲ್ಲ) ಪ್ರಜಾರ ಎಷ್ಟಾಗಿದೆ? ಮುಂತಾದ ಪ್ರಶ್ನೆಗಳನ್ನು ನಿರ್ದಾಕ್ಷಿಣ್ಯವಾಗಿ ರಬಕವಿಯ ಅಧಿವೇಶನವು ನೋಡುವುದೆಂದು ನಂಬಿದ್ದೇವೆ.

ಅಧ್ಯಕ್ಷರ ಆಯ್ಕೆ

ಈ ಸಲದ ಅಧ್ಯಕ್ಷರ ಆಯ್ಕೆಯಿಂದ ಒಂದು ವಿಶಿಷ್ಟ ಪರಿಸ್ಥಿತಿ ಉದ್ಭವಿಸಿದೆ— ಎಂದು ಕೆಲವರು ತಿಳಿದಿದ್ದಾರೆ. ನಿಜವಾಗಿ ನೋಡಿದರೆ ಅಂತಹದೇನೂ ಇಲ್ಲ. 'ಸೂಚಿತವಾದ ಎರಡು ಹೆಸರುಗಳಲ್ಲಿ, ಒಬ್ಬರ ವಿಳಾಸ ದೊರೆಯದ್ದರಿಂದ ಇನ್ನೊಬ್ಬರನ್ನು ಅವಿರೋಧವಾಗಿ ಆರಿಸಿದೆ' ಎಂದು ಹೇಳುವವರು, ಘಟನಾತ್ಮಕ ಭಾಷೆಯನ್ನು ಬಿಟ್ಟು ಮಾತನಾಡುತ್ತಿದ್ದಾರೆ—ಎಂದು ಹೇಳಬಹುದು. ಯಾವ ಹೆಸರು ಸೂಚಿತವಾಗಿರುವುದೊ ಅವರ ಅನುಮತಿಯನ್ನು ಪಡೆದೇ ಸೂಚಕರು ತಮ್ಮ ಸೂಚನೆಯನ್ನು ಮುಂದಿಸುವ ಸಂಪ್ರದಾಯವಿದೆ. ಆ ರೀತಿ ಶ್ರೀ. ಕೈಲಾಸಂರವರ ಅನುಮತಿಯಿಂದಲೆ ಅವರ ಹೆಸರು ಸೂಚಿತವಾಗಿದೆ ಎಂದು ನಾವು ತಿಳಿಯಬೇಕು. ಹೀಗಿರುವಾಗ 'ಶ್ರೀ. ಕೈಲಾಸಂರವರ ವಿಳಾಸ ದೊರೆಯಲಿಲ್ಲ' ಎಂಬುದು ಪ್ರಸ್ತುತವೂ ಅಲ್ಲ, ಮುಪತ್ತ್ವವೂ ಅಲ್ಲ. ಅಧಿಕಾರಿಗಳು ಸಕಾಲಕ್ಕೆ ಶ್ರೀಯುತರಿಗೆ ಬರೆದಿದ್ದಾರೆ. ಸಾಕಲ್ಲವೆ? ಸೂಚನೆಪತ್ರದಲ್ಲಿ ಕಾಣಿಸಿದ ವಿಳಾಸಕ್ಕೆ ಬರೆಯುವುದು ಅಧಿಕಾರಿಗಳ ಕೆಲಸ. ಅದನ್ನು ಮಾಡಿದೆ ಪರಿಷತ್ತಿನ ಕಚೇರಿ. ಇನ್ನು ಆ ವಿಳಾಸಕ್ಕೆ ಶ್ರೀ. ಕೈಲಾಸಂರವರು ದೊರೆಯದ್ದು ಶ್ರೀಯುತರ ಹೊಣೆ. ಅವರಿಗೆ ಅಧ್ಯಕ್ಷಪದ ಬೇಡವಾಗಿತ್ತೊ, ವಿಳಾಸ ಬದಲಾ-

---

(೧೬೦ನೆಯ ಪುಟದಿಂದ ಮುಂದುವರಿದುದು.)

ತಮ್ಮ ಬೆನ್ನು ತಾವೇ ಚಿಪ್ಪರಿಸಿಕೊಳ್ಳುವುದರಿಂದ ಸಮಾಧಾನವಾಗದೆ, ಎರಡನೆಯವರಿಗೆ ಶಿಫಾರಸು ಪತ್ರಗಳನ್ನು ಕೊಡುವ ದೊಡ್ಡಿಸ್ತಿಕೆಯನ್ನು ಬೇರೆ ಸಾಧಿಸಲು ಹವಣಿಸುತ್ತಾರೆ. ಹೀಗೆ "ಉಷಾ" ಸತ್ರಿಕೆಯ ಪ್ರಶಂಸೆಯನ್ನು ಪಡೆದ ಶ್ರೀ. ಕೃಷ್ಣಕುಮಾರರ ಯಾವ ಬರವಣಿಗೆ ಪ್ರಗತಿಶೀಲ, ಮತ್ತು ಯಾವ ಅರ್ಥದಲ್ಲಿ? ಅವರ ಮುಂಚಿನ ಹುಡಿ" ಪ್ರಗತಿಶೀಲವೆ? ಯಾವ ಅರ್ಥದಲ್ಲಿ? "ಪ್ರಗತಿಶೀಲರ ಪರೇಡ್" ನಲ್ಲಿಯ ಶ್ರೀ. ಎನ್. ಕೆ. ಅವರ "ಸಾವಿನ ಉಡಿಯಲ್ಲಿ" ಾದಂಬರಿ ಪ್ರಗತಿಶೀಲವೆ? ಇದ್ದರೆ ಯಾವ ಅರ್ಥದಲ್ಲಿ? ಕಾರಂತರನ್ನು ಈ ಪರೇಡ್‌ನಲ್ಲಿ ಸೇರಿಸಿಕೊಂಡವರು ಅವರ "ಹಳ್ಳಿಯ ಹತ್ತು ಮುಸ್ತರು" ಯಾವ ಅರ್ಥದಲ್ಲಿ ಪ್ರಗತಿಶೀಲ ಎಂಬುದನ್ನು ತಿಳಿಸಬೇಕೆಂದು ಇನ್ನೊಂದು ಆಹ್ವಾನ. "ಉಷಾ" ಪತ್ರಿಕೆಯಲ್ಲಿ ಪ್ರತಿಾದಿತವಾಗುತ್ತಿರುವ ಸಾಹಿತ್ಯದ ಉಳಿತೆಗೋಲಿನ ಲೆಕ್ಕದ ಮೇಲೆ, ಈ ೃತಿಗಳಿಗೆ ಯಾವ ಬೆಲೆಯೂ ಇರಕೂಡದು. ಬೀಗಿದ್ದರೂ ಇವರು ಪ್ರಗತಿಶೀಲರು. (ಅವರಾರೂ ಈ ಮಾತಿಗೆ ಒಪ್ಪದಿದ್ದರೂ) ಅವರಿಗೆ ಈ ವಿಶೇಷಣವನ್ನು ಅನ್ವಯಿಸಲಾಗುತ್ತದೆಂಬುದು ಅವರ ಕೃತಿಗಳನ್ನು ಓದಿದವರು ಸಹಜವಾಗಿ ತಿಳಿಯಬಹುದಾದ ವಿಷಯ, ಸ್ನಡಪ ಸುದ್ದಿಯದಿಂದ ಕಾರಂತರು, ಶ್ರೀರಂಗರು, ಅಲ್ಲವೆ ಇನ್ನೆಷ್ಟೋ ಸಹಕಾರಿಗಳು, ಪ್ರಗತಿಶೀಲತ್ವದ ಪಾಟಿಯನ್ನು ಕೊರಳಲ್ಲಿ ಕಟ್ಟಿಕೊಂಡು "ನಾವು ಬರೆದದ್ದು ಪ್ರಗತಿಶೀಲ, ಅದೇ ನಿಜವಾದ ಸಾಹಿತ್ಯ, ಅದನ್ನೇ ನೀವು ಓದಬೇಕು!" ಎಂದು ಮನೆ ಎತ್ತರದಿಂದ "ಉಷಾ" ಪತ್ರಿಕೆಯಲ್ಲಿಯವರಂತೆ ಕೂಗಿಕೊಳ್ಳುತ್ತಿಲ್ಲ; ತಮ್ಮ ಬರೆಹದ ಬಗೆಯಲ್ಲಿ ಆತ್ಮವಿಶ್ವಾಸವಿದ್ದವರು ಯಾರೂ ಈ ರೀತಿ ಕೂಗಿಕೊಳ್ಳಲೂ ಬೇಕಿಲ್ಲ. ನಿರ್ಮಿಸಿದ ಸಾಹಿತ್ಯ ನಾಲ್ಕು ದಿನ ಬಾಳಿ ಹತ್ತು ಜನರಿಗೆ ದಾರಿ ತೋರಿಸಬಲ್ಲುದಾದರೆ, ಅದಕ್ಕೆ ಅವರಲ್ಲಿಯ ಸತ್ಯದ ಹೊರತಾಗಿ ಬೇರೆ ಸಮರ್ಥನೆ ಯಾವುದೂ ಬೇಕಾಗಿಲ್ಲ. ಬರೆಯುವ ಯೋಗ್ಯತೆಯಿಲ್ಲದೆ ಕಂಡವರ ಕೀಟಲೆ ಮಾಡಿ, ಇಲ್ಲದ ಉಪದ್ವಾಪದಿಂದ ನಾಲ್ಕು ಪುಡುಗರ ಲಕ್ಷ್ಯವನ್ನೆಳೆದುಕೊಂಡರೆ ದೊಡ್ಡ ಸೇವೆ ಮಾಡಿದಂತಾಯಿತೆಂದು ಬಗೆಯುವ- ವಿಪರೀತವಾದಿಗಳ- ಹುಚ್ಚು ಆನೇಕಕ್ಕೆ ಯಾವ ಜೆಲಿ ಎಂಬುದನ್ನು ಬಿಚ್ಚಿ ಹೇಳಬೇಕಾಗಿಲ್ಲ.

ಈ ಪ್ರಗತಿಶೀಲಪಟುಗಳು ತಮ್ಮ ಕಲ್ಪನೆಯ ಪ್ರಗತಿಶೀಲತ್ವದ ವ್ಯಾಪ್ತಿಯನ್ನು ಸೋದಾಹರಣವಾಗಿ ವಿವರಿಸಲಿ, ಅವರ ಯೋಗ್ಯಾಯೋಗ್ಯತೆಯ ವಿಚಾರದಲ್ಲಿ ವಾದವಿವಾದ ಮಾಡಲಿಕ್ಕೆ "ವಿಹಾರಿ" ಯಾವಾಗಲೂ ಸಿದ್ಧ. ವ್ಯಕ್ತಿಗಳ ಮಾತುಬೇಡ, ಕೃತಿಗಳ ವಿಮರ್ಶೆಯ ಮೇಲೆ ಮಾತು ನಡೆಯಲಿ! ಪ್ರಗತಿಶೀಲವಿಲ್ಲದುದರ ಮಾತು ಬೇಡ, ಇದ್ದುದೆಂದು ಪ್ರಗತಿಶೀಲರು ತಿಳಿಸಿಕೊಂಡ ಕೃತಿಯ ವಿಷಯವಾಗಿ ಮಾತು ಬರಲಿ! ಆ ಮೇಲೆ ಮುಂದಿನ ಮಾತು!

ವಣೆಯ ವಿಸ್ತಾರವನ್ನು ಅವರು ಮರೆತರೊ, ಇಲ್ಲವೆ ಅವರ ಅನುಮತಿ ಇಲ್ಲದೆ ಹೆಸರು ಸೂಚಿತವಾಯಿತೊ— ಈ ಗೊಡವೆ ಪರಿಷತ್ತಿನ ಕಚೇರಿಗೆ ಬೇಡ. ವಸ್ತುಸ್ಥಿತಿ ಹೀಗಿರುವಾಗ, ಇದೊಂದು 'ನಭೂತ ಪ್ರಸಂಗ'ವೆಂದುವಾದಿಸುವುದು ಕಲ್ಪನಾಶಕ್ತಿಯ ದುರುಪಯೋಗವಲ್ಲವೆ?

ಆಯ್ಕೆಯ ಅಧಿಕಾರ ಯಾರದು ?

ಈ ಮಾತನ್ನು ನಾವು ಹೇಳಲು ಒಂದು ಕಾರಣವಿದೆ. ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ. ಮಾಸ್ತಿ ಅವರು 'ಜೀವನ' ಮಾಸಪತ್ರಿಕೆಯ ಕಳೆದ ತಿಂಗಳ ಸಂಚಿಕೆಯಲ್ಲಿ, ಈ ವಿಷಯವನ್ನು ಸಂಪಾದಕೀಯದಲ್ಲಿ ಪ್ರಸ್ತಾವಿಸಿ, ಸದ್ಯದ ಆಯ್ಕೆಯ ಪದ್ಧತಿಯನ್ನು 'ಹೇಗೆ ತಿದ್ದುವುದೆಂದು ಪರಿಷತ್ತಿನ ಸದಸ್ಯರು ಪರ್ಯಾಲೋಚಿಸಬೇಕು' ಎಂದಿದ್ದಾರೆ. ಈ ಸೂಚನೆಯನ್ನು ಶ್ರೀ. ಮಾಸ್ತಿಯವರು ವೈಯಕ್ತಿಕವಾಗಿ ಮಾಡಿದ್ದಾರೇನೊ ನಿಜ; ಆದರೆ ಸೂಚನೆಯನ್ನು ಮಾಡುವಾಗ ಅವರು ಪರಿಷತ್ತಿನ ಉಪಾಧ್ಯಕ್ಷರೆಂಬುದೂ—ಅವರ ಆ ಅನುಭವ ಸೂಚನೆಗೆ ಕಾರಣವಾಗಿರಬಹುದೆಂಬುದೂ—ಅಷ್ಟೇ ನಿಜ. ಶ್ರೀ. ಮಾಸ್ತಿಯವರಂತಹರು ಈ ಸೂಚನೆಯನ್ನು ಮಾಡಿದ್ದು ಆಶ್ಚರ್ಯ; ಆ ಸಂದರ್ಭದಲ್ಲಿ ಅವರು ಹೇಳುವ ಕೆಲವು ಮಾತುಗಳು ಇನ್ನೂ ಆಶ್ಚರ್ಯಕರ. '....ಅಧ್ಯಕ್ಷಸ್ಥಾನಕ್ಕೆ ಹಲವರ ಹೆಸರು ಸೂಚಿತವಾಗಿ ಮತಗಳ ಹೆಚ್ಚಳದಿಂದ ಒಬ್ಬರನ್ನು ಆರಿಸುವುದೆನ್ನುವುದು ಅಷ್ಟು ಉಚಿತವಲ್ಲವೆಂದು ನನ್ನ ತಿಳುವಳಿಕೆ.....ಕನ್ನಡದ ಹಿತವನ್ನು ಬಯಸುವ ಯಾರಾಗಲೀ ಇವರಲ್ಲಿ ಒಬ್ಬರುಬೇಕು ಇನ್ನೊಬ್ಬರು ಬೇಡ ಎಂದು ಹೇಳಲಾರರು.....' ಶ್ರೀಯುತರು ಈ ಸಂದರ್ಭದ ಹಿಂದಿನ ಅನುಭವಗಳನ್ನೆ ಮರಿತಂತೆ ಕಾಣುವುದು. ಪ್ರತಿಸಲ ಪತ್ರಿಕೆಗಳಲ್ಲೂ ಸೂಚನೆಗಳಲ್ಲೂ ಅನೇಕ ಹೆಸರುಗಳು ಸೂಚಿತವಾಗುತ್ತಿಲ್ಲವೆ? 'ಒಬ್ಬರು ಬೇಕು' ಎನ್ನುವವರಿಗೆ 'ಇನ್ನೊಬ್ಬರು ಬೇಡ' ಎಂದಂತಾಯಿತೆಂದು ಯುಕ್ತಿಯನ್ನು ಹೂಡಿ, ಶ್ರೀ. ಮಾಸ್ತಿಯವರು 'ಕನ್ನಡ ಹಿತವನ್ನು ಬಯಸುವ'ವರಿಗೆ ಅನ್ಯಾಯವನ್ನು ಬಗೆದಿದ್ದಾರೆ. ಒಬ್ಬರು ಬೇಕು ಎನ್ನುವವರಿಗೆ ಇನ್ನೊಬ್ಬರು ಬೇಡ ಎಂಬ ಹಟ ಇರಬೇಕಾಗಿಲ್ಲ. ಇರುವುದಿಲ್ಲ. ಆಪಿಲ ಕರ್ನಾಟಕದ ವಿಸ್ತಾರದಲ್ಲಿ ಪ್ರತಿಯೊಬ್ಬ ಸಾಹಿತಿ ಎಲ್ಲ ಕನ್ನಡಿಗರಿಗೂ ಆಪ್ತ ಪರಿಚಿತನಿರುವುದು—ಸದ್ಯದ ಕರ್ನಾಟಕದ ಸ್ಥಿತಿಯಲ್ಲಂತೂ—ಶಕ್ಯವಿಲ್ಲ. ಇದಲ್ಲದೆ ಎಲ್ಲರಿಗೂ ಒಂದೇ ಸಂಗತಿ ಇಷ್ಟವಾಗಬೇಕೆಂಬುದು ಸಹಜವೂ ಅಲ್ಲ, ಸೇರಲೇಬೇಕೆಂದು ಹಟ ತೊಡುವುದು ಸಮಂಜಸವೂ ಅಲ್ಲ. ಚುನಾವಣೆಗಳಲ್ಲಿ ಮತದ ಅಧಿಕಾರವಿದ್ದವನಿಗೆ ಪುರಿಯಾಳಾಗುವ ಅಧಿಕಾರವೂ ಇರಬೇಕಲ್ಲವೆ? ಪುರಿಯಾಳಾಗುವ ಅಧಿಕಾರವಿಲ್ಲದಿದ್ದರೆ ಮತದ ಅಧಿಕಾರದ ಪ್ರಯೋಜನವೇನು? ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಒಂದು ಕೈಯಿಂದ ಬೆಳೆಯಿಸಿ, ಇನ್ನೊಂದು ಕೈಯಿಂದ ಇವರಿಗಿದ್ದ ಒಂದೇ ಒಂದು ಅಧಿಕಾರವನ್ನೂ ಕಸಿದುಕೊಳ್ಳುವುದು ಸಂಸ್ಥೆಯ ಸಾರ್ವಜನಿಕ ಸ್ವರೂಪಕ್ಕೆ ಭಂಗವನ್ನುಂಟು ಮಾಡುವುದು. ಪರಿಷತ್ತಿನ ಸದಸ್ಯರು ಈ ಮಾತನ್ನು ಲಕ್ಷ್ಯದಲ್ಲಿಡಬೇಕು.

ಸರ್ವಾಧಿಕಾರದ ಕರಿನೆಳಲು

ಶ್ರೀ. ಮಾಸ್ತಿಯವರ ಸೂಚನೆ ಸ್ವೀಕೃತವಾದರೆ, ಪರಿಷತ್ತಿನ ಆಡಳಿತದಲ್ಲಿ ಸರ್ವಾಧಿಕಾರಿತ್ವದ ಕರಿನೆಳಲು ಬಾಚಿದಂತೆ ಎಂದು ನಾವು ಸ್ಪಷ್ಟವಾಗಿ ಹೇಳಬಯಸುತ್ತೇವೆ. ಸದ್ಯಕ್ಕೆ ಪರಿಷತ್ತಿನ 'ಅಧಿಕಾರ'ವು 'ಸುಲಿದ ಬಾಳೆಯ ಹಣ್ಣಿನಂ'ತಿದೆ, ಹಿಡಿದಲ್ಲಿ ಸಿಡಿದು ಬೀಳುವುದು. ಇದನ್ನುರಿತೂ ನಾವು ಹೀಗೆ ಹೇಳುತ್ತಿದ್ದೇವೆ. ಪರಿಷತ್ತು ಸಾರ್ವಜನಿಕ ಸಂಸ್ಥೆಯಾಗಿ ಉಳಿಯುವುದು, ಹಾಗೆ ಬೆಳೆಯುವುದು ಇದೇ ನಮಗೆ ಮಹತ್ತ್ವದ ವಿಷಯ. ಶ್ರೀ. ಮಾಸ್ತಿಯವರ 'ಸೂಚನೆ ಸ್ವೀಕೃತವಾಯಿತೆಂದು ತಿಳಿಯೋಣ. ಆಗ ಅಧ್ಯಕ್ಷಪದಕ್ಕೆ ಒಂದೇ ಹೆಸರನ್ನು ಸೂಚಿಸಬೇಕಾಗುವುದು. (ಇಲ್ಲವಾದರೆ ಚುನಾವಣೆ ಯಾವ ರೀತಿಯಲ್ಲೂ ತಪ್ಪಿದ್ದಲ್ಲ) ಆ ಹೆಸರನ್ನು ಸೂಚಿಸುವ ಅಧಿಕಾರ ಯಾರದು? 'ಆಯಾ ವರ್ಷದ ಸ್ವಾಗತ ಸಮಿತಿಯವರದು' ಎಂದು ಕೆಲವರು ವಾದಿಸಬಹುದು. ಆದರೆ, ಸ್ವಾಗತಸಮಿತಿಯವರೂ ಚುನಾವಣೆ ಇಲ್ಲದೆ ಒಂದು ಹೆಸರನ್ನು ಸ್ವೀಕರಿಸುವಷ್ಟು ಅತಿಮಾನುಷರಲ್ಲ; ಇದಲ್ಲದೆ ಗಡಿನಾಡಿನ ಸ್ಥಳವಿದ್ದರೆ—ಪಾಪ!—ಅವರಿಗೆ ಆಪ್ಶೊಂದು ಅಭ್ಯಾಸ ಇಲ್ಲವೆ ಪರಿಚಯ ಇರುವಂತಿಲ್ಲ—ಎಂದೂ ಆಕ್ಷೇಪವನ್ನೆತ್ತಬಹುದಾಗಿದೆ. ಇನ್ನು ಸ್ವಾಗತಸಮಿತಿಯನ್ನು ಬಿಟ್ಟರೆ ಪರಿಷತ್ತಿನ ಕಾರ್ಯಸಮಿತಿಯು ಆ ಅಧಿಕಾರವನ್ನು ವಹಿಸಬಹುದಾಗಿದೆ. ಆದರೆ ಇಲ್ಲೂ ಹದಿನಾರು ಜನರಿದ್ದುದರಿಂದ, ಒಂದಕ್ಕಿಂತ ಹೆಚ್ಚು ಹೆಸರು ಬಂದು 'ಒಬ್ಬರು ಬೇಕು, ಇನ್ನೊಬ್ಬರು ಬೇಡ' ಎಂಬ ಪರಿಸ್ಥಿತಿಯೆ ಒದಗುವುದು. ಒಂದಕ್ಕಿಂತ ಹೆಚ್ಚು ಜನ ಇದ್ದಲ್ಲಿ ಈ ಸ್ಥಿತಿ ಅನಿವಾರ್ಯ. ಆದಕಾಗಿ ಒಂದೇ ಒಂದು ವ್ಯಕ್ತಿಯಾವ, ಹಿರಿತನದ ಹೊಣೆಗಾರಿಕೆಯ ಅಧಿಕಾರದ ಪದದಲ್ಲಿದ್ದ ಉಪಾಧ್ಯಕ್ಷರೆ ಒಂದು ಹೆಸರನ್ನು ಸೂಚಿಸಬೇಕಾಗುವುದು. ಅವರೂ ಈ ತೊಂದರೆಯನ್ನು ತಪ್ಪಿಸಿಕೊಳ್ಳುವುದಾದರೆ ಮೈಮೇಲೆ ದೇವ (ಇಲ್ಲವೆ ದೆವ್ವ) ಬಂದವನನ್ನು ಕೇಳಬೇಕಾದೀತು! ಯಾವುದನ್ನು ಮಾಡಿದರೂ ಸರ್ವಾಧಿಕಾರಿಯಂತೆ ಒಂದು ವಾಣಿ ಉಸಿರಿದ್ದನ್ನು ನೂರಾರು ಸದಸ್ಯರು ಒಪ್ಪಬೇಕು! ವ್ಯಕ್ತಿ-ಸ್ವಾತಂತ್ರ್ಯದ ಕ್ಷೇತ್ರವಿಸ್ತಾರವಾಗಬೇಕೆಂಬ ಇಂದಿನ ಕಾಲದಲ್ಲಿ ಪರಿಷತ್ತಿನಲ್ಲಿ ಹೀಗೆನ್ನಡೆಯೆ?

ತಿದ್ದುಪಡೆ ಬೇಕು, ಆದರೆ—?

ನಿಜವಾಗಿ ನೋಡಿದರೆ ಚುನಾವಣೆಯಲ್ಲಿ ಯಾವ ದೋಷವಿದೆ? ಬಹುಜನರ ಕಾರ್ಯದಲ್ಲಿ ಬಹುಜನರಿಗೆ ಸಮ್ಮತವಾದ ನಾಯಕನಿರುವುದೆ ಇಷ್ಟವಲ್ಲವೆ? ಸಾಹಿತ್ಯದಂತಹ ವಿಷಯದಲ್ಲಿ ಬಹುಜನರಿಗೆ ತಿಳಿಯುವುದು ಕಡಮೆ, ಅದಕಾಗಿ ಒಮ್ಮೊಮ್ಮೆ ಅಯೋಗ್ಯವ್ಯಕ್ತಿಯ ಆಯ್ಕೆಯಾಗಬಹುದಾಗಿದೆ—ಎಂದು ಕೆಲವರು ವಾದಿಸುತ್ತಾರೆ. ನಗರದ ಶಿಕ್ಷಣ-ಆರೋಗ್ಯಗಳ ಹೊಣೆಯಿದ್ದ ನಗರಸಭೆಗಳಿಗೆ ಚುನಾವಣೆ ಇಷ್ಟವಾಗಿದ್ದರೆ, ಪರಿಷತ್ತಿನ ಸುಶಿಕ್ಷಿತ ಸದಸ್ಯರಿಗೆ ಚುನಾಯಿಸುವ ಬುದ್ಧಿ ಕಡಮೆ ಎನಬಹುದೆ? ಅಧ್ಯಕ್ಷಪದದ ಆಯ್ಕೆಯಲ್ಲಿ ತಿದ್ದುಪಡೆ ಬೇಕಾಗಿದೆ, ಅಧ್ಯಕ್ಷಪದದ ಹೊಣೆಯಲ್ಲಿಯೂ ತಿದ್ದುಪಡೆ ಬೇಕಾಗಿದೆ. ಆದರೆ ಸದಸ್ಯರ ಮೂಲ ಅಧಿಕಾರವನ್ನು ಕಸಿದುಕೊಳ್ಳುವುದು ತಿದ್ದುಪಡೆಯಾಗದು. ಆದಕಾಗಿ ಸದಸ್ಯರ ಹೊರತು ಮಿಕ್ಕವರಿಗೆ ಈ ಅಧಿಕಾರವನ್ನು ಕೊಡುವ ಸದ್ಯದ ನಿಯಮ ೪೭ (೨) ನ್ನು ಹೊಡೆದೆಬಿಡಾಕಬೇಕು. ಸಮಸಂಖ್ಯೆಯ ನುತವ ಸಂದರ್ಭ ಬಂದಲ್ಲಿ, ಕಾರ್ಯಸಮಿತಿಗೆ—ಬ್ಯಾಲೆಟ್ ರೀತಿಯಲ್ಲಿ—ಅಧಿಕಾರ ಸಲ್ಲದು. ಜಗತ್ತಿನಲ್ಲಿಯೆ ರೂಢಿವಾದ ಚೀಟಿ (drawing lot) ಯನ್ನೆತ್ತುವ ರೀತಿಯನ್ನಿಟ್ಟುಕೊಳ್ಳಬೇಕು.

ಕೆಲವು ಸೂಚನೆಗಳು

ಸಮ್ಮೇಳನದ ಅಧ್ಯಕ್ಷರಿಗೆ ಘಟನೆಯಲ್ಲಿ ಈಗಿದ್ದ ಸ್ಥಾನವೆ ಉಳಿಯುವುದಾದರೆ ಶ್ರೀ. ಮಾಸ್ತಿ ಅವರಂತೆ ನಾವಾದರೂ 'ಯಾರೇ ಆಗಲಿ, ಒಬ್ಬರು ಆರಿಸಿ ಬಂದರೆ ಸಾಕು' ಎನ್ನುವೆವು. ಆದರೆ ಅಧ್ಯಕ್ಷರಿಗೆ ಈಗಿದ್ದ ಸ್ಥಾನವು ಆ ಪದಕ್ಕೂ ಗೌರವವಲ್ಲ, ಕಾರ್ಯಕ್ಕೂ ಸಹಾಯಕವಾಗಿಲ್ಲ. 'ಪರಿಷತ್ತಿಗೆ ಬಂದ ಎಲ್ಲ ಸದಸ್ಯರು ಪರಿಷತ್ತಿನ ಉಪಾಧ್ಯಕ್ಷನನ್ನು ಆರಿಸುವರು; ಸದಸ್ಯರೆಲ್ಲ ಪರಿಷತ್ತಿಗಿದ್ದ ಸಮ್ಮೇಳನದ ಅಧ್ಯಕ್ಷನನ್ನೂ ಆರಿಸುವರು—ಇವರಿಬ್ಬರಲ್ಲಿ ಯಾರದು ಮೇಲು?' ಎಂದು ಹಿಂದೊಮ್ಮೆ ಹಿರಿಯರೊಬ್ಬರು ಅಸಂಬದ್ಧ ಪ್ರಶ್ನೆಯನ್ನು ಕೇಳಿದ್ದರು. ಆರಿಸುವಾಗ ಅವರವರನ್ನು ಆಯಾ ಅಧಿಕಾರಕ್ಕೆ ಆರಿಸಿರುವುದೆಂಬುದು ಇವರಿಗೆ ಹೊಳೆದಿರಲಿಲ್ಲ! ಇಂತಹ ಗೊಂದಲವಲ್ಲಿ ಸದಸ್ಯರು ಸಿಕ್ಕಬೇಕಾಗಿಲ್ಲ. ಪರಿಷತ್ತಿನ ಉಪಾಧ್ಯಕ್ಷರು ಪರಿಷತ್ತಿನ ಕೆಲಸವನ್ನು ನಡೆಯಿಸುವಂತೆ, ಸಮ್ಮೇಳನದ ಅಧ್ಯಕ್ಷರು ಸಮ್ಮೇಳನದ ಕೆಲಸವನ್ನು ನಡೆಯಿಸಬೇಕು. ಸಮ್ಮೇಳನದ ಕೆಲಸವೆಂದರೇನು? ಮೂರು ದಿವಸಗಳ ಸಮಾರಂಭದ ಉತ್ಸವ ಮೂರ್ತಿಯಾಗುವುದಲ್ಲ. ಸಮ್ಮೇಳನದಲ್ಲಿ ಒಂದು ಧೋರಣೆ, ಕೆಲವು ಗೊತ್ತುವಳಿಗಳು. ಕೆಲವು ಕಾರ್ಯಗಳು ಸ್ವೀಕೃತವಾಗುವುವು. ಮುಂದಿನ ಸಮ್ಮೇಳನದ ವರೆಗೆ ಇವೆಲ್ಲವನ್ನೂ ನಡೆಸುವುದು ಸಮ್ಮೇಳನದ ಅಧ್ಯಕ್ಷರಾದವರ ಹೊಣೆಯಾಗಬೇಕು. ಹೀಗಾದರೆ ಅಧ್ಯಕ್ಷರಾದವರ ಯೋಗ್ಯತೆಯ ಲಾಭ ದೊರೆಯುವುದಲ್ಲದೆ ಕಾರ್ಯವೂ ಸುಗಮವಾಗುವುದು. ಇಲ್ಲವಾದರೆ ಉಪಾಧ್ಯಕ್ಷರು ಎಂದಿನಂತೆ ಗೊತ್ತುವಳಿಗಳನ್ನು ರವಾನಿಸುತ್ತ ಪರಿಷತ್ತಿನ ಕೆಲಸದಲ್ಲಿಯೆ ಹೆಚ್ಚಾಗಿ ತೊಡಗಬೇಕು; ಇಲ್ಲವೆ ಪರಿಷತ್ತಿನ ಪ್ರಚಾರವನ್ನು ಬಿಟ್ಟು ಸಮ್ಮೇಳನದ ನಿರ್ಣಯಗಳನ್ನು ಕಾರ್ಯರೂಪದಲ್ಲಿ ತರಲು ಹೆಣಗಬೇಕು. ಈ ತೊಂದರೆಯನ್ನು ತಪ್ಪಿಸುವುದು 'ಕನ್ನಡದ ಹಿತವನ್ನು ಬಯಸುವ ಯಾರಾಗಲಿ' ತಮ್ಮ ಮೊದಲ ಹೊಣೆ ಎಂದು ತಿಳಿದುಕೊಳ್ಳಬೇಕು.

ಅವುಗಳ ವಿವರಗಳು

ಸಮ್ಮೇಳನದ ನಿರ್ಣಯಗಳ ಹೊಣೆಯನ್ನು ಸಮ್ಮೇಳನಾಧ್ಯಕ್ಷರೆ ಹೊತ್ತುಕೊಂಡು ಮುಂದಿನ ಸಮ್ಮೇಳನದ ವರೆಗೆ ಅವನ್ನು ಕಾರ್ಯರೂಪದಲ್ಲಿ ತರಲು ಯತ್ನಿಸಬೇಕಾದರೆ, ಸಮ್ಮೇಳನಾಧ್ಯಕ್ಷರಿಗೆ ಕಾರ್ಯಸಮಿತಿಯಲ್ಲಿ ಮುಖ್ಯ ಸ್ಥಾನವು ಬೇಕು, ಎಂದರೆ ಕಾರ್ಯಸಮಿತಿಗೆ ಸಮ್ಮೇಳನಾಧ್ಯಕ್ಷರೆ ಅಧ್ಯಕ್ಷರಾಗಿರಬೇಕು. ಈ ಸ್ಥಾನವು ಸಮ್ಮೇಳನಾಧ್ಯಕ್ಷರಿಗೆ ಇಲ್ಲವಾದರೆ, ಸದ್ಯಕ್ಕೆ ಕಾರ್ಯಸಮಿತಿಯಲ್ಲಿ ಅವರಿಗಿದ್ದ ಸ್ಥಾನವನ್ನು ತೆಗೆದುಹಾಕಬೇಕು. ವಿಶ್ವಾಸದಿಂದ ತನ್ನ ನೇತೃತ್ವಕ್ಕೆ ಸಮ್ಮೇಳನವು ಒಪ್ಪಿಸಿದ ನಿರ್ಣಯಗಳನ್ನು ಕಾರ್ಯರೂಪದಲ್ಲಿ ತರಲು ಕಾರ್ಯಸಮಿತಿಯಲ್ಲಿ ಕೇವಲ ಸಲಹೆ ಕೊಡುತ್ತ ಕೂಡ್ರುವುದು ಸಮ್ಮೇಳನವಿಟ್ಟ ವಿಶ್ವಾಸಕ್ಕೇ ಶ್ರೇಯಸ್ಕರವಲ್ಲ. ಕಾರ್ಯಸಮಿತಿಗೆ ಸಮ್ಮೇಳನಾಧ್ಯಕ್ಷರೆ ಅಧ್ಯಕ್ಷರಾಗುವುದಾದರೆ ಎರಡು ಬದಲಾವಣೆಗಳನ್ನು ಮಾಡಬೇಕಾಗುವುದು. (೧) ಉಪಾಧ್ಯಕ್ಷರಿಗೆ ಕಾರ್ಯಸಮಿತಿಯಲ್ಲಿ ಪರಿಷತ್ತಿನ ಆಡಳಿತದ ಪರವಾಗಿ ಮಾತ್ರ ಸ್ಥಾನವಿರಬೇಕು; (೨) ಇಬ್ಬರು ಕಾರ್ಯದರ್ಶಿಗಳಲ್ಲಿ ಪರಿಷತ್ತಿನ ಸದಸ್ಯರು ಒಬ್ಬನನ್ನೆ (ಬೆಂಗಳೂರಿನವರನ್ನು) ಆರಿಸಬೇಕು; ಇನ್ನೊಬ್ಬನನ್ನು ಸಮ್ಮೇಳನಾಧ್ಯಕ್ಷರು ನೇಮಕ (nominate) ಮಾಡಿಕೊಳ್ಳಬೇಕು. ಎಂದರೆ ಈ ಕಾರ್ಯದರ್ಶಿಯು ಸಮ್ಮೇಳನದ ಕೆಲಸವನ್ನು ಸಾಗಿಸಲು ಅಧ್ಯಕ್ಷರಿಗೆ ಸಹಾಯಕಾರಿಯಾಗುವನು. ಪರಿಷತ್ತಿನ ಪ್ರಚಾರ, ಪರಿಷತ್ತಿಗೆ ಜನ-ಧನಸಹಾಯ, ತಾತ್ಕಾಲಿಕ ಕನ್ನಡ ಸಮಸ್ಯೆಗಳಿಗೆ ಪರಿಷತ್ತಿನ ಸಲಹೆ-ಸಹಾಯ—ಇವಿಷ್ಟನ್ನೂ ಮತ್ತು ಪರಿಷತ್ ಪತ್ರಿಕೆಯನ್ನೂ ಪರಿಷದುಪಾಧ್ಯಕ್ಷರು ನಡೆಯಿಸಬೇಕು. ಸಮ್ಮೇಳನದ ನಿರ್ಣಯಗಳನ್ನು ಕಾರ್ಯದಲ್ಲಿ ತರುವುದಕ್ಕೂ ಅದಕಾಗಿಯೆ ಮೀಸಲಾಗಿರಿಸಿ 'ಕನ್ನಡ ನುಡಿ' ಯನ್ನು ನಡೆಸುವುದಕ್ಕೂ ಕಾರ್ಯಸಮಿತಿಯ ಅಧ್ಯಕ್ಷರಾದ ಸಮ್ಮೇಳನಾಧ್ಯಕ್ಷರಿಗೆಯೆ ನೇತೃತ್ವವಿರಬೇಕು.

ಕೊನೆಯ ಮಾತು

ಇವೆಲ್ಲ ಸಲಹೆಗಳನ್ನು ಕೂಡಲೆ ಕಾರ್ಯರೂಪದಲ್ಲಿ ತರಲೇ ಬೇಕೆಂಬ ಹಟ ನನಗಿಲ್ಲ. ಪರಿಷತ್ತಿನ ವ್ಯಾಪಕತೆ ಮತ್ತು ಕಾರ್ಯ ವಿಸ್ತಾರದ ದೃಷ್ಟಿಯಿಂದ ಇಂತಹ ಕೆಲವು ಬದಲಾವಣೆಗಳು ಅವಶ್ಯ, ಸದಸ್ಯರು ಈ ರೀತಿ ವಿಚಾರವನ್ನು ನಡೆಸಬೇಕು. ಇಂತಹ ಬದಲಾವಣೆ ಯೋಗ್ಯ ಮತ್ತು ಅವಶ್ಯ ಎಂದು ಕಂಡಾಕ್ಷಣ, ಪರಿಷತ್ತಿನ ಅಧಿನೇತನು ತಮ್ಮ ಅಧಿಕಾರದಿಂದ ಕೂಡಿಸಬಹುದು. ಆದರೆ ಯಾವ ಬದಲಾವಣೆಯಾದರೂ ಅಧಿಕಾರವು ಕೇಂದ್ರೀಕೃತವಾಗದೆ ಮೂಲವಾಗಿ ಸದಸ್ಯತ್ವದಲ್ಲಿಯೆ ಉಳಿಯುವುದು ಮಹತ್ತ್ವ—ಎಂಬುದಾಗಿ ಅಧೀನೇತನಕ್ಕೆ ಸಾಕಷ್ಟು ಮುಂಚಿತವಾಗಿ ಇಲ್ಲಿ ಬರೆಯುತ್ತಿದ್ದೇನೆ. ಇಂದು ಕರ್ನಾಟಕದಲ್ಲಿ ಏಕೀಕರಣದ ಪ್ರಶ್ನೆಗೆ ಯುದ್ಧೋತ್ತರ ರಚನೆಯ ಮಹತ್ತ್ವದ ದೃಷ್ಟಿಯಿಂದ ಅಗತ್ಯದ ಸ್ವರೂಪ ಬುದಿದ್ದು, ನಮ್ಮ ಮುಂದಾಳುಗಳು ಏಕೀಕರಣ ಪರಿಷತ್ತನ್ನು ಬಲಗೊಳಿಸುವುದರಲ್ಲಿ ವ್ಯಾರೆ. ಆ ಮುಖ್ಯ ಅಖಿಲಕರ್ನಾಟಕ ಧ್ಯೇಯಕ್ಕೆ ಪೋಷಕವಾಗುವಂತೆ ಮಿಕ್ಕ ಸಾಂಸ್ಕೃತಿಕ ಅಖಿಲ ಕರ್ನಾಟಕ ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರವನ್ನು ನಿರ್ದಿಷ್ಟಗೊಳಿಸಬೇಕಲ್ಲದೆ, ಎಲ್ಲದರಲ್ಲೂ ತಾನೇ ಮುಂದು ಎಂಬ ಬಾಲಿಶ ವೃತ್ತಿಯಿಂದ-ಭಾರನೀಗದ್ದ ಕ್ಕಾಗಿ-ಹಿಂದಿನವರಿಗೆ ದಾರಿಗಟ್ಟುವಂತಾಗಬಾರದು.

ಏಕೀಕರಣ ಪರಿಷತ್ತು

ಅಕ್ಟೋಬರ್ ತಿಂಗಳಲ್ಲಿ ಕೆಲವು ಕಾರ್ಯಕರ್ತರು ಏಕೀಕರಣದ ವಿಚಾರವನ್ನು ಮುಂದುವರಿಸುವುದಕ್ಕಾಗಿ ಧಾರವಾಡದಲ್ಲಿ ಸಭೆ ಸೇರಿದ್ದು, ಕಳೆದ ತಿಂಗಳ ೧೯ನೆಯ ತಾರೀಖಿಗೆ ಮತ್ತೊಂದು ಸಲ ಕೂಡಿದ್ದರೆಂಬುದು ಈಗಾಗಲೆ ಪ್ರಕಟವಾಗಿದೆ. ಹೋದ ತಿಂಗಳ ಸಭೆಗೆ ಬಳ್ಳಾರಿ, ಆದವಾನಿ, ರಾಯಿಚೂರು, ಉತ್ತರ ಕರ್ನಾಟಕ ಸಂಸ್ಥಾನಗಳ ಪ್ರತಿನಿಧಿಗಳು ಬಂದಿದ್ದರು; ಇದಲ್ಲದೆ ಅನೇಕ ಕಾರ್ಯಕರ್ತರು ಸಭೆಗೆ ಬರಲಿಕ್ಕಾಗದಾಗೂ ಉಪಯುಕ್ತವಾದ ಸಲಹೆಗಳನ್ನು ಕಳುಹಿಸಿದ್ದರು. ಜನತೆಯಲ್ಲಿ—ಹೆಚ್ಚಾಗಿ ಗಡಿನಾಡು ಮತ್ತು ಸಂಸ್ಥಾನಗಳಲ್ಲಿ—ಏಕೀಕರಣಕ್ಕಾಗಿ ಎಷ್ಟೊಂದು ಉತ್ಸಾಹ ಮತ್ತು ಕಳಕಳಿ ಇವೆ ಎಂಬುದು ಇದರಿಂದ ಸ್ಪಷ್ಟವಾಗುವುದು. ಸಭೆಯ ಮುಂದೆ ಒಂದೇಒಂದು ಪ್ರಶ್ನೆ ಎದ್ದು ನಿಂತಂತಿತ್ತು. ಜನತೆಯಲ್ಲಿ ಇಷ್ಟೊಂದು

ಉತ್ಸಾಹವಿದ್ದಾಲೂ ಏಕೀಕರಣದ ಚಳವಳವು ಇಷ್ಟೇಕೆ ಹಿಂದೆ ಬಿದ್ದಿದೆ ? ೧೯೨೪ರಿಂದ ಈಗ ೨೦ ವರ್ಷಗಳಲ್ಲಿ ಏಕೀಕರಣ ಪರಿಷತ್ತು ಒಟ್ಟು ಏಳು ಸಲ ಕೂಡಿದೆಯಂತೆ ! ಕನ್ನಡಿಗರಿಗೆ ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳೆವಣಿಗೆಗೆ ಏಕೀಕರಣವು ಅವಶ್ಯವಾಗಿದ್ದರೂ, ಆ ಚಳವಳಕ್ಕೆ ಸತ್ತ್ವವೆ ಇಲ್ಲವಲ್ಲ ಯಾಕೆ ? ಎರಡು ಕಾರಣಗಳನ್ನು ತೋರಿಸಬಹುದು: (೧) ಇದೇ ಅವಧಿಯಲ್ಲಿ ದೇಶದಲ್ಲಿ ಸ್ವಾತಂತ್ರ್ಯ ಚಳವಳವು ಹೆಚ್ಚೆಚ್ಚಾದ ಸಂಘಟನೆಯಿಂದ ನಡೆಯುತ್ತಿದ್ದು, ಪ್ರಾಂತಿಕ ಪ್ರಶ್ನೆ ಹಿಂದೆ ಬಿದ್ದಿರಬಹುದು; (೨) ಏಕೀಕರಣ ಚಳವಳಕ್ಕೆ ತಕ್ಕ ಮುಂದಾಳುತನ ದೊರೆತಿರಲಿಕ್ಕಿಲ್ಲ.

ಏಕೀಕರಣ ಚಳವಳ

ಈ ಚಳವಳಕ್ಕೆ ಮೂರ್ತಸ್ವರೂಪ ಬಂದದ್ದು ಕಾಂಗ್ರೆಸಿನ ರಾಜಕಾರಣದಲ್ಲಿ: ಈ ಚಳವಳದಲ್ಲಿ ನೊದಲಿನಿಂದ ಹೆಚ್ಚಾಗಿ ಭಾಗವಹಿಸಿದವರು ಕಾಂಗ್ರೆಸ್ ಕೆಲಸಗಾರರು. ಅವರೆ ಕಾಂಗ್ರೆಸಿನ ಏರಿಳಿತಗಳೊಡನೆ ಈ ಕಾರ್ಯಕರ್ತರು ನಿರಂತರವಾಗಿ ಏಕೀಕರಣಕ್ಕಾಗಿ ದೊರೆಯುತ್ತಿರಲಿಲ್ಲ. ಕಾಂಗ್ರೆಸ್ ಕೆಲಸಗಾರರ ತಪ್ಪು ಇದೆಂದಲ್ಲ. ಕಾಂಗ್ರೆಸಿನ ಕಾರ್ಯಕ್ರಮಕ್ಕೂ, ಶಿಸ್ತಿಗೂ ಒಳಪಟ್ಟ ಈ ಕೆಲಸಗಾರರಿಗೆ ಅಂತಹ ಪ್ರಸಂಗಗಳು ಅನಿವಾರ್ಯವಾಗುತ್ತಿದ್ದುವು. ಆದರೂ ಇದು ಮುಖ್ಯವಾಗಿ ಸಾಂಸ್ಕೃತಿಕ ಪ್ರಶ್ನೆ ಎಂಬುದನ್ನರಿತು, ಕಾಂಗ್ರೆಸಿಗರೂ ಕಾಂಗ್ರೆಸ್ಸೇತರರೂ ಮೊದಲಿನಿಂದಲೂ ಏಕೀಕರಣಕ್ಕಾಗಿ ಕೂಡಿದುಡಿದಿದ್ದರೆ, ಈ ಚಳವಳಕ್ಕೆ ಹಗಲು-ರಾತ್ರಿಗಳ ಪ್ರಸಂಗ ಬರುತ್ತಿರಲಿಲ್ಲ. ಏನೂನ್ಯಜನತೆಯೊಡನೆ ಸಂಪರ್ಕವು ಹೆಚ್ಚಿಗಿದ್ದಿತು ಕಾಂಗ್ರೆಸ್ ಕೆಲಸಗಾರರಿಗೆ; ಒಂದು ದೃಷ್ಟಿಯಿಂದ ಪ್ರಾಂತದ ಸಾಮೂಹಿಕ ಜೀವನದ ಮುಂದಾಳುತನ ಅವರದಿದ್ದಿತು; ಆ ಹೊಣೆಯನ್ನೂ ಪ್ರಶ್ನೆಯ ಮಹತ್ತ್ವವನ್ನೂ ಅರಿತಿದ್ದರೆ ಕಾಂಗ್ರೆಸಿಗರು ಕಾಂಗ್ರೆಸೇತರರನ್ನು ಏಕೀಕರಣ ಚಳವಳದಲ್ಲಿ ತಮ್ಮ ಸಂಗಡಿಗರನ್ನಾಗಿ ಮಾಡಿಕೊಳ್ಳಬೇಕಿತ್ತು. ಆವರೂ ದೇಶದ ಸ್ವಾತಂತ್ರ್ಯದ ಪ್ರಶ್ನೆಯಷ್ಟೆ ಅಷ್ಟೆ ಮಹತ್ತ್ವದ್ದೆಂಬುದನ್ನರಿತು ಮಿಕ್ಕವರಾರೂ ಇಂದು ಕಾಂಗ್ರೆಸಿಗರ ಮೇಲೆ ದೋಷ ಹೊರಿಸುವುದಿಲ್ಲ. ಇನ್ನು ಮುಂದೆ ಚಳವಳವನ್ನು ನಡೆಯಿಸುವದಾದರೆ, ಇಂದಿನ ವರೆಗೆ ಅದು ಯಾಕೆ ಹಿಂದೆ ಬಿದ್ದಿತೆಂಬುದನ್ನು ತಿಳಿದು ಕೊಳ್ಳಲು ಈ ಮಾತನ್ನು ಹೇಳಬೇಕಾಗಿದೆ. ಹಾಗೆ ನೋಡಿದರೆ, ಕಾಂಗ್ರೆಸೇತರರು ತಾವೇ ಮುಂದಾಗಿ ಕೆಲಸವನ್ನು ಸಾಗಿಸಲೂ ಬಹುದಾಗಿತ್ತು. ಅಖಿಲ ಕರ್ನಾಟಕ ಸಂಸ್ಥೆಗಳೇನೋ ತಮ್ಮ ಧ್ಯೇಯಗಳಲ್ಲಿ, ಕೇವಲ ಸಾಹಿತ್ಯಕವಾಗಿ ಏಕೀಕರಣವನ್ನು ಹೊವಲು ಇಟ್ಟುಕೊಂಡಿರುತ್ತವೆ. ಆದರೆ ಏಕೀಕರಣಕ್ಕಾಗಿ ಮುಂದಾಗಿ ದುಡಿಯುವ ಅಖಿಲಕರ್ನಾಟಕ ಸಾಂಸ್ಕೃತಿಕ ಸಂಸ್ಥೆ ಇಂದೂ ಇಲ್ಲ! ನಿಜವಿದ್ದರೆ ದೋಷವೆಂದರೆ ನಮ್ಮ ಸಾರ್ವಜನಿಕ ಜೀವನದಲ್ಲಿದೆ. ಒಬ್ಬ ತಪ್ಪಿದ್ದನ್ನೇ ಎತ್ತಿ ಕೂಡಿ ದುಡಿಯುವುದಕ್ಕಿಂತ, ಭಿನ್ನಮತವನ್ನೇ ಎತ್ತಿ ಹಿಡಿದು ದೂರದೂರವಾಗುವ ಸ್ವಸ್ಥಚಿತ್ತವು ಇನ್ನೂ ನಮ್ಮಲ್ಲಿ ಹೆಚ್ಚು. ತನ್ನನ್ನು ಮುಕ್ತಿಗೊಳಿಸಲಿಕ್ಕಾಗಿ ಮಾಡಿಯುವ ಪ್ರಯತ್ನವನ್ನು ಬರುವ ವರಗೆ ಈ ಸ್ಥಿತಿ ತಪ್ಪದು.

ಮುಂದಿನ ಕಾರ್ಯ

ಹಿಂದಿನಿಂದ ಬುದ್ಧಿಗಲಿತುಕೊಳ್ಳಲು ಕಾರ್ಯಕರ್ತರು ಸಿದ್ಧರಾದುದು ಸಂತೋಷದ ಸಂಗತಿ. ಜಾತಿ-ಪಕ್ಷ-ಪಂಗಡ ಭೇದಗಳನ್ನು ಏಕೀಕರಣವು ಮೀರಿ ನಿಂತಿದೆ ಎಂಬುದನ್ನು ಲಕ್ಷ್ಯದಲ್ಲಿಡೋಣ. ಏಕೀಕರಣದ ಪ್ರಶ್ನೆ ಮುಂದೆ ಬಿದ್ದರೆ ಕ್ರಮೇಣ, ಏಕೀಕರಣ ಮಾಡಲು ಕರ್ನಾಟಕವೆ ಉಳಿಯಲಿಕ್ಕಿಲ್ಲ ಎಂಬುದನ್ನೂ ಲಕ್ಷ್ಯದಲ್ಲಿಡೋಣ. ಏಕೀಕೃತ ಕರ್ನಾಟಕಕ್ಕೆ ಆರ್ಥಿಕ ದೃಷ್ಟಿಯಿಂದ ಬಹಳೇ ಮಹತ್ತ್ವವಿದೆ ಎಂಬುದನ್ನು ನಮ್ಮ ಧನವಂತ ವ್ಯಾಪಾರಸ್ಥರು ಮರೆಯದಿರಲಿ: ಏಕೀಕೃತ ಕರ್ನಾಟಕದಲ್ಲಿಯೆ ತಾವು ಕಲಿತ ಶಿಕ್ಷಣಕ್ಕೆ ಸ್ಥಾನ-ಮಾನಗಳು ದೊರೆಯುವುವು ಎಂಬುದನ್ನು ನಮ್ಮ ತರುಣರು ಮರೆಯದಿರಲಿ. ವ್ಯಾಪಾರಸ್ಥರ ಧನಸಹಾಯ, ತರುಣರ ಕೆಲಸಗಾರಿಕೆ—ಇವು ದೊರೆತರೆ ಮಾತ್ರ ಏಕೀಕರಣ. ಇಲ್ಲವಾದರೆ ಕೆಲವಿಲ್ಲದವರ ಕುಜೋದ್ಯಕ್ಕೆಳೆಯಬಹುದು ಈ ಪ್ರಶ್ನೆ. ಇದೇ ಶಿಕೊನೆಗೆ ಧಾರವಾಡದಲ್ಲಿ ಕೂಡಲಿರುವ ಪರಿಷತ್ತಿನ ಕರ್ನಾಟಕದ ಅಧಿವೇಶನದಲ್ಲಿ ಭಾಗವಹಿಸುವವರು, ಈ ಮಾತನ್ನೂ ತಮ್ಮ ಹೊಣೆಯನ್ನು ಸ್ಫೂರ್ತಿಯಾಗಿ ಅರಿಯಲಿ. ಮುಖ್ಯವಾಗಿ ಇಷ್ಟನ್ನು ಈಗ ಕೈಕೊಳ್ಳುವುದಗತ್ಯವಾಗಿದೆ:—

(೧) ಪ್ರಚಾರ:-ಪತ್ರಿಕೆ ಮತ್ತು ಉಪನ್ಯಾಸ ಮೊದಲಾದುವುಗಳ ಮೂ

(೨) ಏಕೀಕರಣದ ಮಹತ್ತ್ವ:— ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನೂ ಅಂಕಿ-ಸಂಖ್ಯೆಗಳನ್ನೂ ವಿಶ್ಲೇಷಣೆ ಕೊಟ್ಟು ಒಂದು ವರ್ಷದಲ್ಲಿ ತರುಣರಿಂದ ತಯ್ಯಾರಿಸುವುದು,

(೩) ಚಳವಳ :—ಸಂಸ್ಥಾನಗಳ ಮತ್ತು ಬ್ರಿಟಿಶ್ ಭಾಗದ ಪ್ರಶ್ನೆಯನ್ನು ಘಟನೆಯ ದೃಷ್ಟಿಯಿಂದ ಅಭ್ಯಾಸ ಮಾಡಿ, ಸರಕಾರಗಳನ್ನು ಒತ್ತಾಯ ಪಡಿಸಲು ಮುಂದಾಳುಗಳ ಸ್ಥಾಯಿಸಮಿತಿ ನಿಯಮಿಸುವದು.

ಪುಸ್ತಕ ದೊರೆಯುವ ಸ್ಥಳ:—
ವಾಗ್ವಿಲಾಸ ಬುಕ್-ಡಿಪೊ, ಹುಬ್ಬಳ್ಳಿ



ಶಿಲಾಪ್ರವಂಗ

SHILAPRAVANG

•

ಯಾವುದೇ ವಿಧವಾದ ಉಷ್ಣತೆ
ಯಿಂದ ಬಳಲಿರುವ ನಿಮ್ಮ
ಹೃದಯ, ಮೂತ್ರಪಿಂಡ, ರಕ್ತ,
ವೀರ್ಯಗಳಿಗೆ, ಆಯಾಸವನ್ನು
ಹೋಗಲಾಡಿಸಿ, ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು
ಹುಟ್ಟಿಸುವುದಕ್ಕೆ ಶ್ರೇಷ್ಠವಾದ
ಔಷಧವು.

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.

ಪನವೇಲ

ಕುಲಾಬಾ

Shri Dhootapapeshwar
Panvel Ltd., Panvel.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- **ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!**
- ನೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಕೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಮ್. ಗೋವರ್ಧನರಾವ, ಮ್ಯಾನೇಜರ್

ಕೆಮ್ಮಿನ ಬಾಧೆಯಿಂದ ಎಷ್ಟೋ ಕಾಲದಿಂದ ನರಳುತ್ತಿರಲಿ. ಅದಕ್ಕಾಗಿ ಎಷ್ಟೋ ಔಷಧೋಪಚಾರಗಳನ್ನು ಮಾಡಿರಲಿ-ಇಲ್ಲ, "ಕಾಸ್ಫೊ" ವನ್ನು ಕೆಲಸಕ್ಕೆ ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ, ಕೆಮ್ಮುವ ಪಿತ್ತ, ಪೀಡಿಸುವುದು ಕೆಮ್ಮು ಕೂಡಲೆ ಸಂಪೂರ್ಣವಾಗಿ ಮಾಯವಾಗುವುದು. "ಕೆಸ್ಫೊ" ಕೆಮ್ಮನ್ನು ಬಚ್ಚಿಡುವುದಿಲ್ಲ—ಅದನ್ನು ಕಿತ್ತೊಗೆಯುತ್ತದೆ.

ಕೆಮ್ಮನ್ನು ಅಲಕ್ಷಿಸಿದ ವಿಶೇಷ ದುಸ್ಪರಿಣಾಮಗಳಿಂದ, ಸಾವಿರಾರು ಜನರನ್ನು ಪ್ರಸಿದ್ಧಿಹೊಂದಿದ ಈ ಔಷಧವು ಸಂರಕ್ಷಿಸಿದೆ.

'ಕಾಸ್ಫೊ'ದಲ್ಲಿ ಎರಡು ರೀತಿಯ ಗುಣಗಳಿವೆ:—ಹೊರಭಾಗದಿಂದ:—ಅದರ ಸವಿಯಾದ ಶಕ್ತಿಯು ಗಂಟಲೊಳಗೆ ಇಳಿಕೊಂಡು ಕೆಮ್ಮನ್ನು ಹೊರಡಿಸುವ ಪರಿಗಳನ್ನು ಶಾಂತಪಡಿಸುತ್ತದೆ. ಒಳಬಾಗದಿಂದ:— ಅದು ಗಂಟಲೊಳಗಿನ ಸ್ವಾಭಾವಿಕವಾದ ಒಸರುವಿಕೆಗೆ ಚೈತನ್ಯವನ್ನುಂಟುಮಾಡುತ್ತವೆ, ಕಫವನ್ನು ಕತ್ತರಿಸಲು ಸಹಾಯ ಮಾಡುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ. ಮತ್ತು ಕೆಮ್ಮನ್ನು ಹೊರಡಿಸುವ ಸೋಂಕನ್ನು ಅಲ್ಪಕಾಲದಲ್ಲಿಯೆ ನಿರ್ಮೂಲಪಡಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯನ್ನು ನಿಲ್ಲಿಸುತ್ತದೆ. 'ಪೆಪ್ಪರ್‌ಮಿಂಟ್'ನಂತೆ ಬಂದು ಬಿಲ್ಲೆಯನ್ನು ೧-೨ ನಿಮಿಷಗಳೊಳ್ಳಗೆ ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳುವುದು.

ಎಲ್ಲಾ ಔಷಧಾಲಯಗಳಲ್ಲಿಯೂ ದೊರಕುವುದು.

Kasphe

ಆಶ್ಚರ್ಯಕರವಾದ ಕೆಮ್ಮು-ನಿವಾರಕ ಬಿಲ್ಲೆಗಳು

ಆಯುರ್ವೇದಾಶ್ರಮ ಕಾರ್ಪೊರೇಷನ್ ಲಿಮಿಟೆಡ್, ಲಿಮಿಟೆಡ್, ಲಿಮಿಟೆಡ್.